

ಪ್ರಕಾಶಕರು
ಆಕಳವಾಡಿ ಬುಕ್ ಡಿಪೋ, ಧಾರವಾಡ-1.



ಸಂದರ್ಶನ ಲೇಖನ ಮುಂದಿನ ಪುಟಗಳಲ್ಲಿ

ಮಹಮ್ಮದೀಯ ಕಾನೂನು

(Mohemmedan Law)

ಪ್ರಕಾಶಕರು :

Ph. 8123

ಆಕಳವಾಡಿ ಬುಕ್ ಡಿಪೊ
ವಿಜಯ ರೋಡ, ಧಾರವಾಡ

ಪ್ರಕಾಶಕರು :

ಎಂ. ಆರ್. ಸತ್ಯನಾರಾಯಣ
ಆಕಳವಾಡಿ ಬುಕ್ ಡಿಪೊ,
(ಸಂ. ರಾಮಣ್ಣಾ ಆಕಳವಾಡಿ)
ವಿಜಯ ರೋಡ, ಧಾರವಾಡ

ಅನುವಾದಕರು :

ಕೆ. ಎಚ್. ಪ್ರಭು
M.A., LL.B.

ಮುದ್ರಕರು :

M. R. ಮಂಜುನಾಥ ಆಕಳವಾಡಿ
B.Sc.; LL.B.
ಉಷಾ ಪ್ರಿಂಟರ್ಸ್,
ವಿಜಯ ರೋಡ, ಧಾರವಾಡ

M.D. Kushtagi
BEOM LLB 2nd

ಪ್ರಕಾಶಕರ ನುಡಿ

ಮುಹಮ್ಮದೀಯ ಕಾನೂನು ಈ ಗ್ರಂಥವನ್ನು ಕನ್ನಡ ಮಾಧ್ಯಮದಲ್ಲಿ ಕಾನೂನು ಕಾಲೇಜು ಮಟ್ಟದಲ್ಲಿ ವ್ಯಾಸಾಂಗ ಮಾಡುವ ವಿದ್ಯಾರ್ಥಿಗಳಿಗೆ ಹಾಗೂ ಜನಸಾಮಾನ್ಯರಿಗೆ ಉಪಯುಕ್ತವಾಗುವಂತೆ ರಚಿಸಲಾಗಿದೆ.

ಮುಹಮ್ಮದೀಯ ಕಾನೂನು ವಿಷಯದ ಬಗ್ಗೆ ಈವರೆಗೂ ಕನ್ನಡ ಭಾಷೆಯಲ್ಲಿ ಪ್ರಕಟವಾಗಿರುವುದು ವಿರಳ. ಆದುದರಿಂದ ಈ ಗ್ರಂಥವು ವಿದ್ಯಾರ್ಥಿಗಳ ಬಹುಕಾಲದ ಬೇಡಿಕೆಯನ್ನು ಈಡೇರಿಸುವಲ್ಲಿ ಯಶಸ್ವಿಯಾಗುತ್ತದೆಯೆಂದು ಹೇಳಿದರೆ ತಪ್ಪೇನಲ್ಲ.

ಈ ಗ್ರಂಥದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾಯ್ದೆ ಕಲಮುಗಳನ್ನು ಸರಳವಾಗಿ ಸರಳ ಕನ್ನಡದಲ್ಲಿ ನಿವೇದಿಸಲಾಗಿದೆ. ಏನಾದರೂ ಇದರ ಬಗ್ಗೆ ಸಲಹೆ ಸೂಚನೆಗಳಿದ್ದಲ್ಲಿ ಆಹ್ವಾನಿಸಲಾಗಿದೆ.

ಈ ಗ್ರಂಥವನ್ನು ರಚಿಸಿದ ಶ್ರೀ ಕೆ. ಎಚ್. ಪ್ರಭು ಅವರಿಗೂ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಉಮಾ ಪ್ರಿಂಟರ್ಸದ ಮಾಲಕರಿಗೂ ಕೃತಜ್ಞತೆಗಳು.

—ಪ್ರಕಾಶಕರು

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ
(Introductory)

ಮತೀಯ ಕಾನೂನು (Personal Law): ಮಹಮದೀಯ ಕಾನೂನು ಒಂದು ಮತೀಯ ಕಾನೂನಾಗಿದೆ. ವ್ಯಕ್ತಿಗಳ ವೈಯಕ್ತಿಕ ಅಥವಾ ಕೌಟುಂಬಿಕ ವಿಷಯಗಳನ್ನು ನಿಯಂತ್ರಿಸುವ ದಿವಾನೀ ಕಾನೂನಿನ ಭಾಗವನ್ನು ಮತೀಯ ಕಾನೂನಿನ ಭಾಗವೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಗಳ ಕೌಟುಂಬಿಕ ವಿಷಯಗಳು ಅವರ ಧರ್ಮದ ಮೇಲೆ ಅವಲಂಬಿಸಿರುತ್ತದೆ. ಈ ಕೌಟುಂಬಿಕ ವಿಷಯಗಳು ಯಾವವೆಂದರೆ ಕೌಟುಂಬಿಕ ಪ್ರಾಸ್ಥಿತಿ ಮತ್ತು ಕೌಟುಂಬಿಕ ಸ್ವತ್ತು. ಆದುದರಿಂದ ಮತೀಯ ಕಾನೂನನ್ನು ಅವರವರ ಧರ್ಮದ ಹೆಸರಿನಲ್ಲಿ ಕರೆಯಲಾಗುತ್ತದೆ. ಉದಾಹರಣೆಗಾಗಿ, ಹಿಂದೂ ಕಾನೂನು, ಮುಸ್ಲಿಮ್ ಕಾನೂನು ಇತ್ಯಾದಿ. ಕೌಟುಂಬಿಕ ವಿಷಯಗಳ ಸಂಬಂಧದಲ್ಲಿ ಒಂದೊಮ್ಮೆ ಪಕ್ಷಗಾರರು ಹಿಂದುಗಳಾಗಿದ್ದರೆ ಹಿಂದೂ ಕಾನೂನನ್ನು ಮತ್ತು ಮುಸಲ್ಮಾನರಾಗಿದ್ದರೆ ಮಹಮದೀಯ ಕಾನೂನನ್ನು ನ್ಯಾಯಾಲಯಗಳು ಅನ್ವಯಗೊಳಿಸಬೇಕಾಗುತ್ತದೆ. ಮತೀಯ ಕಾನೂನಿನ ಒಂದು ವೈಶಿಷ್ಟ್ಯವೆಂದರೆ ಆದು ವ್ಯಕ್ತಿಗೆ ಸಂಬಂಧಿಸಿರುವುದಲ್ಲದೆ, ಅವನು ವಾಸಿಸುತ್ತಿರುವ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದುದಲ್ಲ. ಕೆಲವು ಮಿತಿಗಳೊಂದಿಗೆ ಮತೀಯ ಕಾನೂನು ಆ ವ್ಯಕ್ತಿಯೊಂದಿಗೆ ಅವನು ಹೋದಲ್ಲೆಲ್ಲ ಅವನನ್ನು ಹಿಂಬಾಲಿಸುತ್ತದೆ. ಮತೀಯ ಕಾನೂನು ಕೆಲವು ಇತಿಮಿತಿಗಳೊಂದಿಗೆ ವ್ಯಕ್ತಿಗಳನ್ನು ಹಿಂಬಾಲಿಸುತ್ತದೆ. ಹಾಗೆಂದರೆ ಒಬ್ಬ ವ್ಯಕ್ತಿಯು ಹೋದಲ್ಲೆಲ್ಲ ತನ್ನ ವೈಯಕ್ತಿಕ ಕಾನೂನನ್ನು ಕೊಂಡೊಯ್ಯುವನು. ಈ ರೀತಿಯಾಗಿ ಒಂದೊಮ್ಮೆ ಒಬ್ಬ ಭಾರತೀಯ ಮಹಮದೀಯನು ಇಂಗ್ಲೆಂಡಿನಲ್ಲಿ ಮೃತನಾದರೆ ಅವನಿಗೆ ವಾರಸಿಗೆ ಸಂಬಂಧಪಟ್ಟ ಮಹಮದೀಯ ಕಾನೂನು ಅನ್ವಯಗೊಳಿಸಲಾಗುವುದಲ್ಲದೆ ಇಂಗ್ಲೆಂಡಿನ ಕಾನೂನನ್ನಲ್ಲ. ಮತೀಯ ಕಾನೂನಿನ ಪರಿಧಿಯು ಎರಡು ರೀತಿಗಳಿಂದ ನಿಯಮಿತವಾಗಿದೆ. ಮತೀಯ ಕಾನೂನು ಇತರ ದಿವಾನೀ ಕಾನೂನಿನಂತೆ ಸಾರ್ವತ್ರಿಕವಾಗಿ ಅನ್ವಯವಾಗುವುದಿಲ್ಲ. ಅದು ಒಂದು ನಿರ್ದಿಷ್ಟವಾದ ಧಾರ್ಮಿಕ ಸಮಾಜಕ್ಕೆ ಮಾತ್ರ ಅನ್ವಯವಾಗುತ್ತದೆ. ಎರಡನೆಯದಾಗಿ ಅನಿರ್ದಿಷ್ಟವಾದ ಸಮಾಜದ ವ್ಯಕ್ತಿಗಳಲ್ಲೂ ಸಹ ಆ ಮತೀಯ ಕಾನೂನು ಅವರ ಕೌಟುಂಬಿಕ ವಿಷಯಗಳಿಗೆ ಮಾತ್ರ ಅನ್ವಯವಾಗುತ್ತದೆ; ಇದು ಅವರ ಎಲ್ಲ ಕಾರ್ಯ ಕಲಾಪಗಳನ್ನು ನಿಯಂತ್ರಿಸುವದಿಲ್ಲ. ಒಂದು ಮತೀಯ ಕಾನೂನು ಕೇವಲ ಕೌಟುಂಬಿಕ ವಿಷಯಗಳನ್ನಷ್ಟೇ ನಿಯಂತ್ರಿಸು

ವುದಾದುದರಿಂದ ಅದನ್ನು ಒಂದು ಕೌಟುಂಬಿಕ ಕಾನೂನು ಎಂಬುದಾಗಿಯೂ ಕರೆಯಬಹುದು. ಆದುದರಿಂದ ಮುಸಲ್ಮಾನರ ಕೌಟುಂಬಿಕ ವಿಷಯುಗಳನ್ನು ನಿಯಂತ್ರಿಸುವ ಕಾನೂನಿನ ಸಮೂಹವೇ ಮುಹಮುದೀಯ ಕಾನೂನು ಎಂಬುದಾಗಿ ವರ್ಣಿಸಬಹುದು.

ಮುಸಲ್ಮಾನನೆಂದರೆ ಯಾರು? (Who is a Muslim)? ಯಾವಾತನ ಧರ್ಮವು ಇಸ್ಲಾಂ ಆಗಿರುವುದೋ ಆತನನ್ನು ಒಬ್ಬ ಮುಸಲ್ಮಾನನೆಂಬುದಾಗಿ ಪರಿಭಾಷಿಸಬಹುದು. "ಇಸ್ಲಾಂ" ಇದು ಅರಬೀ ಭಾಷೆಯ ಶಬ್ದವಾಗಿದ್ದು ಇದರ ಅರ್ಥವೇನೆಂದರೆ ದೇವರ ಇಚ್ಛೆಯ ಮುಂದೆ ಶರಣಾಗುವದು. ಕಾನೂನಿನ ದೃಷ್ಟಿಯಲ್ಲಿ ಇಸ್ಲಾಂ ಇದೊಂದು ದರ್ಮವಾಗಿದ್ದು ಇದು ಎರಡು ಸಿದ್ಧಾಂತಗಳ ಮೇಲೆ ಆಧಾರಿತವಾಗಿದೆ. (೧) ಪರಮಾತ್ಮನು (ಅಲ್ಲಾ) ಇವನು ಒಬ್ಬನು ಮತ್ತು ಒಬ್ಬನೇ ಒಬ್ಬನು, ಮತ್ತು (೨) ಮಹಮದನು ಪರಮಾತ್ಮನ ಸಂದೇಶಗಾರನಾಗಿರುವನು. ಮುಸ್ಲಿಮ್ ಎಂಬ ಶಬ್ದವು ಇಸ್ಲಾಮ್ ಇದರಿಂದ ಬಂದಿದೆ ಮತ್ತು ಇದರ ಅರ್ಥವೇನೆಂದರೆ ಇಸ್ಲಾಮ್ ಇದನ್ನು ನಂಬಿರುವ ಒಬ್ಬ ವ್ಯಕ್ತಿ ನ್ಯಾಯಾಲಯದ ದೃಷ್ಟಿಯಲ್ಲಿ ಒಬ್ಬನು ಮುಸಲ್ಮಾನನೆಂದು ಎಣಿಸಲ್ಪಡಬೇಕಾದರೆ ಅವನಿಗೆ ಏಕೇಶ್ವರತ್ವದಲ್ಲಿ ಮತ್ತು ಮಹಮದ ಪೈಗಂಬರತ್ವದಲ್ಲಿ ವಿಶ್ವಾಸವಿದ್ದಿರಬೇಕು. ಒಬ್ಬ ವ್ಯಕ್ತಿಯು ಮುಸಲ್ಮಾನನೆಂಬುದಾಗಿ ಎಣಿಸಲ್ಪಡಬೇಕಾದರೆ ಅವನಲ್ಲಿರುವ ಈ ವಿಶ್ವಾಸವು ಕನಿಷ್ಠ ಅವಶ್ಯಕತೆಯಾಗಿದೆ. ಒಂದೊಮ್ಮೆ ಒಬ್ಬ ವ್ಯಕ್ತಿಯು ಇಸ್ಲಾಮಿನ ಈ ಮೂಲಭೂತ ತತ್ವವನ್ನು ನಂಬದಿದ್ದರೆ ನ್ಯಾಯಾಲಯವು ಅವನನ್ನು ಒಬ್ಬ ಮುಸಲ್ಮಾನನೆಂಬುದಾಗಿ ಎಣಿಸುವಂತಿಲ್ಲ. ಒಂದೊಮ್ಮೆ ಒಬ್ಬ ವ್ಯಕ್ತಿಗೆ ಮೇಲೆ ಹೇಳಲಾದ ಸಿದ್ಧಾಂತಗಳಲ್ಲಿ ವಿಶ್ವಾಸವಿದ್ದು ಅವನು ಇಸ್ಲಾಮಿನ ಇತರ ಆಚಾರ ವಿಚಾರಗಳನ್ನು ಸ್ವೀಕರಿಸದಿದ್ದರೂ ಸಹ ಕಾನೂನಿನ ದೃಷ್ಟಿಯಲ್ಲಿ ಅವನೊಬ್ಬ ಮುಸಲ್ಮಾನನಾಗುವನು. ಒಬ್ಬ ವ್ಯಕ್ತಿಯು ಜನ್ಮತಃ ಅಥವಾ ಮತಾಂತರದಿಂದ ಮುಸಲ್ಮಾನನಾಗಬಹುದು.

1) ಜನ್ಮತಃ ಮುಸಲ್ಮಾನ : ಯಾವಾತನು ಹುಟ್ಟುವಾಗ ಆತನ ತಂದೆ ತಾಯಿಯರಿಬ್ಬರೂ ಮುಸಲ್ಮಾನರಾಗಿದ್ದರೂ ಆತನು ಜನ್ಮತಃ ಒಬ್ಬ ಮುಸಲ್ಮಾನ ಎಂಬುದಾಗಿ ಎಣಿಸಲ್ಪಡುವನು. ಹೆದಾಯ (Hedaya) ಇವರ ಪ್ರಕಾರ ಒಂದೊಮ್ಮೆ ಒಬ್ಬನ ಜನ್ಮಕಾಲದಲ್ಲಿ ಅವನ ತಂದೆ ಅಥವಾ ತಾಯಿ ಇವರೊಳಗೆ ಯಾರಾದರೂ ಮುಸಲ್ಮಾನನಾಗಿದ್ದರೂ ಸಹ ಅವನೊಬ್ಬ ಮುಸಲ್ಮಾನ ಎಂಬುದಾಗಿ ಎಣಿಸಲ್ಪಡುವನು. ಆದರೆ ಭಾರತದ ನ್ಯಾಯಾಲಯುಗಳು ಈ ದೃಷ್ಟಿಕೋನವನ್ನು ಸ್ವೀಕರಿಸಿಲ್ಲ. ಇಂತಹ ಒಂದು ಪ್ರಕರಣದಲ್ಲಿ ಒಂದು ಮಗುವು ಮುಸಲ್ಮಾನನಂತೆ ಬೆಳೆಸಲ್ಪಟ್ಟಿದ್ದರೆ ಮಾತ್ರ ಅದು ಮುಸಲ್ಮಾನ ಎಂಬುದಾಗಿ ಎಣಿಸಲ್ಪಡುತ್ತದೆ. ಉದಾಹರಣೆಗಾಗಿ, ಒಂದು ಪ್ರಕರಣದಲ್ಲಿ ಒಬ್ಬನು ಹುಟ್ಟುವ ಕಾಲದಲ್ಲಿ ಅವನ ತಾಯಿಯು ಮುಸಲ್ಮಾನಳಾಗಿದ್ದಳು ಮತ್ತು ತಂದೆಯು ಹಿಂದು ಆಗಿದ್ದನು ಮತ್ತು ಅವನನ್ನು ಒಬ್ಬ ಹಿಂದುವಿನ ರೀತಿಯಲ್ಲಿ ಪಾಲನೆ ಮಾಡಿ ಬೆಳೆಸಲಾಗಿತ್ತು. ಆ

ಮಗುವಿನ ತಾಯಿಯು ಒಬ್ಬ ಮುಸಲ್ಮಾನಳಾಗಿದ್ದರೂ ಸಹ ಅವನೊಬ್ಬ ಹಿಂದು ಎಂಬುದಾಗಿ ನ್ಯಾಯಾಲಯವು ತೀರ್ಪುಕೊಟ್ಟದ್ದು ಇದೆ. ಜನ್ಮತಃ ಮುಸಲ್ಮಾನನಾಗಿರುವ ಒಬ್ಬ ವ್ಯಕ್ತಿಯು ವಯಸ್ಕನಾದಾಗ ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿದ ಹೊರತು ಅವನೊಬ್ಬ ಮುಸಲ್ಮಾನನಾಗಿಯೇ ಮುಂದುವರಿಯುವನು. ಈ ವಿಷಯವು "ನರಂತಕತ್ ವಿ. ಪರಕ್ಕಲ್ ಮತ್ತು ಇತರರು" (Narantakat V. Parakkal & Others) ಪ್ರಕರಣದಲ್ಲಿ ಕೊಡಲಾದ ತೀರ್ಪಿನಿಂದ ಸ್ಪಷ್ಟಗೊಳಿಸಲಾಗಿದೆ.

ನರಂತಕತ್ ವಿ. ಪರಕ್ಕಲ್ ಮತ್ತು ಇತರರು
(Narantakat V. Parakkal & Others)

ಸಿದ್ಧಾಂತ : ಇಸ್ಲಾಮ್ ಧರ್ಮದ ಸಿದ್ಧಾಂತವು ಎರಡು ತತ್ವಗಳ ಮೇಲೆ ಆಧಾರಿತವಾಗಿವೆ. ಅವಾವುವೆಂದರೆ ೧) ಪರಮಾತ್ಮನು ಒಬ್ಬನು ಮತ್ತು ೨) ಮಹಮ್ಮದನು ಅವನ ಪೈಗಂಬರನು. ಇದು ಅನಿವಾರ್ಯವಾದ ಒಂದು ಕನಿಷ್ಠ ನಂಬಿಕೆಯಾಗಿರುತ್ತದೆ. ಆದುದರಿಂದ ಏಕೇಶ್ವರವಾದ ಮತ್ತು ಮಹಮ್ಮದನ ಪೈಗಂಬರತ್ವ ಇವು ಇಸ್ಲಾಮಿನ ಮೂಲಭೂತ ತತ್ವಗಳಾಗಿವೆ. ಅಹಮದೀಯರು ಒಂದು ಸುಧಾರಣೆಗೊಂಡ ಉಪಜಾತಿಯಾಗಿರುವರು ಮತ್ತು ಅವರು ಮುಸಲ್ಮಾನರಾಗಿರುವರು. ಒಂದೊಮ್ಮೆ ಒಬ್ಬ ಮುಸ್ಲಿಮ್ ಪತಿಯು ಅಹಮದೀಯ ಪಂಥಕ್ಕೆ ಸೇರಿದರೆ ಅವನು ಸ್ವಧರ್ಮ ತ್ಯಾಗಮಾಡಿದಂತಾಗುವುದಿಲ್ಲ. ಆದುದರಿಂದ ಪತಿಯು ಅಹಮ್ಮದೀಯ ಪಂಥಕ್ಕೆ ಸೇರಿರುವನೆಂಬ ಕಾರಣದಿಂದ ಪತ್ನಿಯು ಇನ್ನೊಂದು ವಿವಾಹವಾಗುವಂತಿಲ್ಲ. ಇಂತಹ ಪ್ರಸಂಗದಲ್ಲಿ ಒಂದೊಮ್ಮೆ ಅವಳು ಇನ್ನೊಂದು ವಿವಾಹ ಮಾಡಿಕೊಂಡರೆ ಅವಳು ಭಾರತೀಯ ದಂಡ ಸಂಹಿತೆ(Indian Penal Code) ಇದರ ಕ. ೭೬ ಮತ್ತು ಕ. ೪೯೪ ಇವುಗಳ ಪ್ರಕಾರ ಬಹುಪತಿತ್ವದ ಅಪರಾಧ ಮಾಡಿದಂತಾಗುತ್ತದೆ.

ವಸ್ತು ಸ್ಥಿತಿ : ಪರಕ್ಕಲ್ ಎಂಬ ಆರೋಪಿಯು ಒಬ್ಬ ಮಾಪ್ಲಾನಾರಿಯಾಗಿದ್ದು ಕಾನೂನುಬದ್ಧ ವಿವಾಹಿತೆಯಾಗಿದ್ದಳು. ಫಿರ್ಯಾದಿಗಾರನಾದ ನರಂತಕತ್ ಇವನು ಅವಳ ಗಂಡನಾಗಿದ್ದನು ಮತ್ತು ವಿವಾಹವಾಗಿ ಕೆಲವು ಕಾಲದ ಬಳಿಕ ಅಹಮದೀಯ ಎಂಬ ಹೊಸ ಪಂಥಕ್ಕೆ ಸೇರಿದ್ದನು. ಅವಳ ಗಂಡನು ಅಹಮದೀಯ ಪಂಥಕ್ಕೆ ಸೇರಿದುದರಿಂದ ಅವನು ಧರ್ಮತ್ಯಾಗ ಮಾಡಿದಂತಾಗಿದೆಯೆಂದು ಮೌಲವಿಗಳು ಅವಳಿಗೆ ಬೋಧಿಸಿದರು. ತನ್ನ ಗಂಡನು ಅಹಮದೀಯ ಪಂಥಕ್ಕೆ ಸೇರಿದುದರಿಂದಾಗಿ ಅವನೊಂದಿಗಿನ ತನ್ನ ವಿವಾಹವು ವಿಘಟಿತಗೊಂಡಿದೆಯೆಂಬುದನ್ನು ಹೇಳಿದ ಧರ್ಮಗುರುಗಳ ಮಾತನ್ನು ನಂಬಿ ಅವಳು ಇನ್ನೊಂದು ವಿವಾಹ ಮಾಡಿಕೊಂಡಳು. ನರಂತಕತ್ ಇವನು ಅವಳ ಮೇಲೆ ಬಹುಪತಿತ್ವದ ಆರೋಪ ಹೇರಿ ಅವಳ ವಿರುದ್ಧ ಫಿರ್ಯಾದಿ ಕೊಟ್ಟನು. ಮಲಬಾರ್ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಯಿತು. ಮತ್ತು ಅವಳ

ಗಂಡನು ಸ್ವಧರ್ಮ ತ್ಯಾಗ ಮಾಡಿರುವನೆಂಬುದನ್ನು ಒಪ್ಪಿದ ಆ ಜಿಲ್ಲಾ ನ್ಯಾಯಾಲಯವು ಅವಳನ್ನು ಬಿಡುಗಡೆ ಮಾಡಿತು. ನರಂತಕತ್‌ನು ಮದ್ರಾಸ್ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದನು.

ತೀರ್ಪು : ಉಚ್ಚನ್ಯಾಯಾಲಯವು ನರಂತಕತ್‌ನ ಮನವಿಯನ್ನು ಸಮ್ಮತಿಸಿ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು—

ಅಹಮದೀಯರು ಮುಸಲ್ಮಾನರೊಳಗಿನ ಒಂದು ಪಂಗಡವಾಗಿರುವರು ಮತ್ತು ನರಂತಕತ್‌ನು ಒಬ್ಬ ಅಹಮ್ಮದೀಯನಾಗಿದ್ದುದರಿಂದ ಅವನು ಸ್ವಧರ್ಮ ತ್ಯಾಗ ಮಾಡಿದಂತಾಗುವುದಿಲ್ಲ. ಆರೋಪಿಯು ತನ್ನ ಮೊದಲನೇ ವಿವಾಹವು ಅಸ್ತಿತ್ವದಲ್ಲಿದ್ದಾಗ ಇನ್ನೊಂದು ವಿವಾಹವಾಗಿರುವಳು. ಅವಳು ಇದನ್ನು ಸದ್ಭಾವನೆ ಮತ್ತು ಅಪರಾಧಿಕವಲ್ಲದ ಮನಸ್ಸಿನಿಂದ ಮಾಡಿರುವಳಾದರೂ ಸಹ ಅವಳ ಅಪರಾಧವು ಕ್ಷಮ್ಯವಾಗುವದಿಲ್ಲ. ಆದುದರಿಂದ ಆಕೆಯ ದೋಷ ವಿಮುಕ್ತಿಯನ್ನು ರದ್ದುಗೊಳಿಸಲಾಯಿತು.

2) ಮತಾಂತರದಿಂದ ಮುಸಲ್ಮಾನ : ಚಿತ್ತಸ್ವಾಸ್ಥ್ಯವಿದ್ದು ವಯಸ್ಕನಾಗಿರುವ ಯಾವನೇ ಒಬ್ಬ ವ್ಯಕ್ತಿಯು ತನ್ನ ಮೂಲಧರ್ಮವನ್ನು ಪರಿತ್ಯಜನೆ ಮಾಡಿ ಇಸ್ಲಾಂ ಧರ್ಮದ ಅನುಯಾಯಿಯಾಗಬಹುದು. ಒಬ್ಬ ಮುಸಲ್ಮಾನೇತರನು ಇಸ್ಲಾಮನ್ನು ಸ್ವೀಕರಿಸುವುದರೊಂದಿಗೆ ಅವನೊಬ್ಬ ಮುಸಲ್ಮಾನನಾಗುವನು ಮತ್ತು ಮುಸ್ಲಿಮ್ ಮತೀಯ ಕಾನೂನಿನ ನಿಯಮಗಳು ಅವನಿಗೆ ತಕ್ಷಣದಿಂದ ಅನ್ವಯವಾಗುತ್ತವೆ. ಇಸ್ಲಾಮಿಗೆ ಮತಾಂತರಗೊಳ್ಳುವ ಕ್ರಿಯೆಯು ಎರಡು ರೀತಿಯಿಂದ ನಡೆಯಬಹುದು. ತನ್ನ ಮೂಲಧರ್ಮವನ್ನು ಪರಿತ್ಯಜಿಸಿರುವೆನು ಮತ್ತು ಹೀಗೆ ಇಸ್ಲಾಮನ್ನು ನಂಬಿರುವೆನು ಮತ್ತು ಪರಮಾತ್ಮನು ಒಬ್ಬನು ಮತ್ತು ಮಹಮದನು ಅವನ ಪೈಗಂಬರನಾಗಿರುವನು ಎಂಬುದನ್ನು ನಂಬಿರುವೆನು ಎಂಬ ಒಂದು ಘೋಷಣೆಯೊಂದಿಗೆ ಒಬ್ಬ ವ್ಯಕ್ತಿಯು ಮುಸಲ್ಮಾನನಾಗುವನು. ಇಸ್ಲಾಮ್ ಧರ್ಮದಲ್ಲಿ ಮತಾಂತರಣಕ್ಕಾಗಿ ಗೊತ್ತು ಮಾಡಲ್ಪಟ್ಟ ವಿಧಿಗಳೂ ಸಹ ಒಬ್ಬನು ಇಸ್ಲಾಮಿಗೆ ಮತಾಂತರಣಗೊಳ್ಳಬಹುದು.

ಒಬ್ಬ ವ್ಯಕ್ತಿಯು ಒಬ್ಬ ಮುಸಲ್ಮಾನ ಎಂಬುದಾಗಿ ಒಮ್ಮೆ ಸಾಬೀತಾದರೆ ಸಾಕು, ಅವನು ಜನ್ಮದಿಂದ ಮುಸಲ್ಮಾನನಾಗಿರುವನೋ ಅಥವಾ ಮತಾಂತರಣದಿಂದ ಎಂಬ ಪ್ರಶ್ನೆಯೇಳುವದಿಲ್ಲ. ಮುಸ್ಲಿಮ್ ಕಾನೂನಿನ ಅನ್ವಯ ಮಾಡುವಲ್ಲಿ ಈ ವ್ಯತ್ಯಾಸಕ್ಕೆ ಗಮನ ಕೊಡಲಾಗುವದಿಲ್ಲ. ಒಬ್ಬನು ಮತಾಂತರಣದಿಂದ ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವನೆಂದಾದರೆ ಅವನು ಮುಸ್ಲಿಮ್ ಮತೀಯ ಕಾನೂನನ್ನು ಸಹ ಸ್ವೀಕರಿಸಿರುವನೆಂದು ಎಣಿಸಲಾಗುತ್ತದೆ. ಆದರೆ ೧೯೩೭ ಕ್ಕಿಂತ ಮೊದಲು ಮತಾಂತರಣದಿಂದ ಮುಸಲ್ಮಾನರಾದವರು ತಮ್ಮ ಮೂಲಧರ್ಮದ ಕೆಲವು ಆಚಾರ ವಿಚಾರಗಳನ್ನು ಇಟ್ಟುಕೊಳ್ಳಲು ಬರುತ್ತಿತ್ತು. ಉದಾಹರಣೆಗಾಗಿ ಸುಮಾರು ೧೦೦

ವರ್ಷಗಳ ಹಿಂದೆ ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಖೋಜಾ (Khojas) ಮತ್ತು ಕಚ್ಚಿ ಮೆಮನ್ ಮುಸಲ್ಮಾನರು (Cutchi Memon Muslims) ಇವರು ವಾರಸಿಗೆ ಸಂಬಂಧಪಟ್ಟ ಹಿಂದೂ ರೂಢಿಗತ ಕಾನೂನನ್ನೇ ಅನುಸರಿಸುತ್ತಿದ್ದರು. ೧೯೩೭ರಲ್ಲಿ ಜಾರಿಗೆ ಬಂದ ಶರಿಯತ್ ಅಧಿನಿಯಮ (Shariat Act) ಇದು ಖೋಜಾ ಮತ್ತು ಕಚ್ಚಿ ಮೆಮನ್‌ರೊಳಗಿರುವ ಕೆಲವು ಮುಸಲ್ಮಾನೇತರ ರೂಢಿಗಳನ್ನು ರದ್ದುಗೊಳಿಸಿತು.

ಮುಸ್ಲಿಮ್ ಕಾನೂನಿನ ಅನ್ವಯ (Application of Muslim Law)

ಭಾರತೀಯ ನ್ಯಾಯಾಲಯಗಳಿಂದ ಇಡೀ ಮುಸ್ಲಿಮ್ ಕಾನೂನು ಅನ್ವಯಗೊಳಿಸಲ್ಪಡುವುದಿಲ್ಲ. ಮುಸಲ್ಮಾನರ ಕೌಟುಂಬಿಕ ವಿಷಯಗಳನ್ನು ಶಾಸಿಸುವ ಮುಸ್ಲಿಮ್ ಕಾನೂನಿನ ನಿಯಮಗಳಷ್ಟೇ ಈ ನ್ಯಾಯಾಲಯಗಳು ಅನ್ವಯಗೊಳಿಸುತ್ತವೆ. ಭಾರತೀಯ ನ್ಯಾಯಾಲಯಗಳು ಮುಸ್ಲಿಮ್ ಕಾನೂನನ್ನು ಕೆಲವು ಅಧಿನಿಯಮಗಳ ಪ್ರಕಾರ ಮತ್ತು ನೀತಿ ಸಮ್ಮತತೆ, ನ್ಯಾಯ, ಮತ್ತು ಸದ್ಭಾವನೆಗಳ ಸಿದ್ಧಾಂತಗಳ ಆಧಾರದ ಮೇಲೆ ಅನುಶಾಸನಗೊಳಿಸಲು ಪ್ರಾಧಿಕೃತವಾಗಿವೆ. ಆದುದರಿಂದ ಒಂದು ನ್ಯಾಯಾಲಯವು ಯಾವುದಾದರೊಂದು ಅಧಿನಿಯಮದ ಪ್ರಕಾರ ಅಥವಾ ಒಂದು ಪ್ರಕರಣದ ಸಂಬಂಧದಲ್ಲಿ ನ್ಯಾಯವನ್ನೊದಗಿಸಲು ಅವಶ್ಯವೆಂದು ಕಂಡಾಗ ಮುಸ್ಲಿಮ್ ಕಾನೂನಿನ ನಿಯಮಗಳನ್ನು ಅನ್ವಯಗೊಳಿಸುತ್ತದೆ.

1) ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸಲು ನ್ಯಾಯಾಲಯಗಳ ಪ್ರಾಧಿಕಾರ :

(Statutory Authority of the Courts to apply Muslim law :)

ಖಾಸಗೀ ವಿಷಯಗಳ ಹೊರತಾಗಿ ಎಲ್ಲಾ ವಿಷಯಗಳ ಬಗ್ಗೆ ಸಾಮಾನ್ಯ ಕಾನೂನುಗಳನ್ನು ಅಧಿನಿಯಮಿತಗೊಳಿಸುವುದು ಬ್ರಿಟಿಶ್ ಸರಕಾರದ ನೀತಿಯಾಗಿತ್ತು. ಆದುದರಿಂದ ಭಾರತದ ದಂಡ ಸಂಹಿತೆ (Indian Penal Code), ಭಾರತೀಯ ಕರಾರು ಅಧಿನಿಯಮ(Indian Contract Act), ದಿವಾಣೀ ಪ್ರಕ್ರಿಯಾ ಸಂಹಿತೆ (Civil Procedure Code), ಸ್ವತ್ತು ಹಸ್ತಾಂತರಣ ಅಧಿನಿಯಮ (Transfer of Property Act), ಇತ್ಯಾದಿ ಅಧಿನಿಯಮಗಳು ಮುಸಲ್ಮಾನರಿಗೆ ಹಾಗೂ ಹಿಂದುಗಳಿಗೆ ಅನ್ವಯಗೊಳಿಸಲಾದುವು. ಆದರೆ ಕೌಟುಂಬಿಕ ಅಥವಾ ಖಾಸಗಿ ವಿಷಯಗಳು ಈ ಎರಡೂ ಧರ್ಮದವರ ಧಾರ್ಮಿಕ ಕಾನೂನುಗಳಿಂದ ಶಾಸಿತವಾಗುತ್ತಿದ್ದವು. ಈ ನೀತಿಯು ಅನೇಕ ಅಧಿನಿಯಮಗಳಲ್ಲಿ ವ್ಯಕ್ತವಾಗಿ ಹಾಕಲ್ಪಟ್ಟಿತು. ಇವುಗಳಲ್ಲಿ ಪಂಜಾಬ್ ಲಾಸ್ ಆಕ್ಟ್ ೧೮೭೨ (Panjab laws, Act, 1872), ದಿ ಮದ್ರಾಸ್ ಸಿವಿಲ್ ಕೋರ್ಟ್ ಆಕ್ಟ್, ೧೮೭೩ (The Madras Civil Court Act 1873) ಅವದ್ ಲಾಸ್ ಆಕ್ಟ್ ೧೮೭೬ (Oudh Laws' Act, 1876) ಮತ್ತು ಬೆಂಗಾಳ್, ಆಗ್ರಾ ಆಂಡ್ ಆಸಾಮ್ ಸಿವಿಲ್ ಕೋರ್ಟ್ ಆಕ್ಟ್

೧೮೮೭ (Bengal, Agra and Assam Civil Courts Act 1887) ಇತ್ಯಾದಿ ಕೆಲವು ನಿರ್ದಿಷ್ಟವಾದ ಪ್ರಕರಣಗಳಲ್ಲಿ ಪಕ್ಷಗಾರರು ಹಿಂದುಗಳಾಗಿದ್ದಾಗ ಹಿಂದೂ ಕಾನೂನನ್ನೂ ಮತ್ತು ಮುಸ್ಲಿಮರಾಗಿದ್ದಾಗ ಮುಸ್ಲಿಮ್ ಕಾನೂನನ್ನೂ ಅನ್ವಯ ಗೊಳಿಸಬೇಕೆಂದು ಈ ಅಧಿನಿಯಮಗಳಲ್ಲಿ ಉಪಬಂಧಿಸಲಾಗಿದೆ. ಈ ರೀತಿಯಾಗಿ ಭಾರತೀಯ ನ್ಯಾಯಾಲಯಗಳು ಮುಸಲ್ಮಾನರಿಗೆ ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸುವ ಪ್ರಾಧಿಕಾರವನ್ನು ಪಡೆದವು. ಮುಸಲ್ಮಾನರಿಗೆ ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸಲು ಭಾರತದ ನ್ಯಾಯಾಲಯಗಳನ್ನು ಪ್ರಾಧಿಕೃತ ಗೊಳಿಸುವ ಇತ್ತೀಚಿನ ಒಂದು ಕಾನೂನು 'ಮುಸ್ಲಿಮ್ ಪರ್ಸನಲ್ ಲಾ (ಶರಿಯತ್) ಅನ್ವಯ ೧೯೩೭' [Muslim Personal law (Shariatt) Application Act 1937) ಆಗಿರುತ್ತದೆ. ಇದು ಶರಿಯತ್ ಆಕ್ಟ್ (Shariat Act) ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಶರಿಯತ್ ಅಧಿನಿಯಮ ೧೯೩೭ (The Shariat Act, 1937)

ತಮ್ಮ ಮತೀಯ ಕಾನೂನು ತಮಗೆ ಅನ್ವಯಗೊಳಿಸಲಾಗುತ್ತವೋ ಇಲ್ಲವೆಂಬ ಬಗ್ಗೆ ಭಾರತೀಯ ಮುಸಲ್ಮಾನರಲ್ಲಿ ಸಂಶಯವಿದ್ದಾಗ ಬ್ರಿಟಿಶ್ ಸರಕಾರದ ನೀತಿಯನ್ನು ಸ್ಪಷ್ಟಪಡಿಸಲು ಮತ್ತು ಮುಸಲ್ಮಾನರ ಮನಸ್ಸಿನೊಳಗಿರುವ ಈ ಒಂದು ಸಂಶಯವನ್ನು ಕಿತ್ತು ಹಾಕಲು ಕೇಂದ್ರೀಯ ಸಂಪತ್ತು (Central legislature) ಇದು ೧೯೩೭ರಲ್ಲಿ ಶರಿಯತ್ ಅಧಿನಿಯಮವನ್ನು ಅಧಿನಿಯಮಿತಗೊಳಿಸಿತು. ಈಗ ಅನ್ವಯ ಮಾಡಲಾಗುತ್ತಿರುವ ಮುಸ್ಲಿಮ್ ಮತೀಯ ಕಾನೂನು ಸಾಮಾನ್ಯವಾಗಿ ಈ ಅಧಿನಿಯಮದಿಂದಲೇ ಶಾಸಿತವಾಗಿದೆ. ಮುಸ್ಲಿಮ್ ಕಾನೂನಿನ ಅನ್ವಯದ ಬಗ್ಗೆ ಈ ಅಧಿನಿಯಮದಲ್ಲಿ ಮಾಡಲಾದ ಉಪಬಂಧಗಳನ್ನು ಈ ಕೆಳಗೆ ಕೊಡಲಾಗಿದೆ.

ಎ) ೧) ಒಂದು ಮರಣ ಶಾಸನರಹಿತ ಉತ್ತರದಾನದ ಪ್ರಕರಣದಲ್ಲಿ;
೨) ನಾರಿಯರ ವಿಶೇಷ ಸ್ವತ್ತುಗಳ ಸಂಬಂಧದಲ್ಲಿ;
೩) ವಿವಾಹದಲ್ಲಿ (ವಿವಾಹಕ್ಕೆ ಸಂಬಂಧಪಟ್ಟ ಎಲ್ಲ ಪ್ರಾಸಂಗಿಕತೆಗಳ ಸಹಿತ)
೪) ವಿವಾಹದ ನಿಘಟನೆ (ಎಲ್ಲ ರೀತಿಯ ವಿವಾಹದ ವಿಚ್ಛೇದನೆಗಳನ್ನು ಕೂಡಿಕೊಂಡು)
೫) ಜೀವನಾಂಶ;
೬) ಮೆಹರ್;
೭) ಸಂರಕ್ಷಕತ್ವ;
೮) ದಾನ;
೯) ನ್ಯಾಸ ಮತ್ತು ನ್ಯಾಸಸ್ವತ್ತುಗಳು
೧೦) ವಕ್ಫ್

ಇವುಗಳ ಸಂಬಂಧದಲ್ಲಿ ಎಲ್ಲಿ ಇಬ್ಬರೂ ಪಕ್ಷಗಾರರು ಮುಸಲ್ಮಾನರಾಗಿರುವರೋ ಅಲ್ಲಿ ಮುಸ್ಲಿಮ್ ಕಾನೂನು ಅನ್ವಯಗೊಳಿಸಲಾಗುವುದೆಂದು ಶರಿಯತ್ ಅಧಿನಿಯಮದ ಕ. ೨ರಲ್ಲಿ ಉಪಬಂಧಿಸಲಾಗಿದೆ.

ಆದುದರಿಂದ ಮೇಲೆ ಹೇಳಲಾದ ವಿಷಯಗಳ ಸಂಬಂಧದಲ್ಲಿ ಪಕ್ಷಗಾರರು ಮುಸಲ್ಮಾನರಾಗಿದ್ದರೆ ನ್ಯಾಯಾಲಯವು ಕೇವಲ ಮುಸ್ಲಿಮ್ ಮತೀಯ ಕಾನೂನನ್ನಷ್ಟೇ ಅನ್ವಯಗೊಳಿಸುವುದಲ್ಲದೆ ಇತರ ಯಾವುದೇ ಕಾನೂನನ್ನು ಅನ್ವಯಗೊಳಿಸುವುದಿಲ್ಲ. ಮುಸ್ಲಿಮ್ ಕಾನೂನಿಗೆ ವಿರುದ್ಧವಾಗಿರುವ ಒಂದು ರೂಢಿ ಅಥವಾ ಆಚರಣೆಯನ್ನು ಮುಸಲ್ಮಾನರಿಗೆ ಅನ್ವಯಗೊಳಿಸುವಂತಿಲ್ಲ. ಈ ಅಧಿನಿಯಮದ ಕ. ೨ ಇದರಲ್ಲಿ ಬರುವ "ನಿರ್ಣಯಕ್ಕಾಗಿ ನಿಯಮವು ಮುಸ್ಲಿಮ್ ಕಾನೂನು ಆಗಿರುತ್ತದೆ" ಎಂಬ ಶಬ್ದಗಳಿಂದ ಏನು ತಿಳಿದು ಬರುತ್ತದೆಂದರೆ ನ್ಯಾಯಾಲಯಗಳಿಗೆ ಮುಸ್ಲಿಮ್ ಮತೀಯ ಕಾನೂನನ್ನು ಅನ್ವಯಗೊಳಿಸಲು ಶಕ್ತಿಕೊಟ್ಟಿರುವುದಷ್ಟೇ ಅಲ್ಲ ಬದಲಾಗಿ ಅದನ್ನು ಅನ್ವಯಗೊಳಿಸಲು ನ್ಯಾಯಾಲಯಗಳು ಬಾಧ್ಯವೂ ಆಗಿವೆ.

ಬಿ) ದತ್ತಕ, ಮರಣ ಶಾಸನ ಮತ್ತು ಉತ್ತರದಾನದ ಪ್ರಕರಣದಲ್ಲಿ ಈ ಅಧಿನಿಯಮದ ಕ. ೨ ಇದರ ಪ್ರಕಾರ ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸಲು ನ್ಯಾಯಾಲಯಗಳಿಗೆ ಪ್ರಾಧಿಕಾರವಿಲ್ಲ, ಏಕೆಂದರೆ ಇವನ್ನು ಮೇಲೆ ಹೇಳಲಾದ ಕಲಮಿನೊಳಗೆ ಸೇರಿಸಲಾಗಿಲ್ಲ. ಆದರೆ ಶರಿಯತ್ ಅಧಿನಿಯಮದ ಕ. ೩ರಲ್ಲಿ ಉಪಬಂಧಿಸಲಾದ ಪ್ರಕಾರ ಒಂದೊಮ್ಮೆ ಒಬ್ಬ ಮುಸಲ್ಮಾನನು ಈ ವಿಷಯಗಳ ಸಂಬಂಧದಲ್ಲೂ ಸಹ ತಾನು ಮುಸ್ಲಿಮ್ ಕಾನೂನಿನಿಂದ ಶಾಸಿತನಾಗಬಯಸುವೆನೆಂಬುದಾಗಿ ವ್ಯಕ್ತವಾಗಿ ಘೋಷಿಸಿದರೆ ಅಲ್ಲಿ ದತ್ತಕ, ಮರಣಶಾಸನ ಮತ್ತು ಉತ್ತರದಾನದ ಸಂಬಂಧದಲ್ಲೂ ಸಹ ನ್ಯಾಯಾಲಯವು ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸಬಹುದು. ಈ ಬಗ್ಗೆ ಶರಿಯತ್ ಅಧಿನಿಯಮದ ಕ. ೩ರಲ್ಲಿ ಸಂಬಂಧ್ದವಾದ ಉಪಬಂಧಗಳು ಈ ಕೆಳಗೆ ಕೊಡಲಾಗಿವೆ.

"ಕ ೩ (೧) ಯಾವನಾದರೊಬ್ಬ ವ್ಯಕ್ತಿಯು

ಎ) ಅವನೊಬ್ಬ ಮುಸಲ್ಮಾನನಾಗಿರುವನು.

ಬಿ) ಭಾರತೀಯ ಕರಾರು ಅಧಿನಿಯಮ ೧೮೭೨ ಇದರ ಕ. ೧೧ರ ಅರ್ಥವ್ಯಾಪ್ತಿಯೊಳಗೆ ಅವನು ಕರಾರು ಮಾಡಲು ಸಕ್ಷಮನಾಗಿರುವನು ಮತ್ತು

ಸಿ) ಈ ಅಧಿನಿಯಮವು ವ್ಯಾಪಕವಾಗಿರುವ ಒಂದು ರಾಜ್ಯಕ್ಷೇತ್ರದಲ್ಲಿ ಅವನು ಅಧಿವಾಸಿಯಾಗಿರುವನು ಎಂಬುದನ್ನು ಗೊತ್ತುಮಾಡಲಾದ ಪ್ರಾಧಿಕಾರಕ್ಕೆ ಸಮಾಧಾನಪಡಿಸಿದರೆ

ಗೊತ್ತು ಮಾಡಲಾದ ಪ್ರಾಧಿಕಾರದ ಮುಂದೆ ಘೋಷಣೆಯಿಂದ ಮತ್ತು ಕಡತ ಮಾಡಿ ತಾನು ಈ ಕಲಮಿನ ಉಪಬಂಧಗಳ ಪ್ರಯೋಜನ ಪಡೆಯ

ಬಯಸುವೆನೆಂಬುದಾಗಿ ಗೊತ್ತು ಮಾಡಲಾದ ಪ್ರಾಧಿಕಾರದ ಮುಂದೆ ಘೋಷಣೆ ಮಾಡಬಹುದು, ಮತ್ತು ಅದರ ಬಳಿಕ ಕ. ೨ರೊಳಗಿನ ಉಪಬಂಧಗಳು ಘೋಷಕನಿಗೆ ಮತ್ತು ಅವನ ಎಲ್ಲಾ ಅಲ್ಪವಯೀ ಮಕ್ಕಳಿಗೆ ಮತ್ತು ಅಲ್ಲಿ ನಮೂದಿಸಲಾದ ವಿಷಯಗಳ ಹೊರತಾಗಿ ದತ್ತಕ, ಮರಣಶಾಸನಗಳು ಮತ್ತು ಉತ್ತರದಾನಗಳು, ಅಲ್ಲಿ ನಿರ್ದಿಷ್ಟಗೊಳಿಸಲಾಗಿದೆಯೆಂಬಂತೆ ಅವನ ವಂಶಜರಿಗೆ ಅನ್ವಯವಾಗುತ್ತವೆ."

ದತ್ತಕ, ಮರಣ ಶಾಸನಗಳು ಮತ್ತು ಉತ್ತರದಾನಗಳು ಕ. ೭ರಲ್ಲಿ ಹೇಳಲ್ಪಟ್ಟಿಲ್ಲವಾದುದರಿಂದ ನ್ಯಾಯಾಲಯಗಳು ಇವನ್ನು ಎಲ್ಲಾ ಮುಸಲ್ಮಾನರಿಗೆ ಅನ್ವಯ ಮಾಡುವುದಿಲ್ಲ. ತಾನು ಈ ವಿಷಯಗಳ ಸಂಬಂಧದಲ್ಲೂ ಸಹ ಮುಸ್ಲಿಮ್ ಕಾನೂನಿನಿಂದ ಶಾಸಿತನಾಗಬಯಸುವೆನೆಂದು ಒಬ್ಬ ಮುಸಲ್ಮಾನನು ಘೋಷಿಸಿದ ಹೊರತು ನ್ಯಾಯಾಲಯಗಳು ಎಲ್ಲಾ ಮುಸಲ್ಮಾನರಿಗೆ ಮುಸ್ಲಿಮ್ ಕಾನೂನನ್ನು ಈ ವಿಷಯಗಳ ಬಗ್ಗೆ ಅನ್ವಯಗೊಳಿಸುವುದಿಲ್ಲ. ಈ ಇಚ್ಛೆಯನ್ನು ಒಂದು ಘೋಷಣೆಯ ಮೂಲಕ ವ್ಯಕ್ತಪಡಿಸಬೇಕಾಗುತ್ತದೆ. ಇಂತಹ ಘೋಷಣೆ ಮಾಡುವ ಪ್ರಕ್ರಿಯೆಯು ಕ. ೩ (೨) ಮತ್ತು ೪ ಇದರಲ್ಲಿ ಹಾಕಲಾಗಿದೆ. ಇಂತಹ ಒಂದು ಘೋಷಣೆಯ ಪರಿಣಾಮವಾಗಿ ಆ ಘೋಷಕನಷ್ಟೆ ಅಲ್ಲ ಬದಲಾಗಿ ಅವನ ಮಕ್ಕಳು ಮತ್ತು ಅವನ ವಂಶಜರೂ ಸಹ ಈ ಮೂರು ಹೆಚ್ಚಿನ ವಿಷಯಗಳ ಸಂಬಂಧದಲ್ಲಿ ಮುಸ್ಲಿಮ್ ಕಾನೂನಿನಿಂದ ಶಾಸಿತರಾಗುವರು. ಒಂದೊಮ್ಮೆ ಒಬ್ಬ ಮುಸಲ್ಮಾನನಿಂದ ಇಂತಹ ಒಂದು ಘೋಷಣೆಯು ಮಾಡಲ್ಪಡದಿದ್ದರೆ ಈ ವಿಷಯಗಳ ಸಂಬಂಧದಲ್ಲಿ ಅವನಿಗೆ ಮುಸ್ಲಿಮ್ ಮತೀಯ ಕಾನೂನನ್ನು ಅನ್ವಯಗೊಳಿಸಲು ನ್ಯಾಯಾಲಯಗಳು ಬಾಧ್ಯವಲ್ಲ ಮತ್ತು ಅವು ಸ್ವತಂತ್ರವಾಗಿ ರೂಢಿಗಳನ್ನು ಅಥವಾ ಆಚರಣೆಗಳನ್ನು ಅಥವಾ ಕ್ಷೇತ್ರೀಯ ಅಧಿನಿಯಮಗಳನ್ನು ಅನ್ವಯಗೊಳಿಸಬಹುದು.

ಸಿ) ಶರಿಯತ್ ಅಧಿನಿಯಮ ೧೯೩೭ ಇದು ಕೇಂದ್ರೀಯ ಸಂಸತ್ತಿನಿಂದ ಅಧಿನಿಯಮಿತಗೊಳಿಸಲ್ಪಡುವುದರಿಂದ ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಈ ಸಂಸತ್ತು ಕಾನೂನುಗಳನ್ನು ಮಾಡುವಂತಿರಲಿಲ್ಲ. ಕೃಷಕ ಭೂಮಿಗಳು, ಧರ್ಮದಾಯಗಳು ಮತ್ತು ಧರ್ಮದಾಯ ಸಂಸ್ಥೆಗಳು ಇವು ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳಾಗಿದ್ದುದರಿಂದ ಇವನ್ನು ಈ ಅಧಿನಿಯಮದ ಕ. ೨ ರಿಂದ ವ್ಯಕ್ತವಾಗಿ ಹೊರತುಪಡಿಸಲಾಗಿತ್ತು. ಇದರ ಪರಿಣಾಮವಾಗಿ ಈ ವಿಷಯಗಳ ಬಗ್ಗೆ ನ್ಯಾಯಾಲಯಗಳು ಮುಸ್ಲಿಂ ಕಾನೂನನ್ನು ಅನ್ವಯಗೊಳಿಸುವಂತಿಲ್ಲ. ಆದರೆ ಈ ವಿಷಯಗಳ ಮೇಲೆ ರಾಜ್ಯ ಸಂಸತ್ತು ಕಾನೂನುಗಳನ್ನು ಅಧಿನಿಯಮಿತಗೊಳಿಸಲು ಸಕ್ಷಮವಾಗಿವೆ. ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಕೃಷಕ ಭೂಮಿಯ ಉತ್ತರಾಧಿಕಾರವು ಕ್ಷೇತ್ರೀಯ ಗೇಣಿದಾರಿಕೆ ಕಾನೂನುಗಳಿಂದ ನಿಯಮಿತಗೊಳಿಸಲಾಗುತ್ತದೆ, ಮತ್ತು ಅವುಗಳಿಗೆ ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸಲಾಗುವುದಿಲ್ಲ. ಆದರೆ ಆಂಧ್ರ ಪ್ರದೇಶ ಮತ್ತು ತಮಿಳು ರಾಜ್ಯಗಳಲ್ಲಿ ಕೃಷಕ ಭೂಮಿ, ಧರ್ಮದಾಯ ಸಂಸ್ಥೆಗಳು ಇತ್ಯಾದಿ ಈ ವಿಷಯಗಳ ಬಗ್ಗೆ ಮುಸಲ್ಮಾನರು

ಮುಸ್ಲಿಮ್ ಮತೀಯ ಕಾನೂನಿನಿಂದ ಶಾಸಿತರಾಗುವರು. ಇದಕ್ಕೆ ಕಾರಣವೇನೆಂದರೆ ಈ ರಾಜ್ಯಗಳಲ್ಲಿ ಶರಿಯತ್ ಅಧಿನಿಯಮದ ಕ. ೨ಕ್ಕೆ ಒಂದು ತಿದ್ದುಪಡಿಮಾಡಲಾಗಿದೆ.

ಡಿ) ಶರಿಯತ್ ಅಧಿನಿಯಮವು ಕೆಲವು ಮುಸ್ಲಿಮ್ ಕಾನೂನಿನ ಅಧಿನಿಯಮಗಳ ಕೆಲವು ಉಪಬಂಧಗಳನ್ನು ಶರಿಯತ್ ಅಧಿನಿಯಮದ ಕ. ೬ ನಿರಸಿತಗೊಳಿಸಿದೆ. ಉದಾಹರಣೆಗಾಗಿ, ಮುಂಬಾಯಿ ನೋಂದಣಿಗೆ ಅಧಿನಿಯಮ ೧೮೨೭ (Bombay Registration Act 1827), ಇದರ ಕ. ೨೬, ಮದ್ರಾಸ್ ದಿವಾನೀ ಅಧಿನಿಯಮ, ೧೮೭೩ (Madras Civil Courts Act 1873) ಇದರ ಕ. ೧೬ ಅವಧ್ ಕಾನೂನು ಅಧಿನಿಯಮ, ೧೮೭೬ (Oudh law Act, 1876) ಇದರ ಕ. ೩ ಪಂಜಾಬ್ ಕಾನೂನುಗಳ ಅಧಿನಿಯಮ, ೧೮೭೨ (Punjab Law's Act, 1872) ಇದರ ಕ. ೫ ಮತ್ತು ಕೇಂದ್ರೀಯ ರಾಜ್ಯಗಳ ಅಧಿನಿಯಮ ೧೮೭೫ (Central Provinces Law's Act, 1875) ಇವು ನಿರಸಿತಗೊಳಿಸಲಾಗಿವೆ ಮತ್ತು ಇವು ಈಗ ಜಾರಿಯಲ್ಲಿಲ್ಲ. ಆ ಉಪಬಂಧಗಳ ನಿರಸನದ ಸಂಬಂಧದಲ್ಲಿ ಈ ಕೆಳಗಿನ ಎರಡು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳುವ ಅವಶ್ಯಕತೆಯಿದೆ.

1) ಶರಿಯತ್ ಅಧಿನಿಯಮದ ಕ. ೬ ರಿಂದ ಮೇಲೆ ಹೇಳಲಾದ ಇಡೀ ಅಧಿನಿಯಮಗಳು ನಿರಸಿತಗೊಳಿಸಲ್ಪಟ್ಟಿಲ್ಲ. ಆದುದರಿಂದ ಆ ನಿರಸಿತ ಕಲಮುಗಳ ಹೊರತಾಗಿ ಆ ಅಧಿನಿಯಮಗಳ ಇತರ ಉಪಬಂಧಗಳು ಇನ್ನೂ ಜಾರಿಮಾಡುವಂತಹವುಗಳಾಗಿವೆ.

2) ಇಲ್ಲಿ ನಿರಸಿತಗೊಳಿಸಲ್ಪಟ್ಟಿರುವ ಉಪಬಂಧಗಳು ಯಾವವೆಂದರೆ ರೂಢಿ ಮತ್ತು ಆಚರಣೆಗಳನ್ನು ಮುಸಲ್ಮಾನರಿಗೆ ಅನ್ವಯಗೊಳಿಸಲು ನ್ಯಾಯಾಲಯಗಳಿಗೆ ಪ್ರಾಧಿಕಾರ ಕೊಡಲ್ಪಟ್ಟಿರುವ ಉಪಬಂಧಗಳಾಗಿವೆ. ಆದುದರಿಂದ ಈಗ ಮುಸ್ಲಿಮ್ ಮತೀಯ ಕಾನೂನುಗಳಿಗೆ ವಿರುದ್ಧವಾಗಿರುವ ಎಲ್ಲಾ ರೂಢಿ ಮತ್ತು ಆಚರಣೆಗಳು ರದ್ದುಗೊಳಿಸಲಾಗಿವೆ. ಶರಿಯತ್ ಅಧಿನಿಯಮದಲ್ಲಿ ಬರುವ ವಿಷಯಗಳ ಸಂಬಂಧದಲ್ಲಿ ಅವುಗಳನ್ನು ಅನ್ವಯಗೊಳಿಸುವಂತಿಲ್ಲ.

ಕಚ್ಚಿ ಮೆಮನ್ನರು ಮತ್ತು ಮಾಪ್ಳಾ ಮುಸಲ್ಮಾನರು
(The Catchi Memons and Mapilla Muslims)

ಕಚ್ಚಿ ಮೆಮನ್ನರು ಮತ್ತು ಮಾಪ್ಳರು ಮತಾಂತರಗೊಂಡಿರುವ ಮುಸಲ್ಮಾನರಾಗಿರುವರು. ಹಿಂದೆ ಉತ್ತರಾಧಿಕಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅವರು ತಮ್ಮದೇ ಆಗಿರುವ ರೂಢಿಗತ ಕಾನೂನಿನಿಂದ ಶಾಸಿತರಾಗಿದ್ದರು ಮತ್ತು ಈ ರೂಢಿಗತ ಕಾನೂನುಗಳು ಮುಸ್ಲಿಮ್ ಮತೀಯ ಕಾನೂನಿಗೆ ವಿರುದ್ಧವಾಗಿದ್ದವು. ಇದಕ್ಕಾಗಿ ವಿಶೇಷ ಅಧಿನಿಯಮಗಳಲ್ಲಿ ಉಪಬಂಧ ಮಾಡಲಾಗಿತ್ತು, ಆದರೆ

ಕಚ್ಚಿ ಮೆಮನ್ನರ ಅಧಿನಿಯಮ ೧೯೩೮ (Catchi Memons Act, 1938) ಇದ್ದು ಈಗ ಜಾರಿಯಲ್ಲಿದೆ. ಇದರಲ್ಲಿ ಉಪಬಂಧಿಸಲಾದ ಪ್ರಕಾರ ಉತ್ತರಾಧಿಕಾರ ಮತ್ತು ವಾರಸಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ಇವರು ಮುಸ್ಲಿಮ್ ಮತೀಯ ಕಾನೂನಿನಿಂದ ಶಾಸಿತರಾಗುವರಲ್ಲದೆ ಇವರ ರೂಢಿಗತ ಕಾನೂನಿನಿಂದಲ್ಲ. ಇದೇ ರೀತಿಯಲ್ಲಿ ಮಾಪ್ಪಿಳರೂ ಸಹ ತಮ್ಮದೇ ಆಗಿರುವ ರೂಢಿಗತ ಕಾನೂನಿನಿಂದ ಮರಣಶಾಸನವಿರುವ ಮತ್ತು ಮರಣಶಾಸನವಿಲ್ಲದ ಉತ್ತರದಾನದ ಸಂಬಂಧದಲ್ಲಿ ಶಾಸಿತರಾಗುತ್ತಿದ್ದರು. ಆದರೆ ಮಾಪ್ಪಿಳ ಉತ್ತರಾಧಿಕಾರ ಅಧಿನಿಯಮ ೧೯೧೮ Mapilla Succession Act, 1918) ಮತ್ತು ಮಾಪ್ಪಿಳ ಮರಣಶಾಸನಗಳ ಅಧಿನಿಯಮ ೧೯೨೮ (Mapilla wills Act, 1928) ಇವುಗಳಲ್ಲಿ ಉಪಬಂಧಿಸಲಾದ ಪ್ರಕಾರ ಈಗ ವಾರಸು ಮತ್ತು ಮರಣ ಶಾಸನಗಳ ಸಂಬಂಧದಲ್ಲಿ ಅವರಿಗೆ ಮುಸ್ಲಿಮ್ ಕಾನೂನು ಅನ್ವಯವಾಗುತ್ತದೆ. ಇತರ ಮುಸಲ್ಮಾನರಿಗೂ, ಮಾಪ್ಪಿಳರಿಗೂ ಇರುವ ಒಂದು ವ್ಯತ್ಯಾಸವೆಂದರೆ ಮರಣ ಶಾಸನದ ಮತ್ತು ಉತ್ತರ ದಾನಗಳ ಸಂಬಂಧದಲ್ಲಿ ಇತರ ಮುಸಲ್ಮಾನರು ತಾವು ಮುಸ್ಲಿಮ್ ಕಾನೂನಿನಿಂದ ಶಾಸಿತರಾಗಬಯಸುವೆವೆಂಬುದಾಗಿ ಘೋಷಣೆ ಮಾಡಬೇಕಾಗುತ್ತದೆ. ಆದರೆ ಮಾಪ್ಪಿಳರು ಈ ಘೋಷಣೆ ಮಾಡುವ ಅವಶ್ಯಕತೆಯಿಲ್ಲ. ಈ ವಿಷಯಗಳ ಬಗ್ಗೆ ಅವರು ಮುಸ್ಲಿಮ್ ಕಾನೂನಿನ ಅನ್ವಯಕ್ಕೆ ಕಡ್ಡಾಯವಾಗಿ ಬಾಧ್ಯರಾಗಿರುವರು. ಆದರೆ ಅವಿಭಕ್ತ ಕುಟುಂಬದ ಸ್ವತ್ತಿನ (Tarvad and Tavazhi) ಉತ್ತರಾಧಿಕಾರದ ಸಂಬಂಧದಲ್ಲಿ ಮಾಪ್ಪಿಳ ಮುಸಲ್ಮಾನರಿಗೆ ರೂಢಿಗತ ಕಾನೂನು ಅನ್ವಯಗೊಳಿಸಲಾಗುತ್ತದೆ. ಮತ್ತು ಈಗಲೂ ಅವರ ಅನ್ವಯ ಮುಂದುವರಿಯುತ್ತದೆ; ಇದು ಈ ಸಮಾಜಕ್ಕೆ ಮಾಡಲಾಗಿರುವ ವಿಶೇಷ ಅಧಿನಿಯಮಗಳಿಂದಾಗಲಿ ಅಥವಾ ಶರಿಯತ್ ಅಧಿನಿಯಮಗಳಿಂದಾಗಲಿ ರದ್ದುಗೊಳಿಸಲಾಗಿಲ್ಲ.

ನೀತಿ ಸಮ್ಮತತೆಯ ಆಧಾರದ ಮೇಲೆ ಮುಸ್ಲಿಮ್ ಕಾನೂನಿನ ಅನ್ವಯ
(Application of Muslim Law on the ground of equity)

ಯಾವುದಾದರೊಂದು ವಿಷಯದ ಬಗ್ಗೆ ಯಾವತ್ತೂ ಅಧಿನಿಯಮಿತ ಕಾನೂನು ಇಲ್ಲದಾಗ ನ್ಯಾಯಾಲಯಗಳು ನೀತಿ ಸಮ್ಮತತೆ, ನ್ಯಾಯ ಮತ್ತು ಸದ್ಭಾವದ ಸಿದ್ಧಾಂತಗಳನ್ನು ಅನ್ವಯಗೊಳಿಸುತ್ತವೆ. ಆದ್ದರಿಂದ ಮುಸ್ಲಿಮ್ ಕಾನೂನುಗಳನ್ನು ಅನ್ವಯಗೊಳಿಸಲು ನ್ಯಾಯಾಲಯಗಳಿಗೆ ಎಲ್ಲ ಶಾಸನಬದ್ಧ ಪ್ರಾಧಿಕಾರವಿಲ್ಲವೊ ಅಲ್ಲಿ ನೀತಿ ಸಮ್ಮತತೆ ಮತ್ತು ನ್ಯಾಯದ ಹೆಸರಿನಲ್ಲಿ ನ್ಯಾಯಾಲಯಗಳು ಮುಸ್ಲಿಮ್ ಕಾನೂನನ್ನು ಅನ್ವಯಗೊಳಿಸುತ್ತವೆ. ಉದಾಹರಣೆಗಾಗಿ ಮುಸ್ಲಿಮ್ ಕಾನೂನಿಗೆ ಸಂಬಂಧಪಟ್ಟ ಯಾವತ್ತೂ ಅಧಿನಿಯಮದಲ್ಲಿ ಪೂರ್ವಕ್ರಯಾಧಿಕಾರದ ಬಗ್ಗೆ ಏನನ್ನೂ ಹೇಳಲಾಗಿಲ್ಲ ಮತ್ತು ಇವನ್ನು ಜಾರಿಗೊಳಿಸಲು ನ್ಯಾಯಾಲಯಗಳು ಶಾಸನಬದ್ಧವಾಗಿ ಬಾಧ್ಯವಲ್ಲ. ಆದರೆ ಭಾರತದ ನ್ಯಾಯಾಲಯಗಳು ನೀತಿ ಸಮ್ಮತತೆ ಮತ್ತು ನ್ಯಾಯದ ಆಧಾರದ ಮೇಲೆ ಪೂರ್ವಕ್ರಯಾಧಿ

ಕಾರದ ಮುಸ್ಲಿಮ್ ಕಾನೂನನ್ನು ಅನ್ವಯುಗೊಳಿಸುತ್ತವೆ. ಇದೇ ರೀತಿಯಲ್ಲಿ ಶರಿಯತ್ ಅಧಿನಿಯಮದ ಕ. ೨ ರಲ್ಲಿ ಕೃಷಕ ಭೂಮಿಯು ಸೇರಿಸಲ್ಪಟ್ಟಿಲ್ಲ. ಆದುದರಿಂದ ಕೃಷಕ ಭೂಮಿಗೆ ಸಂಬಂಧಪಟ್ಟ ವಿಷಯದ ಮೇಲೆ ಮುಸ್ಲಿಮ್ ಕಾನೂನನ್ನು ಅನ್ವಯುಗೊಳಿಸುವ ಸಂಬಂಧದಲ್ಲಿ ಯಾವತ್ತೂ ಕ್ಷೇತ್ರೀಯ ಕಾನೂನು ಇಲ್ಲದಾಗ ನ್ಯಾಯಾಲಯಗಳು ನೀತಿ ಸಮ್ಮತತೆ, ನ್ಯಾಯ ಮತ್ತು ಸದ್ಭಾವದ ಸಿದ್ಧಾಂತದ ಮೇಲೆ ಮುಸ್ಲಿಮ್ ಕಾನೂನನ್ನು ಅನ್ವಯುಗೊಳಿಸಬಹುದು.

ಮುಸಲ್ಮಾನರಿಗೆ ಮುಸ್ಲಿಮ್ ಕಾನೂನಿನ ಅನ್ವಯವಾಗದಿರುವ ಸಂದರ್ಭಗಳು
(Muslim Law not applied to Muslims)

ಮುಸ್ಲಿಮ್ ಕಾನೂನಿನ ಅನ್ವಯದ ಬಗ್ಗೆ ಸಾಮಾನ್ಯ ನಿಯಮವು ಹೇಗಿದೆಯೆಂದರೆ ಇಬ್ಬರು ಪಕ್ಷಗಾರರು ಮುಸಲ್ಮಾನರಾಗಿದ್ದು ಮತ್ತು ಶರಿಯತ್ ಅಧಿನಿಯಮದ ಕ. ೨ ರಲ್ಲಿ ಹೇಳಲಾದ ವಿಷಯಗಳನ್ನು ನಿರ್ಣಯಿಸುವದಿದ್ದರೆ ಅಲ್ಲಿ ಮುಸ್ಲಿಮ್ ಮತೀಯ ಕಾನೂನನು ಅನ್ವಯುಗೊಳಿಸಬೇಕಾಗುತ್ತದೆ. ಆದರೆ ಅಲ್ಲಿ ಕೆಲವು ಪ್ರಕರಣಗಳಲ್ಲಿ ಒಂದೊಮ್ಮೆ ಇಬ್ಬರೂ ಪಕ್ಷಗಾರರು ಮುಸಲ್ಮಾನರಾಗಿದ್ದು ಮತ್ತು ವಿವಾದದ ವಿಷಯವು ಶರಿಯತ್ ಅಧಿನಿಯಮದಲ್ಲಿ ನಿರ್ದಿಷ್ಟಗೊಳಿಸಲಾದರೂ ಸಹ ಕೆಲವೊಮ್ಮೆ ಮುಸ್ಲಿಮ್ ಕಾನೂನು ಅನ್ವಯುಗೊಳಿಸಲಾಗುವುದಿಲ್ಲ. ಉದಾಹರಣೆಗಾಗಿ, ಒಂದೊಮ್ಮೆ ಮುಸ್ಲಿಮ್ ಪತಿ ಮತ್ತು ಪತ್ನಿ ತಮ್ಮ ವಿವಾಹದ ಕರಾರನ್ನು ವಿಶೇಷ ವಿವಾಹ ಅಧಿನಿಯಮ, ೧೯೫೪ (Special Marriage Act, 1954) ಇದರ ಮೇರೆಗೆ ಮಾಡಿರುವದಾದರೆ ಅಲ್ಲಿ ವಿವಾಹಕ್ಕೆ ಸಂಬಂಧಪಟ್ಟ ಮುಸ್ಲಿಮ್ ಕಾನೂನು ಅನ್ವಯವಾಗುವದಿಲ್ಲ. ಇದೇ ರೀತಿಯಲ್ಲಿ ವಿಶೇಷ ವಿವಾಹ ಅಧಿನಿಯಮ, ೧೯೫೪ ಇದರ ಮೇರೆಗೆ ಕರಾರು ಮಾಡಿಕೊಳ್ಳಲ್ಪಟ್ಟ ವಿವಾಹದಲ್ಲಿ ವಾರಸಿನ ಬಗ್ಗೆ ಪತಿ ಪತ್ನಿಯರ ಪಾರಸ್ಪರಿಕ ಹಕ್ಕು ಭಾರತೀಯ ಉತ್ತರಾಧಿಕಾರ ಅಧಿನಿಯಮ ೧೯೨೫ (Indian Succession Act 1925) ಇದರಿಂದ ಶಾಸಿತವಾಗುತ್ತದೆ ಮತ್ತು ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿನ ಮೇರೆಗೆ ಶಾಸಿತವಾಗುವುದಿಲ್ಲ. ಅದಲ್ಲದೆ ಜೀವನಾಂಶಕ್ಕೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿನ ಮೇರೆಗೆ ಒಬ್ಬ ವಿಚ್ಛೇದಿತ ಪತ್ನಿಯು ಪುನರ್ವಿವಾಹಿತಳಾಗುವ ತನಕ ವಿಚ್ಛೇದಿತ ಗಂಡನಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು. ಈ ರೀತಿಯಾಗಿ ಕೆಲವು ಪ್ರಕರಣಗಳಲ್ಲಿ ಪಕ್ಷಗಾರರಿಬ್ಬರೂ ಮುಸಲ್ಮಾನರಾಗಿದ್ದರೂ ಸಹ ಮತ್ತು ವಿವಾದದ ವಿಷಯ ವಸ್ತುವು ಶರಿಯತ್ ಅಧಿನಿಯಮದಲ್ಲಿ ಹೇಳಲ್ಪಟ್ಟುದಾದರೂ ಸಹ ಅವರಿಗೆ ಮುಸ್ಲಿಮ್ ಕಾನೂನಿನ ಉಪಬಂಧಗಳು ಅನ್ವಯವಾಗುವುದಿಲ್ಲ.

ಮುಸಲ್ಮಾನೇತರರಿಗೆ ಮುಸ್ಲಿಮ್ ಕಾನೂನಿನ ಅನ್ವಯ
(Mnslim Law applied to Non-Muslims)

ಒಂದೊಮ್ಮೆ ಒಂದು ದಾವೆಯಲ್ಲಿ ಪಕ್ಷಗಾರರ ಧರ್ಮವು ಬೇರೆ ಬೇರೆಯಾಗಿದ್ದರೆ ಅಥವಾ ಮುಸ್ಲಿಮ್ ಕಾನೂನಿನ ಒಂದೇ ಪರಂಪರೆಯವರಾಗಿದ್ದರೆ ಅಲ್ಲಿ ಪ್ರತಿ

ವಾದಿಯ ಕಾನೂನು ಅನ್ವಯಗೊಳಿಸಲಾಗುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಒಂದು ದಾವೆಯಲ್ಲಿ ಒಬ್ಬ ಪಕ್ಷಗಾರನು ಒಬ್ಬ ಮುಸಲ್ಮಾನನಾಗಿದ್ದು ಮತ್ತು ಇನ್ನೊಬ್ಬನು ಮುಸಲ್ಮಾನನಾಗಿರದಿದ್ದರೆ ಅಲ್ಲಿ ಒಂದೊಮ್ಮೆ ಪ್ರತಿವಾದಿಯು ಮುಸ್ಲಿಮನಾಗಿದ್ದರೆ ಅಲ್ಲಿ ಮುಸ್ಲಿಮ್ ಕಾನೂನು ಅನ್ವಯಗೊಳಿಸಲಾಗುತ್ತದೆ. ಇದರಿಂದಾಗಿ ಒಬ್ಬ ಮುಸಲ್ಮಾನೇತರನನ್ನು ಮುಸ್ಲಿಮ್ ಕಾನೂನಿನ ನಿಯಮಗಳಿಗೆ ಬಾಧ್ಯಗೊಳಿಸಲಾಗುತ್ತದೆ. ಒಬ್ಬ ವಿವಾಹಿತ ನಾರಿಯು ಇಸ್ಲಾಮ್ ಧರ್ಮವನ್ನು ಪರಿತ್ಯಜಿಸಿ ಇತರ ಯಾವುದಾದರೊಂದು ಧರ್ಮಕ್ಕೆ ಮತಾಂತರಗೊಂಡಾಗ ಆಕೆಯು ಮುಸಲ್ಮಾನಳಾಗಿರುವುದು ನಿಂತು ಬಿಡುತ್ತದೆ. ಆದರೆ ಮುಸ್ಲಿಮ್ ವಿವಾಹ ವಿಘಟನೆಯ ಅಧಿನಿಯಮ, ೧೯೩೯ (Dissolution of Muslim Marriage Act, 1939) ಇದರ ಕ. ೪ರಲ್ಲಿ ಉಪಬಂಧಿಸಲಾದ ಪ್ರಕಾರ ಅಂತಹ ಒಬ್ಬ ನಾರಿಯು ಈ ಅಧಿನಿಯಮದ ಕ. ೨ರಲ್ಲಿ ಹೇಳಲಾದ ಯಾವುದಾದರೊಂದು ಕಾರಣಕ್ಕಾಗಿ ಒಂದು ವಿವಾಹ ವಿಚ್ಛೇದನದ ಡಿಕ್ರಿಯನ್ನು ಪಡೆಯಬಹುದು. ಇಂತಹ ಒಂದು ಪ್ರಕರಣದಲ್ಲಿ ಒಬ್ಬ ಮುಸಲ್ಮಾನೇತರ ಪತ್ನಿಯು ಮುಸ್ಲಿಮ್ ಕಾನೂನನ್ನು ಅವಲಂಬಿಸಬಹುದು. ಮುಸ್ಲಿಮ್ ಕಾನೂನನ್ನು ಮುಸಲ್ಮಾನೇತರರಿಗೆ ಅನ್ವಯ ಮಾಡುವ ಬಗ್ಗೆ ನಾವು ಕಾಣಬಹುದಾದ ಇನ್ನೊಂದು ನಿದರ್ಶನವು ಯಾವುದೆಂದರೆ ಒಬ್ಬ ಮುಸಲ್ಮಾನೇತರನಿಗೆ ಪೂರ್ವ ಕ್ರಯಾಧಿಕಾರದ ಹಕ್ಕಿನ ಸಿಗುವಿಕೆ.

ಇಸ್ಲಾಮಿನಲ್ಲಿ ಕಾನೂನಿನ ಭಾವಸ್ವರೂಪ
(Concept of Law in Islam)

ಶರಿಯತ್ (Shariat) : ಇಸ್ಲಾಮಿನ ಪ್ರಕಾರ ಕಾನೂನಿನ ಮೂಲವು ದೈವಿಕವಾಗಿದೆ. ಪರಮಾತ್ಮನು ಸರ್ವೋಚ್ಚ ಕಾನೂನು ನಿರ್ಮಾಪಕನಾಗಿರುವನು. ಮತ್ತು ಎಲ್ಲ ಮಾನವ ಕೃತ್ಯಗಳ ನಿಯಂತ್ರಣಕ್ಕಾಗಿ ಅವನು ಕಾನೂನನ್ನು ಮಾಡಬಹುದು. ಆದುದರಿಂದ ಇಸ್ಲಾಮಿನಲ್ಲಿ ಕಾನೂನು ಎಂದರೆ ಪರಮಾತ್ಮನ ನಿರ್ದೇಶ. ಆ ನಿರ್ದೇಶವು ಮನುಷ್ಯರ ಆಧ್ಯಾತ್ಮಿಕ, ನೈತಿಕ ಅಥವಾ ಧರ್ಮಾತೀತ ನಡತೆಗಳನ್ನು ನಿಯಂತ್ರಿಸುತ್ತದೆ. ಅವನ ಈ ನಿರ್ದೇಶಗಳಲ್ಲಿ ಕೆಲವು ಐಚ್ಛಿಕವಾಗಿವೆ, ಮತ್ತು ಇನ್ನು ಕೆಲವು ಕಡ್ಡಾಯವಾಗಿವೆ. ಮನುಷ್ಯರು ಯಾವ ಮಾರ್ಗವನ್ನು ಅನುಸರಿಸಬೇಕೆಂಬ ಬಗ್ಗೆ ಪರಮಾತ್ಮನು ನಿಯಮಗಳನ್ನು ಹಾಕಿಕೊಟ್ಟಿರುವನು. ಮನುಷ್ಯರಿಗೆ ಪರಮಾತ್ಮನು ಹಾಕಿಕೊಟ್ಟಿರುವ ಈ ಮಾರ್ಗದರ್ಶನವೇ ಶರಿಯತ್ ಆಗಿರುತ್ತದೆ. ಶರಿಯತ್ ಇದರ ಶಬ್ದಶಃ ಅರ್ಥವೇನೆಂದರೆ ಅನುಸರಿಸಬೇಕಾಗಿರುವ ಮಾರ್ಗ. ಇಸ್ಲಾಮಿನ ಪ್ರಕಾರ ಒಂದು ವಸ್ತು ಅಥವಾ ಒಂದು ಕೃತ್ಯವು ಒಂದೇ ನೈತಿಕವಾಗಿ ಸುಂದರವಾಗಿರುತ್ತದೆ ಅಥವಾ ಅನೈತಿಕವಾಗಿ ಕುರೂಪಿಯಾಗಿರುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬುದನ್ನು ತಿಳಿದುಕೊಳ್ಳುವುದಾದರೂ ಹೇಗೆ ? ಇದಕ್ಕೆ ಉತ್ತರವಿದೆ. ಇದನ್ನು ಪರಮಾತ್ಮನ ಶಬ್ದಗಳ ಸಹಾಯದಿಂದ ಖಾತರಿಪಡಿಸಿಕೊಳ್ಳಬಹುದು ಮತ್ತು ಪರಮಾತ್ಮನ ಸಂದೇಶಗಾರನಾಗಿರುವ ಮಹಮದ ಪೈಗಂಬರನ

ಪರಂಪರೆಗಳಿಂದ ಖಾತರಿಪಡಿಸಿಕೊಳ್ಳಬಹುದು. ಆದುದರಿಂದ ದೈವಿಕ ಮೂಲದ್ದಾಗಿರುವ ಶರಿಯತ್ ಇದು ಮಾನವ ಜೀವನದ ಎಲ್ಲಾ ಕ್ಷೇತ್ರಗಳಿಗೆ ಇಸ್ಲಾಮಿನ ಆಚಾರ ಸಂಹಿತೆಯಾಗಿರುತ್ತದೆ.

ಫಿಕ್ (Fiqh) : ಫಿಕ್ ಎಂದರೆ ಆಧುನಿಕ ಅರ್ಥದಲ್ಲಿ ಉಪಯೋಗಿಸಲ್ಪಡುತ್ತಿರುವ ಕಾನೂನು. ಮುಸ್ಲಿಮ್ ನ್ಯಾಯದರ್ಶಿಗಳ ಪ್ರಕಾರ ಮಾನವ ಕೃತ್ಯಗಳಿಗೆ ನಿರ್ದೇಶನ ನೀಡಲು ಪರಮಾತ್ಮನ ಶಬ್ದಗಳಿಲ್ಲದಾಗ ಅಥವಾ ಪೈಗಂಬರನ ಪರಂಪರೆಯಿಲ್ಲದಾಗ ಕಾನೂನಿನ ಸಂಗತಿಯನ್ನು ನಿರ್ಣಯಿಸಲು ಮಾನವೀಯ ವಿಚಾರ ಮತ್ತು ತಿಳುವಳಿಕೆಯನ್ನು ಉಪಯೋಗಿಸಬೇಕಾಗುತ್ತದೆ. ಮಾನವ ಬುದ್ಧಿ ಮತ್ತೆ ಅಥವಾ ಕಾನೂನಿನ ಜ್ಞಾನವನ್ನು ತಾಂತ್ರಿಕವಾಗಿ ಫಿಕ್ ಎಂದು ಕರೆಯಲಾಗುತ್ತದೆ. ಫಿಕ್ ಎಂದರೆ ಪರಮಾತ್ಮ ಮತ್ತು ಅವನ ಸಂದೇಶಗಾರ ಇವರ ಶಬ್ದಗಳಿಂದ ಅನುಮಾನಿಸಲಾದ ಒಬ್ಬನ ಹಕ್ಕು ಬಾಧ್ಯತೆಗಳ ತಿಳುವಳಿಕೆಯಾಗಿರುತ್ತದೆ. ಆದುದರಿಂದ ಫಿಕ್ ಇದು ಧರ್ಮಾತೀತ ಕಾನೂನಿನ ಒಂದು ಭಾಗವಾಗಿರುತ್ತದೆ, ಅಥವಾ ಪ್ರಾಧಿಕಾರಗಳು ಮಾನವ ನಡತೆಯನ್ನು ನಿಯಂತ್ರಿಸಲು ಜಾರಿಗೊಳಿಸುವ ಕಾನೂನಾಗಿರುತ್ತದೆ. ಆದರೆ ಶರಿಯತ್ ಇದು ಆಧ್ಯಾತ್ಮಿಕ ಅಥವಾ ನೈತಿಕ ಆಚಾರ ಸಂಹಿತೆಯಾಗಿದೆ. ಪರಮಾತ್ಮನು ಯಾವುದನ್ನು ಆಚಾರ ಸಂಹಿತೆಯೆಂದು ಹೇಳಿರುವನೋ ಆದು ಶರಿಯತ್ ಆಗಿರುತ್ತದೆ. ಮಾನವ ಬುದ್ಧಿಶಕ್ತಿಯಿಂದ ನಿರ್ಮಿಸಲ್ಪಟ್ಟಿರುವ ಆಚಾರ ಸಂಹಿತೆಯು ಫಿಕ್ ಅಥವಾ ರಾಜನಿರ್ಮಿತ ಕಾನೂನಾಗಿರುತ್ತದೆ. ಶರಿಯತ್ ಇದರ ಪರಿಧಿಯು ವಿಶಾಲವಾಗಿದೆ. ಏಕೆಂದರೆ ಇದು ಮಾನವತೆಯ ಆಧ್ಯಾತ್ಮಿಕ, ನೈತಿಕ ಮತ್ತು ಧರ್ಮಾತೀತ ಕಾರ್ಯಕಲಾಪಗಳನ್ನು ಒಳಗೊಂಡಿರುತ್ತದೆ. ಆದರೆ ರಾಜನಿರ್ಮಿತ ಕಾನೂನಾಗಿರುವ ಫಿಕ್ ಇದರ ಪರಿಧಿಯು ತುಂಬಾ ಸಂಕುಚಿತವಾಗಿದೆ. ಇದು ಕೇವಲ ಧರ್ಮಾತೀತ ಹಕ್ಕು ಬಾಧ್ಯತೆಗಳನ್ನು ಒಳಗೊಂಡಿದೆ. ಫಿಕ್ ಇದರ ದೃಷ್ಟಿಯಲ್ಲಿ ಒಂದು ಮಾನವ ಕೃತ್ಯವು ಒಂದೇ ಕಾನೂನುಬದ್ಧವಾಗಿರುತ್ತದೆ ಅಥವಾ ಕಾನೂನು ಬಾಹಿರ. ಒಂದೊಮ್ಮೆ ಆ ಕೃತ್ಯವು ಕಾನೂನುಬಾಹಿರವಾಗಿದ್ದರೆ ಅಲ್ಲಿ ರಾಜ್ಯದ ಯುಕ್ತ ಪ್ರಾಧಿಕಾರದಿಂದ ದಂಡನೆಯು ವಿಧಿಸಲಾಗುತ್ತದೆ. ಆದರೆ ಶರಿಯತ್‌ನ ಪ್ರಕಾರ ಒಂದು ಕೃತ್ಯವು ಕಾನೂನುಬದ್ಧವಾಗಿರದ ಹೊರತು ಅಥವಾ ಕಾನೂನುಬಾಹಿರವಾಗಿರುವ ಹೊರತು ಅದು ಮಾಡಬಾರದಂತಹ ಕೃತ್ಯವೂ ಆಗಿರಬಹುದು. ಉದಾಹರಣೆಗಾಗಿ, ಒಬ್ಬ ಮುಸಲ್ಮಾನನು ಕೆಲವು ರೀತಿಯ ಮೀನುಗಳನ್ನು ತಿನ್ನಬಾರದೆಂಬ ಶರಿಯತ್‌ನಲ್ಲಿ ಹೇಳಲಾಗಿದೆ. ಒಬ್ಬ ಮುಸಲ್ಮಾನನು ಒಂದೊಮ್ಮೆ ಈ ನಿಯಮವನ್ನು ಉಲ್ಲಂಘಿಸಿದರೆ ಅವನನ್ನು ಪ್ರಾಧಿಕಾರಗಳು ದಂಡಿಸುವಂತಿಲ್ಲ. ಆದರೆ ಒಂದೊಮ್ಮೆ ಒಬ್ಬ ವ್ಯಕ್ತಿಯು ಆ ಮೀನನ್ನು ತಿನ್ನುವುದರಿಂದ ವಿಮುಖನಾಗಿದ್ದರೆ ಅವನು ಆಧ್ಯಾತ್ಮಿಕವಾಗಿ ಪ್ರಯೋಜನ ಪಡೆಯುವನು. ಆದುದರಿಂದ ಫಿಕ್ ಇದು ಕೇವಲ ಕಾನೂನೀ ಕೃತ್ಯಗಳೊಂದಿಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ ಶರಿಯತ್ ಇದು ನೈತಿಕ ಮತ್ತು ಧಾರ್ಮಿಕ ಕೃತ್ಯಗಳನ್ನೂ ಒಳಗೊಂಡಿರು

ತ್ತದೆ. ಫಿಕ್ ಇದು ಶರಿಯತ್‌ನಿಂದಲೇ ವಿಕಸಿತವಾಗಿದೆಯಾದರೂ ಸಹ ಅದನ್ನು ರಾಜ್ಯದ ಪ್ರಾಧಿಕಾರಗಳು ನಿರ್ವಚನ ಮತ್ತು ಮಾರ್ಪಾಡುಗೊಳಿಸಿ ಅಂಗೀಕರಿಸಿವೆ. ಮುಸ್ಲಿಮ್ ನ್ಯಾಯದರ್ಶಗಳಲ್ಲಿ ಫಿಕ್ ಇದರ ಒಂದು ವೈಶಿಷ್ಟ್ಯವೇನೆಂದರೆ ಇದು ರಾಜ್ಯ ನಿರ್ಮಿತ ಎಲ್ಲಾ ಭಾಗಗಳನ್ನು ಒಳಗೊಂಡಿದೆ.

ಕೆಲವು ಇತಿಮಿತಿಗಳನ್ನು ಬಿಟ್ಟರೆ ಶರಿಯತ್ ಮತ್ತು ಫಿಕ್ ಇವುಗಳೊಳಗೆ 'ಧರ್ಮ' ಮತ್ತು 'ವಿಧಿ' ಇವುಗಳೊಳಗಿರುವಷ್ಟೇ ಭೇದವಿದೆ. ಶರಿಯತ್ ಇದಕ್ಕೆ ಸಮಾನವೆಂದು ಎಣಿಸಲ್ಪಡುವ 'ಧರ್ಮ' ಎಂಬ ಪದವು 'ಧಾರ್ಮಿಕ' ಕರ್ತವ್ಯಗಳನ್ನು ಸೂಚಿಸುತ್ತದೆ. ಆದರೆ 'ಫಿಕ್' ಇದಕ್ಕೆ ಹೋಲಿಸಬಹುದಾದ 'ವಿಧಿ' ಅಥವಾ ವ್ಯವಹಾರ ಇದು ನ್ಯಾಯಿಕ ವ್ಯವಹರಣೆಗೆ ಸಂಬಂಧಪಟ್ಟ ಕಾನೂನಾಗಿದೆ.

— —

ಅಧ್ಯಾಯ ೨

ಮಹಮದೀಯ ಕಾನೂನಿನ ಉಗಮ ಮತ್ತು ಪರಂಪರೆಗಳು
(Origin and Schools of Mahomedan Law)

ಇಸ್ಲಾಮ್‌ಪೂರ್ವ ಅರಬೀ ಸಮಾಜ (Pre-Islamic Arabian Society)

ಮಹಮದೀಯ ಕಾನೂನಿನ ಒಂದು ಸರಿಯಾದ ಅಧ್ಯಯನವಾಗಬೇಕಾದರೆ ಇಸ್ಲಾಮಿನ ಹಿನ್ನೆಲೆಯ ಮಾಹಿತಿ, ಉಗಮ ಮತ್ತು ಐತಿಹಾಸಿಕ ಬೆಳವಣಿಗೆಯ ಬಗ್ಗೆ ಸ್ವಲ್ಪ ತಿಳುವಳಿಕೆಯಿರುವ ಅವಶ್ಯಕತೆಯಿದೆ. ಇಸ್ಲಾಮಿನ ಜನ್ಮಸ್ಥಾನವಾದ ಅರೇಬಿಯಾ ಇದು ಒಂದು ಮರುಭೂಮಿಯಾಗಿದೆ. ಇದು ಬಹುಮಟ್ಟಿಗೆ ಬಂಜರು ಭೂಮಿಯಾಗಿದ್ದು ಎಲ್ಲೆಲ್ಲೂ ಹೊಗೆಯ ರಾಶಿಯೇ ಹೊರತು ಇನ್ನೇನೂ ಕಾಣಿಸು ವುದಿಲ್ಲ. ಹಗಲಲ್ಲಿ ಅತಿಯಾದ ಉಷ್ಣತೆ ಮತ್ತು ರಾತ್ರಿಯಲ್ಲಿ ಚಳಿ ಇರುವ ಪ್ರದೇಶ ಇದು ಆಗಾಗ್ಗೆ ಉಂಟಾಗುವ ಹೊಗೆಯ ಬಿರುಗಾಳಿಯು ಧೂಳಿನ ಮೋಡವನ್ನು ನಿರ್ಮಿಸುತ್ತದೆ. ಈ ಮರುಭೂಮಿಯು ಒಂದು ತುದಿಯಿಂದ ಇನ್ನೊಂದು ತುದಿಯ ತನಕ ನೀರಿನ ಆಶಯವೇ ಕಂಡು ಬರುವುದಿಲ್ಲ. ತಾಳೆ, ಖರ್ಜೂರ ಮತ್ತು ಕೆಲವು ರೀತಿಯ ಪದರುಗಳ ಹೊರತು ಇನ್ನೆಲ್ಲಿಯೂ ಈ ಮರುಭೂಮಿಯ ಮೇಲೆ ನಿಸರ್ಗವು ಕಂಡು ಬರುತ್ತಿರಲಿಲ್ಲ. ಇಲ್ಲಿ ಜನರು ತುಂಬಾ ಕಷ್ಟದಿಂದ ಜೀವಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಅರಬಿ ದೇಶಗಳಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದ್ದರೂ ಸಹ ವಾತಾವರಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಇಸ್ಲಾಮ್ ಧರ್ಮವು ಅಸ್ತಿತ್ವಕ್ಕೆ ಬರುವದಕ್ಕಿಂತ ಮೊದಲು ಅರಬರು ಗುಂಪುಗಳಲ್ಲಿ ವಾಸಿಸುತ್ತಿದ್ದರು. ತಮ್ಮ ಪಶುಗಳಿಗೆ ಹುಲ್ಲುಗಾವಲು ಮತ್ತು ಜಲಾಶಯುಗಳನ್ನು ಹುಡುಕಿಕೊಂಡು ಅವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡಬೇಕಾಗುತ್ತಿತ್ತು. ಎಲ್ಲಾದರೂ ಒಂದು ಕಡೆ ಜಲಾಶಯವೊಂದು ಕಂಡುಬಂದರೆ ಆ ನೀರು ಖಾಲಿಯಾಗುವ ತನಕ ಅವರು ಅಲ್ಲಿಯೇ ಇರುತ್ತಿದ್ದರು. ಮಕ್ಕಾ ಮತ್ತು ಮದಿನಾಗಳಂತಹ ಕೆಲವು ನಗರಗಳ ನಿವಾಸಿಗಳ ಹೊರ್ರತು ಆ ದಿನಗಳಲ್ಲಿ ಅರಬರು ಅಲೆಮಾರು ಜನ ಗಳಂತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚಾರ ಮಾಡುತ್ತಿದ್ದರು. ಅರಬಿ ಜನರ ಮುಖ್ಯ ವೃತ್ತಿಯು ವ್ಯಾಪಾರ ಮತ್ತು ಪಶುಸಂಗೋಪನೆಯಾಗಿತ್ತು. ಅವರು ಸಾಕುತ್ತಿರುವ ಪಶುಗಳಲ್ಲಿ ಒಂಟೆಗಳು, ಕುರಿಗಳು ಮತ್ತು ಕುದುರೆಗಳು ಮುಖ್ಯ ವಾಗಿದ್ದವು. ಅರಬರಿಗೆ ಯಾವುದೇ ಒಂದು ಧರ್ಮವು ಇದ್ದಿರಲಿಲ್ಲ. ಅವರೊಳಗೆ ಹೆಚ್ಚಿನವರು ಬೇರೆ ಬೇರೆ ಮೂರ್ತಿಗಳನ್ನು ಪೂಜಿಸುತ್ತಿದ್ದರು. ಆದರೆ ಕೆಲವರು ಪ್ರಕೃತಿಯನ್ನು ಆರಾಧಿಸುತ್ತಿದ್ದರು. ಅವರೊಳಗೆ ಕೆಲವರು ಕ್ರೈಸ್ತರಾಗಿದ್ದರು ಮತ್ತು ಇನ್ನು ಕೆಲವರು ಯಹೂದಿಯರಾಗಿದ್ದರು. ಆದರೆ ಅವರೊಳಗಿನ ಹೆಚ್ಚಿನ

ಜನರಿಗೆ ಯಾವುದೇ ಒಂದು ಧರ್ಮವೆಂಬುದು ಇದ್ದಿರಲಿಲ್ಲ. ಮತ್ತು ಸಾಮಾನ್ಯವಾಗಿ ಅವರು ಪ್ರತ್ಯುಪಕಾರ, ಧೈರ್ಯ, ಸ್ವಾತಂತ್ರ್ಯ ಮತ್ತು ಅತಿಥಿ ಸತ್ಕಾರದಂತಹ ಕೆಲವು ಸಿದ್ಧಾಂತಗಳನ್ನು ನಂಬುತ್ತಿದ್ದರು. ಮರುಭೂಮಿಯ ಈ ಜನಾಂಗದವರ ಜೀವನವು ತುಂಬಾ ಕಠಿಣವಾಗಿದ್ದುದರಿಂದ ಅವರಿಗೆ ತಮ್ಮ ಜೀವನವನ್ನು ಬಿಟ್ಟು ದೈವತ್ವದ ಬಗ್ಗೆ ಚಿಂತಿಸುವ ಅವಕಾಶವೇ ಸಿಗುತ್ತಿರಲಿಲ್ಲ. ಜನರನ್ನು ನಿಯಂತ್ರಿಸಲು ಅಲ್ಲಿ ಯಾವುದೇ ರೀತಿಯ ಸರಕಾರವಾಗಲಿ ಅಥವಾ ಆಡಳಿತವಾಗಲಿ ಇದ್ದಿರಲಿಲ್ಲ. ಅರಬರು ಪಂಗಡಗಳಲ್ಲಿ ಮತ್ತು ಉಪಪಂಗಡಗಳಲ್ಲಿ ಜೀವಿಸುತ್ತಿದ್ದರು ಮತ್ತು ಪ್ರತಿಯೊಂದು ಪಂಗಡ ಹಾಗೂ ಉಪಪಂಗಡದ ಕುಟುಂಬಕ್ಕೆ ಒಬ್ಬ ಪ್ರಮುಖನಿರುತ್ತಿದ್ದನು. ಆ ಪ್ರಮುಖನು ತನ್ನ ಪಂಗಡವನ್ನು ಪ್ರತಿನಿಧಿಸುತ್ತಿದ್ದನು. ಮತ್ತು ತನ್ನ ಪಂಗಡದಾರರ ಮೇಲೆ ರೂಢಿಗಳನ್ನು ಮತ್ತು ಬಳಕೆಗಳನ್ನು ಜಾರಿಗೊಳಿಸುತ್ತಿದ್ದನು. ರೂಢಿ ಮತ್ತು ಬಳಕೆಗಳ ಹೊರತಾಗಿ ಆ ಪಂಗಡಗಳಲ್ಲಿ ಬೇರೆ ಯಾವತ್ತೂ ಕಾನೂನು ಇರಲಿಲ್ಲ. ಅವರ ರೂಢಿಗತ ಕಾನೂನು ಎರಡು ವರ್ಗಗಳಲ್ಲಿ ವಿಭಜಿಸಲಾಗಿತ್ತು. ಮೊದಲನೇದಾಗಿ, ಅವರೊಳಗೆ ಅಂತರ್ ಪಂಗಡದ ರೂಢಿಗಳಿದ್ದವು ಮತ್ತು ಇವು ಬೇರೆ ಬೇರೆ ಪಂಗಡಗಳೊಳಗಿನ ಸಂಬಂಧವನ್ನು ಶಾಸಿಸುತ್ತಿದ್ದವು. ಎರಡನೆಯದಾಗಿ ಒಂದು ಪಂಗಡದೊಳಗಿನ ವ್ಯಕ್ತಿಗಳ ನಡತೆಯನ್ನು ರೂಢಿಗಳು ಶಾಸಿಸುತ್ತಿದ್ದವು.

ಇಸ್ಲಾಮ್‌ಗಿಂತ ಮೊದಲು ಅರಬಿ ಸಮಾಜದಲ್ಲಿರುವ ರೂಢಿಗತ ಕಾನೂನು ತುಂಬಾ ವಿಚಿತ್ರವಾಗಿದೆ. ಅವರೊಳಗಿನ ಕೆಲವು ರೂಢಿಗಳು ವಿಕೃತ ಮತ್ತು ಕ್ರೂರವಾಗಿದ್ದವು. ಉದಾಹರಣೆಗಾಗಿ, ಬೇಡವಾದ ಒಂದು ಹೆಣ್ಣು ಶಿಶುವನ್ನು ಅವರು ಜೀವಂತ ಹೂತಿಡುತ್ತಿದ್ದರು. ಸಾಲದ ಮೇಲೆ ಅತಿ ದೊಡ್ಡ ಪ್ರಮಾಣದ ಬಡ್ಡಿಯನ್ನು ಸ್ವೀಕರಿಸುವದು ಅವರೊಳಗೆ ಬಳಕೆಯಲ್ಲಿತ್ತು. ಜುಗಾರಿ ಆಡುವುದು ಅರಬಿ ಸಮಾಜದವರಿಗೆ ತುಂಬಾ ಪ್ರಿಯವಾಗಿತ್ತು. ಗುಲಾಮಗಿರಿಯು ಬಳಕೆಯಲ್ಲಿತ್ತು ಮತ್ತು ಗುಲಾಮರನ್ನು ಅವರ ಮಾಲಿಕರ ಅಮೂಲ್ಯವಾದ ಸ್ವತ್ತೆಂಬುದಾಗಿ ಎಣಿಸಲಾಗುತ್ತಿತ್ತು. ಸ್ತ್ರೀ-ಪುರುಷರೊಳಗಿನ ಸಂಬಂಧವನ್ನು ನಿಯಂತ್ರಿಸುವ ರೂಢಿಗಳು ಪುರುಷರಿಗೆ ಅನುಕೂಲವಾಗಿದ್ದವು. ಸ್ತ್ರೀಯರ ಸ್ಥಿತಿಯು ತುಂಬಾ ಕರುಣಾಜನಕವಾಗಿತ್ತು. ಸ್ತ್ರೀಯರ ಸ್ಥಿತಿಯು ಆ ಸಮಾಜದಲ್ಲಿ ಎಷ್ಟೊಂದು ಕೆಟ್ಟು ಹೋಗಿತ್ತೆಂದರೆ ಅವರು ಗುಲಾಮರಂತೆ ಬಾಳುತ್ತಿದ್ದರು. ಒಬ್ಬ ಹುಡುಗಿಯನ್ನು ಅವಳ ಸಮ್ಮತಿಯಿಲ್ಲದೆ ಅವಳ ಹೆತ್ತವರು ಮಾರಾಟ ಮಾಡಬಹುದಿತ್ತು. ಮತ್ತು ಯಾರಿಗೆ ಬೇಕಾದರೂ ಮದುವೆ ಮಾಡಿಕೊಡಬಹುದಿತ್ತು. ಒಬ್ಬ ಗಂಡಸಿಗೆ ಎಷ್ಟು ಮಂದಿ ಪತ್ನಿಯರಿರಬೇಕೆಂಬ ಬಗ್ಗೆ ಯಾವದೇ ಒಂದು ನಿಯಮವಿದ್ದಿರಲಿಲ್ಲ ಮತ್ತು ಒಬ್ಬ ಪುರುಷನು ತನಗೆ ಇಷ್ಟ ಬಂದಷ್ಟು ಸ್ತ್ರೀಯರನ್ನು ವಿವಾಹವಾಗಬಹುದಿತ್ತು. ಕೆಲವು ಅತ್ಯಂತ ಸಮೀಪದ ರಕ್ತ ಸಂಬಂಧದವರನ್ನು ಬಿಟ್ಟರೆ ಯಾರೂ ಯಾರನ್ನು ವಿವಾಹವಾಗಬಹುದಿತ್ತು. ಮಾಗಿಯನ್ (Magian) ಧರ್ಮವನ್ನು ಅನುಸರಿಸು

ತ್ತಿರುವ ಅರಬರು ತಮ್ಮ ಮಗಳಂದಿರನ್ನು ಮತ್ತು ಸಹೋದರಿಯರನ್ನು ವಿವಾಹ ವಾಗಬಹುದಿತ್ತು. ಒಬ್ಬ ಅರಬಿ ಗಂಡನು ತನ್ನ ಹೆಂಡತಿಯನ್ನು ತನಗೆ ಇಷ್ಟ ಬಂದಾಗ ಮತ್ತು ಇಷ್ಟ ಬಂದ ರೀತಿಯಲ್ಲಿ ವಿವಾಹ ವಿಚ್ಛೇದನಗೊಳಿಸಬಹುದಿತ್ತು. ಅರಬರ ರೂಢಿಗತ ಕಾನೂನಿನ ಮೇರೆಗೆ ಒಬ್ಬನು ಒಬ್ಬ ದತ್ತಕ ಪುತ್ರನನ್ನು ಸ್ವೀಕರಿಸಬಹುದಿತ್ತು ಮತ್ತು ಅವನು ಒಬ್ಬ ನೈಸರ್ಗಿಕ ಮಗನೆಂಬಂತೆ ಎಣಿಸಲ್ಪಡು ತ್ತಿದ್ದನು. ಸ್ವತ್ತನ್ನು ಹೊಂದುವದು ಮತ್ತು ಹಸ್ತಾಂತರಣಗೊಳಿಸುವದು ಮನ್ನಿ ಸಲ್ಪಟ್ಟಿತ್ತು. ಹಸ್ತಾಂತರಣವು ಬಹುಮಟ್ಟಿಗೆ ವಿನಿಮಯದ ರೀತಿಯಲ್ಲಿ ಮಾಡಲ್ಪ ಡುತ್ತಿತ್ತು. ಆದರೆ ಮುಂದಕ್ಕೆ ಹಣವನ್ನೂ ಉಪಯೋಗಿಸಲಾಯಿತು. ಒಬ್ಬ ನಾರಿಯು ಸ್ವತ್ತನ್ನು ಹೊಂದಬಹುದಿತ್ತು, ಆದರೆ ಅದು ಆಕೆಯ ಸಂರಕ್ಷಕನ ಅಥವಾ ಗಂಡನ ಏಕಮೇವ ಮೇಲ್ವಿಚಾರಣೆಯಲ್ಲಿ ಇದ್ದಿರಬೇಕಾಗುತ್ತಿತ್ತು. ಒಬ್ಬ ಗುಲಾಮನಂತೆ ಒಬ್ಬ ನಾರಿಯೂ ಸಹ ಒಂದು ವಾರಸು ಪಡೆಯುವ ಹಕ್ಕನ್ನು ಹೊಂದಿರಲಿಲ್ಲ. ಒಬ್ಬ ಅರಬನು ಮೃತನಾದ ಬಳಿಕ ಅವನ ಪತ್ನಿ, ತಾಯಿ, ಸಹೋ ದರಿ ಅಥವಾ ಮಗಳು ಇತ್ಯಾದಿ ಅವನ ಸ್ವತ್ತಿನಲ್ಲಿ ಯಾವತ್ತೂ ಪಾಲು ಪಡೆಯು ವಂತಿರಲಿಲ್ಲ. ಅಪರಾಧಗಳ ಪ್ರಕರಣಗಳಲ್ಲಿ ದಂಡನೆಯ ಉದ್ದೇಶವು ಅವರೋಧಕ ಮತ್ತು ಪ್ರತಿಹಿಂಸಾತ್ಮಕವಾಗಿತ್ತು, ಕೆಲವೊಮ್ಮೆ ಒಂದು ಕ್ಷತಿಯ ಸಂಬಂಧದಲ್ಲಿ ಅಪರಾಧಿಯಿಂದ ಪರಿಹಾರ ಪಡೆಯಲಾಗುತ್ತಿತ್ತು. ಕಳವಿನ ಪ್ರಕರಣಗಳಲ್ಲಿ ಕಳ್ಳನ ಬಲಕೈ ತುಂಡು ಮಾಡಪಡಲಾಗುತ್ತಿತ್ತು. ಜಾರತ್ವದ ಅಪರಾಧ ಮಾಡಿದ ವ್ಯಕ್ತಿಗೆ ಕಲ್ಲು ಹೊಡೆದು ಕೊಲ್ಲಲಾಗುತ್ತಿತ್ತು. ಆದರೆ ಕೆಲವು ಕಾಲದ ಬಳಿಕ ಜಾರತ್ವದ ಸಂಬಂಧದಲ್ಲಿ ಕೊಡಲಾದ ಶಿಕ್ಷೆಯು ಬದಲಾಯಿತು. ಅಪರಾಧಿಯ ಮೋರೆಗೆ ಕಪ್ಪು ಬಣ್ಣ ಹಚ್ಚಿ ಸಾರ್ವಜನಿಕ ಸ್ಥಳಗಳಲ್ಲಿ ಅವನಿಗೆ ಚಾವಟಿಗೆಯಿಂದ ಏಟು ಕೊಡು ವಂತಹ ದಂಡನೆಯು ಬಳಕೆಗೆ ಬಂತು. ಮಹಮದ ಪೈಗಂಬರನು ಜನಿಸಿ ಇಸ್ಲಾಮ್ ಧರ್ಮವನ್ನು ಬೋಧಿಸುವ ಕಾಲದಲ್ಲಿ ಅರಬಿ ಸಮಾಜದ ಇದೊಂದು ಸಂಕ್ಷಿಪ್ತ ಚಿತ್ರವಾಗಿದೆ.

ಮಹಮದ ಪೈಗಂಬರನು (Mahomed the Prophet)

ಮಹಮದ ಪೈಗಂಬರನು ಕ್ರಿ. ಶ. ೫೭೧ ರಲ್ಲಿ ಮಕ್ಕಾದಲ್ಲಿ ಹುಟ್ಟಿದನು. ಅವನ ತಂದೆಯ ಹೆಸರು ಅಬ್ದುಲ್ಲಾ ಮತ್ತು ತಾಯಿಯ ಹೆಸರು ಅಮಿನಾ ಎಂದು. ಮಹಮದನು ಹುಟ್ಟುವಾಗ ಅವನ ತಂದೆಯು ಆಗಲೇ ಮೃತನಾಗಿದ್ದನು. ಅವನು ೬ ವರ್ಷ ವಯಸ್ಸಿನವನಿರುವಾಗಲೇ ಅವನ ತಾಯಿಯು ಮೃತಳಾಗಿದ್ದಳು. ಆ ಬಳಿಕ ಮಹಮದನ ಪಾಲನೆಯು ಅಬ್ದುಲ್ ಮುಶಾಲಿತ್ ಎಂಬ ಹೆಸರಿನ ಅವನ ಅಜ್ಜನಿಂದಲೂ ಆ ಬಳಿಕ ಅವನ ಸೋದರಮಾವ ಅಬುಖಾಲಿಫ್‌ನಿಂದಲೂ ಮಾಡ ಲ್ಪಟ್ಟಿತು. ತನ್ನ ಬಾಲ್ಯಾವಸ್ಥೆಯಿಂದಲೇ ಮಹಮದನು ಗಂಭೀರ ಸ್ವರೂಪದ

ಬುದ್ಧಿಯುವನಾಗಿದ್ದನು. ತನ್ನ ಸುತ್ತುಮುತ್ತ ಅವನೇನನ್ನು ನೋಡುತ್ತಿದ್ದನೋ ಅದರ ಬಗ್ಗೆ ಗಂಭೀರವಾಗಿ ವಿಚಾರ ಮಾಡುತ್ತಿದ್ದನು. ೧೩ ವರ್ಷ ವಯಸ್ಸಿನವನಾದಾಗ ಅವನು ತನ್ನ ಸೋದರಮಾವನೊಂದಿಗೆ ಸೇರಿ ವ್ಯಾಪಾರವನ್ನು ಆರಂಭಿಸಿದನು. ಅವನ ವ್ಯಾಪಾರೀ ಯಾತ್ರೆಯ ಕಾಲದಲ್ಲಿ ಅವನು ತುಂಬಾ ಕುತೂಹಲತೆಯಿಂದ ಬೇರೆ ಬೇರೆ ಅರಬಿ ಸಮಾಜಗಳಲ್ಲಿರುವ ರೂಢಿಗಳ ಅಧ್ಯಯನ ಮಾಡಿದನು. ತನ್ನ ೨೫ರ ವಯಸ್ಸಿನಲ್ಲಿ ಖಲಿಜಾ ಬೇಗಂ ಎಂಬ ಒಬ್ಬ ಧನಾಢ್ಯ ವಿಧವೆಯು ತನ್ನ ವ್ಯಾಪಾರವನ್ನು ನೋಡುವದಕ್ಕೋಸ್ಕರ ಅವನನ್ನು ನಿಯೋಜಿಸಿದಳು. ಮಹಮದನ ಉಚ್ಚ ನಡತೆಯಿಂದ ಅವಳು ಎಷ್ಟು ಪ್ರಭಾವಿತಳಾದಳೆಂದರೆ ಸ್ವಲ್ಪ ಕಾಲದ ಬಳಿಕ ಅವನನ್ನು ಅವಳು ವಿವಾಹಿತಳಾದಳು. ಅವಳ ಮರಣದತನಕ ಪೈಗಂಬರನು ಅವಳೊಂದಿಗೆ ಜೀವಿಸಿದನು. ಅವಳ ಮರಣದ ಬಳಿಕ ಪೈಗಂಬರನು ಇತರ ನಾರಿಯರನ್ನು ವಿವಾಹವಾದನು ಮತ್ತು ಅವರಲ್ಲಿ ಒಬ್ಬಳನ್ನು ಬಿಟ್ಟರೆ ಇತರರು ವಿಧವೆಯರಾಗಿದ್ದರು. ಖಲಿಜಾ ಬೇಗಮ್‌ಳಿಂದ ಮಹಮದ ಪೈಗಂಬರನಿಗೆ ಇಬ್ಬರು ಮಗಂದಿರು ಮತ್ತು ನಾಲ್ವರು ಮಗಳಂದಿರು ಹುಟ್ಟಿದರು. ಅವನ ಕೊನೆಯ ಹಾಗೂ ನಾಲ್ಕನೇ ಮಗಳಾದ ಪಾತಿಮಳು ಮಾತ್ರ ಅವನ ಉತ್ತರ ಜೀವಿಯಾಗಿ ಉಳಿದಳು. ಅವನ ಇತರ ಪತ್ನಿಯರಿಗೆ ಸಂತತಿಯಿರಲಿಲ್ಲ. ಮಹಮದ ಪೈಗಂಬರನು ಸಮಾಜದಲ್ಲಿರುವ ಅನೈತಿಕತೆಯ ಬಗ್ಗೆ ಗಂಭೀರವಾಗಿ ವಿಚಾರ ಮಾಡುತ್ತಿದ್ದನು ಮತ್ತು ಅವುಗಳಿಗೆ ಒಂದು ಯೋಗ್ಯವಾದ ಪರಿಹಾರವನ್ನು ಹುಡುಕತೊಡಗಿದನು. ಹಿರಾ ಎಂಬ ಬೆಟ್ಟದಲ್ಲಿರುವ ಒಂದು ಏಕಾಂತ ಗುಹೆಯೊಳಗೆ ಅವನು ಒಬ್ಬನೇ ಕುಳಿತು ಪರಮಾತ್ಮ, ಧರ್ಮ ಮತ್ತು ಸಮಾಜ ಸುಧಾರಣೆಯ ಬಗ್ಗೆ ವಿಚಾರ ಮಾಡುತ್ತಿದ್ದನು. ಕ್ರಿ. ಶ. ೬೦೯ ರ ರಮಜಾನ್ ತಿಂಗಳಲ್ಲಿ ಒಂದು ದಿನ ಪೈಗಂಬರನು ಆ ಗುಹೆಯೊಳಗೆ ಧ್ಯಾನಮಗ್ನನಾಗಿರುವಾಗ ಅವನಿಗೊಂದು ವಿಚಿತ್ರವಾದ ಧ್ವನಿಯು ಕೇಳಿಸಿತು. ಆ ಧ್ವನಿಯು ದೇವದೂತ ಗಬ್ರಿಯಲ್‌ನದಾಗಿತ್ತು. ಆ ದೇವದೂತನು ಪರಮಾತ್ಮನಿಂದ ಅವನ ಬಳಿ ಕಳುಹಿಸಲ್ಪಟ್ಟಿದ್ದನು. ಗಬ್ರಿಯಲ್‌ನು ಪೈಗಂಬರನ ಕಿವಿಯೊಳಗೆ ಈ ಮಾತನ್ನು ಪಿಸುಗುಟ್ಟಿದನು. “ಅಲ್ಲಾನ ಹೆಸರನ್ನು ಓದು, ಅವನು ಎಲ್ಲಾ ವಸ್ತುಗಳ ಸೃಷ್ಟಿಕರ್ತನಾಗಿರುವನು, ಅವನು ಒಂದು ರಕ್ತದ ತುಂಡಿನಿಂದ ಮನುಷ್ಯನನ್ನು ಸೃಷ್ಟಿ ಮಾಡಿದನು, ನಿನ್ನ ಪರಮಾತ್ಮನು ಅತ್ಯಂತ ಕರುಣಾಳು ಆಗಿರುವನು. ಯಾವಾತನು ಲೇಖನಿ ಉಪಯೋಗಿಸುವುದನ್ನು ಕಲಿತನೊ ಆತನು ಮನುಷ್ಯನಿಗೆ ತಿಳಿಯದಿದ್ದುದನ್ನು ಕಲಿಸುವನು.” ಇದು ಪೈಗಂಬರನಿಗೆ ಪರಮಾತ್ಮನ ಮೊದಲನೆಯ ಸಂದೇಶವಾಗಿರುತ್ತದೆ. ಇದರ ಬಳಿಕ ಬೇರೆ ಬೇರೆ ಸಂದರ್ಭಗಳಲ್ಲಿ ಪೈಗಂಬರನ ಮರಣದತನಕ ಆಗಾಗ್ಗೆ ಅವನಿಗೆ ಪರಮಾತ್ಮನ ದೈವಿಕ ಸಂದೇಶಗಳು ಬರುತ್ತಿದ್ದವು. ಕುರಾನ್ ಇದು ಇಂತಹ ಎಲ್ಲಾ ದೈವಿಕ ಸಂದೇಶಗಳ ಸಮೂಹವಾಗಿದೆ. ಪೈಗಂಬರನು ಬೋಧಿಸಿರುವ ಧರ್ಮದ ಮೂಲ ಸಿದ್ಧಾಂತಗಳು ಈ ಕೆಳಗಿನವುಗಳಾಗಿವೆ :

೧) ಪರಮಾತ್ಮನು ಒಬ್ಬನು ಮತ್ತು ಒಬ್ಬನೇ ಒಬ್ಬನು, ಮತ್ತು ಮಹಮದನು ಅವನ ಸಂದೇಶಗಾರನಾಗಿರುವನು.

೨) ಈ ಜಗತ್ತಿನಲ್ಲಿ ಏನೆಲ್ಲಾ ಅಸ್ತಿತ್ವದಲ್ಲಿದೆಯೋ ಅದಕ್ಕೆ ಪರಮಾತ್ಮನು ಸರ್ವೋಚ್ಚ ಅಧಿಪತಿಯಾಗಿರುವನು ಮತ್ತು ಪ್ರತಿಯೊಬ್ಬನು ಪರಮಾತ್ಮನ ಇಚ್ಛೆಗೆ ಶರಣಾಗಬೇಕು.

೩) ಎಲ್ಲಾ ಮಾನವರು ಸಮಾನರಾಗಿರುವರು. ಎಲ್ಲರೂ ಸಹೋದರರಂತೆ ಇರುವುದರಿಂದ ಒಬ್ಬನನ್ನು ಇನ್ನೊಬ್ಬನಿಗಿಂತ ಮೇಲ್ಪಟ್ಟದವನೆಂದು ಎಣಿಸಬಾರದು.

ಪೈಗಂಬರನು ತನ್ನ ಬೋಧನೆಯ ಮುಖಾಂತರ ಜೀವನದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದನು ಮತ್ತು ಆಗ ಬಳಕೆಯಲ್ಲಿರುವ ಕೆಟ್ಟ ಪದ್ಧತಿಗಳನ್ನು ನಿರ್ಮೂಲನಗೊಳಿಸಿದನು. ಅವನ ದೈವಿಕ ಸಂದೇಶಗಳನ್ನು ನಂಬಿ ಪಾಲನೆ ಮಾಡಿದವರಲ್ಲಿ ಪೈಗಂಬರನ ಪತ್ನಿ ಖದಿಜಾ ಬೇಗಮ್ ಇವಳು ಮೊದಲಿಗಳು. ಕ್ರಮೇಣ ಇತರರೂ ಅವನ ಅನುಯಾಯಿಗಳಾಗುತ್ತಿದ್ದರು. ಆದರೆ ಮಕ್ಕಾದಲ್ಲಿಯ ತುಂಬಾ ಜನರು ಅವನ ಈ ಬೋಧನೆಗಳನ್ನು ವಿರೋಧಿಸಿದರು ಮಹಮದನು ತನ್ನ ಸಂದೇಶಗಳನ್ನು ಜನರಿಗೆ ತಿಳಿಸುವುದನ್ನು ಇವರು ತಡೆಯತೊಡಗಿದರು. ತನಗೆ ಮಕ್ಕಾದಲ್ಲಿ ವಿರೋಧವು ಹೆಚ್ಚುತ್ತಿರುವುದರಿಂದ ಪೈಗಂಬರನು ಕ್ರಿ. ಶ. ೬೨೨ ರಲ್ಲಿ ಮಕ್ಕಾದಿಂದ ಮದೀನಾಕ್ಕೆ ಓಡಿಹೋದನು. ಮಕ್ಕಾದಿಂದ ಮದೀನಾಕ್ಕೆ ಕೈಗೊಂಡ ಈ ಯಾತ್ರೆಯನ್ನು ಒಂದು ಪವಿತ್ರ ಉದ್ದೇಶದ ನಿಯೋಗವೆಂದು ಹೇಳಲಾಗುತ್ತದೆ. ಮದೀನಾದಲ್ಲಿ ಅವನ ಬೋಧನೆಯು ಹೆಚ್ಚೆಚ್ಚು ಜನರಿಗೆ ಹಿಡಿಸತೊಡಗಿತು ಮತ್ತು ಅವರೆಲ್ಲಾ ಪೈಗಂಬರನ ಅನುಯಾಯಿಗಳಾದರು. ಮಹಮದ ಪೈಗಂಬರನು ಅವರನ್ನು ತನ್ನ ಹೊಸ ಮತದ ಅನುಯಾಯಿಗಳನ್ನಾಗಿ ಕೂಡಿದುದಷ್ಟೇ ಅಲ್ಲ. ಬದಲಾಗಿ ಅವರನ್ನು ಒಂದು ರಾಜಕೀಯ ಸಮೂಹವಾಗಿಯೂ ಸಂಘಟನೆ ಮಾಡಿದನು. ಮಹಮದನ ಹೊಸ ಸಂದೇಶವನ್ನು ನಂಬದವರ ಮೇಲೆ ಅವನ ಅನುಯಾಯಿಗಳು ಅನೇಕ ಬಾರಿ ಯುದ್ಧ ಸಾರಿದರು. ಅವನ ಹೊಸ ಮತವು ಎಷ್ಟೊಂದು ಶಕ್ತಿಶಾಲಿಯಾಗಿತ್ತೆಂದರೆ ಅರಬಿನ ಬಹು ಸಂಖ್ಯಾತ ಜನರು ಅವನ ಹಿಂಬಾಲಕರಾಗಲು ಹೆಚ್ಚು ಕಾಲ ತಗಲಲಿಲ್ಲ, ಮಹಮದ ಪೈಗಂಬರನ ವ್ಯಕ್ತಿತ್ವದ ಪ್ರಭಾವದಿಂದಾಗಿ ಅತ್ಯಂತ ಕಡಿಮೆ ಕಾಲದೊಳಗೆ ಅವರೊಳಗೆ ಹೆಚ್ಚಿನವರೆಲ್ಲ ಇಸ್ಲಾಮ್ ಮತವನ್ನು ಸ್ವೀಕರಿಸಿದರು. ಕ್ರಿ.ಶ. ೬೩೨ರಲ್ಲಿ ಮಹಮದ ಪೈಗಂಬರನು ಮೃತನಾದಾಗ ಅವನು ಇಸ್ಲಾಮಿ ರಾಜ್ಯಗಳ ಧಾರ್ಮಿಕ ಹಾಗೂ ಭೌತಿಕ ಪ್ರಮುಖನಾಗಿದ್ದನು.

ಮಹಮದೀಯ ಕಾನೂನಿನ ಐತಿಹಾಸಿಕ ಬೆಳವಣಿಗೆ
(Historical Development of Muslim Law)

ಇಸ್ಲಾಂ ಧರ್ಮ ಮತ್ತು ಮಾನವ ನಿರ್ಮಿತ ಧರ್ಮ. ಇವುಗಳೊಳಗಿನ

ವ್ಯತ್ಯಾಸವನ್ನು ನಾವು ಈಗಾಗಲೇ ನೋಡಿರುವೆವು. ಇಸ್ಲಾಂ ಧರ್ಮವು ಪೈಗಂಬರನ ಮರಣ ಕಾಲದಲ್ಲಿ ಪೂರ್ಣವಾಗಿ ಸ್ಥಾಪಿಸಲ್ಪಟ್ಟಿತ್ತು. ಆದರೆ ಮಹಮದೀಯ ಕಾನೂನು ಆ ಬಳಿಕ ವಿಕಸಿತಗೊಂಡಿತು. ಅನೇಕ ಹಂತಗಳಲ್ಲಾದ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳು ಈ ಮಾನವ ನಿರ್ಮಿತ ಕಾನೂನುಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿವೆ. ಆದುದರಿಂದ ಈಗಿನ ಮಹಮದೀಯ ಕಾನೂನು ಅರಬೀ ಸಮಾಜದಲ್ಲಿ ಅನೇಕ ರಾಜಕೀಯ ಮತ್ತು ಆಡಳಿತದ ವಿಕಾಸದ ಪರಿಣಾಮವಾಗಿದೆ. ಮಹಮದೀಯ ಕಾನೂನಿನ ಐತಿಹಾಸಿಕ ಬೆಳವಣಿಗೆಯನ್ನು ಈ ಕೆಳಗಿನ ಐದು ಕಾಲಾವಧಿಯೊಳಗೆ ವಿಭಜನೆ ಮಾಡಬಹುದು.

1) ಪ್ರಥಮ ಯುಗ (The First Period, 622-632 A.D.)

ಮಹಮದೀಯ ಕಾನೂನಿನ ಬೆಳವಣಿಗೆಯ ಮೊದಲನೇ ಹಂತವು ಹೆಜರತ್‌ದೊಂದಿಗೆ, ಅಂದರೆ ಕ್ರಿಸ್ತಶಕೆ ೬೨೨ ರೊಂದಿಗೆ ಆರಂಭವಾಗುತ್ತದೆ, ಮತ್ತು ಪೈಗಂಬರನ ಮರಣದೊಂದಿಗೆ ಕ್ರಿ. ಶ. ೬೩೨ರಲ್ಲಿ ಕೊನೆಗೊಳ್ಳುತ್ತದೆ. ಈ ಯುಗವನ್ನು ಶಾಸನೀಯ ಯುಗವೆಂದು ಕರೆಯಲಾಗುತ್ತದೆ. ಈಗಾಗಲೇ ಹೇಳಲಾದಂತೆ ಪರಮಾತ್ಮನ ಮೊದಲನೇ ಸಂದೇಶವು ಪೈಗಂಬರನಿಗೆ ಕ್ರಿ. ಶ. ೬೦೯ರಲ್ಲಿ ಮಕ್ಕಾದಲ್ಲಿ ಬಂದಿತ್ತು. ಆ ಬಳಿಕ ದೈವಿಕ ಸಂದೇಶವು ಅವನಿಗೆ ಕಾಲದಿಂದ ಕಾಲಕ್ಕೆ ಬರುತ್ತಿತ್ತು ಮತ್ತು ಅವುಗಳನ್ನು ಅವನು ಮಕ್ಕಾದ ಜನರಿಗೆ ತಿಳಿಸುತ್ತಿದ್ದನು. ಆದರೆ ಮಕ್ಕಾ ನಗರದ ಜನರು ಅವನ ಮಾತನ್ನು ನಂಬುತ್ತಿರಲಿಲ್ಲ ಮತ್ತು ಪರಮಾತ್ಮನ ಬಗ್ಗೆ ಅವ ಹೇಳಿದ್ದೆಲ್ಲಾ ಸುಳ್ಳೆಂದು ಎಣಿಸುತ್ತಿದ್ದರು. ಆದುದರಿಂದ ಪೈಗಂಬರನ ಮೊದಲನೇ ಕರ್ತವ್ಯವು ಯಾವುದಾಗಿತ್ತೆಂದರೆ ಒಬ್ಬ ಪರಮಾತ್ಮನ ಅಸ್ತಿತ್ವವನ್ನು ಅವನು ನಂಬುವಂತೆ ಮಾಡುವದು. ಇದರ ಪರಿಣಾಮವಾಗಿ ಅವನು ಮಕ್ಕಾದಲ್ಲಿ ಮಾಡಿರುವ ಬೋಧನೆಯ ಹೆಚ್ಚಿನ ಅಂಶವೆಲ್ಲ ಧಾರ್ಮಿಕ ಅಥವಾ ಆಧ್ಯಾತ್ಮಿಕವಾಗಿತ್ತು ಮತ್ತು ಅದರಲ್ಲಿ ಮಾನವ ನಿರ್ಮಿತ ಕಾನೂನಿನ ವಿಷಯ ಎದ್ದಿರಲಿಲ್ಲ. ಕ್ರಿ. ಶ. ೬೨೨ರಲ್ಲಿ ಮಹಮದ ಪೈಗಂಬರನು ಮದಿನಾಕ್ಕೆ ಹೋದನು ಮತ್ತು ಮಕ್ಕಾದಲ್ಲಿ ಅವನು ಆಗಲೇ ಬೋಧಿಸಿರುವ ಪರಮಾತ್ಮನ ಸಂದೇಶಗಳು ಮದಿನಾದಲ್ಲಿ ಸ್ವೀಕರಿಸಲ್ಪಟ್ಟವು. ಆದುದರಿಂದ ಮದಿನಾದಲ್ಲಿ ಅವನು ಮಾಡಿರುವ ಬೋಧನೆಯಿಂದ ಜನರ ನಡತೆಯನ್ನು ನಿಯಂತ್ರಿಸುವ ಸಿದ್ಧಾಂತಗಳನ್ನು ಹಾಕಿಕೊಟ್ಟನು. ಸಮಾಜದ ಪ್ರತಿಯೊಂದು ಸಮಸ್ಯೆಯನ್ನು ಬಗೆಹರಿಸುವ ಉಪಾಯಗಳನ್ನು ಅವನು ಅಲ್ಲಿ ಬೋಧಿಸಿದ್ದನು; ಇದು ಪೈಗಂಬರನ ಮರಣದತನಕವೂ ಮುಂದುವರಿಯಿತು. ಹೀಗೆ ಕಾನೂನು ನಿರ್ಮಾಪಕ ಬೋಧನೆಗಳು ಕ್ರಿ. ಶ. ೬೨೨ರಿಂದ ಕ್ರಿ. ಶ. ೬೩೨ರೊಳಗೆ ಮಾಡಲ್ಪಟ್ಟವು. ದೈವಿಕ ಸಂದೇಶಗಳು ಅಥವಾ ದೈವಜ್ಞಾನವು ಪರಮಾತ್ಮನ ಭಾವ ಸ್ವರೂಪವನ್ನು ವಿವರಿಸಿದವು ಮತ್ತು ಮಾನವ ನಿರ್ಮಿತ ಕಾನೂನಿನ ನಿಯಮಗಳನ್ನು ಹಾಕಿಕೊಟ್ಟವು. ಇವನ್ನೆಲ್ಲ ಕುರಾನ್ ಎಂಬ

ಧರ್ಮಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಪೈಗಂಬರನು ಅಲೌಕಿಕ ಸ್ಥಿತಿಯಲ್ಲಿರುವ ಕಾಲದಲ್ಲಿ ಮಾತ್ರ ಅವನಿಗೆ ದೈವಿಕ ಸಂದೇಶಗಳು ಬರುತ್ತಿದ್ದವು. ಈ ಅಲೌಕಿಕತೆಯು ದೈವಿಕ ಶಕ್ತಿಗಳಿಂದ ಅವನನ್ನು ಪ್ರೇರಿಸುತ್ತಿದ್ದವು. ಈ ರೀತಿಯ ಅಲೌಕಿಕ ಸ್ಥಿತಿಯಲ್ಲಿಲ್ಲದಿದ್ದಾಗ ಪೈಗಂಬರನು ಒಬ್ಬ ಸಾಮಾನ್ಯ ಮಾನವನಂತೆ ಜೀವಿಸುತ್ತಿದ್ದನು. ದೈವಿಕ ಪ್ರೇರಣೆ ಇಲ್ಲದ ಕಾಲದಲ್ಲಿ ಪೈಗಂಬರನು ಏನನ್ನೆಲ್ಲ ಹೇಳಿದ್ದನೋ ಅಥವಾ ಏನನ್ನೆಲ್ಲ ಮಾಡಿದ್ದನೊ ಅದನ್ನೂ ಸಹ ಜನರು ಒಂದು ಆದರ್ಶವಾಗಿ ಅನುಸರಿಸಿದರು. ಪರಮಾತ್ಮನ ನೇರ ಶಬ್ದಗಳಿಂದ ಸಿಗದಿರುವ ಕಾಸೂನನ್ನು ಜನರು ಪೈಗಂಬರನ ಪರಂಪರೆಯಿಂದ ನಿರ್ಮಿಸಿದರು. ಪೈಗಂಬರನ ಮರಣಕ್ಕಿಂತ ೧೦ ವರ್ಷ ಮೊದಲಿನ ಕಾಲಾವಧಿಯು ಮಹಮದೀಯ ಕಾನೂನಿನ ಶಾಸನದ ದೃಷ್ಟಿಯಲ್ಲಿ ತುಂಬಾ ಮಹತ್ವವುಳ್ಳವುಗಳಾಗಿವೆ. ಈ ಕಾನೂನಿನ ಅತ್ಯಂತ ಪ್ರಮುಖ ನಿಯಮಗಳು ಈ ಅವಧಿಯಲ್ಲಿ ಪರಮಾತ್ಮನ ಶಬ್ದಗಳ ಮುಖಾಂತರ ಅಥವಾ ಪೈಗಂಬರನ ಸ್ವಂತ ಶಬ್ದಗಳ ಮುಖಾಂತರ ಹಾಕಲ್ಪಟ್ಟವು. ಆದುದರಿಂದ ಮೊದಲನೇ ಯುಗವನ್ನು ಇಸ್ಲಾಮಿನ ಶಾಸನೀಯ ಯುಗವೆಂದು ಕರೆಯಲಾಗುತ್ತದೆ. ಮತ್ತು ದೈವಿಕ ಶಾಸಕನಿಂದ ಈ ಕಾಲದಲ್ಲಿ ಕಾನೂನುಗಳು ಅಧಿನಿಯಮಿತಗೊಳಿಸಲ್ಪಟ್ಟಿದ್ದವು ಮತ್ತು ಅವು ಕುರಾನಿನ ಶಬ್ದಗಳ ಮುಖಾಂತರ ಘೋಷಿಸಲ್ಪಟ್ಟವುಗಳಾಗಿವೆ ಅಥವಾ ಮಹಮದನ ನಡತೆಯಿಂದ ಘೋಷಿಸಲ್ಪಟ್ಟವುಗಳಾಗಿವೆ.

II) ದ್ವಿತೀಯ ಯುಗ (The Second Period 632-661 A.D.)

ಈ ಕಾಲವನ್ನು ಇಸ್ಲಾಮಿನ ಮೊದಲನೇ ನಾಲ್ಕು ಕಲೀಫರ ಯುಗವೆಂದು ಕರೆಯಲಾಗುತ್ತದೆ. ತನ್ನ ಜೀವಮಾನದಲ್ಲಿ ಮಹಮದ ಪೈಗಂಬರನು ಕಾನೂನು ಮತ್ತು ಧರ್ಮದ ಮೇಲೆ ಪರಮ ಆಧಾರವಾಗಿದ್ದನು. ಅವನು ಮುಸ್ಲಿಮ್ ರಾಜ್ಯದ ಆಧ್ಯಾತ್ಮಿಕ ಹಾಗೂ ಆಡಳಿತ ಮುಖ್ಯಸ್ಥರಾಗಿದ್ದನು. ಅವನ ಮರಣದ ಬಳಿಕ ಅವನ ಉತ್ತರಾಧಿಕಾರಿಯು ಯಾವನೆಂಬ ಪ್ರಶ್ನೆ ಬಂತು. ಬಹು ಸಂಖ್ಯಾತ ಜನರ ಅಭಿಪ್ರಾಯದಲ್ಲಿ ಅವನ ಉತ್ತರಾಧಿಕಾರದ ಬಗ್ಗೆ ಒಂದು ಚುನಾವಣೆಯಾಗಬೇಕೆಂದು ಬಹು ಸಂಖ್ಯಾತರು ಅಭಿಪ್ರಾಯಪಟ್ಟರು. ಆದುದರಿಂದ ಒಂದು ಚುನಾವಣೆ ನಡೆಸಲಾಯಿತು ಮತ್ತು ಅದರಲ್ಲಿ ಅಬುಬಕರ್ ಎಂಬವನು ನಿರ್ವಾಚಿತನಾದನು. ಹೀಗೆ ಅಬುಬಕರ್ ಎಂಬುವನು ಪ್ರಥಮ ಕಲೀಪನಾದನು ಮತ್ತು ಮುಸ್ಲಿಮ್ ಸಮಾಜದ ಮುಖ್ಯಸ್ಥನಾದನು. ಅವನು ಪೈಗಂಬರನ ಅತ್ಯಂತ ಕಿರಿಯ ಪತ್ನಿಯಾದ ಆಯಶಾ ಬೇಗಮ್ ಇವಳ ತಂದೆಯಾಗಿದ್ದನು. ಪೈಗಂಬರನ ಜೀವಮಾನದಲ್ಲೂ ಸಹ ಅಬುಬಕರ್‌ನು ಅರಬಿನ ಮುಸಲ್ಮಾನರಲ್ಲಿ ತುಂಬಾ ಜನಪ್ರಿಯತೆಯನ್ನು ಗಳಿಸಿದ್ದನು. ಅವನು ಕ್ರಿ. ಶ. ೬೩೪ ರಲ್ಲಿ ಮೃತನಾದನು ಮತ್ತು ಅವನ ಬಳಿಕ ಉಮರ್ ಎಂಬವನು ಎರಡನೇ ಖಲೀಫನಾಗಿ ಚುನಾಯಿತ

ನಾದನು. ಉಮರ್‌ನು ೧೦ ವರ್ಷಗಳ ಕಾಲಾವಧಿಯವರೆಗೆ ಪ್ರಮುಖನಾಗಿದ್ದನು ಮತ್ತು ಕ್ರಿ. ಶ. ೬೪೪ರಲ್ಲಿ ಅವನ ಕೊಲೆಯಾಯಿತು. ಅವನ ಬಳಿಕ ಉಸ್ಮಾನ್ ಎಂಬವನು ಮೂರನೇ ಕಲೀಫನಾದನು. ಅವನು ಚುನಾವಣೆಯಿಂದ ಆಯ್ಕೆಯಾಗಿದ್ದನು. ಅವನು ೧೨ ವರ್ಷಗಳ ಕಾಲಾವಧಿಗೆ ಮುಸಲ್ಮಾನ ಸಮಾಜದ ಪ್ರಮುಖನಾಗಿದ್ದನು ಮತ್ತು ಅವನ ಪ್ರತಿಸ್ಪರ್ಧಿಗಳು ಕ್ರಿ. ಶ. ೬೫೬ರಲ್ಲಿ ಅವನ ಕೊಲೆ ಮಾಡಿದರು. ಅವನ ಬಳಿಕ ಪೈಗಂಬರನ ಮಗಳಾದ ಫಾತಿಮಾ ಇವಳ ಗಂಡ ಅಲಿಯು ಕಲೀಫನಾದನು. ಅವನು ನಾಲ್ಕನೇ ಕಲೀಫನು. ಕ್ರಿ. ಶ. ೬೬೧ರಲ್ಲಿ ಇವನೂ ಕೊಲ್ಲಲ್ಪಟ್ಟನು. ಈ ಮೊದಲ ನಾಲ್ವರು ಕಲೀಫರು ಸರಿಯಾಗಿ ಮಾರ್ಗದರ್ಶನ ಪಡೆದಿರುವ ಕಲೀಫರೆಂದು ಕರೆಯಲ್ಪಟ್ಟಿರುವರು. ಇದಕ್ಕೆ ಕಾರಣವೇನೆಂದರೆ ಅವರು ಪೈಗಂಬರನ ಸಂಗಡ ಕೆಲವು ಕಾಲ ಬಾಳಿದ್ದರು.

ಪೈಗಂಬರನ ಮರಣದ ಕಾಲದಲ್ಲಿ ದೈವಿಕ ಸಂದೇಶಗಳು ಕೆಲವರ ನೆನಪಿನಲ್ಲಿ ಮಾತ್ರ ಉಳಿದಿದ್ದವು. ಈ ಯುಗದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಅಲ್ಲಲ್ಲಿ ಹರಡಿ ಹೋದ ದೈವಿಕ ಸಂದೇಶಗಳನ್ನು ಕ್ರಮಬದ್ಧವಾಗಿ ಒಂದುಗೂಡಿಸಿ ಅವುಗಳನ್ನು ಬರೆದಿಟ್ಟ ಪವಿತ್ರ ಗ್ರಂಥವಾದ ಕುರಾನಿನ ನಿರ್ಮಾಣವಾಯಿತು. ಕುರಾನಿನ ಪ್ರಥಮ ಸಂಗ್ರಹವು ಝೈದ್ ಎಂಬವನಿಂದ ಮಾಡಲ್ಪಟ್ಟಿತು. ಇವನು ಪೈಗಂಬರನ ಒಬ್ಬ ಅತ್ಯಂತ ನಿಕಟವರ್ತಿಯಾಗಿದ್ದನು. ಈ ಕೆಲಸವು ಅಬುಬಕರ ಎಂಬವನ ಅಧಿಕಾರ ಕಾಲದಲ್ಲಿ ನಡೆಯಿತು. ಆದರೆ ಕೆಲವು ಕಾಲದ ಬಳಿಕ ಈ ಸಂಗ್ರಹವು ದೋಷಯುಕ್ತವೆಂದು ಎಣಿಸಲಾಯಿತು. ಏಕೆಂದರೆ ಎಷ್ಟೋ ಕಡೆಗಳಲ್ಲಿ ಅದು ಆತ್ಮವಿರೋಧಿಯಾಗಿತ್ತು. ಮೂರನೇ ಕಲೀಫನಾದ ಉಸ್ಮಾನನು ಇದನ್ನು ತಿದ್ದುಪಡಿ ಮಾಡಿ ಮತ್ತೊಮ್ಮೆ ಬರೆಯುವಂತೆ ಝೈದ್‌ನಿಗೆ ಹೇಳಿದನು. ಕುರಾನಿನ ಮೊದಲನೇ ಆವರ್ತಿಯನ್ನು ಅವನು ನಾಶಪಡಿಸಿದನು. ಹೀಗೆ ಇಂದು ನಮ್ಮ ಮುಂದಿರುವ ಕುರಾನಿನ ಆವೃತ್ತಿಯು ಉಸ್ಮಾನನಿಂದ ನಿರ್ಮಿಸಲ್ಪಟ್ಟಿರುವ ಆವೃತ್ತಿಯಾಗಿದೆ. ಈ ಯುಗದ ಇನ್ನೊಂದು ಪ್ರಮುಖ ವೈಶಿಷ್ಟ್ಯವೆಂದರೆ ಪೈಗಂಬರನ ಪರಂಪರೆಯನ್ನು ಮುಂದುವರಿಸುವ ಒಂದು ಪ್ರಯತ್ನವುಂಟಾಯಿತು. ಹೀಗೆ ಮಹಮದೀಯ ಕಾನೂನಿನ ಬೆಳವಣಿಗೆಯ ಹಂತದಲ್ಲಿ ಕಾನೂನಿನ ಪ್ರಮುಖ ಮೂಲವೆಂದರೆ ಕುರಾನ್ ಮತ್ತು ಪರಂಪರೆಗಳು ನ್ಯಾಯದ ಆಡಳಿತವು ಎರಡನೇ ಕಲೀಫನಾದ ಉಮರನ ಕಾಲದಲ್ಲಿ ಬೆಳವಣಿಗೆಯಾಯಿತು. ಕಾನೂನು ಸರ್ವೋಚ್ಚವಾಗಿರುತ್ತದೆ. ಮತ್ತು ಅದು ಕಾರ್ಯಕಾರೀ ಪ್ರಾಧಿಕಾರಕ್ಕಿಂತಲೂ ಮೇಲ್ಪಟ್ಟದ್ದು ಎಂಬುದಾಗಿ ಇವನು ಘೋಷಣೆ ಮಾಡಿದ್ದನು.

III) ತೃತೀಯ ಯುಗ (The Third Period, 661-900 A.D.

ನಾಲ್ಕನೇ ಹಾಗೂ ಸರಿಯಾಗಿ ಮಾರ್ಗದರ್ಶನ ಪಡೆದಿರುವ ಕಲೀಫನಾಗಿರುವ ಅಲಿಗೆ ಇಬ್ಬರು ಮಗಂದಿರಿದ್ದರು. ಅವರ ಹೆಸರು ಹಸನ್ ಮತ್ತು ಹುಸೇನ್

ಎಂಬುದಾಗಿತ್ತು. ಅಲಿಯು ಮರಣದ ಬಳಿಕ ಹಸನ್‌ನನ್ನು ಕಲೀಫ್ ಮಾಡ ಲಾಯಿತು. ಆದರೆ ಹಸನ್‌ನು ಒಬ್ಬ ಸಂತನಾಗಿದ್ದನು ಮತ್ತು ಅವನಿಗೆ ರಾಜ ಕಾರಣವು ಸೇರುತ್ತಿರಲಿಲ್ಲ. ಆದುದರಿಂದ ಅವನು ಉಮರ್ ಕುಟುಂಬದ ಮೌವಿಯ (Muavia) ಎಂಬವನ ಪರವಾಗಿ ತನ್ನ ಸ್ಥಾನವನ್ನು ಬಿಟ್ಟುಕೊಟ್ಟನು. ಹೀಗೆ ಮೌವಿಯು ಎಂಬವನು ಅವನ ಬಳಿಕ ಕಲೀಫನಾದನು. ಅವನಿಂದ ಉಮೇರ್ ಮನೆ ತನದ ಆರಂಭವಾಯಿತು. ಅವನ ಅಧಿಕಾರದ ಅವಧಿಯಲ್ಲಿ ಎರಡು ಮಹತ್ವದ ಸಂಗತಿಗಳು ನಡೆದವು. ಮೊದಲನೆಯದಾಗಿ ಕಲೀಫೇಟ್ ಇದರ ಪೀಠವು ಮದೀನಾ ದಿಂದ ಡಮಸ್ಕಸ ಎಂಬಲ್ಲಿಗೆ ವರ್ಗಾಯಿಸಲಾಯಿತು. ಎರಡನೆಯದಾಗಿ, ಈತನಕ ಚುನಾವಣೆಯಿಂದ ನಿರ್ಣಯಿಸಲಾಗುತ್ತಿರುವ ಕಲೀಫನ ಅಧಿಕಾರವು ಆನುವಂಶಿಕ ವಾಯಿತು. ಉತ್ತರಾಧಿಕಾರದ ನಿಯಮದ ಪ್ರಕಾರ ಮೌವಿಯ ಮಗ ಎಜಿದ್ (Yezid) ಎಂಬವನು ಮುಸ್ಲಿಮ್ ಸಾಮ್ರಾಜ್ಯದ ಎರಡನೇ ಪ್ರಮುಖನಾದನು. ಇದೇ ಕಾಲದಲ್ಲಿ ಎಜಿದ್ ಇವನ ಪ್ರೇರಣೆಯಿಂದ ಹಸನ್‌ನ ಪತ್ನಿಯು ಹಸನ್ನನಿಗೆ ವಿಷಹಾಕಿ ಅವನನ್ನು ಕೊಲೆ ಮಾಡಿದಳು. ಅಲಿಯು ಎರಡನೆಯ ಮಗನಾದ ಹುಸೇನನು ಎಜಿದ್ ಇವನ ವಿರುದ್ಧ ಬಂಡಾಯ ಹೂಡಿದನು. ಅವನೂ ಸಹ ನಿಷ್ಕರುಣೆಯಿಂದ ಖರ್‌ಬಾಲಾ ಎಂಬಲ್ಲಿ ಕೊಲ್ಲಲ್ಪಟ್ಟನು. ಉಮಾಯದರ ಅಧಿಕಾರಾವಧಿಯಲ್ಲಿ ಕಲಿಫೇಟ್ ಇದು ರಾಜತ್ವವಾಯಿತು. ಆ ರಾಜರು ಕಾನೂನನ್ನು ಬೆಳೆಸುವುದರಲ್ಲಿ ಅಷ್ಟೊಂದು ಆಸಕ್ತರಾಗದೇ ತಮ್ಮ ಸಾಮ್ರಾಜ್ಯವನ್ನು ಬೆಳೆಸುವುದರಲ್ಲೇ ಹೆಚ್ಚಿನ ಕಾಲವನ್ನು ಕಳೆದರು. ಕ್ರಿ.ಶ. ೭೫೦ರಲ್ಲಿ ಉಮಾಯ್‌ನ ಮನೆತನವನ್ನು ಅಬಾಸಿದರು ವಶಪಡಿಸಿಕೊಂಡರು. ಇವರು ಪೈಗಂಬರನ ಸೋದರಮಾವನ ವಂಶಜರಾಗಿದ್ದರು. ಅಬಾಸಿದರು ಬಗದಾದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿದರು ಮತ್ತು ಮುಸ್ಲಿಮ್ ಸಾಮ್ರಾಜ್ಯದ ಪ್ರಮುಖತನವನ್ನೂ ಘೋಷಿಸಿದರು.

ಉಮಾಯದರ ಶಾಸನ ಕಾಲದಲ್ಲಿ ಕಾನೂನಿನ ಬೆಳವಣಿಗೆಯಾಗಲಿಲ್ಲ. ಇದೇ ರೀತಿಯಲ್ಲಿ ಅಬ್ಬಾಸಿದರ ಕಾಲದಲ್ಲೂ ಸಹ ಕಾನೂನಿನ ಕ್ಷೇತ್ರದಲ್ಲಿ ಯಾವತ್ತೂ ಬೆಳವಣಿಗೆಯಾಗಲಿಲ್ಲ. ರಾಜ್ಯದ ಪ್ರಾಧಿಕಾರವು ಕಾನೂನನ್ನು ಚರ್ಚಿಸುತ್ತಿದ್ದಿಲ್ಲವಾದುದರಿಂದ ಮಕ್ಕಾ, ಮದಿನಾ ಮತ್ತು ಕುಫಾ ಇಲ್ಲಿಯ ವಿದ್ವಾಂಸರು ಖಾಸಗಿಯಾಗಿ ಕಾನೂನಿನ ಬಗ್ಗೆ ವಿಚಾರ ವಿನಿಮಯ ನಡೆಸುತ್ತಿದ್ದರು. ವೈಯಕ್ತಿಕವಾಗಿ ವಿದ್ವಾಂಸರು ಕಾನೂನಿನ ಅಧ್ಯಯನ ನಡೆಸಿದುದರ ಪರಿಣಾಮವಾಗಿ ಪರಸ್ಪರ ವಿರೋಧಿಯಾದ ಅಭಿಪ್ರಾಯಗಳು ಉಂಟಾಗತೊಡಗಿದವು. ಪ್ರತಿಯೊಬ್ಬ ವಿದ್ವಾಂಸನು ತಾನು ಕಾನೂನಿಗೆ ಕೊಟ್ಟಿರುವ ಅರ್ಥವು ಸರಿಯಾದುದೆಂದು ಸಾಧಿಸ ತೊಡಗಿದನು. ವಿದ್ವಾಂಸರೊಳಗಿನ ಈ ವ್ಯತ್ಯಾಸದಿಂದಾಗಿ ಸುನ್ನಿ ಪಂಥದ ಅನೇಕ ಪರಂಪರೆಗಳು ಅಸ್ತಿತ್ವಕ್ಕೆ ಬಂದವು. ಸುನ್ನಿಗಳು ನಾಲ್ಕು ಉಪಪಂಥಗಳಲ್ಲಿ ವಿಭಜಿತರಾದರು. ಆ ಉಪಪಂಥಗಳ ಹೆಸರು ಹನಫಿ, ಸಫೀ, ಮಲ್ಲೀಕಿ ಮತ್ತು ಹನಬಲಿ ಆಗಿವೆ. ಈ ಉಪಪಂಥಗಳಿಗೆ ಆಯಾ ಪಂಥದ ವಿದ್ವಾಂಸನ ಹೆಸರು ಕೊಡಲಾಗಿದೆ.

ಇದೇ ರೀತಿಯಲ್ಲಿ ಸಿಯಾ ಪಂಥದವರೂ ಸಹ ಇಸ್ನಾ ಅಶಾರಿಯಾ, ಇಸ್ಮಾಯಿಲಿಯಾ ಮತ್ತು ಜೈದೀ ಎಂಬ ಉಪಪಂಥಗಳಲ್ಲಿ ವಿಭಜಿತರಾದರು. ಮಹಮದೀಯ ಕಾನೂನಿನ ಬೆಳವಣಿಗೆಯ ದೃಷ್ಟಿಯಲ್ಲಿ ಇದು ತುಂಬಾ ಮಹತ್ವದ ಯುಗವಾಗಿರುತ್ತದೆ. ಮೊದಲನೆಯದಾಗಿ ಪೈಗಂಬರನ ಅನೇಕ ಪರಂಪರೆಗಳನ್ನು ಒಂದುಗೂಡಿಸಿ ಅವುಗಳನ್ನು ಪರಿಶೀಲಿಸಲಾಯಿತು. ಕೇವಲ ಆಧಾರವುಳ್ಳ ಪರಂಪರೆಗಳನ್ನು ಕಾನೂನು ಎಂದು ಸ್ವೀಕರಿಸಲಾಯಿತು. ಈ ಅವಧಿಯಲ್ಲಿ ಮಾಡಲಾದ ಸಂಗ್ರಹಗಳಲ್ಲಿ ಬುಖಾರಿ, ಮುಸ್ಲಿಮ್ ಮತ್ತು ಮಲೀಕ್ ಇರ್ನ್–ಅನಸ್ ಎಂಬುವರು ಮಾಡಿರುವ ಸಂಗ್ರಹಗಳು ಆಧಾರವುಳ್ಳವುಗಳೆಂದು ಎಣಿಸಲ್ಪಡುತ್ತವೆ. ಎರಡನೆಯದಾಗಿ ಕುರಾನಿನ ಮೂಲ ಪಾಠದಲ್ಲಿ ಅಥವಾ ಪರಂಪರೆಗಳಲ್ಲಿ ಇಲ್ಲದಿರುವ ಒಂದು ಕಾನೂನನ್ನು ಈ ಕಾಲದ ನ್ಯಾಯದರ್ಶಿಗಳು ವಿಚಾರ ವಿನಿಮಯ ಮತ್ತು ತರ್ಕದಿಂದ ನಿರ್ಮಿಸಿದರು. ಮುಸ್ಲಿಮ್ ಸಮಾಜವು ನಿರೀಕ್ಷೆಗಿಂತ ಹೆಚ್ಚು ಬೆಳವಣಿಗೆಯಾಗಿ ವೈವಿಧ್ಯತೆಯಿಂದ ಕೂಡಿರುವ ಕಾರಣ ಕುರಾನ್ ಮತ್ತು ಪರಂಪರೆಗಳು ಆ ಸಮಾಜದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥವಾದವು. ಇಂತಹ ಪರಿಸ್ಥಿತಿಗಳಲ್ಲಿ ಆ ಎರಡು ಪಠ್ಯಗಳ ಮೇಲೆ ಆಧಾರವಾಗಿ ಒಂದು ಸೈದ್ಧಾಂತಿಕ ಕಾನೂನಿನ ನಿರ್ಮಾಣದ ಅವಶ್ಯಕತೆಯುಂಟಾಯಿತು. ಇಲ್ಲಿ ಅನುಸರಿಸಲಾದ ಒಂದನೆಯ ರೀತಿಗಳು ಯಾವುವೆಂದರೆ ನ್ಯಾಯದರ್ಶಿಗಳ ಏಕಾಭಿಪ್ರಾಯದಿಂದ ಒಂದು ಕಾನೂನನ್ನು ನಿರ್ಮಿಸುವದು. ಎರಡನೇ ರೀತಿಯ ಪ್ರಕಾರ ಕುರಾನ್ ಅಥವಾ ಪರಂಪರೆಗಳ ಪಠ್ಯಗಳ ಆಧಾರದ ಮೇಲೆ ಆ ಕಾಲದಲ್ಲಿ ಯಾವ ಸ್ಥಿತಿಗಳಿಗೆ ಆ ಕಾನೂನು ಅನ್ವಯವಾಗುತ್ತಿತ್ತೋ ಅದೇ ರೀತಿಯ ಸ್ಥಿತಿಗಳಿಗೆ ಒಂದು ಕಾನೂನು ಮಾಡುವದು. ಇದನ್ನು ಕ್ವಿಯಾ (qiyas) ಎಂದು ಕರೆಯಲಾಗುತ್ತದೆ. ಈ ಎರಡೂ ರೀತಿಗಳಿಂದ ಒಂದು ಅತ್ಯುತ್ತಮ ಕಾನೂನಿನ ನಿರ್ಮಾಣವಾಯಿತು. ನ್ಯಾಯಶಾಸ್ತ್ರದ ಹೊಸ ಪರಿಕಲ್ಪನೆಗಳಾದ ನೀತಿ ಸಮ್ಮತತೆ, ಅನುಮಾನ, ಸಾರ್ವಜನಿಕ ಕಲ್ಯಾಣ ಇತ್ಯಾದಿ ಹೊಸ ಪರಿಕಲ್ಪನೆಗಳು ಇದೇ ಕಾಲದಲ್ಲಿ ನಿರ್ಮಿಸಲ್ಪಟ್ಟವು.

ನಾಲ್ಕನೆಯ ಯುಗ (The fourth Period, 900–1924 A.D.)

ಮುಸ್ಲಿಂ ಕಾನೂನಿನ ಇತಿಹಾಸದಲ್ಲಿ ಈ ಯುಗವು ನಾಲ್ಕು ಸುನ್ನಿ ಪರಂಪರೆಗಳಿಂದ ಆರಂಭವಾಗಿ ಕ್ರಿ. ಶ. ೧೯೨೪ರ ತನಕ ವಿಸ್ತರಿಸುತ್ತದೆ. ಅಭಾಸಿತರು ಐದು ಶತಮಾನಗಳ ಕಾಲ ಅಧಿಕಾರದಲ್ಲಿದ್ದರು ಮತ್ತು ಕ್ರಿ. ಶ. ೧೨೫೮ರಲ್ಲಿ ಮೊಗಲರಿಂದ ಅವರ ಆಡಳಿತವು ಕೊನೆಗೊಳಿಸಲ್ಪಟ್ಟಿತು. ಕೆಲವು ಕಾಲ ಸುನ್ನಿ ಜನಾಂಗಕ್ಕೆ ಕಲೀಫನಿರಲಿಲ್ಲ. ಕ್ರಿ. ಶ. ೧೨೬೧ರಲ್ಲಿ ಅಬ್ದುಲ್ ಕಾಸಿಮ್ ಅಹಮದ್ ಎಂಬವನನ್ನು ಕಲೀಫ್ ಮಾಡಲಾಯಿತು ಮತ್ತು ಅವನ ರಾಜಧಾನಿಯು ಕೆರೋದಲ್ಲಿತ್ತು. ಈ ರಾಜವಂಶವು ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲ ಅಧಿಕಾರದಲ್ಲಿತ್ತು. ಈ ಯುಗದ ಒಂದು ವೈಶಿಷ್ಟ್ಯವೆಂದರೆ ಕಲೀಫರಿಗೆ ಆಡಳಿತದ ಶಕ್ತಿಯಿದ್ದಿರಲಿಲ್ಲ.

೧೬ನೇ ಶತಮಾನದ ಆರಂಭದಲ್ಲಿ ಬಿಟ್ಟೊಮನ್ ಎಂಬವರನ್ನು ಈ ಸಮಾಜದ ಪ್ರಮುಖರೆಂಬುದಾಗಿ ನೇಮಿಸಲಾಯಿತು. ಇದರಿಂದಾಗಿ ಕಲಿಫೇಟ್ ಇದು ಬಿಟ್ಟೊಮನ್‌ರಿಗೆ ಸಂಕ್ರಾಂತವಾಯಿತು ಮತ್ತು ಕಾನ್‌ಸ್ಟಾಂಟಿನೋಪಲ್ ಇದು ಕಲಿಫಟ್‌ನ ಪೀಠವಾಯಿತು. ಮುಂದೆ ೧೯೨೨ರಲ್ಲಿ ಮುಸ್ತಾಫಾ ಕೆಮಲ್ ಅತಾತುರ್ಕ್ ಎಂಬವನು ಟರ್ಕಿಯ ಸಲ್ತಾನಿಯತ್ವವನ್ನು ರದ್ದುಗೊಳಿಸಿದನು. ೧೯೨೪ರಲ್ಲಿ ಖಲೀಫನನ್ನೂ ಇವನು ಕೊನೆಗೊಳಿಸಿದನು.

ಮಹಮದೀಯ ಕಾನೂನಿನ ಬೆಳವಣಿಗೆಯ ದೃಷ್ಟಿಯಿಂದ ಈ ಯುಗವು ಅಷ್ಟೇನೂ ಮಹತ್ವದ್ದಲ್ಲ. ಏಕೆಂದರೆ ಈ ಹಂತದಲ್ಲಿ ಮುಸ್ಲಿಮ್ ಕಾನೂನು ಬೆಳವಣಿಗೆಯಾಗುವದು ನಿಂತುಹೋಗಿತ್ತು. ಇದಕ್ಕೆ ಕಾರಣವೇನೆಂದರೆ ನಾಲ್ಕು ಸುನ್ನಿ ಪರಂಪರೆಗಳ ಪ್ರವರ್ತಕರ ಮರಣದ ಬಳಿಕ ಯಾವನೇ ಒಬ್ಬ ದೊಡ್ಡ ವಿದ್ವಾಂಸನ ಹೆಸರು ಕೇಳಿ ಬರಲಿಲ್ಲ ಮತ್ತು ಕಾನೂನಿಗೆ ಸಂಬಂಧಪಟ್ಟ ಹೊಸ ಸಿದ್ಧಾಂತಗಳು ನಿರ್ಮಿಸಲ್ಪಡಲಿಲ್ಲ. ಯಾವನೇ ಒಬ್ಬ ನ್ಯಾಯದರ್ಶಿಯು ವೈಯಕ್ತಿಕ ವಾಗಿ ನಿರ್ವಚನ ಮಾಡಲು ಸಕ್ಷಮನಲ್ಲ ಎಂಬ ಒಂದು ಧೋರಣೆಯು ಪ್ರಚಲಿತ ವಾದುದರಿಂದ ನ್ಯಾಯದರ್ಶಿಗಳ ಅಭಿಪ್ರಾಯದಿಂದ (Ijtihad) ಕಾನೂನಿನ ಹೊಸ ನಿಯಮಗಳನ್ನು ನಿರ್ಮಿಸುವಂತಿರಲಿಲ್ಲ. ಇದರ ಪರಿಣಾಮವಾಗಿ ಆ ನಾಲ್ಕು ನ್ಯಾಯದರ್ಶಿಗಳು ಕಾನೂನಿನ ಯಾವ ನಿಯಮಗಳನ್ನು ಹಾಕಿಕೊಟ್ಟಿದ್ದರೋ ಆ ನಿಯಮಗಳನ್ನು ಅನುಸರಿಸಲಾಯಿತು. ಈ ರೀತಿಯಿಂದ ಅನುಸರಿಸುವಿಕೆಯ (Qualid) ಸಿದ್ಧಾಂತವು ಬೆಳವಣಿಗೆಯಾಯಿತು. ಈ ಸಿದ್ಧಾಂತದ ಪ್ರಕಾರ ಆ ಪ್ರಸಿದ್ಧ ನ್ಯಾಯದರ್ಶಿಗಳ ಅಭಿಪ್ರಾಯವು ಈ ಯುಗದ ವಿದ್ವಾಂಸರಿಂದ ಅನುಸರಿಸ ಲ್ಪಟ್ಟಿತು ಮತ್ತು ಅವರು ಇದಕ್ಕೆ ಏನನ್ನೂ ಕೂಡಿಸಲಿಲ್ಲ. ಆದರೆ ಈ ಕಾಲದ ವಿದ್ವಾಂಸರು ಕಾನೂನಿನ ಮೇಲೆ ಉತ್ತಮ ಭಾಷ್ಯಗಳನ್ನು ಬರೆದಿರುವರು. ಈ ವಿದ್ವಾಂಸರು ಕೆಳಮಟ್ಟದವರಾಗಿದ್ದುದರಿಂದ ಕಾನೂನು ವಿಷಯಗಳ ಮೇಲೆ ಇವರು ಸ್ವತಂತ್ರವಾದ ತಮ್ಮ ನಿರ್ಣಯವನ್ನು ಕೊಡುವಂತಿಲ್ಲ; ಆದರೆ ಆಗಲೇ ಮಾಡಲ್ಪಟ್ಟ ಒಂದು ಕಾನೂನಿನ ಮೇಲೆ ಇವರು ಒಂದು ವಿವರಣೆಯ ರೀತಿಯಿಂದ ತಮ್ಮ ಅಭಿ ಪ್ರಾಯಗಳನ್ನು ವ್ಯಕ್ತಪಡಿಸಿರುವರು. ಈ ಕೆಳಮಟ್ಟದ ವಿದ್ವಾಂಸರ ಅಭಿಪ್ರಾಯ ಗಳನ್ನು 'ಫಾತ್ವಾ (Fatwas) ಎಂದು ಕರೆಯಲಾಗುತ್ತದೆ. ಫಾತ್ವಾಗಳನ್ನು ಮಹಮದೀಯ ಕಾನೂನು ಎಂದು ಎಣಿಸಲಾಗುವುದಿಲ್ಲ, ಆದರೆ ಕಾನೂನನ್ನು ವಿವರಿಸುವದರಲ್ಲಿ ಇವರ ಅಭಿಪ್ರಾಯವು ತುಂಬಾ ಮಹತ್ವದ್ದಾಗಿದೆ. ಫಾತ್ವಾ ಅಲಮ್‌ಗಿರಿ (Fatwai Alamgiri) ಮತ್ತು ಖಾತ್ವಾ—ಕಾದಿ ಖಾನ್ (Katwai qadi Khan) ಇವು ಕೆಲವು ಪ್ರಮುಖ ಫಾತ್ವಾಗಳಾಗಿವೆ.

V) ಐದನೇ ಯುಗ (The fifth period, 1924 A.D. to present day)

ಕ್ರಿ. ಶ. ೧೯೨೪ರಲ್ಲಿ ಕಲಿಫೇಟಿನ ರದ್ದುಗೊಳಿಸುವಿಕೆಯಿಂದಾಗಿ ಇಸ್ಲಾಮೀ ಕಾನೂನಿನ ಆಧುನಿಕತ್ವವು ಆರಂಭವಾಯಿತು. ಈ ಯುಗವು ಇನ್ನೂ ಮುಂದುವರಿಯುತ್ತಾ ಇದೆ. ೧೯೨೪ರ ಬಳಿಕ ಇಸ್ಲಾಮಿನ ಪರಂಪರಾಗತ ಕಾನೂನನ್ನು ಆಡಳಿತಗೊಳಿಸಲು ಕಲೀಫನಂತಹ ಧರ್ಮಾಧಿಕಾರಿಯಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಇಸ್ಲಾಮೀ ಕಾನೂನನ್ನು ಶರಿಯತ್‌ನಿಂದ ಪ್ರತ್ಯೇಕಿಸಲಾಗಿದೆ. ಇಸ್ಲಾಮನ್ನು ಅನುಷ್ಠಾನಗೊಳಿಸಲು ಯಾವತ್ತೂ ಒಂದು ಸಕ್ಷಮ ಪ್ರಾಧಿಕಾರವಿಲ್ಲದ ಕಾರಣ ಅದೊಂದು ಕೇವಲ ನಡತೆಗೆ ಸಂಬಂಧಪಟ್ಟ ನೀತಿ ಸಂಹಿತೆಯಾಗಿದೆ. ಆದರೆ ಮಹಮದೀಯ ಕಾನೂನಿಗೆ ರಾಜ್ಯದ ಮನ್ನಣೆ ಸಿಕ್ಕಿದುದರಿಂದಾಗಿ ಅದು ನ್ಯಾಯಿಕವಾಗಿ ತೆಗೆದುಕೊಳ್ಳಲಾಗುತ್ತದೆ. ಮಹಮದೀಯ ಕಾನೂನಿನ ನ್ಯಾಯಿಕ ನಿರ್ವಚನವು ಯುರೋಪಿನ ರಾಜ್ಯಗಳ ಕಾನೂನಿನ ಶಾಸ್ತ್ರದಿಂದ ಸಾಕಷ್ಟು ಪ್ರಭಾವಿತವಾಗಿದೆ. ಹೀಗೆ ಆಧುನಿಕ ಇಸ್ಲಾಮೀ ರಾಜ್ಯಗಳಾದ ಟರ್ಕಿ, ಟುನೀಷಯಾ, ಈಜಿಪ್ತ ಇವು ತಮ್ಮ ಕಾನೂನಿನಲ್ಲಿ ಶರಿಯತ್‌ನ ಸ್ವರೂಪವನ್ನು ಇಟ್ಟುಕೊಂಡು ಆಧುನಿಕ ಸಮಾಜದ ಅವಶ್ಯಕತೆಗೆ ಅನುಗುಣವಾಗುವಂತೆ ಕಾನೂನನ್ನು ಕ್ರೋಢೀಕರಿಸಲು ಪ್ರಯತ್ನಿಸಿವೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಸಂಗತಿಯೆಂದರೆ ಹಿಂದೆ ಮಾನವ ಜೀವನದ ಎಲ್ಲಾ ಹಂತಗಳು ಪರಂಪರಾಗತ ಇಸ್ಲಾಮಿ ಕಾನೂನಿನಿಂದ ವಿನಿಯಮಿತವಾಗುತ್ತಿದ್ದವು, ಆದರೆ ಈಗ ಇಸ್ಲಾಮೀ ಕಾನೂನಿನ ಪರಿಧಿಯನ್ನು ಸಾಕಷ್ಟು ಕಡಿಮೆ ಮಾಡಿ ಮುಸ್ಲಿಮ್ ರಾಜ್ಯಗಳಲ್ಲಿ ದಿವಾನೀ ಮತ್ತು ಅಪರಾಧಿಕ ಕಾನೂನಿಗೆ ಸಂಬಂಧಪಟ್ಟ ಆಧುನಿಕ ಸಂಹಿತೆಗಳು ನಿರ್ಮಿಸಲಾಗಿವೆ.

ಭಾರತದಲ್ಲಿ ಬ್ರಿಟಿಶ್ ಶಾಸನವು ಆರಂಭವಾಗುವದಕ್ಕಿಂತ ಮೊದಲು ಮೊಗಲ್ ಸಾಮ್ರಾಟರು ಮುಸ್ಲಿಮ್ ಕಾನೂನನ್ನು ರಾಜ್ಯದ ಕಾನೂನಾಗಿ ಅನ್ವಯಗೊಳಿಸಿದರು ಮತ್ತು ಈ ಕಾನೂನು ಎಲ್ಲಾ ಕ್ಷೇತ್ರಗಳಿಗೂ ಅನ್ವಯಗೊಳಿಸಲಾಗುತ್ತಿತ್ತು. ಬ್ರಿಟಿಷ್ ಸರಕಾರವು ಈ ಪದ್ಧತಿಯನ್ನು ಬದಲಾಯಿಸಲು ಅನೇಕ ಅಧಿನಿಯಮಗಳನ್ನು ಅಧಿನಿಯಮಿತಗೊಳಿಸಿತು ಮತ್ತು ಮತೀಯವಲ್ಲದ ವಿಷಯಗಳಲ್ಲಿ ಮುಸಲ್ಮಾನರಿಗೆ ಮತ್ತು ಮುಸಲ್ಮಾನೇತರರಿಗೆ ಸಮಾನವಾಗಿ ಈ ಅಧಿನಿಯಮಗಳನ್ನು ಅನ್ವಯಗೊಳಿಸಲಾಯಿತು. ಆದುದರಿಂದ ಭಾರತದಲ್ಲಿ ಆಧುನಿಕ ಯುಗವು ಬ್ರಿಟಿಷ್ ನ್ಯಾಯಾಲಯಗಳ ಸ್ಥಾಪನೆಯೊಂದಿಗೆ ಆರಂಭವಾಗುತ್ತದೆ. ಬ್ರಿಟಿಷ್ ನ್ಯಾಯಾಲಯಗಳ ಒಂದು ವೈಶಿಷ್ಟ್ಯವೇನೆಂದರೆ ಅವು ಮುಸ್ಲಿಮ್ ಕಾನೂನನ್ನು ಮುಸಲ್ಮಾನರ ಪ್ರತಿಯೊಂದು ವಿಷಯಕ್ಕೆ ಅನ್ವಯಗೊಳಿಸಲಿಲ್ಲ.

ಮುಸ್ಲಿಮ್ ಕಾನೂನಿನ ಪರಂಪರೆಗಳು
(Schools of Muslim Law)

ಮಹಮದ ಪೈಗಂಬರನು ಇಸ್ಲಾಮಿ ರಾಜ್ಯ ಸಂಘಗಳ ಪ್ರಮುಖನೆಂಬು

ದಾಗಿ ಸಾರ್ವತ್ರಿಕವಾಗಿ ಸ್ವೀಕರಿಸಲ್ಪಟ್ಟಿದ್ದನು. ಅವನು ಕಾನೂನಿನ ಮೇಲೆ ಸರ್ವೋಚ್ಚ ಪ್ರಾಧಿಕಾರಿಯಾಗಿದ್ದನು ಮತ್ತು ಇಡೀ ಮುಸ್ಲಿಮ್ ಜನಾಂಗದ ಪ್ರಮುಖ ಆಡಳಿಗಾರನಾಗಿದ್ದನು. ಅವನ ಮರಣದ ಬಳಿಕ ಅವನ ಉತ್ತರಾಧಿಕಾರಿಯು ಯಾರೆಂಬ ಪ್ರಶ್ನೆ ಬಂದಿತ್ತು. ಈ ಸ್ಥಾನಕ್ಕೆ ಚುನಾವಣೆಯಾಗಬೇಕೆಂದು ಹೆಚ್ಚಿನ ಜನರು ಅಭಿಪ್ರಾಯಪಟ್ಟಿದ್ದರು. ಈ ಅಭಿಪ್ರಾಯಕ್ಕೆ ಪೈಗಂಬರನ ಕಿರಿಯ ಪತ್ನಿಯಾದ ಆಯೆಶಾ ಬೇಗಮ್ ಎಂಬವಳಿಂದ ಸಮರ್ಥನೆ ಸಿಕ್ಕಿತ್ತು. ಯಥಾ ಪ್ರಕಾರವಾಗಿ ಒಂದು ಚುನಾವಣೆ ನಡೆಸಲಾಯಿತು ಮತ್ತು ಆದರಲ್ಲಿ ಆಯೆಶಾ ಬೇಗಮ್ ಈಕೆಯ ತಂದೆಯಾದ ಅಬುಬಕರ್ ಎಂಬುವನು ಮೊದಲನೇ ಕಲೀಫನಾಗಿ ಚುನಾಯಿಸಲ್ಪಟ್ಟನು. ಮುಸಲ್ಮಾನರ ಈ ಸಮೂಹದಿಂದ ಸುನ್ನೀ ಪಂಗಡವು ನಿರ್ಮಿಸಲ್ಪಟ್ಟಿತು. ಆದರೆ ಚುನಾವಣೆಯ ರೀತಿಯನ್ನು ಸಮರ್ಥಿಸದಿದ್ದ ಇನ್ನೊಂದು ಸಮೂಹವು ಪೈಗಂಬರನ ಮಗಳಾದ ಫಾತಿಮಾಳ ನೇತ್ರತ್ವದಲ್ಲಿ ಸುನ್ನೀ ದೃಷ್ಟಿಕೋನವನ್ನು ವಿರೋಧಿಸಿತು. ಈ ಪಂಗಡದ ಅಭಿಪ್ರಾಯದಲ್ಲಿ ಕಲೀಫನು ಕೇವಲ ಧಾರ್ಮಿಕ ಪ್ರಮುಖನಾಗಿರಬೇಕಲ್ಲದೆ ಆಡಳಿತದ ನಿಯಂತ್ರಣವನ್ನು ಕೈಯಲ್ಲಿಟ್ಟುಕೊಳ್ಳಬಾರದು. ಪೈಗಂಬರನ ಉತ್ತರಾಧಿಕಾರಿಯು ಒಬ್ಬ ಆಧ್ಯಾತ್ಮಿಕ ವ್ಯಕ್ತಿಯಾಗಿರಬೇಕೆಂದು ಇವರು ವಾದಿಸಿದರು. ಈ ಆಧ್ಯಾತ್ಮಿಕ ಗುಣವು ರಕ್ತದ ಶ್ರೇಷ್ಠತೆಯಿಂದ ಬರುತ್ತದೆ ಮತ್ತು ಮುಹಮದ ಪೈಗಂಬರನಿಗೆ ರಕ್ತದಿಂದ ಸಂಬಂಧಿಸಿರುವ ವ್ಯಕ್ತಿಯು ಅಥವಾ ಅವನ ಕುಟುಂಬದವನು ಮಾತ್ರ ಅವನ ಉತ್ತರಾಧಿಕಾರಿಯಾಗಲು ಸಮರ್ಥನೆಂದು ಈ ಪಂಗಡವು ವಾದಿಸಿತು. ಹೀಗೆ ಫಾತಿಮಾಳ ನೇತ್ರತ್ವದಲ್ಲಿರುವ ಸಮೂಹವು ಚುನಾವಣಾ ಪದ್ಧತಿಯನ್ನು ತಿರಸ್ಕರಿಸಿ ಉತ್ತರಾಧಿಕಾರದ ಪದ್ಧತಿಯನ್ನು ಎತ್ತಿ ಹಿಡಿಯಿತು. ಇದರ ಪರಿಣಾಮವಾಗಿ ಪೈಗಂಬರನ ಅಳಿಯ (ಪಾಥಿಮಾಳ ಗಂಡ) ಅಲಿ ಎಂಬವನು ಈ ಪಂಗಡದಿಂದ ಮೊದಲನೇ ಇಮಾಮನಾಗಿ ಹೆಸರಿಸಲ್ಪಟ್ಟನು. ಇವರು ಬಹು ಸಂಖ್ಯಾತರಿಂದ ಪ್ರತ್ಯೇಕವಾಗಿ ಶಿಯಾ (Shia) ಎಂಬ ಒಂದು ಪಂಗಡವನ್ನು ನಿರ್ಮಿಸಿದರು. ಮುಸಲ್ಮಾನರನ್ನು ಶಿಯಾ ಮತ್ತು ಸುನ್ನಿ ಎಂಬ ಎರಡು ಪಂಗಡಗಳಲ್ಲಿ ವಿಭಜಿಸಲು ಕಾರಣವೇನೆಂದರೆ ಮುಹಮದ ಪೈಗಂಬರನ ಉತ್ತರಾಧಿಕಾರಿಯನ್ನು ಯಾವ ರೀತಿಯಲ್ಲಿ ನೇಮಿಸುವದೆಂಬುದಾಗಿ ಅವರಲ್ಲುಂಟಾದ ವ್ಯತ್ಯಾಸವೇ ಕಾರಣವಾಗಿರುತ್ತದೆ. ಆದುದರಿಂದ ಮೂಲತಃ. ಇಸ್ಲಾಮಿನ ವಿಭಜನೆಯು ಒಂದು ರಾಜಕೀಯ ಪ್ರಶ್ನೆಯಿಂದ ಉಂಟಾಗಿತ್ತಾದರೂ ಸಹ ತದನಂತರ ಇದು ಪ್ರತ್ಯೇಕವಾದ ಕಾನೂನೀ ಸಿದ್ಧಾಂತಗಳನ್ನು ನಿರ್ಮಿಸಿದೆ.

ಈ ಎರಡೂ ಪಂಗಡಗಳು ಮುಹಮದೀಯ ಕಾನೂನಿನ ಎರಡು ಪ್ರಮುಖ ಪರಂಪರೆಗಳನ್ನು ನಿರ್ಮಿಸಿವೆ. ಕೆಲವು ಕಾಲದ ಬಳಿಕ ಸುನ್ನಿಗಳು ಮತ್ತು ಕೆಲವು ಉಪಪಂಗಡಗಳಲ್ಲಿ ವಿಭಜಿತರಾದರು. ಈ ರೀತಿಯಾಗಿ ವಿಭಜಿತವಾದ ಸುನ್ನಿ ಪರಂಪರೆಯ ಉಪವಿಭಾಗಗಳು ತಮ್ಮದೇ ಆದ ಕಾನೂನಿನ ಪರಂಪರೆಗಳನ್ನು

ನಿರ್ಮಿಸಿವೆ. ಶಿಯಾರೊಳಗೂ ಇದೇ ರೀತಿಯ ಒಂದು ವಿಭಜನೆಯಾಗಿದೆ. ಈ ಎರಡು ಪಂಗಡಗಳ ಉಪಪಂಗಡಗಳು ಈ ರೀತಿಯಿವೆ.

ಸುನ್ನಿ (SUNNI)

ಹನಾಫಿ (Hanafi) ಮಲ್ಲಿಕಿ (Maliki), ಶಫಿ (Shafei), ಹನಬಾಲಿ (Hanbali).

ಶಿಯಾ (Shia)

ಇತನಾ ಆಶಾರಿಯಾ ಅಥವಾ ಇಮಾಮಿಯಾ (Ithna Asharia or Imamia) ಇಸ್ಮಾಲಿಯಾ ಮತ್ತು ಝಾಯಿದ್ದಿ

ಇಮಾಮಿಯಾ ಉಪಪಂಗಡವು ಅಖ್ಬರಿ (Akhbari) ಮತ್ತು ಯುಸುಲಿ (Usuli) ಎಂಬ ಮತ್ತು ಎರಡು ಉಪಪಂಗಡಗಳಲ್ಲಿ ವಿಭಜನೆಯಾಗಿದೆ. ಇಸ್ಮಾಲಿಯಾ (Ismaila) ಇದು ಖೋಜಾ (Khoja) ಮತ್ತು ಬೊಹರಾ (Bohra) ಈ ಎರಡು ಉಪಪಂಗಡಗಳಲ್ಲಿ ವಿಭಜಿಸಲ್ಪಟ್ಟಿದೆ. ಕೊನೆಯ ಉಪಪಂಗಡವು ಝಾಯಿದ್ದಿ (Zyadi) ಆಗಿದೆ.

ಸುನ್ನಿ ಪರಂಪರೆಗಳು (Sunni Schools)

ಮುಸ್ಲಿಮ್ ಕಾನೂನಿನ ಮೂರನೇ ಹಂತವಾದ ಕ್ರಿ. ಶ. ೬೬೧ರಿಂದ ೯೦೦ರ ತನಕ ಶಾಸಕರು ಕಾನೂನಿನಲ್ಲಿ ಆಸಕ್ತರಾಗಿದ್ದಿಲ್ಲವೆಂಬುದನ್ನು ನಾವು ಈಗಾಗಲೇ ಕಂಡಿರುವೆವು. ಈ ಕಾಲದಲ್ಲಿ ನ್ಯಾಯದರ್ಶಿಗಳು ವೈಯಕ್ತಿಕವಾಗಿ ಕಾನೂನಿನ ಅಧ್ಯಯನ ನಡೆಸುತ್ತಿದ್ದರು. ಅವರು ಕುರಾನಿಗೆ ನ್ಯಾಯಿಕ ನಿರ್ವಚನ ಮಾಡಿ ಮಹಮದೀಯ ಕಾನೂನನ್ನು ಬೆಳೆಸಿದರು. ನ್ಯಾಯದರ್ಶಿಗಳಿಂದಾದ ಈ ವೈಯಕ್ತಿಕ ಅಧ್ಯಯನವು ಕಾನೂನಿನ ನಿಯಮಗಳ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳು ಉಂಟಾಗಲು ಕಾರಣವಾದವು. ಪ್ರತಿಯೊಬ್ಬ ನ್ಯಾಯದರ್ಶಿಯು ತನ್ನ ಸ್ವಂತ ದೃಷ್ಟಿಕೋನದಿಂದ ನಿರ್ವಚನ ಮಾಡುತ್ತಿದ್ದನು ಮತ್ತು ಅವನಿಗೆ ಅನುಯಾಯಿಗಳಿದ್ದು ಈ ಅನುಯಾಯಿಗಳದ್ದೇ ಒಂದು ವಿಶಿಷ್ಟವಾದ ಪರಂಪರೆಯಾಯಿತು. ಈ ರೀತಿಯಾಗಿ ಸುನ್ನೀ ಪಂಗಡವು ನಾಲ್ಕು ಪ್ರಮುಖ ಪಂಗಡಗಳಲ್ಲಿ ವಿಭಜನೆಗೊಳಿಸಲ್ಪಟ್ಟಿತು. ಈ ನಾಲ್ಕೂ ಪರಂಪರೆಗಳ ಸಿದ್ಧಾಂತದೊಳಗೆ ಅಷ್ಟೇನು ವ್ಯತ್ಯಾಸವಿಲ್ಲವಾದರೂ ಸಹ ಅವು ಸೂಕ್ಷ್ಮ ವಿವರಣೆಗಳ ಸಂಬಂಧದಲ್ಲಿ ಒಂದರಿಂದ ಮತ್ತೊಂದು ಬೇರೆಯಾದವು. ಈ ನಾಲ್ಕು ಪರಂಪರೆಗಳ ಹೊರತಾಗಿ ಇನ್ನೂ ಅನೇಕ ಸುನ್ನಿ ಪರಂಪರೆಗಳಿದ್ದವು. ಆದರೆ ಕೇವಲ ನಾಲ್ಕು ಪರಂಪರೆಗಳನ್ನಷ್ಟೇ ಮನ್ನಿಸಲಾಗಿದೆ.

ಹನಫಿ ಪರಂಪರೆ (The Hanafi School)

ಸುನ್ನೀ ಮುಸಲ್ಮಾನರ ಈ ಪರಂಪರೆಗೆ ಅದರ ಪ್ರವರ್ತಕನಾದ ಅಬುಹನೀಫ

ಎಂಬವನ ಹೆಸರಿಡಲಾಗಿದೆ ಮತ್ತು ಮುಸ್ಲಿಮ್ ಕಾನೂನಿನಲ್ಲಿ ಇದು ಅತ್ಯಂತ ಜನ ಪ್ರಿಯವಾದ ಪರಂಪರೆಯಾಗಿದೆ. ಅಬುಹನಫಿ ಇವನು ತನ್ನ ಕಾಲದಲ್ಲಿ ಒಬ್ಬ ಪ್ರಸಿದ್ಧ ವಿದ್ವಾಂಸನಾಗಿದ್ದನು ಮತ್ತು ಅವನು ತನ್ನ ತರ್ಕಬದ್ಧ ವಿಚಾರಣಾ ಶಕ್ತಿ ಮತ್ತು ತಾಂತ್ರಿಕ ಕಾನೂನಿ ವೈಚಾರಿಕತೆಗೆ ಪ್ರಸಿದ್ಧನಾಗಿದ್ದನು. ಅವನ ಜೀವ ಮಾನದಲ್ಲಿ ಅವನು ಜೀವಿಸುತ್ತಿದ್ದ ನಗರವಾದ ಕುಫಾ ಇದು ಮುಸ್ಲಿಮ್ ಕಾನೂನಿನ ಅಧ್ಯಯನದ ಒಂದು ಪ್ರಮುಖ ಸ್ಥಾನವಾಗಿತ್ತು. ಆದುದರಿಂದ ಈ ಪರಂಪರೆ ಯನ್ನು "ಕುಫಾ ಪರಂಪರೆ ಎಂಬುದಾಗಿಯೂ ಕರೆಯಲಾಗುತ್ತದೆ. ಅಬುಹನಿಫನ ಪ್ರಮುಖ ಕೊಡುಗೆಯು ಯಾವುದೆಂದರೆ ಪ್ರತಿಯೊಂದು ಪರಂಪರೆಯನ್ನು ಸ್ವೀಕರಿಸು ವದರ ಬದಲಾಗಿ ಅವನು ಕುರಾನಿನ ಮೂಲ ಪಾಠದಲ್ಲಿರುವ ಕಾನೂನನ್ನು ಸಾದೃಶ ತೆಯ ಅನುಮಾನದಿಂದ ಕಂಡು ಹಿಡಿಯಲು ಪ್ರಯತ್ನಿಸಿದನು. ಈ ರೀತಿಯಾಗಿ ಪರಂಪರೆಯ ಮೇಲೆ ಮೂಢ ನಂಬಿಕೆ ಇಡುವ ಬದಲಾಗಿ ಕುರಾನಿನ ಮೇಲೆ ಆಧಾ ರಿತವಾಗಿರುವ ಖಾಸಗೀ ತೀರ್ಪುಗಳನ್ನು ತರ್ಕಯುಕ್ತವಾಗಿ ವಿವೇಚನೆ ಮಾಡಿದ ಬಳಿಕ ಸ್ವೀಕರಿಸುವದು ಲೇಸೆಂದು ಪ್ರತಿಪಾದಿಸಿದನು. ಬದಲಾವಣೆಗೊಳ್ಳುತ್ತಿರುವ ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಕಾನೂನು ನಿರ್ಮಿಸಲ್ಪಡಬೇಕೆಂದು ಅವನು ಅಭಿಪ್ರಾಯ ಪಟ್ಟಿದ್ದನು. ಕುರಾನಿನಲ್ಲಿ ಇಲ್ಲದಂತಹ ಕಾನೂನಿನ ಅವಶ್ಯ ಕತೆ ಬಿದ್ದಾಗ ಅದನ್ನು ನ್ಯಾಯದರ್ಶಿಗಳ ಏಕಾಭಿಪ್ರಾಯದ ತೀರ್ಪಿನಿಂದ ನಿರ್ಮಿಸ ಬೇಕೆಂದು ಅವನು ಹೇಳಿರುವನು. ಅಸ್ತಿತ್ವದಲ್ಲಿರುವ ಕಾನೂನಿನಿಂದ ನ್ಯಾಯ ಒದಗಿಸುವದು ಅಸಾಧ್ಯವಾದರೆ ನ್ಯಾಯಿಕ ನೀತಿಸಮ್ಮತತೆ (Istihsan) ಇವರ ಸಿದ್ಧಾಂತವನ್ನು ಅನ್ವಯಗೊಳಿಸಿ ಕಾನೂನನ್ನು ನಿರ್ವಚನಗೊಳಿಸಬೇಕೆಂದು ಅವನು ಹೇಳಿರುವನು. ಅವನನ್ನು ಖಾಸಗಿ ನಿರ್ಣಯಗಳ ಸಮರ್ಥಕನೆಂದು ಕರೆದರೆ ಅದರಲ್ಲೇನೂ ತಪ್ಪಾಗದು ಮತ್ತು ಅವನು ಮುಸ್ಲಿಮ್ ನ್ಯಾಯದರ್ಶನದ ಸ್ಥಾಪಕ ನಾಗಿರುವನು. ಅವನ ಇಬ್ಬರು ಶಿಷ್ಯರಾದ ಅಬುಯುಸುಫ್ ಮತ್ತು ಇಮಾಮ್ ಮಹಮದ್ ಇವರು ಸ್ವಲ್ಪ ಮಟ್ಟಿಗೆ ಮಾರ್ಪಾಡು ಮಾಡಿ ಅವನ ಸಿದ್ಧಾಂತವನ್ನು ಮತ್ತಷ್ಟು ವಿಕಸಿತಗೊಳಿಸಿರುವರು.

ಈ ಪರಂಪರೆಯ ವೈಶಿಷ್ಟ್ಯವು ಈ ರೀತಿಯಿದೆ. ಅನೇಕ ಪರಂಪರೆಗಳಲ್ಲಿ ಹನಫಿ ಪರಂಪರೆಯು ಮನ್ನಿಸುವ ರೂಢಿಯಲ್ಲಿ ಯಾವುವೆಂದರೆ ತಮ್ಮ ಮೌಲಿಕತೆಯು ಪರೀಕ್ಷೆಯನ್ನು ಎದುರಿಸುವ ರೂಢಿಗಳು. ಒಂದು ಯುಕ್ತ ಸಂಶಯಕ್ಕಿಂತ ಹೆಚ್ಚು ಪ್ರಮಾಣಿತವಾಗಿಲ್ಲದ ರೂಢಿಗಳನ್ನು ಕಾನೂನೆಂಬುದಾಗಿ ಸ್ವೀಕರಿಸುವಂತಿಲ್ಲ. ಅಬು ಹನೀಫನು ಕೇವಲ ೧೮ ರೂಢಿಗಳನ್ನು ನಂಬಿದ್ದನೆಂದು ಹೇಳಲಾಗುತ್ತದೆ. ಕಿಯಾ ಗಳು (Qiyas) ಮತ್ತು ಇಜ್ಮಾ (Ijma) ಇವುಗಳನ್ನು ಕಾನೂನಿನ ಮೂಲಗಳೆಂದೇ ಇವುಗಳಿಗೆ ಮಹತ್ವ ಕೊಡಲಾಗಿದೆ. ಹನಫಿ ಕಾನೂನಿನ ಪರಂಪರೆಯ ಅನೇಕ ಪ್ರಮುಖ ಸಿದ್ಧಾಂತಗಳು ಕಿಯಾದಿಂದ ಪಡೆಯಲಾಗಿವೆ. ಈ ಪರಂಪರೆಯ ಮೇರೆಗೆ ಇಜ್ಮಾ ಇದು ಯಾವುದೇ ಯುಗದ ನ್ಯಾಯದರ್ಶಿಗಳಿಂದ ನಿರ್ಮಿಸಲ್ಪಡಬಹುದು

ಮತ್ತು ಕಾನೂನಿನ ಒಂದು ಮೂಲವೆಂಬುದಾಗಿ ಅದನ್ನು ಉಪಯೋಗಿಸಬಹುದು. ಇಸ್ತಿಹಾಸನ್ (Istihsan) ಇದರ ಸಿದ್ಧಾಂತವನ್ನು ಕುರಾನ್ ಮತ್ತು ರೂಢಿಗಳ ನಿರ್ವಚನದಲ್ಲಿ ಪ್ರಥಮ ಬಾರಿ ಅನ್ವಯಿಗೊಳಿಸಿರುವದು ಇದೇ ಪರಂಪರೆಯಲ್ಲಾಗಿರುತ್ತದೆ. ಇದೇ ರೀತಿಯಲ್ಲಿ ಕುರಾನಿನ ಮೂಲ ಪಾಠಕ್ಕೆ ವಿರೋಧವಾಗಿಲ್ಲದ ರೂಢಿ ಮತ್ತು ಆಚರಣೆಗಳು ಸಮಾಜದ ಆಚರಣೆಗಳ ಒಂದು ಅಂಗವೆಂಬುದಾಗಿ ಎಣಿಸಲ್ಪಟ್ಟವು. ಈ ಪರಂಪರೆಯ ಸಿದ್ಧಾಂತಗಳು ವ್ಯಾವಹಾರಿಕ ಮತ್ತು ಪರಿವರ್ತನೆಯಾಗುತ್ತಿರುವ ಸಮಾಜದ ಪರಿಸ್ಥಿತಿಗಳಿಗೆ ಅತ್ಯಂತ ಅನುಕೂಲವಾಗಿದ್ದುದರಿಂದ ಕಲೀಫರು ಮತ್ತು ಸಾಮ್ರಾಟರು ಇವುಗಳಿಗೆ ಪ್ರೋತ್ಸಾಹ ಕೊಟ್ಟಿರುವರು. ಹನಫಿ ಕಾನೂನಿನ ಕೆಲವು ಪ್ರಮುಖ ಪುಸ್ತಕಗಳಲ್ಲಿ ರಾಡ್-ಅಲ್-ಮುಖ್ತಾರ್, ಡುರ್-ವಿಲ್-ಮುಖ್ತಾರ್, ಅಲ್-ಹಿದಾಯ (Radd-Al-Mukhatar, durr-ul-Mukhtar,-Al-hidaya) ಇವು ಹನಫಿ ಕಾನೂನಿನ ಮೇಲೆ ಬರೆಯಲಾದ ಕೆಲವು ಪ್ರಮುಖ ಪುಸ್ತಕಗಳಾಗಿವೆ. ಈ ಪರಂಪರೆಯು ಆರಂಭದಿಂದಲೇ ಜನಪ್ರಿಯವಾಗಿತ್ತು ಮತ್ತು ಬಹು ಸಂಖ್ಯಾತ ಮುಸಲ್ಮಾನರು ಈ ಪರಂಪರೆಯ ಅನುಯಾಯಿಗಳಾಗಿರುವರು.

ಮಲ್ಲಿಕಿ ಪರಂಪರೆ (The Maliki School)

ಈ ಪರಂಪರೆಯು ಮದಿನಾ ನಗರದ ಮಲ್ಲಿಕ್ ಇಬ್ನ ಅನಸ ಎಂಬವನಿಂದ ಸ್ಥಾಪಿಸಲ್ಪಟ್ಟಿತ್ತು. ಅವನೊಬ್ಬ ದೊಡ್ಡ ವಿದ್ವಾಂಸನಾಗಿದ್ದನು ಮತ್ತು ಅವನನ್ನು ರೂಢಿಗಳ ಮೇಲಿನ ಪ್ರಾಧಿಕಾರಿಯೆಂದು ಎಣಿಸಲಾಗುತ್ತದೆ. ಹನಫಿ ನ್ಯಾಯದರ್ಶಿಯಾದ ಇಮಾಮ್ ಮಹಮದನು ಅವನ ಅತ್ಯಂತ ನಿಕಟವರ್ತಿಯಾದ ವಿದ್ಯಾರ್ಥಿಯಾಗಿದ್ದನು. ಈ ಪರಂಪರೆಯು ರೂಢಿಗಳನ್ನು ಕಾನೂನಿನ ಮೂಲವೆಂದು ಸ್ವೀಕರಿಸುತ್ತದೆ. ಇದು ಸಂಗಡಿಗರ ಮತ್ತು ಸಂಗಡಿಗರ ಉತ್ತರಾಧಿಕಾರಿಗಳ ಆಚರಣೆಗಳನ್ನು ಮನ್ನಿಸುತ್ತದೆ. ಮಲ್ಲಿಕೀ ಪರಂಪರೆಯ ಪ್ರಕಾರ ಸಾಧ್ಯವಿದ್ದಷ್ಟು ಮಟ್ಟಿಗೆ ಹೊಸನಿಯಮಗಳನ್ನು ರೂಢಿಗಳಿಂದಲೇ ಪಡೆಯಬೇಕು. ಒಂದೊಮ್ಮೆ ಇದು ಸಾಧ್ಯವಿಲ್ಲದಿದ್ದರೆ ಮಾತ್ರ ಕಿಯಾ ಮತ್ತು ಇಜ್ಮಾ ಇವನ್ನು ಗಮನಿಸಬೇಕು. ಈ ಪರಂಪರೆಯು ಮದಿನಾದಲ್ಲಿ ಜೀವಿಸಿದ್ದ ನ್ಯಾಯದರ್ಶಿಗಳ ಇಜ್ಮಾವನ್ನು ಮಾತ್ರ ಸ್ವೀಕರಿಸುತ್ತದೆ. ಆದುದರಿಂದ ಈ ಪರಂಪರೆಯ ಮೇರೆಗೆ ಇಜ್ಮಾ ಇದು ಒಂದು ಕಾನೂನಿನ ಮೂಲವಾಗಿರುವಿಕೆಯ ಪರಿಧಿಯು ತುಂಬಾ ಸಂಕುಚಿತವಾಗಿದೆ. ಈ ಪರಂಪರೆಯ ಮಲ್ಲಿಕ್ ಮತ್ತು ತದನಂತರದ ಕೆಲವು ನ್ಯಾಯದರ್ಶಿಗಳು ನ್ಯಾಯಾಧೀಶರಾಗಿದ್ದರು. ಅವರಿಗೆ ದಿನನಿತ್ಯದ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸುವ ಅವಶ್ಯಕತೆ ಬೀಳುತ್ತಿತ್ತು. ಇದರಿಂದಾಗಿ ಕಾನೂನಿನ ಬಗ್ಗೆ ಇವರ ದೃಷ್ಟಿಕೋನವು ಹನಫಿಯವರ ದೃಷ್ಟಿಕೋನಕ್ಕಿಂತ ಹೆಚ್ಚು ವ್ಯಾವಹಾರಿಕವಾಗಿತ್ತು. ಇದರಿಂದಾಗಿ ಕಾನೂನಿನ ಒಂದು ನಿಯಮದ ಅರ್ಥಾನ್ವಯ ಮಾಡುವಲ್ಲಿ ಇಸ್ತಿದ್‌ಲಾಲ್

(Istidlal) ಎಂಬ ಒಂದು ಹೊಸ ಅಂಶವು ಸೇರಿಸಲಾಯಿತು. ಮಲಿಕೀ ಸಿದ್ಧಾಂತದ ಇನ್ನೊಂದು ವೈಶಿಷ್ಟ್ಯವೆಂದರೆ ಇದು ಮದೀನಾದ ರೂಢಿಗಳನ್ನು ಇತರ ಪರಂಪರೆಗಳಿಗಿಂತ ಹೆಚ್ಚು ಮಹತ್ವದವುಗಳೆಂದು ಎಣಿಸುತ್ತದೆ. ಈ ಪರಂಪರೆಯು ಕುರಾನ್, ಆಚರಣೆಗಳು, ಇಜ್ಮಾ ಮತ್ತು ಕಿಯಾ ಇವುಗಳ ಹೊರತಾಗಿ ರೂಢಿ ಮತ್ತು ಇಸ್ತಿದ್‌ಲಾಲ್ ಇವನ್ನೂ ಸಹ ಕಾನೂನಿನ ಒಂದು ಮೂಲವಾಗಿ ಸ್ವೀಕರಿಸಿದೆ. ಈ ಸಿದ್ಧಾಂತವು ಒಬ್ಬ ವಿವಾಹಿತ ನಾರಿ ಮತ್ತು ಆಕೆಯ ಸ್ವತ್ತು ಆಕೆಯ ಗಂಡನ ನಿಯಂತ್ರಣದಲ್ಲಿರುತ್ತವೆಂದು ಎಣಿಸುತ್ತದೆ. ಒಬ್ಬ ಮಲಿಕೀ ನಾರಿಯು ತನ್ನ ಗಂಡನ ಸಮ್ಮತಿಯಿಲ್ಲದೆ ತನ್ನ ಸ್ವತ್ತಿನೊಂದಿಗೆ ತಾನು ಸ್ವತಃ ವ್ಯವಹರಿಸುವಂತಿಲ್ಲ.

ಮಲಿಕನು ಕಿತಾಬ್-ಅಲ್-ಮುವಟ್ಟಾ (Kitab-al-muwatta) ಎಂಬ ಒಂದು ಪ್ರಸಿದ್ಧವಾದ ಪುಸ್ತಕವನ್ನು ಬರೆದಿರುವನು ಮತ್ತು ಇದನ್ನು ಮಲಿಕೀ ಸಿದ್ಧಾಂತದ ಆಧಾರ ಗ್ರಂಥವೆಂದು ಎಣಿಸಲಾಗುತ್ತದೆ. ಅವನು ಸಂಗ್ರಹಿಸಿರುವ ರೂಢಿಗಳು ಮುವಟ್ಟಾ (Muwatta) ಎಂಬ ಪುಸ್ತಕದಲ್ಲಿವೆ ಮತ್ತು ಅದು ಈಗಲೂ ಅಸ್ತಿತ್ವದಲ್ಲಿದೆ. ಕಲೀಫ್-ಇಬ್ನ್ ಇಶಾಕ್ ಇವನ ಅಲ್-ಮುಕ್ತಾಸಾರ್ (Al-Mukhtasar) ಇದು ಮಲಿಕೀ ಸಿದ್ಧಾಂತಗಳ ಇನ್ನೊಂದು ಪ್ರಮುಖ ಪ್ರತಿಯಾಗಿದೆ. ಈ ಪರಂಪರೆಯು ಸಿದ್ಧಾಂತವು ಮಧ್ಯ ಮತ್ತು ಪಶ್ಚಿಮ ಆಫ್ರಿಕಾ, ಸ್ಪೇನ್, ಕುವಾಯೌ ಮತ್ತು ಬೆಹರಿನ್‌ನಲ್ಲಿ ಪಸರಿಸಿದೆ. ಭಾರತದಲ್ಲಿ ಮಲಿಕರಿಲ್ಲ.

ಶಫಿ ಪರಂಪರೆಗಳು (The Shaffei Schools)

ಈ ಪರಂಪರೆಯ ಸಂಸ್ಥಾಪಕನಾದ ಅಶ್ ಶಫಿ (Ash Shaffei) ಅವನು ಇಸ್ಲಾಮೀ ನ್ಯಾಯದರ್ಶನದ ಒಬ್ಬ ಪ್ರಸಿದ್ಧ ವಿದ್ವಾಂಸನಾಗಿದ್ದನು. ಇವನು ಮಲಿಕ್-ಇಬ್ನ್ ಅನಸ್ (Malik ibn Anas) ಎಂಬವನ ವಿದ್ಯಾರ್ಥಿಯಾಗಿದ್ದನು ಮತ್ತು ಅವನು ಪೈಗಂಬರನ ಸಂಬಂಧಿಕನಾಗಿದ್ದನು. ಅವನು ರೂಢಿಗಳನ್ನು ತಾರ್ಕಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದುದರ ಪರಿಣಾಮವಾಗಿ ಕ್ರಮಬದ್ಧವಾಗಿ ಕಾನೂನಿನ ನಿಯಮವು ಅವನಿಂದ ನಿರ್ಮಿಸಲ್ಪಟ್ಟಿತ್ತು. ಜೀವಮಾನದುದ್ದಕ್ಕೂ ಅವನು ರೂಢಿಗಳನ್ನು ಕ್ರಮಬದ್ಧಗೊಳಿಸಲು ಪ್ರಯತ್ನಿಸಿದನು, ಅವನ ಅಭಿಪ್ರಾಯದ ಪ್ರಕಾರ ಮಾನವ ಜೀವನದ ಎಲ್ಲಾ ಸಮಸ್ಯೆಗಳನ್ನು ಕುರಾನ್ ಅಥವಾ ಪೈಗಂಬರನ ರೂಢಿಗಳಿಂದ ಬಗೆಹರಿಸಬಹುದು. ಅವನು ಕಿಯಾಸ್ (Qiyas) ಇದನ್ನು ಕಾನೂನಿನ ಮೂಲವಾಗಿ ಪೂರ್ಣ ಉಪಯೋಗ ಪಡೆದನು. ಕುರಾನ್, ರೂಢಿಗಳು ಮತ್ತು ಇಜ್ಮಾ ಇವುಗಳ ನಂತರ ಕಿಯಾಸ್ ಇದು ಅತ್ಯಂತ ಮಹತ್ವದ ಮೂಲವೆಂದು ಅವನು ನಂಬಿದ್ದನು. ಅವನು ಇಜ್ಮಾವನ್ನು ಕಾನೂನಿನ ಮೂಲವೆಂದು ಅದನ್ನು ಸಮ್ಮತಿಸಿದುದಷ್ಟೇ ಅಲ್ಲ; ಬದಲಾಗಿ ಅದನ್ನು ಒಂದು ಹೊಸ ಕಾನೂನಿನ ಮೂಲವೆಂಬುದಾಗಿ ಅದರ ಪರಿಧಿಯನ್ನು ವಿಸ್ತರಿಸಿದನು. ಶಫಿ ನ್ಯಾಯದರ್ಶಿಗಳು ಈ ನಾಲ್ಕು ಮೂಲಗಳ ಹೊರತಾಗಿ ವಾಡಿಕೆ ಮತ್ತು ಮಲ್ಲಿಕ್‌ನ ಸಿದ್ಧಾಂತವಾದ·

ಇಸ್ತದ್‌ಲಾಲ್ (Istadlal) ಇವನ್ನು ಮನ್ನಿಸಿರುವನು. ಆದರೆ ಈ ಪರಂಪರೆಯು ಅಬುಹನೀಫನ ಸಿದ್ಧಾಂತವಾದ ನ್ಯಾಯಿಕ ನೀತಿ ಸಮ್ಮತತೆ (Istihsan) ಇದನ್ನು ಸ್ವೀಕರಿಸುವದಿಲ್ಲ. ಶಫಿ ಪರಂಪರೆಯ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಇದು ಒಂದು ವಿವಾಹದಲ್ಲಿ ಸ್ತ್ರೀಗೆ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಒಬ್ಬ ನಾರಿಯು ವಯಸ್ಕಳಾಗಿದ್ದರೂ ಸಹ ಆಕೆಯು ವಿವಾಹವನ್ನು ವಿದ್ಯುಕ್ತಗೊಳಿಸಲು ಆಕೆಯ ಸಂರಕ್ಷಕನ ಅವಶ್ಯಕತೆಯಿದೆ. ಕಾನೂನಿನ ಸಿದ್ಧಾಂತಗಳನ್ನು (Usal) ತನ್ನ ಪುಸ್ತಕದೊಳಗೆ ಸೇರಿಸಿದವರಲ್ಲಿ ಅಶ್ ಶಫಿಯು ಮೊದಲಿಗನು. ಅವನು ತನ್ನ ಕಾನೂನೀ ಪದ್ಧತಿಯನ್ನು ಕಿತಾಬ್-ಉಲ್-ಉಮ್ (Kitab-ul-umm) ಎಂಬ ಪುಸ್ತಕದಲ್ಲಿ ಸೇರಿಸಿರುವನು. ಅವನ ಇನ್ನೊಂದು ಪ್ರಸಿದ್ಧವಾದ ಪುಸ್ತಕ (Risala) ಇದೂ ಸಹ ನ್ಯಾಯದರ್ಶನದ ರೀತಿ ಮತ್ತು ಸಿದ್ಧಾಂತಗಳಿಂದ ಕೂಡಿಕೊಂಡಿದೆ. ಈ ಎರಡು ಪುಸ್ತಕಗಳ ಹೊರತಾಗಿ ಶಫಿ ಸಿದ್ಧಾಂತದ ಮೇಲೆ ಬರೆಯಲ್ಪಟ್ಟ ಇತರ ಸಿದ್ಧಾಂತಗಳು ಯಾವವೆಂದರೆ ಹಜಾರ್ ಇವನ ತೂಫತ್ ಅಲ್ ಮುತ್ತಾಜ್ (Tuofat al Muhtaj) ರಾಮಲಿ ಇವನ ನಿಹಾಜತ್ ಅಲ್ ಮುತಾಜ್ (Nihajat-Al-Muhtaj) ಮತ್ತು ಘಜಲಿ ಇವನ ಅಲ್ ವಜೀಜ್ (Al-Waziz) ಆಗಿವೆ.

ಹನಬಾಲಿ ಪರಂಪರೆಗಳು (Hanbali Schools)

ಇದು ಸುನ್ನಿ ಪಂಗಡದ ನಾಲ್ಕನೇ ಹಾಗೂ ಇತ್ತೀಚಿನ ಪರಂಪರೆಯಾಗಿದೆ. ಈ ಪರಂಪರೆಯ ಸಂಸ್ಥಾಪಕನು ಇಬ್ನ್ ಹನಬಾಲ (Ibn Hanbal) ಎಂಬವನು ಅವನು ಅಶ್ ಶಫಿ ಇತ್ಯಾದಿ ಪ್ರಮುಖ ವಿದ್ವಾಂಸರ ಬಳಿ ಶಿಕ್ಷಣ ಪಡೆದಿದ್ದನು. ಅವನ ಪರಂಪರೆಯ ಒಂದು ವೈಶಿಷ್ಟ್ಯವೇನೆಂದರೆ ಇವನು ಪೈಗಂಬರನ ರೂಢಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ವಾದಿಯಾಗಿದ್ದನು. ಆದುದರಿಂದ ಹನಬಾಲನನ್ನು ಒಬ್ಬ ನ್ಯಾಯರ್ದದರ್ಶಿ ಎನ್ನುವುದಂತು ರೂಢಿವಾದಿ ಎನ್ನುವುದೇ ಸರಿಯೆಂದು ಕೆಲವರು ಅಭಿಪ್ರಾಯಪಟ್ಟಿರುವರು. ಇವನು ರೂಢಿಗಳಿಗೆ ಎಷ್ಟು ಮಹತ್ವ ಕೊಡುತ್ತಿದ್ದನೆಂದರೆ ಕಾನೂನಿನ ಇತರ ಮೂಲಗಳಾಗಿರುವ ಇಜ್ಮಾ (Ijma) ಮತ್ತು ಕಿಯಾ (Qivas) ಇವುಗಳಿಗೆ ಮಹತ್ವವೇ ಕೊಟ್ಟಿಲ್ಲ. ಇವನು ಪೈಗಂಬರನ ಸಂಗಡಿಗರ ಇಜ್ಮಕ್ಕೆ ಮಾತ್ರ ಮನ್ನಣೆ ಕೊಟ್ಟಿದ್ದನು. ಆದುದರಿಂದ ಇವನ ಪರಂಪರೆಯ ಪ್ರಕಾರ ಖಾಸಗಿ ನಿರ್ಣಯ ಮತ್ತು ಮಾನವತಾ ತರ್ಕಕ್ಕೆ ಯಾವುದೇ ಅವಕಾಶವಿಲ್ಲ. ಇದರ ಪರಿಣಾಮವಾಗಿ ಈ ಪರಂಪರೆಯ ಸಿದ್ಧಾಂತಗಳು ಕಟ್ಟುನಿಟ್ಟಾಗಿವೆ ಹಾಗೂ ಅವು ತುಂಬಾ ಜಟಿಲವಾಗಿವೆ. ಅವುಗಳಲ್ಲಿ ಯಾವುದೇ ರೀತಿಯ ಬದಲಾವಣೆ ಅಥವಾ ಸುಧಾರಣೆ ಮಾಡುವಂತಿಲ್ಲ. ಇದರ ಪರಿಣಾಮವಾಗಿ ಇಬ್ನ ಹನಬಲ್ ಮತ್ತು ಅವನ ಅನುಯಾಯಿಗಳನ್ನು ಪ್ರತಿಕ್ರಿಯಾವಾದಿಗಳೆಂದು ಕರೆಯಲಾಗುತ್ತಿತ್ತು ಮತ್ತು ಪ್ರಾಧಿಕಾರಿಗಳು ಇವರನ್ನು ಕಾಡಿಸುತ್ತಿದ್ದರು. ಮುಸ್ನದ್-ವಿಲ್-ಇಮಾಮ್ ಹನಬಾಲ್ (Masnad-ul-Imam Hanbal) ಇದು ಹನಬಾಲಿ

ಕಾನೂನಿನ ಒಂದು ಪ್ರಮುಖ ಪುಸ್ತಕವಾಗಿದೆ. ಈ ಪುಸ್ತಕದಲ್ಲಿ ಇಬ್ನ್ ಹನಬಾಲ್ ನಿಂದ ಸಂಗ್ರಹಿಸಲ್ಪಟ್ಟ ಸುಮಾರು ೫೦,೦೦೦ ರೂಢಿಗಳಿವೆ. ಇವನ ಇತರ ಎರಡು ಪುಸ್ತಕಗಳು ಕಿತಾಬ್-ಉಲ್- ಮಶಾಕ್ (Kitab - ull - mashakh) ಮತ್ತು ಕಿತಾಬ್-ಉಲ್- ಅಲಲ್ (Kitab ull Alal) ಆಗಿವೆ. ಈಗ ಈ ಪರಂಪರೆಯ ಅನುಯಾಯಿಗಳು ತುಂಬಾ ಕಡಿಮೆ. ಸೌದಿ ಅರೇಬಿಯಾ ಮತ್ತು ಕೊತ್ತಾರ್‌ದಲ್ಲಿ ಸ್ವಲ್ಪ ಮಟ್ಟಿಗೆ ಹನಬಾಲಿಗಳಿರುವರು.

ಶಿಯಾ ಪರಂಪರೆಗಳು (The Shia Schools)

ಶಿಯಾ ಸಮಾಜದ ಪ್ರಕಾರ ಅಲಿಯು ಮೊದಲನೇ ಇಮಾಮನಾಗಿರುವನು. ಅವನನ್ನು ಜಾಗತಿಕ ಹಾಗೂ ಆಧ್ಯಾತ್ಮಿಕ ಪ್ರಮುಖನೆಂಬುದಾಗಿ ಈ ಸಮಾಜವು ಸ್ವೀಕರಿಸಿದೆ. ಅಲಿಯ ಮರಣದ ಬಳಿಕ ಅವನ ಇಬ್ಬರು ಮಗಂದಿರಾದ ಹಸನ್ ಮತ್ತು ಹುಸೇನ್ ಇವರು ಎರಡನೇ ಮತ್ತು ಮೂರನೇ ಇಮಾಮರಾದರು. ಹುಸೇನನ ಮರಣದ ಬಳಿಕ ಅವನ ಮಗ ಜಿನ್-ಅಲ್-ಅಬ್ದೀನ್ (Zeen-al-Abdeen) ಇವನು ನಾಲ್ಕನೇ ಇಮಾಮನಾದನು. ಈ ಹಂತದವರೆಗೆ ಶಿಯಾ ಸಮಾಜವು ಸಂಘಟಿತವಾಗಿತ್ತು. ಆದರೆ ಆ ಬಳಿಕ ಅವರಲ್ಲಿ ವಿಭಜನೆಗಳು ಮತ್ತು ಉಪವಿಭಜನೆಗಳಾದವು. ಜಿನ್-ಅಲ್-ಅಬ್ದೀನ್ (Zeen-Al-Abdeen) ಇವನಿಗೆ ಝಯಾದ್ ಮತ್ತು ಮಹಮದ್ ಭಕ್ತಿದ್ (Zayad-and-Mahammad Baqir) ಎಂಬ ಇಬ್ಬರು ಮಗಂದಿರಿದ್ದರು. ಈ ಸಮಾಜದ ಮೊದಲನೇ ವಿಭಜನೆಯು ಜೀನ್-ಅಲ್-ಅಬ್ದೀನ್ ಇವನ ಮರಣವಾದಾಗ ಉಂಟಾಯಿತು. ಇದಕ್ಕೆ ಕಾರಣ ವೇನೆಂದರೆ ಈ ಸಮಾಜದ ಕೆಲವರು ಝಯಾದ್‌ನನ್ನು ತಮ್ಮ ಇಮಾಮನೆಂಬುದಾಗಿ ಸ್ವೀಕರಿಸಿದರು. ಆದರೆ ಹೆಚ್ಚಿನವರು ಮಹಮ್ಮದ್ ಬಕೀರ್‌ನನ್ನು ತಮ್ಮ ಇಮಾಮ ನೆಂಬುದಾಗಿ ವಾದಿಸಿದರು. ಝಯಾದ್ ಇವನ ಅನುಯಾಯಿಗಳು ಝಾಯ್ದೀಸ್ (Zaydis) ಎಂಬ ಒಂದು ಪ್ರತ್ಯೇಕವಾದ ಪಂಗಡವನ್ನು ನಿರ್ಮಿಸಿದರು. ಆದರೆ ಇವರೊಳಗೆ ಹೆಚ್ಚಿನವರು ಮಹಮ್ಮದ್ ಬಕೀರ್‌ನನ್ನು ತಮ್ಮ ಐದನೇ ಇಮಾಮ ನೆಂಬುದಾಗಿ ಸ್ವೀಕರಿಸಿದರು. ಇದು ಶಿಯಾ ಸಮಾಜದ ಮೊದಲನೇ ವಿಭಜನೆ ಯಾಗಿರುತ್ತದೆ. ಮಹಮ್ಮದ್ ಬಕೀರನ ಮರಣದ ಬಳಿಕ ಅವನ ಮಗ ಝಫರ್ ಸಾದಿಕ್ ಎಂಬವನು ೬ನೇ ಇಮಾಮನಾದನು. ಝಫರ್ ಸಾದಿಕ್‌ನ ಮರಣದ ಬಳಿಕ ಶಿಯಾ ಸಮಾಜದಲ್ಲಿ ಎರಡನೇ ವಿಭಜನೆಯಾಯಿತು. ಝಫರ್ ಸಾದಿಕ್‌ನಿಗೆ ಇಸ್ಮಾಯಿಲ್ ಮತ್ತು ಮುಸಾ ಕಾಜಿಮ್ (Ismail and Musa Kajim) ಎಂಬ ಇಬ್ಬರು ಮಗಂದಿರಿದ್ದರು. ಇಲ್ಲಿ ಒಂದು ಸಮೂಹವು ಇಸ್ಮಾಯಿಲ್‌ನನ್ನು ಏಳ ನೆಯ ಇಮಾಮ್‌ನೆಂಬುದಾಗಿ ಮನ್ನಿಸಿದರೆ ಹೆಚ್ಚಿನವರು ಕಿರಿಯ ಮಗ ಮುಸಾ ಖಾಜಿಮ್‌ನನ್ನು ಏಳನೇ ಇಮಾಮನೆಂಬುದಾಗಿ ಸ್ವೀಕರಿಸಿದರು. ಇಸ್ಮಾಯಿಲಾನ

ಅನುಯಾಯಿಗಳು ಇಸ್ಮಾಯಿಲಿಗಳು ಎಂಬುದಾಗಿ ಕರೆಯಲಾಗುತ್ತದೆ ಮತ್ತು ಇವರು ಶಿಯಾ ಪಂಗಡದ ಎರಡನೇ ಪರಂಪರೆಯವರಾಗಿರುವರು. ಶಿಯಾ ಸಮಾಜದ ಇನ್ನೊಂದು ಗುಂಪಿನಲ್ಲಿ ಉತ್ತರಾಧಿಕಾರದ ಮೇರೆಗೆ ಇಮಾಮರಾಗಿ ಹೋದರು. ಈ ಪರಂಪರೆಯು ಉತ್ತರಾಧಿಕಾರದ ಪಂಕ್ತಿಯಲ್ಲಿ ಹನ್ನೆರಡನೆ ಇಮಾಮನು ಅಸ್ಕರಿಯ ಮಗನಾಗಿದ್ದು ಅವನು ಈ ಜಗತ್ತಿನಿಂದ ಅದೃಶ್ಯನಾಗಿರುವನು ಮತ್ತು ಪುನಃ ಒಮ್ಮೆ ಬರಲಿರುವನೆಂದು ನಂಬಲಾಗುತ್ತದೆ. ಈ ಹನ್ನೆರಡನೆ ಇಮಾಮನ ಹೆಸರು ಮಹಮ್ಮದ್-ಅಲ್-ಮುಮ್ತಾಜಾರ್ (Md-Al Mumtazar) ಆಗಿದ್ದು ಇವನು ಕೊನೆಯ ಇಮಾಮನಾಗಿರುವನು ಎಂಬುದಾಗಿ ಈ ಪಂಗಡದವರು ನಂಬಿರುವರು. ಮುಸಾ ಕಾಜಿಮ್ ಇವನ ಅನುಯಾಯಿಗಳಿಂದ ಹಿಡಿದು ಮಹಮ್ಮದ್-ಅಲ್-ಮುಮ್ತಾಜಾರ್ (Md-Al-Mumtazar) ಇವನ ವರೆಗಿನ ವಂಶಾವಳಿಯು ಶಿಯಾ ವರ್ಗದ ಮೂರನೆಯ ಮತ್ತು ಕೊನೆಯ ಪರಂಪರೆಯಾಗಿರುತ್ತದೆ. ಆದುದರಿಂದ ಇತ್ನಾ- ಅಶಾರಿಯಾ (Ithna -Asharia) ಎಂಬುದಾಗಿ ಕರೆಯಲಾಗುತ್ತದೆ. ಶಿಯಾ ಸಮಾಜದಲ್ಲಿ ಉಂಟಾಗಿರುವ ವಿಭಜನೆಗಳು ಆ ಸಮಾಜದ ನೇತೃತ್ವದ ಕಚ್ಚಾಟದಲ್ಲಿ ಎಂಬುದನ್ನು ನಾವಿಲ್ಲಿ ಕಾಣಬಹುದು. ಕಾನೂನಿನ ಬಗ್ಗೆ ಈ ಎರಡು ಪಂಗಡಗಳೊಳಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ.

ಇತ್ನಾ ಅಶಾರಿಯಾ ಪರಂಪರೆ (The Ithna-Ashria Schools)

ಈ ಪರಂಪರೆಯನ್ನು ಇಮಾಮಿಯಾ ಪರಂಪರೆಯೆಂದೂ ಕರೆಯಲಾಗುತ್ತದೆ. ಶಿಯಾರೊಳಗೆ ಹೆಚ್ಚಿನವರು ಇತ್ನಾ-ಅಶಾರಿಯಾರಾಗಿರುವರು. ಈ ಪರಂಪರೆಯ ಸಮಾಜದವರ ಅಭಿಪ್ರಾಯದ ಪ್ರಕಾರ ಅಲಿಯಿಂದ ಆರಂಭವಾಗಿ ಅವರ ಸಮಾಜದಲ್ಲಿ ಹನ್ನೆರಡು ಮಂದಿ ಇಮಾಮರಿರುವರು ಮತ್ತು ಅವರು ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿದವರಾಗಿರುವರು. ಇಮಾಮನು ಏನು ಹೇಳುವನೋ ಅದೊಂದು ಕಾನೂನೆಂದು ಇವರು ಸ್ವೀಕರಿಸಿರುವರು. ಹನ್ನೆರಡನೇ ಇಮಾಮನು ಇನ್ನೂ ಒಂದು ಶಿಶುವಾಗಿರುವಾಗಲೇ ಅದೃಶ್ಯನಾಗಿರುವನು ಎಂಬುದಾಗಿ ಇವರು ನಂಬಿರುವರು. ಆ ಅದೃಶವಾಗಿರುವ ಮಗುವು ನಿಕಟ ಭವಿಷ್ಯದಲ್ಲಿ ಇನ್ನೊಮ್ಮೆ ಬರುವುದೆಂಬುದಾಗಿಯೂ ಇವರಿಗೆ ಬಹಳ ವಿಶ್ವಾಸವಿದೆ. ಇತ್ನಾ-ಅಶಾರಿಯಾ ಪರಂಪರೆಯ ಒಂದು ವಿಶೇಷತೆಯೆಂದರೆ ಮುಸ್ಲಿಮ್ ಜಗತ್ತಿನಲ್ಲಿ ಮುತಾ ಪದ್ಧತಿಯ ವಿವಾಹವನ್ನು ಇವರು ಮಾತ್ರ ಮನ್ನಿಸುವರು. ಈ ಪರಂಪರೆಯು ೧) ಅಕ್ಬರಿ (Akhbari) ಮತ್ತು ೨) ಯುಸುಲಿ (Usuli) ಎಂಬ ಎರಡು ಉಪವರ್ಗಗಳಲ್ಲಿ ವಿಭಜಿಸಲ್ಪಟ್ಟಿದೆ. ಅಕ್ಬರಿಗಳು ಇಮಾಮರ ವಾಡಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವರಾದುದರಿಂದ ಇವರು ತುಂಬಾ ರೂಢಿಗ್ರಸ್ತರೆಂದು ಎಣಿಸಲ್ಪಡುವರು. ಆದರೆ ಯುಸುಲಿಗಳು ದೈನಂದಿನ ಸಮಸ್ಯೆಗಳ ಹಿನ್ನೆಲೆಯಲ್ಲಿ ಕುರಾನಿಗೆ ಅರ್ಥಾನ್ವಯನ ಮಾಡುವರು. ಆದುದರಿಂದ ಯುಸೂಲಿ ಪರಂಪರೆಯ ಮೇರೆಗೆ ಸ್ವಲ್ಪ ತರ್ಕಕ್ಕೆ ಅವಕಾಶವಿದೆ. ಇತ್ನಾ-ಅಶಾ

ರಿಯಾ ಇವರು ಇರಾನ್. ಇರಾಕ್, ಲೆಬನಾನ್. ಪಾಕಿಸ್ತಾನ ಮತ್ತು ಭಾರತದಲ್ಲಿ ಇದ್ದಾರೆ. ಶರಿ-ಉಲ್-ಇಸ್ಲಾಮ್ (Shari-ul-Islam) ಇದು ಈ ಪರಂಪರೆಯ ಆಧಾರ ಗ್ರಂಥವಾಗಿರುತ್ತದೆ.

ಇಸ್ಮಾಲಿಯಾ ಪರಂಪರೆ (The Ismalia School)

ಝಫರ್ ಸಾದಿಕ್‌ನ ಹಿರಿಯ ಮಗನಾದ ಇಸ್ಮಾಯಿಲ್‌ನನ್ನು ಯಾವುದೋ ಒಂದು ಕಾರಣಕ್ಕಾಗಿ ಅವನ ತಂದೆಯು ಅವನನ್ನು ವಾರಸುಹೀನನನ್ನಾಗಿ ಮಾಡಿದ್ದನು. ಆದುದರಿಂದ ಶಿಯಾರೊಳಗಿನ ಹೆಚ್ಚಿನ ವ್ಯಕ್ತಿಗಳು ಅವನನ್ನು ತಮ್ಮ ಇಮಾಮನೆಂಬುದಾಗಿ ಸ್ವೀಕರಿಸಲು ನಿರಾಕರಿಸಿದರು. ಆದರೆ ಶಿಯಾರೊಳಗಿನ ಅಲ್ಪಸಂಖ್ಯಾತರು ಅವನನ್ನು ಇಮಾಮನೆಂಬುದಾಗಿ ಸ್ವೀಕರಿಸಿದರು. ಇಸ್ಮಾಯಿಲ್‌ನ ಅನುಯಾಯಿಗಳನ್ನು ಇಸ್ಮಾಯಿಲರು ಅಥವಾ ಏಳನೆಯವರು ಎಂಬುದಾಗಿ ಕರೆಯಲಾಗುತ್ತದೆ. ಇಸ್ಮಾಯಿಲ್‌ನಿಂದ ಬಚ್ಚಿಡಲ್ಪಟ್ಟ ಅನೇಕ ಇಮಾಮರು ಹುಟ್ಟಿರುವರು ಮತ್ತು ಅವರ ಗುಪ್ತ ಸಂದೇಶವಾಹಕರು ರೂಢಿಗ್ರಸ್ತ ಇಸ್ಲಾಮಿನ ಮೇಲೆ ಒಂದು ಪ್ರಹಾರ ಮಾಡಲು ಕಾಯುತ್ತಿರುವರೆಂದು ಇವರು ಬಲವಾಗಿ ನಂಬಿರುವರು. ಇವರ ಅಭಿಪ್ರಾಯದಂತೆ ಇಸ್ಮಾಯಿಲ್‌ನ ನಂತರದ ಇಮಾಮರು ಇನ್ನೂ ಬದುಕಿರುವರು, ಆದರೆ ಅವರು ತಮ್ಮ ಅಸ್ತಿತ್ವವನ್ನು ಬಚ್ಚಿಟ್ಟಿರುವರು. ಈ ಪಂಗಡವು (೧) ಖೋಜಾ (Khojas) ಮತ್ತು (೨) ಬೋಹರಾ (Bohras) ಎಂಬ ಎರಡು ವರ್ಗಗಳಲ್ಲಿ ವಿಭಜಿತವಾಗಿವೆ. ಇಸ್ಮಾಯಿಲ್‌ರನ್ನು ಮಧ್ಯ ಏಷ್ಯಾ, ಸಿರಿಯಾ, ಭಾರತ ಮತ್ತು ಪಾಕಿಸ್ತಾನದಲ್ಲಿ ಕಾಣಬಹುದು. ಮುಂಬಯಿಯ ಇಸ್ಮಾಲಿಯಾರು ಒಂದೇ ಖೋಜಾರಾಗಿರುವರು ಅಥವಾ ಬೋಹರಾರಾಗಿರುವರು. ದೈಮಲ್ ಇಸ್ಲಾಮರು (Daimal-Islam) ಇದು ಇಸ್ಮಾಲಿಯಾ ಸಿದ್ಧಾಂತದ ಒಂದು ಅಧಿಕೃತ ಗ್ರಂಥವಾಗಿದೆ.

ಝಾದಿ ಪರಂಪರೆ (The Zyadi School)

ಝಾದ್ (Zhad) ಎಂಬವನು ಈ ಪರಂಪರೆಯ ಸಂಸ್ಥಾಪಕನಾಗಿರುವನು. ಇವನು ನಾಲ್ಕನೇ ಇಮಾಮನ ಮಗಂದಿರಲ್ಲಿ ಒಬ್ಬನಾಗಿರುವನು. ಝಾದಿಗಳು ಶಿಯಾ ಮುಸ್ಲಿಮ್ ಸಮಾಜದಿಂದ ಹೊರಹೋದವರಾಗಿರುವರು. ಈ ಪರಂಪರೆಯ ವೈಶಿಷ್ಟ್ಯವೆಂದರೆ ಇದರ ಸಿದ್ಧಾಂತಗಳು ಕೆಲವು ಸುನ್ನೀ ಸಿದ್ಧಾಂತಗಳನ್ನೂ ಒಳಗೊಂಡಿವೆ. ಇವರು ಶಿಯಾ ಮತ್ತು ಸುನ್ನಿ ಸಿದ್ಧಾಂತಗಳ ಒಂದು ಮಿಶ್ರಣವಾದ ಸಮಾಜವೆಂದು ಫೈಜೀ ಎಂಬ ಒಬ್ಬ ಪ್ರಸಿದ್ಧ ನ್ಯಾಯದರ್ಶಿಯು ಹೇಳಿರುವನು. ಈ ಪರಂಪರೆಯ ಅನುಯಾಯಿಗಳು ಹೆಚ್ಚಾಗಿ ಎಮೆನ್ ದೇಶದಲ್ಲಿರುವರು.

ಮೊಟಾಝಿಲಾ ಪಂಗಡ ('he Motazila Sect)

ಮೊಟಾಝಿಲಾ ಪಂಗಡವು ಒಂಬತ್ತನೇ ಶತಮಾನದಲ್ಲಿ ಇಮಾಮನಿಂದ

ಪ್ರತ್ಯೇಕವಾಯಿತು. ಮಾಮೂನ್ (Mamun) ಎಂಬವನ ಅಧಿಕಾರಾವಧಿಯಲ್ಲಿ ಈ ಪರಂಪರೆಯು ಅಟಾ-ಅಲ್ ಘಜ್ಜಲ್ (Ata al Ghazzal) ಎಂಬವನಿಂದ ಸ್ಥಾಪಿಸಲ್ಪಟ್ಟಿತು. ಇವರು ಅಸ್ತಿತ್ವದಲ್ಲಿರುವ ೨ ಪಂಗಡಗಳೊಂದಿಗೆ ಕೂಡುವದಿಲ್ಲವಾದರೂ ಸಹ ಇವರು ಶಿಯಾ ಸಮಾಜದಿಂದ ಹೊರ ಬಂದವರೆಂದು ಎಣಿಸಲಾಗುತ್ತದೆ. ಈ ಪರಂಪರೆಗಳ ಅನುಯಾಯಿಗಳ ಅಭಿಪ್ರಾಯದಲ್ಲಿ ಇವರ ಸಿದ್ಧಾಂತದ ಏಕಮೇವ ಆಧಾರವು ಕುರಾನ್ ಆಗಿರುತ್ತದೆ. ಮೊಟಾಝಿಲಾರು ಹೆಚ್ಚಿನ ರೂಢಿಗಳನ್ನು ತಿರಸ್ಕರಿಸಿರುವರು. ಮೊಟಾಝಿಲಾ ಪಂಗಡದ ಒಂದು ವಿಶಿಷ್ಟ್ಯವೆಂದರೆ ಇಸ್ಲಾಮಿನೊಳಗೆ ಈ ಪರಂಪರೆಯುವರು ಮಾತ್ರ ಕಟ್ಟುನಿಟ್ಟಾದ ಏಕಪತ್ನೀವ್ರತವನ್ನು ಪಾಲಿಸುವರು. ಮೊಟಾಝಿಲಾ ಸಿದ್ಧಾಂತದ ಪ್ರಕಾರದಲ್ಲಿ ಒಂದು ಕಾಲದಲ್ಲಿ ಒಬ್ಬಳಿಗಿಂತ ಹೆಚ್ಚಿನ ಪತ್ನಿಯರಿರುವದು ಕಾನೂನು ಬಾಹಿರವಾಗಿರುತ್ತದೆ. ಈ ಸಮಾಜದ ಇನ್ನೊಂದು ವೈಶಿಷ್ಟ್ಯವೆಂದರೆ ಒಬ್ಬ ನ್ಯಾಯಾಧೀಶನು ಮಧ್ಯ ಪ್ರವೇಶಿಸದೆ ಒಂದು ವಿವಾಹ ವಿಚ್ಛೇದನವಾಗುವಂತಿಲ್ಲ. ತಲಾಕು ಕೊಟ್ಟು ವಿವಾಹ ವಿಚ್ಛೇದನೆ ಮಾಡುವುದನ್ನು ಈ ಪಂಗಡವು ಮನ್ನಿಸುವುದಿಲ್ಲ. ಈ ಮೊಟಾಝಿಲಾ ಪಂಗಡದ ಜನರು ಈಗ ಎಲ್ಲೂ ಕಾಣಸಿಗುವದಿಲ್ಲ.

ಮುಸಲ್ಮಾನರು ತಮ್ಮ ತಮ್ಮ ಪರಂಪರೆಗಳ ಕಾನೂನಿನಿಂದ ಶಾಸಿತರಾಗಿರುವರು

(Muslims to be Governed by the law of their respective Schools)

ಒಂದು ನ್ಯಾಯಾಲಯದ ಮುಂದೆ ಬಂದಿರುವ ಒಂದು ಪ್ರಕರಣದಲ್ಲಿ ಮುಸ್ಲಿಮ್ ಮತೀಯ ಕಾನೂನನ್ನು ಅನ್ವಯಗೊಳಿಸಬೇಕಾದರೆ ಆ ಪ್ರಕರಣದ ಪಕ್ಷಗಾರರ ಪಂಗಡವು ಯಾವುದೆಂಬುದರ ಬಗ್ಗೆ ಮೊದಲು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಸಂಪ್ರದಾಯಕ್ಕೆ ತನ್ನದೇ ಆದ ಆಧಾರ ಗ್ರಂಥಗಳಿವೆ ಮತ್ತು ಒಂದು ಸಂಪ್ರದಾಯವು ಇನ್ನೊಂದು ಸಂಪ್ರದಾಯದ ಆಧಾರ ಗ್ರಂಥಗಳನ್ನು ಸ್ವೀಕರಿಸುವದಿಲ್ಲ. ಸುನ್ನಿ ಮುಸಲ್ಮಾನರು ಸುನ್ನಿ ಕಾನೂನಿನಿಂದ ಮತ್ತು ಶಿಯಾ ಮುಸಲ್ಮಾನರು ಶಿಯಾ ಕಾನೂನಿನಿಂದ ಶಾಸಿತರಾಗಿರುವರು.

ಒಂದು ಸಂಪ್ರದಾಯವನ್ನು ಖಾತರಿಪಡಿಕೊಂಡ ಒಳಿಕ ಎರಡನೇ ಹಂತದಲ್ಲಿ ಆ ಪಕ್ಷಗಾರರು ಯಾರ ಪರಂಪರೆಗಾರರಾಗಿರುವರು ಅಥವಾ ಅವರ ನಿರ್ದಿಷ್ಟವಾದ ಉಪಸಂಪ್ರದಾಯವು ಯಾವದೆಂದು ನೋಡಬೇಕಾಗುತ್ತದೆ. ಸುನ್ನಿ ಮುಸಲ್ಮಾನರು ನಾಲ್ಕು ಪರಂಪರೆಗಳೊಳಗೆ ಯಾವುದೇ ಒಂದು ಪರಂಪರೆಯುವರಾಗಿರಬಹುದು. ಇದೇ ರೀತಿಯಲ್ಲಿ ಶಿಯಾ ಮುಸಲ್ಮಾನರು ಶಿಯಾ ಪರಂಪರೆಯ ಮೂರು ಪರಂಪರೆಗಳಲ್ಲಿ ಯಾವುದಾದರೊಂದರ ಅನುಯಾಯಿಗಳಾಗಿರಬಹುದು. ಪಕ್ಷಗಾರರು ಯಾವ ಪರಂಪರೆಯುವರಾಗಿರುವರೋ ಆ ಪರಂಪರೆಯ ಕಾನೂನನ್ನು ಅವರಿಗೆ ಅನ್ವಯಗೊಳಿಸಬೇಕಾಗುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಪಕ್ಷಗಾರರು ಸುನ್ನಿ

ಮುಸಲ್ಮಾನರಾಗಿದ್ದರೆ ಮತ್ತು ಮಲೀಕಿ ಪರಂಪರೆಯ ಅನುಯಾಯಿಗಳಾಗಿದ್ದರೆ ಅವರಿಗೆ ಮಲಿಕೀ ಪರಂಪರೆಯ ಕಾನೂನನ್ನು ಅನ್ವಯಗೊಳಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಒಂದೊಮ್ಮೆ ಒಂದು ಪ್ರಕರಣದಲ್ಲಿ ಪಕ್ಷಗಾರರು ಇತ್ನಾ ಅಶಾರಿಯಾದವರಾಗಿದ್ದರೆ ಅಲ್ಲಿ ಅವರಿಗೆ ಶಿಯಾ ಸಂಪ್ರದಾಯದ ಇತ್ನಾ ಅಶಾರಿಯಾ ಕಾನೂನನ್ನು ಅನ್ವಯಗೊಳಿಸಬೇಕಾಗುತ್ತದೆ.

ಒಂದೊಮ್ಮೆ ಒಂದು ಪ್ರಕರಣದಲ್ಲಿ ಪಕ್ಷಗಾರರ ಪರಂಪರೆಗಳು ಪ್ರತ್ಯೇಕವಾಗಿದ್ದರೆ ಅಲ್ಲಿ ಪ್ರತಿವಾದಿಯ ಪರಂಪರೆಯನ್ನು ಅನ್ವಯಗೊಳಿಸಬೇಕಾಗುತ್ತದೆ. ಆದುದರಿಂದ ಒಬ್ಬ ಇತ್ನಾ ಅಶಾರಿಯ ಪತಿಯು ತನ್ನ ಹನಫೀ ಪತ್ನಿಯ ಮೇಲೆ ದಾಂಪತ್ಯದ ಹಕ್ಕುಗಳ ಪುನರ್‌ಸ್ವಾಧೀನತೆಗಾಗಿ ಒಂದು ದಾವೆ ಹೂಡಿದರೆ ಅಲ್ಲಿ ಪತ್ನಿಯು ಹನಫೀ ಕಾನೂನಿನ ಪ್ರಯೋಜನ ಪಡೆಯಲು ಹಕ್ಕುದಾರಳಾಗುವಳು.

ಭಾರತದಲ್ಲಿ ಬಹು ಸಂಖ್ಯಾತ ಮುಸಲ್ಮಾನರು ಸುನ್ನಿಗಳಾಗಿದ್ದು ಹನಫೀ ಪರಂಪರೆಯ ಪಂಗಡದವರಾಗಿರುವರು. ಅವರು ಶಿಯಾ ಸಂಪ್ರದಾಯದವರೆಂದು ಸಾಬೀತುಪಡಿಸುವ ತನಕ ಪಕ್ಷಗಾರರು ಹನಫಿಗಳೆಂಬ ಒಂದು ಪೂರ್ವಭಾವನೆಯಿರುತ್ತದೆ. ಪಕ್ಷಗಾರರು ಹನಫೀ ಮುಸಲ್ಮಾನರಲ್ಲಿ ಎಂಬುದನ್ನು ಸಾಬೀತುಪಡಿಸುವ ಪುರಾವೆಯ ಪ್ರಭಾರವು ಈ ವಾದವನ್ನು ಎತ್ತಿದವನ ಮೇಲೆ ಬರುತ್ತದೆ.

ಪಂಗಡ ಅಥವಾ ಪರಂಪರೆಯ ಬದಲಾಯಿಸುವಿಕೆ
(Change of the Section School)

ಪ್ರಾಯಸ್ಥ ವಯಸ್ಸಿಗೆ ಬಂದಿರುವ ಪ್ರತಿಯೊಬ್ಬ ಮುಸಲ್ಮಾನನು ತನ್ನ ಸಂಪ್ರದಾಯ ಅಥವಾ ಪರಂಪರೆಯನ್ನು ಬದಲಾಯಿಸಿ ತನಗೆ ಇಷ್ಟಬಂದ ಇನ್ನೊಂದು ಪರಂಪರೆಯನ್ನು ಸ್ವೀಕರಿಸಲು ಸ್ವತಂತ್ರನಾಗಿರುವನು. ಈ ರೀತಿಯಾಗಿ ಒಬ್ಬ ಶಿಯಾ ಮುಸಲ್ಮಾನನು ತನ್ನ ಸಂಪ್ರದಾಯವನ್ನು ಪರಿತ್ಯಜಿಸಿ ಸುನ್ನಿ ಸಂಪ್ರದಾಯವನ್ನು ಅಥವಾ ಒಬ್ಬ ಶಫಿ ಮುಸಲ್ಮಾನನು ತನ್ನ ಪರಂಪರೆಯನ್ನು ಪರಿತ್ಯಜಿಸಿ ಹನಫೀ ಸಿದ್ಧಾಂತವನ್ನು ಸ್ವೀಕರಿಸಬಹುದು. ಒಂದು ಹೊಸ ಸಂಪ್ರದಾಯ ಅಥವಾ ಪರಂಪರೆಯನ್ನು ಸ್ವೀಕರಿಸಿದ ತತ್‌ಕ್ಷಣ ಅಂತಹ ಒಬ್ಬ ಮುಸಲ್ಮಾನನು ಆ ಹೊಸ ಪರಂಪರೆಯಿಂದ ಶಾಸಿತನಾಗುವನು.

——

ಅಧ್ಯಾಯ ೩

ಮಹಮದೀಯ ಕಾನೂನಿನ ಮೂಲಗಳು

(Sources of Mohemedan Law)

ಯಾವುದೇ ಒಂದು ಕಾನೂನಿನ ಮೂಲದ ಬಗ್ಗೆ ತಿಳುವಳಿಕೆಯಿಲ್ಲವಾದರೆ ಅದರ ಸರಿಯಾದ ವಿವರಣೆ ಮತ್ತು ನಿರ್ವಚನ ಮಾಡುವದು ಸಾಧ್ಯವಾಗುವುದಿಲ್ಲ. ಮುಸ್ಲಿಮ್ ಕಾನೂನಿನ ಮೂಲಗಳನ್ನು ೧) ಪ್ರಾಥಮಿಕ ಮೂಲಗಳು ಮತ್ತು ೨) ಮಾಧ್ಯಮಿಕ ಮೂಲಗಳೆಂಬುದಾಗಿ ಎರಡು ಪಂಗಡಗಳಲ್ಲಿ ವರ್ಗೀಕರಿಸಬಹುದು. ಪೈಗಂಬರನು ಸ್ವತಃ ಯಾವುದನ್ನು ಮುಸ್ಲಿಮ್ ಕಾನೂನಿನ ಮೂಲಗಳೆಂದು ನಿರ್ದೇಶಿಸಿರುವನೋ ಅವುಗಳನ್ನು ಪ್ರಾಥಮಿಕ ಮೂಲಗಳೆಂದು ಹೇಳಲಾಗುತ್ತದೆ. ಇಡೀ ಮುಸ್ಲಿಮ್ ಮತೀಯ ಕಾನೂನು ಪ್ರಾಥಮಿಕ ಮೂಲಗಳ ಮೇಲೆ ಆಧಾರಿತವಾಗಿದೆ. ಇವುಗಳನ್ನು ಮುಸ್ಲಿಮ್ ಕಾನೂನಿನ ಔಪಚಾರಿಕ ಮೂಲಗಳೆಂದು ಕರೆಯಲಾಗುತ್ತದೆ. ಆದರೆ ಸಮಾಜದ ಆವಶ್ಯಕತೆಗಳಿಗೆ ಅನುಗುಣವಾಗಿ ಮುಸ್ಲಿಮ್ ಕಾನೂನು ಕ್ಷೇತ್ರೀಯ ರೂಢಿಗಳಿಂದ, ನ್ಯಾಯಾಲಯಗಳಿಂದ, ಮತ್ತು ರಾಜ್ಯಗಳಿಂದ ವಿಕಸಿತಗೊಳಿಸಲ್ಪಟ್ಟಿದೆ. ಆದ್ದರಿಂದ ಮುಸ್ಲಿಮ್ ಕಾನೂನಿನ ನಿಯಮಗಳು ರೂಢಿ, ಶಾಸನ ಮತ್ತು ನ್ಯಾಯಿಕ ತೀರ್ಪುಗಳಲ್ಲೂ ಸಿಗುತ್ತವೆ; ಇವನ್ನು ಮುಸ್ಲಿಮ್ ಕಾನೂನಿನ ಮಾಧ್ಯಮಿಕ ಮೂಲವೆಂದು ಕರೆಯಲಾಗುತ್ತದೆ.

ಪ್ರಾಥಮಿಕ ಮೂಲಗಳು

(The Primary Sources)

೧) **ಕುರಾನ್ (Quran) :** ಕುರಾನ್ ಎಂಬ ಪದವು ಅರಬೀ ಭಾಷೆಯ ಕುರ್ರಾ (Qurra) ಎಂಬ ಪದದ ಒಂದು ರೂಪವಾಗಿದೆ. ಕುರ್ರಾ ಎಂದರೆ "ಓದುವಿಕೆ" ಅಥವಾ "ಓದಬೇಕಾದದ್ದು". ಕುರಾನ್ ಇದು ದೈವಿಕ ಮೂಲದಿಂದ ಬಂದುದಾಗಿದ್ದು ಮಾನವತೆಯ ಪ್ರಯೋಜನಕ್ಕಾಗಿ ಮಹಮದ್ ಪೈಗಂಬರನಿಗೆ ಇದು ವ್ಯಕ್ತಗೊಳಿಸಲಾಯಿತೆಂದು ನಂಬಲಾಗುತ್ತದೆ. ಕಾಲಕ್ರಮೇಣ ಮತ್ತು ಪ್ರಾಮುಖ್ಯತೆಯ ದೃಷ್ಟಿಯಿಂದ ಕುರಾನ್ ಇದು ಮುಸ್ಲಿಮ್ ಕಾನೂನಿನ ಪ್ರಥಮ ಮೂಲವಾಗಿರುತ್ತದೆ. ಕಾಲಕ್ರಮೇಣದ ದೃಷ್ಟಿಯಲ್ಲಿ ಇದು ಪ್ರಥಮವಾಗಿರಲು ಕಾರಣವೇನೆಂದರೆ ಕುರಾನಿಗಿಂತ ಮೊದಲು ಇಸ್ಲಾಮಿ ಸಮಾಜವು ಅಸ್ತಿತ್ವದಲ್ಲಿರಲಿಲ್ಲ. ಪೈಗಂಬರನಿಗೆ ಮೊದಲನೇ ದೈವಿ ಪ್ರಕಟಣೆಯು ಕ್ರಿ. ಶ. ೬೦೯ರಲ್ಲಿ ಬಂದಿತ್ತು. ಆ ಬಳಿಕ ೨೩ ವರ್ಷಗಳ ಕಾಲಾವಧಿಯಲ್ಲಿ ಪೈಗಂಬರನಿಗೆ ಈ ದೈವೀ ಪ್ರಕಟನೆಯು ತುಂಡು

ತುಂಡುಗಳಲ್ಲಿ ಆಗಾಗ ಬರುತ್ತಿತ್ತು. ಈ ಪ್ರಕಟನೆಯು ಪರಮಾತ್ಮನ ಸಂದೇಶವಾಗಿದ್ದು ಗಾಬ್ರಿಯಲ್ ಎಂಬ ದೇವದೂತನು ಪೈಗಂಬರನಿಗೆ ಹೇಳಿ ಹೋಗುತ್ತಿದ್ದನು. ಪರಮಾತ್ಮನ ಈ ಸಂದೇಶವನ್ನು ಪೈಗಂಬರನು ಬೋಧನೆಯ ಮೂಲಕ ಜನರಿಗೆ ತಿಳಿಸುತ್ತಿದ್ದನು. ಈ ಸಂದೇಶಗಳು ಪದ್ಯರೂಪದಲ್ಲಿದ್ದು ಇವನ್ನು ಪೈಗಂಬರನ ಅನುಯಾಯಿಗಳು ನೆನಪಿನಲ್ಲಿಟ್ಟುಕೊಂಡಿದ್ದರು. ಇವುಗಳಲ್ಲಿ ಕೆಲವು ತಾಳೆಗರಿಗಳ ಮೇಲೆ, ಒಂಟೆಯ ಚರ್ಮದ ಮೇಲೆ ಅಥವಾ ಮಣ್ಣಿನ ಮೇಲೆ ಬರೆದಿಡಲಾಯಿತು. ಈ ಸಂದೇಶಗಳು ಅಲ್ಲಲ್ಲಿ ಹರಡಿಹೋಗಿದ್ದವು ಮತ್ತು ಒಂದು ಕ್ರಮಬದ್ಧವಾದ ರೀತಿಯಲ್ಲಿ ಇಡಲ್ಪಟ್ಟಿರಲಿಲ್ಲ. ಪೈಗಂಬರನ ಮರಣದ ಬಳಿಕ ಮೂರನೇ ಕಲೀಫನಾದ ಉಸ್ಮಾನ್ ಇವನ ಪ್ರಾಧಿಕಾರದ ಮೇರೆಗೆ ಈ ಸಂದೇಶಗಳನ್ನು ಒಂದುಗೂಡಿಸಿ ಕ್ರಮಬದ್ಧವಾಗಿ ಬರೆದಿಡಲಾಯಿತು. ಕುರಾನಿನೊಳಗಿನ ಪದ್ಯಗಳ ಒಂದು ವೈಶಿಷ್ಟ್ಯವೆಂದರೆ ಅವು ಪರಮಾತ್ಮನಿಂದಲೇ ಬಂದಿರುವ ಶಬ್ದಗಳೆಂದು ನಂಬಲಾಗುತ್ತದೆ; ಮಹಮ್ಮದ್ ಪೈಗಂಬರನು ಸಮಾಜಕ್ಕೆ ಕೇವಲ ಸಂದೇಶವಾಹಕನಾಗಿದ್ದನು. ಕುರಾನ್ ಇದು ದೈವಿಕ ಮೂಲದ್ದಾಗಿದೆ, ಆದುದರಿಂದ ಇದು ಮುಸ್ಲಿಮ್ ಕಾನೂನಿನ ಮೂಲಗಳಲ್ಲಿ ಅತ್ಯಂತ ಮಹತ್ವದ್ದಾಗಿದೆ.

ಕಾನೂನಿನ ಮೂಲಗಳ ರೂಪದಲ್ಲಿ ಕುರಾನಿನ ಪ್ರಮುಖ ವೈಶಿಷ್ಟ್ಯತೆಗಳು
(Salient feature of Quran as Sources of Law)

ಮುಸ್ಲಿಮ್ ಕಾನೂನಿನ ಮೂಲದ ರೂಪದಲ್ಲಿ ಕುರಾನಿನ ವೈಶಿಷ್ಟ್ಯಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ಕೊಡಲಾಗಿದೆ.

I) ಕುರಾನ್ ಇದು ದೈವಿಕ ಮೂಲದ್ದಾಗಿರುತ್ತದೆ. ಈ ಪವಿತ್ರ ಪುಸ್ತಕದಲ್ಲಿರುವ ಪದ್ಯಗಳು ಸರ್ವಶಕ್ತ ಪರಮಾತ್ಮನಿಂದ ಮಾಡಲ್ಪಟ್ಟವುಗಳಾಗಿವೆಯೇ ಹೊರತು ಯಾವನೇ ಒಬ್ಬ ಮಾನವನಿಂದಲ್ಲ ಎಂಬುದಾಗಿ ಇಸ್ಲಾಮಿನಲ್ಲಿ ನಂಬಲಾಗುತ್ತದೆ. ಪೈಗಂಬರನು ಪರಮಾತ್ಮನ ಪರವಾಗಿ ಕೇವಲ ಈ ಶಬ್ದಗಳನ್ನು ಪುನರಾವರ್ತಿಸಿರುವನು. ಕುರಾನ್ ಇದು ಪರಮಾತ್ಮನ ಶಬ್ದಗಳ ಸಂಗ್ರಹವಾಗಿದೆಯಾದುದರಿಂದ ಈ ಶಬ್ದಗಳನ್ನು ಬದಲಾಯಿಸುವಂತಿಲ್ಲ ಮತ್ತು ಇದರ ಆಧಾರಕ್ಕೆ ಸವಾಲೊಡ್ಡುವಂತಿಲ್ಲ.

II) ಕಾಲಕ್ರಮಣದ ದೃಷ್ಟಿಯಲ್ಲಿ ಕುರಾನ್ ಇದು ಇಸ್ಲಾಮಿನ ಮೂಲಭೂತ ಮೂಲವಾಗಿದೆ. ಇಂದಿನ ಮುಸ್ಲಿಮ್ ಧರ್ಮವು ಕುರಾನಿನ ಶಬ್ದದೊಂದಿಗೆ ಜನಿಸಿದೆ. ಆದುದರಿಂದ ಇಸ್ಲಾಮಿ ಸಿದ್ಧಾಂತದ ಅಥವಾ ಮುಸ್ಲಿಮ್ ಕಾನೂನಿನ ಯಾವತ್ತೂ ಅಧ್ಯಯನವು ಇದರೊಂದಿಗೆ ಆರಂಭವಾಗಬೇಕು.

III) ಕುರಾನ್ ಇದು ಪದ್ಯರೂಪದಲ್ಲಿದೆ. ಪ್ರತಿಯೊಂದು ಪದ್ಯವನ್ನು ಆಯತ್ (Ayat) ಎಂದು ಕರೆಯಲಾಗುತ್ತದೆ. ಈ ಪುಸ್ತಕದಲ್ಲಿ ೬೨೩೭ ಪದ್ಯಗಳಿದ್ದು ಅವು ೧೧೪ ಅಧ್ಯಾಯಗಳಲ್ಲಿ ವಿಭಜಿಸಲ್ಪಟ್ಟಿವೆ. ಕುರಾನಿನ ಪ್ರತಿಯೊಂದು ಅಧ್ಯಾಯವನ್ನು ಸುರಾ (Sura) ಎಂದು ಕರೆಯಲಾಗುತ್ತದೆ. ಆ ಅಧ್ಯಾಯ

ಗಳನ್ನು ವಿಷಯ ಪ್ರಧಾನವಾಗಿ ಕೂಡಿಸಲಾಗಿದ್ದು ಅವುಗಳಿಗೆ ನಿರ್ದಿಷ್ಟವಾದ ಶೀರ್ಷಿಕೆಗಳಿವೆ. ಕುರಾನಿನ ಮೊದಲನೇ ಸುರಾವು ಸುರತ್-ಉಲ್-ಫಾತಿಹಾ (Surat-ul-fatiha) ಆಗಿದ್ದು ಇದು ಪವಿತ್ರ ಗ್ರಂಥದ ಪ್ರಸ್ತಾವನೆಯಾಗಿದೆ, ಮತ್ತು ಇದರಲ್ಲಿ ಸರ್ವಶಕ್ತ ಪರಮಾತ್ಮನ ಸ್ತುತಿಯಿದೆ. ಉಳಿದ ಅಧ್ಯಾಯಗಳಲ್ಲಿ ಅವುಗಳ ಶೀರ್ಷಿಕೆಯಲ್ಲಿ ಹೇಳಲಾದ ವಿಷಯಗಳಿವೆ. ಸೂರತ್-ಉಲ್-ನಿಸಾ (Surat-ul-nisa) ಇದು ಸ್ತ್ರೀಯರಿಗೆ ಸಂಬಂಧಿಸಿರುವ ನಿಯಮಗಳಿಂದ ಕೂಡಿದೆ. ಸೂರತ್-ಉಲ್-ತಲಕ್ (Surat-ul-Talak) ಇದು ವಿವಾಹ ವಿಚ್ಛೇದನೆಗೆ ಸಂಬಂಧಪಟ್ಟ ಅಧ್ಯಾಯವಾಗಿದೆ. ಸೂರತ್-ಉಲ್-ಬಕ್ರಾ (Surat-ul-Baqra) ಇವು ಧಾರ್ಮಿಕ ಮತ್ತು ನೈತಿಕ ನಿಯಮಗಳಿಗೆ ಸಂಬಂಧಪಟ್ಟ ಅಧ್ಯಾಯಗಳಾಗಿವೆ, ಸೂರತ್-ಉಲ್-ಇಕ್ಲಾಸ್ (Surat-ul-Ikhlas) ಇದು ಪರಮಾತ್ಮನಿಗೆ ಪರಮವಾಗಿ ಶರಣಾಗುವ ನಿಯಮದಿಂದ ಕೂಡಿದೆ. ಸೂರತ್-ಉಲ್-ನೂರ್ (Surat ul-Noor) ಇದು ಗ್ರಹಸ್ಥ ಜೀವನಕ್ಕೆ ಸಂಬಂಧಪಟ್ಟುದಾಗಿದೆ. ಇವು ಕುರಾನಿನ ಕೆಲವು ಪ್ರಮುಖ ಅಧ್ಯಾಯಗಳಾಗಿವೆ.

IV) ಕುರಾನ್ ಇದು ಧರ್ಮ, ಕಾನೂನು ಮತ್ತು ನೈತಿಕತೆಯ ಮಿಶ್ರಣವಾಗಿರುತ್ತದೆ. ಕೆಲವು ಅಧ್ಯಾಯಗಳಲ್ಲಿ ಧರ್ಮ, ಕಾನೂನು ಮತ್ತು ನೈತಿಕತೆಯು ಎಷ್ಟರ ಮಟ್ಟಿಗೆ ಮಿಶ್ರಿತಗೊಂಡಿವೆಯೆಂದರೆ ಅವುಗಳನ್ನು ಪ್ರತ್ಯೇಕಿಸುವದೇ ಕಷ್ಟ. ಇತರ ಧರ್ಮಗಳ ಪವಿತ್ರ ಪುಸ್ತಕಗಳಲ್ಲೂ ಸಹ ನಾವು ಅದೇ ರೀತಿಯ ಒಂದು ವಿಶೇಷತೆಯನ್ನು ಕಾಣಬಹುದು. ಧರ್ಮ ಮತ್ತು ನೈತಿಕತೆಗೆ ಸಂಬಂಧಪಟ್ಟ ಕುರಾನಿನ ಪದ್ಯಗಳು ಮಕ್ಕಾದಲ್ಲೂ ಮತ್ತು ಕಾನೂನಿಗೆ ಸಂಬಂಧಪಟ್ಟ ಪದ್ಯಗಳು ಮದಿನಾದಲ್ಲೂ ಪ್ರಕಟಿಸಲ್ಪಟ್ಟವುಗಳೆಂದು ಎಣಿಸಲಾಗುತ್ತದೆ. ಆದುದರಿಂದ ಇಡೀ ಕುರಾನನ್ನು ಕಾನೂನಿನ ಮೂಲವೆಂದು ಎಣಿಸಲಾಗುವದಿಲ್ಲ. ಬೇರೆ ಬೇರೆ ಅಧ್ಯಾಯಗಳಲ್ಲಿ ಕಾಣಸಿಗುವ ಕಾನೂನು ನಿರ್ಮಾಪಕವಾದ ಸುಮಾರು 200 ಅಯತ್‌ಗಳು (Ayath) ಮುಸ್ಲಿಮ್ ಕಾನೂನಿನ ಮೂಲಭೂತ ಮೂಲಗಳೆಂದು ಎಣಿಸಲ್ಪಡುತ್ತವೆ.

V) ಕುರಾನಿನ ಪದ್ಯಗಳು ವಿವಿಧ ವಿಷಯಗಳನ್ನು ಚರ್ಚಿಸುತ್ತವೆ ಮತ್ತು ಪೈಗಂಬರನಿಗೆ ಅವು ಬೇರೆ ಬೇರೆ ಪ್ರದೇಶಗಳಲ್ಲಿ ಕಾಲದಿಂದ ಕಾಲಕ್ಕೆ ಪ್ರಕಟಿಸಲ್ಪಟ್ಟವುಗಳೆಂದು ಎಣಿಸಲ್ಪಡುತ್ತವೆ. ಇವುಗಳಲ್ಲಿ ಕೆಲವು ಪದ್ಯಗಳು ಶಿಶುಹತ್ಯೆ, ಅನಿಯಂತ್ರಿತ ಬಹುಪತ್ನಿತ್ವ, ಜುಗಾರಿ, ವಿಪರೀತ ಬಡ್ಡಿ ಹೇರುವಿಕೆ, ಇತ್ಯಾದಿ ಆಕ್ಷೇಪಾಹಕ ರೂಢಿಗಳನ್ನು ರದ್ದುಪಡಿಸುವುದಕ್ಕೋಸ್ಕರ ವ್ಯಕ್ತಪಡಿಸಲ್ಪಟ್ಟವುಗಳೆಂದು ಎಣಿಸಲಾಗುತ್ತದೆ. ಅವುಗಳಲ್ಲಿ ಕೆಲವು ನಿರ್ದಿಷ್ಟವಾದ ಧಾರ್ಮಿಕ ಹಾಗೂ ನೈತಿಕ ನಿಯಮಗಳನ್ನು ಹಾಕಿವೆ. ಕಾನೂನು ನಿರ್ಮಾಪಕ ಪದ್ಯಗಳು ನೈಜ ಜೀವನದ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಪ್ರಕಟಿಸಲ್ಪಟ್ಟವುಗಳಾಗಿವೆ.

ಕುರಾನಿನಲ್ಲಿ ಅನೇಕ ನಿರ್ಬಂಧಾಜ್ಞೆಗಳೂ ಇವೆ. ಇವು ಇಸ್ಲಾಮೀ ಕಾನೂನಿನ ಬೆಳವಣಿಗೆಗೆ ತುಂಬಾ ಸಹಾಯಕವಾಗಿವೆ.

VI) ಕುರಾನ್ ಇದು ಮುಸ್ಲಿಮ್ ಕಾನೂನಿನ ಅತ್ಯಂತ ಪ್ರಾಧಿಕೃತವಾದ ಮೂಲವಾಗಿದೆ. ಆದುದರಿಂದ ಶಿಯಾ ಅಥವಾ ಸುನ್ನಿ ಸಂಪ್ರದಾಯದವರು ಕುರಾನಿನ ಯಾವುದಾದರೊಂದು ಪದ್ಯಕ್ಕೆ ಒಂದು ನಿರ್ದಿಷ್ಟವಾದ ಅರ್ಥ ಕೊಟ್ಟಿರುವ ರಾದರೆ ಅದಕ್ಕೆ ಇನ್ನೊಂದು ಅರ್ಥ ಕೊಡಲು ನ್ಯಾಯಾಲಯಕ್ಕೆ ಹಕ್ಕಿರುವದಿಲ್ಲ.

VII) ಕಾನೂನಿನ ಮೂಲವಾಗಲು ಕುರಾನಿನಲ್ಲಿ ಕೆಲವು ಕೊರತೆಗಳೂ ಇವೆ. ಅವು ಈ ಕೆಳಗಿನವುಗಳಾಗಿವೆ :

i) ಕುರಾನಿನ ಮೌನಧೋರಣೆ (Silence of Quran)

ಅನೇಕ ವಿಷಯಗಳ ಮೇಲೆ ಕುರಾನ್ ಮೌನ ತಳೆದಿದೆ. ಹೊಸ ಸಮಸ್ಯೆಗಳಿಗೆ ಕುರಾನ್ ಯಾವುದೇ ರೀತಿಯ ಪರಿಹಾರವನ್ನು ಉಪಬಂಧಿಸಿಲ್ಲ.

ii) ಅಶಿಥಿಲತೆ (Rigidity)

ಕುರಾನ್ ಇದರ ಶಬ್ದಗಳು ಪರಮಾತ್ಮನ ಶಬ್ದಗಳಾಗಿವೆಯಾದುದರಿಂದ ಸಮಾಜದಲ್ಲಿ ಬದಲಾವಣೆಗೊಳ್ಳುತ್ತಿರುವ ಸ್ಥಿತಿಗಳಿಗೆ ಅನುಗುಣವಾಗಿ ಅದರಲ್ಲಿ ಬದಲಾವಣೆ ಮಾಡುವಂತಿಲ್ಲ. ಆದುದರಿಂದ ಕುರಾನ್ ಇದೊಂದು ಅಶಿಥಿಲವಾದ ಒಂದು ಕಾನೂನಿನ ಸಂಹಿತೆಯಾಗಿದೆ.

iii) ಅಪೂರ್ಣತೆ (Incompleteness)

ಕುರಾನ್ ಇದು ಒಂದು ಪರಿಪೂರ್ಣವಾದ ಕಾನೂನಿನ ಸಂಹಿತೆಯಲ್ಲ. ಇದು ಸಾಮಾನ್ಯವಾಗಿ ಜೀವನ ಮತ್ತು ಧರ್ಮದ ದರ್ಶನಕ್ಕೆ ಸಂಬಂಧಪಟ್ಟ ಪದ್ಯಗಳಿಂದ ಕೂಡಿಕೊಂಡಿದೆ. ಕೇವಲ ಅಲ್ಪ ಸ್ವಲ್ಪ ಪದ್ಯಗಳು ಕಾನೂನು ವಿಷಯದೊಂದಿಗೆ ಸಂಬಂಧಿಸಿವೆ ಮತ್ತು ಸುಮಾರು ೮೦ ಪದ್ಯಗಳು ಮತೀಯ ಕಾನೂನಿನ ನಿಯಮ ಗಳನ್ನು ಚರ್ಚಿಸುತ್ತವೆ. ಈ ಪದ್ಯಗಳೂ ಸಹ ಕಾನೂನಿನ ವಿಶಾಲವಾದ ಸಿದ್ಧಾಂತ ಗಳನ್ನು ಹಾಕಿಕೊಟ್ಟಿವೆ ಮತ್ತು ಅವು ಈ ಸಿದ್ಧಾಂತಗಳನ್ನು ವಿವರಿಸುತ್ತಿಲ್ಲ.

ಮುಸ್ಲಿಮ್ ಕಾನೂನಿನ ಒಂದು ಮೂಲದ ರೀತಿಯಲ್ಲಿ ಕುರಾನ್ ಇದನ್ನು ಒಂದು ಪರಿಪೂರ್ಣವಾದ ಸಂಹಿತೆಯೆನ್ನುವಂತಿಲ್ಲ. ಆದುದರಿಂದ ಇದಕ್ಕೆ ಅನು ಪೂರಕವಾದ 'ಸುನ್ನಾ' (Sunna) ಎಂಬ ಇನ್ನೊಂದು ಮೂಲದ ಸಹಾಯವನ್ನು ಪಡೆಯಬೇಕಾಗುತ್ತದೆ.

ಸುನ್ನಾ ಅಥವಾ ಅಹದಿಗಳು (Sunna or Ahdis)

ಸುನ್ನಾ ಅಥವಾ ಅಹದಿ ಎಂದರೆ ಪೈಗಂಬರರ ರೂಢಿಗಳು. ಪರಮಾತ್ಮನಿಗೆ ನಿರ್ದೇಶಿಸದೆ ಪೈಗಂಬರನು ಏನನ್ನು ಹೇಳಿದ್ದನೊ ಅಥವಾ ಏನನ್ನು ಮಾಡಿದ್ದನೊ

ಅವನ್ನು ಅವನ ರೂಢಿಗಳೆಂದು ಎಣಿಸಲಾಗುತ್ತದೆ. ಮತ್ತು ಅದು ಮುಸ್ಲಿಮ್ ಕಾನೂನಿನ ಎರಡನೇ ಮೂಲವಾಗಿದೆ. ಯಾವುದಾದರೊಂದು ಕಾನೂನಿನ ನಿಯಮಕ್ಕೆ ಪರಮಾತ್ಮನ ಶಬ್ದಗಳಿಂದ ಒಂದು ಆಧಾರವು ಸಿಗುತ್ತಿಲ್ಲವೆಂದಾದರೆ ಅಲ್ಲಿ ಪೈಗಂಬರನ ಸ್ವಂತ ಶಬ್ದಗಳನ್ನು ಒಂದು ಆಧಾರವೆಂದು ಎಣಿಸಲಾಗುತ್ತದೆ. ಏಕೆಂದರೆ ಅವನ ಸ್ವಂತ ಹೇಳಿಕೆಗಳೂ ಸಹ ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟವುಗಳೆಂದು ಎಣಿಸಲಾಗುತ್ತವೆ. ಪರಮಾತ್ಮನ ಪ್ರಕಟನೆಗಳು ವ್ಯಕ್ತ ಹಾಗೂ ಅವ್ಯಕ್ತವೆಂದು ಎಣಿಸಲಾಗುತ್ತದೆ. ವ್ಯಕ್ತ ಪ್ರಕಟನೆಗಳು ಪರಮಾತ್ಮನ ಸ್ವಂತ ಶಬ್ದಗಳಾಗಿದ್ದು ಅವು ಪೈಗಂಬರನಿಗೆ ಗಾಬ್ರೇಲ್ (Gaberiel) ಎಂಬ ದೇವದೂತನಿಂದ ಬಂದವುಗಳಾಗಿರುತ್ತವೆ; ಮತ್ತು ಇಂತಹ ಪ್ರಕಟನೆಗಳು ಕುರಾನಿನ ಭಾಗವಾಗಿವೆ. ಅವ್ಯಕ್ತ ಪ್ರಕಟನೆಗಳೆಂದರೆ ಪೈಗಂಬರನ ಸ್ವಂತ ಶಬ್ದಗಳು, ಆದರೆ ಅವುಗಳಲ್ಲಿರುವ ವಿಚಾರವು ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟವುಗಳಾಗಿರುತ್ತವೆ. ಇಂತಹ ಪ್ರಕಟನೆಗಳು ಸುನ್ನಾ ಇದರ ಭಾಗವೆಂದು ಎಣಿಸಲಾಗಿವೆ. ಕುರಾನ್ ಮತ್ತು ರೂಢಿ ಇವುಗಳೊಳಗಿನ ವ್ಯತ್ಯಾಸವೇನೆಂದರೆ ಕುರಾನ್‌ನಲ್ಲಿ ಪರಮಾತ್ಮನ ಸ್ವಂತ ಶಬ್ದಗಳಿವೆ, ಆದರ ರೂಢಿಯಲ್ಲಿ ಪೈಗಂಬರನ ಭಾಷೆಯಿದೆ.

ಸುನ್ನಾ ಎಂದರೇನು? (What Constituted Sunna?)

ಪೈಗಂಬರನ ಎಲ್ಲ ಬೋಧನೆಗಳು ಮತ್ತು ವ್ಯವಹಾರಗಳು ಸುನ್ನಾ ಇದರ ಭಾಗವಾಗಿರುತ್ತವೆ. ಪೈಗಂಬರನು ಏನೆಲ್ಲ ಹೇಳಿರುವನೊ, ಏನನ್ನು ಮಾಡಿರುವನೊ ಮತ್ತು ಅವನಿಗೆ ಒಂದು ಪ್ರಶ್ನೆ ಹಾಕಿದಾಗ ಎಂದು ಮೌನ ತಾಳಿದ್ದನೊ ಅದನ್ನೆಲ್ಲ ಆಧಾರವೆಂದು ಸ್ವೀಕರಿಸಲಾಗಿದೆ. ಮುಸ್ಲಿಮ್ ಕಾನೂನಿನ ಒಂದು ಮೂಲವೆಂದು ಎಣಿಸಲ್ಪಡುವ ರೂಢಿಯಲ್ಲಿ ಈ ಕೆಳಗಿನವುಗಳಿರುತ್ತವೆ.

೧) **ಸುನ್ನತ್-ಉಲ್-ಕ್ವಾಲ್ (Sunnat-Ul-Qual)**: ಇದರ ಅರ್ಥವೇನೆಂದರೆ ಮುಹಮ್ಮದ ಪೈಗಂಬರನ ಹೇಳಿಕೆಗಳು ಅಥವಾ ಯೋಚನೆಗಳು.

೨) **ಸುನ್ನತ್-ಉಲ್-ಫೇಲ್ (Sunnat-Ul-Fail)**: ಇದು ಪೈಗಂಬರನ ನಡತೆ ಅಥವಾ ವ್ಯವಹಾರ ಇವುಗಳಿಂದ ಕೂಡಿಕೊಂಡಿದೆ, ಮತ್ತು

೩) **ಸುನ್ನತ್-ಉಲ್-ತಕ್ರೀರ್ (Sunnat-Ul-Taqreer)** : ಪೈಗಂಬರನಿಗೆ ಪ್ರಶ್ನೆ ಹಾಕಿದಾಗ ಕೆಲವೊಮ್ಮೆ ಅವನು ತಾಳುತ್ತಿರುವ ಮೌನವನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಇಲ್ಲಿ ಮೌನವನ್ನು ಅವ್ಯಕ್ತ ಸಮ್ಮತಿ ಅಥವಾ ಕಾನೂನಿನ ಒಂದು ನಿಯಮಕ್ಕೆ ಕೊಡಲಾದ ಒಂದು ಸಮ್ಮತಿ ಎಂಬುದಾಗಿ ಎಣಿಸಲಾಗುತ್ತದೆ. ಇದು ಇಸ್ಲಾಮ್-ಪೂರ್ವ ರೂಢಿಗಳಿಂದಲೂ ಕೂಡಿಕೊಂಡಿದೆ. ಅವನು ಕೆಲವು ರೂಢಿಗಳ ಮುಂದುವರಿಯುವಿಕೆಗೆ ಮೌನ ತಳೆದು ಸಮ್ಮತಿ ಕೊಟ್ಟಿರುವನು.

ರೂಢಿಗಳ ಆಖ್ಯಾನಕಾರರು
(Narraters of traditions)

ಬೋಧನೆ ಮತ್ತು ಜೀವನ ಸಿದ್ಧಾಂತಗಳು ಕಾನೂನಿನ ಒಂದು ಆಧಾರಯುಕ್ತ ಮೂಲವೆಂದು ಎಣಿಸಲ್ಪಡಬೇಕಾದರೆ ಒಬ್ಬ ಸಕ್ಷಮ ಹಾಗೂ ಅರ್ಹತೆಯುಳ್ಳ ವ್ಯಕ್ತಿಯು ಅದನ್ನು ಆಖ್ಯಾಯಿತಗೊಳಿಸಬೇಕಾಗುತ್ತದೆ. ಅಂಥವನು ಆ ಬೋಧನೆ ಅಥವಾ ಮೂಲ ಸಿದ್ಧಾಂತಗಳನ್ನು ಪೈಗಂಬರನು ಹೇಳುತ್ತಿದ್ದಾಗ ಕೇಳಿರಬೇಕು ಅಥವಾ ಪೈಗಂಬರನು ಅವುಗಳ ಬಗ್ಗೆ ಮೌನ ತಳೆದಿರುವಾಗ ಅದನ್ನು ಕಂಡಿರಬೇಕು. ಒಂದೊಮ್ಮೆ ಇಂತಹ ಆಖ್ಯಾನವು ವಿಶ್ವಾಸಾರ್ಹವೆಂಬುದಾಗಿ ಕಂಡು ಬಂದರೆ ಅದು ಸುನ್ನಾ ಆಗುತ್ತದೆ. ಒಂದು ರೂಢಿಯ ಆಖ್ಯಾನವು ಕಾನೂನಿನ ಒಂದು ಹೊಸ ನಿಯಮವಾಗಿರುವ ಕಾರಣ ಆ ಆಖ್ಯಾನಕಾರನು ಒಬ್ಬ ಅರ್ಹತೆಯುಳ್ಳ ವ್ಯಕ್ತಿಯಾಗುವ ಅವಶ್ಯಕತೆಯಿತ್ತು. ಅಬ್ದುಲ್ ರಹೀಮ್ ಇವನ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಯು ಸಕ್ಷಮ ಆಖ್ಯಾನಕಾರನಾಗಬೇಕಾದರೆ ಅವನಲ್ಲಿ ಈ ಕೆಳಗಿನ ಅರ್ಹತೆಗಳಿರಬೇಕು— ೧) ಅವನು ತಿಳುವಳಿಕೆಯುಳ್ಳ ವ್ಯಕ್ತಿಯಾಗಿರಬೇಕು. ೨) ಅವನಲ್ಲಿ ಗ್ರಹಣಶಕ್ತಿಯಿದ್ದಿರಬೇಕು. ೩) ಅವನೊಬ್ಬ ಮುಸಲ್ಮಾನನಾಗಿರಬೇಕು ಮತ್ತು ೪) ಅವನು ಒಳ್ಳೆಯ ನಡತೆಯುವನಾಗಿರಬೇಕು. ಈ ಎಲ್ಲಾ ಅರ್ಹತೆಗಳಿದ್ದಾಗ ಈ ಕೆಳಗಿನ ವ್ಯಕ್ತಿಗಳನ್ನು ಆಖ್ಯಾನಕಾರರೆಂದು ಮನ್ನಿಸಲಾಗುತ್ತದೆ :

ಎ) ಪೈಗಂಬರನ ಸಂಗಡಿಗರು (Companions of the Prophet)

ಇವರು ಎಂತಹ ಮುಸಲ್ಮಾನರಾಗಿದ್ದರೆಂದರೆ ಪೈಗಂಬರನ ಜೀವಮಾನದಲ್ಲಿ ಇವರು ಜೀವಿಸಿದ್ದರು ಮತ್ತು ಅವನ ಅತ್ಯಂತ ನಿಕಟ ಸಂಪರ್ಕ ಹೊಂದುವ ಸವಲತ್ತು ಪಡೆದಿದ್ದರು. ಇವರ ಆಖ್ಯಾನವು ತುಂಬಾ ವಿಶ್ವಾಸಾರ್ಹವೆಂದು ಎಣಿಸಲ್ಪಡುತ್ತದೆ.

ಬಿ) ಸಂಗಡಿಗರ ಉತ್ತರಾಧಿಕಾರಿಗಳು (Successors of the Companion)

ಪೈಗಂಬರನ ಜೀವಮಾನದಲ್ಲಿ ಜೀವಿಸಿರದ ಆದರೆ ಅವನ ಸಂಗಡಿಗರೊಂದಿಗೆ ಸಂಪರ್ಕವಿದ್ದಿರುವ ಮುಸಲ್ಮಾನರನ್ನು ಉತ್ತರಾಧಿಕಾರಿಗಳೆಂದು ಕರೆಯಲಾಗುತ್ತದೆ. ಈ ಉತ್ತರಾಧಿಕಾರಿಗಳ ಆಖ್ಯಾನದ ಆಧಾರವು ಸಂಗಡಿಗರ ಆಖ್ಯಾನದ ನಂತರ ಆದ್ಯತೆಯಲ್ಲಿ ಬರುತ್ತದೆ.

ಉತ್ತರಾಧಿಕಾರಿಗಳ ಉತ್ತರಾಧಿಕಾರಿಗಳು (Successors of the Successors)

ಪೈಗಂಬರನ ಜೀವಮಾನದಲ್ಲಿ ಅಥವಾ ಅವನ ಸಂಗಡಿಗರ ಜೀವಮಾನದಲ್ಲಿ ಜೀವಿಸಿರದ ಆದರೆ ಆ ಸಂಗಡಿಗರ ಉತ್ತರಾಧಿಕಾರಿಗಳ ಜೀವಮಾನದಲ್ಲಿ ಜೀವಿಸಿರುವ ಮುಸಲ್ಮಾನರನ್ನು ಸಂಗಡಿಗರ ಉತ್ತರಾಧಿಕಾರಿಗಳ ಉತ್ತರಾಧಿಕಾರಿಯೆಂದು ಕರೆಯಲಾಗುತ್ತದೆ. ಅವರು ಆಖ್ಯಾನಗೊಳಿಸಿರುವ ಒಂದು ರೂಢಿಯು ಆದ್ಯತೆಯ ದೃಷ್ಟಿ

ಯಲ್ಲಿ ಕೊನೆಗೆ ಬರುತ್ತದೆ. ಆದುದರಿಂದ ಒಬ್ಬ ಆಖ್ಯಾನಕಾರನು ಪೈಗಂಬರನಿಗೆ ಎಷ್ಟು ಸಮೀಪಸ್ಥನಾಗಿದ್ದನೋ ಅಷ್ಟೇ ಆವನ ಆಖ್ಯಾನವು ಮಹತ್ವ ಪಡೆಯುತ್ತದೆ.

ರೂಢಿಗಳ ಪ್ರಕಾರಗಳು (Kinds of Traditions)

ಒಂದು ರೂಢಿಯು ಕಾನೂನಿನ ಮೂಲವೆಂಬುದಾಗಿ ಮನ್ನಿಸಲ್ಪಟ್ಟು ಸ್ವೀಕರಿಸಲ್ಪಡಬೇಕಾದರೆ ಅದು ಪ್ರಾಧಿಕೃತವಾಗಿರಬೇಕು ಮತ್ತು ಆ ಪ್ರಾಧಿಕೃತವಾಗಿರುವಿಕೆಯು ಆಖ್ಯಾನಕಾರನು ಕೊಟ್ಟಿರುವ ಪುರಾವೆಯನ್ನು ಅವಲಂಬಿಸಿರುತ್ತದೆ. ಅವುಗಳ ಪ್ರಾಧಿಕಾರ ಮತ್ತು ಅವುಗಳಿಗೆ ಸಮಾಜದಿಂದ ಕೊಡಲಾದ ಸ್ವೀಕೃತಿ ಇವು ಆಧಾರದ ಮೇಲೆ ರೂಢಿಗಳನ್ನು ಈ ಕೆಳಗಿನ ವರ್ಗಗಳಲ್ಲಿ ವಿಭಜಿಸಬಹುದು :

೧) **ಅಹದೀಸ್-ಆಯ್-ಮುಟ್ವಾಟಿರ್ (Ahadis-I-Mutwatir)** ಅಹದೀಸ್-ಆಯ್-ಮುಟ್ವಾಟಿರ್ ಎಂದರೆ ಸಾರ್ವತ್ರಿಕವಾಗಿ ಸ್ವೀಕರಿಸಲ್ಪಟ್ಟ ರೂಢಿಗಳು. ಇವು ಅಸಂಖ್ಯಾತ ವ್ಯಕ್ತಿಗಳಿಂದ ಸತತವಾಗಿ ಆಖ್ಯಾನಗೊಳಿಸಲ್ಪಟ್ಟ ರೂಢಿಗಳಾಗಿವೆ. ಅವುಗಳ ಯಥಾರ್ಥತೆ ಮತ್ತು ನಿಶ್ಚಿತತೆಗಳ ಬಗ್ಗೆ ಯಾವತ್ತೂ ಸಂಶಯವಿಲ್ಲದ ಕಾರಣ ಅವು ಅತ್ಯಂತ ಪ್ರಾಧಿಕೃತವಾದ ರೂಢಿಗಳೆಂದು ಎಣಿಸಲ್ಪಡುತ್ತವೆ. ಇವುಗಳಿಗೆ ಸಾರ್ವತ್ರಿಕ ಸ್ವೀಕೃತಿಯಿದೆ ಮತ್ತು ಇಸ್ಲಾಮಿನ ಎಲ್ಲಾ ಪಂಗಡದವರು ಇದನ್ನು ಸ್ವೀಕರಿಸಿರುವರು.

೨) **ಅಹದೀಸ್ - ಆಯ್ - ಮಷೂರ್ (Ahdis-I-Mashoor) :** ಅಹದೀಸ್-ಆಯ್-ಮಷೂರ್ ಎಂದರೆ ಸುಪ್ರಸಿದ್ಧವಾದ ರೂಢಿಗಳು. ಕೆಲವು ರೂಢಿಗಳು ಪೈಗಂಬರನ ಸಂಗಡಿಗರಿಂದ ಆಖ್ಯಾನಗೊಳಿಸಲಾಗಿವೆ ಮತ್ತು ತದನಂತರ ಅವು ಬಹುಸಂಖ್ಯಾತ ಜನರಿಂಧ ಸ್ವೀಕರಿಸಲ್ಪಟ್ಟಿವೆ. ಅಂತಹ ರೂಢಿಗಳನ್ನು ಪ್ರಸಿದ್ಧವಾದ ರೂಢಿಗಳೆಂದು ಕರೆಯಲಾಗುತ್ತದೆ. ಈ ರೂಢಿಗಳು ಮುಸಲ್ಮಾನರಿಂದ ನಿರ್ವಿರೋಧವಾಗಿ ಸ್ವೀಕರಿಸಲ್ಪಟ್ಟಿಲ್ಲದಿದ್ದರೂ ಸಹ ಬಹುಸಂಖ್ಯಾತ ಮುಸಲ್ಮಾನರು ಇವುಗಳನ್ನು ಒಂದು ಕಾನೂನಿನ ಮೂಲವೆಂಬುದಾಗಿ ಸ್ವೀಕರಿಸಿರುವರು.

೩) **ಅಹದೀಸ್-ಅರ್ಹದ್ (Ahdis-Ahrd) :** ಅಹದೀಸ್-ಅರ್ಹದ್ ಎಂದರೆ ಪ್ರತ್ಯೇಕವಾಗಿ ಉಳಿದಿರುವ ರೂಢಿಗಳು. ಪ್ರತ್ಯೇಕವಾಗಿ ಉಳಿದಿರುವ ರೂಢಿಗಳು ಸತತವಾಗಿ ಬಹುಸಂಖ್ಯಾತ ಜನರಿಂದ ಉಪಯೋಗಿಸಲ್ಪಟ್ಟಿಲ್ಲದವುಗಳಾಗಿವೆ. ಆದರೆ ಸಮಾಜದ ಒಂದು ವರ್ಗವು ಅವನ್ನು ಕಾನೂನಿನ ಮೂಲವೆಂದು ಸ್ವೀಕರಿಸಿದೆ. ಪೈಗಂಬರನ ಒಬ್ಬ ಸಂಗಡಿಗನಿಂದ ಆಖ್ಯಾನಗೊಳಿಸಲಾದ ಒಂದು ರೂಢಿಯು ಕೆಲವಷ್ಟೇ ಜನರಿಂದ ಸ್ವೀಕರಿಸಲ್ಪಟ್ಟಿತ್ತು. ಆದರ ಬಳಕೆಯು ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದರೆ ಅದೊಂದು ಪ್ರತ್ಯೇಕವಾದ ರೂಢಿಯಾಗಿ ಉಳಿಯುತ್ತದೆ. ಹೆಚ್ಚಿನ ನ್ಯಾಯದರ್ಶಿಗಳು ಇಂತಹ ಹೆಚ್ಚಿನ ರೂಢಿಗಳನ್ನು ಮುಸ್ಲಿಮ್ ಕಾನೂನಿನ ಒಂದು ಮೂಲವೆಂಬುದಾಗಿ ಸ್ವೀಕರಿಸುವದಿಲ್ಲ.

ರೂಢಿಗಳೆಂದರೆ ಕಾನೂನು ಮತ್ತು ಧರ್ಮದ ಆಖ್ಯಾನಗಳಾಗಿದ್ದು ಅವು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಪ್ರಕಟಿಸಲ್ಪಟ್ಟು ಕ್ರಮೇಣ ಅವು ಸಮಾಜದ ಒಂದು ಆಚರಣೆಗಳಾದವು. ಸುದೀರ್ಘ ಕಾಲ ಅವು ಬರೆದಿಡಲ್ಪಟ್ಟಿಲ್ಲ; ಕ್ರಮಬದ್ಧವಾಗಿ ಇಟ್ಟುಕೊಂಡಿರಲ್ಪಟ್ಟಿಲ್ಲ. ಮೊದಲನೇ ಬಾರಿಗೆ ಅಬು-ಇಬ್ಲ್-ಜಹಿರ (Abu-Ibl-Zuhir) ಎಂಬವನು ಒಂದುಗೂಡಿಸಿ ಬರೆದಿಡುವ ಪ್ರಯತ್ನ ಮಾಡಿದ್ದನು. ಮಲ್ಲಿಕ್-ಇಬ್ನ್-ಅನಸ್ ಇವನ ಮುರವಟ್ಟಾ ಎಂಬ ಪುಸ್ತಕವು ಈ ರೂಢಿಗಳ ಮೊದಲನೇ ಸಂಗ್ರಹವಾಗಿದ್ದು ಅದರಲ್ಲಿ ಇವುಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಲಾಗಿದೆ. ರೂಢಿಗಳ ಸಂಖ್ಯೆಯು ತುಂಬಾ ದೊಡ್ಡದಾಗಿದೆ. ಇಬ್ನ್-ಅನಬಾಲ್ ಎಂಬವನು ತನ್ನ ಮಸ್ನದ (Masnad) ಎಂಬ ಪುಸ್ತಕದಲ್ಲಿ ಸುಮಾರು ೮೦,೦೦೦ ರೂಢಿಗಳನ್ನು ಸಂಗ್ರಹಿಸಿರುವನು.

ರೂಢಿಗಳ ಕುಂದು ಕೊರತೆಗಳು (Drawbacks of Traditions)

೧) ಮುಸ್ಲಿಮ್ ಕಾನೂನಿನ ಮೂಲದ ರೀತಿಯಲ್ಲಿ ರೂಢಿಗಳ ಮಹತ್ವವು ಪ್ರಶ್ನಾತೀತವಾಗಿದೆಯಾದರೂ ಸಹ ಅದಕ್ಕೆ ಈ ಕೆಳಗಿನ ಕುಂದುಕೊರತೆಗಳಿವೆ.

೧) ಅನೇಕ ರೂಢಿಗಳ ಮೂಲವು ಅನಿಶ್ಚಿತವಾಗಿದೆ. ಅನೇಕ ಸಂದರ್ಭಗಳಲ್ಲಿ ಪೈಗಂಬರನ ಸಮಕಾಲೀನ ಆಚರಣೆಗಳನ್ನು ಪೈಗಂಬರನ ರೂಢಿಗಳೆಂದು ಎಣಿಸಿ ಅವುಗಳನ್ನು ಕಾನೂನಿನ ನಿಯಮಗಳಂತೆ ಎಣಿಸಲಾಗಿದೆ. ಅಂತಹ ರೂಢಿಗಳ ಆಖ್ಯಾನಕಾರರು ಆಧ್ಯಾತ್ಮಿಕ ವ್ಯಕ್ತಿಗಳಾಗಿರುವರು.

೨) ಅನೇಕ ರೂಢಿಗಳು ಪರಸ್ಪರ ವಿರೋಧಿಯಾಗಿವೆ. ಆದುದರಿಂದ ಅನೇಕ ವಿಷಯಗಳ ಬಗ್ಗೆ ಏಕರೂಪತೆ ಮತ್ತು ನಿಶ್ಚಿತತೆಯಿಲ್ಲ.

೩) ರೂಢಿಗಳು ಸಮಾಜಕ್ಕೆ ಧಾರ್ಮಿಕ, ನೈತಿಕ ಮತ್ತು ಕಾನೂನೀ ನೀತಿ ಸಂಹಿತೆಯನ್ನು ಹಾಕಿಕೊಟ್ಟಿವೆ. ಕೆಲವೊಮ್ಮೆ ಧಾರ್ಮಿಕ ಮತ್ತು ನೈತಿಕ ಸಿದ್ಧಾಂತಕವನ್ನು ಒಂದು ಕಾನೂನೀ ನಿಯಮದಿಂದ ಪ್ರತ್ಯೇಕಿಸುವುದು ಕಷ್ಟವಾಗುತ್ತದೆ.

೪) ರೂಢಿಗಳು ಅವುಗಳ ಆಖ್ಯಾನಕಾರರಿಂದ ಪ್ರಾಧಿಕೃತಗೊಳಿಸಲ್ಪಟ್ಟಿವೆ. ಉತ್ತರಾಧಿಕಾರಿಯ ಉತ್ತರಾಧಿಕಾರಿಯು ಮೃತನಾದ ಬಳಿಕ ಕಾನೂನಿನ ಈ ಮೂಲದ ನಿರ್ಮಾಣವು ನಿಂತುಬಿಟ್ಟಿತು. ಇದರ ಪರಿಣಾಮವಾಗಿ ಯಾವುದಾದರೊಂದು ಹೊಸ ಪರಿಸ್ಥಿತಿಗಳಿಗೆ ಕಾನೂನಿನ ಮೂಲವಾಗಿರುವ ರೂಢಿಗಳು ಸಿಗುತ್ತಿರಲಿಲ್ಲ.

ಮೇಲ್ಕಾಣಿಸಲಾದ ಕುಂದು ಕೊರತೆಗಳಿಂದಾಗಿ ಬೆಳೆಯುತ್ತಿರುವ ಇಸ್ಲಾಮ್ ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಕಾನೂನಿನ ಇತರ ಕೆಲವು ಮೂಲಗಳನ್ನು ಹುಡುಕಬೇಕಾಯಿತು. ಇದರ ಪರಿಣಾಮವಾಗಿ ಇಜ್ಮಾ (Ijma) ಎಂಬ ಕಾನೂನಿನ ಹೊಸ ಮೂಲದ ಮಹತ್ವವುಂಟಾಯಿತು.

ಇಜ್ಮಾ (Ijma)

ಯಾವುದಾದರೊಂದು ಕಾನೂನಿನ ನಿಯಮದ ಬಗ್ಗೆ ಕುರಾನ್ ಮತ್ತು ರೂಢಿಗಳು ಯಾವುದೇ ಒಂದು ಪರಿಹಾರವನ್ನು ಒದಗಿಸುವಲ್ಲಿ ವಿಫಲವಾದಾಗ ಅದರ ಬಗ್ಗೆ ಕಾನೂನು ಬಲ್ಲ ವ್ಯಕ್ತಿಗಳು ನಿರ್ವಿವಾದವಾಗಿ ಕೆಲವೊಮ್ಮೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ನ್ಯಾಯದರ್ಶಿಗಳ ಇಂತಹ ನಿರ್ವಿವಾದವಾದ ಅಭಿಪ್ರಾಯಗಳನ್ನು ಇಜ್ಮಾ ಎಂದು ಕರೆಯಲಾಗುತ್ತದೆ, ಮತ್ತು ಇದು ಮುಸ್ಲಿಮ್ ಕಾನೂನಿನ ಮೂರನೇ ಪ್ರಾಥಮಿಕ ಮೂಲವಾಗಿದೆ. ಮುಸ್ಲಿಮ್ ಕಾನೂನಿನ ನಂತರದ ಬೆಳವಣಿಗೆಯಲ್ಲಿ ಇಜ್ಮಾ ಇದು ಮುಸ್ಲಿಮ್ ಕಾನೂನಿನ ಒಂದು ಮೂಲವಾಗಿ ಒಂದು ಮಹತ್ವದ ಪಾತ್ರವಹಿಸಿದೆ. ಇಸ್ಲಾಮೀ ಸಮಾಜದ ಬದಲಾಗುತ್ತಿರುವ ಅವಶ್ಯಕತೆಗಳಿಗೆ ಬೇಕಾಗುವ ಹೊಸ ಕಾನೂನೀ ನಿಯಮಗಳನ್ನು ನಿರ್ಮಿಸಲು ಇಜ್ಮಾವು ತುಂಬಾ ಸಹಕಾರಿಯಾಗಿದೆ. ಇಜ್ಮವು ಇಲ್ಲದಿದ್ದರೆ ಇದು ಸಾಧ್ಯವಾಗುತ್ತಿತ್ತು ಎನ್ನುವುದು ಕಷ್ಟ. ಮುಸ್ಲಿಮ್ ಕಾನೂನಿನ ಮೂಲವಾದ ಇಜ್ಮಾ ಇದರ ವಿಧ್ಯುಕ್ತತೆಯು ಪೈಗಂಬರನ ಒಂದು ರೂಢಿಯ ಮೇಲೆ ಅವಲಂಬಿಸಿದೆ, ಅದೇನೆಂದರೆ "ಒಂದು ತಪ್ಪಿನ ಮೇಲೆ ಸಹಮತರಾಗಲು ಪರಮಾತ್ಮನು ಅವನ ಜನರನ್ನು ಅನುಮತಿಸಲಾರ."

ಇಜ್ಮಾ ಇದರ ನಿರ್ಮಾಣ (Formation of Ijma)

ಕಾನೂನಿನ ಒಂದು ಹೊಸ ಸಿದ್ಧಾಂತದ ಅವಶ್ಯಕತೆ ಬಿದ್ದಾಗ ನ್ಯಾಯದರ್ಶಿಗಳು ತಮ್ಮ ಸಮವರ್ತಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಕಾನೂನಿನ ಒಂದು ಹೊಸ ನಿಯಮಗಳನ್ನು ನಿರ್ಮಿಸುತ್ತಿದ್ದರು. ಇಜ್ಮಾ ಇದರ ನಿರ್ಮಾಣದಲ್ಲಿ ಸೇರಲು ಪ್ರತಿಯೊಬ್ಬ ಮುಸಲ್ಮಾನನು ಸಕ್ಷಮನಾಗಿರಲಿಲ್ಲ. ಕೇವಲ ನ್ಯಾಯದರ್ಶಿಗಳು ಮಾತ್ರ ಇದರಲ್ಲಿ ಭಾಗವಹಿಸಬಹುದಿತ್ತು. ಒಬ್ಬನು ಮಜ್ತಾಹಿದ್ (Mujtahid) ಎಂದು ಹೇಳಲ್ಪಡಬೇಕಾದರೆ ಅವನೊಬ್ಬ ಮುಸಲ್ಮಾನನಾಗಿದ್ದು ಅವನಿಗೆ ಕಾನೂನಿನ ಪರ್ಯಾಪ್ತ ಜ್ಞಾನವಿದ್ದಿರಬೇಕು ಮತ್ತು ಅವನು ಸ್ವತಂತ್ರ ನಿರ್ಣಯಕೊಡಲು ಸಮರ್ಥನಾಗಿದ್ದಿರಬೇಕು. ನ್ಯಾಯದರ್ಶಿಗಳೊಳಗಿನ ಐಕ್ಯಮತ್ಯದಿಂದ ಒಂದು ಕಾನೂನಿನ ನಿರ್ಮಾಣವಾಗಿರುವ ಪ್ರಕ್ರಿಯೆಗೆ ಇಜ್ತಿಹಾದ್ (Ijtihad) ಎಂದು ಕರೆಯಲಾಗುತ್ತಿತ್ತು. ಇದರ ಅರ್ಥವೇನೆಂದರೆ ಒಬ್ಬನು ತನ್ನ ಸ್ವಂತ ತಾರ್ಕಿಕ ವಿಚಾರದಿಂದ ಕಾನೂನಿನ ಒಂದು ಹೊಸ ನಿಯಮವನ್ನು ನಿರ್ಮಿಸುವುದು. ಯಾವದೇ ಒಂದು ಆದೇಶವಿಲ್ಲದೇ ನ್ಯಾಯದರ್ಶಿಗಳು ಯಾವತ್ತೂ ತೀರ್ಪು ಕೊಡುವಂತಿಲ್ಲ. ಅವರು ತಮ್ಮ ಅಭಿಪ್ರಾಯಗಳನ್ನು ಕುರಾನಿನ ಅಥವಾ ರೂಢಿಯ ಒಂದು ಸರ್ವಸ್ವೀಕೃತ ಸಿದ್ಧಾಂತದ ಆಧಾರದ ಮೇಲೆ ತಮ್ಮ ಅಭಿಪ್ರಾಯವನ್ನು ಸಮರ್ಥಿಸಬೇಕಾಗುತ್ತಿತ್ತು. ಸಾರ್ವಜನಿಕ ನೀತಿ ಮತ್ತು ಅಪಕ್ಷಪಾತತೆಯನ್ನೂ ಸಹ ಒಂದು ಹೊಸ ಕಾನೂನಿಗೆ ಆಧಾರವಾಗಿ ತೆಗೆದುಕೊಳ್ಳಬೇಕಾಗುತ್ತಿತ್ತು.

ಇಜ್ಮಾ ಇದರ ಪ್ರಕಾರಗಳು (Kinds of Ijma)

ಒಂದು ಇಜ್ಮದ ಪ್ರಾಧಿಕಾರವು ಅದರ ನಿರ್ಮಾಣದಲ್ಲಿ ಭಾಗವಹಿಸಿರುವ ವ್ಯಕ್ತಿಯ ಯೋಗ್ಯತೆಯನ್ನು ಅವಲಂಬಿಸಿಕೊಂಡಿತ್ತು. ನ್ಯಾಯದರ್ಶಿಗಳಲ್ಲಿ ಬೇರೆ ಬೇರೆ ವರ್ಗಗಳಿದ್ದವು. ನ್ಯಾಯದರ್ಶಿಗಳ ವರ್ಗವು ಎಷ್ಟು ಶ್ರೇಷ್ಠವಾಗಿತ್ತೋ ಅಷ್ಟೇ ಅವರ ಅಭಿಪ್ರಾಯವು ಅಮೂಲ್ಯವಾಗಿತ್ತು. ಪ್ರಾಧಿಕಾರ ಮತ್ತು ಪ್ರಾಮುಖ್ಯತೆಯ ದೃಷ್ಟಿಯಿಂದ ಇಜ್ಮಾ ಇದನ್ನು ಮೂರು ವರ್ಗಗಳಲ್ಲಿ ವಿಭಜಿಸಲಾಗಿದೆ.

೧) **ಸಂಗಡಿಗರ ಇಜ್ಮಾ (Ijma of the Companions)** : ಪೈಗಂಬರನ ಸಂಗಡಿಗರ ಸಮವರ್ತಿ ಅಭಿಪ್ರಾಯಗಳನ್ನು ಅತ್ಯಂತ ಅಮೂಲ್ಯವಾದ ಹಾಗೂ ವಿಶ್ವಾಸನೀಯ ಅಭಿಪ್ರಾಯಗಳೆಂದು ಸ್ವೀಕರಿಸಲಾಗುತ್ತದೆ. ಈ ಸಂಗಡಿಗರು ನ್ಯಾಯದರ್ಶಿಗಳಾಗಿ ವರ್ತಿಸಲು ಶ್ರೇಷ್ಠ ವ್ಯಕ್ತಿಗಳೆಂದು ಎಣಿಸಲ್ಪಡುತ್ತಿದ್ದರು. ಇಂತಹ ಇಜ್ಮವು ಅತ್ಯಂತ ಪ್ರಾಧಿಕೃತವಾಗಿದ್ದುದರಿಂದ ಅದನ್ನು ಕಡೆಗಣಿಸುವುದಾಗಲಿ ಅಥವಾ ಮಾರ್ಪಾಡುಗೊಳಿಸುವುದಾಗಲಿ ಸಾಧ್ಯವಿರಲಿಲ್ಲ. ಹನಬಾಲಿಗಳು ಈ ರೀತಿಯ ಇಜ್ಮವನ್ನು ಮಾತ್ರ ಮನ್ನಿಸುವರು.

೨) **ನ್ಯಾಯದರ್ಶಿಗಳ ಇಜ್ಮ (Ijma of the Zurists)** ಇದು ಯಾವುದಾದರೊಂದು ನಿರ್ದಿಷ್ಟ ಕಾಲದಲ್ಲಿ ಕಾನೂನಿನ ವಿಷಯಗಳ ಬಗ್ಗೆ ನ್ಯಾಯದರ್ಶಿಗಳ ನಿರ್ವಿವಾದವಾದ ನಿರ್ಣಯವಾಗಿತ್ತು. ಕಾನೂನಿನ ಯಾವುದಾದರೊಂದು ನಿಯಮದ ಬಗ್ಗೆ ಪೈಗಂಬರನ ಸಂಗಡಿಗರು ವ್ಯಕ್ತಪಡಿಸಿರುವ ಯಾವತ್ತೂ ಅಭಿಪ್ರಾಯವು ಇಲ್ಲದಾಗ ನ್ಯಾಯಶಾಸ್ತ್ರದ ಪಂಡಿತರ ಅಭಿಪ್ರಾಯವನ್ನು ಸ್ವೀಕರಿಸಲಾಗುತ್ತಿತ್ತು. ಕಾನೂನಿನ ಹನಫಿ ನಿಯಮಗಳಲ್ಲಿ ಹೆಚ್ಚಿನವುಗಳು ಈ ರೀತಿಯ ಇಜ್ಮಾದಿಂದ ನಿರ್ಮಿಸಲ್ಪಟ್ಟಿವೆ.

೩) **ಜನತೆಯ ಇಜ್ಮಾ (Ijma of the People)** : ಮುಸಲ್ಮಾನರಲ್ಲಿ ಬಹುಸಂಖ್ಯಾತರ ಅಭಿಪ್ರಾಯವು ಈ ವರ್ಗದ ಇಜ್ಮಾದಲ್ಲಿ ಬರುತ್ತದೆ. ಕೆಲವೊಮ್ಮೆ ಮುಸಲ್ಮಾನರೊಳಗೆ ಬಹುಸಂಖ್ಯಾತರ ಒಂದು ನಿರ್ಣಯವನ್ನು ಕಾನೂನು ಎಂಬುದಾಗಿ ಸ್ವೀಕರಿಸಲಾಗುತ್ತದೆ. ಕಾನೂನಿನ ಮೂಲದ ರೀತಿಯಲ್ಲಿ ಈ ರೀತಿಯ ಇಜ್ಮಕ್ಕೆ ಅಷ್ಟೊಂದು ಬೆಲೆಯಿಲ್ಲ. ಇದಕ್ಕೆ ಕಾರಣವೇನೆಂದರೆ, ಮೊದಲನೆಯದಾಗಿ, ಬಹುಸಂಖ್ಯಾತರಿಂದ ಯಾವುದೇ ಒಂದು ವಿಷಯದ ಬಗ್ಗೆ ಸಮವರ್ತಿ ಅಭಿಪ್ರಾಯವನ್ನು ಪಡೆಯುವದು ಅಸಾಧ್ಯವಾಗಿರುತ್ತದೆ. ಎರಡನೆಯದಾಗಿ, ಪ್ರತಿಯೊಬ್ಬ ಮುಸಲ್ಮಾನನನ್ನು ಒಬ್ಬ ವಿದ್ವಾಂಸನೆಂದು ಎಣಿಸಲಾಗುವದಿಲ್ಲ. ಈ ರೀತಿಯ ಇಜ್ಮವು ಸಾಮಾನ್ಯವಾಗಿ ಧಾರ್ಮಿಕ ಆಚರಣೆಗಳಿಗೆ ಸಂಬಂಧಪಟ್ಟದಾಗಿದೆ. ಉಪವಾಸ, ಪ್ರಾರ್ಥನೆ, ಇತ್ಯಾದಿಗಳ ಬಗ್ಗೆ ಈ ಇಜ್ಮವನ್ನು ಸ್ವೀಕರಿಸಲಾಗುತ್ತದೆ.

ಳ) ಇಜ್ಮಾ ಇದರ ಕುಂದು ಕೊರತೆಗಳು (Defects of Ijma) :

ಮುಸ್ಲಿಮ್ ಕಾನೂನಿನ ಒಂದು ಮೂಲದ ರೀತಿಯಲ್ಲಿ ಇಜ್ಮದಲ್ಲಿ ಈ ಕೆಳಗಿನ ಕುಂದುಕೊರತೆಗಳಿವೆ.

I) ನ್ಯಾಯದರ್ಶಿಗಳ ಐಕ್ಯಮತ್ಯದ ಅಭಿಪ್ರಾಯವು ಅನೇಕ ಆಧಾರಗಳ ಮೇಲೆ ನಿಂತಿರುತ್ತದೆ. ಕುರಾನ್, ರೂಢಿಗಳು, ಬಳಕೆಗಳು, ಸಾರ್ವಜನಿಕ ನೀತಿ, ಅಪಕ್ಷಪಾತತೆ ಇತ್ಯಾದಿ ಆಧಾರಗಳಾಗಿವೆ. ಇದರ ಪರಿಣಾಮವಾಗಿ ಬೇರೆ ಬೇರೆ ವಿದ್ವಾಂಸರು ಒಂದು ನಿರ್ಣಯದ ಬಗ್ಗೆ ಬೇರೆ ಬೇರೆ ದೃಷ್ಟಿಕೋನಗಳನ್ನು ತಳೆದಿರುವದು. ಇದರಿಂದಾಗಿ ಅನೇಕ ಪರಂಪರೆಗಳು ಮತ್ತು ವಿಪಪರಂಪರೆಗಳು ನಿರ್ಮಿಸಲ್ಪಟ್ಟು ಕಾನೂನು ಕ್ಲಿಷ್ಟಗೊಂಡಿದೆ.

II) ಅಭಿಪ್ರಾಯುಗಳ ಐಕ್ಯಮತ್ಯವು ಅವಶ್ಯವೊ ಎಂಬ ಬಗ್ಗೆ ಕೆಲವು ಕಾಲದ ಬಳಿಕ ಸಂಶಯಿಸಲಾಗಿದೆ, ಈ ಐಕ್ಯಮತ್ಯದ ಬಗ್ಗೆ ವಿಭಿನ್ನ ದೃಷ್ಟಿಕೋನಗಳಿವೆ. ಕೆಲವರ ಅಭಿಪ್ರಾಯಲ್ಲಿ ಐಕ್ಯಮತ್ಯದ ಅವಶ್ಯಕತೆಯಿದೆ. ಆದರೆ ಇನ್ನು ಕೆಲವರು ಇದರ ಅವಶ್ಯಕತೆ ಇಲ್ಲವೆಂಬುದಾಗಿ ವಾದಿಸುವರು. ಇವರ ಅಭಿಪ್ರಾಯದಂತೆ ಬಹುಮತದ ಅಭಿಪ್ರಾಯವಿದ್ದರೆ ಅದೇ ಒಂದು ಇಜ್ಮಾ ಮಾಡಲು ಪರ್ಯಾಪ್ತವಾಗುತ್ತದೆ.

III) ಸಂಗಡಿಗರ ಇಜ್ಮದ ಹೊರತಾಗಿ ಒಂದು ತದನಂತರದ ಇಜ್ಮದಿಂದ ಎರಡು ರೀತಿಯ ಇಜ್ಮಗಳನ್ನು ಮಾರ್ಪಾಡುಗೊಳಿಸಲು ಬರುತ್ತದೆ. ಆದುದರಿಂದ ಇದರ ಪರಿಣಾಮವಾಗಿ ಕಾನೂನಿನಲ್ಲಿ ಒಂದು ನಿಶ್ಚಿತತೆಯೆಂಬುದು ಉಳಿಯಲಿಲ್ಲ.

IV) ಇಸ್ಲಾಮ್ ಅತಿ ವೇಗದಲ್ಲಿ ಪ್ರಸರಿಸತೊಡಗಿದುದರಿಂದ ದೂರ ದೂರದ ಪ್ರದೇಶಗಳಲ್ಲಿ ಕೆಲವೊಮ್ಮೆ ಕಾನೂನೀ ನಿಯಮದ ಬಗ್ಗೆ ಒಂದು ಸಮಸ್ಯೆಯುಂಟಾದಾಗ ಅಲ್ಲಿ ನ್ಯಾಯದರ್ಶಿಗಳ ಸಹಾಯ ಪಡೆಯುವುದು ಅಸಾಧ್ಯವಾಗಿತ್ತು.

V) ಇಜ್ಮಾವನ್ನು ನಿರ್ಮಿಸಲು ವಿದ್ವಾಂಸರು ಮಾತ್ರ ಭಾಗವಹಿಸಬಹುದಿತ್ತು. ಈ ವಿದ್ವಾಂಸರ ಮರಣದ ಬಳಿಕ ಅವುಗಳ ನಿರ್ಮಾಣದ ಬಗ್ಗೆ ನ್ಯಾಯದರ್ಶಿಗಳು ಉಳಿದಿಲ್ಲವೆಂಬ ಭಾವನೆಯುಂಟಾಗಿತ್ತು. ಇದರ ಪರಿಣಾಮವಾಗಿ ೧೦ನೇ ಶತಮಾನದಲ್ಲಿ ಇಜ್ಮಾ ನಿರ್ಮಾಣವೇ ನಿಲ್ಲಿಸಲಾಯಿತು.

(ಡ) ಕಿಯಾಗಳು (Qiyas)

ಅರಬೀ ಭಾಷೆಯಲ್ಲಿ 'ಕಿಯಾ' ಎಂದರೆ ಮಾಪನ ಎಂದು, ಸಮಾಜದ ಮುಂದೆ ಒಂದು ಹೊಸ ಸಮಸ್ಯೆಯು ಬಂದಾಗ ಮತ್ತು ಅದರ ಪರಿಹಾರದ ಬಗ್ಗೆ ಕಾನೂನಿನ ಗ್ರಂಥಗಳಲ್ಲಿ ಯಾವುದೇ ರೀತಿಯ ಪರಿಹಾರ ಸಿಗದಾಗ ಅಲ್ಲಿ ಕಿಯಾ ಇದನ್ನು ಅನ್ವಯಗೊಳಿಸಲಾಗುತ್ತಿತ್ತು. ಹೊಸದಾಗಿ ಜನರ ಮುಂದೆ ಬಂದಿರುವ ಒಂದು ಸಾಮಾಜಿಕ ಸಮಸ್ಯೆಯನ್ನು ಕಾನೂನೀ ಗ್ರಂಥದಲ್ಲಿ ಅದೇ ರೀತಿಯ ಇನ್ನೊಂದು

ಸಮಸ್ಯೆಗೆ ತುಲನೆ ಮಾಡಿ ಅದಕ್ಕೆ ಯಾವ ರೀತಿಯ ಪರಿಹಾರವು ಕೊಡಲ್ಪಟ್ಟಿದೆ ಯೆಂಬುದನ್ನು ನೋಡುವುದಕ್ಕೆ ಕಿಯಾ ಎನ್ನುತ್ತಿದ್ದರು. ಕಿಯಾದಿಂದ ಒಂದು ಕಾನೂನನ್ನು ಪಡೆಯುವುದಕ್ಕಾಗಿ ನ್ಯಾಯದರ್ಶಿಗಳು ಈ ಕೆಳಗಿನ ರೀತಿಗಳನ್ನು ಅನ್ವಯಿಸುತ್ತಿದ್ದರು.

ಎ) ಆ ಹೊಸ ಸಮಸ್ಯೆ ಮತ್ತು ಸಾದೃಶವಾಗಿರುವ ಗ್ರಂಥದಲ್ಲಿರುವ ಸಮಸ್ಯೆ ಇವುಗಳೊಳಗೆ ಒಂದು ಏಕರೂಪತೆಯನ್ನು ತರಲು ಪ್ರಯತ್ನ ಮಾಡಲಾಗು ತ್ತಿತ್ತು. ಈ ರೀತಿಯ ಸಾದೃಶತೆಯನ್ನು ನಿರ್ಮಿಸುವ ಉದ್ದೇಶದಿಂದ ಒಂದು ಗ್ರಂಥದ ಶಬ್ದಾರ್ಥದ ಬದಲಾಗಿ ಅದರ ಹಿಂದಿರುವ ಗೂಢಾರ್ಥವನ್ನು ತೆಗೆದು ಕೊಳ್ಳಲಾಗುತ್ತಿತ್ತು. ಈ ರೀತಿಯಲ್ಲಿ ಎರಡು ಸಮಸ್ಯೆಗಳ ಸಾಮಾನ್ಯ ಕಾರಣವನ್ನು ಕಂಡುಹಿಡಿದು ಅಲ್ಲಿ ಅವುಗಳೊಳಗೆ ಒಂದು ಸಾದೃಶತೆಯನ್ನು ನಿರ್ಮಿಸಲಾಗುತ್ತಿತ್ತು.

ಬಿ) ಆ ಸಾದೃಶತೆಯನ್ನು ಕಂಡು ಹಿಡಿದ ಬಳಿಕ ಗ್ರಂಥದಲ್ಲಿ ಹೇಳಲಾದ ಪರಿಹಾರವನ್ನು ಈ ಹೊಸ ಸಮಸ್ಯೆಗೆ ಅನ್ವಯಗೊಳಿಸಲಾಗುತ್ತಿತ್ತು. ಈ ರೀತಿ ಯಾಗಿ ಆವಶ್ಯಕವಾದ ಕಾನೂನನ್ನು ನೇರವಾಗಿ ಕುರಾನಿನಿಂದ ಅಥವಾ ರೂಢಿಗಳಿಂದ ಅಥವಾ ಇಜ್ಮಾದಿಂದ ಪಡೆಯಲಾಗುತ್ತಿತ್ತು. ಈ ಪದ್ಧತಿಯ ಮೇರೆಗೆ ಯಾವತ್ತೂ ಹೊಸ ಸಿದ್ಧಾಂತಗಳು ನಿರ್ಮಿಸಲ್ಪಡಲಿಲ್ಲ. ಇಲ್ಲಿ ಮೂಲ ಗ್ರಂಥಗಳ ಅರ್ಥಾನ್ವಯನ ದಿಂದ ಹೊಸ ಕಾನೂನನ್ನು ಕಂಡುಹಿಡಿಯಲಾಗುತ್ತಿತ್ತು.

ಸಿ) ಕಿಯಾ ಇದರ ಮೇರೆಗೆ ಒಂದು ನಿರ್ಣಯಕ್ಕೆ ಬರಬೇಕಾಗಿದ್ದರೆ ಈ ಸಾದೃಶತೆಯನ್ನು ನಿರ್ಮಿಸುತ್ತಿರುವ ನ್ಯಾಯದರ್ಶಿಗಳೊಳಗೆ ಒಂದು ಐಕ್ಯಮತ್ಯವಿರುವ ಆವಶ್ಯಕತೆಯಿತ್ತು. ಅದಕ್ಕಾಗಿ ಈ ಕೆಳಗಿನ ಎರಡು ಸಂಗತಿಗಳು ಬೇಕಾಗುತ್ತವೆ. (೧) ಒಂದು ಸಾದೃಶತೆಯನ್ನು ನಿರ್ಮಿಸುವ ಒಬ್ಬ ವ್ಯಕ್ತಿಯು ಮುಜ್ತಾಹಿದ್ (Mujtahid) ಆಗಿರಬೇಕಾಗಿತ್ತು ಮತ್ತು (೨) ಅವನು ಒಂದು ನಿರ್ದಿಷ್ಟವಾದ ಕುರಾನಿನ ಮೂಲ ಪಾಠ ಅಥವಾ ರೂಢಿ ಅಥವಾ ಇಜ್ಮಾದಿಂದ ಇದನ್ನು ಅನು ಮಾನಿಸಬೇಕಾಗುತ್ತಿತ್ತು.

ಮಾಧ್ಯಮಿಕ ಮೂಲಗಳು (Secondary Sources)

ರೂಢಿ (Custom) : ಇಸ್ಲಾಮಿಗಿಂತ ಮೊದಲು ಅರಬರು ರೂಢಿಗತ ಕಾನೂನುಗಳಿಂದ ಶಾಸಿತರಾಗಿದ್ದರು. ಇಸ್ಲಾಮ್ ಅಸ್ತಿತ್ವಕ್ಕೆ ಬಂದಾಗ ಬಳಕೆ ಯಲ್ಲಿದ್ದಿರುವ ಹೆಚ್ಚಿನ ರೂಢಿಗಳು ಕೆಟ್ಟ ಮತ್ತು ಅನೈತಿಕವಾದವುಗಳೆಂದು ಪೈಗಂಬ ರನು ಎಣಿಸಿದ್ದನು. ಆದುದರಿಂದ ಅವನ ದೃಷ್ಟಿಯಲ್ಲಿ ಕೆಟ್ಟದಾಗಿದ್ದ ರೂಢಿಗಳ ನ್ನೆಲ್ಲ ಕ್ರೋಢೀಕರಿಸಿ ಅವನ್ನು ಆ ಇಸ್ಲಾಮಿ ರೂಢಿಗಳೆಂದು ಕರೆದಿದ್ದನು. ಆದರೆ ಕೆಲವು ನುಡಿಗಳು ಕೆಟ್ಟವಾಗಿರಲಿಲ್ಲ ಮತ್ತು ಅವುಗಳು ಸಮಾಜಕ್ಕೆ ಪ್ರಯೋಜನ ಕಾರಿಯಾಗಿದ್ದವು. ಈ ಉತ್ತಮ ರೂಢಿಗಳನ್ನು ಮಹಮದನು ರದ್ದುಗೊಳಿಸಲಿಲ್ಲ

ಮತ್ತು ತನ್ನ ಮೌನಸಮ್ಮತಿಯಿಂದ ಅವುಗಳಿಗೆ ಅನುಮತಿ ನೀಡಿದ್ದನು. ಈ ರೀತಿ ಯಿಂದ ಒಳ್ಳೆಯ ರೂಢಿಗಳು ಪೈಗಂಬರನ ರೂಢಿಗಳ ಭಾಗಗಳಾದವು. ಇದರ ಹೊರತಾಗಿ ಕೆಲವು ರೂಢಿಗಳ ಆಧಾರದ ಮೇಲೆ ನ್ಯಾಯದರ್ಶಿಗಳು ತಮ್ಮ ನಿರ್ವಿರೋಧವಾದ ನಿರ್ಣಯಗಳನ್ನು ಕೊಟ್ಟಿದ್ದರು ಮತ್ತು ಅವು ಇಜ್ಮದ ಭಾಗ ಗಳಾದವು. ಆದುದರಿಂದ ರೂಢಿಗಳು ಮುಸ್ಲಿಮ್ ಕಾನೂನಿನ ಯಾವತ್ತೂ ಸ್ವತಂತ್ರ ಮೂಲಗಳಲ್ಲ. ಇಸ್ಲಾಮಿನಲ್ಲಿ ರೂಢಿಗತ ಕಾನೂನು ಇನ್ನೂ ಅಸ್ತಿತ್ವದಲ್ಲಿರಲು ಕಾರಣವೇನೆಂದರೆ ಒಂದೇ ಪೈಗಂಬರನು ಅದಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿರು ವನು ಅಥವಾ ಅವು ಇಜ್ಮಗಳಲ್ಲಿ ಸೇರಿಸಲ್ಪಟ್ಟಿವೆ.

ರೂಢಿಗಳ ಮಹತ್ವ (Importance of Customs) : ರೂಢಿಯು ಮುಸ್ಲಿಮ್ ಕಾನೂನಿನ ಯಾವುದೇ ಒಂದು ಔಪಚಾರಿಕ ಮೂಲವಾಗಿಲ್ಲದಿದ್ದರೂ ಸಹ ಅದರ ಮಹತ್ವವೇನೂ ಕಡಿಮೆಯದಲ್ಲ. ಪ್ರಾಥಮಿಕ ಮೂಲವಾಗಿರುವ ಪಠ್ಯಗಳಲ್ಲಿ ಯಾವತ್ತು ಕಾನೂನೀ ನಿಯಮಗಳು ಇಲ್ಲದಾಗ ರೂಢಿಗತ ಕಾನೂನನ್ನು ಒಂದು ಕಾನೂನೆಂದು ಎಣಿಸಲಾಗುತ್ತದೆ. ಕುರಾನ್, ಪರಂಪರೆಗಳು, ಇಜ್ಮಾ ಮತ್ತು ಕಿಯಾ ಇವುಗಳು ಮೂಲಭೂತ ಮೂಲಗಣವಾದುದರಿಂದ ಇವು ಕೆಲವು ವಿಷಯಗಳ ಬಗ್ಗೆ ಸೂಕ್ಷ್ಮವಾದ ವಿವರಗಳನ್ನು ತಮ್ಮಲ್ಲಿ ಕೂಡಿಸಿಕೊಂಡಿಲ್ಲ. ಇಂತಹ ನಿರ್ದಿಷ್ಟ ಪ್ರಕರಣಗಳಲ್ಲಿ ರೂಢಿಗಳು ಮತ್ತು ಬಳಕೆಗಳು ಆ ಕಾನೂನನ್ನು ಪೂರ್ಣ ಗೊಳಿಸುವಲ್ಲಿ ಒಂದು ನಿಯಮವಾದವು. ಆದುದರಿಂದ ರೂಢಿಗತ ಕಾನೂನು ಮುಸ್ಲಿಮ್ ಕಾನೂನಿನ ನಾಲ್ಕು ಪ್ರಾಥಮಿಕ ಮೂಲಗಳಿಗೆ ಅನುಕೂಲವಾಯಿತು. ಬ್ರಿಟಿಷರ ಆಡಳಿತದ ಕಾಲದಲ್ಲಿ ಭಾರತದ ನ್ಯಾಯಾಲಯಗಳು ರೂಢಿ ಮತ್ತು ಬಳಕೆ ಗಳ ಕಾನೂನೀ ಶಕ್ತಿಯನ್ನು ತಿಳಿದಿದ್ದವು. ಆ ನ್ಯಾಯಾಲಯಗಳು ಮುಸ್ಲಿಮ್ ಕಾನೂನಿನ ಸಂಬಂಧದಲ್ಲಿ ಆ ರೂಢಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದವು. ಮತ್ತು ಕೆಲವು ಪ್ರಸಂಗಗಳಲ್ಲಿ ಒಂದು ರೂಢಿಯು ಮುಸ್ಲಿಮ್ ಕಾನೂನಿನ ಒಂದು ಪ್ರಾಥಮಿಕ ಮೂಲವಾಗಿರುವ ಮೂಲ ಪಾಠಕ್ಕೆ ವಿರೋಧವಾಗಿದ್ದರೂ ಸಹ ಅವನ್ನು ಮನ್ನಿಸಲಾದ ಸಂದರ್ಭಗಳಿವೆ.

ಶರಿಯತ್ ಅಧಿನಿಯಮಗಳ ಬಳಿಕ ರೂಢಿಗಳ ಪರಿಧಿ
(Scope of Customs after the Shariat Act)

ಭಾರತದ ಮುಸಲ್ಮಾನರಿಗೆ ಅನ್ವಯವಾಗುವ ಶರಿಯತ್ ಅಧಿನಿಯಮ ೧೯೩೭, ಇದು ಮುಸ್ಲಿಮ್ ಕಾನೂನಿನಿಂದ ರೂಢಿಗಳನ್ನು ರದ್ದುಗೊಳಿಸಿದೆ. ಈ ಅಧಿನಿಯಮದ ಕ. ೨ರ ಉಪಬಂಧದ ಪ್ರಕಾರ ಒಂದೊಮ್ಮೆ ಪಕ್ಷಗಾರರು ಮುಸ ಲ್ಮಾನರಾಗಿದ್ದರೆ, ವಾರಸು, ನಾರಿಯರ ವಿಶೇಷ ಸ್ವತ್ತು, ವಿವಾಹ, ಮೆಹರ್, ವಿವಾಹ ವಿಚ್ಛೇದನೆ, ಜೀವನಾಂಶ, ಸಂರಕ್ಷಕತ್ವ, ದಾನ, ವಕ್ಫ್ ಮತ್ತು ಟ್ರಸ್ಟ್ ಈ ವಿಷಯಗಳಲ್ಲಿ ಮುಸ್ಲಿಮ್ ಮತೀಯ ಕಾನೂನು (Shariat) ಇದನ್ನು ಮಾತ್ರ ಅನ್ವಯಿಸಲಾಗಿದೆಯೆಂದು ಹೇಳಲಾಗಿದೆ. ಆದರೆ ಕೃಷಕ ಭೂಮಿಗಳು, ದಾನ

ಧರ್ಮಗಳು ಮ[illegible]ಸಲ್ಮಾನರಿಗೆ ಇಸ್ಲಾಂ ರೂಢಿಗಳನ್ನು ಅನ್ವಯಿಸಲಾಗುತ್ತದ. [illegible]ದರೆ ಈ ಮೂರು ವಿಷಯಗಳು ಶರಿಯತ್ ಅಧಿನಿಯಮದ ವ್ಯಾಪ್ತಿಯಿಂದ ಹೊರಪಡಿಸಲಾಗಿವೆ. ಶರಿಯತ್ ಅಧಿನಿಯಮದ ಕ. ೩ರ ಪ್ರಕಾರ ತನಗೆ ಮುಸ್ಲಿಂ ಮತೀಯ ಕಾನೂನನ್ನು ಅನ್ವಯಗೊಳಿಸಬೇಕೆಂದು ಒಬ್ಬ ಮುಸಲ್ಮಾನನಿಂದ ವ್ಯಕ್ತವಾಗಿ ಘೋಷಿಸಲ್ಪಡುವ ಹೊರತು ದತ್ತಕ, ಮರಣ ಶಾಸನಗಳು, ಮತ್ತು ಉತ್ತರ ದಾನಗಳ ಸಂಬಂಧದಲ್ಲಿ ಮುಸಲ್ಮಾನರಿಗೆ ರೂಢಿಗತ ಕಾನೂನನ್ನು ಅನ್ವಯಗೊಳಿಸಲಾಗುತ್ತದೆ. ಆದುದರಿಂದ ಇಂದೂ ಸಹ ಭಾರತೀಯ ಮುಸಲ್ಮಾನರು ಶರಿಯತ್ ಅಧಿನಿಯಮದ ಕ. ೨ರಲ್ಲಿ ಕೊಡಲ್ಪಟ್ಟ ಯಾದಿಯಲ್ಲಿ ಬರುವ ವಿಷಯಗಳ ಸಂಬಂಧದಲ್ಲಿ ರೂಢಿಗತ ಕಾನೂನಿನಿಂದ ಶಾಸಿತರಾಗಬಹುದು. ಖೋಜಾ ಮತ್ತು ಬೊಹರಾ ಮುಸಲ್ಮಾನರ ಮರಣಶಾಸನಯುಕ್ತ ಉತ್ತರಾಧಿಕಾರವು ರೂಢಿಗತ ಕಾನೂನಿನಿಂದ ಶಾಸಿತವಾಗುತ್ತದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶರಿಯತ್ ಅಧಿನಿಯಮವು ಅನ್ವಯವಾಗುವುದಿಲ್ಲ ಮತ್ತು ಅಲ್ಲಿ ಮುಸ್ಲಿಮ್ ಕಾನೂನನ್ನು ರೂಢಿ ಮತ್ತು ಬಳಕೆಗೆ ಬಾಧ್ಯಗೊಳಿಸಲಾಗುತ್ತದೆ. ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ದತ್ತಕವು ಸಾಧ್ಯವಾಗುವದಿಲ್ಲವಾದರೂ ಸಹ ಜಮ್ಮು ಮತ್ತು ಕಾಶ್ಮೀರದ ರೂಢಿಯ ಪ್ರಕಾರ ಒಬ್ಬ ಮುಸಲ್ಮಾನನು ಮಾಡಿರುವ ದತ್ತಕವು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ.

ನ್ಯಾಯಿಕ ತೀರ್ಪುಗಳು (Judicial Decisions)

ಮೇಲಿನ ನ್ಯಾಯಾಲಯಗಳ ತೀರ್ಪುಗಳು ಕೆಳನ್ಯಾಯಾಲಯಗಳಿಗೆ ಆಧಾರಗಳಾಗುತ್ತವೆ ಮತ್ತು ಕೆಳನ್ಯಾಯಾಲಯಗಳು ಮೇಲ್ನ್ಯಾಯಾಲಯಗಳ ತೀರ್ಪನ್ನು ಪಾಲಿಸಲು ಬಾಧ್ಯವಾಗುತ್ತವೆ. ಇದನ್ನು ಪೂರ್ವ ನಿದರ್ಶನದ ಸೂತ್ರವೆಂದು ಕರೆಯಲಾಗುತ್ತದೆ. ಭಾರತದ ನ್ಯಾಯಾಲಯಗಳು ಈ ಪರಂಪರೆಗಳನ್ನು ಬ್ರಿಟಿಷ್ ನ್ಯಾಯಾಲಯಗಳಿಂದ ಪಡೆದಿವೆ. ಮುಸ್ಲಿಮ್ ಕಾನೂನು ಈ ನ್ಯಾಯಿಕ ವ್ಯವಹರಣೆಗೇನೂ ಅಪವಾದವಲ್ಲ ಮತ್ತು ಮುಸ್ಲಿಮ್ ಕಾನೂನಿಗೆ ಸಂಬಂಧಪಟ್ಟ ಯಾವುದಾದರೊಂದು ವಿಷಯದ ಬಗ್ಗೆ ಸರ್ವೋಚ್ಚ ನ್ಯಾಯಾಲಯಗಳು ಒಂದು ತೀರ್ಪು ಕೊಟ್ಟರೆ ಎಲ್ಲ ನ್ಯಾಯಾಲಯಗಳು ಅದನ್ನು ಒಂದು ಕಾನೂನಿನ ಮೂಲವೆಂದು ಎಣಿಸುತ್ತವೆ. ಯಾವುದಾದರೊಂದು ವಿಷಯದ ಬಗ್ಗೆ ಮುಸ್ಲಿಮ್ ಕಾನೂನಿನ ಒಂದು ಸ್ಪಷ್ಟವಾದ ಪಠ್ಯವಿಲ್ಲದಾಗ ನ್ಯಾಯಾಲಯಗಳು ತಮ್ಮದೇ ಆದ ನೀತಿ ಸಮ್ಮತತೆ ಮತ್ತು ನ್ಯಾಯದ ದೃಷ್ಟಿಯಿಂದ ಅದಕ್ಕೆ ಅರ್ಥಾನ್ವಯನ ಮಾಡುತ್ತವೆ. ಅಂತಹ ಪ್ರಕರಣಗಳಲ್ಲಿ ಶುದ್ಧ ಮುಸ್ಲಿಮ್ ಕಾನೂನನ್ನು ಅದು ವಿರೋಧಿಸಿದರೂ ಸಹ ಅದು ನ್ಯಾಯಾಲಯಗಳಿಂದ ಹೇಳಲ್ಪಟ್ಟಿದ್ದು ಒಂದು ಕಾನೂನಾಗಿರುತ್ತದೆ. ಉದಾಹರಣೆಗಾಗಿ, ಸಾಲದ ಮೇಲೆ ಬಡ್ಡಿ ಪಡೆಯುವುದನ್ನು ಇಸ್ಲಾಮ್ ನಿಷೇಧಿಸುತ್ತದೆ. ಆದರೆ ಪ್ರೀವಿ ಕೌನ್ಸಿಲ್ ತನ್ನ ಒಂದು ತೀರ್ಪಿನಲ್ಲಿ ಅಸಂದೇಯ ಮೆಹರಿನ ಮೇಲೆ ಬಡ್ಡಿ ಪಡೆಯುವುದನ್ನು ಸಮ್ಮತಿಸಿದೆ. ಇದರ ಪರಿಣಾಮವಾಗಿ ಈಗ

ಅಸಂದೇಯವಾದ ಮೆಹರಿನ ಮೇಲೆ ಬಡ್ಡಿ ಪಡೆಯುವದು ಮುಸ್ಲಿಮ್ ಕಾನೂನಿನ ಒಂದು ನಿಯಮವಾಗಿದೆ. ಮುಸಲ್ಮಾನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಮುಸ್ಲಿಮ್ ಕಾನೂನಿನ ನಿಯಮಗಳನ್ನು ಹಾಕಿಕೊಡುವಲ್ಲಿ ನ್ಯಾಯಿಕ ತೀರ್ಪುಗಳು ಮಹತ್ವದ ಪಾತ್ರ ವಹಿಸಿವೆ. ಪೂರ್ವ ಕ್ರಯಾಧಿಕಾರದ ಕಾನೂನು ಈ ಬಗ್ಗೆ ಒಂದು ಒಳ್ಳೆಯ ನಿದರ್ಶನವಾಗಿದೆ. ಈ ವಿಷಯದ ಬಗ್ಗೆ ನ್ಯಾಯಿಕ ತೀರ್ಪುಗಳು ಮೂಲ ಮುಸ್ಲಿಮ್ ಕಾನೂನನ್ನು ಬದಲಾಯಿಸಿವೆ. ಭಾರತದಲ್ಲಿ ನ್ಯಾಯಾಲಯಗಳು ಸ್ವಲ್ಪಮಟ್ಟಿಗೆ ಮುಸ್ಲಿಮ್ ಮತೀಯ ಕಾನೂನನ್ನು ಈ ರೀತಿಯಾಗಿ ಬದಲಾಯಿಸಿವೆಯೆಂದರೆ ತಪ್ಪಾಗಲಾರದು. ರದ್ದುಗೊಳಿಸಲ್ಪಡುವ ತನಕ ಈ ರೀತಿಯ ನ್ಯಾಯಿಕ ತೀರ್ಪುಗಳು ಮುಸ್ಲಿಮ್ ಕಾನೂನಿನ ಒಂದು ಮೂಲವಾಗಿ ಮುಂದುವರಿಯುತ್ತವೆ.

ಶಾಸನ (Legislation)

ಇಸ್ಲಾಮಿನ ಪ್ರಕಾರ ಪರಮಾತ್ಮನು ಮಾತ್ರ ಸರ್ವೋಚ್ಚ ಶಾಸಕನಾಗಿರುವನು ಮತ್ತು ಜಗತ್ತಿನ ಯಾವುದೇ ಒಂದು ಕರ್ತೃತ್ವವು ಕಾನೂನು ಮಾಡಲು ಪ್ರಾಧಿಕೃತಗೊಳಿಸಲ್ಪಟ್ಟಿಲ್ಲ. ಈ ನಂಬಿಕೆಯು ಎಷ್ಟೊಂದು ಗಾಢವಾಗಿ ಬೇರು ಬಿಟ್ಟಿದೆಯೆಂದರೆ ಶಾಸನದಿಂದ ಮಾಡಲ್ಪಡುವ ಯಾವುದಾದರೊಂದು ಮಾರ್ಪಾಡನ್ನು ರೂಢಿಗತ ಮುಸ್ಲಿಮ್ ಕಾನೂನಿನ ಮೇಲೆ ಮಾಡಲ್ಪಟ್ಟ ಅತಿಕ್ರಮಣವೆಂದು ಕೆಲವರು ಎಣಿಸುತ್ತಾರೆ. ಇದರ ಪರಿಣಾಮವಾಗಿ ಶಾಸನದ ಮೂಲಕ ಅಧಿನಿಯಮಿತಗೊಳಿಸಲ್ಪಟ್ಟ ಮುಸ್ಲಿಮ್ ಕಾನೂನಿನ ಮೂಲವು ತುಂಬಾ ಕಡಿಮೆ. ಆದರೂ ಸಹ ಮುಸ್ಲಿಮ್ ಕಾನೂನನ್ನು ಮಾರ್ಪಾಡುಗೊಳಿಸುವ ಕೆಲವು ಅಧಿನಿಯಮಗಳು ಶಾಸನದಿಂದ ಮಾಡಲ್ಪಟ್ಟಿವೆ. ನ್ಯಾಯಾಲಯದ ದೃಷ್ಟಿಯಿಂದ ಇವು ತುಂಬಾ ಮಹತ್ವವುಳ್ಳವುಗಳಾಗಿವೆ. ಈ ಕೆಳಗಿನವುಗಳು ಮುಸ್ಲಿಮ್ ಕಾನೂನಿನ ಮೇಲೆ ಮಾಡಲ್ಪಟ್ಟ ಕೆಲವು ಪ್ರಮುಖ ನಿಯಮಗಳಾಗಿವೆ.

I) ದಿ ಮುಸಲ್ಮಾನ್ ವಕ್ಫ್ ವೆಲಿಡೇಟಿಂಗ್ ಆಕ್ಟ್, ೧೯೧೩ (The Mussalman Waqf Validating Act 1913)

II) ದಿ ಚೈಲ್ಡ್ ಮೆರೇಜ್ ರಿಸ್ಟ್ರೇಂಟ್ ಆಕ್ಟ್, ೧೯೨೯ (The Child Marriage Restraint Act, 1929)

III) ದಿ ಮುಸ್ಲಿಮ್ ಪರ್ಸನಲ್ ಲಾ (ಶರಿಯತ್) ಅಪ್ಲಿಕೇಶನ್ ಆಕ್ಟ್, ೧೯೩೭) [The Muslims Personal Law (Shariat) application Act, 1937]

IV) ಡಿಸ್ಸೊಲುಶನ್ ಆಫ್ ಮುಸ್ಲಿಮ್ ಮೆರೆಜಸ್ ಆ್ಯಕ್ಟ್, ೧೯೧೩ (Dissolution of Muslim marriages Act, 1913)

ಈ ಅಧಿನಿಯಮದ ಹೊರತಾಗಿ ಪೂರ್ವ ಕ್ರಯಾಧಿಕಾರ ಮತ್ತು ವಕ್ಫ್ ಇವುಗಳ ಕಾನೂನನ್ನು ವಿನಿಯಮಿತಗೊಳಿಸುವ ಅಧಿನಿಯಮಗಳೂ ಇವೆ.

ಅಧ್ಯಾಯ ೪

ವಿವಾಹ
(Marriage)

ಪ್ರಸ್ತಾವನೆ (Introduction)

ಇಸ್ಲಾಮ್ ಪೂರ್ವ ಅರಬೀ ಸಮಾಜದಲ್ಲಿ ನಾರಿಯರ ಸ್ಥಿತಿಯು ತುಂಬಾ ಕರುಣಾಜನಕವಾಗಿತ್ತು. ಆ ದಿನಗಳಲ್ಲಿ ಅರಬರ ರೂಢಿಗತ ಕಾನೂನು ಗಂಡಸರ ಪರವಾಗಿತ್ತು. ನಾರಿಯರನ್ನು ಸ್ವತ್ತಿನಂತೆ ಎಣಿಸಲಾಗುತ್ತಿತ್ತಲ್ಲದೇ ಮಾನವರಂತೆ ಎಣಿಸಲಾಗುತ್ತಿರಲಿಲ್ಲ. ವಿವಾಹದ ಏಕಮೇವ ಉದ್ದೇಶವು ಯಾವುದಾಗಿತ್ತೆಂದರೆ ಲೈಂಗಿಕ ಸಂಭೋಗ ಮತ್ತು ಸಂತಾನೋತ್ಪತ್ತಿ ಆ ಕಾಲದಲ್ಲಿ ಅನಿಯಂತ್ರಿತ ಬಹು ಪತ್ನಿತ್ವವು ಬಳಕೆಯಲ್ಲಿತ್ತು ಮತ್ತು ಒಬ್ಬ ಪುರುಷನು ಒಂದೇ ಕಾಲದಲ್ಲಿ ತನಗೆ ಇಷ್ಟ ಬಂದಷ್ಟು ಪತ್ನಿಯರನ್ನು ಇಟ್ಟುಕೊಳ್ಳಬಹುದಿತ್ತು. ತಾಯಿ ಅಥವಾ ನಿಜ ಸಹೋದರಿಯರಂತಹ ಕೆಲವು ಅತ್ಯಂತ ಸಮೀಪದ ರಕ್ತ ಸಂಬಂಧಗಳನ್ನು ಬಿಟ್ಟರೆ ಒಬ್ಬನು ತನ್ನ ಅತ್ಯಂತ ಸಮೀಪದ ಸಂಬಂಧಿಕಳನ್ನು ವಿವಾಹವಾಗುವ ಬಗ್ಗೆ ಯಾವುದೇ ರೀತಿಯ ನಿರ್ಬಂಧಗಳಿರಲಿಲ್ಲ. ವೇಶ್ಯಾ ವೃತ್ತಿಯನ್ನು ಹೋಲುವಂತಹ ಅನೇಕ ವಿವಾಹ ಪದ್ಧತಿಗಳೂ ಮನ್ನಿಸಲ್ಪಟ್ಟಿದ್ದವು. ಆಧುನಿಕ ರೀತಿಯ ವಿವಾಹ ವನ್ನು ಹೋಲುವ ವಿವಾಹ ಪದ್ಧತಿಯಲ್ಲಿ ಕನ್ಯೆಯ ತಂದೆ ಅಥವಾ ಇತರ ಯಾವ ನಾದರೊಬ್ಬ ಸಂರಕ್ಷಕನು ಆ ಹುಡುಗಿಯನ್ನು ತನ್ನ ಒಂಟೆ ಅಥವಾ ಕುರಿಯನ್ನು ಮಾರಾಟ ಮಾಡುವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದನು. ಇಲ್ಲಿ ನೇರ ಅಥವಾ ದೂರಸ್ಥವಾದ ಯಾವುದೇ ರೀತಿಯ ನಿಯಂತ್ರಣವಿದ್ದಿರಲಿಲ್ಲ ಮತ್ತು ಪತ್ನಿಯನ್ನು ವಿಚ್ಛೇದನಗೊಳಿಸಲು ಗಂಡನ ಹಕ್ಕು ಪರಮವಾಗಿತ್ತು. ಆದುದರಿಂದ ಆ ಕಾಲದಲ್ಲಿ ಪತ್ನಿಯ ವೈವಾಹಿಕ ಪ್ರಾಸ್ಥಿತಿಯ ಬಗ್ಗೆ ಯಾವುದೇ ರೀತಿಯ ನಿಶ್ಚಿತತೆಯಿದ್ದಿರಲಿಲ್ಲ. ಆ ಕಾಲದ ನಾರಿಯರ ಸ್ಥಿತಿಯು ಗುಲಾಮರ ಸ್ಥಿತಿಗಿಂತ ಚೆನ್ನಾಗಿರಲಿಲ್ಲ, ಮತ್ತು ಸಮಾಜದಲ್ಲಿ ಅವರಿಗೆ ತಮ್ಮದೇ ಆದ ಅಸ್ತಿತ್ವವಿರಲಿಲ್ಲ.

ಇಸ್ಲಾಮ್ ಅಸ್ತಿತ್ವಕ್ಕೆ ಬಂದಾಗ ನಾರಿಯರಿಗೆ ಸಲ್ಲತಕ್ಕ ಸಾಮಾಜಿಕ ಪ್ರಾಸ್ಥಿತಿಯು ಕೊಡಲಾಯಿತು ಮತ್ತು ಅವರನ್ನು ಸಮಾಜದ ಗೌರವಸ್ಥ ಸದಸ್ಯರೆಂದು ಎಣಿಸಲಾಯಿತು. ಇಸ್ಲಾಮ್ ಒಂದು ನಿರ್ದಿಷ್ಟವಾದ ವಿವಾಹ ಪದ್ಧತಿಯನ್ನು ಗೊತ್ತುಪಡಿಸಿತು. ಇದಕ್ಕೆ ನಿಕಾ (Nikah) ಎಂದು ಕರೆಯಲಾಗುತ್ತದೆ. ನಿಕಾ ಇದು ಕೇವಲ ಒಂದು ವೈವಾಹಿಕ ಕರಾರಲ್ಲ; ಬದಲಾಗಿ ಇಲ್ಲಿ ಒಬ್ಬ ನಾರಿಯ ಪ್ರಾಸ್ಥಿತಿಯನ್ನು ಸಮಾಜದಲ್ಲಿ ಮೇಲ್ತರುವ ಅರ್ಥವೂ ಇದೆ. ನಿಕಾ ಇದರ

ಶಬ್ದಾರ್ಥವೇನೆಂದರೆ "ಸಂಗಡ ಅನುಬಂಧಗೊಳಿಸುವುದು". ಇಸ್ಲಾಮ್ ಪೂರ್ವ ಸಮಾಜದಲ್ಲಿ ಗಂಡ–ಹೆಂಡತಿಯ ಅನಿಶ್ಚಿತ ಸಂಬಂಧದ ಬದಲಾಗಿ ಈಗ ಇಸ್ಲಾಮ್ ನಿಕಾ ಇದರ ಮೇರೆಗೆ ಗಂಡ ಮತ್ತು ಹೆಂಡತಿ ಇವರನ್ನು ಒಂದು ಅನಿರ್ದಿಷ್ಟ ಕಾಲಾವಧಿಗೆ ಅನುಬಂಧಗೊಳಿಸಿತು. ನಿಕಾ ಅಥವಾ ಮುಸ್ಲಿಮ್ ವಿವಾಹವು ವೈವಾಹಿಕ ಸಂಬಂಧದಲ್ಲಿ ಒಂದು ಸ್ಥಿರತೆಯನ್ನು ಖಾತರಿಗೊಳಿಸುತ್ತದೆ. ಒಂದು ವಿವಾಹದಲ್ಲಿ ಗಂಡನು ಹೆಂಡತಿಗೆ ಏನನ್ನು ಸಂದಾಯ ಮಾಡಬೇಕು ಅಥವಾ ಸಂದಾಯ ಮಾಡುವ ವಚನ ಕೊಡಬೇಕು ಮತ್ತು ಇದು ಅವಳ ಬೆಲೆಯಲ್ಲ, ಇದು ಅವಳ ಪ್ರತಿಯಾಗಿ ಒಂದು ಗೌರವವೆಂದು ಪೈಗಂಬರನು ಘೋಷಿಸಿರುವನು. ಇಸ್ಲಾಮಿನಲ್ಲಿ ಅನಿಯಮಿತ ಬಹುಪತ್ನಿತ್ವವು ನಿಷೇಧಿಸಲಾಗಿದೆ ಮತ್ತು ಯಾವನೇ ಒಬ್ಬ ಮುಸಲ್ಮಾನನು ನಾಲ್ವರು ಪತ್ನಿಯರಿಗಿಂತ ಹೆಚ್ಚು ಪತ್ನಿಯರನ್ನು ವಿವಾಹವಾಗುವಂತಿಲ್ಲ. ಆದರೆ ನಾಲ್ಕು ಪತ್ನಿಯರಿಗೆ ಸೀಮಿತವಾಗಿರುವ ಬಹುಪತ್ನಿತ್ವವು ಒಂದು ಕಟ್ಟುನಿಟ್ಟಾದ ಷರತ್ತಿಗೆ ಬಾಧ್ಯವಾಗಿ ಸಮ್ಮತಿಸಲ್ಪಟ್ಟಿದೆ. ಈ ಷರತ್ತು ಕುರಾನಿನಲ್ಲಿ ಸ್ಪಷ್ಟಪಡಿಸಲಾಗಿದೆ. "ನಿನಗೆ ಒಳ್ಳೆಯವಳೆಂದು ಕಂಡುಬರುವ ನಾರಿಯನ್ನು ವಿವಾಹವಾಗು", ಇಬ್ಬರು, ಮೂವರು ಅಥವಾ ನಾಲ್ವರು; ಮತ್ತು ಒಂದೊಮ್ಮೆ ಅವರೆಲ್ಲರಿಗೆ ನ್ಯಾಯ ಮಾಡಲು ನೀನು ಅಸಮರ್ಥನಾಗಿರುವುದು ನಿನಗೆ ಕಂಡುಬಂದರೆ, ಆಗ ಒಬ್ಬಳನ್ನು ಮಾತ್ರ". ಅನೇಕ ಪತ್ನಿಯರನ್ನು ಇಟ್ಟುಕೊಂಡಿದ್ದು ಎಲ್ಲರನ್ನು ಸಮಾನವಾಗಿ ನೋಡುವುದು ಸಾಧ್ಯವಿಲ್ಲವೆಂಬುದು ಆ ಕಾಲದಲ್ಲೂ ತಿಳಿದಿತ್ತು. ಇದೇ ಕಾರಣದಿಂದ ಕುರಾನಿನಲ್ಲಿ ಈ ರೀತಿಯಾಗಿ ಹೇಳಲಾಗಿದೆ— "ನೀನು ಎಷ್ಟೇ ಪ್ರಯತ್ನಪಟ್ಟರೂ ಸಹ ನಿನ್ನ ಪತ್ನಿಯರ ಬಗ್ಗೆ ಎಲ್ಲರ ಪ್ರತಿ ನಿನಗೆ ಸಮಾನವಾಗಿ ವ್ಯವಹರಿಸುವುದು ಸಾಧ್ಯವಾಗುವುದಿಲ್ಲ". ಇದರಿಂದ ಏನು ತಿಳಿದು ಬರುತ್ತದೆಂದರೆ ಏಕಕಾಲದಲ್ಲಿ ನಾಲ್ವರು ಪತ್ನಿಯರನ್ನು ವಿವಾಹವಾಗಲು ಸಮ್ಮತಿಸಲಾಗಿದೆಯಾದರೂ ಸಹ ಕುರಾನ್ ಇದು ಏಕಪತ್ನಿತ್ವದ ಪರವಾಗಿದೆ. ಕುರಾನಿನ ಈ ಮಾತುಗಳ ಆಧಾರದ ಮೇಲೆ ಕೆಲವು ಪ್ರಗತಿಶೀಲ ಮುಸಲ್ಮಾನರು ಏಕಪತ್ನಿತ್ವವನ್ನು ಸಮರ್ಥಿಸುವರು. ಮತ್ತು ಅದನ್ನೇ ಕಡ್ಡಾಯ ಮಾಡಬೇಕೆಂದು ವಾದಿಸುತ್ತಿರುವರು. ಇತ್ತೀಚಿನ ದಿನಗಳಲ್ಲಿ ಮುಸಲ್ಮಾನರಲ್ಲಿ ಏಕಪತ್ನಿತ್ವವು ಜನಪ್ರಿಯವಾಗುತ್ತಾ ಇದೆ. ಟರ್ಕಿ ಮತ್ತು ಟುನಿಷಿಯಾದಂತಹ ಕೆಲವು ಮುಸ್ಲಿಮ್ ದೇಶಗಳಲ್ಲಿ ಏಕಪತ್ನಿತ್ವವನ್ನು ಕಡ್ಡಾಯಗೊಳಿಸಲಾಗಿದೆ. ಪಾಕಿಸ್ತಾನದಲ್ಲಿ ಏಕಪತ್ನಿತ್ವವು ಕಡ್ಡಾಯಗೊಳಿಸಲ್ಪಟ್ಟಿಲ್ಲದಿದ್ದರೂ ಸಹ ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಇಟ್ಟುಕೊಳ್ಳುವದು ಕಷ್ಟವಾಗುವ ರೀತಿಯಲ್ಲಿ ಅಲ್ಲಿ ಕಾನೂನು ಮಾಡಲಾಗಿದೆ. ಭಾರತದಲ್ಲಿ ಒಬ್ಬ ಮುಸಲ್ಮಾನನು ನಾಲ್ವರು ಪತ್ನಿಯರನ್ನು ವಿವಾಹವಾಗಬಹುದಾಗಿದ್ದರೂ ಸಹ ಸರಕಾರೀ ನೌಕರಿಯಲ್ಲಿರುವ ಒಬ್ಬ ಮುಸಲ್ಮಾನನು ಆಗಲೇ ಒಬ್ಬ ಪತ್ನಿಯೊಂದಿಗೆ ಜೀವಿಸುತ್ತಿದ್ದರೆ ಸರಕಾರದ ಸಮ್ಮತಿಯಿಲ್ಲದೆ ಇನ್ನೊಂದು ವಿವಾಹದ ಕರಾರು ಮಾಡುವಂತಿಲ್ಲ.

ವಿವಾಹದ ಪರಿಭಾಷೆ (Definition of Marriage)

ಮುಸ್ಲಿಮ್ ಕಾನೂನಿನ ಪ್ರಕಾರ ಲೈಂಗಿಕ ಸಂಭೋಗವನ್ನು ಕಾನೂನುಬದ್ಧಗೊಳಿಸಲು ಮತ್ತು ಮಕ್ಕಳನ್ನು ಧರ್ಮಜರನ್ನಾಗಿ ಮಾಡಲು ವಿವಾಹವು ಒಂದು ದಿವಾನೀ ಕಾನೂನಾಗಿರುತ್ತದೆ. ಹೇದಾಯ (Hedaya) ಇದರಲ್ಲಿ ವಿವಾಹದ ಪರಿಭಾಷೆಯು ಈ ರೀತಿಯಾಗಿ ಕೊಡಲಾಗಿದೆ–

"ಕಾನೂನಿನ ಭಾಷೆಯಲ್ಲಿ ವಿವಾಹವೆಂದರೆ ಸಂತತಿಯನ್ನು ಕಾನೂನುಬದ್ಧಗೊಳಿಸುವ ಉದ್ದೇಶಕ್ಕಾಗಿ ಮಾಡಲಾಗುವ ಒಂದು ನಿರ್ದಿಷ್ಟವಾದ ಕರಾರು." ಮುಸ್ಲಿಮ್ ವಿವಾಹವು ಇತರ ದಿವಾನೀ ಕಾನೂನುಗಳಂತೆ ಒಂದು ಕರಾರಾಗಿರುತ್ತದೆ. ವಿವಾಹದ ಕಾನೂನಿನ ಉದ್ದೇಶವು ಯಾವುದೆಂದರೆ ಗಂಡ ಹೆಂಡಿರೊಳಗಿನ ಲೈಂಗಿಕ ಸಂಬಂಧವನ್ನು ಕಾನೂನುಬದ್ಧಗೊಳಿಸುವುದು. ಒಂದು ವಿವಾಹವಾಗದೆ ಒಬ್ಬ ಪುರುಷ ಮತ್ತು ಸ್ತ್ರೀಯೊಳಗಿನ ಸಂಭೋಗವು ಕಾನೂನುಬಾಹಿರವಾಗುತ್ತದೆ. ವಿವಾಹದಿಂದ ಮಕ್ಕಳು ಧರ್ಮಜರಾಗುತ್ತಾರೆ. ವಿವಾಹವಲ್ಲದ ಇತರ ಯಾವುದೇ ಸಂಬಂಧದಿಂದ ಹುಟ್ಟಿದ ಮಕ್ಕಳು ಅಧರ್ಮಜರಾಗುವರು. "ಅಬ್ದುಲ್ ಕಾದಿರ್ ವಿ. ಸಲಿಮಾ" ಈ ಪ್ರಕರಣದಲ್ಲಿ ಕೊಟ್ಟ ತೀರ್ಪಿನಲ್ಲಿ ಜಸ್ಟೀಸ್ ಮೊಹಮ್ಮದ್ ರವರು ವಿವಾಹವನ್ನು ಈ ರೀತಿಯಾಗಿ ಪರಿಭಾಷಿಸಿರುವರು. ಮುಸಲ್ಮಾನರೊಳಗಿನ ವಿವಾಹವು ಒಂದು ಸಂಸ್ಕಾರವಲ್ಲ, ಆದರೆ ಅದೊಂದು ಶುದ್ಧ ದಿವಾನೀ ಕರಾರಾಗಿರುತ್ತದೆ. ಕಾನೂನಿನ ದೃಷ್ಟಿಯಲ್ಲಿ ಅಥವಾ ಒಂದು ನ್ಯಾಯಾಲಯದ ದೃಷ್ಟಿಯಲ್ಲಿ ಒಂದು ಮುಸ್ಲಿಮ್ ವಿವಾಹವು ಒಂದು ಕರಾರಾಗಿರುತ್ತದೆ.

ವಿವಾಹದ ಲಕ್ಷಣ ಮತ್ತು ಭಾವಸ್ವರೂಪ (Nature and Concept of Marriage)

ಕಾನೂನಿನ ದೃಷ್ಟಿಯಲ್ಲಿ ಮುಸ್ಲಿಮ್ ವಿವಾಹವು ಒಂದು ಕರಾರಾಗಿರುತ್ತದೆ; ಅದರ ಸ್ವರೂಪವು ಕರಾರಿ ಸ್ವರೂಪದ್ದಾಗಿರುತ್ತದೆ. ಒಂದು ಹಿಂದೂ ವಿವಾಹದಲ್ಲೂ ಸಹ ಕರಾರಿನ ಕೆಲವು ಅಂಶಗಳು ಇವೆಯಾದರೂ ಸಹ ಹಿಂದೂ ವಿವಾಹದ ಭಾವಸ್ವರೂಪವು ಒಂದು ಸರಕಾರದ ರೀತಿಯದಾಗಿದ್ದು ಅದರಲ್ಲಿ ಕೆಲವು ಧಾರ್ಮಿಕ ಆಚರಣೆಗಳು ಸೇರಿಕೊಂಡಿವೆ. ಜಸ್ಟಿಸ್ ಮೆಹಮ್ಮುದರವರು ಮುಸ್ಲಿಮ್ ವಿವಾಹವನ್ನು ಒಂದು ದಿವಾನೀ ಕರಾರು ಎಂದಾಗ ಅವರು ಹಿಂದೂ ವಿವಾಹದ ಈ ಅಂಶವನ್ನು ಗಮನದಲ್ಲಿಟ್ಟುಕೊಂಡದ್ದನ್ನು ಇಲ್ಲಿ ಗಮನಿಸಬಹುದು. ಆದರೆ ಇದು ಕೇವಲ ಕಾನೂನೀ ದೃಷ್ಟಿಯಲ್ಲಾಯಿತು. ಒಂದು ವಿವಾಹವು ಒಂದು ದಿವಾನೀ ಕಾನೂನಾಗಿರುವ ಹೊರತು ಇಸ್ಲಾಮಿನಲ್ಲಿ ಅದು ಒಂದು ಸಾಮಾಜಿಕ ಮತ್ತು ಧಾರ್ಮಿಕ ಪರಂಪರೆಯೂ ಆಗಿರುತ್ತದೆ. ಮುಸ್ಲಿಮ್ ವಿವಾಹದ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಅದರ ಈ ಎಲ್ಲ ಅಂಶಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

ಕಾನೂನೀ ಸ್ವರೂಪ (Legal Aspect)

ಕಾನೂನಿನ ದೃಷ್ಟಿಯಲ್ಲಿ ಒಂದು ಮುಸ್ಲಿಮ್ ವಿವಾಹವು ಒಂದು ಕರಾರು ಎಂದು ಎಣಿಸಲ್ಪಡುತ್ತದೆ. ಇದಕ್ಕೆ ಕಾರಣವೇನೆಂದರೆ ಒಂದು ದಿವಾನೀ ಕಾನೂನಿನಲ್ಲಿರುವ ಎಲ್ಲಾ ಅಂಶಗಳು ಒಂದು ವಿವಾಹದಲ್ಲೂ ಇರುತ್ತವೆ. ಈ ಕೆಳಗಿನ ಸಂಗತಿಗಳ ಆಧಾರದ ಮೇಲೆ ಒಂದು ಮುಸ್ಲಿಮ್ ವಿವಾಹವನ್ನು ಒಂದು ಕರಾರೀ ಸ್ವರೂಪದ್ದೆಂದು ಹೇಳಬಹುದು :

I) ವಿವಾಹದ ಪಕ್ಷಗಾರರು ವಿವಾಹದ ಕರಾರು ಮಾಡಲು ಸಕ್ಷಮರಾಗಿರಬೇಕು.

II) ಅಲ್ಲೊಂದು ಪ್ರಸ್ತಾವ ಮತ್ತು ಸ್ವೀಕೃತಿಯಿದ್ದಿರಬೇಕು.

III) ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸ್ವತಂತ್ರ ಸಮ್ಮತಿಯಿದ್ದಿರಬೇಕು.

IV) ಒಂದು ದಿವಾನೀ ಕರಾರಿನ ರೀತಿಯಲ್ಲಿ ಒಂದು ವಿವಾಹದ ಕರಾರಿನ ನಿಬಂಧನೆಗಳನ್ನು, ಕಾನೂನಿನ ಮಿತಿಗಳಿಗೆ ಒಳಪಟ್ಟಿದ್ದು, ಪಕ್ಷಗಾರರು ಸ್ವತಃ ಇದನ್ನು ಇತ್ಯರ್ಥ ಮಾಡಿಕೊಳ್ಳಬಹುದು.

V) ಒಂದು ದಿವಾನೀ ಕರಾರನ್ನು ವಿಘಟನೆಗೊಳಿಸುವ ರೀತಿಯಲ್ಲಿ ಒಂದು ವಿವಾಹದ ಕರಾರನ್ನೂ ಸಹ ಅನೇಕ ರೀತಿಯ ವಿಚ್ಛೇದನೆಯಿಂದಾಗಿ ವಿಘಟನೆಗೊಳಿಸಬಹುದು.

ಒಂದು ಮುಸ್ಲಿಮ್ ವಿವಾಹವು ಒಂದು ದಿವಾನೀ ಕರಾರನ್ನು ಹೋಲುತ್ತಿದೆಯಾದರೂ ಸಹ ಅದನ್ನು ಒಂದು ಶುದ್ಧ ದಿವಾನೀ ಕರಾರೆಂದು ಹೇಳುವಂತಿಲ್ಲ. ಮೇಲ್ನೋಟಕ್ಕೆ ಒಂದು ಮುಸ್ಲಿಮ್ ವಿವಾಹವು ಒಂದು ಕರಾರಿನಂತೆ ಕಂಡು ಬಂದರೂ ಸಹ ಅದು ಪೂರ್ಣವಾಗಿ ಒಂದು ಕರಾರಾಗಿರುವುದಿಲ್ಲ. ಅದರ ಕರಾರೀ ಸ್ವರೂಪಕ್ಕಿಂತ ಅದರ ಸಾಮಾಜಿಕ ಸ್ವರೂಪವು ತುಂಬಾ ಮಹತ್ವದ್ದಾಗಿರುತ್ತದೆ.

ಸಾಮಾಜಿಕ ಸ್ವರೂಪ (Social Aspect)

ನಿಕಾ ಇದೊಂದು ಸಾಮಾಜಿಕ ಸಂಪ್ರದಾಯವಾಗಿದ್ದು ಇದರಿಂದ ನಾರಿಯರ ಪರಿಸ್ಥಿತಿಯು ಮೇಲಕ್ಕೇರುತ್ತದೆ. ಪೈಗಂಬರನು ಇಸ್ಲಾಮಿನ ಮುಖಾಂತರ ಸಮಾಜದಲ್ಲಿ ಒಂದು ಸುಧಾರಣೆಯನ್ನು ತಂದಿದ್ದನು. ನಾರಿಯರಿಗೆ ಒಂದು ಸಮಾನವಾದ ಪ್ರಾಸ್ಥಿತಿಯನ್ನು ಕೊಡದೆ ಯಾವುದೇ ಸಾಮಾಜಿಕ ಸುಧಾರಣೆಯು ಸಾಧ್ಯವಿಲ್ಲ. ಆದುದರಿಂದ ನಾರಿಯರಿಗೆ ಸಮಾನತೆ ಮತ್ತು ಸ್ವಾತಂತ್ರ್ಯ ಕೊಡಬೇಕಾದರೆ ಒಂದು ನಿರ್ದಿಷ್ಟವಾದ ಕಾನೂನು ಅಥವಾ ಒಂದು ನಿಶ್ಚಿತವಾದ ಸಂಪ್ರದಾಯದ ಅವಶ್ಯಕತೆಯಿದೆ. ಈ ಉದ್ದೇಶವನ್ನು ಗಮನದಲ್ಲಿಟ್ಟು ಪೈಗಂಬರನು

ನಿಕಾ ಪದ್ಧತಿಯನ್ನು ಬಳಿಕೆಗೆ ತಂದನು ಮತ್ತು ಈ ಪದ್ಧತಿಯಿಂದ ನಾರಿಯರು ಪುರುಷರಿಗೆ ಸಮಾನರಾಗುವರು. ನಿಕಾ ಇದೊಂದು ಸರ್ವಸ್ವೀಕೃತ ಸಾಮಾಜಿಕ ಸಂಪ್ರದಾಯವಾಗಿದ್ದು ಇದು ನಾರಿಯರಿಗೆ ಒಂದು ಪ್ರತ್ಯೇಕವಾದ ಮತ್ತು ಮೇಲ್ನೋಟದ ಪ್ರಸ್ಥಿತಿಯನ್ನು ಕೊಡುತ್ತದೆ. ಒಂದು ಮುಸ್ಲಿಮ್ ವಿವಾಹವು ಕೇವಲ ಒಂದು ಕರಾರಲ್ಲ, ಬದಲಾಗಿ ಅದೊಂದು ಸಾಮಾಜಿಕ ಸಂಪ್ರದಾಯವೂ ಆಗಿದೆ ಎಂಬುದನ್ನು ಈ ಕೆಳಗಿನ ಸಂಗತಿಗಳ ಆಧಾರದ ಮೇಲೆ ಸಾಬೀತು ಪಡಿಸಬಹುದು.

ಎ) ದಿವಾನೀ ಕರಾರುಗಳ ಒಂದು ಸಾಮಾನ್ಯ ನಿಯಮದ ಪ್ರಕಾರ ಆ ಕರಾರಿನಲ್ಲಿ ನಿರ್ದಿಷ್ಟಗೊಳಿಸಲಾರದ ಹೊರತು ಒಂದು ಪ್ರತಿಫಲವನ್ನು ಸಂದಾಯ ಮಾಡುವ ಬಾಧ್ಯತೆಯು ಬರುವುದಿಲ್ಲ. ಆದರೆ ಒಂದು ಮುಸ್ಲಿಮ್ ವಿವಾಹದಲ್ಲಿ ಮೆಹರಿನ ಮೊಬಲಗು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವಾದರೂ ಸಹ ಗಂಡನು ಹೆಂಡತಿಗೆ ಗೌರವದ ರೀತಿಯಲ್ಲಿ ಏನನ್ನಾದರೂ ಸಂದಾಯ ಮಾಡಬೇಕೆಂದು ಕಾನೂನು ಬಯಸುತ್ತದೆ.

ಬಿ) ದಿವಾನೀ ಕರಾರುಗಳಲ್ಲಿ ಒಬ್ಬ ವ್ಯಕ್ತಿಯು ತನಗೆ ಬೇಕಾದಷ್ಟು ಕರಾರುಗಳಲ್ಲಿ ಸೇರಿಕೊಳ್ಳಬಹುದು. ಆದರೆ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ಒಂದು ಕಾಲದಲ್ಲಿ ನಾಲ್ವರು ಪತ್ನಿಯರಿಗಿಂತ ಹೆಚ್ಚಿನ ನಾರಿಯರನ್ನು ವಿವಾಹವಾಗುವಂತಿಲ್ಲ.

ಸಿ) ಒಂದೊಮ್ಮೆ ವಿವಾಹವು ಒಂದು ಶುದ್ಧ ದಿವಾನೀ ಕರಾರಾಗಿದ್ದರೆ ಪಕ್ಷಗಾರರ ಸಂಬಂಧವು ಗಮನಿಸಲ್ಪಡುತ್ತಿದ್ದಿಲ್ಲ. ಸಹೋದರನು ತನ್ನ ನಿಜ ಸಹೋದರಿಯನ್ನು ವಿವಾಹವಾಗುವಂತಿಲ್ಲ. ಆದರೆ ತನ್ನ ಒಂದು ಮನೆಯನ್ನು ಮಾರಾಟ ಮಾಡುವ ಬಗ್ಗೆ ಅವನು ತನ್ನ ಸಹೋದರಿಯೊಂದಿಗೆ ಒಂದು ಕರಾರು ಮಾಡಬಹುದು.

ಡಿ) ಕೆಲವು ಪರಿಸ್ಥಿತಿಗಳಲ್ಲಿ ಒಬ್ಬ ವ್ಯಕ್ತಿಯು ವಿವಾಹಿತನಾಗಬಾರದೆಂದು ಮುಸ್ಲಿಮ್ ಸಮಾಜವು ಬಯಸುತ್ತದೆ. ಉದಾಹರಣೆಗಾಗಿ ಒಬ್ಬ ಶಿಯಾ ಮುಸಲ್ಮಾನನು ತನ್ನ ಹಜ್ ಜಾತ್ರೆಯ ಕಾಲದಲ್ಲಿ ವಿವಾಹಿತನಾಗುವಂತಿಲ್ಲ. ಇದೇ ರೀತಿಯಲ್ಲಿ ಇನ್ನೂ ಅನೇಕ ಪರಿಸ್ಥಿತಿಗಳಲ್ಲಿ ಒಬ್ಬನು ಒಂದು ವಿವಾಹವಾಗುವಂತಿಲ್ಲ. ಆದರೆ ದಿವಾನೀ ಕರಾರುಗಳ ಸಂಬಂಧದಲ್ಲಿ ಇಂತಹ ಯಾವತ್ತೂ ನಿರ್ಬಂಧವಿಲ್ಲ. ಒಂದು 'ಹಜ್' ಯಾತ್ರೆಯ ಕಾಲದಲ್ಲಿ ಒಬ್ಬನು ತನ್ನ ಒಂದು ಗಡಿಯಾರವನ್ನು ಮಾರಾಟ ಮಾಡುವ ಕರಾರು ಮಾಡಿದರೆ ಅದು ಅಸಿಂಧುವಾಗುವದಿಲ್ಲ. ಆದರೆ ಈ ಕಾಲದಲ್ಲಿ ಒಂದು ವಿವಾಹದ ಕರಾರನ್ನು ಮಾಡಿದರೆ ಅದು ಶಿಯಾ ಕಾನೂನಿನಲ್ಲಿ ಶೂನ್ಯವಾಗುತ್ತದೆ. ಆದುದರಿಂದ ಮುಸ್ಲಿಮ್ ವಿವಾಹವು ಒಂದು ಕೇವಲ

ದಿವಾನೀ ಕರಾರಲ್ಲ, ಬದಲಾಗಿ ಅದೊಂದು ಸ್ತ್ರೀಯರ ಸಾಮಾಜಿಕ ಪ್ರಾಸ್ಥಿತಿಯನ್ನು ಮೇಲ್ತರುವಂತಹ ಪರಂಪರೆಯಾಗಿರುತ್ತದೆ.

ಧಾರ್ಮಿಕ ಸ್ವರೂಪ (Religious Aspect)

ಪರಮಾತ್ಮನ ಶಬ್ದಗಳ ಸಂಗ್ರಹವಾಗಿರುವ ಕುರಾನ್ ಇದು ಒಬ್ಬ ವ್ಯಕ್ತಿಯು ತನಗೆ ಇಷ್ಟಬಂದ ನಾರಿಯನ್ನು ವಿವಾಹವಾಗಬಹುದೆಂದು ನಿರ್ದೇಶಿಸುತ್ತದೆ. ಆದುದರಿಂದ ಇಸ್ಲಾಮಿನ ನಿಯಮಗಳಿಗೆ ಅನುಗುಣವಾಗಿ ವಿವಾಹಿತನಾಗುವುದು ಪ್ರತಿಯೊಬ್ಬ ಮುಸಲ್ಮಾನನ ಧಾರ್ಮಿಕ ಕರ್ತವ್ಯವಾಗಿರುತ್ತದೆ. ಯುಕ್ತ ಕಾರಣ ವಿಲ್ಲದೆ ಯಾವನಾದರೊಬ್ಬನು ಅವಿವಾಹಿತನಾಗಿ ಉಳಿದರೆ ಅವನು ಪರಮಾತ್ಮನ ಶಬ್ದಗಳನ್ನು ಪಾಲನೆ ಮಾಡಲು ತಪ್ಪಿದಂತಾಗುತ್ತದೆ. ಒಬ್ಬ ಮುಸಲ್ಮಾನನು ವಿವಾಹಿತನಾದರೆ ಆದರಿಂದ ಅವನು ಧಾರ್ಮಿಕ ಪ್ರಯೋಜನವನ್ನು ಪಡೆಯುವ ನೆಂದು ಮುಸಲ್ಮಾನರು ನಂಬಿರುವರು; ಒಂದೊಮ್ಮೆ ಅವನು ವಿವಾಹಿತನಾಗುವುದ ರಿಂದ ವಿಮುಖನಾದರೆ ಅವನು ಒಂದು ಪಾಪಕೃತ್ಯ ಮಾಡಿದಂತಾಗುತ್ತದೆ. ಆದುದುದರಿಂದ ಒಬ್ಬ ಸರಿಯಾದ ಹುಡುಗಿಯನ್ನು ವಿವಾಹವಾಗುವುದು ಒಂದು ಸಾಮಾಜಿಕ ಕೃತ್ಯವಷ್ಟೇ ಅಲ್ಲ; ಅದೊಂದು ಧಾರ್ಮಿಕ ಕರ್ತವ್ಯವೂ ಆಗಿರುತ್ತದೆ.

ಮೇಲಿನ ಈ ಮೂರೂ ಸ್ವರೂಪಗಳನ್ನು ಪರಿಶೀಲಿಸಿದಾಗ ನಾವೇನನ್ನು ಕಾಣಬಹುದೆಂದರೆ ಮೇಲ್ನೋಟಕ್ಕೆ ಮುಸ್ಲಿಮ್ ವಿವಾಹವು ಒಂದು ದಿವಾನೀ ಕರಾರಿನಂತೆ ಕಂಡುಬಂದರೂ ಸಹ ಅವರ ಮೂಲ ಸ್ವರೂಪವು ಸಾಮಾಜಿಕ ಮತ್ತು ಧಾರ್ಮಿಕವಾಗಿರುತ್ತದೆ. ಒಂದು ಮುಸ್ಲಿಮ್ ವಿವಾಹವು, (I) ಪತಿಪತ್ನಿಯರ ಹಕ್ಕು ಬಾಧ್ಯತೆಯನ್ನು ನಿರ್ಮಿಸುತ್ತದೆ, (II) ಅವರಿಗೆ ಒಂದು ಸುಧಾರಣೆಗೊಂಡ ಸಾಮಾಜಿಕ ಪ್ರಾಸ್ಥಿತಿಯು ಸಿಗುತ್ತದೆ ಮತ್ತು (III) ಅದು ಅವರ ಧಾರ್ಮಿಕ ಕರ್ತವ್ಯವಾಗಿರುತ್ತದೆ.

ಒಂದು ವಿಧ್ಯುಕ್ತನಾದ ವಿವಾಹದ ಅವಶ್ಯಕತೆಗಳು
(Essentials of a valid marriage)

ಒಂದು ನ್ಯಾಯಾಲಯದಿಂದ ಕಾನೂನುಬದ್ಧವೆಂದು ಸ್ವೀಕರಿಸಲ್ಪಟ್ಟರೆ ಒಂದು ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ. ಒಂದು ಮುಸ್ಲಿಮ್ ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಈ ಕೆಳಗಿನ ಷರತ್ತುಗಳು ಪೂರ್ತಿಗೊಳಿ ಸಲ್ಪಟ್ಟಿರಬೇಕು.

I) ವಿವಾಹದ ಪಕ್ಷಗಾರರು ಸಕ್ಷಮರಾಗಿರಬೇಕು.

II) ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸಮ್ಮತಿಯು ಸ್ವತಂತ್ರ ವಾಗಿರಬೇಕು.

III) ಆವಶ್ಯಕ ಔಪಚಾರಿಕತೆಗಳು ಯಥಾ ಪ್ರಕಾರವಾಗಿ ಪೂರ್ತಿಗೊಳಿಸಲ್ಪಟ್ಟಿರಬೇಕು, ಮತ್ತು

IV) ಪಕ್ಷಗಾರರು ನಿಷೇಧಿತ ಸಂಬಂಧದ ಹಂತದೊಳಗೆ ಬರಬಾರದು.

I) ಪಕ್ಷಗಾರರ ಸಕ್ಷಮತೆ (Competence of the Parties)

ವಿವಾಹ ಕಾಲದಲ್ಲಿ ಇಬ್ಬರು ಪಕ್ಷಗಾರರು (ಹುಡುಗ ಮತ್ತು ಹುಡುಗಿ) ವಿವಾಹದ ಕರಾರು ಮಾಡಲು ಸಕ್ಷಮರಾಗಿರಬೇಕು. ಆ ಪಕ್ಷಗಾರರು ಕರಾರು ಮಾಡಲು ಸಕ್ಷಮರೆಂದು ಎಣಿಸಲ್ಪಡಬೇಕಾದರೆ ಎ) ಅವರು ವಯಸ್ಕರಾಗಿರಬೇಕು. ಬಿ) ಸ್ವಸ್ಥ ಚಿತ್ತದವರಾಗಿರಬೇಕು, ಮತ್ತು ಸಿ) ಅವರು ಮುಸಲ್ಮಾನರಾಗಿರಬೇಕು.

ಎ) ತಾರುಣ್ಯದ ವಯಸ್ಸಿಗೆ ಬಂದಿರಬೇಕು (Age of Puberty)

ವಿವಾಹ, ಮೆಹರು ಮತ್ತು ವಿವಾಹ ವಿಚ್ಛೇದನದ ಉದ್ದೇಶಗಳಿಗಾಗಿ ಮುಸ್ಲಿಮ್ ಕಾನೂನಿನ ಪ್ರಕಾರ ವಯಸ್ಕತನದ ವಯಸ್ಸು ೧೮ ವರ್ಷಗಳಲ್ಲ. ಈ ವಿಷಯಗಳ ಸಂಬಂಧದಲ್ಲಿ ವಯಸ್ಕತನದ ವಯಸ್ಸು ತಾರುಣ್ಯದ ವಯಸ್ಸಿಗೆ ಸಮಾನವೆಂದು ಎಣಿಸಲ್ಪಡುತ್ತದೆ. ತಾರುಣ್ಯದ ವಯಸ್ಸೆಂದರೆ ಒಬ್ಬ ವ್ಯಕ್ತಿಯು ಲೈಂಗಿಕ ಸಾಮರ್ಥ್ಯವನ್ನು ಪಡೆಯುವ ವಯಸ್ಸಾಗಿರುತ್ತದೆ. ಈ ಸಕ್ಷಮತತೆಯನ್ನು ಹುಡುಗನ ಅಥವಾ ಹುಡುಗಿಯ ನೈಸರ್ಗಿಕ ಕುರುಹುಗಳು ಮತ್ತು ಶಾರೀರಿಕ ವಿಶಿಷ್ಟತೆಗಳಿಂದ ಖಾತ್ರಿಪಡಿಸಿಕೊಳ್ಳಬಹುದು. ಹೆದಾಯಾ (Hedaya) ಇದರ ಪ್ರಕಾರ ಒಬ್ಬ ಹುಡುಗನ ಬಗ್ಗೆ ಅತ್ಯಂತ ಕಿರಿಯ ತಾರುಣ್ಯದ ವಯಸ್ಸು ೧೨ ಆಗಿರುತ್ತದೆ ಮತ್ತು ಒಬ್ಬ ಹುಡುಗಿಯ ಸಂಬಂಧದಲ್ಲಿ ೯ ಆಗಿರುತ್ತದೆ. ಆದರೆ ಈ ನಿಯಮವನ್ನು ಒಂದು ಪರಮವಾದ ನಿಯಮವೆಂದು ಎಣಿಸುವಂತಿಲ್ಲ. ಏಕೆಂದರೆ ಲೈಗಿಕ ಸಕ್ಷಮತೆಯು ಅನೇಕ ಸಂಗತಿಗಳ ಮೇಲೆ ಆಧಾರಿತವಾಗಿರುತ್ತದೆ. ಮತ್ತು ಅದು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರಬಹುದು. ಆದುದರಿಂದ ಶಾರೀರಿಕ ನೋಟದ ಮೇರೆಗೆ ಈ ವಯಸ್ಸನ್ನು ಖಚಿತಪಡಿಸುವುದು ಸಾಧ್ಯವಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ೧೫ರ ವಯಸ್ಸು ಮುಗಿದಾಗ ತಾರುಣ್ಯದ ವಯಸ್ಸು ಬರುವುದೆಂದು ಎಣಿಸಲಾಗುತ್ತದೆ.

ಒಂದು ವಿವಾಹವನ್ನು ಪೂರ್ಣಗೊಳಿಸಲು ಸಾಮರ್ಥ್ಯ ಪಡೆಯುವದಕ್ಕೋಸ್ಕರವೇ ಅಲ್ಲ. ಬದಲಾಗಿ ಪಕ್ಷಗಾರರು ತಮ್ಮ ಸ್ವಂತ ಸಮ್ಮತಿಯನ್ನು ಕೊಡುವುದಕ್ಕಾಗಿಯೂ ಸಹ ತಾರುಣ್ಯದ ವಯಸ್ಸಿನ ಅವಶ್ಯಕತೆಯಿದೆ. ೧೫ ವರ್ಷಗಳ ವಯಸ್ಸನ್ನು ದಾಟಿದ ಬಳಿಕ ಒಬ್ಬ ವ್ಯಕ್ತಿಯು ತನ್ನ ವಿವಾಹದ ಬಗ್ಗೆ ಸಮ್ಮತಿ ಕೊಡಲು ಸಮರ್ಥನಾಗುವನು ಅಥವಾ ಸಮರ್ಥಳಾಗುವಳು; ಒಂದು ವಿವಾಹವನ್ನು ವಿಧ್ಯುಕ್ತತೆಗೊಳಿಸಲು ಸಂರಕ್ಷಕನ ಸಮ್ಮತಿಯ ಅವಶ್ಯಕತೆಯಿಲ್ಲ. ಒಂದೊಮ್ಮೆ ಪಕ್ಷಗಾರರು ವಯಸ್ಕರಾಗಿದ್ದರೆ ಅವರ ವಿವಾಹಕ್ಕೆ ಅವರ ಸಂರಕ್ಷಕ

ರಿಂದ ಸಮ್ಮತಿಯಿದ್ದಾಗಲೂ ಸಹ ಒಂದೊವ್ಮೆ ಆ ಪಕ್ಷಗಾರರು ಅದಕ್ಕೆ ಸಮ್ಮತಿ ಕೊಡದಿದ್ದರೆ ಅಂತಹ ವಿವಾಹವು ಶೂನ್ಯವಾಗುತ್ತದೆ.

ಅಲ್ಪವಯಿಯ ವಿವಾಹ (Minor's Marriage)

ಮುಸ್ಲಿಮ್ ಕಾನೂನಿನ ಮೇರೆಗೆ ತಾರುಣ್ಯದ ವಯಸ್ಸನ್ನು ದಾಟಿರದ ಒಬ್ಬ ವ್ಯಕ್ತಿಯು ಒಬ್ಬ ಅಲ್ಪವಯಿಯೆಂದು ಎಣಿಸಲ್ಪಡುವನು. ಅಂಥವನು ಅಥವಾ ಅಂಥವಳು ತನ್ನ ವಿವಾಹಕ್ಕೆ ಸಮ್ಮತಿಕೊಡಲು ಸಮರ್ಥರಲ್ಲ. ಆದರೆ ಒಬ್ಬ ಅಲ್ಪವಯಿಯ ವಿವಾಹವು ಶೂನ್ಯವೆಂಬುದಾಗಿ ಇದರಿಂದ ತಿಳಿಯಲಾಗುವುದಿಲ್ಲ. ಒಂದೊವ್ಮೆ ಒಬ್ಬ ಅಲ್ಪವಯಿಯ ಪರವಾಗಿ ಅವನ ಅಥವಾ ಅವಳ ಸಂರಕ್ಷಕನು ಸಮ್ಮತಿ ಕೊಟ್ಟರೆ ಆ ವಿವಾಹವು ಕಾನೂನುಬದ್ಧವಾಗುತ್ತದೆ. ಆದುದರಿಂದ ಸಂರಕ್ಷಕನ ಸಮ್ಮತಿಯ ಮೇರೆಗೆ ಮಾಡಲಾದ ಒಬ್ಬ ಅಲ್ಪವಯಿಯ ವಿವಾಹವು ಕಾನೂನುಬದ್ಧವಾಗಿರುತ್ತದೆ. ಮುಸ್ಲಿಮ್ ಕಾನೂನಿನ ಮೇರೆಗೆ ಅಲ್ಪವಯಿಗಳ ವಿವಾಹದ ಕರಾರು ಮಾಡಲು ಈ ಕೆಳಗಿನ ವ್ಯಕ್ತಿಗಳನ್ನು ಸಂರಕ್ಷಕರೆಂದು ಮನ್ನಿಸಲಾಗಿದೆ.

೧) ತಂದೆ

೨) ಪೈತೃಕ ಅಜ್ಜ

೩) ಸಹೋದರ ಅಥವಾ ತಂದೆಯ ಕುಟುಂಬದ ಗಂಡು ಸದಸ್ಯರು

೪) ತಾಯಿ,

೫) ಮಾತೃಕ ಮಾವ, ಅತ್ತೆ ಅಥವಾ ಮಾತೃಕ ಸಂಬಂಧಿಕರು ;

ವಿವಾಹ ವಿಷಯಗಳಲ್ಲಿ ಸಂರಕ್ಷಕತನದ ಮೊದಲನೇ ಹಕ್ಕು ಆದ್ಯತೆಯು ಅನುಕ್ರಮದಲ್ಲಿ ತದನಂತರದ ಸಂರಕ್ಷಕನಲ್ಲಿ ಸೇರುತ್ತದೆ. ಮೇಲ್ಕಾಣಿಸಲಾದ ಸಂರಕ್ಷಕರಲ್ಲಿ ಯಾರೂ ಇಲ್ಲದಾಗ ಒಬ್ಬ ಕಾಜೀ (Kazi) ಅಥವಾ ಸರಕಾರದಿಂದ ಪ್ರಾಧಿಕೃತನಾಗಿರುವ ಒಬ್ಬ ವ್ಯಕ್ತಿಯು ಅಲ್ಪವಯಿಯ ವಿವಾಹದ ಕರಾರನ್ನು ಮಾಡಬಹುದು. "ವಿವಾಹಕ್ಕಾಗಿ ಸಂರಕ್ಷಕರು" ಎಂಬುದನ್ನು "ನ್ಯಾಯಾಲಯದಿಂದ ನೇಮಿಸಲಾದ ಸಂರಕ್ಷಕರು" ಇದರಿಂದ ಪ್ರತ್ಯೇಕಿಸುವ ಅವಶ್ಯಕತೆಯಿದೆ. ಅಲ್ಪವಯಿಯ ಜೀವ ಅಥವಾ ಸ್ವತ್ತನ್ನು ರಕ್ಷಿಸುವುದಕ್ಕಾಗಿ ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನು ನ್ಯಾಯಾಲಯದ ಪೂರ್ವ ಸಮ್ಮತಿ ಪಡೆಯದೆ ಒಬ್ಬ ಅಲ್ಪವಯಿಯ ವಿವಾಹದ ಕರಾರು ಮಾಡುವಂತಿಲ್ಲ. ಆದರೆ ಒಬ್ಬ "ವಿವಾಹಕ್ಕಾಗಿ ಸಂರಕ್ಷಕ" ಇವನು ಅಂತಹ ಸಮ್ಮತಿಯನ್ನು ಪಡೆಯುವ ಅವಶ್ಯಕತೆಯಿಲ್ಲ. ಅವನು ನ್ಯಾಯಾಲಯದ ಮಂಜೂರಾತಿ ಇಲ್ಲದೇನೇ ಒಂದು ವಿವಾಹದ ಕರಾರು ಮಾಡಬಹುದು. ವಿವಾಹದಲ್ಲಿ ಸಂರಕ್ಷಕನ ಸಂಬಂಧದಲ್ಲಿ ಇನ್ನೊಂದು ಮಹತ್ವದ ಸಂಗತಿಯೆಂದರೆ ಒಬ್ಬ ಸಮೀಪಸ್ಥ ಸಂರಕ್ಷಕನಿದ್ದಾಗ ಅಲ್ಪವಯಿಯ ವಿವಾಹದ ಕರಾರು ಮಾಡಲು ದೂರಸ್ಥ ಸಂರಕ್ಷಕನಿಗೆ ಹಕ್ಕಿರುವದಿಲ್ಲ. ಸಮೀಪಸ್ಥ ಸಂರಕ್ಷಕನ ಸಮ್ಮತಿಯಿಲ್ಲದೆ

ಒಬ್ಬ ದೂರಸ್ಥ ಸಂರಕ್ಷಕನು ಮಾಡಿರುವ ಒಬ್ಬ ಅಲ್ಪವಯಿಯ ಕರಾರು ಶೂನ್ಯ ವಾಗಿರುತ್ತದೆ.

ಶಿಯಾ ಕಾನೂನು (Shia law)

ಶಿಯಾ ಕಾನೂನಿನ ಮೇರೆಗೆ ವಿವಾಹಕ್ಕೋಸ್ಕರ ೧) ತಂದೆ ಮತ್ತು ೨) ಪೈತೃಕ ಅಜ್ಜ ಅವರಷ್ಟೇ ಸಂರಕ್ಷಕರಾಗಿರುವರು. ಇತರ ಯಾವನಾದರೊಬ್ಬ ಸಂರಕ್ಷಕನಿಂದ ಮಾಡಲ್ಪಟ್ಟ ವಿವಾಹದ ಕರಾರು ಆ ಅಲ್ಪವಯಿಯು ತಾರುಣ್ಯಕ್ಕೆ ಬಂದಾಗ ವ್ಯಕ್ತವಾಗಿ ಸ್ಪಷ್ಟೀಕರಿಸದಿದ್ದರೆ ಆದು ಶೂನ್ಯವಾಗುತ್ತದೆ.

ಶಿಶುವಿವಾಹ ನಿರ್ಬಂಧನಾ ಅಧಿನಿಯಮ, 1929
(The Child Marriage Restraint Act, 1929)

ಮೇಲಿನ ಪರಿಚ್ಛೇದದಲ್ಲಿ ಚರ್ಚಿಸಲಾದ ಒಬ್ಬ ಅಲ್ಪವಯಿಯ ವಿವಾಹವು ಶಿಶುವಿವಾಹ ನಿರ್ಬಂಧನಾ ಅಧಿನಿಯಮ ೧೯೨೯ ಇದರ ಉಪಬಂಧಗಳಿಗೆ ಬಾಧ್ಯ ವಾಗಿದೆ. ಈ ಅಧಿನಿಯಮದ ಉದ್ದೇಶವೇನೆಂದರೆ ಒಂದು ನಿಶ್ಚಿತವಾದ ವಯೋ ಮಿತಿಗಿಂತ ಕಡಿಮೆ ವಯಸ್ಸಿನ ಪಕ್ಷಗಾರರ ವಿವಾಹವಾಗುವುದನ್ನು ತಡೆಯುವದಾಗಿ ರುತ್ತದೆ. ಈ ಅಧಿನಿಯಮವು ಮುಸಲ್ಮಾನರ ಸಮೇತ ಪ್ರತಿಯೊಬ್ಬ ಭಾರತೀಯ ನಿಗೆ ಅನ್ವಯವಾಗುತ್ತದೆ. ಈ ಅಧಿನಿಯಮದ ತಿದ್ದುಪಡಿ ಅಧಿನಿಯಮದ ಕ. ೨ರ ಮೇರೆಗೆ ಗಂಡಸರಿಗೆ ವಿವಾಹದ ಕನಿಷ್ಠ ವಯಸ್ಸು ೨೧, ಮತ್ತು ನಾರಿಯಾರಿಗೆ ೧೮ರ ವಯಸ್ಸು ಆಗಿರುತ್ತದೆ. ಒಂದು ವಿವಾಹದ ಪಕ್ಷಗಾರರಲ್ಲಿ ಯಾವನಾದರೊಬ್ಬನು ಈ ಗೊತ್ತುಮಾಡಲ್ಪಟ್ಟ ವಿವಾಹದಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರೆ ಅದೊಂದು ಶಿಶು ವಿವಾಹವೆಂದು ಎಣಿಸಲ್ಪಡುತ್ತದೆ. ಒಂದು ಶಿಶು ವಿವಾಹವನ್ನು ಮಾಡುವ ಒಬ್ಬ ಸಂರಕ್ಷಕ ಅಥವಾ ಇತರ ಯಾವನಾದರೊಬ್ಬ ವ್ಯಕ್ತಿಯು ಒಂದು ಅಪರಾಧ ವನ್ನು ಎಸಗುವನು. ೧೯೭೮ರ ತಿದ್ದುಪಡಿ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಕಟ್ಟುನಿಟ್ಟಾದ ಪಾಲನೆಯ ಬಗ್ಗೆ ಉಪಬಂಧ ಮಾಡಿವೆ. ಈ ಅಧಿ ನಿಯಮದ ಕ. ೭ರ ಪ್ರಕಾರ ಈ ಅಧಿನಿಯಮದ ಆಧೀನ ಬರುವ ಅಪರಾಧಗಳು ಸಂಜ್ಞೇಯ (Cognizabl) ಅಪರಾಧಗಳೆಂದು ಎಣಿಸಲ್ಪಡುತ್ತವೆ ಮತ್ತು ಒಬ್ಬ ಪೋಲೀಸ್ ಅಧಿಕಾರಿಯು ಅವುಗಳ ಬಗ್ಗೆ ತನಿಖೆ ನಡೆಸಬಹುದು. ಈ ಅಪರಾಧದ ವಿಚಾರಣೆಯನ್ನು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧಿಸಲಾದ ಪ್ರಕ್ರಿಯೆ ಯಂತೆ ನಡೆಸಬಹುದಾದರೂ ಸಹ ಒಬ್ಬ ಮೆಜಿಸ್ಟ್ರೇಟನ ಆದೇಶವಿಲ್ಲದೆ ಯಾರನ್ನೂ ಬಂಧಿಸುವಂತಿಲ್ಲ.

S. Narten Bs (1)

(Q4) ತಾರುಣ್ಯದ ಆಯ್ಕೆ (Option of Puberty)

ಮುಸ್ಲಿಮ್ ಕಾನೂನಿನ ಮೇರೆಗೆ ಒಬ್ಬ ಅಲ್ಪವಯಿಯು ತಾರುಣ್ಯದ ವಯ ಸ್ಸಿಗೆ ಬಂದಾಗ ತನ್ನ ತಂದೆ ಅಥವಾ ಪೈತೃಕ ಅಜ್ಜನಲ್ಲದ ಒಬ್ಬ ಸಂರಕ್ಷಕನಿಂದ

ಮಾಡಲ್ಪಟ್ಟ ಒಂದು ವಿವಾಹದ ಕರಾರನ್ನು ಸಮ್ಮತಿಸಲು ಅಥವಾ ಅಸಮ್ಮತಿಸಲು ಹಕ್ಕುದಾರನಾಗಿರುವನು. ಇದನ್ನು ತಾರುಣ್ಯದ ಆಯ್ಕೆಯೆಂದು ಕರೆಯಲಾಗುತ್ತದೆ. ಇದರ ಅರ್ಥವೇನೆಂದರೆ ತಂದೆ ಅಥವಾ ಪೈತೃಕ ಅಜ್ಜನಲ್ಲದ ಇತರ ಯಾವನಾದರೊಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟ ಒಬ್ಬ ಅಲ್ಪವಯಿಯ ವಿವಾಹದ ಕರಾರು ಅಂತಹ ಅಲ್ಪವಯಿಯ ಇಚ್ಛೆಯ ಮೇರೆಗೆ ಶೂನ್ಯಕರಣೀಯವಾಗುತ್ತದೆ. ಒಂದೊಮ್ಮೆ ಒಬ್ಬ ವ್ಯಕ್ತಿಯು ಇಂತಹ ಒಂದು ವಿವಾಹವನ್ನು ವಿಘಟಿತಗೊಳಿಸ ಬಯಸಿದರೆ ಆ ವಿವಾಹವು ಇಂತಹ ತಾರುಣ್ಯದ ಆಯ್ಕೆಯನ್ನು ಚಲಾಯಿಸಿದ ತತ್ಕ್ಷಣದಲ್ಲಿ ವಿಘಟಿತವಾಗುತ್ತದೆ. ಆದರೆ ಒಂದೊಮ್ಮೆ ಆ ಅಲ್ಪವಯಿಯು ತಾರುಣ್ಯಾವಸ್ಥೆಗೆ ಸೇರಿದ ಬಳಿಕ ಆ ವಿವಾಹವನ್ನು ಸಮ್ಮತಿಸ ಬಯಸಿದರೆ ಅದು ಆರಂಭದಿಂದಲೇ ಒಂದು ವಿಧ್ಯುಕ್ತವಾಗಿರುವ ವಿವಾಹವೆಂಬುದಾಗಿ ಎಣಿಸಲಾಗುತ್ತದೆ. ಈ ಹಕ್ಕಿನ ಚಲಾವಣೆಯು ಕಡ್ಡಾಯವಲ್ಲ; ಒಬ್ಬ ಅಲ್ಪವಯಿಯು ತಾರುಣ್ಯಕ್ಕೆ ಬಂದ ಮೇಲೆ ಈ ಹಕ್ಕನ್ನು ಚಲಾಯಿಸಬಹುದು ಅಥವಾ ಚಲಾಯಿಸದೇ ಇರಬಹುದು. ಒಬ್ಬ ಅಲ್ಪವಯಿಯು ತಾರುಣ್ಯಕ್ಕೆ ಬಂದ ಮೇಲೆ ಆಯ್ಕೆಯ ಈ ಹಕ್ಕನ್ನು ಚಲಾಯಿಸದಿದ್ದರೆ ಅವನು ತನ್ನ ಅಲ್ಪವಯದಲ್ಲಿ ಕರಾರು ಮಾಡಲ್ಪಟ್ಟ ವಿವಾಹವನ್ನು ಸಮ್ಮತಿಸಿರುವನೆಂಬ ಪೂರ್ವಭಾವನೆಯಿರುತ್ತದೆ. ಆದರೆ ಶಿಯಾ ಕಾನೂನಿನ ಪ್ರಕಾರ ತಂದೆ ಅಥವಾ ಅಜ್ಜನಲ್ಲದ ಯಾವನಾದರೊಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟ ಒಂದು ವಿವಾಹದ ಕರಾರು ತಾರುಣ್ಯಕ್ಕೆ ಬಂದ ಮೇಲೆ ಆ ಅಲ್ಪವಯಿಯಿಂದ ಸಮ್ಮತಿಸಲ್ಪಡಬೇಕು ಅಥವಾ ಅಸಮ್ಮತಿಸಲ್ಪಡಬೇಕು. ಆದುದರಿಂದ ಶಿಯಾ ಕಾನೂನಿನ ಮೇರೆಗೆ ಒಬ್ಬ ಅಲ್ಪವಯಿಯು ವಯಸ್ಕನಾದಾಗ ತನ್ನ ವಿವಾಹವನ್ನು ವ್ಯಕ್ತವಾಗಿ ಅನುಸಮರ್ಥಿಸದಿದ್ದರೆ ಅಲ್ಲಿ ಯಾವುದೇ ವಿವಾಹವಾಗಿಲ್ಲ ಎಂಬುದಾಗಿ ಎಣಿಸಲಾಗುತ್ತದೆ.

ಬಿ) ಚಿತ್ತ ಸ್ವಾಸ್ಥ್ಯ (Soundness of Mind)

ವಿವಾಹ ಕಾಲದಲ್ಲಿ ವಿವಾಹ ಕರಾರಿನ ಇಬ್ಬರೂ ಪಕ್ಷಗಾರರು ಚಿತ್ತಸ್ವಾಸ್ಥ್ಯವುಳ್ಳವರಾಗಿರಬೇಕು. ಚಿತ್ತವಿಕಲ ವ್ಯಕ್ತಿಗಳು ವಿವಾಹದ ಕರಾರು ಮಾಡಲು ಅಸಮರ್ಥರಾಗಿರುವರು. ಏಕೆಂದರೆ ವಿವಾಹಕ್ಕಾಗಿ ಅವರಿಂದ ಕೊಡಲ್ಪಟ್ಟ ಸಮ್ಮತಿಯು ಕಾನೂನಿನ ದೃಷ್ಟಿಯಲ್ಲಿ ಸಮ್ಮತಿಯೆಂದು ಎಣಿಸಲ್ಪಡುವುದಿಲ್ಲ. ಚಿತ್ತವಿಕಲತೆಯಲ್ಲಿ ಎರಡು ಪ್ರಕಾರಗಳಿವೆ. ದಡ್ಡತನ ಮತ್ತು ಮನೋವಿಕಲತೆ. ದಡ್ಡತನದಲ್ಲಿ ಒಂದು ವಿಸ್ತೃತ ಮನಸ್ಥಿತಿಯಿದ್ದು ಇದರಿಂದ ಪೀಡಿತನಾಗಿರುವ ಒಬ್ಬ ವ್ಯಕ್ತಿಯು ತನ್ನ ಕೃತ್ಯಗಳ ಕಾನೂನೀ ಪರಿಣಾಮಗಳನ್ನು ತಿಳಿದುಕೊಳ್ಳಲು ಅಸಮರ್ಥನಾಗಿರುವನು. ಇಂತಹ ವ್ಯಕ್ತಿಗಳು ದಡ್ಡರೆಂದು ಕರೆಯಲ್ಪಡುವರು ಮತ್ತು ಅವರು ವಿವಾಹದ ಕರಾರು ಮಾಡುವಂತಿಲ್ಲ. ಮನೋವಿಕಲತೆಯು ಒಂದು ರೀತಿಯ ಮನೋವ್ಯಾಧಿಯಾಗಿದ್ದು ಅದನ್ನು ಗುಣಪಡಿಸುವುದು ಸಾಧ್ಯ. ಇಂತಹ ವ್ಯಕ್ತಿಗಳು ಮನೋವಿಕಲರೆಂದು ಕರೆಯಲ್ಪಡುತ್ತಾರೆ ಮತ್ತು ಅವರು ತಿಳಿದುಕೊಳ್ಳಲು ಅಸಮರ್ಥರಾಗಿರುವರು. ಆದರೆ ಕೆಲವೊಮ್ಮೆ ಅವರು ಚಿತ್ತಸ್ವಾಸ್ಥ್ಯವುಳ್ಳ ವ್ಯಕ್ತಿ

ಗಳಂತೆ ವರ್ತಿಸಬಹುದು. ಒಬ್ಬ ಚಿತ್ತವಿಕಲ ವ್ಯಕ್ತಿಯು ಬುದ್ಧಿ ಸ್ವಾಸ್ಥ್ಯವುಳ್ಳ ಒಬ್ಬ ವ್ಯಕ್ತಿಯಂತೆ ವರ್ತಿಸುವ ಕಾಲಾವಧಿಗೆ ಸ್ವಸ್ಥ ಚಿತ್ತಾವಸ್ಥೆಯೆಂದು ಕರೆಯಲಾಗುತ್ತದೆ. ಒಬ್ಬ ಚಿತ್ತವಿಕಲನು ಸ್ವಸ್ಥ ಚಿತ್ತಾವಸ್ಥೆಯ ಕಾಲದಲ್ಲಿ ಮಾಡಿರುವ ಒಂದು ವಿವಾಹದ ಕರಾರು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ.

ಚಿತ್ತವಿಕಲ ವ್ಯಕ್ತಿಗಳ ವಿವಾಹ (Marriage of Insane persons)

ಚಿತ್ತಸ್ವಸ್ಥಾವಸ್ಥೆಯ ಹೊರತು ಬೇರೆ ಕಾಲದಲ್ಲಿ ಚಿತ್ತವಿಕಲ ವ್ಯಕ್ತಿಗಳಿಂದಾಗುವ ವಿವಾಹದ ಕರಾರುಗಳು ಶೂನ್ಯವೆಂದು ಎಣಿಸಲ್ಪಡುತ್ತವೆ. ಆದರೆ ಒಬ್ಬ ಚಿತ್ತವಿಕಲ ವ್ಯಕ್ತಿಯ ವಿವಾಹದ ಕರಾರು ಒಬ್ಬ ವಿವಾಹ ಸಂರಕ್ಷಕನಿಂದ ಮಾಡಲ್ಪಟ್ಟಿದ್ದರೆ ಆ ವಿವಾಹವು ಕಾನೂನುಬದ್ಧವೆಂದು ಎಣಿಸಲ್ಪಡುತ್ತದೆ. ಒಬ್ಬ ಸಂರಕ್ಷಕನಿಂದ ಮಾಡಲ್ಪಟ್ಟ ಒಬ್ಬ ಚಿತ್ತವಿಕಲ ವ್ಯಕ್ತಿಯ ವಿವಾಹವು ಒಬ್ಬ ಅಲ್ಪವಯಿಯ ವಿವಾಹದಂತಿದ್ದು ಇಲ್ಲೂ ಸಹ ತಾರುಣ್ಯದ ಆಯ್ಕೆಯ ನಿಯಮವು ಅನ್ವಯವಾಗುತ್ತದೆ. ಒಬ್ಬ ವ್ಯಕ್ತಿಯು ಚಿತ್ತವಿಕಲನಾದಾಗ ಅವನ ಸಂರಕ್ಷಕನು, ತಂದೆ ಅಥವಾ ಪೈತೃಕ ಅಜ್ಜನಲ್ಲದ ಸಂರಕ್ಷಕನಿಂದ ಮಾಡಲ್ಪಟ್ಟ ಅವನ ವಿವಾಹದ ಕರಾರನ್ನು ಅವನು ಚಿತ್ತಸ್ವಾಸ್ಥ್ಯವನ್ನು ಮರಳಿ ಪಡೆದಾಗ ಪುಷ್ಟೀಕರಿಸಬಹುದು. ಆದರೆ ಒಬ್ಬ ಹುಟ್ಟುದಡ್ಡನ ವಿವಾಹವು ರದ್ದುಗೊಳಿಸಲ್ಪಡುವುದಿಲ್ಲ. ಅದೇ ರೀತಿಯಲ್ಲಿ ಒಬ್ಬ ಚಿತ್ತವಿಕಲನ ವಿವಾಹವು ಅವನ ತಂದೆ ಅಥವಾ ಪೈತೃಕ ಅಜ್ಜನಿಂದ ಕರಾರುಗೊಳಿಸಲ್ಪಟ್ಟುದಾದರೆ ಅದು ರದ್ದುಗೊಳಿಸಲ್ಪಡುವುದಿಲ್ಲ.

ಸಿ) ಪಕ್ಷಗಾರರ ಧರ್ಮ (Religion of the Parties)

ಒಂದು ವಿವಾಹದ ಕರಾರಿನಲ್ಲಿ ಇಬ್ಬರೂ ಪಕ್ಷಗಾರರು ವಿವಾಹಿತರಾಗಲು ಸಕ್ಷಮರಾಗಿರಬೇಕು. ಸಕ್ಷಮತೆಯೆಂದರೆ ಕೇವಲ ಸಾಮರ್ಥ್ಯವಲ್ಲ, ಪರಸ್ಪರರನ್ನು ವಿವಾಹವಾಗುವ ಅವರ ಹಕ್ಕೂ ಇದರಲ್ಲಿ ಕೂಡಿಕೊಂಡಿರುತ್ತದೆ. ಆ ವಿವಾಹವು ಮುಸ್ಲಿಮ್ ಕಾನೂನಿನ ನಿಯಮಗಳಿಂದ ಶಾಸಿತವಾಗುವುದಾದುದರಿಂದ ಇಬ್ಬರೂ ಪಕ್ಷಗಾರರಿಗೆ ಯಾವತ್ತೂ ಪಂಗಡ ಅಥವಾ ಉಪ ಪಂಗಡದ ಒಬ್ಬ ಮುಸಲ್ಮಾನನನ್ನು ವಿವಾಹವಾಗುವ ಹಕ್ಕಿದೆ. ಒಬ್ಬ ಶಿಯಾ ಹುಡುಗನು ಒಬ್ಬ ಶಿಯಾ ಹುಡುಗಿಯನ್ನು ವಿವಾಹವಾದರೆ ಅದು ವಿಧ್ಯುಕ್ತವಾಗಿರುತ್ತದೆ. ಇದೇ ರೀತಿಯಲ್ಲಿ ಒಬ್ಬ ಹನಫಿ ಹುಡುಗನು ಶಫಿ ಅಥವಾ ಇತ್ನಾ ಆಶಾರಿಯಾ ಪಂಗಡದ ಹುಡುಗಿಯನ್ನು ವಿವಾಹವಾದರೂ ಸಹ ಅದು ಕಾನೂನುಬದ್ಧವಾಗಿರುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಇಬ್ಬರೂ ಪಕ್ಷಗಾರರ ಧರ್ಮಗಳು ಇಸ್ಲಾಮ್ ಆಗಿದ್ದರೆ ಅವರ ಪಂಗಡಗಳು ಬೇರೆಬೇರೆಯಾಗಿದ್ದರೂ ಸಹ ಈ ಕಾರಣದಿಂದ ಅವರ ವಿವಾಹವು ಅಸಿಂಧುವಾಗುವುದಿಲ್ಲ. ಒಂದೊಮ್ಮೆ ವಿವಾಹದ ಪಕ್ಷದಾರರ ಧರ್ಮಗಳು ಬೇರೆ ಬೇರೆಯಾಗಿದ್ದರೆ ಅಲ್ಲಿ ಅದೊಂದು ಅಂತರ್ಧರ್ಮೀಯ ವಿವಾಹವಾಗುತ್ತದೆ.

ಅಂತರ್ಧರ್ಮೀಯ ವಿವಾಹ (Inter-Religious Marriage)

ಅಂತರ್ಧರ್ಮೀಯ ವಿವಾಹಗಳ ಸಂಬಂಧದಲ್ಲಿ ಸುನ್ನಿ ಮತ್ತು ಶಿಯಾ ಸಂಪ್ರದಾಯಗಳಲ್ಲಿ ತುಂಬಾ ವ್ಯತ್ಯಾಸವಿದೆ. ಈ ವ್ಯತ್ಯಾಸವು ಯಾವುದೆಂಬುದನ್ನು ನೋಡೋಣ.

ಸುನ್ನಿ ಕಾನೂನು (Sunni Law)

ಸುನ್ನಿ ಕಾನೂನಿನ ಪ್ರಕಾರ ಒಬ್ಬ ಹುಡುಗನು ಯಾವುದೇ ಪಂಗಡದ ಮುಸ್ಲಿಂ ಹುಡುಗಿಯನ್ನು ವಿವಾಹವಾಗಬಹುದು, ಮತ್ತು ಅವನು ಒಬ್ಬ ಕಿತಾಬಿಯಾ ಹುಡುಗಿಯನ್ನು ಸಹ ವಿವಾಹವಾಗಬಹುದು. ಒಬ್ಬ ಹುಡುಗಿಯು ಒಂದೊಮ್ಮೆ ಸ್ವರ್ಗೀಯ ಅಥವಾ ಪ್ರಕಟಿತ ಧರ್ಮವನ್ನು ನಂಬಿ ಮತ್ತು ಅವಳಲ್ಲಿ ಒಂದು ಕಿತಾಬ್ (Holy book) ಪುಸ್ತಕವಿದ್ದರೆ ಅವಳು ಒಂದು ಕಿತಾಬಿಯಾ ಹುಡುಗಿಯೆಂದು ಎಣಿಸಲ್ಪಡುವಳು. ಮುಸ್ಲಿಮ್ ಕಾನೂನಿನ ಪ್ರಕಾರ ಕ್ರೈಸ್ತರು ಮತ್ತು ಯಹೂದಿಯರು ಕಿತಾಭಿಯಾ ಸಮಾಜದವರೆಂದು ಎಣಿಸಲ್ಪಡುವರು. ಹೀಗೆ ಒಬ್ಬ ಸುನ್ನಿ ಹುಡುಗನು ಒಬ್ಬ ಕ್ರಿಶ್ಚನ್ ಅಥವಾ ಯಹೂದಿ ನಾರಿಯೊಂದಿಗೆ ಕಾನೂನುಬದ್ಧವಾಗಿ ಒಂದು ವಿವಾಹದ ಕರಾರು ಮಾಡಬಹುದು, ಅವರ ವಿವಾಹವು ವಿಧ್ಯುಕ್ತವಾಗಿರುತ್ತದೆ.

ಒಂದೊಮ್ಮೆ ಒಬ್ಬ ಸುನ್ನೀ ಹುಡುಗನು ಒಬ್ಬ ಮುಸ್ಲಿಮ್ ಅಥವಾ ಕಿತಾಬಿಯಾಳಲ್ಲದ ನಾರಿಯುನ್ನು ವಿವಾಹವಾದರೆ ಆ ವಿವಾಹವು ವಿಧ್ಯುಕ್ತವಲ್ಲ; ಅದೊಂದು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲ್ಪಡುತ್ತದೆ. ಒಂದು ಕ್ರಮಬದ್ಧವಲ್ಲದ ವಿವಾಹವು ವಿಧ್ಯುಕ್ತವೂ ಅಲ್ಲ ಶೂನ್ಯವೂ ಅಲ್ಲ, ಆದರೆ ಆ ಅಕ್ರಮತೆಯು ಕಿತ್ತುಹಾಕಲ್ಪಟ್ಟಾಗ ಆ ವಿವಾಹವು ವಿಧ್ಯುಕ್ತವಾಗುತ್ತದೆ. ಉದಾಹರಣೆಗಾಗಿ, ಒಬ್ಬ ಸುನ್ನಿ ಹುಡುಗನು ಒಬ್ಬ ಅಗ್ನಿಪೂಜಕ ಅಥವಾ ಹಿಂದೂ ಹೆಣ್ಣನ್ನು ವಿವಾಹವಾದರೆ ಅದೊಂದು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಲ್ಪಡುತ್ತದೆ. ಆದರೆ ಆ ಹುಡುಗಿಯು ಇಸ್ಲಾಮಿಗೆ ಮತಾಂತರಗೊಂಡರೆ ಅದು ವಿಧ್ಯುಕ್ತವಾದ ವಿವಾಹವಾಗುತ್ತದೆ.

ಶಿಯಾ ಕಾನೂನು (Shia Law)

ಒಬ್ಬ ಶಿಯಾ ಗಂಡಸು ಮುಸ್ಲಿಮ್ ಅಲ್ಲದ ಯಾವಳೇ ಒಬ್ಬ ಹೆಣ್ಣಿನೊಂದಿಗೆ ಒಂದು ವಿವಾಹದ ಕರಾರನ್ನು ಮಾಡುವಂತಿಲ್ಲ. ಒಬ್ಬ ಶಿಯಾ ಗಂಡಸು ಒಬ್ಬ ಕಿತಾಬಿಯಾ ಹೆಣ್ಣನ್ನೂ ಸಹ ಮದುವೆಯಾಗುವಂತಿಲ್ಲ. ಒಬ್ಬ ಶಿಯಾ ಗಂಡಸು ಒಬ್ಬ ಹಿಂದೂ, ಒಬ್ಬ ಯಹೂದಿ, ಒಬ್ಬ ಕ್ರೈಸ್ತ ಅಥವಾ ಅಗ್ನಿಪೂಜಕ ಹೆಣ್ಣಿನೊಂದಿಗೆ ಮಾಡಿಕೊಂಡಿರುವ ವಿವಾಹವು ಮೂಲದಿಂದಲೇ ಅಸಿಂಧುವಾಗಿರುತ್ತದೆ.

ಆದರೆ ಒಬ್ಬ ಶಿಯಾ ಗಂಡಸು ಒಬ್ಬ ಕಿತಾಬಿಯಾ ಅಥವಾ ಅಗ್ನಿಪೂಜಕ ಹೆಣ್ಣಿನೊಂದಿಗೆ ಒಂದು ಮುತಾ ವಿವಾಹವನ್ನು ಮಾಡಿಕೊಳ್ಳಬಹುದು.

ಒಬ್ಬ ಮುಸಲ್ಮಾನೇತರಗಂಡಸಿನೊಂದಿಗೆ ಒಬ್ಬ ಮುಸಲ್ಮಾನ ಹೆಣ್ಣಿನ ವಿವಾಹ (Marriage of a Muslim female with a Non-Muslim Male)

ಒಬ್ಬ ಶಿಯಾ ಅಥವಾ ಸುನ್ನಿ ಮುಸ್ಲಿಮ್ ನಾರಿಯು ಯಾವನೇ ಒಬ್ಬ ಮುಸಲ್ಮಾನೇತರ ಗಂಡಸಿನೊಂದಿಗೆ ಒಂದು ವಿವಾಹದ ಕರಾರು ಮಾಡಿಕೊಳ್ಳುವಂತಿಲ್ಲ. ಒಂದೊವೇಳೆ ಒಬ್ಬ ಮುಸ್ಲಿಮ್ ನಾರಿಯು ಒಬ್ಬ ಹಿಂದೂ ಯಹೂದಿ ಅಥವಾ ಒಬ್ಬ ಕ್ರೈಸ್ತ ಗಂಡಸಿನೊಂದಿಗೆ ಮಾಡಿಕೊಂಡ ವಿವಾಹವು ಮುಸ್ಲಿಮ್ ಕಾನೂನಿನ ಈ ಎರಡೂ ಪರಂಪರೆಗಳ ಪ್ರಕಾರ ಮೂಲದಿಂದಲೇ ಅಸಿಂಧು ವಾಗಿರುತ್ತದೆ.

ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸ್ವತಂತ್ರ ಸಮ್ಮತಿ (Free Consent of the parties or their Guardians)

ಒಂದು ಮುಸ್ಲಿಮ್ ವಿವಾಹದಲ್ಲಿ ಸಮ್ಮತಿಯು ಒಂದು ಆವಶ್ಯಕ ಅಂಶ ವಾಗಿದೆ. ವಿವಾಹದ ಪಕ್ಷಗಾರರು ಚಿತ್ತಸ್ವಸ್ಥರಾಗಿದ್ದು ವಯಸ್ಕರಾಗಿದ್ದರೆ ಅವರ ಸ್ವಂತ ಸಮ್ಮತಿಯು ಅವಶ್ಯಕತೆಯಿದೆ. ಆದರೆ ಅವರೊಳಗೆ ಹುಡುಗ ಅಥವಾ ಹುಡುಗಿಯು ಚಿತ್ತವಿಕಲವಾಗಿದ್ದರೆ, ಆಗ ಅಂತಹ ಚಿತ್ತವಿಕಲ ಪಕ್ಷದ ಪರವಾಗಿ ಆ ಪಕ್ಷದ ಸಂರಕ್ಷಕನಿಂದ ಸಮ್ಮತಿಯು ಕೊಡಲ್ಪಡುತ್ತದೆ. ಒಂದು ವಿವಾಹವು ವಿಧ್ಯುಕ್ತ ವೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಯಾವುದೇ ರೀತಿಯ ಒಂದು ಸಮ್ಮತಿಯು ಪರ್ಯಾಪ್ತವಾಗುವುದಿಲ್ಲ. ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸಮ್ಮತಿಯು ಒಂದು ಸ್ವತಂತ್ರವಾದ ಸಮ್ಮತಿಯಾಗಿರಬೇಕು. ಸ್ವೇಚ್ಛೆಯಿಂದ ಕೊಡಲ್ಪಡದ ಸಮ್ಮತಿಯು ಸಮ್ಮತಿಯೆಂದು ಎಣಿಸಲ್ಪಡುವದಿಲ್ಲ. ಒತ್ತಡ ಮೋಸ ಅಥವಾ ವಸ್ತುಸ್ಥಿತಿಯ ಬಗ್ಗೆ ತಪ್ಪು ಕಲ್ಪನೆ ಇತ್ಯಾದಿಗಳಿಂದ ಕೊಡಲಾಗುವ ಸಮ್ಮತಿಯು ಒಂದು ಸ್ವತಂತ್ರ ಸಮ್ಮತಿಯೆಂದು ಎಣಿಸಲ್ಪಡುವುದಿಲ್ಲ.

ಒತ್ತಡ (Compulsion)

ಬಲ ಪ್ರಯೋಗ, ಹೆದರಿಕೆ ಹುಟ್ಟಿಸುವುದು ಅಥವಾ ಜಬರ್ದಸ್ತಿ ಇತ್ಯಾದಿ ಗಳ ಮೂಲಕ ಒಂದು ಸಮ್ಮತಿಯನ್ನು ಪಡೆದರೆ ಅದೊಂದು ಸ್ವತಂತ್ರವಾದ ಸಮ್ಮತಿ ಯೆಂದು ಎಣಿಸಲ್ಪಡುವುದಿಲ್ಲ. ಯಾವ ವ್ಯಕ್ತಿಯು ಈ ರೀತಿಯಾಗಿ ಒಂದು ಸಮ್ಮತಿ ಯನ್ನು ಕೊಟ್ಟಿರುವನೋ ಅವನು ನಿಜವಾಗಿ ಸಮ್ಮತಿ ಕೊಟ್ಟಿರುವನೆಂಬುದಾಗಿ ಎಣಿಸಲಾಗುವುದಿಲ್ಲ. ಹನಫಿ ಪರಂಪರೆಯ ಹೊರತಾಗಿ ಮುಸ್ಲಿಮ್ ಕಾನೂನಿನ

ಎಲ್ಲಾ ಪರಂಪರೆಗಳ ಪ್ರಕಾರ ವಿವಾಹದ ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸಮ್ಮತಿಯು ಒತ್ತಡ ಹೇರಿ ಪಡೆಯಲಾಗಿದ್ದರೆ ಆ ವಿವಾಹವು ಶೂನ್ಯವಾಗುತ್ತದೆ.

ಆದರೆ ಹನಫಿ ಕಾನೂನಿನ ಪ್ರಕಾರ ಒಂದು ಸಮ್ಮತಿಯು ಒತ್ತಡದ ಮೇಲೆ ಕೊಡಲ್ಪಟ್ಟರೂ ಸಹ ಆ ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರವು ಸಹ ಒತ್ತಡ ಹೇರಿ ಪಡೆಯಲಾದ ಸಮ್ಮತಿಯು ವಿವಾಹವನ್ನು ಶೂನ್ಯಗೊಳಿಸುತ್ತದೆ.

ಮೋಸ (Fraud)

ಒಂದು ವಿವಾಹದ ಸಂಬಂಧದಲ್ಲಿ ಸಮ್ಮತಿಯನ್ನು ಪಡೆಯುವದಕ್ಕಾಗಿ ಅಪ್ರಾಮಾಣಿಕವಾಗಿ ಕೆಲವು ಮಹತ್ವದ ಸಂಗತಿಗಳು ಬಚ್ಚಿಡಲ್ಪಟ್ಟಿದ್ದರೆ ಅಥವಾ ಸುಳ್ಳು ಹೇಳಿಕೆಗಳು ಕೊಡಲ್ಪಟ್ಟಿದ್ದರೆ ಅಲ್ಲಿ ಮೋಸ ಮಾಡಿದಂತಾಗುತ್ತದೆ. ಒಂದೊಮ್ಮೆ ಒಂದು ಸಮ್ಮತಿಯು ಮೋಸ ಮಾಡಿ ಪಡೆಯಲಾಗಿದ್ದರೆ ಅಲ್ಲಿ ಮೋಸ ಮಾಡಲ್ಪಟ್ಟ ಪಕ್ಷಗಾರನ ಇಚ್ಛೆಯ ಪ್ರಕಾರ ಆ ವಿವಾಹವು ಶೂನ್ಯಕರಣೀಯವಾಗುತ್ತದೆ. ಮೋಸಗೊಳಿಸಲ್ಪಟ್ಟ ಪಕ್ಷಗಾರನಿಗೆ ತನ್ನ ವಿವಾಹದ ಬಗ್ಗೆ ಮಾಡಲ್ಪಟ್ಟ ಮೋಸವು ತಿಳಿದು ಬಂದಾಗ ಆ ಪಕ್ಷವು ಆ ವಿವಾಹವನ್ನು ಒಂದು ಕಾನೂನುಬದ್ಧವಾದ ವಿವಾಹವೆಂದು ಸ್ವೀಕರಿಸಬಹುದು ಅಥವಾ ಅದನ್ನು ತಿರಸ್ಕರಿಸಬಹುದು. ಒಂದೊಮ್ಮೆ ಆ ವಿವಾಹವು ತಿರಸ್ಕರಣದಿಂದ ಅಸಿಂಧುಗೊಳಿಸಲ್ಪಟ್ಟರೆ ಅದು ಶೂನ್ಯವಾಗುತ್ತದೆ. ಆದರೆ ಒಂದೊಮ್ಮೆ ಅಂತಹ ವ್ಯಕ್ತಿಗೆ ಈ ಮೋಸದಿಂದ ಏನೂ ಹಾನಿಯಾಗಿಲ್ಲವೆಂದು ಅಂತಹ ವ್ಯಕ್ತಿಯು ಎಣಿಸಿದರೆ ಅವನು ಅಥವಾ ಅವಳು ಆ ವಿವಾಹವನ್ನು ವ್ಯಕ್ತವಾಗಿ ಅಥವಾ ಅವ್ಯಕ್ತವಾಗಿ ಅನುಸಮರ್ಥಿಸಬಹುದು. ಆ ಬಳಿಕ ಆ ವಿವಾಹವು ಕಾನೂನುಬದ್ಧವಾಗಿ ಮುಂದುವರಿಯುತ್ತದೆ.

ವಸ್ತುಸ್ಥಿತಿಯ ಬಗ್ಗೆ ತಪ್ಪು ತಿಳುವಳಿಕೆ (Mistake of fact)

ಇಬ್ಬರು ವ್ಯಕ್ತಿಗಳು ಅದೇ ವಸ್ತುವಿನ ಬಗ್ಗೆ ಅದೇ ಅರ್ಥದಲ್ಲಿ ಒಪ್ಪಿಕೊಂಡರೆ ಅಲ್ಲಿ ಅವರು ಸಮ್ಮತಿ ಕೊಟ್ಟಿರುವರು ಎಂದು ಎಣಿಸಲಾಗುತ್ತದೆ. ಒಂದೊಮ್ಮೆ ವಿವಾಹ ಕಾಲದಲ್ಲಿ ಎರಡೂ ಪಕ್ಷಗಳು ಅಥವಾ ಅವರ ಸಂರಕ್ಷಕರು ವಸ್ತುಸ್ಥಿತಿಯ ಬಗ್ಗೆ ಒಂದು ತಪ್ಪು ತಿಳುವಳಿಕೆಯಲ್ಲಿದ್ದರೆ ಮತ್ತು ಆ ವಸ್ತುಸ್ಥಿತಿಯು ಆ ವಿವಾಹಕ್ಕೆ ಸಂಬದ್ಧವಾಗಿದ್ದರೆ, ಅಲ್ಲಿ ಸಮ್ಮತಿಯು ಕೊಡಲ್ಪಟ್ಟಿದೆಯೆಂದು ಎಣಿಸಲಾಗುವುದಿಲ್ಲ ಮತ್ತು ಅಂತಹ ವಿವಾಹವು ಶೂನ್ಯವಾಗುತ್ತದೆ. ಉದಾಹರಣೆಗಾಗಿ, ಯಾವ ಹುಡುಗಿಯ ಸಂಬಂಧದ ಬಗ್ಗೆ ಒಂದು ಪ್ರಸ್ತಾಪವು ಮಾಡಲ್ಪಟ್ಟಿತ್ತೊ ಅವಳ ಬಗ್ಗೆ ಒಂದು ತಪ್ಪುಕಲ್ಪನೆಯುಂಟಾಗಿದ್ದರೆ ಅಲ್ಲಿ ಆ ವಿವಾಹವು ಶೂನ್ಯಗೊಳ್ಳುತ್ತದೆ.

ವಿವಾಹದಲ್ಲಿ ಔಪಚಾರಿಕತೆಗಳು
(Formalities in Marriage)

ವಿವಾಹೋತ್ಸವದ ಆಚರಣೆಯು ಎಲ್ಲಾ ಸಮಾಜಗಳಲ್ಲೂ ಬಳಕೆಯಲ್ಲಿದೆ. ಆದರೆ ಮುಸ್ಲಿಮ್ ಕಾನೂನಿನ ಪ್ರಕಾರ ಯಾವುದೇ ಒಂದು ವಿವಾಹಕ್ಕೆ ಈ ಔಪಚಾರಿಕತೆಗಳ ಅವಶ್ಯಕತೆಯಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಎರಡು ಔಪಚಾರಿಕತೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಅವಾವುವೆಂದರೆ ೧) ಪ್ರಸ್ತಾವ (Ijab) ಮತ್ತು ಅದರ ಸ್ವೀಕೃತಿ (Qabool). ಇವೆರಡನ್ನೂ ಒಂದೇ ಕಾಲದಲ್ಲಿ ಮಾಡಬೇಕಾಗುತ್ತದೆ.

ಪ್ರಸ್ತಾವ ಮತ್ತು ಸ್ವೀಕೃತಿ (Offer and Acceptance)

ಪ್ರಸ್ತಾವವು ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯೊಂದಿಗೆ ವಿವಾಹದ ಕರಾರು ಮಾಡುವ ಇಚ್ಛೆಕತೆಯನ್ನು ವ್ಯಕ್ತಪಡಿಸುತ್ತವೆ. ಪ್ರಸ್ತಾವವು ಸಾಮಾನ್ಯವಾಗಿ ಒಂದು ಘೋಷಣೆಯ ರೂಪದಲ್ಲಿರುತ್ತದೆ ಮತ್ತು ಅದು ಸಾಮಾನ್ಯವಾಗಿ ಹುಡುಗನಿಂದ ಅಥವಾ ಅವನ ಸಂರಕ್ಷಕನಿಂದ ಮಾಡಲ್ಪಡುತ್ತದೆ. ಆ ಪ್ರಸ್ತಾವವು ಹುಡುಗಿಯಿಂದ ಅಥವಾ ಹುಡುಗಿಯ ಸಂರಕ್ಷಕನಿಂದ ಸ್ವೀಕರಿಸಲ್ಪಡಬೇಕು.

ಸ್ವೀಕೃತಿಯು ಹುಡುಗಿಯಿಂದ ಅಥವಾ ಅವಳ ಸಂರಕ್ಷಕನಿಂದ ಮಾಡಲ್ಪಡುತ್ತದೆ. ಒಂದು ಪ್ರಸ್ತಾವ ಮತ್ತು ಸ್ವೀಕೃತಿಯ ಬಗ್ಗೆ ಯಾವುದೇ ನಿರ್ದಿಷ್ಟವಾದ ಶಬ್ದಗಳು ಗೊತ್ತು ಮಾಡಲಾಗಿಲ್ಲ. ಆದರೆ ಪಕ್ಷಗಾರರು ವಿವಾಹವಾಗಲು ಸಿದ್ಧರಿರುವರೆಂಬ ತಮ್ಮ ಉದ್ದೇಶವನ್ನು ವ್ಯಕ್ತವಾಗಿ ಪ್ರಕಟಿಸಬೇಕು. ಪ್ರಸ್ತಾವ ಮತ್ತು ಸ್ವೀಕೃತಿಯು ಅನಿಶ್ಚಿತ ಅಥವಾ ಸಂಶಯಾತ್ಮಕ ಸ್ವರೂಪದವುಗಳಾಗಿರಬಾರದು.

ಮೌಖಿಕ ಅಥವಾ ಲಿಖಿತ (Oral or Written)

ಪ್ರಸ್ತಾವ ಮತ್ತು ಸ್ವೀಕೃತಿ ಇವು ಮೌಖಿಕವಾಗಿರಬಹುದು ಅಥವಾ ಲಿಖಿತ. ಹಾಗೆಂದರೆ, ಪ್ರಸ್ತಾವ ಮತ್ತು ಸ್ವೀಕೃತಿಯು ಬಾಯಿ ಮಾತಿನಿಂದ ಮಾಡಲ್ಪಡಬಹುದು, ಅಥವಾ ಅದನ್ನು ಬರವಣಿಗೆಯಲ್ಲಿ ಮಾಡಬಹುದು. ಒಂದೊಮ್ಮೆ ಅದು ಬರವಣಿಗೆಯಲ್ಲಿ ಮಾಡಲ್ಪಟ್ಟಿದ್ದರೆ ಅದನ್ನು ಕಬಿನ್ನಾಮ (Kabinnamah) ಎಂದು ಕರೆಯಲಾಗುತ್ತದೆ ಮತ್ತು ಅದೊಂದು ವಿವಾಹದ ಮಹತ್ವಪೂರ್ಣ ದಾಖಲೆಯಾಗಿರುತ್ತದೆ.

ಒಂದೇ ಕಾಲದಲ್ಲಿ (At the same sitting)

ಒಂದು ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಪ್ರಸ್ತಾವ

ಮತ್ತು ಸ್ವೀಕೃತಿಯು ಒಂದೇ ಕಾಲದಲ್ಲಿ ಮಾಡಲ್ಪಡಬೇಕಾಗುತ್ತದೆ. ಇದರ ಅರ್ಥವೇನೆಂದರೆ ವಿವಾಹದ ಪ್ರಸ್ತಾವ ಮತ್ತು ಅದರ ತದನಂತರದ ಸ್ವೀಕೃತಿ ಇವೆರಡನ್ನು ಎರಡೂ ಪಕ್ಷಗಾರರು ಭೇಟಿಯಾಗಿರುವ ಸ್ಥಳದಲ್ಲೇ ಮಾಡಬೇಕಾಗುತ್ತದೆ. ವಿವಾಹದ ಕರಾರಿನ ಈ ಎರಡೂ ಅಂಶಗಳು ಏಕಕಾಲದಲ್ಲಿ ಮಾಡಲ್ಪಟ್ಟವುಗಳಾಗಿರಬೇಕು. ಆಗ ಮಾತ್ರ ಅವು ಒಂದು ಕರಾರಿನ ಅಂಶಗಳೆಂದು ಎಣಿಸಲ್ಪಡುತ್ತವೆ. ಒಂದೊಮ್ಮೆ ಒಂದು ಪ್ರಸ್ತಾವ ಮತ್ತು ಸ್ವೀಕೃತಿ ಪರಸ್ಪರ ಸಂಬಂಧವಿಲ್ಲದವುಗಳೆಂದಾದರೆ ಅಲ್ಲಿ ಒಂದು ವಿವಾಹದ ಕರಾರು ನಿರ್ಮಿಸಲ್ಪಡುವುದಿಲ್ಲ.

ಪಾರಸ್ಪರಿಕತೆ (Reciprocity)

ಪ್ರಸ್ತಾವ ಮತ್ತು ಸ್ವೀಕೃತಿ ಇವೆರಡೂ ಒಂದು ಮತ್ತೊಂದಕ್ಕೆ ಪಾರಸ್ಪರಿಕವಾಗಿರಬೇಕು. ಹಾಗೆಂದರೆ, ಸ್ವೀಕೃತಿಯು ಅದೇ ಪ್ರಸ್ತಾವಕ್ಕೆ ಮಾಡಲ್ಪಟ್ಟುದ್ದಾಗಿರಬೇಕು. ಒಂದೊಮ್ಮೆ ಸ್ವೀಕೃತಿಯು ಷರತ್ತುಬದ್ಧ ಅಥವಾ ಮಾರ್ಪಾಡುಗಳಿಂದ ಕೂಡಿದ್ದಾದರೆ ಅದನ್ನು ಅದೇ ಪ್ರಸ್ತಾವದ ಸ್ವೀಕೃತಿಯೆಂದು ಎಣಿಸಲಾಗುವುದಿಲ್ಲ.

ಷರತ್ತುಬದ್ಧ ಅಥವಾ ಘಟನಾವಲಂಬಿ ವಿವಾಹ (Conditional or Contingent Marriage)

ಪ್ರಸ್ತಾವ ಮತ್ತು ಸ್ವೀಕೃತಿ ಇವೆರಡೂ ವಿವಾಹವಾಗುವ ಉದ್ದೇಶದಿಂದ ಮಾಡಲ್ಪಟ್ಟವುಗಳಾಗಿರಬೇಕು. ಒಂದೊಮ್ಮೆ ಒಂದು ಪ್ರಸ್ತಾವ ಮತ್ತು ಸ್ವೀಕೃತಿ ಷರತ್ತುಬದ್ಧವಾಗಿದ್ದರೆ ಅಥವಾ ಒಂದು ಅನಿಶ್ಚಿತವಾದ ಭಾವೀ ಘಟನೆಯನ್ನು ಅವಲಂಬಿಸಿಕೊಂಡಿದ್ದರೆ ಅಲ್ಲೊಂದು ವಿವಾಹವು ನಿರ್ಮಿಸಲ್ಪಡುವುದಿಲ್ಲ. ಒಂದು ಷರತ್ತುಬದ್ಧ ಅಥವಾ ಘಟನಾವಲಂಬಿ ವಿವಾಹವು ಶೂನ್ಯವಾಗಿರುತ್ತದೆ. ಒಂದು ಷರತ್ತುಬದ್ಧ ವಿವಾಹವು ಒಂದು ಭಾವೀ ವಿವಾಹದ ಬಗ್ಗೆ ಒಂದು ವಚನ ಮಾತ್ರ ಆಗಿರುತ್ತದೆ.

ಸಾಕ್ಷಿದಾರರ ಉಪಸ್ಥಿತಿ (Presence of Witnesses)

ಪ್ರಸ್ತಾವ ಮತ್ತು ಸ್ವೀಕೃತಿಯು ಇಬ್ಬರು ಸಕ್ಷಮ ಸಾಕ್ಷಿದಾರರ ಉಪಸ್ಥಿತಿಯಲ್ಲಿ ಮಾಡಬೇಕಾಗುತ್ತದೆ. ಚಿತ್ತಸ್ವಾಸ್ಥ್ಯವುಳ್ಳ ಮತ್ತು ತಾರುಣ್ಯಾವಸ್ಥೆಗೆ ಬಂದಿರುವ ಯಾವನೇ ಒಬ್ಬ ಮುಸ್ಲಿಮ್ ಗಂಡಸು ಒಬ್ಬ ಸಾಕ್ಷಿದಾರನಾಗಿ ವರ್ತಿಸಬಹುದು. ಒಂದೊಮ್ಮೆ ಇಬ್ಬರು ಗಂಡು ಮುಸಲ್ಮಾನರು ಸಿಗದಿದ್ದರೆ ಒಬ್ಬ ಗಂಡು ಮುಸಲ್ಮಾನ ಮತ್ತು ಇಬ್ಬರು ಚಿತ್ತಸ್ವಾಸ್ಥ್ಯವುಳ್ಳ ಹಾಗೂ ತಾರುಣ್ಯಾವಸ್ಥೆಗೆ ಬಂದಿರುವ ಮುಸ್ಲಿಮ್ ನಾರಿಯರು ಸಾಕ್ಷಿದಾರರಾಗಬಹುದು. ಆದರೆ ಇಬ್ಬರು ಗಂಡು ಮುಸಲ್ಮಾನರ ಬದಲಾಗಿ ನಾಲ್ವರು ಹೆಣ್ಣು ಮುಸಲ್ಮಾನರು ಸಾಕ್ಷಿದಾರರಾಗಿ ಈ ಕಾನೂನೀ ಅವಶ್ಯಕತೆಯನ್ನು ಪೂರ್ತಿಗೊಳಿಸುವಂತಿಲ್ಲ. ಸಾಕ್ಷಿದಾರರಾಗುವ ಇಬ್ಬರು ವ್ಯಕ್ತಿಗಳು ನಿರ್ದಿಷ್ಟವಾಗಿ ಆ ಕೆಲಸಕ್ಕೋಸ್ಕರ ಕರೆಯಲ್ಪಟ್ಟಿರ

ಬೇಕಾಗಿಲ್ಲ, ಬದಲಾಗಿ ಒಂದೊಮ್ಮೆ ಅವರು ವಿವಾಹ ಕಾಲದಲ್ಲಿ ಉಪಸ್ಥಿತರಿದ್ದು ಪ್ರಸ್ತಾವ ಮತ್ತು ಸ್ವೀಕೃತಿ ಮಾಡುವುದನ್ನು ಕೇಳಿರುವರಾದರೆ ಅದು ಪರ್ಯಾಪ್ತ ವಾಗುತ್ತದೆ. ಸಾಕ್ಷಿದಾರರಿಲ್ಲದ ಒಂದು ವಿವಾಹವು ಕ್ರಮಬದ್ಧವಲ್ಲದ ವಿವಾಹ ವೆಂದು ಎಣಿಸಲ್ಪಡುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಸಾಕ್ಷಿದಾರರ ಉಪಸ್ಥಿತಿಯು ಕಾನೂನಿನ ಒಂದು ಆವಶ್ಯಕತೆಯಲ್ಲ. ಶಿಯಾ ಕಾನೂನಿನ ಪ್ರಕಾರ ಸಾಕ್ಷಿದಾರರು ಇಲ್ಲದೆಯೂ ಸಹ ಒಂದು ವಿಧ್ಯುಕ್ತವಾದ ವಿವಾಹವು ನಡೆಯಬಹುದು.

ನಿಷೇಧಗಳ ಅನುಪಸ್ಥಿತಿ (Absence of Prohibitions):

ಈ ನಿಷೇಧಗಳು ವಿವಾಹದ ಕರಾರು ಮಾಡುವ ಒಬ್ಬ ವ್ಯಕ್ತಿಯ ಹಕ್ಕಿನ ಮೇಲೆ ಹಾಕಲ್ಪಟ್ಟ ನಿರ್ಬಂಧನೆಗಳಾಗಿರುತ್ತವೆ. ಇಸ್ಲಾಮಿನ ಪ್ರಕಾರ ವಿವಾಹವು ಒಂದು ಸಾಮಾಜಿಕ ಪದ್ಧತಿಯಾಗಿದೆಯಾದುದರಿಂದ ವಿವಾಹವು ಸಮಾಜದ ಹಿತದ ವಿರುದ್ಧ ಹೋಗಬಾರದೆಂದು ಮುಸ್ಲಿಮ್ ಕಾನೂನು ಕೆಲವು ನಿಯಮಗಳನ್ನು ಹಾಕಿದೆ. ಆದುದರಿಂದ ಕಾನೂನು ಕೆಲವು ವ್ಯಕ್ತಿಗಳೊಳಗೆ ಅಥವಾ ಕೆಲವು ಪರಿಸ್ಥಿತಿಗಳೊಳಗೆ ವಿವಾಹವಾಗದಂತೆ ನಿಷೇಧವನ್ನು ಹಾಕಿದೆ. ಮುಸ್ಲಿಮ್ ವಿವಾಹದ ನಿಷೇಧಗಳು ಎರಡು ರೀತಿಯವುಗಳಾಗಿವೆ : ೧) ಪರಮವಾದ ನಿಷೇಧ ಗಳು ಮತ್ತು ೨) ಸಂಬಂಧಿತ ನಿಷೇಧಗಳು.

ಪರಮ ನಿಷೇಧಗಳು (Absolute Prohibitions)

ವಿವಾಹದಲ್ಲಿ ಹಾಕಲಾಗುವ ಪರಮ ನಿಷೇಧಗಳು ಆಜ್ಞಾತ್ಮಕ ಸ್ವರೂಪದವು ಗಳಾಗಿರುತ್ತವೆ. ಇವು ಒಂದು ಆದೇಶದ ರೀತಿಯಲ್ಲಿದ್ದು ಪ್ರತಿಯೊಂದು ಕಾನೂನು ಬದ್ಧವಾದ ವಿವಾಹದಲ್ಲಿ ಇವನ್ನು ಪೂರ್ತಿಗೊಳಿಸುವ ಅವಶ್ಯಕತೆಯಿರುತ್ತದೆ. ಪರಮ ನಿಷೇಧಗಳಲ್ಲಿ ಯಾವುದಾದರೊಂದನ್ನು ಉಲ್ಲಂಘನೆ ಮಾಡಿ ಮಾಡಲ್ಪಟ್ಟ ಒಂದು ಕರಾರು ಮುಸ್ಲಿಮ್ ಕಾನೂನಿನ ಎಲ್ಲ ಪರಂಪರೆಗಳಲ್ಲೂ ಅಕೃತ ಹಾಗೂ ಶೂನ್ಯವಾಗಿರುತ್ತದೆ. ಆತನ ಅಥವಾ ಆಕೆಯ ನಿಷೇಧಿತ ಸಂಬಂಧದಲ್ಲಿ ವಿವಾಹ ವಾಗುವದರ ಬಗ್ಗೆ ಮುಸ್ಲಿಮ್ ಕಾನೂನಿನಲ್ಲಿ ಒಂದು ಪರಮವಾದ ನಿಷೇಧವು ಹಾಕಲ್ಪಟ್ಟಿದೆ. ಒಂದೊಮ್ಮೆ ಇಬ್ಬರು ವ್ಯಕ್ತಿಗಳು ೧) ರಕ್ತ ಸಂಬಂಧದಿಂದ, ೨) ವಿವಾಹ ಜನ್ಯಸಂಬಂಧದಿಂದ, ಮತ್ತು ೩) ಪಾಲನಜನ್ಯ ಸಂಬಂಧದಿಂದ, ಪರಸ್ಪರರು ಸಂಬಂಧಿಕರಾಗಿದ್ದರೆ ಅವರು ನಿಷೇಧಿತ ಸಂಬಂಧದೊಳಗೆ ಬರುವರೆಂದು ಎಣಿಸಲ್ಪಡುವರು.

1) ರಕ್ತ ಸಂಬಂಧ (Consanguinity)

ಈ ಕೆಳಗಿನವರು ರಕ್ತಸಂಬಂಧಿಕರೆಂದು ಎಣಿಸಲ್ಪಡುವುದರಿಂದ ಇವರೊಳಗೆ ಒಂದು ವಿವಾಹದ ಸಂಬಂಧವು ನಿರ್ಮಿಸಲ್ಪಡುವಂತಿಲ್ಲ.

ಎ) ಒಬ್ಬನ ಪೂರ್ವಜರು ಮತ್ತು ವಂಶಜರು
(One's own Ascendants and descendants)

ಪೂರ್ವಜರು ಎಷ್ಟೇ ಮೇಲ್ಪಟ್ಟದವರಾಗಿರಬಹುದು ಅಥವಾ ವಂಶಜರು ಎಷ್ಟೇ ಕೆಳಪಟ್ಟದವರಾಗಿರಬಹುದು.

೧) ಒಬ್ಬ ವ್ಯಕ್ತಿಯು ತನ್ನ ತಾಯಿಯನ್ನು, ತಾಯಿಯ ತಾಯಿಯನ್ನು ಮತ್ತು ಅದೇ ರೀತಿಯಲ್ಲಿ ನೇರ ಹಂತದವರನ್ನು ಮದುವೆಯಾಗುವಂತಿಲ್ಲ. ಒಬ್ಬ ನಾರಿಯು ತನ್ನ ತಂದೆಯನ್ನು, ತಂದೆಯ ತಂದೆಯನ್ನು ಮತ್ತು ಅದೇ ರೀತಿಯ ಮೇಲಿನ ಹಂತದವರನ್ನು ವಿವಾಹವಾಗುವಂತಿಲ್ಲ.

೨) ಒಬ್ಬ ವ್ಯಕ್ತಿಯು ತನ್ನ ಮಗಳನ್ನು, ಮಗಳ ಮಗಳನ್ನು ಅಥವಾ ಮಗನ ಮಗಳನ್ನು ಮತ್ತು ಇದೇ ರೀತಿಯಲ್ಲಿ ಮುಂದಿನ ಹಂತದಲ್ಲಿ ಯಾರನ್ನೂ ಮದುವೆಯಾಗುವಂತಿಲ್ಲ. ಈ ರೀತಿಯಲ್ಲಿ ಒಬ್ಬ ನಾರಿಯು ತನ್ನ ಮಗನನ್ನು, ಮಗನ ಮಗನನ್ನು ಅಥವಾ ಮಗಳ ಮಗನನ್ನು ಇತ್ಯಾದಿಯಾಗಿ ಆ ಕೆಳಹಂತದಲ್ಲಿ ಯಾರನ್ನೂ ಮದುವೆಯಾಗುವಂತಿಲ್ಲ.

ಬಿ) ತನ್ನ ತಂದೆಯ ಮತ್ತು ತಾಯಿಯ ವಂಶಜರು
(Descendants of One's Father and Mother)

ಒಬ್ಬ ವ್ಯಕ್ತಿಯು ತನ್ನ ತಂದೆ ಮತ್ತು ತಾಯಿಯ ವಂಶಜನಾಗಿರುವನು. ತಂದೆಯ ಮತ್ತು ತಾಯಿಯ ಇತರ ವಂಶಜರು ಒಬ್ಬನ ನಿಜವಾದ ಸಹೋದರ ಮತ್ತು ಸಹೋದರಿಯರಾಗಿರುವರು. ಕೆಳಹಂತದಲ್ಲಿ ಒಬ್ಬನ ವಂಶಜರೆಂದರೆ ಅವನ ಮಗಂದಿರು ಮತ್ತು ಮಗಳಂದಿರು ಮತ್ತು ಮಗನ ಹಾಗೂ ಮಗಳ ಮತ್ತು ನಿಜ ಸಹೋದರನ ಮತ್ತು ಸಹೋದರಿಯ ಮಗಂದಿರು ಮತ್ತು ಮಗಳಂದಿರಾಗಿರುವರು.

I) ಆದುದರಿಂದ ಒಬ್ಬ ವ್ಯಕ್ತಿಯು ತನ್ನ ನಿಜವಾದ ಸಹೋದರಿಯನ್ನು ಹಾಗೂ ಒಬ್ಬ ನಾರಿಯು ತನ್ನ ನಿಜವಾದ ಸಹೋದರನನ್ನು ವಿವಾಹವಾಗುವದು ನಿಷೇಧಿಸಲಾಗಿದೆ.

II) ಒಬ್ಬ ವ್ಯಕ್ತಿಯು ತನ್ನ ಸಹೋದರರ ಮತ್ತು ಸಹೋದರಿಯರ ಮಗಳಂದಿರನ್ನು ಮತ್ತು ಮೊಮ್ಮಗಳಂದಿರನ್ನು ವಿವಾಹವಾಗುವದು ನಿಷೇಧಿಸ ಲಾಗಿದೆ.

III) ಒಬ್ಬ ವ್ಯಕ್ತಿಯು ತನ್ನ ನಿಜ ಸಹೋದರಿಯನ್ನಷ್ಟೇ ಅಲ್ಲ. ತನ್ನ ಏಕೋದರ ಹಾಗೂ ರಕ್ತ ಸಂಬಂಧಿತ ಸಹೋದರಿಯನ್ನೂ ವಿವಾಹವಾಗುವಂತಿಲ್ಲ. ಇದೇ ರೀತಿಯಲ್ಲಿ ಒಬ್ಬ ನಾರಿಯು ತನ್ನ ಏಕೋದರ ಅಥವಾ ರಕ್ತಸಂಬಂಧಿತ ಸಹೋದರನನ್ನು ವಿವಾಹವಾಗುವಂತಿಲ್ಲ.

IV) ಒಬ್ಬನು ತನ್ನ ಏಕೋದರ ಅಥವಾ ರಕ್ತಸಂಬಂಧಿತ ಸಹೋದರನ ಅಥವಾ ಸಹೋದರಿಯ ವಂಶಜರನ್ನೂ ವಿವಾಹವಾಗುವಂತಿಲ್ಲ.

(ಸಿ) ಒಬ್ಬನು ತನ್ನ ಪೂರ್ವಜರ ಸಹೋದರಿಯನ್ನು ಅಥವಾ ಸಹೋದರನನ್ನು ಎಷ್ಟೇ ಮೇಲ್ಮಟ್ಟದವರಾಗಿದ್ದರೂ ಸಹ ವಿವಾಹವಾಗುವಂತಿಲ್ಲ

i) ಒಬ್ಬ ವ್ಯಕ್ತಿಯು ತನ್ನ ತಂದೆಯ ಅಥವಾ ತಾಯಿಯ ಸಹೋದರಿಯರನ್ನು ವಿವಾಹವಾಗುವಂತಿಲ್ಲ. ಒಬ್ಬ ನಾರಿಯು ತನ್ನ ತಂದೆಯ ಅಥವಾ ತಾಯಿಯ ಸಹೋದರರನ್ನು ವಿವಾಹವಾಗುವಂತಿಲ್ಲ.

ii) ಒಬ್ಬ ಗಂಡಸು ತನ್ನ ತಂದೆಯ ಸಹೋದರಿಯನ್ನು ಅಥವಾ ತಾಯಿಯ ಸಹೋದರಿಯನ್ನು ವಿವಾಹವಾಗುವಂತಿಲ್ಲ. ಒಬ್ಬ ನಾರಿಯು ತಂದೆಯ ಸಹೋದರನನ್ನು ಅಥವಾ ತಾಯಿಯ ಸಹೋದರನನ್ನು ವಿವಾಹವಾಗುವಂತಿಲ್ಲ.

ನಿಷೇಧಿತ ರಕ್ತಸಂಬಂಧದೊಳಗೆ ಮಾಡಿರುವ ವಿವಾಹವು ಶೂನ್ಯವಾಗಿರುತ್ತವೆ.

೨) ವಿವಾಹ ಜನ್ಯ ಸಂಬಂಧ (Affinity)

ಒಬ್ಬನು ವಿವಾಹಜನ್ಯ ಸಂಬಂಧದೊಳಗೆ ವಿವಾಹದ ಕರಾರು ಮಾಡಿಕೊಳ್ಳುವಂತಿಲ್ಲ. ವಿವಾಹಜನ್ಯ ಸಂಬಂಧದೊಳಗೆ ಈ ಕೆಳಗಿನವುಗಳು ಬರುತ್ತವೆ.

ಎ) ತನ್ನ ಪತ್ನಿಯ ಅಥವಾ ಪತಿಯ ಪೂರ್ವಜರು ಅಥವಾ ವಂಶಜರು
(The Ascendants or the descendants of one's wife or hasband)

i) ಒಬ್ಬ ಗಂಡಸು ತನ್ನ ಪತ್ನಿಯ ತಾಯಿ ಅಥವಾ ಪತ್ನಿಯ ತಾಯಿಯ ತಾಯಿ ಮತ್ತು ಇದೇ ರೀತಿಯಲ್ಲಿ ಮೇಲಿನ ಹಂತದಲ್ಲಿ ಯಾರನ್ನೂ ವಿವಾಹವಾಗುವಂತಿಲ್ಲ. ಒಬ್ಬ ನಾರಿಯು ತನ್ನ ಪತಿಯ ತಂದೆ ಅಥವಾ ಪತಿಯ ತಂದೆಯ ತಂದೆ ಅಥವಾ ಇದೇ ಹಂತದಲ್ಲಿ ಮೇಲ್ಮಟ್ಟದವರನ್ನು ವಿವಾಹವಾಗುವಂತಿಲ್ಲ.

ii) ಒಬ್ಬ ಗಂಡಸು ತನ್ನ ಪತ್ನಿಯ ಮಗಳನ್ನು ಅಥವಾ ಪತ್ನಿಯ ಮೊಮ್ಮಗಳನ್ನು ಅಥವಾ ಇದೇ ರೀತಿಯಲ್ಲಿ ಕೆಳಗಿನ ಹಂತದವರನ್ನು ವಿವಾಹವಾಗುವಂತಿಲ್ಲ. ಇದೇ ರೀತಿಯಲ್ಲಿ ಒಬ್ಬ ನಾರಿಯು ತನ್ನ ಗಂಡನ ಮಗನನ್ನು ಅಥವಾ ಗಂಡನ ಮೊಮ್ಮಗನನ್ನು ಅಥವಾ ಇದೇ ರೀತಿಯಲ್ಲಿ ಮುಂದಿನ ಹಂತದವರನ್ನು ವಿವಾಹವಾಗುವಂತಿಲ್ಲ.

ಬಿ) ತನ್ನ ಪೂರ್ವಜರ ಅಥವಾ ವಂಶಜರ ಪತಿ ಅಥವಾ ಪತ್ನಿಯನ್ನು ವಿವಾಹವಾಗುವಂತಿಲ್ಲ
(Wife or husband of any of one's Ascendants or descendants)

i) ಒಬ್ಬ ಗಂಡಸು ತನ್ನ ತಂದೆಯ ಅಥವಾ ಅಜ್ಜನ ಅಥವಾ ಅದೇ

ಹಂತದ ಮೇಲ್ಪಟ್ಟದವರ ಪತ್ನಿಯರನ್ನು ವಿವಾಹವಾಗುವಂತಿಲ್ಲ. ಅದೇ ರೀತಿಯಲ್ಲಿ ಒಬ್ಬ ನಾರಿಯು ತನ್ನ ತಾಯಿಯ ಗಂಡನನ್ನು ತನ್ನ ತಾಯಿಯ ತಾಯಿಯ ಗಂಡನನ್ನು ಮತ್ತು ಇದೇ ರೀತಿಯ ಮೇಲ್ಪಟ್ಟದ ಹಂತದವರನ್ನು ವಿವಾಹವಾಗುವಂತಿಲ್ಲ.

ii) ಒಬ್ಬ ಗಂಡಸು ತನ್ನ ಮಗನ ಪತ್ನಿಯನ್ನು ವಿವಾಹವಾಗುವಂತಿಲ್ಲ, ಅಥವಾ ತನ್ನ ಮೊಮ್ಮಗನ ಪತ್ನಿಯನ್ನು ಹಾಗೂ ಇದೇ ರೀತಿಯಲ್ಲಿ ಮುಂದಿನ ಹಂತದವರನ್ನು ವಿವಾಹವಾಗುವಂತಿಲ್ಲ.

ವಿವಾಹಜನ್ಯ ಸಂಬಂಧದಲ್ಲಿ ಉಂಟಾದ ವಿವಾಹವು ಶೂನ್ಯವೆಂದೆಣಿಸಲ್ಪಡುತ್ತದೆ. ಒಂದು ಮಗುವು ಎರಡು ವರ್ಷಗಳ ವಯಸ್ಸಿಗಿಂತ ಕಡಿಮೆಯಾಗಿದ್ದಾಗ ಯಾವುದಾದರೊಂದು ಹೆಂಗಸಿನ ಹಾಲನ್ನು ಕುಡಿದಿದೆಯಾದರೆ ಅಂತಹ ಹೆಂಗಸು ಆ ಮಗುವಿಗೆ ಪಾಲನಜನ್ಯ ತಾಯಿಯೆಂದು ಕರೆಯಲ್ಪಡುವಳು. ಅಂತಹ ಹೆಂಗಸು ಮತ್ತು ಮಗುವಿನೊಂದಿಗೆ ಯಾವುದೇ ರೀತಿಯ ರಕ್ತ ಸಂಬಂಧ ಇಲ್ಲದಿದ್ದರೂ ಸಹ ವಿವಾಹದ ನಿಷೇದದ ಉದ್ದೇಶಕ್ಕಾಗಿ ಅವಳನ್ನು ಆ ಮಗುವಿನ ತಾಯಿಯೆಂದು ಎಣಿಸಲಾಗುತ್ತದೆ. ಈ ನಿಯಮವು ಮಾಡಲ್ಪಡಲು ಕಾರಣವೇನೆಂದರೆ ಒಂದು ಮಗುವಿನ ಜೀವ ಹಾಗೂ ಬೆಳವಣಿಗೆಗಾಗಿ ಹಾಲು ಕುಡಿಸುವುದು ಒಂದು ಮಗುವಿಗೆ ಜನ್ಮ ಕೊಡುವುದಕ್ಕೆ ಸಮಾನವಾದ ಕರ್ತವ್ಯವೆಂದು ಎಣಿಸಲಾಗುತ್ತದೆ.

ಸಂಬಂಧಿತ ನಿಷೇಧಗಳು (Relative Prohibitions)

ಒಂದು ಮುಸ್ಲಿಮ್ ವಿವಾಹದಲ್ಲಿ ಸಂಬಂಧಿಕ ನಿಷೇಧಗಳು ಒಂದು ರೀತಿಯ ನಿರ್ದೇಶಕ ರೂಪದಲ್ಲಿರುತ್ತವೆ. ಈ ನಿಷೇಧಗಳೊಳಗೆ ಬರುವ ಸಂಬಂಧಿಕರೊಳಗೆ ವಿವಾಹಗಳನ್ನು ಆದಷ್ಟು ಮಟ್ಟಿಗೆ ಮಾಡಬಾರದು ಎಂಬ ಒಂದು ಧೋರಣೆಯಿದೆ. ಈ ಕಾರಣದಿಂದಾಗಿ ಈ ನಿಷೇಧದೊಳಗೆ ಒಂದು ವಿವಾಹವು ಮಾಡಲ್ಪಟ್ಟರೆ ಅದು ಶೂನ್ಯವಾಗುವುದಿಲ್ಲ, ಬದಲಾಗಿ ಕೇವಲ ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲ್ಪಡುತ್ತದೆ. ಆದರೆ ಶಿಯಾ ಕಾನೂನು ಯಾವುದೇ ವಿವಾಹವನ್ನು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸುವುದಿಲ್ಲ. ಆ ಕಾನೂನಿನ ಪ್ರಕಾರ ಒಂದು ವಿವಾಹವು ಒಂದೇ ಶೂನ್ಯವಾಗಿರುತ್ತದೆ ಅಥವಾ ವಿಧ್ಯುಕ್ತವಾದುದು. ಸಂಬಂಧಿಕ ನಿಷೇಧಗಳು ಈ ಕೆಳಗಿನವುಗಳಾಗಿವೆ.

೧) ಕಾನೂನು ಬಾಹಿರ ಸಂಯುಕ್ತಿಗಳು (Unlawful Conjuctions)

ಒಂದೊಮ್ಮೆ ಇಬ್ಬರು ನಾರಿಯರು ರಕ್ತ ಸಂಬಂಧದಿಂದ ಅಥವಾ ವಿವಾಹಜನ್ಯ ಸಂಬಂಧದಿಂದ ಅಥವಾ ಪಾಲನಜನ್ಯ ಸಂಬಂಧದಿಂದ ಪರಸ್ಪರ ಸಂಬಂಧಿಕರಾಗಿದ್ದರೆ ಅಂಥವರನ್ನು ಒಬ್ಬ ಮುಸ್ಲಿಮ್ ಗಂಡು ವಿವಾಹವಾಗುವಂತಿಲ್ಲ. ಅವರೊಳಗಿನ ಸಂಬಂಧವು ಯಾವ ರೀತಿಯಲ್ಲಿದ್ದಿರಬೇಕೆಂದರೆ ಆ ನಾರಿಯರು ಒಂದೊಮ್ಮೆ ಅವರೊಳಗೆ ಪರಸ್ಪರರು ವಿರೋಧ ಲಿಂಗಡದವರಾಗಿದ್ದರೆ ಅವರ ವಿವಾಹವು

ನಿಷೇಧಿಸಲ್ಪಡುವಂತಹದ್ದಾಗಿರಬೇಕು. ಇಂತಹ ಇಬ್ಬರು ನಾರಿಯರೊಂದಿಗಿನ ವಿವಾಹವು ಕಾನೂನು ಬಾಹಿರ ಸಂಯುಕ್ತಿಯೆಂದು ಎಣಿಸಲ್ಪಡುತ್ತದೆ. ಉದಾಹರಣೆಗಾಗಿ, ಒಬ್ಬನು ತನ್ನ ಪತ್ನಿಯ ಸಹೋದರಿಯನ್ನು ವಿವಾಹನಾಗುವಂತಿಲ್ಲ, ಇದಕ್ಕೆ ಕಾರಣವೇನೆಂದರೆ ಅವರೊಳಗೆ ಯಾವನಾದರೊಬ್ಬನು ಗಂಡಸಾಗಿದ್ದರೆ ಅವರು ಪತಿ-ಪತ್ನಿಯರಾಗುತ್ತಿದ್ದರು. ಮತ್ತು ತಮ್ಮೊಳಗೆ ವಿವಾಹ ಮಾಡಿಕೊಳ್ಳಲು ಅವರು ನಿಷೇಧಿತ ಹಂತದೊಳಗೆ ಬರುತ್ತಿದ್ದರು. ಇದೇ ರೀತಿಯಲ್ಲಿ ಒಬ್ಬ ಮುಸಲ್ಮಾನನು ತನ್ನ ಪತ್ನಿಯ ಚಿಕ್ಕ ತಾಯಿ ಅಥವಾ ಅವಳ ಸಹೋದರನ ಮಗಳೊಂದಿಗೆ ವಿವಾಹವಾಗುವಂತಿಲ್ಲ. ಆದರೆ ಒಬ್ಬನು ತನ್ನ ಪತ್ನಿಯ ಮರಣದ ಬಳಿಕ ಅಥವಾ ಅವಳ ವಿವಾಹ ವಿಚ್ಛೇದನೆಯಾದ ಬಳಿಕ ಕಾನೂನುಬದ್ಧವಾಗಿ ತನ್ನ ಪತ್ನಿಯ ಸಹೋದರಿಯನ್ನು ವಿವಾಹವಾಗಬಹುದು.

ಕಾನೂನುಬಾಹಿರ ಸಂಯುಕ್ತಿಯ ನಿಯಮದ ವಿರುದ್ಧ ಆಗಿರುವ ಒಂದು ವಿವಾಹವು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲ್ಪಡುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಬ್ಬನು ತನ್ನ ಪತ್ನಿಯ ಚಿಕ್ಕತಾಯಿಯನ್ನು ಕಾನೂನುಬದ್ಧವಾಗಿ ವಿವಾಹವಾಗಬಹುದು.

೨) ಐದನೇ ಪತ್ನಿಯೊಂದಿಗಿನ ವಿವಾಹ (Marriage with the fifth wife)

ಮುಸ್ಲಿಮ್ ಕಾನೂನು ನಾಲ್ಕು ಪತ್ನಿಯರ ಮಿತಿಯೊಂದಿಗೆ ಬಹುಪತ್ನಿತ್ವವನ್ನು ಸಮ್ಮತಿಸುತ್ತದೆ. ಹಾಗೆಂದರೆ ಒಬ್ಬ ಮುಸಲ್ಮಾನನು ಕಾನೂನು ಬದ್ಧವಾಗಿ ಏಕಕಾಲದಲ್ಲಿ ನಾಲ್ವರು ಪತ್ನಿಯರೊಂದಿಗೆ ವಿವಾಹವಾಗಬಹುದು. ಆದರೆ ಅವನು ಐದನೇ ಪತ್ನಿಯೊಂದಿಗೆ ವಿವಾಹವಾಗುವದನ್ನು ನಿಷೇಧಿಸಲಾಗಿದೆ. ಆದರೆ ಐದನೇ ಪತ್ನಿಯೊಂದಿಗೆ ಆಗಿರುವ ವಿವಾಹವು ಒಂದು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ನಾಲ್ವರು ಪತ್ನಿಯರೊಳಗೆ ಯಾವಳಾದರೊಬ್ಬಳು ಮೃತಳಾದರೆ ಅಥವಾ ಯಾವಳಾದರೊಬ್ಬಳಿಗೆ ವಿಚ್ಛೇದನೆ ಕೊಟ್ಟರೆ ಅಲ್ಲಿ ಅವನು ಇನ್ನೊಬ್ಬಳನ್ನು ವಿವಾಹವಾಗಬಹುದು. ಏಕೆಂದರೆ ಅಲ್ಲಿ ಏಕಕಾಲದಲ್ಲಿ ಅವರಿಗೆ ನಾಲ್ವರಷ್ಟೇ ಪತ್ನಿಯರು ಉಳಿಯುವರು.

೩) ಮುಸಲ್ಮಾನೇತರರೊಂದಿಗೆ ವಿವಾಹ (Marriage with non-Muslim)

ಈಗಾಗಲೇ ಹೇಳಲಾದಂತೆ ಒಬ್ಬ ಸುನ್ನಿ'ಗಂಡಸು ಒಬ್ಬ ಕಿತಾಬಿಯಾ ನಾರಿಯೊಂದಿಗೆ ಕಾನೂನುಬದ್ಧವಾಗಿ ಒಂದು ವಿವಾಹದ ಕರಾರು ಮಾಡಬಹುದು. ಆದರೆ ಅವನು ಒಬ್ಬ ಮುಸಲ್ಮಾನಳಲ್ಲದ ಅಥವಾ ಕಿತಾಬಿಯಾಳಲ್ಲದ ನಾರಿಯೊಂದಿಗೆ ವಿವಾಹದ ಕರಾರು ಮಾಡುವಂತಿಲ್ಲ. ಉದಾಹರಣೆಗಾಗಿ, ಅವನೊಬ್ಬ ಹಿಂದೂ

ನಾರಿಯನ್ನು ವಿವಾಹವಾಗುವಂತಿಲ್ಲ. ಇಂತಹ ನಿಷೇಧಿತ ವಿವಾಹವು ಕೇವಲ ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲ್ಪಡುತ್ತದೆ, ಮತ್ತು ಇದು ಆರಂಭದಿಂದಲೇ ಶೂನ್ಯವಾದ ವಿವಾಹವೆಂದು ಎಣಿಸಲಾಗುತ್ತದೆ.

ಶಿಯಾ ಕಾನೂನು (Shia Law)

ಮುಸಲ್ಮಾನೇತರರೊಂದಿಗಿನ ವಿವಾಹವು ಮೂಲದಿಂದಲೇ ಶೂನ್ಯವಾಗಿರುತ್ತದೆ.

೪) ಯಾತ್ರಾ ಕಾಲದಲ್ಲಿ ವಿವಾಹ (Marriage during Pilgrimage)

ಶಿಯಾ ಕಾನೂನಿನ ಮೇರೆಗೆ ಒಬ್ಬನು ಯಾತ್ರಾಕಾಲದಲ್ಲಿ ವಿವಾಹವಾಗುವಂತಿಲ್ಲ.

ಹನಫಿ ಕಾನೂನು (Hanafi Law)

ಹನಫಿ ಕಾನೂನಿನ ಮೇರೆಗೆ ಯಾತ್ರಾ ಕಾಲದಲ್ಲಿ ಮಾಡಲಾದ ವಿವಾಹವು ಶೂನ್ಯವಾಗುವುದಿಲ್ಲ. ಅದೊಂದು ವಿಧ್ಯುಕ್ತವಾದ ವಿವಾಹವೆಂದು ಎಣಿಸಲ್ಪಡುತ್ತದೆ.

೫) ಸಾಕ್ಷಿದಾರರಿಲ್ಲದ ವಿವಾಹ (Marriage without witnesses)

ಸುನ್ನಿ ಕಾನೂನಿನ ಪ್ರಕಾರ ಇಬ್ಬರು ಸಕ್ಷಮ ಸಾಕ್ಷಿದಾರರಿಲ್ಲದೆ ಒಂದು ವಿವಾಹವು ನಡೆಯುವಂತಿಲ್ಲ. ಆದರೆ ಸಕ್ಷಮ ಸಾಕ್ಷಿದಾರರಿಲ್ಲದೆ ಮಾಡಲಾದ ವಿವಾಹವು ಕೇವಲ ಒಂದು ಕ್ರಮಬದ್ಧವಲ್ಲದ ವಿವಾಹವಾಗಿರುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದು ವಿವಾಹವನ್ನು ವಿಧ್ಯುಕ್ತಗೊಳಿಸಲು ಸಾಕ್ಷಿದಾರರ ಅವಶ್ಯಕತೆಯಿಲ್ಲ. ಆದುದರಿಂದ ಸಾಕ್ಷಿದಾರರಿಲ್ಲದೆ ಮಾಡಿರುವ ಒಂದು ವಿವಾಹದ ಕರಾರು ಶಿಯಾ ಕಾನೂನಿನ ಪ್ರಕಾರ ವಿಧ್ಯುಕ್ತವಾಗಿರುತ್ತದೆ.

೬) ಇದ್ದತ್ ಕಾಲದಲ್ಲಿ ವಿವಾಹ (Marriage During Iddat)

ಇದ್ದತ್ ಎಂಬುದು ಒಂದು ಕಾಲಾವಧಿಯಾಗಿದ್ದು ಗಂಡನು ಮೃತಪಟ್ಟ ಬಳಿಕ ಅಥವಾ ವಿವಾಹವು ವಿಚ್ಛೇದಿತವಾದ ಬಳಿಕ ಒಬ್ಬ ನಾರಿಯು ಆಚರಿಸಬೇಕಾದ ಒಂದು ಕಾಲಾವಧಿಯಾಗಿರುತ್ತದೆ. ಇದ್ದತ್ ಪಾಲಿಸುತ್ತಿರುವ ಒಬ್ಬ ನಾರಿಯೊಂದಿಗೆ ಮದುವೆಯಾಗುವುದು ಮುಸ್ಲಿಮ್ ಕಾನೂನಿನಲ್ಲಿ ನಿಷೇಧಿಸಲಾಗಿದೆ. ಸುನ್ನೀ ಕಾನೂನಿನ ಪ್ರಕಾರ ಇದ್ದತ್ ಪಾಲಿಸುತ್ತಿರುವ ಒಬ್ಬ ನಾರಿಯೊಂದಿಗಿನ ವಿವಾಹವು ಕೇವಲ ಕ್ರಮಬಾಹಿರವಾಗಿರುತ್ತದೆ; ಆದರೆ ಶಿಯಾ ಕಾನೂನಿನ ಪ್ರಕಾರ ಅದು ಶೂನ್ಯವಾಗಿರುತ್ತದೆ. ಆದರೆ ಇದ್ದತ್ ಪಾಲಿಸುತ್ತಿರುವ ನಾರಿಯೊಂದಿಗೆ ವಿವಾಹ

ವಾಗಬಾರದೆಂಬ ನಿಷೇಧವು ಒಂದು ತಾತ್ಕಾಲಿಕ ನಿಷೇಧವಾಗಿರುತ್ತದೆ. ಆಕೆಯು ಇದ್ದತ್ ಅವಧಿಯು ಪೂರ್ಣಗೊಂಡಾಗ ಈ ನಿಷೇಧವು ಮುಕ್ತಾಯಗೊಳ್ಳುತ್ತದೆ.

ಇದ್ದತ್ (Iddat)

ಇದ್ದತ್ ಎಂದರೆ ಒಬ್ಬ ನಾರಿಯು ತನ್ನ ಮೊದಲನೇ ವಿವಾಹವು ವಿಘಟಿತವಾಗಿ ಇನ್ನೊಂದು ವಿವಾಹದ ಕರಾರು ಮಾಡಬಾರದಾದ ಒಂದು ಅವಧಿಯೆಂದು ಎಣಿಸಲಾಗಿದೆ. ಈ ನಿರ್ದಿಷ್ಟ ಕಾಲಾವಧಿಯಲ್ಲಿ ಒಬ್ಬ ವಿಧವೆಯು ಅಥವಾ ವಿಚ್ಛೇದಿತಳು ಒಂದು ಶುದ್ಧ ಹಾಗೂ ಸರಳ ಜೀವನದಲ್ಲಿ ಬಾಳಬೇಕು ಮತ್ತು ಅವಳು ಇನ್ನೊಂದು ವಿವಾಹವಾಗಬಾರದು ಎಂಬ ನಿಯಮವಿದೆ. ಇದ್ದತ್ ಇದರ ಉದ್ದೇಶವೇನೆಂದರೆ ಒಬ್ಬ ನಾರಿಯು ಮೊದಲನೇ ಗಂಡನಿಂದ ಗರ್ಭಿಣಿಯಾಗಿರುವ ಸಂಭವವಿದ್ದು ಮಕ್ಕಳ ಪಿತೃತ್ವವನ್ನು ಖಾತರಿಪಡಿಸುವದಾಗಿರುತ್ತದೆ. ಒಂದು ವಿವಾಹ ವಿಚ್ಛೇದನೆ ಅಥವಾ ಗಂಡನ ಮರಣದ ಬಳಿಕ ತತ್ಕ್ಷಣದಲ್ಲಿ ಒಬ್ಬ ನಾರಿಯು ಪುನರ್ವಿವಾಹಿತಳಾದರೆ ಮತ್ತು ಒಂದು ಸಾಮಾನ್ಯ ಕಾಲಾವಧಿಯೊಳಗೆ ಅವಳು ಒಂದು ಮಗುವಿಗೆ ಜನ್ಮಕೊಟ್ಟರೆ ಅಲ್ಲಿ ಆ ಮಗುವು ಆಕೆಯು ಮೊದಲನೇ ಗಂಡನಿಗೆ ಹುಟ್ಟಿದ್ದು ಎಂಬ ಒಂದು ಸಂಶಯಕ್ಕೆ ಕಾರಣವಾಗುತ್ತದೆ. ಇಲ್ಲಿ ಆ ಮಗುವಿನ ನಿಜವಾದ ತಂದೆ ಯಾರೆಂದು ನಿರ್ಣಯಿಸುವುದು ಕಷ್ಟವಾಗುತ್ತದೆ. ಈ ಒಂದು ತೊಂದರೆಯನ್ನು ದೂರಮಾಡುವ ಉದ್ದೇಶದಿಂದಾಗಿ ಮುಸ್ಲಿಮ್ ಕಾನೂನು ಇಂತಹ ಒಂದು ಉಪಬಂಧವನ್ನು ಮಾಡಿದೆ. ಈ ಉಪಬಂಧದ ಪ್ರಕಾರ ಒಂದು ವಿವಾಹವು ವಿಘಟಿತವಾದ ಬಳಿಕ ಒಂದು ನಿರ್ದಿಷ್ಟ ಕಾಲಾವಧಿಯು ಮುಗಿಯುವುದಕ್ಕಿಂತ ಮೊದಲು ಅಂತಹ ನಾರಿಯು ಪುನರ್ವಿವಾಹಿತಳಾಗುವಂತಿಲ್ಲ. ಇಂತಹ ಒಂದು ಕಾಲಾವಧಿಯನ್ನು ಅವಳು ಪಾಲಿಸಿದರೆ ಒಂದೊಮ್ಮೆ ಅವಳು ಮೊದಲನೇ ಗಂಡನಿಂದ ಗರ್ಭಿಣಿಯಾಗಿದ್ದರೆ ಅದು ಸ್ಪಷ್ಟವಾಗುತ್ತದೆ. ಒಬ್ಬ ನಾರಿಯು ಪಾಲಿಸಬೇಕಾಗಿರುವ ಬೇರೆ ಬೇರೆ ಇದ್ದತ್ ಕಾಲಾವಧಿಗಳನ್ನು ಈ ಕೆಳಗೆ ಕೊಡಲಾಗಿದೆ.

೧) ಒಂದು ವಿಧ್ಯುಕ್ತವಾದ ವಿವಾಹವು ವಿಚ್ಛೇದನೆಯಿಂದ ವಿಘಟಿತವಾಗಿದ್ದರೆ ಇದ್ದತ್ತಿನ ಕಾಲಾವಧಿಯು ಮೂರು ರಜಸ್ಸುಗಳಾಗಿರುತ್ತವೆ. ಒಂದೊಮ್ಮೆ ಆ ನಾರಿಯು ರಜಸ್ಸುಗಳಿಗೆ ಬಾಧ್ಯಳಾಗಿಲ್ಲವೆಂದಾದರೆ ಇದು ಮೂರು ಚಂದ್ರಮಾನ ಮಾಸಗಳಾಗಿರುತ್ತದೆ. ಒಂದೊಮ್ಮೆ ವಿಚ್ಛೇದನೆಯು ಕಾಲದಲ್ಲಿ ಆ ನಾರಿಯು ಗರ್ಭಿಣಿಯಾಗಿದ್ದರೆ ಅವಳ ಇದ್ದತ್ತಿನ ಕಾಲಾವಧಿಯು ಆಕೆಯು ಹೆರಿಗೆಯು ತನಕ ಮುಂದುವರಿಯುತ್ತದೆ. ಒಂದೊಮ್ಮೆ ಆ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಆ ನಾರಿಯು ಇದ್ದತ್ ಪಾಲಿಸಬೇಕಾಗಿಲ್ಲ.

೨) ಒಂದೊಮ್ಮೆ ಒಂದು ವಿಧ್ಯುಕ್ತವಾದ ವಿವಾಹವು ಗಂಡನ ಮರಣದಿಂದಾಗಿ ವಿಘಟಿತವಾದರೆ ಅಲ್ಲಿ ಇದ್ದತ್ ಇದರ ಕಾಲಾವಧಿಯು ನಾಲ್ಕು ತಿಂಗಳು

ಗಳು ಮತ್ತು ೧೦ ದಿನಗಳು. ಒಂದೊಮ್ಮೆ ಗಂಡನ ಮರಣಕಾಲದಲ್ಲಿ ಅವಳು ಗರ್ಭಿಣಿಯಾಗಿದ್ದರೆ ಆ ಕಾಲಾವಧಿಯು ಆಕೆಯ ಹೆರಿಗೆಯ ತನಕ ಮುಂದುವರಿಯುತ್ತದೆ. ಒಂದೊಮ್ಮೆ ಅವಳ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೂ ಸಹ ಗಂಡನ ಮರಣದಿಂದಾಗಿ ಅವಳ ವಿವಾಹವು ವಿಘಟಿತಗೊಂಡಾಗ ಅವಳ ಇದ್ದತ್‌ನ ಕಾಲಾವಧಿಯು ೪ ತಿಂಗಳುಗಳು ಮತ್ತು ೧೦ ದಿನಗಳು ಆಗಿರುತ್ತದೆ.

೩) ಒಂದೊಮ್ಮೆ ಪತಿಯು ಪತ್ನಿಯನ್ನು ವಿಚ್ಛೇದಿಸಿರುವನಾದರೆ ಮತ್ತು ಅವಳ ಇದ್ದತ್ ಕಾಲಾವಧಿಯು ಮುಗಿಯುವುದಕ್ಕಿಂತ ಮೊದಲೇ ಅವನು ಮೃತನಾಗಿರುವುದಾದರೆ ಅವಳು ಹೊಸದಾದ ನಾಲ್ಕು ತಿಂಗಳು ೧೦ ದಿನಗಳ ಇದ್ದತ್ ಕಾಲಾವಧಿಯನ್ನು ಆಚರಿಸಬೇಕಾಗುತ್ತದೆ, ಮತ್ತು ಇದು ಅವಳ ಗಂಡನ ಮರಣದ ದಿನಾಂಕದಿಂದ ಆರಂಭವಾಗುತ್ತದೆ.

೪) ಗಂಡನ ಮರಣದಿಂದ ಅಥವಾ ವಿವಾಹ ವಿಚ್ಛೇದನೆಯಿಂದ ಆಗುವ ಇದ್ದತ್ ಇದು ಅವಿವಾಹ ವಿಚ್ಛೇದನೆ ಅಥವಾ ಗಂಡನ ಮರಣದ ದಿನಾಂಕದಿಂದ ಆರಂಭವಾಗುವುದಲ್ಲದೆ ಆಕೆಗೆ ಆ ಸಂಗತಿಯು ತಿಳಿದ ದಿನಾಂಕದಿಂದಲ್ಲ. ಒಂದೊಮ್ಮೆ ಆ ನಿರ್ದಿಷ್ಟವಾದ ಕಾಲಾವಧಿಯು ಮುಗಿದ ಬಳಿಕ ಅವಳಿಗೆ ಇಂತಹ ಸಂಗತಿಯು ತಿಳಿದರೆ ಅವಳು ಅವಶ್ಯಕವಾದ ಇದ್ದತ್ ಪಾಲಿಸಬೇಕಾಗಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಸಂಪ್ರದಾಯದೊಳಗೆ ಇದರ ಬಗ್ಗೆ ವಾಡಿಕೆಯು ಹೇಗಿದೆಯೆಂದರೆ ಒಂದೊಮ್ಮೆ ಒಬ್ಬ ನಾರಿಯು ಗರ್ಭಧರಿಸುವ ವಯಸ್ಸನ್ನು ದಾಟಿರುವಳಾದರೆ ಅಥವಾ ತಾರುಣ್ಯಕ್ಕೆ ಬಂದಿಲ್ಲವೆಂದಾದರೆ ಅಥವಾ ಅವಳ ರಜಸ್ಸು ಕ್ರಮಬದ್ಧವಾಗಿಲ್ಲವೆಂದಾದರೆ ಅವಳು ಇದ್ದತ್ ಪಾಲಿಸುವ ಆವಶ್ಯಕತೆಯಿಲ್ಲ.

ವಿಧ್ಯುಕ್ತವಾದ ನಿವೃತ್ತಿ (Valid Retirement)

ಸುನ್ನಿ ಕಾನೂನಿನ ಮೇರೆಗೆ ಒಂದೊಮ್ಮೆ ಪತಿ ಮತ್ತು ಪತ್ನಿ ಇವರು ಕೆಲವು ಕಾಲದ ತನಕ ಸಂಗಡ ಇದ್ದು ಮತ್ತು ಈ ಬಗ್ಗೆ ಸಾಮಾಜಿಕ ನೈತಿಕ ಅಥವಾ ಕಾನೂನಿನ ನಿರ್ಬಂಧವಿಲ್ಲವೆಂದಾದರೆ ಮತ್ತು ಅವರೊಳಗೆ ಲೈಂಗಿಕ ಸಂಪರ್ಕವು ಇದ್ದಿತೆಂದಾದರೆ ಅದೊಂದು ವಿಧ್ಯುಕ್ತವಾದ ನಿವೃತ್ತಿಯೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ವಿಧ್ಯುಕ್ತ ನಿವೃತ್ತಿಯು ಇದ್ದಲ್ಲಿ ಅವರೊಳಗಿನ ವಿವಾಹವು ಪೂರ್ಣಗೊಂಡಿದೆಯೆಂಬ ಪೂರ್ವ ಭಾವನೆಯುಂಟಾಗುತ್ತದೆ. ಮೆಹರ್, ಮಕ್ಕಳ ಪಿತೃತ್ವ ಮತ್ತು ಕೆಲವು ವೈವಾಹಿಕ ನಿಷೇಧಗಳ ಸಂಬಂಧದಲ್ಲಿ ವಿಧ್ಯುಕ್ತವಾದ ನಿವೃತ್ತಿಯು ಒಂದು ನಿಜವಾದ ವಿವಾಹದ ಪೂರ್ತಿಗೊಳ್ಳುವಿಕೆಗೆ ಸಮಾನವೆಂದು ಎಣಿಸಲ್ಪಡುತ್ತದೆ. ಇದ್ದತ್ತಿನ ಸಂಬಂಧದಲ್ಲೂ ಸಹ ವಿಧ್ಯುಕ್ತವಾದ ನಿವೃತ್ತಿಯನ್ನು ಒಂದು ವಿವಾಹಕ್ಕೆ ಸಮಾನವೆಂದು ಎಣಿಸಲಾಗುತ್ತದೆ.

ಶಿಯಾ ಕಾನೂನು (Shia Law)

ಒಂದು ವಿಧ್ಯುಕ್ತವಾದ ನಿವೃತ್ತಿಯನ್ನು ಶಿಯಾ ಕಾನೂನು ನಿರ್ಬಂಧಿಸುವುದಿಲ್ಲ; ಶಿಯಾ ಕಾನೂನಿನ ಮೇರೆಗೆ ಅದು ನಿಜವಾದ ವಿವಾಹದ ಪೂರ್ಣಗೊಳ್ಳುವಿಕೆಗೆ ಸಮಾನವಲ್ಲ.

ಇದ್ದತ್ ಕಾಲಾವಧಿಯಲ್ಲಿ ಗಂಡನು ಪುನರ್ವಿವಾಹವಾಗುವುದಕ್ಕೆ ನಿಷೇಧ (Husband prohibited from Remarrying during Iddat)

ಇದ್ದತ್ ಇದರ ಉದ್ದೇಶವು ಮಗುವಿನ ಪಿತೃತ್ವವನ್ನು ಖಾತರಿಪಡಿಸಿಕೊಳ್ಳುವದೆಂಬುದಾಗಿ ನಾವು ಹಿಂದಿನ ಪರಿಚ್ಛೇದದಲ್ಲಿ ನೋಡಿರುವೆವು. ಆದುದರಿಂದ ವಿಚ್ಛೇದಿತಳಾದ ಪತ್ನಿಯು ತಕ್ಷಣದಲ್ಲಿ ಪುನರ್ವಿವಾಹಿತಳಾಗುವಂತಿಲ್ಲ. ಆದರೆ ಪತಿಯು ಯಾವುದೇ ಅವಧಿಯ ತನಕ ಕಾಯಬೇಕಾಗಿಲ್ಲ ಮತ್ತು ಒಂದು ವಿವಾಹ ವಿಚ್ಛೇದನದ ಬಳಿಕ ಅವನು ತಕ್ಷಣದಲ್ಲಿ ಇನ್ನೊಂದು ವಿವಾಹವಾಗಬಹುದು. ಆದರೆ ಕೆಲವು ಅಪವಾದಿಕ ಪ್ರಕರಣಗಳಲ್ಲಿ ಗಂಡನೂ ಸಹ ಪತ್ನಿಯ ಇದ್ದತ್ ಕಾಲಾವಧಿಯಲ್ಲಿ ಪುನರ್ವಿವಾಹಿತನಾಗುವುದು ನಿಷೇಧಿಸಲಾಗಿದೆ. ಒಂದೊಮ್ಮೆ ಒಬ್ಬ ಗಂಡನಿಗೆ ನಾಲ್ವರು ಪತ್ನಿಯರಿದ್ದು ಅವರೊಳಗೆ ಆವನು ಯಾವಳಾದರೊಬ್ಬಳನ್ನು ವಿಚ್ಛೇದಿತಗೊಳಿಸಿರುವನಾದರೆ ಮತ್ತು ಆ ವಿಚ್ಛೇದಿತ ಪತ್ನಿಯು ಇದ್ದತ್ ಪಾಲಿಸುತ್ತಿದ್ದಳಾದರೆ ಆ ಕಾಲದಲ್ಲಿ ಅವನು ವಿವಾಹಿತನಾಗುವಂತಿಲ್ಲ. ಒಂದೊಮ್ಮೆ ಅವನು ಈ ನಿಯಮವನ್ನು ಉಲ್ಲಂಘಿಸಿ ಪುನರ್ವಿವಾಹಿತನಾದರೆ ಆ ವಿವಾಹವು ಶೂನ್ಯವಾಗುವುದಿಲ್ಲ. ಬದಲಾಗಿ ಕೇವಲ ಕ್ರಮಬದ್ಧವಾದ ವಿವಾಹವೆಂದು ಎಣಿಸಲ್ಪಡುತ್ತದೆ.

೭) ಸಮಾನತೆಯ ನಿಯಮ (Rule of equality)

ಮೇಲೆ ಹೇಳಲಾದ ನಿಷೇಧಗಳ ಹೊರತಾಗಿ ಇನ್ನೂ ಒಂದು ನಿಷೇಧವಿದೆ. ಆ ನಿಷೇಧವು ಕಾನೂನಿನಿಂದ ಹೇರಲ್ಪಟ್ಟುದಾಗಿಲ್ಲ, ಬದಲಾಗಿ ಸಮಾಜದಿಂದ ಹೇರಲ್ಪಟ್ಟುದಾಗಿರುತ್ತದೆ. ಒಂದು ವಿವಾಹದಲ್ಲಿ ಪತಿ ಮತ್ತು ಪತ್ನಿಯರಿಬ್ಬರೂ ಸಮಾಜದಲ್ಲಿ ಒಂದೇ ಹಂತದವರಾಗಿರಬೇಕೆಂದು ಮುಸ್ಲಿಮ್ ಸಮಾಜವು ಬಯಸುತ್ತದೆ. ಇದನ್ನು ಸಮಾನತೆಯ ನಿಯಮವೆಂದು ಕರೆಯಲಾಗುತ್ತದೆ. ಒಂದೊಮ್ಮೆ ಈ ನಿಯಮವನ್ನು ಉಲ್ಲಂಘನೆ ಮಾಡಿ ಒಂದು ವಿವಾಹದ ಕರಾರು ಮಾಡಲ್ಪಟ್ಟರೆ, ಆ ವಿವಾಹವು ವಿಧ್ಯುಕ್ತವಾಗಿದ್ದರೂ ಸಹ ಕಾಜಿ ಅಥವಾ ನ್ಯಾಯಾಲಯವು ಆ ವಿವಾಹವನ್ನು ಅಸಿಂಧುಗೊಳಿಸಬಹುದು.

ಶಿಯಾ ಕಾನೂನು (Shia Law)

ಶಿಯಾ ಕಾನೂನು ಈ ನಿಷೇಧವನ್ನು ಮನ್ನಿಸುವುದಿಲ್ಲ.

ಒಂದು ವಿಧ್ಯುಕ್ತವಾದ ವಿವಾಹದ ಕಾನೂನೀ ಪರಿಣಾಮಗಳು
(Legal effect of a valid Marriage)

ಪ್ರಸ್ತಾವ ಮತ್ತು ಸ್ವೀಕೃತಿಯು ಮೇರೆಗೆ ಒಂದು ವಿವಾಹದ ಕರಾರು ಪೂರ್ಣಗೊಂಡ ತಕ್ಷಣದಲ್ಲಿ ವಿವಾಹದ ಕಾನೂನೀ ಪರಿಣಾಮಗಳು ಕಾರ್ಯಾಚರಣೆಗೆ ಬರುತ್ತವೆ. ಒಂದು ವಿಧ್ಯುಕ್ತವಾದ ವಿವಾಹದ ಕಾನೂನೀ ಪರಿಣಾಮಗಳು ಈ ಕೆಳಗಿನವುಗಳಾಗಿರುತ್ತವೆ.

೧) ಪತಿ-ಪತ್ನಿಯರೊಳಗಿನ ವಿವಾಹದ ಪೂರ್ಣಗೊಳ್ಳುವಿಕೆಯು ಕಾನೂನುಬದ್ಧವಾಗುತ್ತದೆ.

೨) ಒಂದು ಕಾನೂನುಬದ್ಧವಾದ ವಿವಾಹದಿಂದ ಹುಟ್ಟಿರುವ ಮಕ್ಕಳು ಧರ್ಮಜರಾಗುವರು ಮತ್ತು ಅವರಿಗೆ ತಮ್ಮ ಹೆತ್ತವರ ಸ್ವತ್ತುಗಳನ್ನು ವಾರಸು ಪಡೆಯಲು ಹಕ್ಕು ಬರುತ್ತದೆ.

೩) ವಾರಸು ಪಡೆಯುವ ಪತಿಯ ಮತ್ತು ಪತ್ನಿಯ ಪಾರಸ್ಪರಿಕ ಹಕ್ಕುಗಳು ಅಸ್ತಿತ್ವಕ್ಕೆ ಬರುತ್ತವೆ. ಪತಿಯ ಮರಣದಿಂದ ಪತ್ನಿಯು ಪತಿಯ ಸ್ವತ್ತನ್ನು ಪಡೆಯಲು ಹಕ್ಕುದಾರನಾಗಿರುವನು.

೪) ಪತಿ ಪತ್ನಿಯರೊಳಗೆ ವಿವಾಹದ ಉದ್ದೇಶಕ್ಕಾಗಿ ನಿಷೇಧಿತ ಸಂಬಂಧಗಳು ನಿರ್ಮಿಸಲ್ಪಡುತ್ತವೆ.

೫) ವಿವಾಹವು ಪೂರ್ಣಗೊಂಡ ತಕ್ಷಣದಲ್ಲಿ ಪತ್ನಿಯ ಮೆಹರಿನ ಹಕ್ಕು ಅಸ್ತಿತ್ವಕ್ಕೆ ಬರುತ್ತದೆ.

೬) ಪತ್ನಿಗೆ ಪತಿಯಿಂದ ಜೀವನಾಂಶ ಪಡೆಯುವ ಹಕ್ಕು ಬರುತ್ತದೆ.

೭) ಒಂದು ವಿವಾಹವು ವಿಘಟಿತವಾದ ಬಳಿಕ ವಿಧವೆ ಅಥವಾ ವಿಚ್ಛೇದಿತ ಪತ್ನಿಯು ಇದ್ದತ್ ಫಾಲನೆ ಮಾಡಲು ಬಾಧ್ಯಳಾಗುವಳು ಮತ್ತು ಈ ಕಾಲಾವಧಿಯಲ್ಲಿ ಆವಳು ಪುನರ್‌ವಿವಾಹಿತೆಯಾಗುವಂತಿಲ್ಲ.

೮) ಮುಸ್ಲಿಂ ಕಾನೂನಿನಲ್ಲಿ ಒಂದು ವಿವಾಹವು ಒಬ್ಬ ನಾರಿಯ ಕಾನೂನೀ ಪ್ರಾಸ್ಥಿತಿಯನ್ನು ಬದಲಾಯಿಸುವುದಿಲ್ಲ. ಅವಳ ವ್ಯಕ್ತಿತ್ವವು ಪತಿಯ ವ್ಯಕ್ತಿತ್ವದೊಂದಿಗೆ ಒಂದುಗೂಡುವುದಿಲ್ಲ. ವಿವಾಹದ ಬಳಿಕವೂ ಸಹ ಒಬ್ಬ ಪತ್ನಿಯು ಮೊದಲು ಯಾವ ಪರಂಪರೆಯವಳಾಗಿದ್ದಳೊ ಅದೇ ಪರಂಪರೆಯವಳಾಗಿ ಮುಂದುವರಿಯುವಳು. ಉದಾಹರಣೆಗಾಗಿ, ಒಬ್ಬ ಶಿಯಾ ನಾರಿಯು ಒಬ್ಬ ಸುನ್ನೀ ಪುರುಷನನ್ನು ವಿವಾಹಿತಳಾದರೆ ವಿವಾಹದ ಬಳಿಕವೂ ಸಹ ಅವಳು ಶಿಯಾ ನಾರಿಯಾಗಿ ಮುಂದುವರಿಯುವಳು. ಒಬ್ಬ ಮುಸ್ಲಿಮ್ ಪತ್ನಿಯು ತನ್ನ ಪತಿಯ ಸಮ್ಮತಿಯಿಲ್ಲದೆ ತನ್ನ ಸ್ವತ್ತನ್ನು ಹಸ್ತಾಂತರಿಸಲು ಹಕ್ಕುಳ್ಳವಳಾಗುವಳು. ಆದರೆ

ಆದರೆ ಅವಳು ತನ್ನ ಪತಿಯ ಸಮ್ಮತಿಯಿಲ್ಲದೆ ಪತಿಯ ಸ್ವತ್ತಿನೊಂದಿಗೆ ವ್ಯವಹರಿಸುವಂತಿಲ್ಲ.

೯) ಪತ್ನಿಯ ನಡತೆಯನ್ನು ಒಂದು ಯುಕ್ತವಾದ ರೀತಿಯಲ್ಲಿ ನಿಯಂತ್ರಿಸಲು ಗಂಡನಿಗೆ ವೈವಾಹಿಕ ಹಕ್ಕು ಬರುತ್ತದೆ. ಆದರೆ ಅವಳು ತನ್ನ ಹೆತ್ತವರ ಮನೆಗೆ ಹೋಗುವುದನ್ನು ಅಥವಾ ಸಂಬಂಧದವರ ಮನೆಗೆ ಹೋಗುವದನ್ನು ಅವನು ನಿಯಂತ್ರಿಸುವಂತಿಲ್ಲ, ಯುಕ್ತ ಕಾರಣವಿಲ್ಲದೆ ಪತಿಯು ತನ್ನೊಂದಿಗೆ ಸಹವಾಸ ಮಾಡುತ್ತಿರುವುದನ್ನು ಪತ್ನಿಯು ವಿರೋಧಿಸುವಂತಿಲ್ಲ.

೧೦) ವಿವಾಹ ಕಾಲದಲ್ಲಿ ಇಬ್ಬರು ಪಕ್ಷಗಾರರೊಳಗೆ ಯಾವುದಾದರೊಂದು ವೈವಾಹಿಕ ಒಪ್ಪಂದವು ಆಗಿದ್ದರೆ ಮತ್ತು ಅದು ಕಾನೂನು ಬಾಹಿರವಲ್ಲವೆಂಬುದಾಗಿದ್ದರೆ ವಿವಾಹವಾದ ತಕ್ಷಣದಲ್ಲಿ ಅದು ಅಸ್ತಿತ್ವಕ್ಕೆ ಬರುತ್ತದೆ. ವಿವಾಹ ಕಾಲದಲ್ಲಿ ಅಥವಾ ಮುಂದಿನ ಒಂದು ದಿನಾಂಕದಂದು ಪತಿ ಮತ್ತು ಪತ್ನಿ ತಮ್ಮ ವೈವಾಹಿಕ ಜೀವನವನ್ನು ಪರಿನಿಯಮಿತಗೊಳಿಸುವ ದೃಷ್ಟಿಯಿಂದ ಒಂದು ಒಪ್ಪಂದವನ್ನು ಮಾಡಿಕೊಳ್ಳಬಹುದು. ಒಂದೊಮ್ಮೆ ಆ ಪಕ್ಷಗಾರರು ಈ ಒಪ್ಪಂದ ಮಾಡಿಕೊಳ್ಳಲು ಸಕ್ಷಮರಲ್ಲವೆಂದಾದರೆ ಅವರ ಸಂರಕ್ಷಕರು ಇದನ್ನು ಮಾಡಬಹುದು. ಅಂತಹ ಒಂದು ಒಪ್ಪಂದಕ್ಕೆ ಪತಿ ಪತ್ನಿಯರು ಬಾಧ್ಯರಲ್ಲವಾದರೂ ಸಹ ಆ ಒಪ್ಪಂದವು ಅಸ್ತಿತ್ವಕ್ಕೆ ಬರುತ್ತದೆ. ಒಂದೊಮ್ಮೆ ಆ ಒಪ್ಪಂದದಲ್ಲಿ ಹಾಕಲ್ಪಟ್ಟ ಷರತ್ತುಗಳು ಇಸ್ಲಾಮಿನ ಸಿದ್ಧಾಂತಕ್ಕೆ ವಿರೋಧವಾಗಿದ್ದರೆ ಅಥವಾ ಯುಕ್ತವಾಗಿರದಿದ್ದರೆ ಅಂತಹ ಒಪ್ಪಂದವು ಕಾನೂನು ಬಾಹಿರವಾಗಿರುತ್ತದೆ. ಒಂದೊಮ್ಮೆ ಒಂದು ಕಾನೂನುಬಾಹಿರ ಒಪ್ಪಂದವು ಒಂದು ವಿವಾಹಕ್ಕೆ ಲಗ್ತೀಕರಿಸಲ್ಪಟ್ಟಿದೆಯಾದರೂ ಸಹ ಮತ್ತು ಆ ಒಪ್ಪಂದವು ವಿವಾಹದ ವಿಧ್ಯುಕ್ತತೆಯ ಮೇಲೆ ಪರಿಣಾಮಿತವಾಗುವದಿಲ್ಲವೆಂದಾದರೆ ಆ ಒಪ್ಪಂದ ಮಾತ್ರ ಶೂನ್ಯವಾಗುತ್ತದೆ, ಮತ್ತು ವಿವಾಹವು ವಿಧ್ಯುಕ್ತವಾಗಿಯೇ ಉಳಿಯುತ್ತದೆ.

ವಿವಾಹದ ಪ್ರಕಾರಗಳು (Kinds of Marriage)

ಸುನ್ನೀ ಕಾನೂನು ವಿವಾಹಗಳನ್ನು ಮೂರು ಪಂಗಡಗಳಲ್ಲಿ ವರ್ಗೀಕರಿಸಿದೆ. ಆ ಮೂರು ಪಂಗಡಗಳು ೧) ವಿಧ್ಯುಕ್ತವಾದ (Valid), ೨) ಶೂನ್ಯವಾದ (Void) ಮತ್ತು ೩) ಕ್ರಮಬದ್ಧವಾಗಿರದ (Irregular) ವಿವಾಹಗಳಾಗಿವೆ. ಶಿಯಾ ಕಾನೂನಿನಲ್ಲಿ ಕ್ರಮಬದ್ಧವಲ್ಲದ ವಿವಾಹಗಳನ್ನು ಮನ್ನಿಸಲಾಗುವುದಿಲ್ಲ: ಶಿಯಾ ಕಾನೂನಿನ ಪ್ರಕಾರ ಒಂದು ವಿವಾಹವು ೧) ವಿಧ್ಯುಕ್ತವಾಗಿರಬಹುದು ಅಥವಾ ೨) ಶೂನ್ಯವಾಗಿರಬಹುದು. ಆದರೆ ಶಿಯಾ ಕಾನೂನು ನಿಕಾ ಇದರ ಹೊರತಾಗಿ ತಾತ್ಕಾಲಿಕ ವಿವಾಹವಾದ ಮುತಾ ಇದನ್ನು ಮನ್ನಿಸಿದೆ. ಇದನ್ನು ಶಿಯಾ ಪರಂಪರೆಯ ಪ್ರಕಾರ ಮೂರನೇ ರೀತಿಯ ವಿವಾಹವೆಂದು ಹೇಳಬಹುದು. ಸುನ್ನಿ ಕಾನೂನಿನ ಪ್ರಕಾರ ವಿಧ್ಯುಕ್ತ, ಶೂನ್ಯ ಮತ್ತು ಕ್ರಮಬದ್ಧವಲ್ಲದ ವಿವಾಹವೆಂದು

ಮೂರು ರೀತಿಯಿಂದ ವರ್ಗೀಕರಿಸಲಾಗಿದೆಯಾದರೂ ಸಹ ಅದನ್ನು ಮುಸ್ಲಿಮ್ ವಿವಾಹದ ವಿವಿಧ ಪ್ರಕಾರಗಳೆಂದು ಕರೆಯುವಂತಿಲ್ಲ. ಮುಸ್ಲಿಮ್ ವಿವಾಹವು ಒಂದೇ ರೀತಿಯದ್ದಾಗಿರುತ್ತದೆ. ಅದು ವಿಧ್ಯುಕ್ತವಾದ ವಿವಾಹ. ಏಕೆಂದರೆ ಒಂದು ವಿವಾಹಕ್ಕೆ ಅವಶ್ಯಕವಾದ ಷರತ್ತುಗಳಲ್ಲಿ ಯಾವುದಾದರೊಂದನ್ನು ಉಲ್ಲಂಘನೆ ಮಾಡಿ ಮಾಡಲ್ಪಟ್ಟ ಒಂದು ವಿವಾಹದ ಕರಾರು ಒಂದು ವಿವಾಹವನ್ನು ನಿರ್ಮಿಸುವುದಿಲ್ಲ. ಆದುದರಿಂದ ಶೂನ್ಯ ವಿವಾಹವೆಂಬುದು ಒಂದು ಹೊಸ ವರ್ಗದ ವಿವಾಹವಲ್ಲ. ಅದೇ ರೀತಿಯಲ್ಲಿ ಯಾವುದಾದರೊಂದು ದೋಷದಿಂದ ಅಥವಾ ಕ್ರಮಹೀನತೆಯಿಂದ ಕೂಡಿರುವ ಒಂದು ವಿವಾಹವು ಆ ದೋಷವನ್ನು ಕಿತ್ತು ಹಾಕಲ್ಪಟ್ಟ ಬಳಿಕ ಒಂದು ವಿಧ್ಯುಕ್ತವಾದ ವಿವಾಹವಾಗುತ್ತದೆ. ಆದರೆ ಶಿಯಾ ಸಂಪ್ರದಾಯದಲ್ಲಿ ಬರುವ ಮುತಾ ಪದ್ಧತಿಯ ವಿವಾಹವನ್ನು ಒಂದು ವಿಶಿಷ್ಟ ರೀತಿಯ ವಿವಾಹವೆಂದು ಕರೆಯಬಹುದು.

ವಿಧ್ಯುಕ್ತವಾದ ವಿವಾಹ (Valid Marriage)

ಮುಸ್ಲಿಮ್ ಕಾನೂನಿನ ಎರಡೂ ಪರಂಪರೆಗಳ ಪ್ರಕಾರ ಒಂದು ವಿವಾಹವು ವಿಧ್ಯುಕ್ತವಾದ ವಿವಾಹವೆಂದು ಹೇಳಲ್ಪಡಬೇಕಾದರೆ ಆ ವಿವಾಹವು ಕಾನೂನಿನಿಂದ ಗೊತ್ತು ಮಾಡಲ್ಪಟ್ಟ ಎಲ್ಲಾ ಅವಶ್ಯಕತೆಗಳಿಂದ ಕೂಡಿಕೊಂಡಿರಬೇಕಾಗುತ್ತದೆ. ಈ ಅವಶ್ಯಕತೆಗಳು ಯಾವವೆಂದರೆ; ೧) ವಿವಾಹದ ಪಕ್ಷಗಾರರು ವಿವಾಹದ ಕರಾರು ಮಾಡಿಕೊಳ್ಳಲು ಸಕ್ಷಮರಾಗಿರಬೇಕು, ೨) ಪಕ್ಷಗಾರರ ಅಥವಾ ಅವರ ಸಂರಕ್ಷಕರ ಸಮ್ಮತಿಯನ್ನು ಪಡೆದಿರಬೇಕು ಮತ್ತು ಅದು ಸ್ವತಂತ್ರವಾದ ಸಮ್ಮತಿಯಾಗಿರಬೇಕು, ೩) ಪ್ರಸ್ತಾವ ಮತ್ತು ಸ್ವೀಕೃತಿಯು ಕಾನೂನುಬದ್ಧವಾಗಿ ಮಾಡಲ್ಪಟ್ಟಿರಬೇಕು, ಮತ್ತು ೪) ಪಕ್ಷಗಾರರೊಳಗೆ ವೈವಾಹಿಕ ಸಂಬಂಧದ ನಿಷೇಧವು ಇದ್ದಿರಬಾರದು.

ಶೂನ್ಯ ವಿವಾಹ (Void Marriage)

ಒಂದು ಶೂನ್ಯ ವಿವಾಹವು ವಿವಾಹವೆಂದು ಎಣಿಸಲ್ಪಡುವುದಿಲ್ಲ. ಇದು ವಸ್ತುಸ್ಥಿತಿಯಲ್ಲಾಗಲಿ ಕಾನೂನಿನಲ್ಲಾಗಲಿ ಅಸ್ತಿತ್ವಕ್ಕೆ ಬರುವುದಿಲ್ಲ, ಮತ್ತು ಇದೊಂದು ಕೇವಲ ಕಾನೂನುಬಾಹಿರವಾದ ಒಂದುಗೂಡುವಿಕೆಯಾಗಿರುತ್ತದೆ. ಈ ಕೆಳಗಿನ ವಿವಾಹಗಳು ಶೂನ್ಯ ವಿವಾಹಗಳೆಂದು ಎಣಿಸಲ್ಪಡುತ್ತವೆ.

೧) ಪರಮವಾದ ನಿಷೇಧಗಳನ್ನು ಉಲ್ಲಂಘಿಸಿ ಮಾಡಲಾದ ಒಂದು ವಿವಾಹ.

೨) ಕಾನೂನುಬದ್ಧವಾಗಿ ವಿವಾಹಿತಳಾದ ಒಬ್ಬ ನಾರಿಯೊಂದಿಗಿನ ವಿವಾಹ.

೩) ಕಾನೂನಿನ ಔಪಚಾರಿಕತೆಗಳನ್ನು ಪೂರ್ಣಗೊಳಿಸದೇ ತನ್ನ ವಿಚ್ಛೇದಿತಳಾದ ಪತ್ನಿಯೊಂದಿಗಿನ ವಿವಾಹ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಮೇರೆಗೆ ಮೇಲೆ ಹೇಳಲಾದಂತಹ ಶೂನ್ಯ ವಿವಾಹಗಳ ಹೊರತಾಗಿ ಕೆಲವುಹೆಚ್ಚಿನ ವಿವಾಹಗಳೂ ಸಹ ಶೂನ್ಯವಾಗುತ್ತವೆ. ಅವಾವುವೆಂದರೆ ೧) ಕಾನೂನುಬಾಹಿರ ಸಂಯುಕ್ತಿಯ ನಿಷೇಧದ ವಿರುದ್ಧದ ವಿವಾಹ, ೨) ಐದನೇ ಪತ್ನಿಯೊಂದಿಗಿನ ವಿವಾಹ, ೩) ಯಾತ್ರಾ ಕಾಲದಲ್ಲಿ ಮಾಡಲಾದ ವಿವಾಹ, ೪) ಮುಸಲ್ಮಾನೇತರರೊಂದಿಗೆ ಮಾಡಲಾದ ವಿವಾಹ, ಮತ್ತು ೫) ಇದ್ದತ್ ಆಚರಿಸುತ್ತಿರುವ ಸ್ತ್ರೀಯೊಂದಿಗಿನ ವಿವಾಹ.

ಒಂದು ವಿವಾಹವು ಮೂಲದಿಂದಲೇ ಶೂನ್ಯವಾಗಿದ್ದರೆ ಅದು ಪೂರ್ಣವಾಗಿ ಕಾನೂನು ಬಾಹಿರವಾಗಿರುತ್ತದೆ ಮತ್ತು ಅಂತಹ ಒಂದು ವಿವಾಹವು ಯಾವತ್ತೂ ವೈವಾಹಿಕ ಹಕ್ಕುಗಳನ್ನಾಗಲಿ ಅಥವಾ ಬಾಧ್ಯತೆಗಳನ್ನಾಗಲಿ ನಿರ್ಮಿಸುವುದಿಲ್ಲ. ಇಲ್ಲಿ ಸಹವಾಸವು ಕಾನೂನು ಬಾಹಿರವಾಗಿರುತ್ತದೆ ಮತ್ತು ಮಕ್ಕಳು ಅಧರ್ಮಜರಾಗಿರುವರು. ಪತಿ ಪತ್ನಿಯರು ಪಾರಸ್ಪರಿಕ ವಾರಸಿನ ಹಕ್ಕುಗಳನ್ನು ಪಡೆಯುವುದಿಲ್ಲ. ಪತ್ನಿಯು ಮೆಹರಿನ ಹಕ್ಕನ್ನಾಗಲಿ ಅಥವಾ ಜೀವನಾಂಶದ ಹಕ್ಕನ್ನಾಗಲಿ ಪಡೆಯುವುದಿಲ್ಲ. ಒಂದು ಶೂನ್ಯ ವಿವಾಹವು ವಿವಾಹವಲ್ಲವೆಂದು ಎಣಿಸಲ್ಪಡುವುದರಿಂದಾಗಿ ಪಕ್ಷಗಾರರು ಇನ್ನೊಂದು ವಿವಾಹವನ್ನು ಕಾನೂನುಬದ್ಧವಾಗಿ ಮಾಡಿಕೊಳ್ಳಲು ಹಕ್ಕುದಾರರಾಗಿರುವರು.

ಕ್ರಮಬದ್ಧವಲ್ಲದ ವಿವಾಹ (Irregular Marriage)

S.N.Lu 84 / 95(b)

ಕ್ರಮಬದ್ಧವಲ್ಲದ ವಿವಾಹಗಳು ಕೇವಲ ಸುನ್ನೀ ಕಾನೂನಿನಲ್ಲಿ ಮನ್ನಿಸಲ್ಪಟ್ಟಿವೆ. ಕ್ರಮಬದ್ಧವಲ್ಲದ ವಿವಾಹವು ಒಂದು ಅಪೂರ್ಣವಾದ ವಿವಾಹವಾಗಿರುತ್ತದೆ. ಒಂದು ವಿವಾಹದಲ್ಲಿ ಏನಾದರೊಂದು ಕಾನೂನು ಬಾಹಿರವಿದ್ದರೆ ಆ ಕಾನೂನು ಬಾಹಿರತೆಯು ಕಿತ್ತುಹಾಕಲ್ಪಟ್ಟ ಬಳಿಕ ಆ ವಿವಾಹವು ಕ್ರಮಬದ್ಧವಾಗುತ್ತದೆ. ಒಂದೊಮ್ಮೆ ಅಂತಹ ಕಾನೂನು ಬಾಹಿರತೆಯು ಶಾಶ್ವತವಾಗಿದ್ದು ಮತ್ತು ಅದನ್ನು ತೆಗೆದು ಹಾಕಲಿಕ್ಕೆ ಆಗುವುದಿಲ್ಲವೆಂದಾದರೆ ಅಂತಹ ವಿವಾಹವು ಶೂನ್ಯವಾಗುತ್ತದೆ ಮತ್ತು ಅದು ಎಂದೆಂದಿಗೂ ಶೂನ್ಯವಾಗಿಯೇ ಉಳಿಯುತ್ತದೆ. ಯಾವುದಾದರೊಂದು ಸಂಬಂಧಿಕ ನಿಷೇಧದ ಉಲ್ಲಂಘನೆ ಮಾಡಿ ಕರಾರು ಮಾಡಲ್ಪಟ್ಟ ವಿವಾಹವು ಒಂದು ಕ್ರಮಬದ್ಧವಲ್ಲದ ವಿವಾಹವೆಂದು ಎಣಿಸಲ್ಪಡುತ್ತದೆ. ಇದಕ್ಕೆ ಕಾರಣವೇನೆಂದರೆ ಸಂಬಂಧಿತ ನಿಷೇಧಗಳು ತಾತ್ಕಾಲಿಕವಾಗಿರುತ್ತವೆ, ಮತ್ತು ಅವುಗಳನ್ನು ಕಿತ್ತುಹಾಕುವುದು ಸಾಧ್ಯವಿರುತ್ತದೆ. ಈ ಕೆಳಗಿನ ವಿವಾಹಗಳು ಕ್ರಮಬದ್ಧವಲ್ಲದ ವಿವಾಹಗಳೆಂದು ಎಣಿಸಲ್ಪಡುತ್ತವೆ.

೧) ಕಾನೂನು ಬಾಹಿರ ಸಂಯುಕ್ತಿಯ ನಿಯಮಕ್ಕೆ ವಿರೋಧವಾಗಿ ಮಾಡಲಾದ ವಿವಾಹ.

೨) ಐದನೇ ಪತ್ನಿಯೊಂದಿಗಿನ ವಿವಾಹ.

೩) ಸಕ್ಷಮ ಸಾಕ್ಷಿದಾರರಿಲ್ಲದೇ ಮಾಡಲ್ಪಟ್ಟ ವಿವಾಹ.

೪) ಮುಸ್ಲಿಮ್ ಅಲ್ಲದ ಮತ್ತು ಕಿತಾಬಿಯಾಳಲ್ಲದ ಒಬ್ಬ ನಾರಿಯೊಂದಿಗೆ ಮಾಡಲಾದ ಒಂದು ವಿವಾಹ.

೫) ಇದ್ದತ್ ಆಚರಿಸುತ್ತಿರುವ ನಾರಿಯೊಂದಿಗೆ ಮಾಡಲ್ಪಟ್ಟ ಒಂದು ವಿವಾಹ,

ಕ್ರಮಬದ್ಧವಲ್ಲದ ಒಂದು ವಿವಾಹದ ಕಾನೂನೀ ಪರಿಣಾಮಗಳು
(Legal effects of an Irregular Marriage)

೧) ವಿವಾಹದ ಪೂರ್ಣತ್ವವು ಕಾನೂನುಬದ್ಧವಾಗಿರುತ್ತದೆ.

೨) ಮಕ್ಕಳು ಧರ್ಮಜರಾಗುತ್ತಾರೆ ಮತ್ತು ತಮ್ಮ ಹೆತ್ತವರ ಸ್ವತ್ತನ್ನು ವಾರಸು ಪಡೆಯಲು ಹಕ್ಕುದಾರರಾಗುವರು ಮತ್ತು

೩) ಪಕ್ಷಗಾರರಿಗೆ ಪರಸ್ಪರ ವಾರಸು ಪಡೆಯುವ ಹಕ್ಕು ಬರುವುದಿಲ್ಲ.

೪) ಒಂದೊಮ್ಮೆ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಪತ್ನಿಯು ತನ್ನ ಮೆಹರ್ ಪಡೆಯಲು ಹಕ್ಕುದಾರಳಾಗುವುದಿಲ್ಲ.

೫) ಎಲ್ಲಿ ಒಂದು ವಿವಾಹವು ಪೂರ್ತಿಗೊಳಿಸಲ್ಪಟ್ಟಿದೆಯೋ ಅಲ್ಲಿ ಆ ಪತ್ನಿಯು ಒಂದು ನಿರ್ದಿಷ್ಟವಾದ ಅಥವಾ ಸರಿಯಾದ ಮೆಹರ್‌ನೊಳಗೆ ಯಾವುದಾದರೊಂದನ್ನು ಪಡೆಯಲು ಹಕ್ಕುದಾರಳಾಗುವಳು.

೬) ಒಂದೊಮ್ಮೆ ಒಂದು ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಆ ಪತ್ನಿಯು ಇದ್ದತ್ ಆಚರಿಸಬೇಕಾಗಿಲ್ಲ.

೭) ಎಲ್ಲಿ ಒಂದು ವಿವಾಹವು ಪೂರ್ತಿಗೊಳಿಸಲ್ಪಟ್ಟಿದೆಯೋ, ಅಲ್ಲಿ ಪತ್ನಿಯು ಇದ್ದತ್ ಆಚರಿಸಬೇಕಾಗುತ್ತದೆ ಮತ್ತು ಇದು ಕೇವಲ ಮೂರು ತಿಂಗಳ ಕಾಲಾವಧಿಯ ಇದ್ದತ್ತಾಗಿರುತ್ತದೆ. ಇದು ವಿಚ್ಛೇದನದಿಂದಾಗಿ ಬರುವಂತಹದ್ದಾಗಿರಬಹುದು ಅಥವಾ ಪತಿಯ ಮರಣದಿಂದಾಗಿ.

೮) ಒಂದು ಕ್ರಮಬದ್ಧವಲ್ಲದ ವಿವಾಹದಲ್ಲಿ ಪತಿ ಪತ್ನಿಯರು ಒಂದಾಗಿರುವಿಕೆಯು ಕ್ರಮಬದ್ಧವಾಗುವುದಿಲ್ಲ. ಇಂತಹ ಪ್ರಸಂಗದಲ್ಲಿ ಕಾಜಿ ಅಥವಾ ನ್ಯಾಯಾಲಯವು ಈ ವ್ಯಕ್ತಿಗಳನ್ನು ಪತಿ ಪತ್ನಿಯರಾಗುವುದರಿಂದ ತಡೆಯಬಹುದು, ಅಥವಾ ಅವರ ವಿವಾಹವನ್ನು ವಿಘಟಿಸಬಹುದು. ಒಂದು ಕ್ರಮಬದ್ಧವಲ್ಲದ ವಿವಾಹವನ್ನು ಪಕ್ಷಗಾರರು ಸ್ವತಃ ಪರ್ಯವಸಾನಗೊಳಿಸಬಹುದು. ಇದನ್ನು ವಿವಾಹವು ಪೂರ್ಣಗೊಳಿಸುದಕ್ಕಿಂತ ಮೊದಲು ಅಥವಾ ಬಳಿಕ ಪರ್ಯವಸಾನಗೊಳಿಸಲ್ಪಡಬಹುದು.

ಶಿಯಾ ಕಾನೂನು (Shia Law)

ಶಿಯಾ ಕಾನೂನು ಕ್ರಮಬದ್ಧವಲ್ಲದ ವಿವಾಹವನ್ನು ಮನ್ನಿಸುವುದಿಲ್ಲ. ಶಿಯಾ ಪರಂಪರೆಯ ಪ್ರಕಾರ ಒಂದು ವಿವಾಹವು ವಿಧ್ಯುಕ್ತವಾಗಿರುತ್ತದೆ ಅಥವಾ ಶೂನ್ಯವಾಗಿರುತ್ತವೆ. ಸುನ್ನೀ ಕಾನೂನು ಯಾವ ಪರಿಸ್ಥಿತಿಗಳಲ್ಲಿ ಒಂದು ವಿವಾಹವನ್ನು ಕ್ರಮಬದ್ಧವಲ್ಲವೆಂದು ಹೇಳುತ್ತದೋ ಅದೇ ಪರಿಸ್ಥಿತಿಯಲ್ಲಿ ಮಾಡಲ್ಪಟ್ಟ ಒಂದು ವಿವಾಹವು ಶಿಯಾ ಕಾನೂನಿನ ಪ್ರಕಾರ ಶೂನ್ಯವಾಗಿರುತ್ತದೆ. ಸಕ್ಷಮ ಸಾಕ್ಷಿದಾರರಿರುವ ಒಂದು ಸಂಗತಿಯನ್ನು ಬಿಟ್ಟರೆ ಎಲ್ಲಾ ರೀತಿಯ ಕ್ರಮಬದ್ಧವಲ್ಲದ ವಿವಾಹವು ಮೂಲದಿಂದಲೇ ಶೂನ್ಯವೆಂದು ಎಣಿಸುತ್ತದೆ.

ಮುತಾ ವಿವಾಹ ಪದ್ಧತಿ (Mutha Marriage)

ಮುತಾ ಪದ್ಧತಿಯು ಒಂದು ವಿಶಿಷ್ಟವಾದ ವಿವಾಹ ಪದ್ಧತಿಯಾಗಿದ್ದು ಇದು ಕೇವಲ ಇತ್ನಾ ಅಶಾರಿಯಾ ಪರಂಪರೆಯ ಶಿಯಾರಿಂದ ಮನ್ನಿಸಲ್ಪಟ್ಟಿದೆ. ಯಾವುದಾದರೊಂದು ಪ್ರತಿಫಲವನ್ನು ಸಂದಾಯ ಮಾಡಿ ಒಂದು ನಿರ್ದಿಷ್ಟ ಕಾಲಾವಧಿಗೆ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಇವರೊಳಗಿನ ಒಂದು ತಾತ್ಕಾಲಿಕ ಒಂದುಗೂಡುವಿಕೆಯನ್ನು ಮುತಾ ಎಂಬುದಾಗಿ ಪರಿಭಾಷಿಸಬಹುದು. ನಿಕಾ ಇದನ್ನು ಒಂದು ಶಾಶ್ವತ ಹಾಗೂ ಕ್ರಮಬದ್ಧವಾದ ವಿವಾಹವೆಂದು ಎಣಿಸಿದರೆ ಮುತಾ ಇದೊಂದು ತಾತ್ಕಾಲಿಕ ವಿವಾಹವೆಂದು ಎಣಿಸಲ್ಪಡುತ್ತದೆ. ಹಿಂದಿನ ಕಾಲದಲ್ಲಿ ಅರಬರು ತಮ್ಮ ಮನೆ ಬಿಟ್ಟು ದೀರ್ಘಾವಧಿಗೆ ಪರ ಊರಿನಲ್ಲಿದ್ದಾಗ ಅವರು ತಮ್ಮ ಲೈಂಗಿಕ ಅವಶ್ಯಕತೆಗಳನ್ನು ಪೂರೈಸಲು ವೇಶ್ಯೆಯರ ಬಳಿಗೆ ಹೋಗುತ್ತಿದ್ದರು. ಈ ಕೆಟ್ಟ ಚಟವನ್ನು ತಪ್ಪಿಸುವುದಕ್ಕೋಸ್ಕರ ಮುತಾ ರೀತಿಯ ವಿವಾಹವನ್ನು ಮನ್ನಿಸಲಾಯಿತು ಮತ್ತು ಸ್ವಲ್ಪ ಕಾಲ ಪೈಗಂಬರನೂ ಸಹ ಇದನ್ನು ಸಹಿಸಿದ್ದನು. ಆದರೆ ಕೆಲವು ಕಾಲದ ಬಳಿಕ ಅವನು ಇದನ್ನು ಪರಮವಾಗಿ ನಿಷೇಧಿಸಿದನು. ಮುತಾ ಪದ್ಧತಿಯ ವಿವಾಹವನ್ನು ಇತ್ನಾ ಅಶಾರಿಯಾ ಪರಂಪರೆಯ ಹೊರತು ಮುಸ್ಲಿಮ್ ಕಾನೂನಿನ ಇತರ ಯಾವುದೇ ಪರಂಪರೆಯು ಮನ್ನಿಸುವುದಿಲ್ಲ.

ಮುತಾ ವಿವಾಹದ ಅವಶ್ಯಕತೆಗಳು (Essentials of Mutha Marriage)

ಮುತಾ ವಿವಾಹದ ಕರಾರು ಇತ್ನಾ ಅಶಾರಿಯಾ ಕಾನೂನಿನಿಂದ ಗೊತ್ತುಮಾಡಲ್ಪಟ್ಟ ನಿಯಮಗಳಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಒಂದು ವಿಧ್ಯುಕ್ತವಾದ ಮುತಾ ವಿವಾಹವು ಅಸ್ತಿತ್ವಕ್ಕೆ ಬರಬೇಕಾದರೆ ಅಲ್ಲಿ ಈ ಕೆಳಗಿನ ಷರತ್ತುಗಳು ಪೂರ್ತಿಗೊಳಿಸಲ್ಪಡಬೇಕು;

೧) ಪಕ್ಷಗಾರರು ತಾರುಣ್ಯದ ವಯಸ್ಸಿಗೆ ಮುಟ್ಟಿರಬೇಕು ಮತ್ತು ಸ್ವಸ್ಥಚಿತ್ತರಾಗಿರಬೇಕು.

೨) ಒಬ್ಬ ಶಿಯಾ ಗಂಡಸು ಯಾವತ್ತೂ ಒಬ್ಬ ಮುಸ್ಲಿಮ್, ಕಿತಾಬಿಯಾ, ಅಥವಾ ಅಗ್ನಿಪೂಜಕ ನಾರಿಯೊಂದಿಗೆ ಒಂದು ಶಿಯಾ ವಿವಾಹದ ಕರಾರನ್ನು ಮಾಡಿಕೊಳ್ಳಬಹುದು; ಆದರೆ ಇತರ ಧರ್ಮದ ನಾರಿಯೊಂದಿಗೆ ಅವನು ಮುತಾ ವಿವಾಹದ ಕರಾರು ಮಾಡಿಕೊಳ್ಳುವಂತಿಲ್ಲ. ಒಬ್ಬ ಹಿಂದೂ ನಾರಿಯೊಂದಿಗೆ ಮಾಡಲಾಗುವ ಮುತಾ ವಿವಾಹವು ಶೂನ್ಯವಾಗಿರುತ್ತದೆ. ಆದರೆ ಒಬ್ಬ ಶಿಯಾ ನಾರಿಯು ಯಾವನೇ ಒಬ್ಬ ಮುಸಲ್ಮಾನೇತರನೊಂದಿಗೆ ಒಂದು ಮುತಾ ವಿವಾಹದ ಕರಾರು ಮಾಡಿಕೊಳ್ಳುವಂತಿಲ್ಲ.

I) ಮುತಾ ವಿವಾಹದ ಮುಖಾಂತರ ಎಷ್ಟು ಪತ್ನಿಯರನ್ನಿಟ್ಟುಕೊಳ್ಳಬಹುದು ಎಂಬ ಬಗ್ಗೆ ಯಾವುದೇ ರೀತಿಯ ನಿರ್ಬಂಧನೆಯಿಲ್ಲ. ಮುತಾ ರೀತಿಯಿಂದ ಒಬ್ಬನು ತನಗೆ ಇಷ್ಟ ಬಂದಷ್ಟು ಪತ್ನಿಯರೊಂದಿಗೆ ವಿವಾಹ ಮಾಡಿಕೊಳ್ಳಬಹುದು.

II) ಇಬ್ಬರೂ ಪಕ್ಷಗಾರರ ಸಮ್ಮತಿಯು ಒಂದು ಸ್ವತಂತ್ರವಾದ ಸಮ್ಮತಿಯಾಗಿದ್ದಿರಬೇಕು.

III) ಒಂದು ಕ್ರಮಬದ್ಧವಾದ ವಿವಾಹಕ್ಕೆ ಅವಶ್ಯಕವಾಗಿರುವ ಪ್ರಸ್ತಾವ ಮತ್ತು ಸ್ವೀಕೃತಿ ಇವು ಒಂದು ಮುತಾ ರೀತಿಯ ವಿವಾಹಕ್ಕೂ ಅವಶ್ಯಕವಾಗಿವೆ. ಆದರೆ ಒಬ್ಬ ಸಾಕ್ಷಿದಾರನಿಲ್ಲದೇನೂ ಒಂದು ಮುತಾ ವಿವಾಹವು ಮಾಡಲ್ಪಡಬಹುದು.

ಒಂದು ಮುತಾವಿವಾಹದ ಕರಾರನ್ನು ಮುತಾ ಎಂಬ ಶಬ್ದವನ್ನು ಆಡಿ ಅಥವಾ ಇಂತಹ ವಿವಾಹವನ್ನು ಸೂಚಿಸುವಂತಹ ಯಾವುದೇ ಒಂದು ಶಬ್ದವನ್ನು ವ್ಯಕ್ತಪಡಿಸಿ ಈ ವಿವಾಹದ ಕರಾರನ್ನು ಮಾಡಿಕೊಳ್ಳಬಹುದು.

IV) ಪಕ್ಷಗಾರರೊಳಗೆ ಯಾವುದೇ ರೀತಿಯ ನಿಷೇಧಿತ ಸಂಬಂಧವು ಅಸ್ತಿತ್ವದಲ್ಲಿದ್ದಿರಬಾರದು.

V) ಮುತಾ ವಿವಾಹವು ಅಸ್ತಿತ್ವದಲ್ಲಿರುವ ಕಾಲಾವಧಿಯು ಸ್ಪಷ್ಟವಾಗಿ ನಿರ್ದಿಷ್ಟಪಡಿಸಲ್ಪಟ್ಟಿರಬೇಕು. ಅದು ಒಂದು ದಿವಸಕ್ಕಾಗಿ ಆಗಿರಬಹುದು ಅಥವಾ ಒಂದು ವಾರಕ್ಕಾಗಿ ಅಥವಾ ಕೆಲವು ವರ್ಷಗಳಿಗಾಗಿ, ಮುತಾ ಮತ್ತು ನಿಕಾ ಇವುಗಳೊಳಗಿನ ಮುಖ್ಯ ವ್ಯತ್ಯಾಸವೇನೆಂದರೆ ಒಂದು ವಿವಾಹವು ಅಸ್ತಿತ್ವದಲ್ಲಿರುವ ಕಾಲಾವಧಿಯು ನಿರ್ದಿಷ್ಟವಾಗಿ ನಿರ್ಣಯಿಸಲ್ಪಟ್ಟರೆ ಅದೊಂದು ಮುತಾ ವಿವಾಹವಾಗುತ್ತದೆ ಮತ್ತು ಯಾವ ವಿವಾಹದಲ್ಲಿ ಒಂದು ಕಾಲಾವಧಿಯು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೋ ಅದೊಂದು ನಿಕಾ ಆಗಿರುತ್ತದೆ. ಒಂದು ವಿವಾಹದ ಒಪ್ಪಂದದ ಕಾಲದಲ್ಲಿ ಮುತಾ ಎಂಬ ಶಬ್ದವನ್ನು ಉಪಯೋಗಿಸಿದ ಮಾತ್ರಕ್ಕೆ ಅದೊಂದು ತಾತ್ಕಾಲಿಕ ವಿವಾಹವಾಗುವುದಿಲ್ಲ. ಒಂದೊಮ್ಮೆ ಮುತಾ ಪದ್ಧತಿಯ ವಿವಾಹದ ಕರಾರು ಮಾಡಿಕೊಂಡಿದ್ದು ಅದರಲ್ಲಿ ವಿವಾಹವು ಅಸ್ತಿತ್ವದಲ್ಲಿರುವ

ಕಾಲಾವಧಿಯು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ ಅದನ್ನು ಒಂದು ಶಾಶ್ವತ ವಿವಾಹವೆಂದು ಎಣಿಸಲಾಗುತ್ತದೆ.

VI) ಮೆಹರಿನ ಮೊಬಲಗು ವಿವಾಹದ ಕರಾರಿನ ಕಾಲದಲ್ಲಿ ನಿರ್ದಿಷ್ಟಗೊಳಿಸಲ್ಪಟ್ಟಿರಬೇಕಾಗುತ್ತದೆ. ಒಂದೊಮ್ಮೆ ಮೆಹರು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ, ಆ ಮುತಾ ವಿವಾಹವು ಶೂನ್ಯವಾಗುತ್ತದೆ. ಒಂದು ಮುತಾ ವಿವಾಹವು ವಿಧ್ಯುಕ್ತವಾದುದೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಮೆಹರು ನಿರ್ದಿಷ್ಟಗೊಳಿಸಲ್ಪಡಬೇಕಾಗುತ್ತದೆ. ಆದರೆ ಒಂದು ಶಾಶ್ವತವಾದ ವಿವಾಹದಲ್ಲಿ ಅದನ್ನು ನಿರ್ದಿಷ್ಟಗೊಳಿಸುವ ಅವಶ್ಯಕತೆಯಿರುವದಿಲ್ಲ.

ಒಂದು ಮುತಾ ವಿವಾಹದ ಕಾನೂನೀ ಪರಿಣಾಮಗಳು
(Legal effects of a Mutha-Marriage)

೧) ಪಕ್ಷಗಾರರೊಳಗಿನ ಸಹವಾಸವು ಕಾನೂನುಬದ್ಧವಾಗುತ್ತದೆ.

೨) ಮಕ್ಕಳು ಧರ್ಮಜರಾಗುವರು ಮತ್ತು ತಮ್ಮ ಹೆತ್ತವರ ಸ್ವತ್ತಿನ ವಾರಸು ಪಡೆಯಲು ಹಕ್ಕುದಾರರಾಗುವರು.

೩) ಮುತಾ ಗಂಡ ಮತ್ತು ಹೆಂಡತಿಗೆ ಪರಸ್ಪರ ವಾರಸು ಪಡೆಯುವ ಹಕ್ಕು ಬರುವುದಿಲ್ಲ.

೪) ಒಂದೊಮ್ಮೆ ಆ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಪತ್ನಿಯು ನಿರ್ದಿಷ್ಟಪಡಿಸಲಾದ ಮೆಹರಿನ ಅರ್ಧದಷ್ಟನ್ನು ಮಾತ್ರ ಪಡೆಯುಬಹುದು. ಒಂದೊಮ್ಮೆ ಆ ವಿವಾಹವು ಪೂರ್ತಿಗೊಳಿಸಲ್ಪಟ್ಟಿದೆಯೆಂದಾದರೆ ನಿರ್ದಿಷ್ಟಗೊಳಿಸಲಾದ ಮೆಹರನ್ನು ಅವಳು ಪೂರ್ಣವಾಗಿ ಪಡೆಯಲು ಹಕ್ಕುದಾರಳಾಗುವಳು.

ಒಂದೊಮ್ಮೆ ಗಂಡನು ನಿರ್ದಿಷ್ಟ ಪಡಿಸಲಾದ ಪೂರ್ಣ ಕಾಲಾವಧಿಗೆ ಅವಳೊಂದಿಗೆ ಸಹವಾಸ ಮಾಡದಿದ್ದರೂ ಸಹ ಪತ್ನಿಯು ಪೂರ್ಣ ಮೆಹರನ್ನು ಪಡೆಯಲು ಹಕ್ಕುದಾರಳಾಗುವಳು. ಆದರೆ ಒಂದೊಮ್ಮೆ ಪತ್ನಿಯು ಪತಿಯನ್ನು ಬಿಟ್ಟರೆ, ಆಗ ಪತಿಯು ಆ ಮುಗಿಯದ ಕಾಲಾವಧಿಯ ಸಂಬಂಧದಲ್ಲಿ ಅನುಪಾತಿಕವಾಗಿ ಆ ಮೊಬಲಗನ್ನು ಕಡಿಮೆ ಮಾಡಲು ಹಕ್ಕುಳ್ಳವನಾಗುವನು,

೫) ಒಬ್ಬ ಮುತಾ ಪತ್ನಿಯು ಗಂಡನಿಂದ ಜೀವನಾಂಶ ಪಡೆಯಲು ಹಕ್ಕುದಾರಳಲ್ಲ. ಇದು ಶಿಯಾ ಕಾನೂನಿನ ಸ್ಥಿತಿಯಾಗಿರುತ್ತದೆ. ಆದರೆ ದಂಡ ಪ್ರಕ್ರಿಯಾ ಸಂಹಿತೆ (Criminal Procedure Code) ಇದರ ಪ್ರಕಾರ ಆಕೆಯು ಗಂಡನಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು.

೬) ಒಂದೊಮ್ಮೆ ಆ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಪತ್ನಿಯು ಇದ್ದತ್ ಆಚರಿಸಬೇಕಾಗಿಲ್ಲ. ಒಂದೊಮ್ಮೆ ವಿವಾಹವು ಪೂರ್ತಿಗೊಳಿಸಲ್ಪಟ್ಟ ಬಳಿಕ ಒಂದು ಮುತಾ ವಿವಾಹವು ಪರ್ಯವಸಾನಗೊಂಡರೆ ಪತ್ನಿಯು

ಇದ್ದತ್ ಆಚರಿಸಬೇಕಾಗುತ್ತದೆ. ಈ ಇದ್ದತ್‌ನ ಕಾಲಾವಧಿಯು ಕೇವಲ ಎರಡು ರಜಸ್ಸುಗಳಾಗಿರುತ್ತದೆ. ಇಲ್ಲಿ ಗಂಡನ ಮರಣದಿಂದಾಗಲಿ ಅಥವಾ ಅನ್ಯಥಾ ಆ ವಿವಾಹವು ವಿಘಟಿತವಾಗಿದೆಯೆಂದು ಇದರ ಮೇಲೆ ಅದು ಪರಿಣಾಮಿತ ವಾಗುವುದಿಲ್ಲ.

೭) ಮುತಾ ಪದ್ಧತಿಯ ವಿವಾಹದಲ್ಲಿ ವಿವಾಹ ವಿಚ್ಛೇದನವೆಂಬುದು ಇರುವುದಿಲ್ಲ. ಈ ರೀತಿಯ ವಿವಾಹವು ಈ ಕೆಳಗಿನ ಪ್ರಕರಣಗಳಲ್ಲಿ ವಿಘಟಿತವಾಗುತ್ತದೆ.

I) ಯಾವನಾದರೊಬ್ಬ ಪಕ್ಷಗಾರನ ಮರಣದಿಂದಾಗಿ, ಅಥವಾ

II) ನಿರ್ದಿಷ್ಟವಾದ ಕಾಲಾವಧಿಯು ಮುಗಿದಾಗ. ಅಥವಾ

III) ಆ ಕಾಲಾವಧಿಯು ಪೂರ್ಣಗೊಳ್ಳುವುದಕ್ಕಿಂತ ಮೊದಲೇ ಪತಿ ಅಥವಾ ಪತ್ನಿಯು ಬಿಟ್ಟು ಹೋದರೆ,

IV) ಒಂದೊಮ್ಮೆ ಆ ಕಾಲಾವಧಿಯು ಮುಗಿಯುವುದಕ್ಕಿಂತ ಮೊದಲೇ ಪತಿಯು ಆಕೆಯನ್ನು ಬಿಟ್ಟು ಹೋದರೆ ಆತನು ಆಕೆಗೆ ಆ ಉಳಿದ ಕಾಲಾವಧಿಯ ಒಂದು ದಾನ ಮಾಡಿರುವನೆಂದು ಎಣಿಸಲಾಗುತ್ತದೆ, ಮತ್ತು ಅವನು ಇಡೀ ಕಾಲಾವಧಿಯ ಮೆಹರನ್ನು ಆಕೆಗೆ ಸಲ್ಲಿಸಬೇಕಾಗುತ್ತದೆ. ಒಂದೊಮ್ಮೆ, ಪತ್ನಿಯು ಆತನನ್ನು ಬಿಟ್ಟುಹೋದರೆ ಮೆಹರಿನ ಹಣವನ್ನು ಆ ಉಳಿದ ಕಾಲಾವಧಿಯ ಸಂಬಂಧದಲ್ಲಿ ಅನುಪಾತಿಕವಾಗಿ ಕಳೆತ ಮಾಡಲಾಗುತ್ತದೆ.

೮) ಒಂದು ಮುತಾ ವಿವಾಹದಲ್ಲಿ ಅವರು ನಿರ್ದಿಷ್ಟಗೊಳಿಸಲಾದ ಕಾಲಾವಧಿಯ ಬಗ್ಗೆ ಯಾವುದೇ ಒಂದು ಪುರಾವೆಯು ಇಲ್ಲವೆಂದಾದರೆ ಅಥವಾ ಆ ವಿವಾಹದ ಕಾಲಾವಧಿಯು ಎಂದು ಮುಕ್ತಾಯವಾಗುವುದು ಎಂಬ ಬಗ್ಗೆ ಗೊತ್ತಿಲ್ಲವೆಂದಾದರೆ ಮತ್ತು ಪತಿ ಪತ್ನಿಯರ ಸಹವಾಸವು ಮುಂದುವರಿಯುತ್ತಿದ್ದರೆ ಅಲ್ಲಿ ಆ ಮುತಾ ವಿವಾಹವು ಅವರ ಜೀವಮಾನದುದ್ದಕ್ಕೂ ಮುಂದುವರಿಯುವುದೆಂದು ಎಣಿಸಲಾಗುತ್ತದೆ. ಒಂದು ನಿರ್ದಿಷ್ಟಪಡಿಸಲಾದ ಕಾಲಾವಧಿಯು ಮುಗಿದ ಬಳಿಕವೂ ಸಹ ಅವರೊಳಗಿನ ಸಹವಾಸವು ಮುಂದುವರಿದರೆ ಅಲ್ಲಿಯೂ ಇದೇ ರೀತಿಯ ಊಹೆ ಮಾಡಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಜೀವಾವಧಿಯ ಮುತಾ ವಿವಾಹವಿದೆಯೆಂಬ ಪೂರ್ವಭಾವನೆ ತಾಳಲಾಗುತ್ತದೆ. ಇಲ್ಲಿ ಸಂತತಿಯು ಧರ್ಮಜವಾಗುತ್ತದೆ ಮತ್ತು ಆ ಮಕ್ಕಳು ತಂದೆ ತಾಯಿಯರ ಸ್ವತ್ತನ್ನು ವಾರಸು ಪಡೆಯುವರು. ಆದರೆ ಪತಿ ಪತ್ನಿಯರು ಪರಸ್ಪರರ ವಾರಸಿಗೆ ಹಕ್ಕುದಾರರಾಗುವದಿಲ್ಲ.

——

ಅಧ್ಯಾಯ ೫

ಕನ್ಯಾಶುಲ್ಕ (Dower)

ಪ್ರಸ್ತಾವನೆ :

ಇಸ್ಲಾಮ್ ಮತದ ಸ್ಥಾಪನೆಗಿಂತ ಮೊದಲು ಅರಬಿನಲ್ಲಿ ಸಾಮಾನ್ಯವಾಗಿ ಕನ್ಯೆಯ ಖರೀದಿಯೊಂದಿಗೆ ಒಂದು ವಿವಾಹದ ಕರಾರು ಮಾಡಲ್ಪಡುತ್ತಿತ್ತು. ಕನ್ಯೆಯನ್ನು ಆಕೆಯ ಸಂರಕ್ಷಕರಿಂದ ಖರೀದಿ ಮಾಡಲಾಗುತ್ತಿತ್ತು. ಒಬ್ಬ ಹುಡುಗಿಯನ್ನು ವಿವಾಹವಾಗಬಯಸುವ ಒಬ್ಬ ವ್ಯಕ್ತಿಯು ಆ ಕನ್ಯೆಯ ಸಂರಕ್ಷಕರ ಬಳಿ ಹೋಗಿ ಅವರಿಗೆ ಸ್ವಲ್ಪ ಹಣ ಅಥವಾ ಯಾವುದಾದರೊಂದು ಸ್ವತ್ತು ಕೊಟ್ಟು ಆ ಹುಡುಗಿಯನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಳ್ಳುತ್ತಿದ್ದನು. ಈ ರೀತಿಯಾಗಿ ಗಂಡನು ಒಬ್ಬ ಹುಡುಗಿಯ ಸಂರಕ್ಷಕನಿಗೆ ಕೊಡುತ್ತಿದ್ದ ಪರಿಹಾರ ಅಥವಾ ಆ ಹುಡುಗಿಯ ಬೆಲೆಯನ್ನು ಮೆಹರ್ ಎಂದು ಕರೆಯಲಾಗುತ್ತಿತ್ತು. ಈ ರೀತಿಯ ವಿವಾಹವು ಬಾಲ್–ವಿವಾಹ ಎಂಬುದಾಗಿ ಎಣಿಸಲ್ಪಡುತ್ತಿತ್ತು. ಆ ಕಾಲದಲ್ಲಿ ಬಳಕೆಯಲ್ಲಿದ್ದ ವಿವಾಹದ ಇನ್ನೊಂದು ಹೆಸರು ಬೀನ–ವಿವಾಹ. ಬೀನ ಪದ್ಧತಿಯ ವಿವಾಹದಲ್ಲಿ ಒಬ್ಬ ಗಂಡಸು ಹುಡುಗಿಯ ಬಳಿ ನೇರವಾಗಿ ಹೋಗಿ ಆಕೆಗೆ ಸ್ವಲ್ಪ ಹಣ ಅಥವಾ ಸ್ವಲ್ಪ ಸ್ವತ್ತನ್ನು ಕೊಟ್ಟು ಅವಳೊಂದಿಗೆ ಜೀವಿಸುತ್ತಿದ್ದನು. ಇಲ್ಲಿ ಪತ್ನಿಯು ಗಂಡನ ಸಂಗಡ ಬರುತ್ತಿರಲಿಲ್ಲ. ಇಲ್ಲಿ ಗಂಡನು ಹೆಂಡತಿಗೆ ಕೊಟ್ಟಿರುವ ಹಣವನ್ನು ವಿವಾಹದ ಕೊಡುಗೆ ಅಥವಾ ಸದಕ್ ಎಂದು ಕರೆಯಲಾಗುತ್ತಿತ್ತು ಮತ್ತು ಪತ್ನಿಯನ್ನು ಸದಿಕಾ ಎಂದು ಕರೆಯಲಾಗುತ್ತಿತ್ತು. ಸದಿಕಾ ಎಂದರೆ ಹೆಣ್ಣು ಮಿತ್ರಳು. ಈ ಎರಡೂ ರೀತಿಯ ವಿವಾಹಗಳಲ್ಲಿ ಕಂಡು ಬರುವ ಸಾದೃಶತೆಯೆಂದರೆ ಎರಡೂ ಕಡೆ ಗಂಡನು ಒಂದಿಷ್ಟು ಹಣ ಕೊಡಬೇಕಾಗಿತ್ತು. ಬಾಲ್ ವಿವಾಹದಲ್ಲಿ ಅವನು ಹುಡುಗಿಯ ಸಂರಕ್ಷಕನಿಗೂ ಮತ್ತು ಬೀನಾ ವಿವಾಹದಲ್ಲಿ ಹುಡುಗಿಗೆನೇ ಹಣವನ್ನು ಸಂದಾಯ ಮಾಡಬೇಕಾಗಿತ್ತು.

ಇಸ್ಲಾಮ್ ಮತವು ಅಸ್ತಿತ್ವಕ್ಕೆ ಬಂದಾಗ ಪೈಗಂಬರನು ಒಂದು ನಿರ್ದಿಷ್ಟವಾದ ವಿವಾಹದ ರೀತಿಯನ್ನು ಗೊತ್ತು ಮಾಡಿದನು. ಈ ರೀತಿಯಾಗಿ ಒಂದು ನಿರ್ದಿಷ್ಟವಾದ ವಿವಾಹ ಪದ್ಧತಿಯನ್ನು ಗೊತ್ತು ಮಾಡುವಾಗ ಹಳೆಯ ಸಂಪ್ರದಾಯವಾದ ಗಂಡನು ಹೆಂಡತಿಗೆ ಏನನ್ನಾದರೂ ಸಲ್ಲಿಸುವ ವಾಡಿಕೆಯನ್ನು ಇಟ್ಟುಕೊಂಡನು. ಆದರೆ ಹಳೆಯ ಎರಡೂ ಪದ್ಧತಿಗಳಲ್ಲಿರುವ ಆ ಕೆಟ್ಟ ಪರಂಪರೆಯನ್ನು ಅವನು ರದ್ದುಗೊಳಿಸಿದನು. ಪ್ರತಿಯೊಂದು ವಿವಾಹದಲ್ಲಿ ಹೆಂಡತಿಗೆ ಏನನ್ನಾದರೂ

ಸಂದಾಯ ಮಾಡಲು ಗಂಡನು ಬಾಧ್ಯನಾಗಿರುವನು ಮತ್ತು ಅದು ಹೆಂಡತಿಯ ಸಂರಕ್ಷಕರಿಗೆ ಸಂದಾಯವಾಗತಕ್ಕುದಲ್ಲ ಎಂಬುದಾಗಿ ಅವನು ಘೋಷಿಸಿದನು. ಎರಡನೆಯದಾಗಿ ಹೆಂಡತಿಗೆ ಮಾಡಲಾದ ಸಂದಾಯವು ವಿವಾಹದ ಕೊಡುಗೆಯಲ್ಲವೆಂದು ಅವನು ಹೇಳಿದನು. ಮೆಹರ್ ಎಂದರೆ ಗಂಡನು ಹೆಂಡತಿಗೆ ಗೌರವ ಸೂಚಕವಾಗಿ ಸಂದಾಯ ಮಾಡಬೇಕಾಗಿರುವ ಒಂದು ಮೊಬಲಗು ಅಥವಾ ಸ್ವತ್ತಾಗಿರುತ್ತದೆ. ಇಸ್ಲಾಮಿನ ಪ್ರಕಾರ ಒಂದು ವಿವಾಹದಿಂದಾಗಿ ಒಬ್ಬ ನಾರಿಯ ಪ್ರಾಸ್ಥಿತಿಯು ಮೇಲ್ಮಟ್ಟಕ್ಕೆ ಹೋಗುತ್ತದೆ ಮತ್ತು ಆಕೆಯ ಘನತೆಯನ್ನು ಅಧಿಸ್ವೀಕೃತಿಗೊಳಿಸಲು ಆಕೆಗೆ ಏನನ್ನಾದರೂ ಸಂದಾಯ ಮಾಡುವ ಅವಶ್ಯಕತೆಯಿರುತ್ತದೆ.

ಕನ್ಯಾಶುಲ್ಕ ಇದರ ಪರಿಭಾಷೆ (Definition of dower)

ಕನ್ಯಾಶುಲ್ಕ ಅಥವಾ ಮೆಹರ್ ಎಂದರೆ ಒಬ್ಬ ನಾರಿಯು ತನ್ನ ವಿವಾಹ ಕಾಲದಲ್ಲಿ ತನ್ನ ಪ್ರತಿ ಗೌರವದ ರೀತಿಯಲ್ಲಿ ಗಂಡನಿಂದ ಪಡೆಯಲು ಹಕ್ಕುದಾರಳಾದ ಒಂದು ಹಣದ ಮೊಬಲಗು ಅಥವಾ ಸ್ವತ್ತಾಗಿರುತ್ತದೆ.

ಮುಲ್ಲಾರವರ ಪರಿಭಾಷೆಯ ಪ್ರಕಾರ ಕನ್ಯಾಶುಲ್ಕವೆಂದರೆ ವಿವಾಹದ ಪ್ರತಿಫಲದ ರೀತಿಯಲ್ಲಿ ಪತ್ನಿಯು ಪತಿಯಿಂದ ಪಡೆಯಲು ಹಕ್ಕುದಾರಳಾಗಿರುವ ಯಾವುದಾದರೊಂದು ಹಣದ ಮೊಬಲಗು ಅಥವಾ ಇತರ ಯಾವತ್ತೂ ಸ್ವತ್ತು.

ನ್ಯಾಯಾಧೀಶ ಮಹಮ್ಮೂದರವರು 'ಅಬ್ದುಲ್ ಖಾದೀರ್ ವಿ. ಸಲಿಮಾ' (Abdul Khadir V. Salima) ಪ್ರಕರಣದಲ್ಲಿ ಕನ್ಯಾಶುಲ್ಕವನ್ನು ಪರಿಭಾಷಿಸಿರುವನು.

ಅಬ್ದುಲ್ ಖಾದೀರ್ ವಿ. ಸಲಿಮಾ

(Abdul Khadir V. Salima)

ಸಿದ್ಧಾಂತ : ಮಹಮದೀಯ ಕಾನೂನಿನ ಪ್ರಕಾರ ವಿವಾಹವು ಒಂದು ಸಂಸ್ಕಾರವಲ್ಲ. ಬದಲಾಗಿ ಅದೊಂದು ದಿವಾನೀ ಕರಾರಾಗಿರುತ್ತದೆ. ಇದರಿಂದ ನಿರ್ಮಿಸಲ್ಪಡುವ ಎಲ್ಲಾ ಬಾಧ್ಯತೆಗಳು ತಕ್ಷಣದಲ್ಲಿ ಅಸ್ತಿತ್ವಕ್ಕೆ ಬರುತ್ತದೆ ಮತ್ತು ಅವು ಪತಿಯಿಂದ ಪತ್ನಿಗೆ ಸಂದಾಯವಾಗಬೇಕಾಗಿರುವ ಕನ್ಯಾ ಶುಲ್ಕದ ಮೇಲೆ ಒಂದು ಪೂರ್ವವರ್ತಿ ಷರತ್ತಿನ ರೀತಿಯಲ್ಲಿ ಅವಲಂಬಿಸಿರುವುದಿಲ್ಲ. ಒಂದೊಮ್ಮೆ ತಕ್ಷಣಿಕ ಕನ್ಯಾಶುಲ್ಕವು ಸಂದಾಯವಾಗಿಲ್ಲವಾದರೆ ಪತ್ನಿಯು ಪತಿಗೆ ತನ್ನ ಸಹವಾಸವನ್ನು ನಿರಾಕರಿಸಬಹುದು. ಒಂದೊಮ್ಮೆ ಪತಿಯು ವೈವಾಹಿಕ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ಆಕೆಯ ಮೇಲೆ ದಾವೆ ಹೂಡಿದರೆ–

೧) ಲೈಂಗಿಕ ಸಂಬಂಧವು ಉಂಟಾಗುವುದಕ್ಕಿಂತ ಮೊದಲು ಕನ್ಯಾಶುಲ್ಕದ ಸಂದಾಯವಾಗದಿರುವಿಕೆಯು ಒಂದು ಅಪೂರ್ಣ ಪ್ರತಿವಾದವಾಗಿರುತ್ತದೆ ಮತ್ತು ಆ ದಾವೆಯು ಕಿತ್ತು ಹಾಕಲ್ಪಡುತ್ತದೆ.

೨) ಒಂದೊಮ್ಮೆ ಲೈಂಗಿಕ ಸಂಬಂಧವು ಉಂಟಾದ ಬಳಿಕ ಆಕೆಯ ವಿರುದ್ಧ ಒಂದು ದಾವೆಯು ಹೂಡಲ್ಪಟ್ಟಿದ್ದರೆ ಅಲ್ಲಿ ಒಂದು ಷರತ್ತುಬದ್ಧ ಡಿಕ್ರಿಯು ಮಂಜೂರು ಮಾಡಲಾಗುತ್ತದೆ. ಆ ಡಿಕ್ರಿಯು ಗಂಡನಿಂದ ತಕ್ಷಣಿಕ ಕನ್ಯಾಶುಲ್ಕದ ಸಂದಾಯವಾಗುವುದರ ಮೇಲೆ ಅವಲಂಬಿಸಿರುತ್ತದೆ.

ವಸ್ತುಸ್ಥಿತಿ : ಅಬ್ದುಲ್ ಕಾದಿರ್ ಎಂಬ ಮನವಿದಾರನು ಹನಫಿ ಪಂಥದ ಅನುಯಾಯಿಯಾಗಿದ್ದನು. ಸಲಿಮಾ ಎಂಬವಳು ಅವನ ಪತ್ನಿಯಾಗಿದ್ದಳು. ಅವರು ೧೫-೩-೧೮೮೩ರಲ್ಲಿ ವಿವಾಹಿತರಾಗಿದ್ದರು. ಆದರೆ ಕನ್ಯಾ ಶುಲ್ಕದ ಸಂದಾಯದ ಬಗ್ಗ ಯಾವುದೇ ಒಂದು ನಿರ್ದಿಷ್ಟವಾದ ಸಮಯವು ಗೊತ್ತು ಮಾಡಲ್ಪಟ್ಟಿರಲಿಲ್ಲ. ಆಕೆಯು ಅವನೊಂದಿಗೆ ೧೫-೬-೧೮೮೩ರ ತನಕ ಜೀವನ ನಡೆಸಿದ್ದಳು. ಆ ಬಳಿಕ ಆಕೆಯು ತನ್ನ ತಂದೆಯ ಮನೆಗೆ ಹೋಗಿ ಮರಳಿ ಬರಲು ನಿರಾಕರಿಸಿದಳು. ಅವನು ೨೯-೬-೧೮೮೩ರಂದು ವೈವಾಹಿಕ ಹಕ್ಕುಗಳ ಪುನರ್ ಸ್ವಾಧೀನತೆಗಾಗಿ ಒಂದು ದಾವೆ ಹೂಡಿದನು. ಎರಡನೇ ಪ್ರತಿವಾದಿಯಾದ ಆಕೆಯ ತಂದೆಯು ಆಕೆಯನ್ನು ಕಳುಹಿಸುವಂತೆ ಆದೇಶಿಸಲ್ಪಡಬೇಕು ಮತ್ತು ಎರಡನೇ ಪ್ರತಿವಾದಿಯಾದ ಪತ್ನಿಯು ತನ್ನಲ್ಲಿಗೆ ಮರಳಿ ಬರುವಂತೆ ಆದೇಶಿಸಲ್ಪಡಬೇಕು ಎಂಬುದಾಗಿ ಅವನು ತನ್ನ ದಾವೆಯಲ್ಲಿ ಪ್ರಾರ್ಥಿಸಿದ್ದನು. ಎರಡನೆ ಪ್ರತಿವಾದಿಯಾದ ಸಲಿಮಾಳ ತಂದೆಯು ತನ್ನನ್ನು ಪ್ರತಿವಾದಿಯನ್ನಾಗಿ ಮಾಡಿದ ಬಗ್ಗ ಪ್ರತಿಭಟಿಸಿದನು ಮತ್ತು ತನ್ನ ಮಗಳು ಗಂಡನ ಮನೆಗೆ ಹೋಗುವುದನ್ನು ತಾನು ತಡೆದಿಲ್ಲ ಎಂಬುದಾಗಿ ವಾದಿಸಿದನು. ಮೊದಲನೇ ಪ್ರತಿವಾದಿಯಾದ ಸಲಿಮಾ ಈ ಕೆಳಗಿನ ಪ್ರತಿವಾದಿಗಳನ್ನು ಎತ್ತಿದಳು.

೧) ವಾದಿಯು ತನ್ನನ್ನು ವಿಚ್ಛೇದಿತಗೊಳಿಸಿರುವನಾದುದರಿಂದ ಮತ್ತೊಮ್ಮೆ ಅವನ ಬಳಿ ಹೋಗುವ ಪ್ರಶ್ನೆ ಬರುವದಿಲ್ಲ, ಮತ್ತು

೨) ವಿವಾಹ ವಿಚ್ಛೇದನದ ಹೊರತಾಗಿ, ವಾದಿಯು ಆಕೆಗೆ ಸಂದೇಯವಾಗಿರುವ ಕನ್ಯಾಶುಲ್ಕವನ್ನು ಇನ್ನೂ ಸಂದಾಯ ಮಾಡಿಲ್ಲ. ಆದುದರಿಂದ ಅವನು ಕನ್ಯಾ ಶುಲ್ಕದ ಋಣವನ್ನು ಸಂದಾಯ ಮಾಡುವ ತನಕ ತನ್ನನ್ನು ಮರಳಿಕೊಂಡು ಹೋಗುವ ಪ್ರಶ್ನೆ ಎತ್ತುವಂತಿಲ್ಲ, ಮತ್ತು

೩) ವಾದಿಯು ತನ್ನನ್ನು ಕ್ರೌರ್ಯದಿಂದ ನೋಡಿಕೊಂಡಿದ್ದನು ಮತ್ತು ಅವನ ಸಂಗಡ ಜೀವಿಸಿದರೆ ತನ್ನ ದೇಹಕ್ಕೆ ಗಂಭೀರವಾದ ಕ್ಷತಿಯುಂಟಾಗುವ ಸಂಭವವಿದೆ.

ಆ ಬಳಿಕ ವಾದಿಯು ೨೦-೮-೧೮೮೩ರಂದು ಕನ್ಯಾಶುಲ್ಕದ ಇಡೀ ಮೊಬಲಗನ್ನು ನ್ಯಾಯಾಲಯದಲ್ಲಿ ನಿಕ್ಷೇಪಿಸಿದನು. ಪ್ರತಿವಾದಿಯ ಆರೋಪಗಳು ಸಾಬೀತಾಗಿಲ್ಲವೆಂದು ವಿಚಾರಣಾ ನ್ಯಾಯಾಲಯವು ತೀರ್ಪುಕೊಟ್ಟಿತು. ಇಬ್ಬರೂ

ಪ್ರತಿವಾದಿಗಳು ಮನವಿ ಮಾಡಿದಾಗ ಮಿರ್ಜಾಪುರ್ ಜಿಲ್ಹೆಯ ಜಿಲ್ಲಾ ನ್ಯಾಯಾಲಯವು ಆ ಇಡೀ ಕನ್ಯಾಶುಲ್ಕವನ್ನು ತಕ್ಷಣಿಕ ಕನ್ಯಾಶುಲ್ಕವೆಂದು ನಿರ್ಣಯಿಸಿತು. ವಾದಿಯು ದಾವೆ ಹೂಡಿದ ಬಳಿಕ ಆ ಕನ್ಯಾಶುಲ್ಕವನ್ನು ನ್ಯಾಯಾಲಯದಲ್ಲಿ ನಿಕ್ಷೇಪಿಸಿದುದರಿಂದ ಅದಕ್ಕಿಂತ ಮೊದಲು ಅವನಿಗೆ ದಾವೆ ಹೂಡುವ ವಾದ ಕಾರಣ ವಿದ್ದಿರಲಿಲ್ಲ. ಆದುದರಿಂದ ಈ ನ್ಯಾಯಾಲಯವು ಮನವಿಯನ್ನು ಮಂಜೂರು ಮಾಡಿತು, ವಾದಿಯು ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದನು.

ಮನವಿಯನ್ನು ಅನುಮತಿಸಿ ಅಲಹಾಬಾದ್ ಉಚ್ಚನ್ಯಾಯಾಲಯವು ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು:

ಒಂದು ತಕ್ಷಣಿಕವಾದ ಕನ್ಯಾಶುಲ್ಕವು ಸಂದಾಯವಾಗಿರದಷ್ಟು ಕಾಲ ಪತ್ನಿಯು ತನ್ನ ಪತಿಯೊಂದಿಗೆ ಜೀವಿಸಲು ನಿರಾಕರಿಸಬಹುದು. ಒಂದೊಮ್ಮೆ ಲೈಂಗಿಕ ಸಂಭೋಗವು ಪೂರ್ಣಗೊಂಡ ಬಳಿಕ ಪತಿಯು ವೈವಾಹಿತ ಹಕ್ಕುಗಳ ಪುನರ್ ಸ್ವಾಧೀನತೆಗಾಗಿ ಒಂದು ದಾವೆ ಹೂಡಿದರೆ ಮತ್ತು ಆ ಲೈಂಗಿಕ ಸಂಭೋಗವು ಆಕೆಯ ಸ್ವತಂತ್ರ ಸಮ್ಮತಿಯಿಂದ ನಡೆಯಲ್ಪಟ್ಟುದಾದರೆ ಅಲ್ಲಿ ತತ್‌ಕ್ಷಣಿಕ ಕನ್ಯಾಶುಲ್ಕದ ಪರತ್ತಿನ ಮೇಲೆ ಒಂದು ಡಿಕ್ರಿಯನ್ನು ಮಂಜೂರು ಮಾಡಬೇಕಾಗುತ್ತದೆ. ವಾದಿಯು ಕನ್ಯಾಶುಲ್ಕವನ್ನು ನ್ಯಾಯಾಲಯದಲ್ಲಿ ನಿಕ್ಷೇಪಿಸಿದುದರಿಂದ ಪ್ರತಿವಾದಿಯಾದ ಸಲಿಮಾ ಇವಳು ವಾದಿಯೊಂದಿಗೆ ಸಹವಾಸ ಮಾಡಲು ನಿರಾಕರಿಸುವಂತಿಲ್ಲ. ಆಕೆಯು ಎತ್ತಿದ ಕ್ರೌರ್ಯದ ಪ್ರತಿವಾದದ ಸಂಬಂಧದಲ್ಲಿ ಯಾವತ್ತೂ ಪುರಾವೆ ಇಲ್ಲವಾದುದರಿಂದ ಅದನ್ನು ಕಾನೂನು ಗಮನಿಸುವುದಿಲ್ಲ.

ಕನ್ಯಾ ಶುಲ್ಕದ ಪರಿಕಲ್ಪನೆ (Concept of dower)

ಇಸ್ಲಾಮಿನ ಪರಿಕಲ್ಪನೆಯ ಪ್ರಕಾರ ಕನ್ಯಾಶುಲ್ಕವೆಂದರೆ ಪತಿಯು ಪತ್ನಿಯ ಘನಸ್ಥಿಕೆಯನ್ನು ಅಧಿಸ್ವೀಕಾರ ಮಾಡುವ ಉದ್ದೇಶದಿಂದ ಆಕೆಗೆ ಆತನು ಸಲ್ಲಿಸಬೇಕಾಗಿರುವ ಹಣ ಅಥವಾ ಸ್ವತ್ತಾಗಿರುತ್ತದೆ. ಕನ್ಯಾಶುಲ್ಕವು ವಿವಾಹದ ಕರಾರಿನಲ್ಲಿ ಒಂದು ಪ್ರತಿಫಲವೂ ಅಲ್ಲ ಮತ್ತು ಆಕೆಯು ಲೈಂಗಿಕ ಸಂಭೋಗಕ್ಕೆ ಸಮ್ಮತಿಕೊಟ್ಟ ಬಗ್ಗೆ ಆಕೆಗೆ ಕೊಡಲಾಗುವ ಕೊಡುಗೆಯೂ ಅಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಕನ್ಯಾಶುಲ್ಕವಿಲ್ಲದೆ ಯಾವತ್ತೂ ವಿವಾಹವಾಗುವಂತಿಲ್ಲ. ಒಂದು ವಿವಾಹದಲ್ಲಿ ಪತಿಯು ಪತ್ನಿಗೆ ಒಂದು ಗೌರವದ ರೀತಿಯಲ್ಲಿ ಏನನ್ನಾದರೂ ಸಂದಾಯ ಮಾಡಬೇಕಾಗುತ್ತದೆ, ಮತ್ತು ವಿವಾಹ ಕಾಲದಲ್ಲಿ ಈ ಬಾಧ್ಯತೆಯು ವ್ಯಕ್ತವಾಗಿ ಪ್ರಕಟಿಸಲ್ಪಟ್ಟಿರಬೇಕಾಗಿಲ್ಲ. ಒಂದೊಮ್ಮೆ ಪತ್ನಿಯು ಪತಿಯಿಂದ ಕನ್ಯಾ ಶುಲ್ಕವನ್ನು ಪಡೆಯುವ ಬಗ್ಗೆ ಹಕ್ಕುದಾವೆ ಮಾಡಲಾರಳೆಂಬ ಒಂದು ಒಪ್ಪಂದವಿದ್ದರೂ ಸಹ ಆ ಒಪ್ಪಂದವು ಶೂನ್ಯವೆಂದು ಎಣಿಸಲ್ಪಡುತ್ತದೆ ಮತ್ತು ಅಂತಹ ಒಪ್ಪಂದವು ಇದ್ದಾಗಲೂ ಸಹ ಕನ್ಯಾಶುಲ್ಕಕ್ಕಾಗಿ ಪತ್ನಿಯ ಹಕ್ಕು ಅಸ್ತಿತ್ವದಲ್ಲಿರುತ್ತದೆ. ಮುಲ್ಲಾರವರು ಕನ್ಯಾ ಶುಲ್ಕವನ್ನು ವಿವಾಹ ಕರಾರಿನ ಪ್ರತಿಫಲವೆಂದು ಪರಿಭಾಷಿಸಿರುವರು.

ಕಲ್ಕತ್ತಾ ಉಚ್ಚ ನ್ಯಾಯಾಲಯವು ಕೊಟ್ಟಿರುವ ಒಂದು ತೀರ್ಪಿನ ಪ್ರಕಾರ ಮುಸ್ಲಿಂ ವಿವಾಹವು ಒಂದು ವಿಕ್ರಯದ ಕರಾರಿನ ರೀತಿಯಲ್ಲಿರುತ್ತದೆ. ಅದರಲ್ಲಿ ಪತ್ನಿಯು ಒಂದು ಸ್ವತ್ತಾಗಿರುವಳು ಮತ್ತು ಕನ್ಯಾಶುಲ್ಕವು ಆ ಸ್ವತ್ತಿನ ಬೆಲೆಯಾಗಿರುತ್ತದೆ. ಈ ರೀತಿಯ ಅಭಿಪ್ರಾಯಕ್ಕೆ ಕಾರಣವೇನೆಂದರೆ ಮುಸ್ಲಿಮ್ ವಿವಾಹವು ಒಂದು ದಿವಾನೀ ಕರಾರಾಗಿರುತ್ತದೆ ಮತ್ತು ಪ್ರತಿಯೊಂದು ಕರಾರಿನಲ್ಲಿ ಒಂದು ಪ್ರತಿಫಲದ ಅವಶ್ಯಕತೆಯಿರುತ್ತದೆ; ಕನ್ಯಾಶುಲ್ಕವು ವಿವಾಹದ ಕರಾರಿನಲ್ಲಿ ಈ ಪ್ರತಿಫಲದ ಅವಶ್ಯಕತೆಯನ್ನು ಪೂರೈಸುತ್ತದೆ. ಮುಸ್ಲಿಮ್ ನ್ಯಾಯಶಾಸ್ತ್ರದ ಪ್ರಕಾರ ಕನ್ಯಾ ಶುಲ್ಕದ ಉದ್ದೇಶವು ಪತಿಯು ಪತ್ನಿಯ ಘನಸ್ಥಿಕೆಯ ಸಭ್ಯತೆಯನ್ನು ಸ್ವೀಕರಿಸುವ ಒಂದು ರೀತಿಯಾಗಿರುತ್ತದೆ. ಆದರೆ ಕನ್ಯಾಶುಲ್ಕದ ವ್ಯವಹಾರಿಕ ಉದ್ದೇಶವು ಎರಡು ರೀತಿಯದ್ದಾಗಿರುತ್ತದೆ. ಮೊದಲನೆಯದಾಗಿ, ಕನ್ಯಾಶುಲ್ಕವು ಒಂದು ಪ್ರತಿಫಲವಾಗಿದ್ದು ಅದು ಪತಿಯಿಂದ ಪತ್ನಿಯ ಪರವಾಗಿ ಆಕೆಯ ಏಕಮೇವ ಮತ್ತು ಆಕೆಯದ್ದೇ ಸ್ವಂತ ಪ್ರಯೋಜನ ಮತ್ತು ಉಪಯೋಗಕ್ಕೋಸ್ಕರ ಕೊಡಲ್ಪಡುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅದು ವಿವಾಹದ ಪರ್ಯಾವಸಾನ ಅಥವಾ ಇತರ ಯಾವುದಾದರೊಂದು ವಿಪತ್ಕಾಲದಲ್ಲಿ ಪತ್ನಿಯ ರಕ್ಷಣೆಗಾಗಿ ಮಾಡಲಾಗುವ ಒಂದು ಉಪಬಂಧವಾಗಿರುತ್ತದೆ. ಎರಡನೆಯದಾಗಿ ಪತಿಯಲ್ಲಿ ನಿಹಿತವಾಗಿರುವ ತಲಾಕ್ ಇವರ ಅನಿಯಂತ್ರಿತ ಹಕ್ಕನ್ನು ಇದು ನಿಯಂತ್ರಿಸುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ವಿಳಂಬಿತ ಕನ್ಯಾ ಶುಲ್ಕವನ್ನು ಒಂದು ಅವಧಿಯು ಪರ್ಯಾವಸಾನವಾದಾಗ ಸಂದಾಯ ಮಾಡಬೇಕಾಗುತ್ತದೆ. ಆದುದರಿಂದ ಪತಿಯು ತಲಾಕ್ ಕೊಡುವುದಕ್ಕಿಂತ ಮೊದಲು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈ ಎರಡು ಉದ್ದೇಶಗಳನ್ನು ಕನ್ಯಾಶುಲ್ಕದ ವ್ಯವಹಾರಿಕ ಸ್ವರೂಪಗಳೆಂದು ಎಣಿಸಬಹುದು. ಆದರೆ ಮುಸ್ಲಿಮ್ ಕಾನೂನಿನ ಪ್ರಕಾರ ಕನ್ಯಾಶುಲ್ಕವು ಒಂದು ವಿವಾಹದ ಮೂಲಭೂತ ಸ್ವರೂಪವಾಗಿದ್ದು ಇದು ಪತ್ನಿಯ ಪ್ರತಿ ಪತಿಯ ಗೌರವದ ಸಂಕೇತವಾಗಿರುತ್ತದೆ.

ಕನ್ಯಾ ಶುಲ್ಕದ ಪ್ರಕಾರಗಳು (Kinds of dower)

ಮುಸ್ಲಿಮ್ ಕಾನೂನು ಕನ್ಯಾ ಶುಲ್ಕವನ್ನು ಎರಡು ವರ್ಗಗಳಲ್ಲಿ ವಿಂಗಡಿಸಿದೆ. ಅವಾವುವೆಂದರೆ— ೧) ಅನಿರ್ದಿಷ್ಟವಾದ ಕನ್ಯಾ ಶುಲ್ಕ ಮತ್ತು ೨) ನಿರ್ದಿಷ್ಟವಾದ ಕನ್ಯಾಶುಲ್ಕ.

ಅನಿರ್ದಿಷ್ಟವಾದ ಕನ್ಯಾಶುಲ್ಕ (Mahr-i-Misl)

ಒಂದೊಮ್ಮೆ ವಿವಾಹ ಕಾಲದಲ್ಲಿ ಕನ್ಯಾಶುಲ್ಕದ ಮೊಬಲಗು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ ಕನ್ಯಾಶುಲ್ಕವು ಅಸ್ತಿತ್ವದಲ್ಲಿರುತ್ತದೆ. ಒಂದೊಮ್ಮೆ ಒಂದು ಕನ್ಯಾಶುಲ್ಕವು ವಿವಾಹ ಕಾಲದಲ್ಲಿ ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ ಸರಿಯಾದ ಕನ್ಯಾಶುಲ್ಕವನ್ನು ನ್ಯಾಯಾಲಯದ ಮುಖಾಂತರ ನಿಗದಿಗೊಳಿಸಿಕೊಳ್ಳಲು

ಪತ್ನಿಯು ಹಕ್ಕುದಾರಳಾಗುವಳು. ಕನ್ಯಾಶುಲ್ಕವು ಪ್ರತಿಯೊಂದು ಮುಸ್ಲಿಮ್ ವಿವಾಹದ ಒಂದು ಅವಿಚ್ಛಿನ್ನವಾದ ಭಾಗವಾಗಿರುತ್ತದೆ. ಮತ್ತು ಅದನ್ನು ವಿವಾಹ ಕಾಲದಲ್ಲಿ ಅಥವಾ ಅದರ ಬಳಿಕ ಪಕ್ಷಗಾರರು ನಿಗದಿಗೊಳಿಸಬೇಕಾಗುತ್ತದೆ. ಆದರೆ ಒಂದೊಮ್ಮೆ ಪಕ್ಷಗಾರರು ನಿರ್ಲಕ್ಷದಿಂದ ಅಥವಾ ಉದ್ದೇಶಪೂರ್ವಕವಾಗಿ ಕನ್ಯಾಶುಲ್ಕದ ಮೊಬಲಗನ್ನು ನಿರ್ದಿಷ್ಟಗೊಳಿಸಿಲ್ಲವೆಂದಾದರೆ ಕಾನೂನಿನ ಕಾರ್ಯಾಚರಣೆಗಾಗಿ ಒಂದು ಸರಿಯಾದ ಮೊಬಲಗು ನಿರ್ಣಯಿಸಲಾಗುತ್ತದೆ.

ಯಾವುದೇ ಒಂದು ನಿರ್ದಿಷ್ಟವಾದ ಮೊಬಲಗು ಸರಿಯಾದ ಕನ್ಯಾಶುಲ್ಕವೆಂದು ಎಲ್ಲಾ ಪ್ರಕರಣಗಳಿಗೆ ಅನ್ವಯಿಸಲಾಗುವುದಿಲ್ಲ. ಸರಿಯಾದ ಕನ್ಯಾಶುಲ್ಕದ ಮೊಬಲಗು ಪ್ರಕರಣದಿಂದ ಪ್ರಕರಣಕ್ಕೆ ಭಿನ್ನವಾಗುತ್ತದೆ. ಆದರೆ ಒಂದು ಸರಿಯಾದ ಕನ್ಯಾಶುಲ್ಕವನ್ನು ಖಾತರಿಪಡಿಸುವ ಸಿದ್ಧಾಂತಗಳು ನಿಶ್ಚಿತವಾಗಿರುತ್ತವೆ. ಒಂದು ಸರಿಯಾದ ಕನ್ಯಾಶುಲ್ಕವನ್ನು ನಿಗದಿಗೊಳಿಸಬೇಕಾದರೆ ಕಾನೂನಿನ ಈ ಕೆಳಗಿನ ಸಿದ್ಧಾಂತಗಳನ್ನು ಗಮನಿಸಬೇಕಾಗುತ್ತದೆ:

೧) ಪತ್ನಿಯ ವೈಯಕ್ತಿಕ ಅರ್ಹತೆಗಳು.

೨) ಪತ್ನಿಯ ಪಿತನ ಸಾಮಾಜಿಕ ಪ್ರಾಸ್ಥಿತಿ.

೩) ಕನ್ಯಾಶುಲ್ಕದ ಮೊಬಲಗಿನ ಸಂಬಂಧದಲ್ಲಿ ಪತ್ನಿಯ ಪೈತ್ರಿಕ ಕುಟುಂಬದಲ್ಲಿ ಬಳಕೆಯಲ್ಲಿದ್ದಿರುವ ರೂಢಿ.

ಹೆದಾಯ ಇದರ ಪ್ರಕಾರ ಪತ್ನಿಯ ಪೈತ್ರಿಕ ಕುಟುಂಬದಲ್ಲಿ ವಾಡಿಕೆಯಲ್ಲಿರುವ ಕನ್ಯಾಶುಲ್ಕದ ನಿದರ್ಶನಗಳನ್ನು ಗಮನಿಸುವಾಗ ಪತ್ನಿಯ ವಯಸ್ಸು, ಸೌಂದರ್ಯ, ಸಂಪತ್ತು, ತಿಳುವಳಿಕೆ ಮತ್ತು ಸದ್ಗುಣ ಇವುಗಳಿಗೆ ಗಮನ ಕೊಡಬೇಕಾಗುತ್ತದೆ. ಸರಿಯಾದ ಕನ್ಯಾಶುಲ್ಕವನ್ನು ಖಾತರಿಪಡಿಸುವಾಗ ಪತ್ನಿಯ ತಾಯಿಯ ವಿವಾಹ ಕಾಲದಲ್ಲಿ ನಿರ್ಣಯಿಸಲಾದ ಕನ್ಯಾಶುಲ್ಕ ಅಥವಾ ತಾಯಿಯ ಕುಟುಂಬದ ಇತರ ಹೆಣ್ಣುಮಕ್ಕಳ ಕನ್ಯಾಶುಲ್ಕ ಇವುಗಳನ್ನು ಗಮನಿಸಬೇಕಾಗಿಲ್ಲ. ಇದೇ ರೀತಿಯಲ್ಲಿ ಪತಿಯ ಪ್ರಾಸ್ಥಿತಿ ಮತ್ತು ಆರ್ಥಿಕ ಸ್ಥಿತಿ ಇವನ್ನು ಗಮನದಲ್ಲಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಇಂತಹ ಕನ್ಯಾಶುಲ್ಕದ ಮೊಬಲಗನ್ನು ನಿರ್ಣಯಿಸಲು ಪತ್ನಿಯ ಪೈತ್ರಿಕ ಕುಟುಂಬದಲ್ಲಿ ಬಳಕೆಯಲ್ಲಿದ್ದಿರುವ ರೂಢಿಯು ಮಹತ್ವದ್ದಾಗಿರುತ್ತದೆ. ಆದುದರಿಂದ ಸರಿಯಾದ ಕನ್ಯಾಶುಲ್ಕವನ್ನು ಕೆಲವೊಮ್ಮೆ ರೂಢಿಗತ ಕನ್ಯಾಶುಲ್ಕವೆಂದು ಕರೆಯುವುದೂ ಇದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಮೇರೆಗೆ ಸರಿಯಾದ ಕನ್ಯಾಶುಲ್ಕವು ೫೦೦ ದಿಲ್‌ಹ್ಯಾಮ್‌ಗಳನ್ನು ಮೀರಬಾರದು. ಹಾಗೆಂದರೆ ಶಿಯಾ ಕಾನೂನಿನ ಮೇರೆಗೆ ನಿಗದಿಗೊಳಿಸಲಾಗುವ ಸರಿಯಾದ ಕನ್ಯಾಶುಲ್ಕವು ೫೦೦ ದಿಲ್‌ಹ್ಯಾಮ್‌ಗಳನ್ನು ಮೀರಿರಬಾರದು.

ಪೈಗಂಬರನ ಮಗಳಾದ ಫಾತಿಮಾ ಇವಳ ವಿವಾಹದಲ್ಲಿ ೫೦೦ ದಿಲ್‌ಹ್ಯಾಮ್‌ಗಳ ಮೊಬಲಗು ನಿಗದಿಗೊಳಿಸಲ್ಪಟ್ಟಿತ್ತು. ಆ ಬಳಿಕ ಶಿಯಾ ಸಮಾಜದೊಳಗೆ ೫೦೦ ದಿಲ್‌ಹ್ಯಾಮ್‌ಗಳ ಕನ್ಯಾಶುಲ್ಕವು ಗರಿಷ್ಠ ಕನ್ಯಾಶುಲ್ಕವೆಂದು ರೂಢಿಯಿಂದ ಸ್ವೀಕರಿಸಲಾಯಿತು. ಆದುದರಿಂದ ಶಿಯಾ ಕಾನೂನಿನ ಪ್ರಕಾರ ಕನ್ಯಾಶುಲ್ಕಗಳಲ್ಲಿ ಮೂರು ಪ್ರಕಾರಗಳಿವೆ:

೧) ಮೆಹರ್-ಐ-ಮಿಸನ್ (Mahr-I-Misn),

೨) ಮೆಹರ್-ಐ-ಮುಸಮ್ಮಾ (Mahr-I-Musamma) ಮತ್ತು

೩) ಮೆಹರ್-ಐ-ಸುವನ್ನಾತ (೫೦೦ ದಿಲ್‌ಹ್ಯಾಮ್‌ಗಳು) (Mahr-I. Suwannat)

ನಿರ್ದಿಷ್ಟವಾದ ಕನ್ಯಾಶುಲ್ಕ (Mahr-I. Musamma)

ವಿವಾಹ ಕಾಲದಲ್ಲಿ ನಿರ್ಣಯಿಸಲಾದ ಹಣದ ಮೊಬಲಗು ಅಥವಾ ಯಾವುದಾದರೊಂದು ಸ್ವತ್ತು ಇದನ್ನು ನಿರ್ದಿಷ್ಟವಾದ ಕನ್ಯಾಶುಲ್ಕವೆಂದು ಕರೆಯಲಾಗುತ್ತದೆ. ಒಂದು ಕನ್ಯಾಶುಲ್ಕವು ವಿವಾಹಕ್ಕಿಂತ ಮೊದಲು, ವಿವಾಹಕಾಲದಲ್ಲಿ ಅಥವಾ ವಿವಾಹವು ಮುಕ್ತಾಯವಾದ ಬಳಿಕ ನಿಗದಿಗೊಳಿಸಲ್ಪಡಬಹುದು. ಒಂದು ಕನ್ಯಾಶುಲ್ಕವು ಮೌಖಿಕವಾಗಿ ಅಥವಾ ಒಂದು ಲಿಖಿತ ಒಪ್ಪಂದದ (Mahar Nama) ಮೇರೆಗೆ ನಿಗದಿಗೊಳಿಸಲ್ಪಡಬಹುದು; ಕೆಲವೊಮ್ಮೆ ಆ ಮೊಬಲಗನ್ನು ವಿವಾಹದ ಕರಾರಿನಲ್ಲಿ ಕೇವಲ ನಿರ್ದೇಶಗೊಳಿಸಲಾಗಿರಬಹುದು.

ಕನ್ಯಾಶುಲ್ಕವು ಸಂರಕ್ಷಕನಿಂದ ನಿಗದಿಗೊಳಿಸಲ್ಪಡಬಹುದು (Dower may be fined by Guardian)

ವಿವಾಹದ ಪಕ್ಷಗಾರರು ಚಿತ್ತ ಸ್ವಾಸ್ಥ್ಯವುಳ್ಳವರಾಗಿದ್ದರೆ ಮತ್ತು ತಾರುಣ್ಯಾವಸ್ಥೆಯನ್ನು ಸೇರಿದರೆ ಅವರು ತಮ್ಮ ಕನ್ಯಾಶುಲ್ಕದ ಮೊಬಲಗನ್ನು ನಿರ್ಣಯಿಸಲು ಸಕ್ಷಮರಾಗಿರುವರು. ಒಂದೊಮ್ಮೆ ಒಬ್ಬ ಅಲ್ಪವಯಿಯ ಅಥವಾ ಚಿತ್ತವಿಕಲ ಹುಡುಗನ ವಿವಾಹವು ಅಂಥವನ ತಂದೆಯಿಂದ ಅಥವಾ ಸಂರಕ್ಷಕನಿಂದ ಕರಾರುಗೊಳಿಸಲ್ಪಟ್ಟಿದ್ದರೆ ಅಂತಹ ಸಂರಕ್ಷಕನು ವಿವಾಹ ಕಾಲದಲ್ಲಿ ಕನ್ಯಾಶುಲ್ಕದ ಮೊಬಲಗನ್ನು ನಿಗದಿಗೊಳಿಸಬಹುದು. ತಂದೆಯಿಂದ ಅಥವಾ ಸಂರಕ್ಷಕನಿಂದ ನಿಗದಿಗೊಳಿಸಲ್ಪಟ್ಟ ಕನ್ಯಾಶುಲ್ಕವು ಆ ಹುಡುಗನನ್ನು ಬಾಧ್ಯಗೊಳಿಸಿದರೆ ಅವನು ತಾರುಣ್ಯಾವಸ್ಥೆಗೆ ತಲುಪಿದ ಬಳಿಕ ಅದನ್ನು ಅಲ್ಲಗಳೆಯುವಂತಿಲ್ಲ. ಒಂದು ವಿವಾಹವು ಅಲ್ಪವಯಿಯ ತಂದೆ ಅಥವಾ ಸಂರಕ್ಷಕನಿಂದ ಕರಾರುಗೊಳಿಸಲ್ಪಟ್ಟಿದ್ದರೆ ಮತ್ತು ಆ ಹುಡುಗನು ಇನ್ನೂ ಅಲ್ಪವಯಿ ಅಥವಾ ಚಿತ್ತವಿಕಲನಾಗಿದ್ದರೆ ವಿವಾಹದ ಬಳಿಕವೂ ತಂದೆ ಅಥವಾ ಸಂರಕ್ಷನು ವಿವಾಹದ ಶುಲ್ಕವನ್ನು ನಿರ್ದಿಷ್ಟಗೊಳಿಸಬಹುದು. ಒಂದೊಮ್ಮೆ ಸಂರಕ್ಷಕನು ಅಥವಾ ಯಾವನಾದರೊಬ್ಬ ವ್ಯಕ್ತಿಯು

ಕನ್ಯಾಶುಲ್ಕದ ಸಂದಾಯದ ಬಗ್ಗೆ ಖಾತರಿ ಕೊಟ್ಟು ಅವನು ಒಬ್ಬ ಜಾಮೀನುದಾರನಾದರೆ ಮತ್ತು ಗಂಡನಿಂದ ಈ ಬಗ್ಗೆ ಉಲ್ಲಂಘನೆಯಾದರೆ ಅವನು ಹಣವನ್ನು ಹೆಂಡತಿಗೆ ಸಂದಾಯ ಮಾಡಲು ಬಾಧ್ಯನಾಗುವನು.

ಒಂದು ಕನ್ಯಾಶುಲ್ಕವಾಗಿ ಏನನ್ನು ನಿಗದಿಗೊಳಿಸಬಹುದು
(What may be Settled as dower ?)

ಬೆಲೆಯುಳ್ಳ ಯಾವುದೇ ಒಂದು ವಸ್ತುವನ್ನು ಕನ್ಯಾಶುಲ್ಕವೆಂಬುದಾಗಿ ನಿರ್ಣಯಿಸಬಹುದು. ಅದು ಒಂದು ಹಣದ ಮೊಬಲಗಾಗಿರಬಹುದು ಅಥವಾ ಒಂದು ನಿರ್ದಿಷ್ಟವಾದ ಸ್ವತ್ತು. ಒಂದೊಮ್ಮೆ ಒಂದು ಸ್ವತ್ತನ್ನು ಕನ್ಯಾಶುಲ್ಕವೆಂದು ನಿರ್ದಿಷ್ಟಗೊಳಿಸಲಾದರೆ ಆ ಸ್ವತ್ತು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದುದಾಗಿರಬೇಕು ಮತ್ತು ಅದು ನಿಶ್ಚಿತವಾಗಿರಬೇಕು. ಆ ಇಸ್ಲಾಮಿಕವಾಗಿರುವ ಯಾವುದಾದರೊಂದು ಸ್ವತ್ತನ್ನು ಯಾವುದೇ ಒಂದು ವಿವಾಹದಲ್ಲಿ ಒಂದು ಕನ್ಯಾಶುಲ್ಕವೆಂದು ನಿಗದಿಗೊಳಿಸುವಂತಿಲ್ಲ. ಉದಾಹರಣೆಗಾಗಿ, ಶರಾಬು ಆ ಇಸ್ಲಾಮಿಕವಾಗಿರುತ್ತದೆ. ಒಂದೊಮ್ಮೆ ಒಂದು ಆ ಇಸ್ಲಾಮಿಕ ಸ್ವತ್ತನ್ನು ಕನ್ಯಾಶುಲ್ಕವೆಂದು ನಿಗದಿಗೊಳಿಸಿದರೆ ಅದೊಂದು ಕನ್ಯಾಶುಲ್ಕವಾಗುವುದಿಲ್ಲ ಹಾಗೂ ಪತ್ನಿಯು ಒಂದು ಸರಿಯಾದ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು. ಒಂದೊಮ್ಮೆ ಒಂದು ಕನ್ಯಾಶುಲ್ಕವು ಕೆಲವು ಸ್ವತ್ತುಗಳಿಂದ ಕೂಡಿಕೊಂಡಿದ್ದರೆ ಮತ್ತು ಅವುಗಳಲ್ಲಿ ಕೆಲವು ಕಾನೂನುಬದ್ಧ ಮತ್ತು ಇನ್ನು ಕೆಲವು ಕಾನೂನುಬಾಹಿರ ಅಥವಾ ಆ ಇಸ್ಲಾಮಿಕವಾಗಿದ್ದರೆ ಅಲ್ಲಿ ಕೇವಲ ಕಾನೂನುಬದ್ಧ ಸ್ವತ್ತನ್ನು ಕನ್ಯಾಶುಲ್ಕವೆಂದು ಎಣಿಸಲಾಗುತ್ತದೆ. ಅದರೊಳಗಿನ ಕಾನೂನುಬಾಹಿರ ಭಾಗವನ್ನು ಕಿತ್ತುಹಾಕಲಾಗುತ್ತದೆ ಮತ್ತು ಮುಸಲ್ಮಾನರಿಗೆ ಅದು ಕಾನೂನಿನ ದೃಷ್ಟಿಯಲ್ಲಿ ಯಾವುದೇ ರೀತಿಯ ಮೌಲ್ಯವುಳ್ಳದ್ದಾಗಿರುವುದಿಲ್ಲ. ಭಾಡಿಗೆಗಳು, ಲಾಭಗಳು ಅಥವಾ ಇತರ ಒಂದು ಸ್ವತ್ತಿನಲ್ಲಿರುವ ಇತರ ಪ್ರಯೋಜಕ ಹಿತಸಂಬಂಧಗಳು ಒಂದು ಕನ್ಯಾಶುಲ್ಕವೆಂಬುದಾಗಿ ನಿರ್ಣಯಿಸಲ್ಪಡಬಹುದು. ಪತಿಯು ಪತ್ನಿಗೆ ಸಲ್ಲಿಸುವ ಅಥವಾ ಸಲ್ಲಿಸುವ ಬಗ್ಗೆ ವಚನ ಕೊಟ್ಟಿರುವ ವೈಯಕ್ತಿಕ ಸೇವೆಯು ಸುನ್ನಿ ಕಾನೂನಿನ ಪ್ರಕಾರ ಒಂದು ಕನ್ಯಾಶುಲ್ಕವಾಗುವುದಿಲ್ಲ. ಆದರೆ ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಪತಿಯು ಪತ್ನಿಗೆ ಒಂದು ನಿರ್ದಿಷ್ಟವಾದ ಕಾಲಾವಧಿಗೆ ಯಾವುದಾದರೊಂದು ವೈಯಕ್ತಿಕ ಸೇವೆ ಮಾಡುವನೆಂದಾದರೆ ಆ ವೈಯಕ್ತಿಕ ಸೇವೆಯನ್ನು ಒಂದು ಕನ್ಯಾಶುಲ್ಕವೆಂದು ಎಣಿಸಬಹುದು.

ಕನ್ಯಾ ಶುಲ್ಕದ ಮೊಬಲಗು (Amount of Dower)

ಹಣದ ಯಾವತ್ತೂ ಮೊಬಲಗು ಅಥವಾ ಯಾವುದೇ ಒಂದು ಮೌಲ್ಯದ ಒಂದು ಸ್ವತ್ತು ಇದನ್ನು ಒಂದು ಕನ್ಯಾಶುಲ್ಕವೆಂದು ನಿಗದಿಗೊಳಿಸಬಹುದು. ಈ

ಬಗ್ಗೆ ಯಾವುದೇ ಒಂದು ಗರಿಷ್ಠ ಮಿತಿಯಿಲ್ಲ. ಮುಸಲ್ಮಾನರೊಳಗೆ ವಾಡಿಕೆಯಲ್ಲಿರುವ ಒಂದು ವ್ಯವಹಾರವು ಹೇಗಿದೆಯೆಂದರೆ ಒಂದು ದೊಡ್ಡದಾದ ಮೊಬಲಗನ್ನು ಅವರು ನಿರ್ದಿಷ್ಟವಾದ ಕನ್ಯಾಶುಲ್ಕವೆಂಬುದಾಗಿ ನಿರ್ಣಯಿಸುವರು. ಇದು ತಲಾಕ್ ಕೊಡುವಿಕೆಯನ್ನು ತಡೆಯುವ ಉದ್ದೇಶದಿಂದ ಮಾಡಲಾಗುತ್ತದೆ. ಕನ್ಯಾಶುಲ್ಕದ ಅತಿಯಾದ ಒಂದು ಮೊಬಲಗು ವಿವಾಹ ವಿಚ್ಛೇದನೆ ಕೊಡುವ ಹಕ್ಕಿನ ಮೇಲೆ ಒಂದು ನಿಯಂತ್ರಣವಾಗಿ ಕಾರ್ಯಾಚರಣೆಗೆ ಬರುತ್ತದೆ. ಸುನ್ನೀ ಕಾನೂನಿನ ಮೇರೆಗೆ ಕನಿಷ್ಠ ನಿರ್ದಿಷ್ಟವಾದ ಕನ್ಯಾಶುಲ್ಕವು ೧೦ ದಿಲ್‌ಹ್ಯಾಮ್‌ಗಳು. ಶಿಯಾ ಕಾನೂನಿನ ಪ್ರಕಾರ ಒಂದು ಗರಿಷ್ಠ ಮೊಬಲಗು ಯಾವುದೆಂದು ಹೇಳಲಾಗಿಲ್ಲ.

ಆ ಮೊಬಲಗನ್ನು ಬದಲಾಯಿಸುವ ಬಗ್ಗೆ ತದನಂತರದ ಒಪ್ಪಂದ (Subsequent Agreement to change the amount)

ವಿವಾಹ ಕಾಲದಲ್ಲಿ ನಿಗದಿಗೊಳಿಸಲಾದ ಕನ್ಯಾ ಶುಲ್ಕದ ಮೊಬಲಗನ್ನು ಹೆಚ್ಚಿಸುವ ಬಗ್ಗೆ ವಿವಾಹದ ಬಳಿಕ ಪತಿ ಪತ್ನಿಯರು ಯಾವುದೇ ಕಾಲದಲ್ಲಿ ಒಂದು ಕಾನೂನುಬದ್ಧವಾದ ಒಪ್ಪಂದವನ್ನು ಮಾಡಿಕೊಳ್ಳಬಹುದು. ಆದರೆ ಒಂದು ಕನ್ಯಾ ಶುಲ್ಕದ ಮೊಬಲಗನ್ನು ಕಡಿಮೆಗೊಳಿಸುವ ಬಗ್ಗೆ ಅವರೊಳಗೆ ಒಂದು ಒಪ್ಪಂದವಾದರೆ ಅದು ಶೂನ್ಯವಾಗಿರುತ್ತದೆ ಮತ್ತು ಅದನ್ನು ಜಾರಿಗೊಳಿಸುವಂತಿಲ್ಲ. ಆದುದರಿಂದ ವಿವಾಹ ಕಾಲದಲ್ಲಿ ಒಂದು ನಿರ್ದಿಷ್ಟಗೊಳಿಸಲಾದ ಕನ್ಯಾಶುಲ್ಕವನ್ನು ವಿವಾಹದ ಬಳಿಕ ಹೆಚ್ಚಿಸಬಹುದು. ಆದರೆ ಅದನ್ನು ಕಡಿಮೆಗೊಳಿಸುವಂತಿಲ್ಲ.

ತತ್‌ಕ್ಷಣಿಕ ಕನ್ಯಾಶುಲ್ಕ (Prompt Dower)

ಒಂದು ನಿರ್ದಿಷ್ಟ ಕನ್ಯಾಶುಲ್ಕವು ತತ್‌ಕ್ಷಣಿಕವಾಗಿರಬಹುದು ಅಥವಾ ವಿಳಂಬಿತ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ಕನ್ಯಾಶುಲ್ಕದ ಒಂದು ಭಾಗವನ್ನು ತತ್‌ಕ್ಷಣಿಕ ಹಾಗೂ ಉಳಿದುದನ್ನು ವಿಳಂಬಿತ ಕನ್ಯಾಶುಲ್ಕವೆಂದು ನಿಗದಿಗೊಳಿಸಲಾಗುತ್ತದೆ. ಒಂದೊಮ್ಮೆ ನಿಗದಿತ ಕನ್ಯಾಶುಲ್ಕವು ತತ್‌ಕ್ಷಣಿಕವಾದರೆ;

೧) ಪತ್ನಿಯು ಆ ಮೊಬಲಗನ್ನು ಯಾವುದೇ ಕಾಲದಲ್ಲಿ ಕೇಳಬಹುದು.

೨) ಪತ್ನಿಯು ಕೇಳಿದಾಗ ಪತಿಯು ಅದನ್ನು ಆಗಿಂದಾಗ ಸಂದಾಯ ಮಾಡಬೇಕಾಗುತ್ತದೆ. ಒಂದೊಮ್ಮೆ ಅದನ್ನು ಸಂದಾಯ ಮಾಡಲು ವಿಳಂಬವಾದರೆ ಪತ್ನಿಯು ಆ ವಿಳಂಬಿತ ಕಾಲಾವಧಿಗಾಗಿ ಬಡ್ಡಿಯನ್ನು ವಸೂಲು ಮಾಡಲು ಹಕ್ಕುಳ್ಳವಳಾಗುವಳು.

೩) ಆಕೆಯು ಕೇಳಿದಾಗ ಗಂಡನು ತತ್‌ಕ್ಷಣಿಕ ಕನ್ಯಾಶುಲ್ಕವನ್ನು ಸಂದಾಯ ಮಾಡಲು ವಿಫಲನಾದರೆ ಆಕೆಯು ವಿವಾಹವನ್ನು ಪೂರ್ಣಗೊಳಿಸಲು ನಿರಾಕರಿಸಬಹುದು. ಪತ್ನಿಯು ವಿವಾಹವಾದ ತತ್‌ಕ್ಷಣದಲ್ಲಿ ಈ ತತ್‌ಕ್ಷಣಿಕ ಕನ್ಯಾ ಶುಲ್ಕವನ್ನು ಕೇಳಬೇಕೆಂಬುದೇನೂ ಕಡ್ಡಾಯವಲ್ಲ: ಅವಳು ವಿವಾಹದ ಬಳಿಕ ಯಾವುದೇ

ಕಾಲದಲ್ಲಿ ಅದನ್ನು ಕೇಳಬಹುದು. ಒಂದು ಕನ್ಯಾಶುಲ್ಕವು ತಡವಾಗಿ ಕೇಳಲ್ಪಟ್ಟಿದೆ ಯೆಂಬ ಕಾರಣಕ್ಕಾಗಿ ಅದು ಒಂದು ವಿಳಂಬಿತ ಕನ್ಯಾಶುಲ್ಕವೆಂದು ಎಣಿಸಲ್ಪಡುವುದು.

ವಿಳಂಬಿತ ಕನ್ಯಾಶುಲ್ಕ (Deferred Dower)

ಒಂದು ವಿಳಂಬಿತ ಕನ್ಯಾಶುಲ್ಕವು, (೧) ವಿವಾಹವು ವಿಘಟಿತವಾದಾಗ ಅಥವಾ (೨) ಒಂದೊಮ್ಮೆ ಒಂದು ನಿರ್ದಿಷ್ಟವಾದ ಘಟನೆಯು ಘಟಿಸುವಿಕೆಯ ಬಳಿಕ ಅದನ್ನು ಸಂದಾಯ ಮಾಡಬೇಕೆಂದು ಅವಳು ಒಪ್ಪಿಕೊಂಡಿದ್ದರೆ ಆ ಘಟನೆಯು ಘಟಿಸುವಿಕೆಯ ಬಳಿಕ ಅದು ಸಂದೇಯವಾಗುತ್ತದೆ. ಒಂದೊಮ್ಮೆ ಒಂದು ನಿರ್ದಿಷ್ಟವಾದ ಕನ್ಯಾಶುಲ್ಕವು ವಿಳಂಬಿತ ಕನ್ಯಾಶುಲ್ಕವೆಂಬುದಾಗಿ ನಿಗದಿತಗೊಳಿಸಲ್ಪಟ್ಟಿದ್ದರೆ ಅಲ್ಲಿ ಆ ವಿವಾಹವು ವಿಚ್ಛೇದನೆಯಿಂದ ಅಥವಾ ಪತಿಯ ಮರಣದಿಂದ ಪರ್ಯವಸಾನಗೊಳ್ಳುವದಕ್ಕಿಂತ ಮೊದಲು ಪತ್ನಿಯು ಅದಕ್ಕಾಗಿ ಹಕ್ಕುದಾವೆ ಮಾಡುವಂತಿಲ್ಲ. ಪತ್ನಿಯ ಮರಣದಿಂದಲೂ ಸಹ ಒಂದು ವಿವಾಹವು ವಿಘಟಿತವಾಗಿರುತ್ತದೆ. ಆದುದರಿಂದ ಇಂತಹ ಒಂದು ಪ್ರಕರಣದಲ್ಲಿ ಆಕೆಯ ಕಾನೂನೀ ವಾರಸುದಾರರು ಆ ವಿಳಂಬಿತ ಕನ್ಯಾಶುಲ್ಕಕ್ಕಾಗಿ ಹಕ್ಕುದಾವೆ ಮಾಡಲು ಹಕ್ಕುಳ್ಳವರಾಗಿರುವರು. ಎರಡನೆಯದಾಗಿ, ಒಂದೊಮ್ಮೆ ಒಂದು ಘಟನೆಯ ಘಟಿಸುವಿಕೆಯ ಮೇಲೆ ಆ ಕನ್ಯಾಶುಲ್ಕವು ಸಂದೇಯವಾಗತಕ್ಕುದೆಂದು ಪತಿಪತ್ನಿಯರೊಳಗೆ ಒಂದು ಒಪ್ಪಂದವಾಗಿದ್ದರೆ ಅಲ್ಲಿ ಆ ಘಟನೆಯು ಘಟಿಸಲ್ಪಡುವ ತನಕ ಪತ್ನಿಯು ಆ ಕನ್ಯಾಶುಲ್ಕಕ್ಕಾಗಿ ಹಕ್ಕುದಾವೆ ಮಾಡುವಂತಿಲ್ಲ. ಆದರೆ ಒಂದೊಮ್ಮೆ ಅವರೊಳಗೆ ಯಾರಾದರೂ ಮೃತಪಟ್ಟರೆ ಮತ್ತು ಆ ನಿಗದಿಗೊಳಿಸಲಾದ ಒಂದು ಘಟನೆಯು ಇನ್ನೂ ಘಟಿಸಿಲ್ಲವಾದರೂ ಸಹ ಆ ಕನ್ಯಾಶುಲ್ಕವು ತಕ್ಷಣ ಸಂದೇಯವಾಗುತ್ತದೆ. ಒಂದು ವಿವಾಹವು ವಿಘಟಿತವಾಗುವುದಕ್ಕಿಂತ ಅಥವಾ ಒಂದು ಘಟನೆಯು ಘಟಿಸುವುದಕ್ಕಿಂತ ಮೊದಲು ಪತ್ನಿಯಿಂದ ಹಕ್ಕುದಾವೆ ಮಾಡಲ್ಪಡುವಂತಿಲ್ಲವಾದರೂ ಸಹ ಗಂಡನು ತನಗೆ ಇಷ್ಟ ಬಂದರೆ ಮೊದಲೇ ಅದನ್ನು ಸಂದಾಯ ಮಾಡಬಹುದು.

ಒಂದು ಕನ್ಯಾಶುಲ್ಕವು ತತ್‌ಕ್ಷಣಿಕವೋ ಅಥವಾ ವಿಳಂಬಿತವೆಂಬುದಾಗಿ ಹೇಳಲ್ಪಟ್ಟಿಲ್ಲವೆಂದಾದರೆ (If not mentioned wether Prompt or Deferred)

ಒಂದೊಮ್ಮೆ ವಿವಾಹಕಾಲದಲ್ಲಿ ಒಂದು ಕನ್ಯಾಶುಲ್ಕವು ನಿಗದಿಗೊಳಿಸಲ್ಪಟ್ಟಿದೆಯಾದರೆ ಅದನ್ನು ಅಲ್ಲಿ ಮತ್ತು ಆಗಲೇ ಅದು ತತ್‌ಕ್ಷಣಿಕ ಕನ್ಯಾಶುಲ್ಕವೊ ಅಥವಾ ವಿಳಂಬಿತ ಕನ್ಯಾಶುಲ್ಕವೆಂಬುದಾಗಿ ಹೇಳಲ್ಪಟ್ಟಿರುತ್ತದೆ; ಅಥವಾ ಅದರ ಯಾವ ಭಾಗವು ತತ್‌ಕ್ಷಣಿಕ ಮತ್ತು ಯಾವ ಭಾಗವು ವಿಳಂಬಿತ ಕನ್ಯಾಶುಲ್ಕವೆಂಬುದಾಗಿಯೂ ಅಲ್ಲಿ ಹೇಳಲಾಗುತ್ತದೆ. ಆದರೆ ಇದು ಹೇಳಲ್ಪಟ್ಟಿಲ್ಲದ ಅಪವಾದಿಕ ಪ್ರಕರಣಗಳಲ್ಲಿ ಅಥವಾ ಸ್ಪಷ್ಟವಾಗಿ ಸೂಚಿಸಲ್ಪಟ್ಟಿಲ್ಲದಾಗ, ಅಲ್ಲಿ ನ್ಯಾಯಾಲಯಗಳು ಈ ಕೆಳತನ ನಿಯಮಗಳ ಮೇರೆಗೆ ಅದನ್ನು ಖಾತರಿ ಮಾಡಿಕೊಳ್ಳುತ್ತವೆ.

೧) ಸುನ್ನಿ ಕಾನೂನು (Sunni Law)

ಒಂದು ಕನ್ಯಾಶುಲ್ಕವು ತತ್‌ಕ್ಷಣಿಕವೊ ಅಥವಾ ವಿಳಂಬಿತವೆಂಬುದಾಗಿ ಆಗಲೇ ನಿರ್ಣಯಿಸಲಿಲ್ಲವೆಂದಾದರೆ ಅದರ ಒಂದು ಭಾಗವು ತತ್‌ಕ್ಷಣಿಕ ಹಾಗೂ ಇನ್ನೊಂದು ಭಾಗವು ವಿಳಂಬಿತವೆಂದು ಎಣಿಸಲಾಗುತ್ತದೆ. ಅದರ ಯಾವ ಭಾಗವು ತತ್‌ಕ್ಷಣಿಕ ಮತ್ತು ಯಾವ ಭಾಗವು ವಿಳಂಬಿತವೆಂಬುದು ಕ್ಷೇತ್ರೀಯ ರೂಢಿ, ಕನ್ಯಾಶುಲ್ಕದ ಮೊಬಲಗು, ಮತ್ತು ಪಕ್ಷಗಾರರ ಪ್ರಾಸ್ಥಿತಿ ಇವುಗಳನ್ನು ಅವಲಂಬಿಸಿರುತ್ತದೆ.

೨) ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದು ಕನ್ಯಾಶುಲ್ಕವು ತತ್‌ಕ್ಷಣಿಕವೋ ಅಥವಾ ವಿಳಂಬಿತ ಎಂಬ ಬಗ್ಗೆ ಯಾವುದೇ ಒಂದು ಸೂಚನೆಯಿಲ್ಲದಾಗ ಆ ಇಡೀ ಮೊಬಲಗನ್ನು ತತ್‌ಕ್ಷಣಿಕವೆಂದು ನಿರ್ಣಯಿಸಲಾಗುತ್ತದೆ.

೩) ಮದ್ರಾಸ್ ಉಚ್ಚನ್ಯಾಯಾಲಯದ ಪ್ರಕಾರ ಒಂದೊಮ್ಮೆ ಒಂದು ಕನ್ಯಾಶುಲ್ಕವು ತತ್‌ಕ್ಷಣಿಕವೊ ಅಥವಾ ವಿಳಂಬಿತವೆಂದು ವ್ಯಕ್ತವಾಗಿ ಹೇಳಲ್ಪಟ್ಟಿಲ್ಲವೆಂದಾದರೆ ಅಲ್ಲಿ ಪಕ್ಷಗಾರರು ಬೇಕಾದರೆ ಶಿಯಾರಾಗಿರಲಿ ಅಥವಾ ಸುನ್ನಿಗಳಾಗಿರಲಿ ಆ ಇಡೀ ಮೊಬಲಗನ್ನು ತತ್‌ಕ್ಷಣಿಕ ಕನ್ಯಾಶುಲ್ಕವೆಂದು ಎಣಿಸಲು ನ್ಯಾಯಾಲಯಕ್ಕೆ ಹಕ್ಕಿರುತ್ತದೆ. ಇದೇ ರೀತಿಯಲ್ಲಿ ಮುಂಬಾಯಿ ಉಚ್ಚನ್ಯಾಯಾಲಯವು ಕೊಟ್ಟಿರುವ ಒಂದು ತೀರ್ಪಿನಲ್ಲಿ ಪಕ್ಷಗಾರರು ಸುನ್ನಿ ಕಾನೂನಿನಿಂದ ಶಾಸಿತರಾಗಿದ್ದರೂ ಸಹ ಇಂತಹ ಒಂದು ಕನ್ಯಾಶುಲ್ಕವನ್ನು ತತ್‌ಕ್ಷಣಿಕ ಕನ್ಯಾಶುಲ್ಕವೆಂಬುದಾಗಿ ತೀರ್ಪು ಕೊಟ್ಟಿದೆ.

ಕನ್ಯಾಶುಲ್ಕದ ಯಾವ ಮೊಬಲಗು ಸಂದೇಯವಾಗುತ್ತದೆ ?
(What amount of dower is payable ?)

ಒಂದು ವಿವಾಹದ ಕರಾರು ಕಾನೂನುಬದ್ಧವಾಗಿ ನಿರ್ಮಿಸಲ್ಪಟ್ಟ ತಕ್ಷಣ ಪತ್ನಿಯ ಪರವಾಗಿ ಕನ್ಯಾಶುಲ್ಕದ ಒಂದು ಹಕ್ಕು ನಿರ್ಮಿಸಲ್ಪಡುತ್ತದೆ. ಆದರೆ ಸಂದಾಯಮಾಡಬೇಕಾಗಿರುವ ಕನ್ಯಾಶುಲ್ಕದ ಒಂದು ಮೊಬಲಗು ಅಥವಾ ಗಾತ್ರವು ಬೇರೆ ಬೇರೆ ಪರಿಸ್ಥಿತಿಗಳ ಮೇರೆಗೆ ಬೇರೆ ಬೇರೆಯಾಗಿರಬಹುದು. ಒಬ್ಬ ಪತ್ನಿಯು ಕನ್ಯಾಶುಲ್ಕದ ಮೊಬಲಗಿಗೆ ಹಕ್ಕುದಾರಳಾಗುವ ಬೇರೆ ಬೇರೆ ಪರಿಸ್ಥಿತಿಗಳು ಈ ಕೆಳಗೆ ಕೊಡಲಾಗಿವೆ.

೧) ವಿಧ್ಯುಕ್ತ ವಿವಾಹ (Valid Marriage)

ಎ) ಪೂರ್ತಿಗೊಂಡಿರದ ವಿವಾಹ (Marriage not Consummated)

ಒಂದೊಮ್ಮೆ ಆ ವಿವಾಹವು ಇನ್ನೂ ಪೂರ್ತಿಗೊಂಡಿಲ್ಲವೆಂದಾದರೆ ಅಲ್ಲಿ

ಪತ್ನಿಯು ನಿರ್ದಿಷ್ಟಗೊಳಿಸಲಾದ ಮೊಬಲಗಿನ ಅರ್ಧವನ್ನು ಪಡೆಯಲು ಹಕ್ಕು ದಾರಳಾಗಿರುವಳು.

ಒಂದೊಮ್ಮೆ ಕನ್ಯಾಶುಲ್ಕವು ನಿರ್ದಿಷ್ಟಗೊಳ್ಳಲ್ಪಟ್ಟಿಲ್ಲವೆಂದಾದರೆ, ಅವಳು ಒಂದು ನಾಮಮಾತ್ರ ಕೊಡುಗೆಯನ್ನು ಪಡೆಯಲು ಹಕ್ಕುದಾರಳಾಗಿರುವಳು.

ಆದರೆ ಒಂದೊಮ್ಮೆ ಒಂದು ಪೂರ್ತಿಗೊಳಿಸಲ್ಪಟ್ಟಿರದ ವಿವಾಹವು ೧) ಪತ್ನಿಯು ಒಂದು ಕೃತ್ಯದಿಂದಾಗಿ, ಅಥವಾ ೨) ಅವರೊಳಗೆ ಯಾವನಾದರೊಬ್ಬ ಪಕ್ಷಗಾರನ ತಾರುಣ್ಯದ ಆಯ್ಕೆಯಿಂದಾಗಿ ವಿಘಟಿತಗೊಳಿಸಲ್ಪಟ್ಟಿದ್ದರೆ ಅಲ್ಲಿ ಕನ್ಯಾಶುಲ್ಕದ ರೀತಿಯಲ್ಲಿ ಪತ್ನಿಗೆ ಏನನ್ನೂ ಕೊಡಬೇಕಾಗಿಲ್ಲ.

ಬಿ) ಪೂರ್ತಿಗೊಳಿಸಲ್ಪಟ್ಟ ವಿವಾಹ (Marriage Consummated)

ಒಂದೊಮ್ಮೆ ಆ ವಿವಾಹವು ಪೂರ್ತಿಗೊಳಿಸಲ್ಪಟ್ಟಿದ್ದರೆ ಪತ್ನಿಯು ನಿರ್ದಿಷ್ಟ ಕನ್ಯಾಶುಲ್ಕದ ಇಡೀ ಮೊಬಲಗನ್ನು ಪಡೆಯಲು ಹಕ್ಕುದಾರಳಾಗುವಳು.

ಒಂದೊಮ್ಮೆ ಕನ್ಯಾಶುಲ್ಕವು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವಾದರೆ, ಪತ್ನಿಯು ಸರಿಯಾದ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು.

೨) ಕ್ರಮಬದ್ಧವಲ್ಲದ ವಿವಾಹ (Irregular Marriage)

ಎ) ಪೂರ್ತಿಗೊಂಡಿಲ್ಲದ ವಿವಾಹ (Marriage not Consummated)

ಒಂದು ಕ್ರಮಬದ್ಧವಲ್ಲದ ವಿವಾಹದಲ್ಲಿ, ಅದು ಇನ್ನೂ ಪೂರ್ತಿಗೊಂಡಿಲ್ಲ ವೆಂದಾದರೆ, ಪತ್ನಿಯು ಕನ್ಯಾಶುಲ್ಕದ ರೀತಿಯಲ್ಲಿ ಏನನ್ನೂ ಪಡೆಯಲು ಹಕ್ಕು ದಾರಳಲ್ಲ.

ಬಿ) ಪೂರ್ತಿಗೊಂಡಿರುವ ವಿವಾಹ (Marriage Consummated)

ಒಂದೊಮ್ಮೆ ಒಂದು ಕ್ರಮಬದ್ಧವಲ್ಲದ ವಿವಾಹವು ಪೂರ್ತಿಗೊಳಿಸಲ್ಪಟ್ಟಿದ್ದರೆ ಮತ್ತು ಕನ್ಯಾಶುಲ್ಕವು ನಿರ್ದಿಷ್ಟಗೊಳಿಸಲಾಗಿಲ್ಲವೆಂದಾದರೆ, ಪತ್ನಿಯು ನಿರ್ದಿಷ್ಟ ವಾದ ಕನ್ಯಾಶುಲ್ಕ ಅಥವಾ ಸರಿಯಾದ ಕನ್ಯಾಶುಲ್ಕ ಇವುಗಳೊಳಗೆ ಕಡಿಮೆಯಾಗಿರು ವುದನ್ನು ಪಡೆಯಲು ಹಕ್ಕುಳ್ಳವಳಾಗುವಳು.

ಒಂದು ಕ್ರಮಬದ್ಧವಾಗಿಲ್ಲದ ವಿವಾಹದಲ್ಲಿ ಒಂದೊಮ್ಮೆ ಆ ಕನ್ಯಾಶುಲ್ಕವು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ, ಅಲ್ಲಿ ಪತ್ನಿಗೆ ಸರಿಯಾದ ಕನ್ಯಾಶುಲ್ಕವು ಸಂದೇಯವಾಗುತ್ತದೆ.

ಕನ್ಯಾಶುಲ್ಕದ ಮಾಫಿ (Remmission of Dower)

ವಿವಾಹವು ಪೂರ್ಣಗೊಂಡ ತಕ್ಷಣ ಪತ್ನಿಯು ಕನ್ಯಾಶುಲ್ಕದ ಹಕ್ಕನ್ನು ಪಡೆ ಯುವಳು. ಈ ಹಕ್ಕನ್ನು ಪಡೆದ ಬಳಿಕ ಅವಳು ಇಷ್ಟ ಬಂದರೆ ಈ ಹಕ್ಕನ್ನು ಗಂಡನ

ಪ್ರತಿ ಜಾರಿಗೊಳಿಸಬಹುದು ಅಥವಾ ಜಾರಿಗೊಳಿಸದೆ ಇರಬಹುದು. ಆಕೆಯು ಗಂಡನ ಮೇಲಿನ ನೈಸರ್ಗಿಕ ಪ್ರೀತಿಯಿಂದ ಅಥವಾ ಗಂಡನ ಪ್ರೀತಿಯನ್ನು ಪಡೆಯುವ ಉದ್ದೇಶದಿಂದ ಈ ಹಕ್ಕಿನ ಜಾರಿಗೊಳಿಸುವಿಕೆಯನ್ನು ಪರಿತ್ಯಜಿಸಬಹುದು. ಈ ಕೃತ್ಯವನ್ನು ಪತ್ನಿಯಿಂದ ಕನ್ಯಾಶುಲ್ಕದ ಮಾಫಿ ಎಂಬುದಾಗಿ ಕರೆಯಲಾಗುತ್ತದೆ. ಆದರೆ ತಾನು ಯಾವತ್ತೂ ಕನ್ಯಾಶುಲ್ಕವನ್ನು ಕೇಳಲಾರೆ ಅಥವಾ ಕನ್ಯಾಶುಲ್ಕದ ಹಕ್ಕನ್ನು ಚಲಾಯಿಸಲಾರೆ ಎಂಬುದಾಗಿ ವಿವಾಹ ಪೂರ್ವದಲ್ಲಿ ಒಬ್ಬ ನಾರಿಯು ಒಪ್ಪಂದ ಮಾಡಿಕೊಂಡಿದ್ದರೆ ಅದು ಶೂನ್ಯ ಒಪ್ಪಂದವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಕನ್ಯಾಶುಲ್ಕದ ಹಕ್ಕು ಒಂದು ಮುಸ್ಲಿಮ್ ವಿವಾಹದಿಂದ ಅವಿಚ್ಛಿನ್ನವಾಗಿರುತ್ತದೆ. ಆದರೆ ವಿವಾಹದ ಬಳಿಕ ಕನ್ಯಾಶುಲ್ಕದ ಹಕ್ಕು ಅವಳ ಕೈಸೇರುತ್ತದೆ ಮತ್ತು ಅದು ಅವಳ ಸ್ವಂತ ಹಕ್ಕಾಗಿರುತ್ತದೆ. ತನ್ನ ಈ ಸ್ವತ್ತನ್ನು ತನಗೆ ಬೇಕಾದ ರೀತಿಯಲ್ಲಿ ಉಪಯೋಗಿಸಲು ಅವಳು ಸ್ವತಂತ್ರಳಾಗುವಳು. ಆದುದರಿಂದ ಅವಳು ಆ ಇಡೀ ಸ್ವತ್ತನ್ನು ಅಥವಾ ಅದರ ಯಾವುದಾದರೊಂದು ಭಾಗವನ್ನು ಗಂಡನ ಪರವಾಗಿ ಸಮರ್ಪಿಸಬಹುದು, ಅಥವಾ ಅವನಿಗೆ ಅದನ್ನು ಒಂದು ದಾನವಾಗಿ ಕೊಟ್ಟು ಬಿಡಬಹುದು. ಪತ್ನಿಯಿಂದ ಮಾಡಲ್ಪಡುವ ತನ್ನ ಕನ್ಯಾಶುಲ್ಕದ ಮಾಫಿಯು ಕಾನೂನುಬದ್ಧವಾಗಿರುತ್ತದೆ, ಆದರೆ ಅದು ಈ ಕೆಳಗಿನ ಷರತ್ತುಗಳಿಗೆ ಅನುಗುಣವಾಗಿ ಮಾಡಿದರೆ ಮಾತ್ರ ಅದು ಕಾನೂನುಬದ್ಧವಾಗಿರುತ್ತದೆ.

೧) ಒಂದು ಕನ್ಯಾಶುಲ್ಕವನ್ನು ಮಾಫಿ ಮಾಡುವ ಕಾಲದಲ್ಲಿ ಪತ್ನಿಯು ವಯಸ್ಕಳಾಗಿರಬೇಕು ಹಾಗೂ ಚಿತ್ತಸ್ವಾಸ್ಥ್ಯವಿದ್ದವಳಾಗಿರಬೇಕು. ಒಬ್ಬ ಅಲ್ಪವಯಿ ಪತ್ನಿಯು ತನ್ನ ಕನ್ಯಾಶುಲ್ಕವನ್ನು ಮಾಫಿ ಮಾಡುವಂತಿಲ್ಲ. ಪತ್ನಿಯಿಂದ ಮಾಡಲಾಗುವ ತನ್ನ ಕನ್ಯಾಶುಲ್ಕದ ಮಾಫಿಯು ಒಂದು ದಾನದ ರೀತಿಯಲ್ಲಿ ಇರುತ್ತದಾದುದರಿಂದ, ಮದ್ರಾಸ್ ಮತ್ತು ಪಾಟ್ನಾ ಉಚ್ಚನ್ಯಾಯಾಲಯಗಳ ಅಭಿಪ್ರಾಯದಲ್ಲಿ ಆ ರೀತಿ ಮಾಡಲು ಆಕೆಯು ಭಾರತೀಯ ವಯಸ್ಕತನದ ಅಧಿನಿಯಮ, ೧೮೭೫ ಇದರ ಮೇರೆಗೆ ೧೮ರ ವಯಸ್ಸನ್ನು ದಾಟಿರಬೇಕು. ಆದರೆ ಅಲಹಾಬಾದ್ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಪತ್ನಿಯು ತನ್ನ ಕನ್ಯಾಶುಲ್ಕವನ್ನು ಮಾಫಿ ಮಾಡಲು ವಯಸ್ಕಳಾಗಿರಬೇಕಾದುದರಿಂದ ವಯಸ್ಕತನದ ಕಾನೂನಿನ ಪ್ರಕಾರ ಆಕೆಯು ತಾರುಣ್ಯವನ್ನು ಸೇರಿದಾಗ (೧೫ ವರ್ಷಗಳು) ಅವಳು ವಯಸ್ಕಳಾಗುವಳು. ಆದುದರಿಂದ ಈ ವಯಸ್ಸಿನಲ್ಲಿ ಅವಳು ಅದನ್ನು ಮಾಫಿ ಮಾಡಬಹುದು.

೨) ಪತ್ನಿಯಿಂದ ಮಾಡಲ್ಪಡುವ ಕನ್ಯಾಶುಲ್ಕದ ಮಾಫಿಯು ಆಕೆಯ ಸ್ವತಂತ್ರ ಸಮ್ಮತಿಯಿಂದ ಮಾಡಲ್ಪಟ್ಟದ್ದಾಗಿರಬೇಕು. ಹಾಗೆಂದರೆ ಅವಳು ಯಾವುದೇ ರೀತಿಯ ಅನುಚಿತ ಪ್ರಭಾವ ಅಥವಾ ಭಯಪ್ರದರ್ಶನಕ್ಕೆ ಬಾಧ್ಯಳಾಗದೆ ಸ್ವೇಚ್ಛೆಯಿಂದ ಅದನ್ನು ಮಾಡಿರಬೇಕು. ಒಂದೊಮ್ಮೆ ಆ ಪತ್ನಿಯು ಜಬರ್

ದಸ್ತಿ, ಭಯಪ್ರದರ್ಶನ, ಅನುಚಿತ ಪ್ರಭಾವ ಅಥವಾ ಅಸಾಮಾನ್ಯ ಮಾನಸಿಕ ಸ್ಥಿತಿಯಲ್ಲಿ ತನ್ನ ಕನ್ಯಾಶುಲ್ಕದ ಹಕ್ಕನ್ನು ಪರಿತ್ಯಜಿಸಿರುವಳಾದರೆ ಅಲ್ಲಿ ಅವಳ ಸಮ್ಮತಿಯನ್ನು ಸ್ವತಂತ್ರ ಸಮ್ಮತಿಯೆಂದು ಎಣಿಸಲಾಗುವುದಿಲ್ಲ ಮತ್ತು ಆ ಮಾಫಿಯು ಶೂನ್ಯವಾಗಿರುತ್ತದೆ. ಇಂತಹ ಒಂದು ಮಾಫಿಯು ಪತ್ನಿಯನ್ನು ಬಾಧ್ಯಗೊಳಿಸುವುದಿಲ್ಲ. ಪತಿಯ ಮೃತದೇಹವು ಇನ್ನೂ ಅಲ್ಲಿ ಬಿದ್ದುಕೊಂಡಿರುವಾಗ ವಿಧವೆಯಿಂದ ಮಾಡಲ್ಪಟ್ಟ ಒಂದು ಮಾಫಿಯು ವಿಧ್ಯುಕ್ತವಲ್ಲವೆಂದು ಎಣಿಸಲಾಗಿದೆ. ಇದಕ್ಕೆ ಕಾರಣವೇನೆಂದರೆ ಆ ಕಾಲದಲ್ಲಿ ಆಕೆಯು ಮಾನಸಿಕ ವೇದನೆಯಿಂದ ನರಳುತ್ತಿದ್ದಳು ಮತ್ತು ಆಕೆಯ ಸಮ್ಮತಿಯು ಸ್ವತಂತ್ರವಾಗಿದ್ದಿರಲಿಲ್ಲ.

ಪತ್ನಿಯು ಮಾಡುವ ಕನ್ಯಾಶುಲ್ಕದ ಮಾಫಿಯು ಪರಮವಾಗಿರಬಹುದು ಅಥವಾ ಷರತ್ತುಬದ್ಧ. ಒಂದೊಮ್ಮೆ ಗಂಡನಿಂದ ಏನಾದರೂ ಮಾಡಲ್ಪಟ್ಟಿರುವ ಪ್ರತಿಯಾಗಿ ಅವಳು ತನ್ನ ಕನ್ಯಾಶುಲ್ಕದ ಹಕ್ಕನ್ನು ಅಭಿತ್ಯಜನೆ ಮಾಡಿದರೆ ಆ ಮಾಫಿಯು ಷರತ್ತುಬದ್ಧವೆಂದು ಎಣಿಸಲ್ಪಡುತ್ತದೆ. ಪತಿಯ ಮರಣದ ಬಳಿಕ ಪತ್ನಿಯು ಕನ್ಯಾಶುಲ್ಕದ ತನ್ನ ಹಕ್ಕನ್ನು ಪತಿಯ ಕಾನೂನೀ ವಾರಸುದಾರರ ವಿರುದ್ಧ ಜಾರಿಗೊಳಿಸಬಹುದು. ಪತಿಯ ವಾರಸುದಾರರ ಪ್ರತಿಯಾಗಿಯೂ ಸಹ ಒಬ್ಬ ವಿಧವೆಯು ಕನ್ಯಾಶುಲ್ಕದ ತನ್ನ ಹಕ್ಕುದಾವೆಯನ್ನು ಪರಮವಾಗಿ ಅಥವಾ ಷರತ್ತುಬದ್ಧವಾಗಿ ರಿಯಾಯಿತಿಗೊಳಿಸಬಹುದು.

ಪತ್ನಿಯು ಕನ್ಯಾಶುಲ್ಕದ ಬಗ್ಗೆ ಹಕ್ಕುದಾವೆಯನ್ನು ಮಾಫಿಗೊಳಿಸಿದರೆ ಅದನ್ನು ಪತಿಯ ಪರವಾಗಿ ಕನ್ಯಾಶುಲ್ಕದ ವಿಮೋಚನೆ ಎಂಬುದಾಗಿ ಎಣಿಸಲಾಗುತ್ತದೆ. ಆದುದರಿಂದ ಅದೊಂದು ವಿಧ್ಯುಕ್ತವಾದ ವಿಮೋಚನೆಯೆಂದು ಎಣಿಸಲ್ಪಡಬೇಕಾದರೆ ಅದು ಬರವಣಿಗೆಯಲ್ಲಿ ಇದ್ದಿರಬೇಕು. ಕನ್ಯಾಶುಲ್ಕದ ಮಾಫಿಯು ಬರವಣಿಗೆಯಲ್ಲಿದ್ದಿರಬೇಕು.

ಕನ್ಯಾಶುಲ್ಕದ ಹಕ್ಕಿನ ಸ್ವರೂಪ (Nature of the right to dower)

೧) ಕನ್ಯಾಶುಲ್ಕದ ಹಕ್ಕು ಒಮ್ಮೆ ನಿಹಿತನಾದರೆ ಅದು ಎಂದೆಂದಿಗೂ ಕಳೆದು ಹೋಗುವುದಿಲ್ಲ.

(Once the right to dower is Vested, it is never lost)

ಕನ್ಯಾಶುಲ್ಕವು ಮುಸ್ಲಿಮ್ ವಿವಾಹದ ಒಂದು ಮಹತ್ವಪೂರ್ಣ ವೈಶಿಷ್ಟ್ಯವಾಗಿದ್ದುದರಿಂದ ಪ್ರತಿಯೊಂದು ವಿವಾಹದಲ್ಲಿ ಈ ಹಕ್ಕು ತಕ್ಷಣ ಪತ್ನಿಯಲ್ಲಿ ನಿಹಿತವಾಗುತ್ತದೆ. ಒಮ್ಮೆ ಈ ಹಕ್ಕು ಪತ್ನಿಯಲ್ಲಿ ನಿಹಿತವಾದರೆ ಸಾಕು. ಆ ಬಳಿಕ ಯಾವುದೇ ಕಾರಣದಿಂದಾಗಿ ಅವಳನ್ನು ಈ ಹಕ್ಕಿನಿಂದ ರಹಿತಗೊಳಿಸುವಂತಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ೧) ಒಂದೊಮ್ಮೆ ಅವಳು ಇಸ್ಲಾಮನ್ನು ಪರಿತ್ಯಜನೆ ಮಾಡಿದರೂ ಸಹ ಅಥವಾ ೨) ಆತ್ಮಹತ್ಯೆ ಮಾಡಿಕೊಂಡರೂ ಸಹ, ಅಥವಾ ೩) ಜಾರತ್ವ ಮಾಡಿದರೂ ಸಹ ಅಥವಾ ೪) ಆಕೆಯು ಪತಿಯು ಕೊಲೆ

ಮಾಡಿದರೂ ಸಹ ಪತ್ನಿಯು ಕನ್ಯಾಶುಲ್ಕದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಇಲ್ಲಿ ಹೇಳಲಾದ ಅಪರಾಧಗಳು ವೈವಾಹಿಕ ಅಪರಾಧಗಳಲ್ಲಿ ಅತ್ಯಂತ ಹೇಯವಾದವುಗಳಾಗಿರುತ್ತವೆ. ಆದರೆ ಒಬ್ಬ ಪತ್ನಿಯು ಇವುಗಳಲ್ಲಿ ಯಾವುದಾದರೊಂದು ಹೇಯ ಕೃತ್ಯವನ್ನು ಮಾಡಿದರೂ ಸಹ ಅವಳು ತನ್ನ ಕನ್ಯಾಶುಲ್ಕದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ ಮತ್ತು ಕನ್ಯಾಶುಲ್ಕದ ಸಂಬಂಧದಲ್ಲಿ ಅವಳು ಏನೂ ಮಾಡಿಲ್ಲ ಎಂಬಂತೆ ಎಣಿಸಲಾಗುತ್ತದೆ. ಅದಲ್ಲದೆ ಒಬ್ಬ ಮುಸ್ಲಿಮ್ ಪತ್ನಿಯು ಮುಸ್ಲಿಮ್ ವಿವಾಹಗಳ ವಿಘಟನಾ ಅಧಿನಿಯಮ, ೧೯೩೯ ಇದರಲ್ಲಿ ಹೇಳಲ್ಪಟ್ಟ ಯಾವುದಾದರೂ ಕಾರಣದ ಮೇರೆಗೆ ವಿವಾಹದ ವಿಘಟನೆಗಾಗಿ ಪ್ರಯತ್ನಿಸುವಳಾದರೂ ಸಹ ಮತ್ತು ಒಂದೊಮ್ಮೆ ಅವಳ ವಿವಾಹವು ವಿಘಟನೆಗೊಂಡರೆ ಕನ್ಯಾಶುಲ್ಕದ ಅವಳ ಹಕ್ಕು ಯಥಾ ಸ್ಥಿತಿ ಉಳಿಯುತ್ತದೆ. ಈ ಅಧಿನಿಯಮದ ಕ. ೫ರ ಪ್ರಕಾರ ಒಂದು ವಿವಾಹವು ವಿಘಟಿತವಾದಾಗ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವಿವಾಹಿತ ನಾರಿಯು ತನ್ನ ಕನ್ಯಾಶುಲ್ಕ ಅಥವಾ ಅದರ ಯಾವುದೇ ಒಂದು ಭಾಗದ ಬಗ್ಗೆ ಪಡೆದಿರುವ ಈ ವಿಘಟನೆಯು ಯಾವುದೇ ರೀತಿಯ ಪರಿಣಾಮವನ್ನು ಬೀರುವುದಿಲ್ಲ.

೨) ಅಸಂದೇಯ ಕನ್ಯಾಶುಲ್ಕವು ಒಂದು ಅಭದ್ರವಾದ ಋಣವಾಗಿರುತ್ತದೆ (Unpaid dower is on unscured debt)

ಪತ್ನಿಗೆ ಕನ್ಯಾಶುಲ್ಕವನ್ನು ಸಂದಾಯ ಮಾಡುವುದು ಪತಿಯ ಒಂದು ಕಾನೂನೀ ಬಾಧ್ಯತೆಯಾಗಿರುತ್ತದೆ. ಒಂದು ಅಸಂದೇಯ ಕನ್ಯಾಶುಲ್ಕವು ಒಂದು ಸರಳ ಋಣದಂತಿದ್ದು ಪತಿಯು ಒಬ್ಬ ಋಣಿಯಾಗಿರುವನು ಮತ್ತು ಆ ಪತ್ನಿಯು ಒಬ್ಬ ಋಣದಾತೆಯಾಗಿರುವಳು. ಆದರೆ ಒಂದು ಕನ್ಯಾಶುಲ್ಕವನ್ನು ಸಂದಾಯಗೊಳಿಸಲ್ಪಟ್ಟಿಲ್ಲದ ಪತ್ನಿಯು ತನ್ನ ಪತಿಯ ಇತರ ಋಣದಾತರಿಗಿಂತ ತಾನು ಶ್ರೇಷ್ಠಳೆಂದು ಹಕ್ಕುದಾವೆ ಮಾಡುವಂತಿಲ್ಲ. ಒಂದು ಅಸಂದೇಯ ಕನ್ಯಾಶುಲ್ಕದ ಕಾನೂನೀ ಸ್ವರೂಪವು ಹೇಗಿದೆಯೆಂದರೆ ಅದೊಂದು ಅಭದ್ರವಾಗಿರುವ ಋಣದಂತಿದ್ದು ಅಲ್ಲಿ ಪತಿಯು ಪತ್ನಿಗೆ ವೈಯಕ್ತಿಕವಾಗಿ ಬಾಧ್ಯನಾಗಿರುವನು. ಒಂದೊಮ್ಮೆ ಪತಿಯು ಕನ್ಯಾಶುಲ್ಕವನ್ನು ಸಂದಾಯ ಮಾಡದೇ ಮೃತನಾದರೆ ಆ ವಿಧವೆಯು ಇತರ ಋಣದಾತರೊಂದಿಗೆ ಆ ಮೊಬಲಗನ್ನು ಅವನ ಸ್ವತ್ತಿನಿಂದ ವಸೂಲಿ ಮಾಡಿಕೊಳ್ಳಬಹುದು.

ಕನ್ಯಾಶುಲ್ಕದ ಜಾರಿಮಾಡುವಿಕೆ (Enforcement of the dower)

ಕನ್ಯಾಶುಲ್ಕದ ಹಕ್ಕು ಪ್ರತಿಯೊಬ್ಬ ಮುಸ್ಲಿಮ್ ಪತ್ನಿಯಲ್ಲಿ ಅಂತರ್ಗತವಾಗಿರುವ ಹಕ್ಕಾಗಿರುತ್ತದೆ. ಆದರೆ ಈ ಹಕ್ಕನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ತನಕ ಇದು ಅವಳಿಗೆ ಯಾವುದೇ ರೀತಿಯ ಪ್ರಯೋಜನಕ್ಕೆ ಬರುವುದಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಮುಸ್ಲಿಮ್ ಪತ್ನಿಯು ಅಥವಾ ವಿಧವೆಯು ಕನ್ಯಾಶುಲ್ಕದ ತನ್ನ ಹಕ್ಕನ್ನು ಈ ಕೆಳಗಿನ ರೀತಿಯಲ್ಲಿ ಜಾರಿಗೊಳಿಸಬಹುದು.

೧) ದಾಂಪತ್ಯದ ಹಕ್ಕುಗಳ ನಿರಾಕರಣೆ (Refusal of Conjugal rights)

ಒಂದೊಮ್ಮೆ ಒಂದು ವಿವಾಹವು ಇನ್ನೂ ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಮತ್ತು ಆ ಕನ್ಯಾಶುಲ್ಕವು ತತ್‌ಕ್ಷಣಿಕವಾಗಿದ್ದರೆ, ಪತ್ನಿಯು ತನಗೆ ಸಲ್ಲತಕ್ಕ ತತ್ ಕ್ಷಣಿಕ ಕನ್ಯಾಶುಲ್ಕವು ಸಂದಾಯವಾಗುವ ತನಕ ಪತಿಯೊಂದಿಗೆ ಕೂಡಿ ಬಾಳಲು ನಿರಾಕರಿಸಬಹುದು. ಮುಸ್ಲಿಮ್ ಕಾನೂನಿನ ಪ್ರಕಾರ ಪತಿಗೆ ಪತ್ನಿಯೊಂದಿಗೆ ಸಹವಾಸ ಮಾಡಲು ದಾಂಪತ್ಯದ ಹಕ್ಕಿರುತ್ತದೆ. ಪತ್ನಿಯು ಅವನಿಗೆ ಈ ಹಕ್ಕನ್ನು ಯುಕ್ತ ಕಾರಣವಿಲ್ಲದೇ ನಿರಾಕರಿಸುವಂತಿಲ್ಲ. ಆದರೆ ತತ್‌ಕ್ಷಣಿಕ ಕನ್ಯಾಶುಲ್ಕವನ್ನು ವಿವಾಹವು ಪೂರ್ತಿಗೊಳ್ಳುವುದಕ್ಕಿಂತ ಮೊದಲೇ ಸಂದಾಯ ಮಾಡದಿರುವುದು ಪತ್ನಿಯು ಸಹವಾಸವನ್ನು ನಿರಾಕರಿಸಲು ಕಾನೂನುಬದ್ಧವಾದ ಒಂದು ಸಮರ್ಥ ನೀಯತೆಯಾಗಿರುತ್ತದೆ. ದಾಂಪತ್ಯದ ಹಕ್ಕುಗಳ ಪುನರ್ ಸ್ವಾಧೀನತೆಗಾಗಿ ಗಂಡ ನಿಂದ ಒಂದು ದಾವೆಯು ಮಾಡಲ್ಪಟ್ಟರೆ ವಿವಾಹವು ಪೂರ್ತಿಗೊಳ್ಳುವುದಕ್ಕಿಂತ ಮೊದಲು ಕನ್ಯಾಶುಲ್ಕವನ್ನು ಸಂದಾಯ ಮಾಡದಿರುವುದು ಆಕೆಗೆ ಒಂದು ಪೂರ್ಣ ಪ್ರತಿವಾದವಾಗುತ್ತದೆ ಮತ್ತು ಅವನ ಆ ದಾವೆಯು ವಿಫಲಗೊಳ್ಳಬೇಕಾಗುತ್ತದೆ. ಒಂದೊಮ್ಮೆ ಪತ್ನಿಯು ಅಲ್ಪವಯಿ ಅಥವಾ ಚಿತ್ತವಿಕಲಳಾಗಿದ್ದರೆ ಆಕೆಯ ಕನ್ಯಾ ಶುಲ್ಕವು ಸಂದಾಯವಾಗುವ ತನಕ ಆಕೆಯನ್ನು ಆಕೆಯ ಪತಿಯೊಂದಿಗೆ ಕಳುಹಿಸಲು ಆಕೆಯ ಸಂರಕ್ಷಕನು ನಿರಾಕರಿಸಬಹುದು. ಒಂದೊಮ್ಮೆ ಒಬ್ಬ ಅಲ್ಪವಯಿ ಪತ್ನಿಯು ಆಗಲೇ ಗಂಡನ ಅಭಿರಕ್ಷೆಯೊಳಗಿದ್ದರೆ ಮತ್ತು ಅವಳ ತಕ್ಷಣಿಕ ಕನ್ಯಾಶುಲ್ಕವು ಸಂದಾಯವಾಗಿರದಿದ್ದರೆ ಅಂತಹ ಸಂರಕ್ಷಕನು ಆಕೆಯನ್ನು ಗಂಡನ ಅಭಿರಕ್ಷೆಯಿಂದ ಕರೆದುಕೊಂಡು ಹೋಗಬಹುದು.

ಆದರೆ ವಿವಾಹವು ಪೂರ್ತಿಗೊಂಡಿದ್ದರೆ ಪತ್ನಿಯು ಸಹವಾಸವನ್ನು ನಿರಾಕರಿ ಸುವ ಹಕ್ಕನ್ನು ಕಳೆದುಕೊಳ್ಳುವಳು. ಒಂದೊಮ್ಮೆ ವಿವಾಹವು ಆಗಲೇ ಪೂರ್ತಿ ಗೊಳಿಸಲ್ಪಟ್ಟಿದೆಯಾದರೆ ತತ್‌ಕ್ಷಣಿಕ ಕನ್ಯಾಶುಲ್ಕವು ಸಂದಾಯವಾಗದಿರುವ ಕಾರಣ ದಿಂದಾಗಿ ದಾಂಪತ್ಯದ ಹಕ್ಕುಗಳ ಪುನರ್‌ಸ್ವಾಧೀನತೆಗಾಗಿ ಪತಿಯು ದಾವೆಯು ವಿಫಲ ವಾಗುವುದಿಲ್ಲ. ಆದರೂ ಸಹ ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳು ತಮ್ಮ ವಿವೇಚನೆಯನ್ನು ಉಪಯೋಗಿಸಿ ದಾಂಪತ್ಯದ ಹಕ್ಕುಗಳ ಪುನರ್‌ಸ್ವಾಧೀನತೆಯ ಬಗ್ಗೆ ಡಿಕ್ರಿ ಮಂಜೂರು ಮಾಡಬೇಕಾದರೆ ಅಲ್ಲಿ ತಕ್ಷಣಿಕ ಕನ್ಯಾಶುಲ್ಕದ ಸಂದಾ ಯದ ಷರತ್ತನ್ನು ಹೇರಬಹುದು.

೨) ಋಣದ ರೀತಿಯಲ್ಲಿ ಜಾರಿ ಮಾಡುವಿಕೆ (Enforcement as debt)

ಒಂದೊಮ್ಮೆ ಒಂದು ವಿವಾಹವು ಪೂರ್ತಿಗೊಳಿಸಲ್ಪಟ್ಟಿದೆಯಾದರೆ ಪತ್ನಿಯು ದಾಂಪತ್ಯದ ಹಕ್ಕುಗಳನ್ನು ನಿರಾಕರಣೆಮಾಡುವ ಮೂಲಕ ತನ್ನ ಹಕ್ಕನ್ನು ಜಾರಿ ಮಾಡುವಂತಿಲ್ಲ. ಇಂತಹ ಒಂದು ಪ್ರಕರಣದಲ್ಲಿ ಪತ್ನಿಯು ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿ ತನ್ನ ಅಸಂದೇಯ ಕನ್ಯಾಶುಲ್ಕವನ್ನು ವಸೂಲಿ ಮಾಡಿಕೊಳ್ಳ

ಬಹುದು. ಒಂದು ಅಸಂದೇಯ ಕನ್ಯಾಶುಲ್ಕವು ಒಂದು ವಾದ ಯೋಗ್ಯ ಹಕ್ಕು ದಾವೆ ಎಂಬುದಾಗಿ ನಾವು ಈಗಾಗಲೇ ನೋಡಿರುವೆವು. ಒಬ್ಬ ಋಣದಾತನು ತನ್ನ ಋಣವನ್ನು ಯಾವ ರೀತಿಯಲ್ಲಿ ವಸೂಲು ಮಾಡುವನೋ ಅದೇ ರೀತಿಯಲ್ಲಿ ಆಕೆಯು ಅದನ್ನು ಗಂಡನಿಂದ ವಸೂಲಿ ಮಾಡಿಕೊಳ್ಳಬಹುದು. ಆದುದರಿಂದ ಗಂಡನು ಜೀವಿತನಾಗಿದ್ದರೆ ಮತ್ತು ಆಕೆಯ ಕನ್ಯಾಶುಲ್ಕವು ಇನ್ನೂ ಸಂದಾಯ ವಾಗಿರದಿದ್ದರೆ ಪತ್ನಿಯು ಆ ಕನ್ಯಾಶುಲ್ಕದ ವಸೂಲಿಗಾಗಿ ಗಂಡನ ವಿರುದ್ಧ ಒಂದು ದಾವೆ ಹೂಡಿ ತನ್ನ ಹಕ್ಕುದಾವೆಯನ್ನು ಜಾರಿಗೊಳಿಸಬಹುದು.

ಒಂದೊಮ್ಮೆ ಪತಿಯು ಮೃತನಾದರೆ ಮತ್ತು ಆ ಕನ್ಯಾಶುಲ್ಕವು ಅಸಂದೇಯ ವಾಗಿದ್ದರೆ, ಆ ವಿಧವೆಯು ಗಂಡನ ಕಾನೂನೀ ವಾರಸುದಾರರ ವಿರುದ್ಧ ಒಂದು ದಾವೆ ಹೂಡಿ ತನ್ನ ಕನ್ಯಾಶುಲ್ಕವನ್ನು ವಸೂಲು ಮಾಡಲು ಹಕ್ಕುದಾರಳಾಗಿರು ವಳು. ಆದರೆ ಗಂಡನ ಕಾನೂನೀ ವಾರಸುದಾರರು ವೈಯಕ್ತಿಕವಾಗಿ ಅದನ್ನು ಸಂದಾಯಮಾಡಲು ಬಾಧ್ಯರಾಗಿರುವುದಿಲ್ಲ. ಕನ್ಯಾಶುಲ್ಕವು ಅವಳ ಗಂಡನ ಸಂಪದದ ಪ್ರತಿ ಒಂದು ಋಣವಾಗಿದ್ದುದರಿಂದ ಅವನ ಕಾನೂನೀ ವಾರಸುದಾರರು ಪಡೆದಿರುವ ಮೃತನ ವಾರಸಿನ ಪ್ರತಿ ಆಕೆಯು ಅದನ್ನು ಜಾರಿಗೊಳಿಸಬಹುದು. ಕಾನೂನೀ ವಾರಸುದಾರರು ಮೃತನ ಸ್ವತ್ತಿನಲ್ಲಿ ತಮ್ಮ ಯಥಾ ಪ್ರಕಾರದ ಪಾಲು ಗಳನ್ನು ಪಡೆಯುವರಾದುದರಿಂದ ಅವಳು ಆ ಪಾಲುಗಳಿಗೆ ಅನುಗುಣವಾಗಿ ಪ್ರತಿಯೊಬ್ಬನಿಂದ ತನ್ನ ಕನ್ಯಾಶುಲ್ಕದ ಪಾಲನ್ನು ವಸೂಲು ಮಾಡಿಕೊಳ್ಳ ಬಹುದು.

ಸಾಮಾನ್ಯವಾಗಿ ಕನ್ಯಾಶುಲ್ಕವು ಪತಿಯ ಸ್ವತ್ತಿನ ಮೇಲೆ ಒಂದು ಪ್ರಭಾರ ವಾಗಿರುವುದಿಲ್ಲ. ಆದುದರಿಂದ ಒಂದೊಮ್ಮೆ ಒಬ್ಬ ಪತ್ನಿಯು ಅಸಂದಾಯವಾದ ಕನ್ಯಾಶುಲ್ಕದ ವಸೂಲಿಗಾಗಿ ತನ್ನ ಪತಿಯ ವಿರುದ್ಧ ಅಥವಾ ಅವನ ವಾರಸುದಾರರ ವಿರುದ್ಧ ಒಂದು ದಾವೆ ಹೂಡಿದರೆ ಅವಳ ಪರವಾಗಿ ಮಂಜೂರು ಮಾಡಲಾಗುವ ಡಿಕ್ರಿಯು ಒಂದು ಸರಳ ಹಣದ ಡಿಕ್ರಿಯಾಗಿರುತ್ತದೆ. ಆದರೆ ಪರಸ್ಪರ ಒಪ್ಪಂದ ದಿಂದ ಒಂದು ಕನ್ಯಾಶುಲ್ಕದ ಋಣಕ್ಕಾಗಿ ಗಂಡನ ಸ್ವತ್ತಿನ ಮೇಲೆ ಒಂದು ಪ್ರಭಾರ ವನ್ನು ಹೇರಬಹುದು. ಒಂದೊಮ್ಮೆ ಇಂತಹ ಒಂದು ಪ್ರಭಾರವು ಪತಿ ಪತ್ನಿಯ ರೊಂದಿಗಿನ ಒಂದು ಒಪ್ಪಂದದಿಂದ ಮಾಡಲ್ಪಟ್ಟಿದೆಯಾದರೆ ಆ ಒಪ್ಪಂದವು ಜಾರಿ ಮಾಡುವಂತಹದ್ದಾಗಿರುತ್ತದೆ. ಒಂದೊಮ್ಮೆ ಇಂತಹ ಒಂದು ಒಪ್ಪಂದವಿಲ್ಲದಿದ್ದರೂ ಸಹ ನ್ಯಾಯಾಲಯಕ್ಕೆ ಯುಕ್ತವೆಂದು ಕಂಡರೆ ಅದು ಪತಿಯ ಸ್ವತ್ತಿನ ಮೇಲೆ ಒಂದು ಪ್ರಭಾರವನ್ನು ನಿರ್ಮಿಸಬಹುದು. ಆದರೆ ಒಂದು ಸಾಮಾನ್ಯ ನಿಯಮದ ಪ್ರಕಾರ ಇಂತಹ ಒಂದು ಪ್ರಭಾರವನ್ನು ನ್ಯಾಯಾಲಯಗಳು ನಿರ್ಮಿಸುವುದಿಲ್ಲ, ಏಕೆಂದರೆ ಈ ರೀತಿಯಾಗಿ ಒಂದು ಪ್ರಭಾರವನ್ನು ನಿರ್ಮಿಸಿದರೆ ಆಕೆಯ ಕನ್ಯಾ ಶುಲ್ಕದ ಋಣವು ಇತರ ಋಣದಾತರ ಮೇಲೆ ಬಾಧ್ಯತೆಯನ್ನು ಪಡೆಯುತ್ತದೆ.

೩) ವಿಧವೆಯ ಅವರೋಧದ ಹಕ್ಕು (Widow's Right of Retention)

ಒಂದು ಕನ್ಯಾಶುಲ್ಕದ ಅಭಿಯಾಚನೆಯನ್ನು ಜಾರಿಗೊಳಿಸುವ ಅತ್ಯಂತ ಪರಿಣಾಮಕಾರಿಯಾದ ಕ್ರಮವು ಯಾವುದೆಂದರೆ ಅವರೋಧದ ಹಕ್ಕನ್ನು ಚಲಾಯಿಸುವುದಾಗಿರುತ್ತದೆ. ಒಬ್ಬ ವಿಧವೆಯ ಕನ್ಯಾಶುಲ್ಕವು ಇನ್ನೂ ಸಂದಾಯವಾಗದೆ ಉಳಿದಿದ್ದರೆ ಆಕೆಯು ತನ್ನ ಕನ್ಯಾಶುಲ್ಕದ ಹಣವು ಸಂದಾಯವಾಗುವ ತನಕ ಪತಿಯ ಸ್ವತ್ತನ್ನು ಇಟ್ಟುಕೊಂಡಿರಲು ಹಕ್ಕುದಾರಳಾಗಿರುವಳು.

ಈ ಹಕ್ಕನ್ನು ಅಸಂದೇಯ ಕನ್ಯಾಶುಲ್ಕದ ಬದಲಾಗಿ ಅವರೋಧದ ಹಕ್ಕೆಂದು ಕರೆಯಲಾಗುತ್ತದೆ ಮತ್ತು ಇದು ಒಬ್ಬ ವಿಧವೆಗೆ ಸಿಗುತ್ತದೆ. ಒಂದೊಮ್ಮೆ ಒಬ್ಬ ಪತ್ನಿಯು ತನಗೆ ಸಂದಾಯವಾಗದಿರುವ ಕನ್ಯಾಶುಲ್ಕದ ಸಂಬಂಧದಲ್ಲಿ ತನ್ನ ಪತಿಯ ಸ್ವತ್ತನ್ನು ಇಟ್ಟುಕೊಂಡಿರುವಳಾದರೆ ಗಂಡನ ಮರಣದ ಬಳಿಕವೂ ಸಹ ಅವಳು ತನಗೆ ಬರತಕ್ಕ ಕನ್ಯಾಶುಲ್ಕವು ಸಂದಾಯವಾಗುವ ತನಕ ಆ ಸ್ವತ್ತಿನ ಕಬ್ಜೆಯನ್ನು ಇಟ್ಟುಕೊಂಡಿರಲು ಹಕ್ಕುದಾರಳಾಗುವಳು. ಈ ಹಕ್ಕನ್ನು ತನ್ನ ಗಂಡನ ಋಣದಾತರು ಹಾಗೂ ವಾರಸುದಾರರ ಪ್ರತಿಯಾಗಿ ಚಲಾಯಿಸಬಹುದು. ವಿಧವೆಯ ಪ್ರತಿರೋಧದ ಹಕ್ಕಿನ ವೈಶಿಷ್ಟ್ಯಗಳನ್ನು ಈ ಕೆಳಗಿನಂತೆ ಸಂಕ್ಷೇಪಗೊಳಿಸಬಹುದು.

೧) ಪತಿಯ ಸ್ವತ್ತಿನ ಕಬ್ಜೆ (Possession of the husband's properties)

ಈ ಹಕ್ಕನ್ನು ಕಾನೂನುಬದ್ಧವಾಗಿ ಚಲಾಯಿಸಬೇಕಾದರೆ ಒಬ್ಬ ಪತ್ನಿಯು ತನಗೆ ಸಲ್ಲತಕ್ಕ ಕನ್ಯಾಶುಲ್ಕವು ಸಂದಾಯವಾಗದಿರುವ ಕಾರಣ ಆ ಕನ್ಯಾಶುಲ್ಕದ ಬದಲಾಗಿ ಗಂಡನ ಸ್ವತ್ತಿನ ಕಬ್ಜೆಯನ್ನು ಹೊಂದಿರಬೇಕು. ಒಂದೊಮ್ಮೆ ಇತರ ಯಾವುದಾದರೊಂದು ಕಾರಣದಿಂದ ಅವಳು ಗಂಡನ ಸಂಪದದ ಕಬ್ಜೆಯನ್ನು ಹೊಂದಿರುವಳಾದರೆ ಈ ಹಕ್ಕಿನ ಮೇರೆಗೆ ಅವಳು ಇದನ್ನು ಇಟ್ಟುಕೊಳ್ಳುವಂತಿಲ್ಲ.

ಎರಡನೆಯದಾಗಿ, ವಿಧವೆಯ ಅವರೋಧದ ಹಕ್ಕು ಎಂದರೆ ಗಂಡನ ಜೀವಮಾನದಲ್ಲಿ ಆಕೆಯು ಪಡೆದಿರುವ ಗಂಡನ ಸ್ವತ್ತಿನ ಕಬ್ಜೆಯನ್ನು ಮುಂದುವರಿಸುವ ಹಕ್ಕಾಗಿರುತ್ತದೆ. ಈ ಹಕ್ಕಿನ ಮೇರೆಗೆ ಒಬ್ಬ ವಿಧವೆಯು ಗಂಡನ ಮರಣದ ಬಳಿಕ ಗಂಡನ ಸ್ವತ್ತಿನ ಕಬ್ಜೆಯನ್ನು ಪಡೆಯುವಂತಿಲ್ಲ. ಇದು ಕಬ್ಜೆಯನ್ನು ಇಟ್ಟುಕೊಳ್ಳುವ ಒಂದು ಹಕ್ಕಾಗಿದೆಯಲ್ಲದೆ ಕಬ್ಜೆಯನ್ನು ಪಡೆಯುವ ಹಕ್ಕಲ್ಲ.

ಮೂರನೆಯದಾಗಿ, ಆ ಪತ್ನಿಯು ಪತಿಯ ಸಮ್ಮತಿಯಿಂದ ಅವನ ಸ್ವತ್ತಿನ ಕಬ್ಜೆಯನ್ನು ಪಡೆದಿರಬೇಕು. ಗಂಡನ ಸಮ್ಮತಿಯು ಈ ಬಗ್ಗೆ ವ್ಯಕ್ತವಾಗಿರಬಹುದು ಅಥವಾ ಅವ್ಯಕ್ತ' ಆದರೆ ಅದು ಸ್ವತಂತ್ರಸಮ್ಮತಿಯಾಗಿರಬೇಕು. ಒಂದೊಮ್ಮೆ ಪತ್ನಿಯು ಬಲಾತ್ಕಾರದಿಂದ ಅಥವಾ ಮೋಸದಿಂದ ತನ್ನ ಪತಿಯ ಸ್ವತ್ತಿನ ಕಬ್ಜೆಯನ್ನು ಹೊಂದಿರುವಳಾದರೆ ಅದೊಂದು ಕಾನೂನುಬಾಹಿರವಾದ ಕಬ್ಜೆಯೆಂದು ಎಣಿಸಲ್ಪಡುತ್ತದೆ ಮತ್ತು ಪತಿಯ ಮರಣದ ಬಳಿಕ ತನ್ನ ಅಸಂದೇಯ ಕನ್ಯಾಶುಲ್ಕದ ಬದಲಾಗಿ ಅದನ್ನು ಇಟ್ಟುಕೊಳ್ಳಲು ಅವಳು ಹಕ್ಕುದಾರಳಲ್ಲ.

೨) ಕಬ್ಜೆಯ ಹಕ್ಕು (Possessory Right)

ಒಬ್ಬ ವಿಧವೆಯ ಅವರೋಧದ ಹಕ್ಕು ಕೇವಲ ಒಂದು ಕಬ್ಜೆಯ ಹಕ್ಕಾಗಿರುತ್ತದೆ. ತನ್ನ ಕಬ್ಜೆಯಲ್ಲಿಟ್ಟುಕೊಂಡಿರುವ ಸ್ವತ್ತಿನ ಮೇಲೆ ಅವಳಿಗೆ ಯಾವತ್ತೂ ಹಕ್ಕು ಅಥವಾ ಸ್ವಾಮಿತ್ವದ ಹಕ್ಕು ಬರುವುದಿಲ್ಲ. ಒಬ್ಬ ವಿಧವೆಯು ಕೆಲವು ಸ್ವತ್ತುಗಳ ಕಬ್ಜೆಯನ್ನು ಪಡೆದರೆ ಆ ಸ್ವತ್ತುಗಳ ಸಂಬಂಧದಲ್ಲಿ ಅವಳ ಹಕ್ಕು ಕೇವಲ ತನ್ನ ಗಂಡನ ವಾರಸುದಾರರ ಪ್ರತಿಯಾಗಿ ಅದರ ಕಬ್ಜೆಯ ಹಕ್ಕಾಗಿರುತ್ತದೆ. ಆ ಸ್ವತ್ತುಗಳ ಸ್ವಾಮಿತ್ವವು ಆಕೆಯ ಗಂಡನ ವಾರಸುದಾರರಲ್ಲಿ ನಿಹಿತವಾಗಿರುತ್ತದೆ. ಆದರೆ ಅದರ ಕಬ್ಜೆ ಮಾತ್ರ ಆಕೆಯಲ್ಲಿರುತ್ತದೆ. ಒಬ್ಬ ವಿಧವೆಯ ಅವರೋಧದ ಹಕ್ಕು ಒಂದು ಅಡಮಾನವೂ ಅಲ್ಲ, ಮತ್ತು ಒಂದು ಗ್ರಹಣಾಧಿಕಾರವೂ ಅಲ್ಲ. ಮುಸ್ಲಿಂ ಕಾನೂನು ಒಬ್ಬ ವಿಧವೆಗೆ ತನ್ನ ಅಸಂದೇಯ ಕನ್ಯಾಶುಲ್ಕವನ್ನು ಪಡೆಯುವ ಬಗ್ಗೆ ಮಾತ್ರ ಈ ಹಕ್ಕನ್ನು ಕೊಟ್ಟಿದೆ.

೩) ಕಬ್ಜೆಯಲ್ಲಿದ್ದಿರುವ ಸ್ವತ್ತಿನಿಂದ ವಿಧವೆಯ ಕನ್ಯಾಶುಲ್ಕದ ಸಂದಾಯ ಮಾಡಿಕೊಳ್ಳುವಿಕೆ

(Satisfaction of widow's dower out of the property possessed)

ತನಗೆ ಸಂದೇಯವಾಗಿರುವ ಕನ್ಯಾಶುಲ್ಕದ ಪ್ರತಿಯಾಗಿ ಒಬ್ಬ ವಿಧವೆಯು ತನ್ನಲ್ಲಿ ಇಟ್ಟುಕೊಂಡಿರುವ ಗಂಡನ ಸ್ವತ್ತು ಅವಳ ಗಂಡನ ಕಾನೂನೀ ವಾರಸುದಾರರ ಸ್ವಾಮಿತ್ವಕ್ಕೆ ಒಳಗೊಂಡಿರುತ್ತದೆ. ಆದುದರಿಂದ ಆ ಸ್ವತ್ತಿನಿಂದ ಬರುವ ಆದಾಯ ಅಥವಾ ಪ್ರಯೋಜನವು ಅವಳ ಗಂಡನ ಕಾನೂನೀ ವಾರಸುದಾರರಿಗೆ ಸೇರುತ್ತದೆ. ಆದರೆ ಆ ಸ್ವತ್ತಿನ ಕಬ್ಜೆಯನ್ನು ಇಟ್ಟುಕೊಂಡಿರುವ ವಿಧವೆಯು ಅದರ ಫಲೋಪಭೋಗ ಅಥವಾ ಪ್ರಯೋಜನಗಳನ್ನು ಪಡೆಯಬಹುದು. ಆದರೆ ಒಬ್ಬ ವಿಧವೆಯು ತನ್ನ ಕಬ್ಜೆಯಲ್ಲಿದ್ದಿರುವ ತನ್ನ ಗಂಡನ ಸ್ವತ್ತಿನಿಂದ ಪಡೆಯುತ್ತಿರುವ ಪ್ರಯೋಜನವು ಆಕೆಗೆ ಸಂದಾಯವಾಗತಕ್ಕ ಕನ್ಯಾಶುಲ್ಕದ ಬಾಬತ್ತು ಸಂದಾಯವಾಗುವಂತಹದ್ದೆಂದು ಎಣಿಸಲಾಗುತ್ತದೆ. ಈ ರೀತಿಯಾಗಿ ಗಂಡನ ಸ್ವತ್ತಿನ ಕಬ್ಜೆಯನ್ನು ಹೊಂದಿರುವ ವಿಧವೆಯು ಆಕೆಯ ಕನ್ಯಾಶುಲ್ಕ ಮತ್ತು ಅದರ ಸಂಬಂಧದಲ್ಲಿ ಬಡ್ಡಿಯು ಆಕೆಗೆ ಪೂರ್ಣವಾಗಿ ಸಂದಾಯವಾದ ಬಳಿಕ ಆ ಸ್ವತ್ತನ್ನು ಅವಳು ತನ್ನ ಗಂಡನ ಕಾನೂನೀ ವಾರಸುದಾರರ ಪರವಾಗಿ ವಿಮೋಚನೆಗೊಳಿಸಬೇಕಾಗುತ್ತದ.

ಮುಸ್ಲಿಮ್ ಕಾನೂನಿನ ಪ್ರಕಾರ ಗಂಡನ ಸ್ವತ್ತಿನ ಕಬ್ಜೆಯನ್ನು ಹೊಂದಿರುವ ಪತ್ನಿಯು ಆ ಸ್ವತ್ತಿನ ಸರಿಯಾದ ಲೆಕ್ಕಪತ್ರವನ್ನು ಇಟ್ಟುಕೊಂಡಿರಬೇಕಾಗುತ್ತದೆ. ಆ ಸ್ವತ್ತನ್ನು ನೋಡಿಕೊಳ್ಳಲು ಅವಳಿಗೆ ತಗಲಿದ ವೆಚ್ಚ ಹಾಗೂ ಅದರಿಂದ ಬರುತ್ತಿರುವ ಆದಾಯ ಇವುಗಳ ಬಗ್ಗೆ ಒಂದು ಸರಿಯಾದ ಲೆಕ್ಕವನ್ನಿಟ್ಟುಕೊಳ್ಳಬೇಕಾಗುತ್ತದೆ. ಅವಳು ಇಟ್ಟುಕೊಂಡಿರುವ ಆ ಸ್ವತ್ತಿನಲ್ಲಿ ಆಕೆಯ ಗಂಡನ ವಾರಸುದಾರ

ರಿಗೆ ಪರವಾದ ಹಿತಸಂಬಂಧವಿದ್ದುದರಿಂದ ಅವಳು ಅದರ ಆದಾಯ, ಭಾಡಿಗೆಗಳು ಮತ್ತು ಲಾಭಗಳ ಸಂಬಂಧದಲ್ಲಿ ಅವಳ ಗಂಡನ ವಾರಸುದಾರರಿಗೆ ಸರಿಯಾದ ಲೆಕ್ಕ ಪತ್ರ ಕೊಡಲು ಬಾಧ್ಯಳಾಗಿರುವಳು.

ಳ) ಅವರೋಧದ ಸ್ವತ್ತನ್ನು ಹಸ್ತಾಂತರಿಸುವಂತಿಲ್ಲ.
(Retained Property cannot be transferred)

ಗಂಡನ ಸ್ವತ್ತನ್ನು ಇಟ್ಟುಕೊಳ್ಳುವ ವಿಧವೆಯ ಹಕ್ಕು ಕೇವಲ ಕಬ್ಜೆಯಾಗಿರುತ್ತದಲ್ಲದೆ ಅವಳು ಅದರ ಸ್ವಾಮಿಯಾಗುವಂತಿಲ್ಲ. ಅವಳು ಆ ಸ್ವತ್ತಿನ ಸ್ವಾಮಿಯಾಗಿಲ್ಲವಾದುದರಿಂದ ಅವಳು ಆ ಸ್ವತ್ತನ್ನು ಹಸ್ತಾಂತರಿಸುವಂತಿಲ್ಲ. ಈ ರೀತಿಯ ಯಾವತ್ತೂ ಹಸ್ತಾಂತರಣವು ಶೂನ್ಯವಾಗಿರುತ್ತದೆ ಮತ್ತು ಹಸ್ತಾಂತರಿತನು ಇದರಿಂದ ಯಾವುದೇ ರೀತಿಯ ಸ್ವತ್ತನ್ನು ಪಡೆಯಲಾರನು. ಆದುದರಿಂದ ಒಬ್ಬ ವಿಧವೆಯು ತನ್ನ ಕಬ್ಜೆಯಲ್ಲಿದ್ದಿರುವ ಸ್ವತ್ತನ್ನು ಮಾರಾಟ ಮಾಡಿ ತನಗೆ ಬರತಕ್ಕ ಕನ್ಯಾಶುಲ್ಕದ ಹಣವನ್ನು ಅದರಿಂದ ವಸೂಲಿ ಮಾಡಿಕೊಳ್ಳುವಂತಿಲ್ಲ. ಏಕೆಂದರೆ ಅವಳು ಕೇವಲ ತನ್ನ ಗಂಡನ ಕಬ್ಜೆಯನ್ನು ಹೊಂದಿರುವಳಲ್ಲದೆ ಅಲ್ಲಿ ಆ ಸ್ವತ್ತನ್ನು ಮಾರಾಟ ಮಾಡಲು ಅಥವಾ ಅನ್ಯಥಾ ಹಸ್ತಾಂತರಿಸಲು ಆಕೆಗೆ ಹಕ್ಕಿಲ್ಲ. ಈ ವಿಷಯವು 'ಮೈನಾ ಬೀಬಿ ವಿ. ಚೌಧ್ರಿ ವಕೀಲ ಅಹಮ್ಮದ್' (Maina bibi V. Chaudhri Vakil Ahmad) ಪ್ರಕರಣದಲ್ಲಿ ಪ್ರೀವಿ ಕೌನ್ಸಿಲ್ ಕೊಟ್ಟಿರುವ ತೀರ್ಪಿನಿಂದ ಸ್ಪಷ್ಟಗೊಳಿಸಲಾಗಿದೆ. ಆ ಪ್ರಕರಣವು ಈ ಕೆಳಗಿನಂತಿದೆ ;

ಮೈನಾಬೀಬಿ ವಿ. ಚೌಧ್ರಿ ವಕೀಲ ಅಹಮ್ಮದ
(Mainabibi V. Chaudhri Vakil Ahamad)

ಸಿದ್ಧಾಂತ : ತನ್ನ ಕನ್ಯಾಶುಲ್ಕವು ಸಂದಾಯವಾಗುವ ತನಕ ಗಂಡನ ಸ್ವತ್ತನ್ನು ಇಟ್ಟುಕೊಳ್ಳುವ ಒಬ್ಬ ಮುಸ್ಲಿಮ್ ವಿಧವೆಯ ಹಕ್ಕು ಒಬ್ಬ ಅಡವಾನಿತನ ಹಕ್ಕಿನಿಂದ ಭಿನ್ನವಾಗಿರುತ್ತದೆ; ಇವರಿಬ್ಬರೊಳಗೆ ಯಾವುದೇ ಬಗೆಯ ಸಾದೃಶತೆ ಇರುವದಿಲ್ಲ. ಒಂದೊಮ್ಮೆ ಆ ಅವರೋಧವು ಕಾನೂನುಬದ್ಧವಾಗಿದ್ದರೆ ಮತ್ತು ಅದು ಅವಳಿಂದ ಕನ್ಯಾಶುಲ್ಕದ ಬದಲಾಗಿ ಇಟ್ಟುಕೊಳ್ಳಲ್ಪಟ್ಟುದಾದರೆ ಆ ವಿಧವೆಯು ಆಕೆಯ ಕನ್ಯಾಶುಲ್ಕವು ಸಂದಾಯವಾಗುವತನಕ ಅದರ ಕಬ್ಜೆಯನ್ನು ಇಟ್ಟುಕೊಳ್ಳಬಹುದು. ಆದರೆ ಗಂಡನ ಸ್ವತ್ತನ್ನು ಇಟ್ಟುಕೊಳ್ಳುವಂತಹ ಆಕೆಯ ಹಕ್ಕು ವಿಕ್ರಯ, ಅಡವಾನ, ದಾವೆ ಅಥವಾ ಅನ್ಯಥಾ ಪರಾಧೀನಗೊಳಿಸುವ ಹಕ್ಕು ಕೊಡುವುದಿಲ್ಲ. ಒಂದೊಮ್ಮೆ ಒಬ್ಬ ವಿಧವೆಯು ಇಂತಹ ಸ್ವತ್ತನ್ನು ಪರಾಧೀನಗೊಳಿಸಿದರೆ ಆ ಪರಾಧೀನವು ಆಕೆಯ ಪಾಲಿನ ಮಟ್ಟಿಗಷ್ಟೇ ವಿಧ್ಯುಕ್ತವಾಗಿರುತ್ತದೆ. ಒಂದೊಮ್ಮೆ ತನ್ನ ಕಬ್ಜೆಯಲ್ಲಿರುವ ಒಂದು ಸ್ವತ್ತನ್ನು ಆಕೆಯು ತಬದೀಲು ಗೊಳಿಸಿದರೆ ಇತರ ವಾರಸುದಾರರು ಅದರ ಕಬ್ಜೆಯನ್ನು ಪರತ್ಸುಬಾಹಿರವಾಗಿ ಮರಳಿ ಪಡೆಯಬಹುದು ಮತ್ತು ಈ ರೀತಿಯಾಗಿ ಅದರ ಕಬ್ಜೆಯನ್ನು ಪಡೆಯು

ವಾಗ ಅವರು ಆಕೆಯ ಕನ್ಯಾಶುಲ್ಕದ ಋಣದಲ್ಲಿ ತಮ್ಮ ಅನುಪಾಲಿಕ ಪಾಲನ್ನು ಸಲ್ಲಿಸಬೇಕಾಗಿಲ್ಲ. ಒಂದೊಮ್ಮೆ ಆ ತಬದೀಲು ಕಿತ್ತುಹಾಕಲ್ಪಟ್ಟರೆ ಆ ವಿಧವೆಯು ಆ ಕಬ್ಜೆಯನ್ನು ಇಟ್ಟುಕೊಂಡಿರಲು ಹಕ್ಕುದಾರಳಾಗಿರುವುದಿಲ್ಲ.

ವಸ್ತುಸ್ಥಿತಿ : ಶೇಕ್‌ವೈನುದ್ದೀನ ಎಂಬವನ ಮರಣದ ಬಳಿಕ ಅವನ ಸ್ವತ್ತು ವಿಧವೆಯಾದ ಮೈನಾಬೀಬಿಯ ಕಬ್ಜೆಗೆ ಬಂತು. ಈ ಕಬ್ಜೆಯನ್ನು ಆಕೆಯು ತನಗೆ ಸಲ್ಲತಕ್ಕ ಕನ್ಯಾಶುಲ್ಕದ ಋಣವು ಸಂದಾಯವಾಗದ ಕಾರಣದಿಂದ ಪಡೆದಿದ್ದಳು. ಆ ಬಳಿಕ ಈ ವಿಧವೆಯು ರಜಿಸ್ಟ್ರಿ ಆಫೀಸಿನಲ್ಲಿ ಶೇಕ್‌ವೈನುದ್ದೀನನ ಬದಲಾಗಿ ಅದರ ಕಬ್ಜೆಯನ್ನು ಪಡೆದವಳು ತಾನೆಂದು ತನ್ನ ಹೆಸರನ್ನು ನೋಂದಾಯಿಸಿ ಕೊಂಡಳು.

ಆಕೆಯ ಈ ಕಬ್ಜೆಯನ್ನು ಆಕೆಯ ಮೃತ ಪತಿಯ ಚಿಕ್ಕಪ್ಪನ ಮಗನ ಮೂವರು ಮಕ್ಕಳು ಪ್ರಶ್ನಿಸಿದರು. ಮತ್ತು ನ್ಯಾಯಾಲಯದಲ್ಲಿ ಅದರ ಕಬ್ಜೆಯನ್ನು ಪಡೆಯುವ ಬಗ್ಗೆ ದಾವೆ ಹೂಡಿದರು. ಅವರ ಹಕ್ಕುದಾವೆಗಳಲ್ಲಿ ಮೈನಾ ಬೀಬಿಯು ಈ ಕೆಳಗಿನ ಪ್ರತಿವಾದಗಳನ್ನು ಎತ್ತಿದಳು :

I) ಅವಳ ಕನ್ಯಾಶುಲ್ಕವು ರೂ. ೫೧,೦೦೦ ಆಗಿದ್ದು ಅದು ಇನ್ನೂ ಅಸಂದೇಯವಾಗಿ ಉಳಿದಿತ್ತು.

II) ಆಕೆಯ ಕನ್ಯಾಶುಲ್ಕವು ಸಂದಾಯವಾಗದ ಕಾರಣ ಅವನ ಇಡೀ ಸ್ವತ್ತನ್ನು ಆಕೆಯ ಕಬ್ಜೆಯಲ್ಲಿ ಹಾಕಿದ್ದನು ಮತ್ತು ಅದರ ಕಬ್ಜೆ ಹಾಗೂ ಅನುಭೋಗದ ಹಕ್ಕನ್ನು ಆಕೆಗೆ ಕೊಟ್ಟಿದ್ದನು, ಮತ್ತು

III) ಅವರು ಈ ರೀತಿಯಾಗಿ ತನ್ನ ಸ್ವತ್ತನ್ನು ಅವಳ ಕಬ್ಜೆಗೆ ಕೊಟ್ಟಾಗ ವಾದಿಗಳಿಂದ ಅಥವಾ ಇತರರಿಂದ ಈ ಬಗ್ಗೆ ಯಾವುದೇ ರೀತಿಯ ಆಕ್ಷೇಪವೂ ಬಂದಿರಲಿಲ್ಲ.

ಪ್ರತಿವಾದಿಯ ಕನ್ಯಾಶುಲ್ಕದ ಮೌಲ್ಯವು ರೂ. ೫೧,೦೦೦ ಎಂಬುದನ್ನು ವಾದಿಗಳು ಒಪ್ಪಿರುವುದಾದುದರಿಂದ ಸಬೋರ್ಡಿನೇಟ್ ನ್ಯಾಯಾಧೀಶನು ಈ ಕೆಳಗಿನ ತೀರ್ಪು ಕೊಟ್ಟನು.

ಪ್ರತಿವಾದಿಗಳು ತಮ್ಮ ಪಾಲಾದ ರೂ. ೨೭೩೮೭ನ್ನು ೬ ತಿಂಗಳೊಳಗೆ ಆಕೆಗೆ ಸಂದಾಯ ಮಾಡುವ ಷರತ್ತಿನ ಮೇಲೆ ವಾದಿಗಳು ಆ ಸ್ವತ್ತಿನ ಏಳು ಹನ್ನೆರಡಾಂಶ ಪಾಲಿನ ಕಬ್ಜೆಯನ್ನು ಪಡೆಯಬಹುದು. ಒಂದೊಮ್ಮೆ ಆ ಡಿಕ್ರಿಯು ಮಂಜೂರು ಮಾಡಲಾದ ದಿನಾಂಕದಿಂದ ಈ ಮೊಬಲಗನ್ನು ಅವರು ೬ ತಿಂಗಳೊಳಗೆ ಸಂದಾಯ ಮಾಡದಿದ್ದರೆ ಅವರ ಹಕ್ಕುದಾವೆಯು ವೆಚ್ಚದೊಂದಿಗೆ ಕಿತ್ತುಹಾಕಲ್ಪಡುವದೆಂಬ ಆದೇಶ ಕೊಟ್ಟಿತು.

ಉಚ್ಚ ನ್ಯಾಯಾಲಯಕ್ಕೆ ವಾದಿಗಳು ನುಸವಿ ಮಾಡಿದಾಗ ಉಚ್ಚ ನ್ಯಾಯಾಲಯವು ಸಬೋರ್ಡಿನೇಟ ನ್ಯಾಯಾಲಯದ ಡಿಕ್ರಿಯನ್ನು ಪುಷ್ಟೀಕರಿಸಿತು. ಆದರೆ

ಆ ಕನ್ಯಾಶುಲ್ಕದ ಋಣವನ್ನು ಸಂದಾಯ ಮಾಡಲು ಸ್ವಲ್ಪ ಉದ್ದದ ಕಾಲಾವಧಿಯನ್ನು ಕೊಟ್ಟಿತು.

ವಾದಿಗಳು ಆ ಗೊತ್ತು ಮಾಡಲಾದ ಕಾಲಾವಧಿಯೊಳಗೆ ಆ ಮೊಬಲಗನ್ನು ಸಂದಾಯ ಮಾಡಲು ವಿಫಲರಾದರು. ಆದುದರಿಂದ ೧೯೧೦೭ರ ಮಾರ್ಚ ೧೮ರಂದು ಮೈನಾ ಬೀಬಿಯು ಆ ಸ್ವತ್ತನ್ನು ದಾನಮಾಡಿದಳು.

೧೯೧೫ರ ಜುಲೈ ೨೧ ರಂದು ಬರ್ಕದ್-ವಿಲ್-ಮೀಸಾ ಇವನ ಮೂವರು ಮಕ್ಕಳು ಮೈನಾಬೀಬಿಯ ವಿರುದ್ಧ ಒಂದು ದಾವೆ ಹೂಡಿದರು. ಇವರ ವಾದವು ಹೇಗಿತ್ತೆಂದರೆ ಆಕೆಯ ಕನ್ಯಾಶುಲ್ಕವನ್ನು ಸಂದಾಯ ಮಾಡುವ ಷರತ್ತಿನ ಮೇಲೆ ಅವರಿಗೆ ಆ ಸ್ವತ್ತಿನ ಕಬ್ಜೆಯನ್ನು ಕೊಡಬೇಕು. ಏಕೆಂದರೆ ಆಕೆಯು ಆ ಸ್ವತ್ತಿನ ಪರಮ ಸ್ವಾಮಿಯಾಗಿಲ್ಲದಿರುವುದರಿಂದ ಆಕೆಗೆ ಆ ಸ್ವತ್ತನ್ನು ಒಂದು ದಾನಮಾಡುವ ಹಕ್ಕು ಬರುವುದಿಲ್ಲ. ಆದುದರಿಂದ ಅವರು ಆಕೆಯ ಕನ್ಯಾಶುಲ್ಕದ ಮೊಬಲಗನ್ನು ಸಂದಾಯ ಮಾಡದಿದ್ದರೂ ಸಹ ಅವರನ್ನು ಆ ಜಮೀನ್ದಾರಿ ಸ್ವತ್ತಿನ ಕಬ್ಜೆಯಲ್ಲಿ ಹಾಕಬೇಕೆಂದು ಅವರು ನ್ಯಾಯಾಲಯದಲ್ಲಿ ಬೇಡಿಕೊಂಡರು.

ಚೌಧ್ರಿ ಮಹಮ್ಮದ್ ಈಸಾ ಮತ್ತು ಇತರ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಮೈನಾಬೀಬಿಯು ಮೃತನ ಸ್ವತ್ತಿನಲ್ಲಿ ಕೇವಲ ಒಂದು ನಾಲ್ಕಾಂಶ ಪಾಲು ಪಡೆಯಲು ಹಕ್ಕುದಾರಳಾಗಿರುವಳೆಂದು ಆ ಸ್ವತ್ತಿನ ದಾನ ಪಡೆದಿರುವ ಚೌಧ್ರಿ ಮಹಮ್ಮದನು ನ್ಯಾಯಾಲಯದಲ್ಲಿ ಲಿಖಿತ ಹೇಳಿಕೆಯನ್ನು ಕೊಟ್ಟಿದ್ದನು. ಇಲ್ಲಿ ಕೇವಲ ಒಂದು ಪ್ರಶ್ನೆಯನ್ನು ನಿರ್ಣಯಿಸುವ ಅವಶ್ಯಕತೆಯಿತ್ತು. ಅದೇನೆಂದರೆ ಅಲಹಾಬಾದಿನ ಸಬೋರ್ಡಿನೇಟ್ ನ್ಯಾಯಾಧೀಶನ ೧೮-೩-೧೯೧೬ ಕೊಟ್ಟಿರುವ ಡಿಕ್ರಿಯ ಅರ್ಥಾನ್ವಯನ ಮತ್ತು ಪರಿಣಾಮದ ಬಗ್ಗೆ ಇವನ್ನು ಅಲಹಾಬಾದ್ ಉಚ್ಚನ್ಯಾಯಾಲಯವು ಪುಷ್ಟೀಕರಿಸಿತು. ಆ ಬಳಿಕ ಪ್ರತಿವಾದಿಗಳು ಪ್ರೀವಿಕೌನ್ಸಿಲ್ಲಿಗೆ ಮನವಿ ಸಲ್ಲಿಸಿದರು.

ತೀರ್ಪು : ಈ ಮನವಿಯನ್ನು ಕಿತ್ತುಹಾಕಿ ಪ್ರೀವಿಕೌನ್ಸಿಲ್ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

೧) ಆಕೆಗೆ ಕನ್ಯಾಶುಲ್ಕದ ಸಂಬಂಧದಲ್ಲಿ ಅಸಂದೇಯವಾಗಿರುವ ರೂ. ೨೭,೩೮೭ನ್ನು ವಾದಿಗಳು ಸಂದಾಯ ಮಾಡದಿದ್ದುದರಿಂದ ಆಕೆಯು ಆ ಸ್ವತ್ತಿನ ಪರಮಸ್ವಾಮಿಯಾಗುವುದಿಲ್ಲ.

೨) ಆಕೆಯು ಅದರಲ್ಲಿರುವ ತನ್ನ ಸ್ವಾಮಿತ್ವದ ಹಿತಸಂಬಂಧ ಅಥವಾ ಅದನ್ನು ತಬದೀಲುಗೊಳಿಸುವ ಇತರ ಯಾವತ್ತೂ ತನ್ನ ಹಕ್ಕನ್ನು ಹಸ್ತಾಂತರಣ ಗೊಳಿಸುವಂತಿಲ್ಲ.

(೫) ಒಮ್ಮೆ ಕಬ್ಜೆಯು ಕಳೆಯಲ್ಪಟ್ಟರೆ ಅದನ್ನು ಮತ್ತೊಮ್ಮೆ ಪಡೆಯುವಂತಿಲ್ಲ

(Once the Possession is last it cannot be resumed)

ಒಂದು ಸ್ವತ್ತಿನ ಪೂರ್ಣ ಹಸ್ತಾಂತರಣದಲ್ಲಿ ಹಸ್ತಾಂತರಿತನು ಏನನ್ನೂ ಪಡೆಯುವುದಿಲ್ಲ. ಆದರೆ ಒಂದೊಮ್ಮೆ ಆ ಹಸ್ತಾಂತರಣದ ಪುಷ್ಟಿಗಾಗಿ ಆ ಸ್ವತ್ತಿನ ಕಬ್ಜೆಯೂ ಸಹ ಆ ಹಸ್ತಾಂತರನಿಗೆ ಪ್ರದಾನ ಮಾಡಲ್ಪಟ್ಟರೆ ಅದು ಆ ಬಳಿಕ ಹಸ್ತಾಂತರಿಗೆ ಮರಳಿ ಬರುತ್ತದೆ. ಆದರೆ ಮುಸ್ಲಿಮ್ ಕಾನೂನಿನ ಪ್ರಕಾರ ಒಂದೊಮ್ಮೆ ಒಬ್ಬ ವಿಧವೆಯು ತನ್ನ ಕಬ್ಜೆಯಲ್ಲಿದ್ದಿರುವ ಗಂಡನ ಸ್ವತ್ತನ್ನು ಹಸ್ತಾಂತರಣಗೊಳಿಸಿ ಆದನ್ನು ಪ್ರದಾನಗೊಳಿಸಿದರೆ ಆ ಕಬ್ಜೆಯು ಆಕೆಗೆ ಮರಳಿ ಬರುವುದಿಲ್ಲ. ಅದು ಆಕೆಯ ಗಂಡನ ವಾರಸುದಾರರಿಗೆ ಸೇರುತ್ತದೆ ಮತ್ತು ಅವರು ತಮ್ಮ ಪಾಲಿನ ಅನುಪಾತದಲ್ಲಿ ಅದನ್ನು ಪಡೆಯುವರು. ಕಬ್ಜೆಯು ಒಮ್ಮೆ ಕಳೆದು ಹೋದರೆ ಅದು ಶಾಶ್ವತವಾಗಿ ಕಳೆದು ಹೋದಂತಾಗುತ್ತದೆ. ಈ ನಿಯಮವನ್ನು ಪ್ರೀವಿಕೌನ್ಸಿಲ್ 'ಮೈನಾಬೀಬಿ' ಪ್ರಕರಣದಲ್ಲಿ ಕೊಡಲಾದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ ಆ ಪ್ರಕರಣದಲ್ಲಿ ಆ ವಿಧವೆಯು ತನ್ನ ಕಬ್ಜೆಯನ್ನು ಬಿಟ್ಟು ಬಿಟ್ಟುದರಿಂದಾಗಿ ಅದರ ಕಬ್ಜೆಯ ಮರಳಿಪಡೆಯುವ ಹಕ್ಕನ್ನು ಕಳೆದುಕೊಳ್ಳುವಳು. ಆದುದರಿಂದ ಇಂತಹ ಒಂದು ಪ್ರಕರಣದಲ್ಲಿ ಒಬ್ಬ ವಿಧವೆಯ ಗಂಡನ ವಾರಸುದಾರರು ತಮ್ಮ ಪಾಲುಗಳ ಅನುಪಾತದಲ್ಲಿ ಆ ಸ್ವತ್ತಿನ ಕಬ್ಜೆಯನ್ನು ಪಡೆಯಲು ಹಕ್ಕುದಾರರಾಗಿರುವರು ಮತ್ತು ಇದಕ್ಕಾಗಿ ಅವರು ಕನ್ಯಾಶುಲ್ಕದ ಮೊಬಲಗನ್ನು ಸಂದಾಯ ಮಾಡುವ ಆವಶ್ಯಕತೆಯಿಲ್ಲ. ಈ ರೀತಿಯಾಗಿ ಒಬ್ಬ ವಿಧವೆಯು ಒಂದೊಮ್ಮೆ ತನ್ನ ಸ್ಥಿರಸ್ವತ್ತಿನ ಮೇಲಿನ ಕಬ್ಜೆಯನ್ನು ಕಳೆದುಕೊಂಡರೆ ತನ್ನ ಅಸಂದೇಯ ಕನ್ಯಾಶುಲ್ಕದ ಹಕ್ಕುದಾವೆಯನ್ನು ಜಾರಿ ಮಾಡುವ ಈ ರೀತಿಯನ್ನು ಅವಳು ಶಾಶ್ವತವಾಗಿ ಕಳೆದುಕೊಳ್ಳುವಳು.

ಕನ್ಯಾಶುಲ್ಕವು ಅಸಂದೇಯವಾಗಿರುವ ಒಬ್ಬ ವಿಧವೆಯಲ್ಲಿರುವ ಗಂಡನ ಸ್ವತ್ತಿನ ಅವರೋಧದ ಹಕ್ಕು ಒಬ್ಬ ವಿಧವೆಗೆ ಮಾತ್ರ ಸಿಗುತ್ತದೆ ಮತ್ತು ಅದೂ ಸಹ ಅವಳ ಅಸಂದೇಯದ ಕನ್ಯಾಶುಲ್ಕವಾಗಿರುತ್ತದೆ. ತನ್ನ ಮೃತ ಗಂಡನ ಸ್ವತ್ತನ್ನು ಇಟ್ಟುಕೊಳ್ಳುವ ಹಕ್ಕು ಅವಳ ವೈಯಕ್ತಿಕ ಹಕ್ಕಾಗಿರುತ್ತದೆ. ಏಕೆಂದರೆ ಇದು ಆಕೆಯ ಒಂದು ವಿಶೇಷ ವ್ಯಕ್ತಿತ್ವಕ್ಕಾಗಿ ಕೊಡಲಾಗುತ್ತದೆ. ಆ ವಿಶೇಷ ವ್ಯಕ್ತಿತ್ವವು ಯಾವುದೆಂದರೆ ಆಕೆಯು ಕನ್ಯಾಶುಲ್ಕವು ಅಸಂದೇಯವಾಗಿರುವ ಒಬ್ಬ ವಿಧವೆಯಾಗಿರುವಳು. ಆದುದರಿಂದ ಅವಳ ಈ ಹಕ್ಕನ್ನು ಅವಳ ವ್ಯಕ್ತಿತ್ವದಿಂದ ಪ್ರತ್ಯೇಕಿಸಿ ಇನ್ನೊಬ್ಬನಿಗೆ ಹಸ್ತಾಂತರಣಗೊಳಿಸುವಂತಿಲ್ಲ. ಪಾಟ್ನಾ ಉಚ್ಚ ನ್ಯಾಯಾಲಯದಲ್ಲಿ ಕೊಡಲಾದ ಒಂದು ತೀರ್ಪಿನ ಪ್ರಕಾರ ಅವರೋಧದ ಹಕ್ಕನ್ನು ಹಸ್ತಾಂತರಣಗೊಳಿಸುವಂತಿಲ್ಲ. ಆದರೆ ಅಲಹಾಬಾದ್ ಮತ್ತು ಮೈಸೂರು ಉಚ್ಚ

ನ್ಯಾಯಾಲಯುಗಳು ತದ್ವಿರುದ್ಧವಾದ ತೀರ್ಪು ಕೊಟ್ಟಿವೆ. ಆ ತೀರ್ಪುಗಳ ಪ್ರಕಾರ ಒಬ್ಬ ವಿಧವೆಯು ಅವರೋಧದ ಹಕ್ಕು ಆಕೆಯು ಒಂದು ಸ್ವಾಮಿತ್ವದ ಹಕ್ಕಾದುದರಿಂದ ಅದನ್ನು ಆ ವಿಧವೆಯು ಹಸ್ತಾಂತರಣಗೊಳಿಸಬಹುದು.

6) ಅವರೋಧದ ಹಕ್ಕಿನ ಪೈತೃಗಾಮೀಯತೆ

(Heritability of the right of Retention)

ಕನ್ಯಾಶುಲ್ಕದ ಹಕ್ಕು ಒಂದು ಪೈತೃಗಾಮೀಯತೆಯ ಹಕ್ಕಾಗಿರುತ್ತದೆ. ಒಂದೊಮ್ಮೆ ಒಂದು ಕನ್ಯಾಶುಲ್ಕವು ಅಸಂದೇಯವಾಗಿ ಉಳಿದಿದ್ದರೆ ಮತ್ತು ಆ ಪತ್ನಿ ಅಥವಾ ವಿಧವೆಯು ಮೃತಳಾದರೆ ಆಕೆಯ ಕಾನೂನೀ ವಾರಸುದಾರರು ಆ ಕನ್ಯಾಶುಲ್ಕವನ್ನು ವಸೂಲಿ ಮಾಡಲು ಹಕ್ಕುದಾರರಾಗಿರುವರು. ಇಲ್ಲಿ ಬರುವ ಒಂದು ಪ್ರಮುಖ ಪ್ರಶ್ನೆಯೆಂದರೆ ಅವರೋಧದ ಹಕ್ಕನ್ನೂ ಸಹ ಅನುವಂಶಿಕವಾಗಿ ಪಡೆಯಬಹುದೇ ಎಂಬುದು. ಈ ಹಕ್ಕನ್ನೂ ಸಹ ವಿಧವೆಯ ವಾರಸುದಾರರು ಪಡೆಯಬಹುದು. ಒಂದೊಮ್ಮೆ ಒಬ್ಬ ವಿಧವೆಯು ತನಗೆ ಸಂದೇಯವಾಗದಿರುವ ಕನ್ಯಾಶುಲ್ಕದ ಋಣದ ಸಂಬಂಧದಲ್ಲಿ ತನ್ನ ಮೃತಪತಿಯ ಸ್ಥಿರಸ್ವತ್ತಿನ ಕಬ್ಜೆಯನ್ನು ಹೊಂದಿರುವಳಾದರೆ ಮತ್ತು ಆ ಅವರೋಧದ ಕಾಲಾವಧಿಯಲ್ಲಿ ಆಕೆಯು ಮೃತಪಟ್ಟರೆ ಆಕೆಯ ಕಾನೂನೀ ವಾರಸುದಾರರು ಆಕೆಯ ಸ್ಥಾನದಲ್ಲಿ ಪ್ರತಿಸ್ಥಾಪಿಸಲ್ಪಟ್ಟು ಆಕೆಯು ಆ ಸ್ವತ್ತನ್ನು ಇಟ್ಟುಕೊಳ್ಳಲು ಹಕ್ಕುದಾರರಾಗಿರುವರು. ಆದರೆ ಒಬ್ಬ ವಿಧವೆಯ ವಾರಸುದಾರರು ಕಬ್ಜೆಯನ್ನು ವಾರಸು ಪಡೆಯಬೇಕಾದರೆ ಆ ವಿಧವೆಯು ಸಾಯುವುದಕ್ಕಿಂತ ಮೊದಲು ಸ್ವತಃ ಆ ಕಬ್ಜೆಯನ್ನು ಹೊಂದಿರಬೇಕು ಮತ್ತು ಆ ಕಬ್ಜೆಯನ್ನು ಹೊಂದಿರುವ ಸ್ಥಿತಿಯಲ್ಲಿ ಆಕೆಯು ಮೃತಳಾಗಿರಬೇಕು. ಒಂದೊಮ್ಮೆ ಒಬ್ಬ ಅಸಂದೇಯ ಕನ್ಯಾಶುಲ್ಕದ ವಿಧವೆಯು ತನ್ನ ಜೀವಮಾನದಲ್ಲಿ ಒಂದು ಸ್ವತ್ತಿನ ಕಬ್ಜೆಯನ್ನು ಪಡೆದಿಲ್ಲವೆಂದಾದರೆ ಆಕೆಯ ಮರಣದ ಬಳಿಕ ಆಕೆಯ ವಾರಸುದಾರರು ಆ ಸ್ವತ್ತಿನ ಕಬ್ಜೆಯನ್ನು ಪಡೆಯುವಂತಿಲ್ಲ.

ಕನ್ಯಾಶುಲ್ಕದ ದಾವೆಗಾಗಿ ಕಾಲಮಿತಿ

(Limitation of suit for dower)

ಒಬ್ಬ ಪತ್ನಿಯು ಅಥವಾ ವಿಧವೆಯು ತನಗೆ ಬರತಕ್ಕ ಕನ್ಯಾಶುಲ್ಕವನ್ನು ವಸೂಲಿ ಮಾಡುವುದಕ್ಕೋಸ್ಕರ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಬಹುದು, ಆಕೆಯ ಮರಣದ ಬಳಿಕ ಆಕೆಯ ಕಾನೂನೀ ವಾರಸುದಾರರು ಇದರ ಬಗ್ಗೆ ಒಂದು ದಾವೆ ಹೂಡಬಹುದು. ಆದರೆ ಈ ದಾವೆಯು ಭಾರತೀಯ ಕಾಲಮಿತಿಯ ಅಧಿನಿಯಮ, ೧೯೬೩ (Indian limitation Act, 1963) ಇದರಲ್ಲಿ ನಿಗದಿಮಾಡಲ್ಪಟ್ಟಿರುವ ಕಾಲಾವಧಿಯೊಳಗೆ ಆ ದಾವೆಯು ಹೂಡಲ್ಪಟ್ಟಿರಬೇಕು. ಒಂದೊಮ್ಮೆ ಅದೊಂದು ತತ್‌ಕ್ಷಣಿಕ ಕನ್ಯಾಶುಲ್ಕವಾಗಿದ್ದರೆ ಮತ್ತು ಆ ವಿವಾಹವು ಇನ್ನೂ ಅಸ್ತಿತ್ವದಲ್ಲಿದ್ದರೆ

ಆ ಕನ್ಯಾಶುಲ್ಕದ ಅಭಿಯಾಚನೆ ಮಾಡಲ್ಪಟ್ಟ ಮೂರು ವರ್ಷಗಳ ಅವಧಿಯೊಳಗೆ ಆ ದಾವೆಯು ಹೂಡಲ್ಪಟ್ಟಿರಬೇಕು. ಒಂದೊಮ್ಮೆ ಆ ಕನ್ಯಾಶುಲ್ಕವು ತತ್ಕ್ಷಣಕವಾಗಿದ್ದು ಮತ್ತು ವಿವಾಹವು ವಿವಾಹ ವಿಚ್ಛೇದನ ಅಥವಾ ಮರಣದಿಂದಾಗಿ ವಿಘಟಿತಗೊಳಿಸಲ್ಪಟ್ಟರೆ ಕಾಲಮಿತಿಯ ಕಾಲಾವಧಿಯು ಆ ವಿವಾಹದ ವಿಘಟನೆಯಾಗಿ ಮೂರು ವರ್ಷಗಳದ್ದಾಗಿರುತ್ತದೆ. ವಿವಾಹ ವಿಚ್ಛೇದನದ ಪ್ರಕರಣದಲ್ಲಿ ಕಾಲಮಿತಿಯ ಅವಧಿಯು ಪತ್ನಿಗೆ ವಿವಾಹ ವಿಚ್ಛೇದನದ ಸಂಗತಿಯು ತಿಳಿದ ದಿನಾಂಕದಿಂದ ಆರಂಭವಾಗುತ್ತದೆ. ಒಂದೊಮ್ಮೆ ಆ ಕನ್ಯಾಶುಲ್ಕವು ವಿಳಂಬಿತ ಕನ್ಯಾಶುಲ್ಕವಾಗಿದ್ದರೆ ಅಲ್ಲಿಯೂ ಸಹ ಕಾಲಮಿತಿಯು ಮೂರು ವರ್ಷಗಳದ್ದಾಗಿದ್ದು ಅದು ವಿವಾಹವು ವಿಘಟಿತವಾದ ದಿನಾಂಕದಿಂದ ಆರಂಭವಾಗುತ್ತದೆ. ಆದರೆ ಒಂದೊಮ್ಮೆ ಒಬ್ಬ ವಿಧವೆಯು ತನ್ನ ಅಸಂದೇಯ ಕನ್ಯಾಶುಲ್ಕದ ಬದಲಾಗಿ ತನ್ನ ಗಂಡನ ಸ್ಥಿರ ಸ್ವತ್ತಿನ ಕಾನೂನುಬದ್ಧವಾದ ಕಬ್ಜೆಯನ್ನು ಪಡೆದಿರುವಳಾದರೆ ಅಲ್ಲಿ ಆಕೆಗೆ ದಾವೆ ಹೂಡಲು ಕಾಲಮಿತಿಯು ಅಡ್ಡ ಬರುವುದಿಲ್ಲ.

——

ಅಧ್ಯಾಯ ೬

ವಿವಾಹದ ವಿಘಟನೆ

(Dissolution of Marriage)

ಒಂದು ಸುಖಮಯ ಕೌಟುಂಬಿಕ ಜೀವನಕ್ಕೆ ಪತಿಪತ್ನಿಯರ ಒಂದು ಸ್ಥಿರವಾದ ಒಂದಾಗುವಿಕೆಯ ಅವಶ್ಯಕತೆಯಿದೆ. ಆದುದರಿಂದ ಒಂದು ವಿವಾಹವು ಅಸ್ತಿತ್ವದಲ್ಲಿರಬೇಕು, ಮತ್ತು ವಿವಾಹ ಕರಾರಿನ ಉಲ್ಲಂಘನೆಯಾಗುವಿಕೆಯನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕೆಂದು ಇಸ್ಲಾಮ್ ಮತವು ಪಟ್ಟು ಹಿಡಿಯುತ್ತದೆ. ಮೂಲತಃ ಕರಾರು ಮಾಡಲ್ಪಟ್ಟ ಯಾವುದೇ ಒಂದು ವಿವಾಹವು ಭವಿಷ್ಯದಲ್ಲಿ ವಿಘಟನೆಯಾಗಬಾರದು, ಆದರೆ ದೌರ್ಭಾಗ್ಯವಶಾತ್ ಕೆಲವು ವಿಘಟನೆಗಳು ಉಂಟಾಗುತ್ತವೆ ಮತ್ತು ವೈವಾಹಿಕ ಕರಾರುಗಳು ಮುರಿಯುತ್ತವೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ವಿವಾಹವು ೧) ದೈವಕೃತ್ಯದಿಂದ ಅಂದರೆ ಪತಿ ಅಥವಾ ಪತ್ನಿಯ ಮರಣದಿಂದ ಅಥವಾ ೨) ಪಕ್ಷಗಾರರ ಕೃತ್ಯದಿಂದ, ಎಂದರೆ ವಿವಾಹ ವಿಚ್ಛೇದನೆಯಿಂದ ವಿಘಟನೆಗೊಳ್ಳುತ್ತದೆ. ಪತಿಯ ಅಥವಾ ಪತ್ನಿಯ ಮರಣವು ಒಂದು ವಿವಾಹವನ್ನು ತಕ್ಷಣ ವಿಘಟಿತಗೊಳಿಸುತ್ತದೆ. ವಿವಾಹದ ಪಕ್ಷಗಾರರೊಳಗೆ ಯಾವುದಾದರೊಂದು ಪಕ್ಷದ ಮರಣವು ಒಂದು ವಿವಾಹವನ್ನು ಪರ್ಯವಸಾನಗೊಳಿಸಲು ಪರ್ಯಾಪ್ತವಾಗುತ್ತದೆ. ಇಂತಹ ಪ್ರಕರಣದಲ್ಲಿ ಒಂದು ವಿವಾಹವನ್ನು ವಿಘಟನೆಗೊಳಿಸಲು ಯಾವುದೇ ರೀತಿಯ ಔಪಚಾರಿಕತೆಯ ಅಥವಾ ನ್ಯಾಯಾಲಯದ ಡಿಕ್ರಿಯ ಅವಶ್ಯಕತೆಯಿರುವುದಿಲ್ಲ. ಒಂದೊಮ್ಮೆ ಒಂದು ವಿವಾಹವು ಪಕ್ಷಗಾರರ ಕೃತ್ಯದಿಂದಾಗಿ ಪರ್ಯವಸಾನಗೊಂಡರೆ ಅಂತಹ ವಿಘಟನೆಯನ್ನು ವಿವಾಹ ವಿಚ್ಛೇದನೆಯೆಂದು ಕರೆಯಲಾಗುತ್ತದೆ. ಒಂದು ವಿವಾಹ ವಿಚ್ಛೇದನೆಯು ಪಕ್ಷಗಾರರ ಸ್ವಂತ ಕೃತ್ಯದಿಂದ ಉಂಟಾಗಬಹುದು ಅಥವಾ ನ್ಯಾಯಾಲಯದ ಒಂದು ಡಿಕ್ರಿಯಿಂದ. ಒಂದು ವಿವಾಹ ವಿಚ್ಛೇದನೆಯು ಯಾವುದೇ ರೀತಿಯಿಂದ ಪರಿಣಾಮಿತವಾಗಿರಬಹುದು. ಅದೊಂದು ಜೀವನದ ನಿಯಮವೆಂದು ಎಣಿಸಲಾಗುವುದಿಲ್ಲ. ಇಸ್ಲಾಮಿನಲ್ಲಿ ವಿವಾಹ ವಿಚ್ಛೇದನವನ್ನು ಒಂದು ವೈವಾಹಿಕ ಪ್ರಾಸ್ಥಿತಿಯ ಅಪವಾದವೆಂದು ಎಣಿಸಲಾಗಿದೆ. ಕಾನೂನಿನಿಂದ ಸಮ್ಮತಿಸಲ್ಪಟ್ಟಿರುವ ಅತ್ಯಂತ ಕೆಟ್ಟ ವಿಷಯಗಳಲ್ಲಿ ವಿವಾಹ ವಿಚ್ಛೇದನೆಯು ಒಂದೆಂಬುದಾಗಿ ಪೈಗಂಬರನು ಘೋಷಿಸಿರುವನು. ವಿವಾಹ ವಿಚ್ಛೇದನೆಯು ಒಂದು ಅನಿಷ್ಟವಾಗಿದ್ದುದರಿಂದ ಅದನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ತಪ್ಪಿಸಬೇಕಾಗುತ್ತದೆ. ಆದರೆ ಕೆಲವೊಮ್ಮೆ ಈ ಅನಿಷ್ಟವು ಒಂದು ಅವಶ್ಯಕತೆಯಾಗುತ್ತದೆ. ಪತಿ ಪತ್ನಿಯರಿಗೆ ತಮ್ಮ ಸಂಯುಕ್ತಿಯನ್ನು ಪ್ರೀತಿ ಮತ್ತು ವಾತ್ಸಲ್ಯದಿಂದ ಮುಂದುವರಿಸುವುದು

ಅಸಂಭವವಾದಾಗ ಅವರು ದ್ವೇಷ ಮತ್ತು ಕಷ್ಟಗಳ ವಾತಾವರಣದಲ್ಲಿ ಜೀವಿಸುವುದರ ಬದಲಾಗಿ ಅವರನ್ನು ಪ್ರತ್ಯೇಕಿತರಾಗಿರಲು ಸಮ್ಮತಿಸುವುದೆ ಲೇಸು. ಇಸ್ಲಾಮೀ ಕಾನೂನಿನಲ್ಲಿ ವಿವಾಹ ವಿಚ್ಛೇದನದ ಆಧಾರವು ಯಾವುದೆಂದರೆ ಪರಿಣೀತ್ರುಗಳು ಒಂದಾಗಿ ಬಾಳಲು ಅಸಮರ್ಥರಾಗಿರುವರಲ್ಲದೆ ಅದಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಕಾರಣವು ಬೇಕಾಗಿಲ್ಲ. ಈ ಒಂದು ವಿಚಾರದ ಹಿನ್ನೆಲೆಯಲ್ಲಿ ಮುಸ್ಲಿಮ್ ಅನೇಕ ರೀತಿಯ ವಿವಾಹ ವಿಚ್ಛೇದನಗಳನ್ನು ಮನ್ನಿಸಿದೆ. ಒಂದು ವಿವಾಹ ವಿಚ್ಛೇದನವು ಪತಿಯ ಅಥವಾ ಪತ್ನಿಯ ಕೃತ್ಯದಿಂದಾಗಬಹುದು. ಒಬ್ಬ ಪತಿಯು ಯಾವುದೇ ಒಂದು ಕಾರಣಕ್ಕೊಳಪಡದೆ ತನ್ನ ವಿವಾಹವನ್ನು ಮುರಿಯಬಹುದು. ಪತ್ನಿಯು ತನ್ನವಳಲ್ಲ ಎಂಬ ಉದ್ದೇಶವನ್ನು ವ್ಯಕ್ತಪಡಿಸುವಂತಹ ಶಬ್ದಗಳ ಉಚ್ಚಾರವು ಇದಕ್ಕೆ ಪರ್ಯಾಪ್ತವಾಗುತ್ತದೆ. ಸಾಮಾನ್ಯವಾಗಿ ಇದನ್ನು ತಲಾಕ್‌ದಿಂದ ಮಾಡಲಾಗುತ್ತದೆ. ಆದರೆ ಅವನು ತನ್ನ ಪತ್ನಿಯನ್ನು ಇಲಾ (Ila) ಮತ್ತು ಜಿಹಾರ (Zihar) ಎಂಬ ಶಬ್ದಗಳ ಉಚ್ಚಾರಣೆಯಿಂದಲೂ ಮಾಡಬಹುದು. ಈ ಶಬ್ದಗಳು ತಲಾಕ್ ಇದರಿಂದ ಬಾಹ್ಯಸ್ವರೂಪದಲ್ಲಿ ಭಿನ್ನವಾಗಿದೆಯಾದರೂ ಸಹ ಅವುಗಳ ಸಾರವು ಒಂದೇ ಆಗಿರುತ್ತದೆ. ಒಬ್ಬ ಪತ್ನಿಯು ತನ್ನ ಸ್ವೇಚ್ಛೆಯಮೇರೆಗೆ ತನ್ನ ಪತಿಯೊಂದಿಗೆ ವಿವಾಹ ವಿಚ್ಛೇದನೆಯನ್ನು ಪಡೆಯುವಂತಿಲ್ಲ. ಒಬ್ಬ ಪತ್ನಿಗೆ ಪತಿಯು ತನಗೆ ವಿಚ್ಛೇದನೆ ಕೊಡುವಂತಹ ಒಂದು ಹಕ್ಕನ್ನು ಕೊಟ್ಟಿರುವನಾದರೆ ಅಥವಾ ಈ ಬಗ್ಗೆ ಅವರೊಳಗೆ ಒಂದು ಒಪ್ಪಂದವಿದ್ದಿದ್ದರೆ ಮಾತ್ರ ಪತ್ನಿಯು ಪತಿಗೆ ವಿಚ್ಛೇದನೆ ಕೊಡಬಹುದು. ಒಂದು ಒಪ್ಪಂದದ ಮೇರೆಗೆ ಪತ್ನಿಯು ಪತಿಗೆ ಖುಲಾ (Khula) ಅಥವಾ ಮುಬಾರತ್ (Mubarat) ಇದರಿಂದ ವಿಚ್ಛೇದನೆ ಕೊಡಬಹುದು. ೧೯೩೯ಕ್ಕಿಂತ ಮೊದಲು ಒಬ್ಬ ಪತ್ನಿಯು ತನ್ನ ಗಂಡನಿಗೆ ವಿಚ್ಛೇದನೆ ಕೊಡಬೇಕಿದ್ದರೆ ಅವನು ತನ್ನ ಮೇಲೆ ಜಾರತ್ವದ ಸುಳ್ಳು ಆರೋಪವನ್ನು ಮಾಡಿರುವನು ಎಂಬ ಕಾರಣಕ್ಕಾಗಿ ನ್ಯಾಯಾಲಯದಿಂದ ಒಂದು ಡಿಕ್ರಿಯನ್ನು ಪಡೆಯಬೇಕಾಗುತ್ತಿತ್ತು. ಆದರೆ ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ, ೧೯೩೯ (Dissolution of Muslim Marriages Act 1939) ಇದು ಒಬ್ಬ ಪತ್ನಿಗೆ ವಿವಾಹ ವಿಚ್ಛೇದನೆಯನ್ನು ಪಡೆಯಲು ಅನೇಕ ಕಾರಣಗಳನ್ನು ಕೊಟ್ಟಿದೆ.

ಈ ಅಧಿನಿಯಮವು ವಿವಾಹ ವಿಚ್ಛೇದನ ಸಂಬಂಧದಲ್ಲಿ ಇಸ್ಲಾಮೀ ಸಿದ್ಧಾಂತಗಳನ್ನು ಬದಲಾವಣೆಗೊಳಿಸಿದೆ. ಈ ಅಧಿನಿಯಮವು ಪತ್ನಿಗೆ ವಿಚ್ಛೇದನೆ ಪಡೆಯಲು ಕಾರಣಗಳಾಗಿರುವ ಪತಿಯಲ್ಲಿರುವ ಅಪರಾಧಗಳನ್ನು ಆಧಾರವನ್ನಾಗಿ ಮಾಡಿದೆ.

ಪತಿಯಿಂದ ವಿವಾಹ ವಿಚ್ಛೇದನೆ
(Divorce by the Husband)

ತಲಾಕ್ (Talak) : ತಲಾಕ್ ಇದು ಒಂದು ಅರಬಿ ಭಾಷೆಯ ಶಬ್ದ

ವಾಗಿದ್ದು ಇದರ ಅರ್ಥವೇನೆಂದರೆ ಒಂದು ಪಶುವನ್ನು ವಿಮೋಚನೆಗೊಳಿಸುವದು. ಮುಸ್ಲಿಮ್ ಕಾನೂನಿನ ಪ್ರಕಾರ ತಲಾಕ್ ಎಂದರೆ ಪತಿಯಿಂದ ಕರಾರು ಮಾಡಲ್ಪಟ್ಟಿರುವ ಒಂದು ವಿವಾಹದ ನಿರಾಕರಣೆಯಾಗಿರುತ್ತದೆ. ಒಂದು ವಿವಾಹ ವಿಚ್ಛೇದನೆಯ ಒಂದು ರೀತಿಯಂತೆ ತಲಾಕ್ ಇದು ಒಂದು ವೈಶಿಷ್ಟ್ಯವಾಗಿದೆ. ಏಕೆಂದರೆ ಒಬ್ಬ ಮುಸ್ಲಿಮ್ ಪತಿಯು ಯಾವುದೇ ಒಂದು ಕಾರಣ ಕೊಡದೆ ತನ್ನ ಪತ್ನಿಯನ್ನು ವಿಚ್ಛೇದಿತಗೊಳಿಸಲು ಅನಿಯಂತ್ರಿತವಾದ ಒಂದು ಹಕ್ಕನ್ನು ಪಡೆದಿರುವನು. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ತಲಾಕ್ ಕೊಡಲು ಯಾವುದೇ ಒಂದು ದೋಷ ಅಥವಾ ವೈವಾಹಿಕ ಅಪರಾಧದ ಆವಶ್ಯಕತೆಯು ಕಾರಣವಿರಬೇಕಾಗಿಲ್ಲ. ಒಂದೊಮ್ಮೆ ಪರಿಣೀತೃಗಳಿಗೆ ಒಂದುಗೂಡಿ ಬಾಳುವುದು ಅಸಾಧ್ಯವಾದರೆ ಅಲ್ಲಿ ಅವರು ಶಾಂತತೆಯಿಂದ ಪ್ರತ್ಯೇಕಿತರಾಗಬಹುದೆಂಬುದೇ ಮುಸ್ಲಿಮ್ ಕಾನೂನಿನ ವಿವಾಹ ವಿಚ್ಛೇದನೆಯ ಪರಿಕಲ್ಪನೆಯಾಗಿದೆಯೆಂಬುದನ್ನು ನಾವು ಈಗಾಗಲೇ ನೋಡಿರುವೆವು. ತಲಾಕ್ ಇದನ್ನು ಉಚ್ಚಾರಣೆ ಮಾಡಿ ಒಂದು ವಿವಾಹವನ್ನು ವಿಚ್ಛೇದಿತಗೊಳಿಸಲು ಕಾನೂನು ಪತಿಗೆ ಮಾತ್ರ ಒಂದು ಅನಿಯಂತ್ರಿತವಾದ ಪ್ರಾಧಿಕಾರವನ್ನು ಕೊಟ್ಟಿರುತ್ತದೆ. ಇದಕ್ಕೆ ಕಾರಣವೇನೆಂದರೆ ಗಂಡಸರ ಪ್ರಭುತ್ವಕ್ಕೆ ಒಳಪಟ್ಟಿರುವ ಒಂದು ಸಮಾಜದಲ್ಲಿ ವೈವಾಹಿಕ ಸುಖವು ಪತಿಯಂದಿರ ಪ್ರಯತ್ನದ ಮೇಲೆ ಅವಲಂಬಿಸಿರುತ್ತದೆ. ಒಂದು ವಿವಾಹವನ್ನು ಸುಖದಲ್ಲಿ ಮುಂದುವರಿಸಲು ಸಾಧ್ಯವಿಲ್ಲವೆಂದು ಒಬ್ಬ ಪತಿಯು ಮನಗಂಡರೆ ಅವನು ಆ ವಿವಾಹವನ್ನು ವಿಘಟನೆಗೊಳಿಸಲು ಹಕ್ಕು ಪಡೆದಿರುವನು. ಆದರೆ ಒಂದು ವಿವಾಹವನ್ನು ವಿಘಟನೆಗೊಳಿಸುವ ಈ ಹಕ್ಕನ್ನು ಪತಿಯು ದುರುಪಯೋಗಪಡಿಸಬಾರದು. ಒಬ್ಬ ಪತ್ನಿಯು ತನ್ನ ನಡತೆಯಿಂದ ಅಥವಾ ಶಬ್ದಗಳಿಂದ ಪತಿಗೆ ಕ್ಷತಿಯುಂಟು ಮಾಡಿದರೆ ಅಥವಾ ಅವಳೊಬ್ಬಳು ಅಧರ್ಮೀಯಳಾಗಿದ್ದರೆ ಆಗ ಮಾತ್ರ ತಲಾಕ್ ಕೊಡುವುದು ಸಮ್ಮತಿಸಲಾಗುವುದೆಂದು ಇಸ್ಲಾಮಿನಲ್ಲಿ ಹೇಳಲಾಗಿದೆ. ಪತಿಗೆ ತಲಾಕ್ ಕೊಡುವ ಈ ಪರಮವಾದ ಪ್ರಾಧಿಕಾರವು ಅದರ ದುರುಪಯೋಗ ಪಡಿಸುವ ಉದ್ದೇಶದಿಂದ ಕೊಡಲ್ಪಟ್ಟಿಲ್ಲವೆಂಬುದು ಇಸ್ಲಾಮಿನ ಒಂದು ನೀತಿಯಾಗಿದೆ.

ಒಂದು ವಿಧ್ಯುಕ್ತವಾದ ತಲಾಕಿನ ಅವಶ್ಯಕತೆಗಳು
(Conditions for the Valid Talak)

ತಲಾಕ್ ಇದನ್ನು ಉಚ್ಚರಿಸುವ ಅನೇಕ ರೀತಿಗಳಿವೆ. ಆದರೆ ಪ್ರತಿಯೊಂದು ರೀತಿಯ ತಲಾಕ್‌ನಲ್ಲಿ ಈ ಕೆಳಗಿನ ಅವಶ್ಯಕ ಅಂಶಗಳು ಅಸ್ತಿತ್ವದಲ್ಲಿದ್ದಿರಬೇಕು.

1) ಸಾಮರ್ಥ್ಯ (Capacity)

ಚಿತ್ತಸ್ವಾಸ್ಥ್ಯವುಳ್ಳ ಹಾಗೂ ತಾರುಣ್ಯವನ್ನು ಮುಟ್ಟಿರುವ ಪ್ರತಿಯೊಬ್ಬ ಮುಸ್ಲಿಮ್ ಪತಿಯು ತಲಾಕ್ ಉಚ್ಚರಿಸಲು ಸಕ್ಷಮನಾಗಿರುವನು. ಈ ಉಚ್ಚಾರದ ಬಗೆ ಅವನು ಯಾವುದೇ ರೀತಿಯ ಕಾರಣ ಕೊಡುವ ಅವಶ್ಯಕತೆಯಿಲ್ಲ.

ಅವನು ತನಗೆ ಇಷ್ಟಬಂದಾಗ ತನ್ನ ಪತ್ನಿಯ ಪ್ರತಿ ತಲಾಕ್ ಹೇಳಬಹುದು. ಅವನಿಗೆ ಈ ಹಕ್ಕು ಮುಸ್ಲಿಮ್ ಕಾನೂನಿನಿಂದಲೇ ಕೊಡಲ್ಪಟ್ಟಿದೆ ಮತ್ತು ಇದು ಯಾವುದೇ ಒಂದು ಷರತ್ತು ಅಥವಾ ಪೂರ್ವವರ್ತಿ ಒಪ್ಪಂದದ ಮೇಲೆ ಅವಲಂಬಿಸಿಲ್ಲ. ಆದರೆ ಒಬ್ಬ ಮುಸ್ಲಿಮ್ ಪತಿಯು ಅಲ್ಪವಯಿಯಾಗಿದ್ದರೆ ಅಥವಾ ಚಿತ್ತಸ್ವಾಸ್ಥ್ಯವಿಲ್ಲದವನಾಗಿದ್ದರೆ ಅವನಿಗೆ ತಲಾಕ್ ಹೇಳಲು ಸಾಮರ್ಥ್ಯವಿರುವುದಿಲ್ಲ. ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನಿಂದ ಹೇಳಲ್ಪಟ್ಟ ತಲಾಕ್ ಶೂನ್ಯವಾಗಿರುತ್ತದೆ ಮತ್ತು ಅದು ಪರಿಣಾಮಿತವಾಗುವುದಿಲ್ಲ. ಒಬ್ಬ ಸಂರಕ್ಷಕನು ಅಲ್ಪವಯಿ ಗಂಡನ ಪರವಾಗಿ ಒಂದು ತಲಾಕ್ ಕೇಳುವಂತಿಲ್ಲ. ಒಬ್ಬ ಸಂರಕ್ಷನಿಗೆ ಅಲ್ಪವಯಿಯ ವಿವಾಹದ ಕರಾರು ಮಾಡುವ ಹಕ್ಕಿದೆಯಾದರೂ ಸಹ ಅವನಿಗೆ ತಲಾಕಿನ ಸಂಬಂಧದಲ್ಲಿ ಯಾವುದೇ ರೀತಿಯ ಹಕ್ಕಿರುವುದಿಲ್ಲ. ಆದರೆ ಒಬ್ಬ ವಯಸ್ಕ ಪತಿಯು ಚಿತ್ತವಿಕಲನಾಗಿದ್ದರೆ ಅವನ ಸಂರಕ್ಷಕನು ಆ ಚಿತ್ತವಿಕಲ ಪತಿಯ ಪರವಾಗಿ ಒಂದು ತಲಾಕ್ ಹೇಳಬಹುದು. ಆದರೆ ಆ ವಿವಾಹ ವಿಘಟನೆಯು ಆ ಪತಿಯ ಹಿತದೃಷ್ಟಿಯಿಂದ ಮಾಡಲ್ಪಟ್ಟುದ್ದಾಗಿರಬೇಕು. ಒಬ್ಬ ಚಿತ್ತವಿಕಲ ಪತಿಗೆ ಸಂರಕ್ಷಕನಿಲ್ಲದಿದ್ದರೆ ಒಬ್ಬ ಕಾಜಿ (Kazi) ಅಥವಾ ಒಬ್ಬ ನ್ಯಾಯಾಧೀಶನು ಆ ಪತಿಯ ಹಿತದ ದೃಷ್ಟಿಯಿಂದ ಒಂದು ವಿವಾಹವನ್ನು ವಿಘಟಿತಗೊಳಿಸಲು ಸಮರ್ಥನಾಗಿರುವನು.

೨) ಸ್ವತಂತ್ರ ಸಮ್ಮತಿ (Free Consent)

ಹನಫೀ ಕಾನೂನಿನ ಹೊರತಾಗಿ ತಲಾಕ್ ಹೇಳಲು ಪತಿಯ ಸಮ್ಮತಿಯು ಸ್ವತಂತ್ರವಾಗಿದ್ದಿರಬೇಕು. ಹನಫೀ ಕಾನೂನಿನ ಮೇರೆಗೆ ಒತ್ತಡ, ಜಬರ್‌ದಸ್ತಿ, ಅನುಚಿತ ಪ್ರಭಾವ, ಮೋಸ ಅಥವಾ ಅಮಲು ಇತ್ಯಾದಿಗಳ ಮೇರೆಗೆ ಕೊಡಲಾದ ಒಂದು ತಲಾಕ್ ವಿಧ್ಯುಕ್ತವಾಗಿರುತ್ತದೆ ಮತ್ತು ಅದು ಒಂದು ವಿವಾಹವನ್ನು ವಿಘಟಿತಗೊಳಿಸುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಮೇರೆಗೆ ಒತ್ತಡ ಅಥವಾ ಜಬರ್‌ದಸ್ತಿ, ಅನುಚಿತ ಪ್ರಭಾವ ಮೋಸ ಅಥವಾ ಅಮಲು ಇತ್ಯಾದಿಗಳಿಂದ ಕೊಡಲಾದ ತಲಾಕ್ ಶೂನ್ಯವಾಗುತ್ತದೆ ಮತ್ತು ಪ್ರಭಾವಕಾರಿಯಾಗಿರುವುದಿಲ್ಲ.

೩) ರೀತಿ (Form)

ಸುನ್ನೀ ಕಾನೂನಿನ ಪ್ರಕಾರ ಒಂದು ತಲಾಕು ಮೌಖಿಕವಾಗಿ ಅಥವಾ ಲಿಖಿತವಾಗಿ ಕೊಡಲ್ಪಡಬಹುದು. ಒಬ್ಬ ಪತಿಯು ಇದನ್ನು ಬಾಯಿಮಾತಿನಿಂದ ಹೇಳಿಬಿಡಬಹುದು ಅಥವಾ ಆವನೊಂದು ತಲಾಕ್ ನಾಮವನ್ನು ಬರೆಯಬಹುದು.

ಒಂದು ವಿಧ್ಯುಕ್ತವಾದ ತಲಾಕ್ ಅಸ್ತಿತ್ವಕ್ಕೆ ಬರಬೇಕಾದರೆ ಯಾವುದೇ ರೀತಿಯ ನಿರ್ದಿಷ್ಟವಾದ ಸೂತ್ರ ಅಥವಾ ಶಬ್ದ ಪ್ರಯೋಗ ಇತ್ಯಾದಿಗಳ ಅವಶ್ಯಕತೆ

ಯಿಲ್ಲ. ವೈವಾಹಿಕ ಸಂಬಂಧವನ್ನು ಕಡಿಯಲು ಸ್ಪಷ್ಟವಾಗಿ ಸೂಚಿಸಲ್ಪಡುವ ಪತಿಯ ಯಾವುದೇ ಒಂದು ಅಭಿವ್ಯಕ್ತಿಯು ಒಂದು ವಿವಾಹವನ್ನು ತಲಾಕ್‌ನಿಂದ ವಿಘಟಿತಗೊಳಿಸಲು ಪರ್ಯಾಪ್ತವಾಗುತ್ತದೆ.

ಒಂದು ಮೌಖಿಕ ಅಥವಾ ಲಿಖಿತ ತಲಾಕನ್ನು ಸಾಕ್ಷಿದಾರರ ಮುಂದೆ ಮಾಡುವ ಅವಶ್ಯಕತೆಯಿಲ್ಲ. ಸುನ್ನೀ ಕಾನೂನಿನ ಮೇರೆಗೆ ಸಾಕ್ಷಿದಾರರಿಲ್ಲದೆ ಮಾಡಿರುವ ಒಂದು ತಲಾಕು ವಿಧ್ಯುಕ್ತವಾಗಿರುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಮೇರೆಗೆ ತಲಾಕು ಮೌಖಿಕವಾಗಿ ಹೇಳಲ್ಪಟ್ಟಿರಬೇಕು. ಆದರೆ ಒಂದೊಮ್ಮೆ ಪತಿಯು ಮಾತನಾಡಲು ಅಶಕ್ತನಾಗಿದ್ದರೆ ಅವನು ಅದನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಬಹುದು. ಒಂದೊಮ್ಮೆ ಪತಿಯು ಬಾಯಿಮಾತಿನಲ್ಲಿ ಹೇಳಲು ಶಕ್ತನಾಗಿದ್ದಾಗ ಅದನ್ನು ಬರವಣಿಗೆಯಲ್ಲಿ ತಿಳಿಸಿದರೆ ಆ ತಲಾಕು ಶೂನ್ಯವಾಗುತ್ತದೆ ಹಾಗೂ ಪರಿಣಾಮಿತವಾಗುವುದಿಲ್ಲ. ಅದಲ್ಲದೆ ಶಿಯಾ ಕಾನೂನಿನ ಮೇರೆಗೆ ತಲಾಕು ಹೇಳಬೇಕಾದರೆ ಅದನ್ನು ನಿರ್ದಿಷ್ಟವಾದ ಅರಬೀ ಭಾಷೆಯಲ್ಲಿ ಉಚ್ಚರಿಸಬೇಕಾಗುತ್ತದೆ.

ಶಿಯಾ ಕಾನೂನಿನ ಪ್ರಕಾರ ಒಂದು ತಲಾಕನ್ನು ಇಬ್ಬರು ಸಕ್ಷಮ ಸಾಕ್ಷಿದಾರರ ಸಮಕ್ಷಮದಲ್ಲಿ ಹೇಳಬೇಕಾಗುತ್ತದೆ. ಚಿತ್ತಸ್ವಾಸ್ಥ್ಯವುಳ್ಳ ಮತ್ತು ತಾರುಣ್ಯದ ವಯಸ್ಸನ್ನು ಮುಟ್ಟಿರುವ ಯಾವನೇ ಒಬ್ಬ ಗಂಡು ಮುಸಲ್ಮಾನನು ಒಬ್ಬ ಸಾಕ್ಷಿದಾರನಾಗಿ ವರ್ತಿಸಲು ಸಕ್ಷಮನಾಗಿರುವನು. ಒಬ್ಬ ಗಂಡು ಸಾಕ್ಷಿದಾರನ ಸ್ಥಾನದಲ್ಲಿ ಇಬ್ಬರು ಚಿತ್ತಸ್ವಾಸ್ಥ್ಯವುಳ್ಳ ಮುಸ್ಲಿಮ್ ನಾರಿಯರು ಸಾಕ್ಷಿದಾರರಾಗಿ ವರ್ತಿಸಲು ಸಮರ್ಥರಾಗಿರುವರು. ಶಿಯಾ ಕಾನೂನಿನ ಪ್ರಕಾರ ಸಾಕ್ಷಿದಾರರಿಲ್ಲದೆ ಅಥವಾ ಸಕ್ಷಮರಲ್ಲದ ಸಾಕ್ಷಿದಾರರ ಮುಂದೆ ಹೇಳಲಾದ ತಲಾಕು ಶೂನ್ಯವಾಗುತ್ತದೆ.

೪) ವ್ಯಕ್ತಶಬ್ದಗಳು (Express words)

ತಲಾಕಿನ ಶಬ್ದಗಳು ವಿವಾಹವನ್ನು ವಿಘಟನೆಗೊಳಿಸಲು ಪತಿಯ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಬೇಕು. ಆದುದರಿಂದ ಈ ಉಚ್ಚಾರಣೆಯು ವ್ಯಕ್ತವಾಗಿರಬೇಕು. ಒಂದೊಮ್ಮೆ ಒಂದು ತಲಾಕು ವ್ಯಕ್ತವಾಗಿ ಕೊಡಲ್ಪಟ್ಟರೆ ಅಲ್ಲಿ ಗಂಡನ ಹೇತು ಅಥವಾ ಉದ್ದೇಶದ ಬಗ್ಗೆ ಯಾವುದೇ ಪುರಾವೆಯ ಅವಶ್ಯಕತೆಯಿರುವುದಿಲ್ಲ. ಒಂದೊಮ್ಮೆ ಪತಿಯು ವ್ಯಕ್ತವಾಗಿ ತಲಾಕ್ ಶಬ್ದವನ್ನು ಉಚ್ಚರಿಸಿದರೆ ಅವನು ಅಲ್ಲಿ ವಿವಾಹ ವಿಚ್ಛೇದನೆ ಮಾಡುವ ಉದ್ದೇಶವನ್ನು ತಾಳಿರಲಿಲ್ಲ ಎಂಬುದಾಗಿ ಹೇಳುವಂತಿಲ್ಲ. ಆದರೆ ಒಂದೊಮ್ಮೆ ಆ ಉಚ್ಚಾರವು ವ್ಯಕ್ತವಾಗಿರದಿದ್ದರೆ ಮತ್ತು ಸಂದಿಗ್ಧ ಹಾಗೂ ಅಸ್ತವ್ಯಸ್ತವಾಗಿದ್ದರೆ ಅಲ್ಲಿ ಪತಿಯು ತನ್ನ ವಿವಾಹವನ್ನು ವಿಘಟನೆಗೊಳಿಸುವ ಉದ್ದೇಶವನ್ನು ಸಾಬೀತುಪಡಿಸಿ ತೋರಿಸಬೇಕಾಗುತ್ತದೆ.

ಪತ್ನಿಯ ಉಪಸ್ಥಿತಿ (Presence of the wife)

ತಲಾಕ್ ಹೇಳುವ ಕಾಲದಲ್ಲಿ ಅಲ್ಲಿ ಪತ್ನಿಯು ಉಪಸ್ಥಿತಳಾಗಿರಬೇಕಾಗಿಲ್ಲ. ಪತ್ನಿಯ ಗೈರುಹಾಜರಿಯಲ್ಲಿ ಹೇಳಲಾದ ಒಂದು ತಲಾಕು ಕಾನೂನುಬದ್ಧವಾಗಿರುತ್ತದೆ ಹಾಗೂ ಅದು ಪರಿಣಾಮಿತವಾಗಿರುತ್ತದೆ. ಆದರೆ ಆ ಹೇಳಿಕೆಯಲ್ಲಿ ಪತ್ನಿಯನ್ನು ನಿರ್ದಿಷ್ಟವಾಗಿ ನಿರ್ದೇಶಿಸಬೇಕಾಗುತ್ತದೆ. ಒಂದೊಮ್ಮೆ ಒಬ್ಬ ಪತಿಗೆ ಒಬ್ಬಳಿಗಿಂತ ಹೆಚ್ಚಿನ ಪತ್ನಿಯರಿದ್ದರೆ ಅವನು ಯಾವ ಪತ್ನಿಗೆ ತಲಾಕ್ ಕೊಡುತ್ತಿದ್ದಾನೆ ಎಂಬುದನ್ನು ನಿರ್ದಿಷ್ಟವಾಗಿ ಹೆಸರಿಸಬೇಕಾಗುತ್ತದೆ. ಪತಿಯು ತನ್ನ ತಲಾಕನ್ನು ತಕ್ಷಣದಲ್ಲಿ ಆಕೆಗೆ ತಿಳಿಸಬೇಕಾಗಿಲ್ಲ. ಒಂದು ತಲಾಕು ಅದನ್ನು ಹೇಳಲ್ಪಟ್ಟ ದಿನದಿಂದ ಪರಿಣಾಮಿತವಾಗುವುದಲ್ಲದೆ ಪತ್ನಿಯು ಅದನ್ನು ತಿಳಿದ ದಿನದಿಂದಲ್ಲ. ಒಂದೊಮ್ಮೆ ಒಂದು ತಲಾಕು ಪತ್ನಿಗೆ ತಿಳಿಸಲ್ಪಟ್ಟಿಲ್ಲವೆಂದಾದರೂ ಸಹ ಆ ತಲಾಕು ವಿಧ್ಯುಕ್ತ ಹಾಗೂ ಪರಿಣಾಮಕಾರಿಯಾಗುತ್ತದೆ. ಆದರೆ ಕನ್ಯಾಶುಲ್ಕಕ್ಕಾಗಿ ಹಕ್ಕುದಾವೆ ಮತ್ತು ಇದ್ದತ್ ಆಚರಿಸಲು ತಲಾಕಿನ ತಿಳುವಳಿಕೆಯು ಅವಶ್ಯಕತೆಯಿರುತ್ತದೆ.

ಷರತ್ತುಬದ್ಧ ಅಥವಾ ಘಟನಾವಲಂಬಿ ತಲಾಕು (Conditional or Contingent Talak)

ಒಂದು ತಲಾಕು ಪರಮವಾಗಿರಬಹುದು ಅಥವಾ ಒಂದು ಷರತ್ತಿಗೆ ಬಾಧ್ಯವಾಗಿರಬಹುದು, ಅಥವಾ ಅದೊಂದು ಘಟನಾವಲಂಬಿಯಾಗಿರಬಹುದು. ಒಂದೊಮ್ಮೆ ಒಂದು ತಲಾಕು ಯಾವುದೆ ಷರತ್ತು ಇಲ್ಲದೆ ಹೇಳಲ್ಪಟ್ಟರೆ ಅದು ತಕ್ಷಣ ಪರಿಣಾಮಿತವಾಗುತ್ತದೆ, ಆದರೆ ಷರತ್ತುಬದ್ಧ ಅಥವಾ ಘಟನಾವಲಂಬಿ ತಲಾಕು ಅದಕ್ಕೆ ಹಚ್ಚಲ್ಪಟ್ಟ ಷರತ್ತಿನ ಪೂರ್ತಿಯಾದಾಗ ಅಥವಾ ಆ ಒಂದು ಭಾವೀ ಘಟನೆಯು ಘಟಿಸಲ್ಪಟ್ಟಾಗ ಪರಿಣಾಮಿತವಾಗುತ್ತದೆ. ಆದರೆ ಇದಕ್ಕೆ ಹಚ್ಚಲ್ಪಟ್ಟ ಷರತ್ತುಗಳು ಆ ಇಸ್ಲಾಮಿಕವಾಗಿರಬಾರದು. ಒಂದೊಮ್ಮೆ ಆ ಷರತ್ತು ಇಸ್ಲಾಮಿನ ಸಿದ್ಧಾಂತಗಳಿಗೆ ವಿರೋಧವಾಗಿದ್ದರೆ ಆ ಷರತ್ತು ಶೂನ್ಯವಾಗಿರುತ್ತದೆ, ಮತ್ತು ಒಂದು ತಲಾಕು ಕಾರ್ಯಾಚರಣೆಗೆ ಬರುವುದಿಲ್ಲ. ಒಂದೊಮ್ಮೆ ಆ ಷರತ್ತು ವಿಧ್ಯುಕ್ತವಾಗಿದ್ದರೆ ಆ ಷರತ್ತು ಪೂರ್ತಿಗೊಂಡಾಗ ಅಥವಾ ಆ ನಿರ್ದಿಷ್ಟವಾದ ಘಟನೆಯು ಘಟಿಸಲ್ಪಟ್ಟಾಗ ಒಂದು ಕಾನೂನುಬದ್ಧವಾದ ತಲಾಕು ಕಾರ್ಯಾಚರಣೆಗೆ ಬರುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಮೇರೆಗೆ ಒಂದು ಷರತ್ತುಬದ್ಧ ಅಥವಾ ಘಟನಾವಲಂಬಿ ತಲಾಕು ಶೂನ್ಯವಾಗಿರುತ್ತದೆ ಮತ್ತು ಅದು ಪರಿಣಾಮಕಾರಿಯಾಗಿರುವುದಿಲ್ಲ. ಒಂದೊಮ್ಮೆ ಆ ಷರತ್ತು ಕಾನೂನುಬದ್ಧವಾಗಿದ್ದರೂ ಸಹ ಆ ತಲಾಕು ಒಂದೊಮ್ಮೆ

ಯಾವುದಾದರೊಂದು ಷರತ್ತು ಅಥವಾ ಘಟನೆಯನ್ನು ಅವಲಂಬಿಸಿದ್ದರೆ ಅದು ವಿಧ್ಯುಕ್ತವಾಗುವುದಿಲ್ಲ. ಶಿಯಾ ಕಾನೂನಿನ ಪ್ರಕಾರ ಒಂದು ತಲಾಕು ಷರತ್ತು ಬಾಹಿರವಾಗಿರಬೇಕು.

R.U April 86 Q1

ತಲಾಕಿನ ಪ್ರಕಾರಗಳು (Kinds of Talak)

ತಲಾಕು ಹೇಳುವ ರೀತಿಯ ಆಧಾರದ ಮೇಲೆ ಒಂದು ತಲಾಕನ್ನು ಎರಡು ವರ್ಗಗಳಲ್ಲಿ ವಿಭಜಿಸಲಾಗಿದೆ.

೧) ತಲಾಕ್-ಉಲ್-ಸನ್ನತ್ (Talak-ul-Sunnat)

೨) ತಲಾಕ್-ಉಲ್-ಬಿದಾತ್ (Talak-ul-Bidaat)

ತಲಾಕ್-ಉಲ್-ಸುನ್ನತ್ ಎಂದರೆ ರದ್ದುಗೊಳಿಸಬಹುದಾದ ಒಂದು ತಲಾಕು ಇದನ್ನು ಒಂದು ಅಹಸಾವು ರೀತಿಯಲ್ಲಿ ಅಥವಾ ಹಸನ್ ರೀತಿಯಲ್ಲಿ ಹೇಳಬಹುದು. ತಲಾಕ್-ಉಲ್-ಸುನ್ನತ್ ಇದನ್ನು ಇನ್ನೂ ಎರಡು ಉಪವರ್ಗಗಳಲ್ಲಿ ವಿಭಜಿಸಲಾಗಿದೆ— ೧) ತಲಾಕ್-ಅಹಸಾವ್ (ಅತ್ಯಂತ ಸರಿಯಾದುದು) ಮತ್ತು ೨) ತಲಕ್-ಹಸನ್ (ಸರಿಯಾದುದು)

1) ತಲಾಕ್-ಉಲ್-ಸುನ್ನತ್ (ರದ್ದುಗೊಳಿಸಬಹುದಾದ ತಲಾಕು)

ತಲಾಕ್-ಉಲ್-ಸುನ್ನತ್ ಇದೊಂದು ತಲಾಕಿನ ಸಮ್ಮತಿಸಲ್ಪಟ್ಟ ರೀತಿಯೆಂದು ಎಣಿಸಲಾಗುತ್ತದೆ. ಏಕೆಂದರೆ ಇದು ಪೈಗಂಬರರ ರೂಢಿಯ ಮೇಲೆ ಆಧಾರಿತವಾಗಿದೆ. ತಲಾಕ್ ಇದೊಂದು ಅನಿಷ್ಟವೆಂಬುದಾಗಿ ಪೈಗಂಬರರ ಭಾವನೆಯಿತ್ತು. ತಲಾಕ ಹೇಳುವುದು ಒಂದು ಅನಿಷ್ಟವಾಗಿದ್ದುದರಿಂದ ಅದನ್ನು ರದ್ದುಗೊಳಿಸುವ ಬಗ್ಗೆ ಒಂದು ಉಪಬಂಧವಿರುವುದು ಒಳ್ಳೆಯದೆಂದು ಎಣಿಸಲಾಗಿದೆ. ಈ ವಿಚಾರವನ್ನು ಗಮನದಲ್ಲಿಟ್ಟು ಪೈಗಂಬರನು ಕೇವಲ ರದ್ದುಗೊಳಿಸಬಹುದಾದ ತಲಾಕನ್ನು ಶಿಫಾರಸು ಮಾಡಿದನು. ಏಕೆಂದರೆ ಈ ರೀತಿಯು ತಲಾಕಿನಿಂದ ಅದರ ದುಷ್ಪರಿಣಾಮವು ಅಂತಿಮ ಸ್ವರೂಪವನ್ನು ಸ್ಥಾಪಿಸುವುದಕ್ಕಿಂತ ಮೊದಲೇ ಪತಿ ಪತ್ನಿಯರು ತಮ್ಮ ಭಿನ್ನಾಭಿಪ್ರಾಯವನ್ನು ಬಿಟ್ಟು ಬಿಟ್ಟು ಪುನಃ ಒಂದಾಗುವ ಸಾಧ್ಯತೆಯಿದೆ. ತಲಾಕ್-ಉಲ್-ಸುನ್ನತ್ ಇದನ್ನು ತಲಾಕ್-ಉಲ್-ರಜತ್ ಎಂಬುದಾಗಿ ಕರೆಯಲಾಗುತ್ತದೆ ಈ ರೀತಿಯು ತಲಾಕು ಪೈಗಂಬರರ ಜೀವಮಾನದಲ್ಲಿ ಬಳಕೆಯಲ್ಲಿತ್ತು. ಇವು ಸುನ್ನಿಗಳಿಂದ ಹಾಗೂ ಶಿಯಾಗಳಿಂದ ಮನ್ನಿಸಲ್ಪಟ್ಟಿವೆ. ತಲಾಕ್-ಉಲ್-ಸುನ್ನತ್ ಇದನ್ನು ಅಹಸಾನ್ ಅಥವಾ ಹಸನ್ ರೀತಿಯಲ್ಲಿ ಹೇಳಬಹುದು.

1) ತಲಕ್ ಅಹಸಾನ್ (Talak Ahasan) (ಅತ್ಯಂತ ಸರಿಯಾದುದು)

ಇದು ಒಂದು ವಿವಾಹವನ್ನು ಅಲ್ಲಗೊಳಿಸುವ ಅತ್ಯಂತ ಸರಿಯಾದ ವಿಧಾನ

ವಾಗಿರುತ್ತದೆ. ಇದಕ್ಕೆ ಎರಡು ಕಾರಣಗಳಿವೆ: ಮೊದಲನೆಯದಾಗಿ, ಇದ್ದತ್ ಕಾಲಾವಧಿಯು ಮುಕ್ತಾಯಗೊಳ್ಳುವುದಕ್ಕಿಂತ ಮೊದಲೇ ಇದನ್ನು ರದ್ದುಗೊಳಿಸುವುದು ಸಾಧ್ಯವಾಗಿರುತ್ತದೆ. ಎರಡನೆಯದಾಗಿ, ತಲಾಕಿನ ಕೆಟ್ಟ ಶಬ್ದಗಳನ್ನು ಕೇವಲ ಒಂದು ಬಾರಿ ಉಚ್ಚರಿಸಬೇಕಾಗುತ್ತದೆ. ಇದೊಂದು ಅನಿಷ್ಟವಾಗಿರುವುದರಿಂದ ಈ ಶಬ್ದಗಳನ್ನು ಬಾರಿ ಬಾರಿಗೆ ಹೇಳದಿರುವುದೇ ಒಳ್ಳೆಯದೆಂಬ ಒಂದು ಅಭಿಪ್ರಾಯವಿದೆ. ಈ ರೀತಿಯ ತಲಾಕ್‌ನಲ್ಲಿ ಈ ಕೆಳಗಿನ ಔಪಚಾರಿಕತೆಗಳನ್ನು ಪಾಲಿಸಬೇಕಾಗುತ್ತದೆ.

ಎ) ಪತ್ನಿಯ ತುಹರ್ (Tuhr) ಕಾಲದಲ್ಲಿ ಪತಿಯು ತಲಾಕಿನ ಕೇವಲ ಒಂದು ಉಚ್ಚಾರಣೆ ಮಾಡಿದರೆ ಸಾಕಾಗುತ್ತದೆ. ತುಹರ್ ಇದು ಎರಡು ರಜಸ್ಸುಗಳ ನಡುವಿನ ಅವಧಿಯಾಗಿರುತ್ತದೆ. ತುಹರಿನ ಕಾಲಾವಧಿಯು ಒಬ್ಬ ನಾರಿಯ ಶುದ್ಧತೆಯ ಕಾಲಾವಧಿಯು ಎಂದು ಎಣಿಸಲಾಗುತ್ತದೆ ಮತ್ತು ಆ ಕಾಲಾವಧಿಯಲ್ಲಿ ಪತಿ ಪತ್ನಿಯರೊಳಗೆ ಸಂಭೋಗವು ನಡೆಯುವ ಸಂಭವವಿರುತ್ತದೆ. ಒಂದೊಮ್ಮೆ ವೃದ್ಧಾಪ್ಯ ಅಥವಾ ಗರ್ಭಧಾರಣೆಯ ಕಾರಣದಿಂದಾಗಿ ಒಬ್ಬ ನಾರಿಯು ರಜಸ್ಸಿಗೆ ಬಾಧ್ಯಳಾಗಿಲ್ಲವೆಂದಾದರೆ ಅವಳ ಪ್ರತಿ ಒಂದು ತಲಾಕನ್ನು ಯಾವುದೇ ಕಾಲದಲ್ಲಿ ಹೇಳಬಹುದು.

ಬಿ) ಈ ರೀತಿಯ ಒಂದು ಉಚ್ಚಾರವು ಮಾಡಲ್ಪಟ್ಟ ಬಳಿಕ ಪತ್ನಿಯು ಮೂರು ತಿಂಗಳ ರಜಸ್ಸಿನ ಕಾಲಾವಧಿಯಲ್ಲಿ ಇದ್ದತ್ ಆಚರಿಸಬೇಕಾಗುತ್ತದೆ, ಅಥವಾ ಒಂದೊಮ್ಮೆ ಅವಳು ಗರ್ಭಿಣಿಯಾಗಿದ್ದರೆ ತನ್ನ ಹೆರಿಗೆಯಾಗುವ ತನಕ ಇದ್ದತ್ ಆಚರಿಸಬೇಕಾಗುತ್ತದೆ. ಆ ಇದ್ದತ್ ಆಚರಣೆಯ ಕಾಲದಲ್ಲಿ ಪತಿಯು ತನ್ನ ತಲಾಕನ್ನು ರದ್ದುಗೊಳಿಸಬಾರದು. ಒಂದು ರದ್ದುಗೊಳಿಸುವಿಕೆಯು ವ್ಯಕ್ತ ಅಥವಾ ಅವ್ಯಕ್ತವಾಗಿರಬಹುದು. ಪತ್ನಿಯೊಂದಿಗಿನ ಸಹವಾಸವು ಒಂದು ತಲಾಕಿನ ಅವ್ಯಕ್ತ ರದ್ದಿಯಾತಿಯಾಗಿರುತ್ತದೆ. ಈ ಅವಧಿಯಲ್ಲಿ ಅವನು ಕೇವಲ ಒಂದೇ ಬಾರಿ ಒಂದುಗೂಡಿದರೂ ಸಹ ಆ ತಲಾಕು ರದ್ದುಗೊಳ್ಳಲ್ಪಡುತ್ತದೆ. ಅವನು ತನ್ನ ಪತ್ನಿಯನ್ನು ಪುನಃ ಸ್ವೀಕರಿಸುವನೆಂದು ಎಣಿಸಲಾಗುತ್ತದೆ.

ಇದ್ದತ್ತಿನ ಕಾಲಾವಧಿಯು ಮುಗಿದಾಗ ಮತ್ತು ಪತಿಯು ತನ್ನ ತಲಾಕನ್ನು ರದ್ದುಗೊಳಿಸದಿದ್ದರೆ ಆ ತಲಾಕು ರದ್ದುಗೊಳ್ಳುವಂತಹದ್ದಾಗಿರುವದಿಲ್ಲ ಮತ್ತು ಅದು ಅಂತಿಮವಾಗಿರುತ್ತದೆ. ಅಹಸಾನ್ ರೀತಿಯ ತಲಾಕಿನ ವೈಶಿಷ್ಟ್ಯವೆಂದರೆ ಅಲ್ಲಿ ಒಂದೇ ಬಾರಿ ತಲಾಕಿನ ಉಚ್ಚಾರವಾಗುತ್ತದೆ ಮತ್ತು ಇದ್ದತ್ ಕಾಲದ ಮೂರು ತಿಂಗಳ ಅವಧಿಯಲ್ಲಿ ಅದನ್ನು ರದ್ದುಗೊಳಿಸಲಾಗುವದಿಲ್ಲ. ಆದುದರಿಂದ ಒಂದೊಮ್ಮೆ ಪತಿಯು ಸಿಟ್ಟಿನಲ್ಲಿ ಒಂದು ತಲಾಕಿನ ಘೋಷಣೆ ಮಾಡಿದರೆ ಮತ್ತು ಆ ಬಳಿಕ ತನ್ನ ತಪ್ಪನ್ನು ತಿಳಿದುಕೊಂಡರೆ ಅವನಿಗೆ ಇಷ್ಟವಿದ್ದರೆ ಅದನ್ನು ರದ್ದುಗೊಳಿಸಲು ಅವನಿಗೆ ಸಾಕಷ್ಟು ಅವಕಾಶವಿರುತ್ತದೆ.

II) ತಲಾಕ್ ಹಸನ (ಸರಿಯೊದ ತಲಾಕು)

ಇದೊಂದು ಸರಿಯಾದ ಹಾಗೂ ಸಮ್ಮತಿಸಲ್ಪಟ್ಟ ತಲಾಕಿನ ರೀತಿಯಾಗಿದೆ. ಈ ರೀತಿಯು ತಲಾಕಿನಲ್ಲೂ ಸಹ ಅದನ್ನು ರದ್ದುಗೊಳಿಸಲು ಒಂದು ಉಪಬಂಧ ವಿದೆ. ಆದರೆ ಇದು ಶ್ರೇಷ್ಠವಾದ ರೀತಿಯಲ್ಲ ಏಕೆಂದರೆ ಇಲ್ಲಿ ತಲಾಕ್ ಎಂಬ ಶಬ್ದಗಳನ್ನು ತುಹರ್ ಕಾಲದಲ್ಲಿ ಒಂದರ ಹಿಂದೆ ಒಂದರಂತೆ ಉಚ್ಚರಿಸಬೇಕಾಗುತ್ತದೆ. ಈ ರೀತಿಯ ತಲಾಕಿನಲ್ಲಿ ಈ ಕೆಳಗಿನ ಔಪಚಾರಿಕತೆಯನ್ನು ಪಾಲಿಸಬೇಕಾಗುತ್ತದೆ.

ಎ) ಪತಿಯು ತುಹರ್ ಕಾಲದಲ್ಲಿ ಒಮ್ಮೆ ತಲಾಕಿನ ಘೋಷಣೆ ಮಾಡಬೇಕಾಗುತ್ತದೆ. ಈ ತುಹರನ ಕಾಲದಲ್ಲಿ ಆ ತಲಾಕ್ ಉಚ್ಚಾರಣೆಯಾದ ಬಳಿಕ ಗಂಡನು ವ್ಯಕ್ತವಾಗಿ ಅಥವಾ ಅವ್ಯಕ್ತವಾಗಿ ಅವನ್ನು ರದ್ದುಗೊಳಿಸುವುದಿಲ್ಲ.

ಬಿ) ಎರಡನೇ ತುಹರನಲ್ಲಿ ಎರಡನೇ ಬಾರಿ ತಲಾಕಿನ ಉಚ್ಚಾರವಾಗುತ್ತದೆ. ಈ ಎರಡನೇ ಉಚ್ಚಾರದ ಬಳಿಕ ಅಲ್ಲಿ ವ್ಯಕ್ತ ಅಥವಾ ಅವ್ಯಕ್ತವಾದ ರದ್ದಿಯಾತಿಯಾಗುವುದಿಲ್ಲ.

ಸಿ) ಎರಡೂ ತಲಾಕ್ ಘೋಷಣೆಗಳ ಕಾಲಾವಧಿಯಲ್ಲಿ ಗಂಡನು ಅವುಗಳನ್ನು ರದ್ದುಗೊಳಿಸುವದಿಲ್ಲವಾದರೆ ಮತ್ತು ಆಕೆಯ ತುಹರ್ ಇದರ ಮೂರನೇ ಕಾಲಾವಧಿಯಲ್ಲಿ ಅವನೊಂದು ಮೂರನೇ ಉಚ್ಚಾರವನ್ನು ಮಾಡಿದರೆ ಅಲ್ಲಿ ಆ ತಲಾಕ್ ಪೂರ್ಣಗೊಳ್ಳುತ್ತದೆ ಮತ್ತು ಅದನ್ನು ರದ್ದುಗೊಳಿಸುವಂತಿಲ್ಲ. ಇದರಿಂದಾಗಿ ಅವರ ವಿವಾಹವು ವಿಘಟಿತವಾಗುತ್ತದೆ ಹಾಗೂ ಅದರ ನಂತರ ಪತ್ನಿಯು ಇದ್ದತ್ ಆಚರಿಸಬೇಕಾಗುತ್ತದೆ.

ತಲಕ್-ಹಸನ್ ಇದರ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಮೂರನೇ ಉಚ್ಚಾರಕ್ಕಿಂತ ಮೊದಲು ಅದನ್ನು ರದ್ದುಗೊಳಿಸಬಹುದು ಮತ್ತು ಮೂರನೇ ಉಚ್ಚಾರಣೆಯ ಬಳಿಕ ಅದನ್ನು ರದ್ದುಗೊಳಿಸುವಂತಿಲ್ಲ. ಒಂದು ತಲಾಕನ್ನು ಪರಿಣಾಮಿತಗೊಳಿಸಬೇಕಾದರೆ ಈ ಶಬ್ದಗಳನ್ನು ಪತ್ನಿಯ ಶುದ್ಧತೆಯ ಕಾಲಾವಧಿಯಲ್ಲಿ ಒಂದರ ಹಿಂದೆ ಒಂದರಂತೆ ಮೂರುಬಾರಿ ಉಚ್ಚರಿಸಬೇಕಾಗುತ್ತದೆ.

2) ತಲಾಕ್-ಉಲ್-ಬಿದತ್ (Talak-ul-Bidaat)

ಇದೊಂದು ರದ್ದುಗೊಳಿಸಲಾಗದಂತಹ ತಲಾಕಿನ ರೀತಿಯಾಗಿರುತ್ತದೆ. ಈ ರೀತಿಯ ತಲಾಕ್‌ನಿಂದ ತಲಾಕು ಹೇಳಲ್ಪಟ್ಟ ತಕ್ಷಣದಲ್ಲಿ ಅದು ಕಾರ್ಯಾಚರಣೆ ಬರುತ್ತದೆ ಮತ್ತು ಅಲ್ಲಿ ಪತಿ-ಪತ್ನಿಯರು ಪುನಃ ಒಂದಾಗುವ ಸಂಭವವಿರುವುದಿಲ್ಲ. ಯಾವ ಒಂದು ತಲಾಕ್‌ನಿಂದ ಪತಿ-ಪತ್ನಿಯರು ಮತ್ತೊಮ್ಮೆ ಒಂದಾಗುವ ಅವಕಾಶವಿಲ್ಲವೋ ಆ ರೀತಿಯು ತಲಾಕು ಪೈಗಂಬರರಿಂದ ಸಮ್ಮತಿಸಲ್ಪಟ್ಟಿಲ್ಲ. ಆದುದರಿಂದ ರದ್ದುಗೊಳಿಸಲ್ಪಡದಂತಹ ರೀತಿಯ ತಲಾಕು ಪೈಗಂಬರನ ಕಾಲಾವಧಿಯಲ್ಲಿ ಬಳಕೆ ತಲಾಕ್-ಉಲ್-ಬಿದ್ದತ್ ಇದು ಇಸ್ಲಾಮಿನ ಆರಂಭದ ಎರಡನೇ ಶತಮಾನದಲ್ಲಿ

ಅಸ್ತಿತ್ವಕ್ಕೆ ಬಂತು. ಅಮಿರ್ ಅಲಿ ಎಂಬವನ ಪ್ರಕಾರ ಈ ರೀತಿಯ ತಲಾಕು ಉಮಯೂನ್ ರಾಜರಿಂದ ಪ್ರಚಲಿತಗೊಳಿಸಲ್ಪಟ್ಟಿತ್ತು. ಏಕೆಂದರೆ ತಲಾಕಿನ ಬಗ್ಗೆ ಪೈಗಂಬರನು ಹಾಕಿರುವ ನಿಯಮಗಳು ಅವರಿಗೆ ಅನಾನುಕೂಲವಾಗಿದ್ದವು, ಅವರ ಬಳಿಕ ಈ ರೀತಿಯ ತಲಾಕು ಸುನ್ನೀ ಮುಸಲ್ಮಾನರಲ್ಲಿ ಬಳಕೆಗೆ ಬಂದಿದೆ. ಶಿಯಾ ಕಾನೂನಿನಲ್ಲಿ ರದ್ದುಗೊಳಿಸಲಾಗದಂತಹ ತಲಾಕನ್ನು ಮನ್ನಿಸಲಾಗುವುದಿಲ್ಲ. ಮುಲ್ಲಾರವರ ಅಭಿಪ್ರಾಯದಲ್ಲಿ ಬಿದ್ದತ್ ರೀತಿಯ ತಲಾಕು ಕಾನೂನಿನಲ್ಲಿ ಒಳ್ಳೆಯದಾಗಿದೆ ಮತ್ತು ಧರ್ಮದಲ್ಲಿ ಕೆಟ್ಟದಾಗಿದೆ. ಈ ದೇಶದಲ್ಲಿ ವಿವಾಹ ವಿಚ್ಛೇದನೆ ಕೊಡಲು ಅತಿಯಾಗಿ ಈ ರೀತಿಯನ್ನು ಬಳಸಲಾಗುತ್ತದೆ.

ತಲಾಕಿನ ಶಬ್ದಗಳನ್ನು ಉಚ್ಚರಿಸಿದ ಬಳಿಕ ಒಂದು ಬಿದತ್ ತಲಾಕ್ ಪೂರ್ಣಗೊಳ್ಳುತ್ತದೆ ಮತ್ತು ಆ ವಿವಾಹವು ಸಂಪೂರ್ಣವಾಗಿ ವಿಘಟಿತಗೊಳ್ಳುತ್ತದೆ. ಒಬ್ಬ ಸುನ್ನೀ ಪತಿಯು ರದ್ದುಗೊಳಿಸಲಾಗದಂತಹ ರೀತಿಯಲ್ಲಿ ತನ್ನ ಪತ್ನಿಯನ್ನು ವಿಚ್ಛೇದನೆಗೊಳಿಸಬಯಸಿದರೆ ಈ ಕೆಳಗಿನವುಗಳಲ್ಲಿ ಯಾವುದಾದರೊಂದು ರೀತಿಯಲ್ಲಿ ಅವನು ಅದನ್ನು ಮಾಡಬಹುದು.

ಎ) ಪತ್ನಿಯ ತುಹರಿನ ಕಾಲದಲ್ಲಿ ಪತಿಯು ಮೂರು ಉಚ್ಚಾರಗಳನ್ನು ಮಾಡಬಹುದು. "ನಾನು ನಿನ್ನನ್ನು ವಿಚ್ಛೇದನೆಗೊಳಿಸುತ್ತಿದ್ದೇನೆ, ನಾನು ನಿನ್ನನ್ನು ವಿಚ್ಛೇದಿಸುತ್ತಿದ್ದೇನೆ, ನಾನು ನಿನ್ನನ್ನು ವಿಚ್ಛೇದಿಸುತ್ತಿದ್ದೇನೆ". ಅವನು ತನ್ನ ಮೂರು ತಲಾಕ್ ಉಚ್ಚಾರಗಳನ್ನು ಒಂದೇ ವಾಕ್ಯದಲ್ಲೂ ಹೇಳಬಹುದು. "ನಾನು ನಿನ್ನನ್ನು ಮೂರು ಬಾರಿ ವಿಚ್ಛೇದನೆಗೊಳಿಸುತ್ತಿದ್ದೇನೆ" ಅಥವಾ ನಾನು ನನ್ನ ಮೊದಲನೆ, ಎರಡನೆ, ಮತ್ತು ಮೂರನೆ ತಲಾಕನ್ನು ಉಚ್ಚರಿಸುತ್ತಿದ್ದೇನೆ.

ಬಿ) ತನ್ನ ಪತ್ನಿಯ ಶುದ್ಧತೆಯ ಕಾಲಾವಧಿಯಲ್ಲಿ ಪತಿಯು ಕೇವಲ ಒಂದು ಘೋಷಣೆ ಮಾಡಿ ತನ್ನ ಪತ್ನಿಯನ್ನು ರದ್ದುಗೊಳ್ಳದ ರೀತಿಯಲ್ಲಿ ವಿಚ್ಛೇದನೆಗೊಳಿಸಬಹುದು. "ನಿನ್ನನ್ನು ನಾನು ರದ್ದುಗೊಳಿಸಲಾಗದಂತಹ ರೀತಿಯಲ್ಲಿ ವಿಚ್ಛೇದನೆಗೊಳಿಸುತ್ತಿದ್ದೇನೆ" ಅಥವಾ "ನಾನು ನಿನ್ನನ್ನು ಬೇಸ್‌ನಲ್ಲಿ ವಿಚ್ಛೇದನೆಗೊಳಿಸುತ್ತಿದ್ದೇನೆ".

ಇಲಾ (Ila)

ತಲಾಕಿನ ಹೊರತಾಗಿ ಒಬ್ಬ ಮುಸ್ಲಿಮ್ ಪತಿಯು ತನ್ನ ವಿವಾಹವನ್ನು ಇಲಾ ಮತ್ತು ಜಿಹಾ ಎಂಬ ಇತರ ಎರಡು ರೀತಿಗಳಿಂದಲೂ ನಿರಾಕರಿಸಬಹುದು. ಇಲಾ ಇದೊಂದು ಒಬ್ಬ ಪತಿಯಿಂದ ಮಾಡಲಾಗುವ ಪ್ರಲಕ್ಷಿತ ವಿಚ್ಛೇದನೆಯಾಗಿರುತ್ತದೆ. ಇಲಾದಲ್ಲಿ ಪತಿಯು ವ್ಯಕ್ತವಾಗಿ ಆ ವಿವಾಹವನ್ನು ಅಲ್ಲಗಳೆಯುವುದಿಲ್ಲ. ಆದರೆ ಪತಿಯ ನಡತೆಯು ಯಾವ ಸ್ವರೂಪದ್ದೆಂದರೆ ಅದರಿಂದ ಅವನು ಆ ವಿವಾಹವನ್ನು ವಿಘಟನೆಗೊಳಿಸಲು ಉದ್ದೇಶಿಸಿರುವನೆಂಬುದು ತಿಳಿಯುತ್ತದೆ. ಈ ರೀತಿಯಲ್ಲಿ

ಪತಿಯು ತನ್ನ ಪತ್ನಿಯೊಂದಿಗೆ ಸಂಭೋಗವನ್ನು ಮಾಡಲಾರೆನೆಂದು ಒಂದು ಪ್ರತಿಜ್ಞೆ ಮಾಡುವನು. ಈ ಪ್ರತಿಜ್ಞೆಯ ಬಳಿಕ ಅವರೊಳಗೆ ನಾಲ್ಕು ತಿಂಗಳುಗಳ ಕಾಲಾವಧಿಗೆ ಲೈಂಗಿಕ ಸಂಭೋಗವು ನಡೆಯುವದಿಲ್ಲ. ನಾಲ್ಕನೆ ತಿಂಗಳ ಬಳಿಕ ಅವರ ವಿವಾಹವು ರದ್ದುಗೊಳ್ಳದ ರೀತಿಯಲ್ಲಿ ವಿಘಟಿತಗೊಳ್ಳುತ್ತದೆ. ಆದರೆ ಈ ಗೊತ್ತು ಮಾಡಲ್ಪಟ್ಟ ನಾಲ್ಕು ತಿಂಗಳುಗಳ ಕಾಲಾವಧಿಯೊಳಗೆ ಪತಿಯು ಅವನ ಪತ್ನಿಯೊಂದಿಗೆ ಸಹವಾಸವನ್ನು ಪುನಃ ಆರಂಭಿಸಿದರೆ ಅಲ್ಲಿ ಇಲಾ ರದ್ದುಗೊಳ್ಳುತ್ತದೆ ಮತ್ತು ಆ ವಿವಾಹವು ವಿಘಟಿತಗೊಳ್ಳುವುದಿಲ್ಲ.

ಶಿಯಾ ಕಾನೂನು (Shia Law)

ಇತನಾ ಅಶಾರಿಯಾ (Ithna-Asharia) ಪರಂಪರೆಯ ಪ್ರಕಾರ ನ್ಯಾಯಾಲಯದ ಒಂದು ಆದೇಶವಿಲ್ಲದೇ ಇಲಾ ಇದು ಒಂದು ವಿವಾಹ ವಿಚ್ಛೇದನೆಯಾಗಿ ಕಾರ್ಯಾಚರಣೆಗೆ ಬರುವುದಿಲ್ಲ. ಈ ಪರಂಪರೆಯ ಪ್ರಕಾರ ನಾಲ್ಕನೇ ತಿಂಗಳು ಮುಗಿದ ಬಳಿಕ ಪತ್ನಿಯು ಕೇವಲ ನ್ಯಾಯಿಕ ವಿಚ್ಛೇದನಕ್ಕೆ ಹಕ್ಕುದಾರಳಾಗುವಳು. ಒಂದೊಮ್ಮೆ ಅವಳು ನ್ಯಾಯಾಲಯದಿಂದ ಒಂದು ಡಿಕ್ರಿಯನ್ನು ಪಡೆಯದಿದ್ದರೆ ಆ ವಿವಾಹವು ವಿಘಟಿತವಾಗುವುದಿಲ್ಲ.

ಜಿಹಾರ್ (Zihar)

ಜಿಹಾರ ಇದೂ ಸಹ ಒಂದು ಪ್ರಲಕ್ಷಿತ ವಿಚ್ಛೇದನೆಯಾಗಿರುತ್ತದೆ. ಈ ರೀತಿಯಲ್ಲಿ ಪತಿಯು ತನ್ನ ಪತ್ನಿಯನ್ನು ತನ್ನ ನಿಷೇಧಿತ ಹಂತದೊಳಗಿನ ಯಾವಳಾದರೊಬ್ಬ ನಾರಿಗೆ ಸಮಾನಳೆಂದು ಎಣಿಸುವನು. ಇಂದಿನಿಂದ ತನ್ನ ಪತ್ನಿಯು ತನ್ನ ತಾಯಿ ಅಥವಾ ಸಹೋದರಿಗೆ ಸಮಾನಳೆಂದು ಪತಿಯು ಹೇಳಬಹುದು. ಅಂತಹ ಒಂದು ಆಕ್ಷೇಪಣೆಯ ತುಲನೆಯ ಬಳಿಕ ಪತಿಯು ನಾಲ್ಕು ತಿಂಗಳುಗಳ ಕಾಲಾವಧಿಗೆ ತನ್ನ ಪತ್ನಿಯೊಂದಿಗೆ ಸಹವಾಸ ಮಾಡನು. ಆ ನಾಲ್ಕನೇ ತಿಂಗಳು ಮುಕ್ತಾಯಗೊಂಡಾಗ ಆ ಜಿಹಾರ್ ಪೂರ್ಣಗೊಳ್ಳುತ್ತದೆ. ಆದರೆ ಇದರಿಂದಾಗಿ ವಿವಾಹವು ತನ್ನಿಂದ ತಾನಾಗಿಯೇ ವಿಘಟಿತಗೊಳ್ಳುವುದಿಲ್ಲ. ನಾಲ್ಕನೇ ತಿಂಗಳು ಮುಗಿದ ಬಳಿಕ ಪತ್ನಿಯು ನ್ಯಾಯಾಲಯಕ್ಕೆ ಹೋಗಿ ವಿವಾಹ ವಿಚ್ಛೇದನೆಯನ್ನು ಪಡೆಯಲು ಹಕ್ಕುದಾರಳಾಗುವಳು. ಇದರ ಹೊರತಾಗಿ ಅವರ ವಿವಾಹವು ವಿಘಟಿತಗೊಳ್ಳುವುದಿಲ್ಲ. ಒಂದೊಮ್ಮೆ ಪತಿಯು ತನ್ನ ಜಿಹಾರನ್ನು ರದ್ದುಗೊಳಿಸಿ ಪತ್ನಿಯೊಂದಿಗೆ ಸಹವಾಸವನ್ನು ಮತ್ತೊಮ್ಮೆ ಆರಂಭಿಸಬೇಕೆಂದಿದ್ದರೆ ಪತ್ನಿಯು ನ್ಯಾಯಿಕ ವಿಚ್ಛೇದನೆಯನ್ನು ಪಡೆಯುವಂತಿಲ್ಲ. ಆದರೆ ತನ್ನ ತಾಯಿ ಅಥವಾ ಸಹೋದರಿಯರೊಂದಿಗೆ ತುಲನೆ ಮಾಡಲ್ಪಟ್ಟ ಪತ್ನಿಯರೊಂದಿಗೆ ಒಂದು ಸಹವಾಸವು ಪಾಪಕೃತ್ಯವಾಗಿರುತ್ತದೆ. ಆದುದರಿಂದ ಇಂತಹ ಒಂದು ಪರಿಸ್ಥಿತಿಯಲ್ಲಿ ಪತ್ನಿಯು ಒಂದು ನ್ಯಾಯಿಕ ವಿಚ್ಛೇದನೆಯನ್ನು ಪಡೆಯುವಂತಿಲ್ಲವಾದರೂ ಸಹ

ಪತಿಯು ತನ್ನನ್ನು ಆತನ ತಾಯಿ ಅಥವಾ ಸಹೋದರಿಗೆ ತುಲನೆ ಮಾಡಿದ ಬಗ್ಗೆ ತನಗೆ ಯಾವುದಾದರೊಂದು ಜುಲ್ಮಾನೆಯನ್ನು ಸಲ್ಲಿಸಬೇಕೆಂದು ಪತಿಯನ್ನು ಆಗ್ರಹ ಪಡಿಸಬಹುದು.

ಜಿಹಾರ್ ಇದು ತನ್ನಿಂದ ತಾನೇ ಒಂದು ವಿವಾಹವನ್ನು ವಿಘಟಿತಗೊಳಿಸುವುದಿಲ್ಲ. ಇಲ್ಲಿ ಪತ್ನಿಯು ಒಂದೇ (೧) "ಒಂದು ನ್ಯಾಯಿಕ ವಿಚ್ಛೇದನೆಯನ್ನು ಪಡೆಯಬಹುದು ಅಥವಾ (೨) ಪತಿಯು ಆತ್ಮ ಶುದ್ಧಿ ಮಾಡಿ ದಾಂಪತ್ಯದ ಹಕ್ಕುಗಳ ಪುನರ್‌ಪ್ರಾಪ್ತಿಗಾಗಿ ಒಂದು ಹಕ್ಕುದಾವೆ ಮಾಡಬಹುದು.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದು ಜಿಹಾರ್ ಘೋಷಣೆಯನ್ನು ಇಬ್ಬರು ಸಕ್ಷಮ ಸಾಕ್ಷಿದಾರರ ಮುಂದೆ ಮಾಡಬೇಕಾಗುತ್ತದೆ.

ಇಲಾ ಮತ್ತು ಜಿಹಾರ್ ಪದ್ಧತಿಗಳ ವಿವಾಹ ವಿಚ್ಛೇದನೆಗಳು ಈಗ ಹೆಚ್ಚಾಗಿ ಬಳಕೆಯಲ್ಲಿಲ್ಲ. ಈ ರೀತಿಯ ಪ್ರಲಕ್ಷಿತ ವಿವಾಹ ವಿಚ್ಛೇದನೆಯ ಬಗ್ಗೆ ಕಾನೂನಿನಲ್ಲಿ ಉಪಬಂಧವಿದೆಯಾದರೂ ಸಹ ಇದು ವ್ಯವಹಾರದಲ್ಲಿಲ್ಲ. ತನ್ನ ವಿವಾಹವನ್ನು ನಿರಾಕರಿಸಬಯಸುವ ಒಬ್ಬ ಪತಿಯು ಇಲಾ ಮತ್ತು ಜಿಹಾರ್ ಇಂತಹ ಸರ್ವೋಚ್ಚ ರೀತಿಗಳ ಬದಲಾಗಿ ಸರಳ ಹಾಗೂ ನೇರವಾದ ರೀತಿಯಾಗಿರುವ ತಲಾಕ್ ಇದರಿಂದ ತನ್ನ ವಿವಾಹವನ್ನು ವಿಘಟಿತಗೊಳಿಸಬಹುದು.

ಪತ್ನಿಯಿಂದ ವಿಚ್ಛೇದನೆ (Divorce by wife)

ಒಬ್ಬ ಮುಸ್ಲಿಮ್ ಪತ್ನಿಗೆ ವಿವಾಹ ವಿಚ್ಛೇದನೆಯ ಸಂಬಂಧದಲ್ಲಿ ಒಂದು ಸ್ವತಂತ್ರವಾದ ಹಕ್ಕಿಲ್ಲ. ಅವಳು ತನ್ನ ಪತಿಯನ್ನು ತನಗೆ ಇಷ್ಟ ಬಂದಾಗ ವಿಚ್ಛೇದನೆಗೊಳಿಸುವಂತಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಪತ್ನಿಯಿಂದಾಗುವ ವಿಚ್ಛೇದನೆಯು ಕೆಲವು ಷರತ್ತುಗಳ ಮೇಲೆ ಅವಲಂಬಿಸಿರುತ್ತದೆ. ಅವಳು ತನ್ನ ಪತಿಯನ್ನು ಕೇವಲ ಈ ಕೆಳಗಿನ ಷರತ್ತುಗಳ ಮೇರೆಗೆ ವಿಚ್ಛೇದಿತಗೊಳಿಸಬಹುದು:

ಎ) ಒಂದೊಮ್ಮೆ ಪತಿಯು ಪತ್ನಿಗೆ ತಲಾಕಿನ ಹಕ್ಕನ್ನು ನಿಯೋಗಿಸಿರುವನಾದರೆ,

ಬಿ) ಒಂದೊಮ್ಮೆ ಪರಸ್ಪರ ಸಮ್ಮತಿಯಿಂದ ಅವರು ವಿವಾಹ ವಿಚ್ಛೇದನೆ ಕೊಡಲು ಶಕ್ತಿ ಪಡೆದಿರುವನಾದರೆ,

ಸಿ) ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ, ೧೯೩೯ ಇದರಲ್ಲಿ ಉಪಬಂಧಿಸಲಾದ ಯಾವುದಾದರೊಂದು ಕಾರಣಕ್ಕಾಗಿ ಅವಳು ತನ್ನ ಪತಿಯನ್ನು ವಿಚ್ಛೇದಿತಗೊಳಿಸಬಹುದಾಗಿದೆ.

ಮೊದಲನೆಯ ಎರಡು ಪ್ರಕರಣಗಳಲ್ಲಿ ವಿಚ್ಛೇದಿತ ಪತ್ನಿಯು ಹಕ್ಕು ಆಕೆಯ

ಪತಿಯ ಸಮ್ಮತಿಯನ್ನು ಅವಲಂಬಿಸಿರುತ್ತದೆ ಮತ್ತು ಕೊನೆಯ ಪ್ರಕರಣದಲ್ಲಿ ಅದು ನ್ಯಾಯಾಲಯಗಳನ್ನು ಅವಲಂಬಿಸಿರುತ್ತದೆ. ಒಬ್ಬ ಮುಸ್ಲಿಮ್ ಪತ್ನಿಯು ತನ್ನ ಪತಿಯ ಸಮ್ಮತಿಯಿಲ್ಲದೆ ಅಥವಾ ಒಂದು ನ್ಯಾಯಿಕ ಡಿಕ್ರಿಯಿಲ್ಲದೆ ತನ್ನ ಪತಿಯನ್ನು ವಿಚ್ಛೇದಿತಗೊಳಿಸುವಂತಿಲ್ಲ.

ನಿಯೋಜಿತ ವಿಚ್ಛೇದನೆ (Talak-E-Tafweez)

ಒಬ್ಬ ಮುಸ್ಲಿಮ್ ಪತಿಗೆ ತನ್ನ ಪತಿಯನ್ನು ವಿಚ್ಛೇದನೆಗೊಳಿಸುವ ಅನಿಯಂತ್ರಿತವಾದ ಹಕ್ಕಿರುತ್ತದೆ. ಅವನ ಈ ಹಕ್ಕು ಎಷ್ಟರವಟ್ಟಿಗೆ ಪರಮವಾಗಿದೆಯೆಂದರೆ ಈ ಹಕ್ಕನ್ನು ಅವನು ಸ್ವತಃ ಚಲಾಯಿಸಬಹುದು ಅಥವಾ ಇದನ್ನು ಇನ್ನೊಬ್ಬ ವ್ಯಕ್ತಿಗೆ ನಿಯೋಗಿಸಬಹುದು. ತಲಾಕ್ ಶಬ್ದವನ್ನು ಅವನು ಸ್ವತಃ ಉಚ್ಚರಿಸುವುದರ ಬದಲಾಗಿ ತನ್ನ ಪತ್ನಿಯನ್ನು ವಿಚ್ಛೇದನೆ ಮಾಡುವ ಹಕ್ಕನ್ನು ಅವನು ಇನ್ನೊಬ್ಬನಿಗೆ ಕೊಡಬಹುದು. ಅದನ್ನು ತನ್ನ ಪತ್ನಿಗೂ ಕೊಡಬಹುದು. ಗಂಡನ ಪ್ರಾಧಿಕಾರದ ಮೇರೆಗೆ ಅವನ ಕಾರ್ಯಾಭಾರಿಯಂತೆ ವರ್ತಿಸಿ ಅವನ ಪತ್ನಿಯನ್ನು ಅವನಿಂದ ವಿಚ್ಛೇದಿತಗೊಳಿಸುವ ಅಂತಹ ಒಬ್ಬ ವ್ಯಕ್ತಿಯಿಂದ ಆಗುವ ವಿವಾಹ ವಿಚ್ಛೇದನವನ್ನು ತಲಕ್-ಇ-ತಫ್ವೀಜ್ ಎಂದು ಕರೆಯಲಾಗುತ್ತದೆ. ಈ ಪ್ರಾಧಿಕಾರದ ನಿಯೋಗವು ಪರಮವಾಗಿರಬಹುದು ಅಥವಾ ಕೆಲವು ಷರತ್ತುಗಳಿಗೆ ಬಾಧ್ಯವಾಗಿರಬಹುದು. ಇಂತಹ ಒಂದು ಪ್ರಕರಣದಲ್ಲಿ ಆ ಪ್ರಾಧಿಕಾರವನ್ನು ಪಡೆದಿರುವ ವ್ಯಕ್ತಿಯಿಂದ ಕೊಡಲ್ಪಟ್ಟ ವಿವಾಹ ವಿಚ್ಛೇದನೆಯು ಪತಿಯಿಂದ ಕೊಡಲ್ಪಟ್ಟ ವಿಚ್ಛೇದನೆಯಷ್ಟೇ ಪರಿಣಾಮಕಾರಿಯಾಗಿರುತ್ತದೆ.

ಗಂಡನು ತನ್ನ ಹೆಂಡತಿಗೆ ಈ ಹಕ್ಕನ್ನು ಕೊಟ್ಟುಬಿಡಬಹುದು ಮತ್ತು ತಲಾಕ್ ಉಚ್ಚರಿಸುವ ಹಕ್ಕನ್ನು ಅವಳು ಚಲಾಯಿಸಬಹುದು. ಈ ಪ್ರಾಧಿಕಾರವು ವಿವಾಹ ಕಾಲದಲ್ಲಿ ಅಥವಾ ವಿವಾಹದ ಬಳಿಕ ಯಾವುದೇ ಕಾಲದಲ್ಲಿ ಒಂದು ಒಪ್ಪಂದದ ಮೇರೆಗೆ ಪತಿಯು ತನ್ನ ಪತ್ನಿಗೆ ಕೊಡಬಹುದು. ಪತ್ನಿಗೆ ಕೊಡಲಾದ ಈ ವಿವಾಹ ವಿಚ್ಛೇದನದ ಹಕ್ಕು ಒಂದೇ ಶಾಶ್ವತವಾಗಿರಬಹುದು ಅಥವಾ ತಾತ್ಕಾಲಿಕ. ಈ ಶಕ್ತಿಯ ಒಂದು ತಾತ್ಕಾಲಿಕ ನಿಯಮವನ್ನು ಗಂಡನು ರದ್ದುಗೊಳಿಸುವಂತಿಲ್ಲ. ಆದರೆ ಒಂದು ಶಾಶ್ವತ ನಿಯೋಗವನ್ನು ಗಂಡನು ರದ್ದುಗೊಳಿಸಬಹುದು. ಇದು ಷರತ್ತುಬದ್ಧವಾಗಿರಬಹುದು ಅಥವಾ ಕೆಲವು ಷರತ್ತುಗಳಿಗೆ ಬಾಧ್ಯವಾಗಿರಬಹುದು ಅಥವಾ ಒಂದು ಘಟನೆಯ ಘಟಿಸುವಿಕೆಯ ಮೇಲೆ ಅವಲಂಬಿಸಿರಬಹುದು. ಇದರ ಸಾಮಾನ್ಯ ಬಳಕೆಯು ಹೇಗಿದೆಯೆಂದರೆ ಕೆಲವು ಷರತ್ತುಗಳನ್ನು ಪೂರ್ತಿಗೊಳಿಸಲು ಪತಿಯು ವಿಫಲನಾದರೆ ಅಥವಾ ಯಾವುದಾದರೊಂದು ಘಟನೆಯು ಘಟಿಸಲ್ಪಟ್ಟರೆ ಅಲ್ಲಿ ಪತಿಯು ಪತ್ನಿಗೆ ವಿವಾಹ ವಿಚ್ಛೇದನೆ ಕೊಡುವ ಹಕ್ಕನ್ನು ನಿಯೋಗಿಸುವನು. ಆದರೆ ಈ ಷರತ್ತುಗಳು ಯುಕ್ತವಾಗಿರಬೇಕು ಮತ್ತು ಇವು ಇಸ್ಲಾಮಿನ ಸಿದ್ಧಾಂತಗಳನ್ನು ವಿರೋಧಿಸಬಾರದು. ಒಂದೊಮ್ಮೆ ಒಂದು ವಿವಾಹ ಒಪ್ಪಂದದಿಂದ ಈ

ಹಕ್ಕು ಪತ್ನಿಗೆ ಪ್ರದಾನಗೊಳಿಸಲ್ಪಟ್ಟಿದೆಯಾದರೆ ಅಲ್ಲಿ ಯಾವುದಾದರೊಂದು ಷರತ್ತು ಅವನಿಂದ ಪೂರ್ತಿಗೊಳಿಸಲ್ಪಟ್ಟಿಲ್ಲವಾದರೆ ಅಥವಾ ಯಾವುದಾದರೊಂದು ಘಟನೆಯು ಘಟಿಸಿದರೆ ಪತ್ನಿಯು ತನ್ನ ವಿವಾಹವನ್ನು ನಿರಾಕರಿಸಬಹುದು. ಇಂತಹ ಪ್ರಕರಣಗಳಲ್ಲಿ ಪತಿಯು ಸ್ವತಃ ತಲಾಕ್ ಹೇಳಿರುವನು ಎಂಬಂತೆ ಆ ವಿವಾಹ ವಿಚ್ಛೇದನೆಯು ಅಸ್ತಿತ್ವಕ್ಕೆ ಬರುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಪತಿಯು ತನ್ನ ಪತ್ನಿಯ ಪ್ರತಿ ಕ್ರೌರ್ಯವನ್ನು ತೋರಿಸಿದರೆ ಅಥವಾ ಅವಳ ತತ್‌ಕ್ಷಣಿಕ ಕನ್ಯಾಶುಲ್ಕವನ್ನು ಸಲ್ಲಿಸಲು ನಿರಾಕರಿಸಿದರೆ ಪತ್ನಿಯು ವಿವಾಹ ವಿಚ್ಛೇದನದ ಹಕ್ಕನ್ನು ಚಲಾಯಿಸಬಹುದೆಂದು ಪತಿ-ಪತ್ನಿಯರೊಳಗೆ ಒಂದು ತಫವೀಜ್ ಇದರ ಒಪ್ಪಂದವಾಗಿರಬಹುದು.

ಒಂದೊಮ್ಮೆ ಒಬ್ಬ ಪತ್ನಿಗೆ ಒಂದು ತಫ್ವೀಜಿನ ಮೇರೆಗೆ ವಿವಾಹ ವಿಚ್ಛೇದನೆ ಪಡೆಯುವ ಆಯ್ಕೆಯು ಕೊಡಲ್ಪಟ್ಟಿದ್ದರೆ ಆಕೆಯು ತನ್ನ ಈ ಹಕ್ಕನ್ನು ಚಲಾಯಿಸುವಂತೆ ಅವಳನ್ನು ಒತ್ತಾಯಿಸುವಂತಿಲ್ಲ. ಅವಳು ವಿವಾಹ ವಿಚ್ಛೇದನೆಯ ಈ ಹಕ್ಕನ್ನು ಚಲಾಯಿಸಬಹುದು ಅಥವಾ ಚಲಾಯಿಸದೇ ಇರಬಹುದು. ವಿವಾಹ ವಿಚ್ಛೇದನೆ ಕೊಡುವ ಪತ್ನಿಯ ಹಕ್ಕು ಒಂದು ಘಟನೆಯ ಘಟಿಸುವಿಕೆಯನ್ನು ಅವಲಂಬಿಸಿದೆಯೆಂದಾದರೆ ಕೇವಲ ಆ ಘಟನೆಯ ಘಟಿಸುವಿಕೆಯು ಒಂದು ವಿವಾಹವನ್ನು ವಿಘಟಿತಗೊಳಿಸುವದಿಲ್ಲ; ಆ ಘಟನೆಯು ಘಟಿಸಲ್ಪಟ್ಟಾಗ ಪತ್ನಿಯು ತನ್ನ ಈ ಹಕ್ಕನ್ನು ಚಲಾಯಿಸಿದರೆ ಮಾತ್ರ ಅಲ್ಲಿ ಆ ವಿವಾಹವು ವಿಚ್ಛೇದಿತವಾಗುತ್ತದೆ.

ಷರತ್ತುಬದ್ಧ ತಲಾಕು ಮತ್ತು ತಫ್ವೀಜಿನಿಂದ ಕೊಡಲಾಗುವ ತಲಾಕು ಇವುಗಳೊಳಗಿನ ವ್ಯತ್ಯಾಸ

(Difference between Conditional Talak and Talak by Tafweez)

i) ಒಂದು ಷರತ್ತುಬದ್ಧ ತಲಾಕು ಎಂದರೆ ಒಂದು ಷರತ್ತಿಗೆ ಬದ್ಧವಾಗಿ ಅಥವಾ ಒಂದು ಭಾವೀ ಘಟನೆಯ ಘಟಿಸುವಿಕೆಯನ್ನು ಅವಲಂಬಿಸಿ ಪತಿಯಿಂದ ಕೊಡಲ್ಪಡುವ ಒಂದು ತಲಾಕು. ತಫ್ವೀಜಿನಿಂದ ಕೊಡಲಾಗುವ ಒಂದು ತಲಾಕು ಎಂದರೆ ಅದು ಪತಿಯಿಂದ ಪ್ರಾಧಿಕೃತಗೊಳಿಸಲ್ಪಟ್ಟು ಪತ್ನಿಯಿಂದ ಕೊಡಲಾಗುವ ತಲಾಕು.

ii) ಒಂದು ಷರತ್ತುಬದ್ಧ ಅಥವಾ ಘಟನಾವಲಂಬಿ ತಲಾಕಿನಲ್ಲಿ ಆ ಒಂದು ಘಟನೆಯ ಘಟಿಸುವಿಕೆಯು ಒಂದು ವಿವಾಹವನ್ನು ವಿಘಟಿತಗೊಳಿಸಲು ಪರ್ಯಾಪ್ತವಾಗುತ್ತದೆ. ಅಲ್ಲಿ ಪತಿಯು ತಲಾಕ್ ಹೇಳಬೇಕಾಗಿಲ್ಲ. ಆದರೆ ತಫ್ವೀಜಿನಿಂದ ಕೊಡಲಾಗುವ ಒಂದು ತಲಾಕಿನಲ್ಲಿ ಒಂದು ನಿರ್ದಿಷ್ಟವಾದ ಘಟನೆಯ ಘಟಿಸುವಿಕೆಯು ಒಂದು ವಿವಾಹವನ್ನು ತನ್ನಿಂದ ತಾನಾಗಿಯೇ ವಿಘಟಿತಗೊಳಿಸುವುದಿಲ್ಲ. ಆ ವಿವಾಹವು ವಿಘಟಿತವಾಗಬೇಕಾದರೆ ಆ ನಿರ್ದಿಷ್ಟವಾದ ಘಟನೆಯು ಘಟಿಸಲ್ಪಟ್ಟ ಬಳಿಕ ಪತ್ನಿಯು ತನ್ನ ಹಕ್ಕನ್ನು ಚಲಾಯಿಸಬಹುದು.

iii) ಪರತ್ತುಬದ್ಧ ಅಥವಾ ಘಟನಾವಲಂಬಿ ತಲಾಕು ಶಿಯಾ ಕಾನೂನಿನಿಂದ ಮನ್ನಿಸಲ್ಪಟ್ಟಿಲ್ಲ, ಆದರೆ ತಫ್ವೀಜಿನಿಂದ ಕೊಡಲಾಗುವ ತಲಾಕು ಎರಡೂ ಪರಂಪರೆಗಳಿಂದ ಮನ್ನಿಸಲ್ಪಟ್ಟಿದೆ.

ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನೆ
(Divorce by mutual Consent)

ಮುಸ್ಲಿಮ್ ಕಾನೂನಿನ ಪ್ರಕಾರ ಪತಿ - ಪತ್ನಿಯರ ಪರಸ್ಪರ ಸಮ್ಮತಿಯಿಂದಲೂ ಒಂದು ವಿವಾಹ ವಿಚ್ಛೇದನೆಯು ಉಂಟಾಗಬಹುದು. ಒಂದು ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನೆಯಾಗಬೇಕಾದರೆ ಅಲ್ಲಿ ಪತಿ-ಪತ್ನಿಯರೊಳಗೆ ಒಂದು ಆದ್ಯ ಒಪ್ಪಂದವಾಗಲಿ ಅಥವಾ ಪ್ರಾಧಿಕಾರದ ನಿಯೋಗವಾಗಲಿ ಅಸ್ತಿತ್ವದಲ್ಲಿರಬೇಕಾಗಿಲ್ಲ. ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯದಿಂದ ಜೀವಿಸುವದು ಅಸಾಧ್ಯವೆಂದು ಕಂಡಾಗ ಯಾವುದೇ ಕಾಲದಲ್ಲಿ ಅವರು ಪರಸ್ಪರ ಸಮ್ಮತಿಯಿಂದ ವಿಚ್ಛೇದಿತರಾಗಬಹುದು. ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನೆಯಾಗುವದು ಮುಸ್ಲಿಮ್ ಕಾನೂನಿನ ಒಂದು ವೈಶಿಷ್ಟ್ಯವಾಗಿದೆ. ಹಿಂದೂ ಕಾನೂನಿನಲ್ಲಿ ೧೯೭೬ರ ತಿದ್ದುಪಡಿಗಿಂತ ಮೊದಲು ಇಂತಹ ಒಂದು ಉಪಬಂಧವಿದ್ದಿರಲಿಲ್ಲ. ಪರಸ್ಪರ ಸಮ್ಮತಿಯಿಂದ ಕೊಡಲ್ಪಡುವ ವಿವಾಹ ವಿಚ್ಛೇದನೆಯಲ್ಲಿ ಎರಡು ಪ್ರಕಾರಗಳಿವೆ:

i) ಖುಲಾ (Khula) ಮತ್ತು ಮುಬಾರತ್ (Mubarat)

ಖುಲಾ (Khula)

ಖುಲಾ ಇದರ ಶಾಬ್ದಿಕ ಅರ್ಥವೇನೆಂದರೆ 'ಬಟ್ಟೆಗಳನ್ನು ಕಳಚು' ಎಂದು. ಕಾನೂನಿನಲ್ಲಿ ಇದರ ಅರ್ಥವೇನೆಂದರೆ ಪತ್ನಿಯು ಪತಿಗೆ ಏನನ್ನಾದರೂ ಸಂದಾಯ ಮಾಡಿ ಅವನ ಸಮ್ಮತಿಯನ್ನು ಪಡೆದು ಕೊಡಲಾಗುವ ವಿಚ್ಛೇದನೆಯಾಗಿರುತ್ತದೆ. ಇಸ್ಲಾಮಿಗಿಂತ ಮೊದಲು ಒಬ್ಬ ಪತ್ನಿಯು ತನ್ನ ವಿವಾಹವನ್ನು ವಿಚ್ಛೇದನೆಗೊಳಿಸುವಂತಿರಲಿಲ್ಲ. ಆದರೆ ಇಸ್ಲಾಮಿನಲ್ಲಿ ಪತಿಯು ಪತ್ನಿಯಿಂದ ಸ್ವಲ್ಪ ಪರಿಹಾರವನ್ನು ಪಡೆದು ಆಕೆಯನ್ನು ವಿಮೋಚನೆಗೊಳಿಸುವಂತೆ ಅವನ ಸಮ್ಮತಿಯನ್ನು ಪಡೆಯಬಹುದು. ಖುಲಾ ಇದೊಂದು ಪರಸ್ಪರ ಸಮ್ಮತಿಯಿಂದ ಮಾಡಲಾಗುವ ವಿವಾಹ ವಿಚ್ಛೇದನೆಯಾಗಿದ್ದು ಇಲ್ಲಿ ಪತ್ನಿಯು ಪತಿಗೆ ಸ್ವಲ್ಪ ಪ್ರತಿಫಲವನ್ನು ಸಂದಾಯ ಮಾಡಬೇಕಾಗುತ್ತದೆ, ಏಕೆಂದರೆ ಇಲ್ಲಿ ವಿವಾಹ ವಿಚ್ಛೇದನೆ ಮಾಡುವ ಬಗ್ಗೆ ಆಕೆಯು ಪ್ರಮುಖ ಪಾತ್ರವನ್ನು ವಹಿಸುವಳು.

ಒಂದು ವಿಧ್ಯುಕ್ತವಾದ ಖುಲಾ ಇದರ ಆವಶ್ಯಕತೆಗಳು
(Essentials of a Valid Khula)

ಖುಲಾ ಪ್ರಕಾರದ ವಿವಾಹ ವಿಚ್ಛೇದನೆಯ ರೀತಿಯು ಒಂದು ವಿವಾಹ

ನಿರ್ಮಾಣದ ಪೂರ್ಣ ವಿರುದ್ಧದ ರೀತಿಯಲ್ಲಿ ನಡೆಯುತ್ತದೆ. ಒಂದು ವಿವಾಹದಲ್ಲಿ ಪತಿಪತ್ನಿಯರು ಒಂದುಗೂಡಿ ಜೀವಿಸುವ ಬಗ್ಗೆ ಅವರೊಳಗೆ ಒಂದು ಪರಸ್ಪರ ಒಪ್ಪಂದವಾಗುತ್ತದೆ. ಖುಲಾದಲ್ಲಿ ತಮ್ಮ ವೈವಾಹಿಕ ಸಂಬಂಧವನ್ನು ವಿಘಟನೆ ಗೊಳಿಸುವ ಬಗ್ಗೆ ಅವರೊಳಗೆ ಒಂದು ಪರಸ್ಪರ ಒಪ್ಪಂದವಾಗುತ್ತದೆ. ವಿವಾಹದಲ್ಲಿ ಪ್ರಸ್ತಾವವು ಪತಿಯಿಂದ ಪತ್ನಿಗೆ ಮಾಡಲ್ಪಡುತ್ತದೆ, ಆದರೆ ಖುಲಾದಲ್ಲಿ ಪ್ರಸ್ತಾವವು ಪತ್ನಿಯಿಂದ ಮಾಡಲ್ಪಡುತ್ತದೆ. ಒಂದು ವಿಧ್ಯುಕ್ತವಾದ ಖುಲಾ ಇದರ ಆವಶ್ಯಕತೆಗಳು ಈ ಕೆಳಗಿನವುಗಳಾಗಿವೆ:

೧) ಪಕ್ಷಗಾರರ ಸಕ್ಷಮತೆ (Competence of the parties)

ಪತಿಪತ್ನಿಯರು ಸ್ವಸ್ಥ ಚಿತ್ತದವರಾಗಿರಬೇಕು ಮತ್ತು ತಾರುಣ್ಯವನ್ನು ಮುಟ್ಟಿರಬೇಕು. ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲ ಪತಿ ಅಥವಾ ಪತ್ನಿಯು ಕಾನೂನುಬದ್ಧವಾಗಿ ಒಂದು ಖುಲಾ ಪರಿಣಾಮಿತಗೊಳಿಸುವಂತಿಲ್ಲ. ಒಬ್ಬ ಅಲ್ಪವಯಿ ಪತಿಯ ಸಂರಕ್ಷಕನು ಆ ಅಲ್ಪವಯಿಯ ಪರವಾಗಿ ಒಂದು ಖುಲಾವನ್ನು ಪರಣಾಮಿತಗೊಳಿಸುವಂತಿಲ್ಲ.

೨) ಸ್ವತಂತ್ರ ಸಮ್ಮತಿ (Free Consent)

ಖುಲಾ ಇದರ ಪ್ರಸ್ತಾವ ಮತ್ತು ಸ್ವೀಕೃತಿ ಪಕ್ಷಗಾರರ ಸ್ವತಂತ್ರ ಸಮ್ಮತಿಯಿಂದ ಮಾಡಲ್ಪಟ್ಟವುಗಳಾಗಿರಬೇಕು. ಆದರೆ ಹನಫಿ ಕಾನೂನಿನ ಮೇರೆಗೆ ಒತ್ತಾಯ ಅಥವಾ ಅಮಲು ಸ್ಥಿತಿಯಲ್ಲಿದ್ದಾಗ ಮಾಡಲ್ಪಡುವ ಒಂದು ಖುಲಾವೂ ಸಹ ವಿಧ್ಯುಕ್ತವಾಗಿರುತ್ತದೆ.

೩) ಔಪಚಾರಿಕತೆಗಳು (Formalities)

ಇಲ್ಲಿ ತನ್ನನ್ನು ವೈವಾಹಿಕ ಸಂಬಂಧದಿಂದ ವಿಮೋಚನೆ ಮಾಡಬೇಕೆಂದು ಪತ್ನಿಯಿಂದ ಒಂದು ಪ್ರಸ್ತಾವವು ಮಾಡಲ್ಪಡುತ್ತದೆ. ಈ ಪ್ರಸ್ತಾವವು ಪತಿಗೆ ಮಾಡಲಾಗುತ್ತದೆ. ಖುಲಾ ಇದರ ಪ್ರಸ್ತಾವವು ಪತಿಯಿಂದ ಸ್ವೀಕರಿಸಲ್ಪಡಬೇಕಾಗುತ್ತದೆ. ಆ ಪ್ರಸ್ತಾವವು ಸ್ವೀಕರಿಸಲ್ಪಡುವತನಕ ಆ ವಿವಾಹ ವಿಚ್ಛೇದನೆಯು ಪೂರ್ಣಗೊಳ್ಳುವುದಿಲ್ಲ ಮತ್ತು ಪತ್ನಿಯು ಅದನ್ನು ರದ್ದುಗೊಳಿಸಬಹುದು. ಆದರೆ ಈ ಪ್ರಸ್ತಾವವು ಒಮ್ಮೆ ಸ್ವೀಕರಿಸಲ್ಪಟ್ಟರೆ ವಿವಾಹ ವಿಚ್ಛೇದನೆಯು ಪೂರ್ಣಗೊಳ್ಳುತ್ತದೆ ಮತ್ತು ಅದನ್ನು ರದ್ದುಗೊಳಿಸುವಂತಿಲ್ಲ. ಪ್ರಸ್ತಾವ ಮತ್ತು ಸ್ವೀಕೃತಿ ಇವು ಮೌಖಿಕ ರೂಪದಲ್ಲಿರಬಹುದು ಅಥವಾ ಲಿಖಿತ ರೀತಿಯಲ್ಲಿ. ಪ್ರಸ್ತಾವ ಮತ್ತು ಸ್ವೀಕೃತಿ ಇವೆರಡನ್ನೂ ಒಂದೇ ಕಾಲದಲ್ಲಿ ಮಾಡಬೇಕಾಗುತ್ತದೆ.

ಇಲ್ಲಿ ಸಾಕ್ಷಿದಾರರ ಉಪಸ್ಥಿತಿಯ ಆವಶ್ಯಕತೆಯಿಲ್ಲ. ಆದರೆ ಶಿಯಾ ಕಾನೂನಿನ ಮೇರೆಗೆ ಒಂದು ಖುಲಾ ಇದರ ಪ್ರಸ್ತಾವ ಮತ್ತು ಸ್ವೀಕೃತಿ ಇಬ್ಬರು ಸಕ್ಷಮ ಸಾಕ್ಷಿದಾರರ ಹಾಜರಿಯಲ್ಲಿ ಮಾಡಬೇಕಾಗುತ್ತದೆ.

೪) ಪ್ರತಿಫಲ (Consideration)

ತನ್ನ ವಿಮೋಚನೆಗಾಗಿ ಪತ್ನಿಯು ಪತಿಗೆ ಪರಿಹಾರದ ರೀತಿಯಲ್ಲಿ ಏನನ್ನಾದರೂ ಸಂದಾಯ ಮಾಡಬೇಕಾಗುತ್ತದೆ ಹಣದ ಯಾವತ್ತೂ ಮೊಬಲಗು ಅಥವಾ ಒಂದು ಸ್ವತ್ತನ್ನು ಖುಲಾ ಇದರ ಪ್ರತಿಫಲವೆಂಬುದಾಗಿ ಇತ್ಯರ್ಥ ಮಾಡಬಹುದು. ಒಂದು ಕನ್ಯಾಶುಲ್ಕದಲ್ಲಿ ಯಾವ ರೀತಿಯಲ್ಲಿ ಕನಿಷ್ಠ ಅಥವಾ ಗರಿಷ್ಠ ಮಿತಿಗಳಿಲ್ಲವೋ ಅದೇ ರೀತಿಯಲ್ಲಿ ಇಂತಹ ಒಂದು ಪ್ರತಿಫಲದಲ್ಲೂ ಸಹ ಕನಿಷ್ಠ ಅಥವಾ ಗರಿಷ್ಠ ಮಿತಿಯಿಲ್ಲ. ಆದರೆ ಈ ಪ್ರತಿಫಲವು ಒಮ್ಮೆ ಇತ್ಯರ್ಥವಾದರೆ ಅದನ್ನು ಆ ಬಳಿಕ ಹೆಚ್ಚಿಸುವಂತಿಲ್ಲ.

ಸಾಮಾನ್ಯವಾಗಿ ಪತ್ನಿಯು ಖುಲಾ ಇದರ ಕರಾರಿನ ರೀತಿಯಲ್ಲಿ ಕನ್ಯಾಶುಲ್ಕದ ತನ್ನ ಹಕ್ಕನ್ನು ಪರಿತ್ಯಜನೆ ಮಾಡುವಳು. ಅವಳು ತನ್ನ ಇಡೀ ಕನ್ಯಾಶುಲ್ಕವನ್ನು ಅಥವಾ ಅದರ ಒಂದು ಭಾಗವನ್ನು ಪರಿತ್ಯಜನೆ ಮಾಡಬಹುದು. ಒಂದೊಮ್ಮೆ ಕನ್ಯಾಶುಲ್ಕವು ಆಗಲೇ ಪತ್ನಿಗೆ ಸಂದಾಯವಾಗಿದ್ದರೆ ಪತ್ನಿಯು ಪತಿಗೆ ಸ್ವಲ್ಪ ಹಣ ಅಥವಾ ಅವರೊಳಗೆ ಒಪ್ಪಂದವಾಗಿರುವ ಪ್ರಕಾರ ಯಾವುದಾದರೊಂದು ಸ್ವತ್ತನ್ನು ಕೊಡಬಹುದು.

ಒಂದು ಸಾಮಾನ್ಯ ನಿಯಮದ ಪ್ರಕಾರ ಖುಲಾದ ಪ್ರತಿಫಲವನ್ನು ತತ್‌ಕ್ಷಣ ಪತಿಗೆ ಸಲ್ಲಿಸಬೇಕಾಗುತ್ತದೆ. ಆದರೆ ಒಂದು ಭಾವೀ ದಿನಾಂಕದಂದು ಈ ಪ್ರತಿಫಲವನ್ನು ಸಂದಾಯಮಾಡುವ ಬಗ್ಗೆ ಪಕ್ಷಗಾರರು ಒಪ್ಪಂದ ಮಾಡಿಕೊಳ್ಳಬಹುದು. ಒಂದು ಖುಲಾದಲ್ಲಿ ಪ್ರತಿಫಲವು ಮುಂದೂಡಲ್ಪಟ್ಟರೂ ಸಹ ಇದರ ಪ್ರಸ್ತಾವವು ಸ್ವೀಕರಿಸಲ್ಪಟ್ಟ ಕ್ಷಣದಲ್ಲಿ ಆ ವಿವಾಹ ವಿಚ್ಛೇದನೆಯು ಅಸ್ತಿತ್ವಕ್ಕೆ ಬರುತ್ತದೆ. ಒಂದೊಮ್ಮೆ ಆಕೆಯು ಪತಿಗೆ ಪ್ರತಿಫಲವನ್ನು ಸಂದಾಯ ಮಾಡದಿದ್ದರೂ ಸಹ ಆ ವಿವಾಹ ವಿಚ್ಛೇದನೆಯು ವಿಧ್ಯುಕ್ತವಾಗಿರುತ್ತದೆ; ಆದರೆ ಇಂತಹ ಒಂದು ಪ್ರಕರಣದಲ್ಲಿ ಪತಿಯು ಪತ್ನಿಯ ಮೇಲೆ ಆ ಮೊಬಲಗಿನ ವಸೂಲಿಗಾಗಿ ದಾವೆ ಹೂಡಬಹುದು.

ಮುಬಾರತ್ (Mubarat)

ಮುಬಾರತ್ ಎಂದರೆ ಪತಿ ಪತ್ನಿಯರು ಪರಸ್ಪರ ಸಮ್ಮತಿಯಿಂದ ಮಾಡುವ ಒಂದು ವಿವಾಹ ವಿಚ್ಛೇದನೆ. ಮುಬಾರತ್ ಮತ್ತು ಖುಲಾ ಇವುಗಳೊಳಗೆ ವ್ಯತ್ಯಾಸವೇನೆಂದರೆ ಖುಲಾದಲ್ಲಿ ಪತ್ನಿಯು ವಿವಾಹ ವಿಚ್ಛೇದನೆಯ ಪ್ರಸ್ತಾವ ಮಾಡುವಳು, ಆದರೆ ಮುಬಾರತ್‌ನಲ್ಲಿ ಇಬ್ಬರೂ ಪಕ್ಷಗಾರರು ವಿವಾಹವನ್ನು ವಿಚ್ಛೇದನೆಗೊಳಿಸಬಯಸುವರು. ಆದುದರಿಂದ ಮುಬಾರತ್‌ನಲ್ಲಿ ಪ್ರತ್ಯೇಕೀಕರಣದ ಪ್ರಸ್ತಾವವು ಒಂದೇ ಪತಿಯಿಂದ ಬರಬಹುದು ಅಥವಾ ಪತ್ನಿಯಿಂದ ಮತ್ತು ಇನ್ನೊಂದು ಪಕ್ಷದಿಂದ ಆದು ಸ್ವೀಕರಿಸಲ್ಪಡಬಹುದು. ಮುಬಾರತ್‌ನಿಂದ ಕೊಡಲಾಗುವ ಒಂದು ವಿವಾಹ ವಿಚ್ಛೇದನೆಯಲ್ಲಿ ಆವಶ್ಯಕ ಅಂಶವು ಯಾವುದೆಂದರೆ

ಅದರಲ್ಲಿ ಪ್ರತಿಯೊಂದು ಪಕ್ಷವು ಇನ್ನೊಂದು ಪಕ್ಷದಿಂದ ಬೇರೆಯಾಗಬಯಸುತ್ತದೆ. ಆದುದರಿಂದ ಇಲ್ಲಿ ವಿವಾಹ ವಿಚ್ಛೇದನೆಯ ಬಗ್ಗೆ ಯಾರು ಮೊದಲ ಹೆಜ್ಜೆಯನ್ನಿಡುವರು ಎಂಬುದು ಮಹತ್ವದ್ದಲ್ಲ. ಮುಬಾರತ್ ರೀತಿಯ ವಿವಾಹ ವಿಚ್ಛೇದನೆಯ ಇನ್ನೊಂದು ಪ್ರಮುಖ ಅಂಶವು ಯಾವುದೆಂದರೆ ಅದರಲ್ಲಿ ಒಂದು ವಿವಾಹವನ್ನು ವಿಘಟಿತಗೊಳಿಸಲು ಇಬ್ಬರೂ ಪಕ್ಷಗಾರರು ಆಸಕ್ತಿ ಹೊಂದಿದವರಾಗಿರುತ್ತಾರೆ ಮತ್ತು ಇಲ್ಲಿ ಒಂದು ಪಕ್ಷಕ್ಕೆ ಇನ್ನೊಂದು ಪಕ್ಷವು ಪರಿಹಾರವನ್ನು ಸಲ್ಲಿಸಬೇಕಾಗುವುದಿಲ್ಲ.

ಖುಲಾ ಮತ್ತು ಮುಬಾರತ್ ಇವೆರಡೂ ಪರಸ್ಪರ ಸಮ್ಮತಿಗಳಿಂದ ಮಾಡಲಾಗುವ ವಿವಾಹ ವಿಚ್ಛೇದನೆಗಳಾಗಿವೆ. ಆದರೆ ಮುಬಾರತ್‌ನಲ್ಲಿ ಪತ್ನಿಯು ಪತಿಗೆ ಯಾವತ್ತೂ ಪ್ರತಿಫಲವನ್ನು ಸಂದಾಯಮಾಡುವುದಿಲ್ಲ.

ಖುಲಾ ಮತ್ತು ಮುಬಾರತ್ ಇವುಗಳ ಕಾನೂನೀ ಪರಿಣಾಮಗಳು (Legal Consequences of Khula and Mubarat)

ಖುಲಾ ಮತ್ತು ಮುಬಾರತ್ ಇವೆರಡರಲ್ಲೂ ಒಂದು ಪಕ್ಷದಿಂದ ಮಾಡಲಾಗುವ ಪ್ರಸ್ತಾವವು ಇನ್ನೊಂದು ಪಕ್ಷದಿಂದ ಸ್ವೀಕೃತವಾದ ತಕ್ಷಣದಲ್ಲಿ ಆ ವಿವಾಹ ವಿಚ್ಛೇದನೆಯು ಪೂರ್ಣಗೊಳ್ಳುತ್ತದೆ ಮತ್ತು ಕಾರ್ಯಾಚರಣೆಗೆ ಬರುತ್ತದೆ. ಒಂದು ವಿಧ್ಯುಕ್ತವಾದ ಖುಲಾ ಅಥವಾ ಮುಬಾರತ್ ಇದರ ಕಾನೂನೀ ಪರಿಣಾಮವು ಇತರ ರೀತಿಗಳಿಂದ ಕೊಡಲಾಗುವ ಒಂದು ವಿವಾಹ ವಿಚ್ಛೇದನೆಗೆ ಸಮಾನವಾಗಿರುತ್ತದೆ. ಇಲ್ಲಿ ಪತ್ನಿಯು ಇದ್ದತ್ ಆಚರಿಸಬೇಕಾಗುತ್ತದೆ ಮತ್ತು ಈ ಇದ್ದತ್ ಅವಧಿಯಲ್ಲಿ ಪತಿಯಿಂದ ಜೀವನಾಂಶ ಪಡೆಯಲು ಆಕೆಯು ಹಕ್ಕುದಾರಳಾಗುವಳು. ಒಂದೊಮ್ಮೆ ಒಂದು ಖುಲಾದಲ್ಲಿ ಪತ್ನಿಯು ಪ್ರತಿಫಲಕ್ಕಾಗಿ ಕನ್ಯಾಶುಲ್ಕದಿಂದ ಪತಿಯನ್ನು ವಿಮೋಚನೆಗೊಳಿಸುವುದಲ್ಲವಾಗಿದ್ದರೆ ಅಲ್ಲಿ ಪತ್ನಿಯು ತನ್ನ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು. ಆದರೆ ಒಂದೊಮ್ಮೆ ಪತ್ನಿಯು ತನ್ನ ಕನ್ಯಾಶುಲ್ಕವನ್ನು ಪರಿತ್ಯಜನೆಮಾಡಿದರೆ ಆಕೆಯು ಅದಕ್ಕೆ ಆ ಬಳಿಕ ಹಕ್ಕುದಾರಳಾಗುವುದಿಲ್ಲ.

ನ್ಯಾಯಿಕ ವಿವಾಹ ವಿಚ್ಛೇದನೆ (Faskh)

ಒಂದು ನ್ಯಾಯಿಕ ವಿವಾಹ ವಿಚ್ಛೇದನೆಯೆಂದರೆ ನ್ಯಾಯಾಲಯದ ಆದೇಶದ ಮೇರೆಗೆ ಆಗುವ ಒಂದು ವಿವಾಹ ವಿಚ್ಛೇದನೆ. ಒಂದೊಮ್ಮೆ ಒಂದು ವಿವಾಹವು ತೊಂದರೆದಾಯಕವಾಗಿದ್ದರೆ ಅಥವಾ ಅದೊಂದು ಒಳ್ಳೆಯ ವಿವಾಹವಲ್ಲವೆಂದಾದರೆ ಪತ್ನಿಯು ಒಂದು ಆವೇದನೆ ಮಾಡಿದಾಗ ಒಬ್ಬ ಕಾಜಿಯು ಅಥವಾ ಒಬ್ಬ ನ್ಯಾಯಾಧೀಶನು ಆ ವಿವಾಹವನ್ನು ವಿಘಟಿತಗೊಳಿಸಬಹುದೆಂದು ಇಸ್ಲಾಮಿನಲ್ಲಿ ಉಪ

ಬಂಧಿಸಲಾಗಿದೆ. ಒಂದು ವಿವಾಹವನ್ನು ವಿಘಟಿತಗೊಳಿಸಲು ಒಬ್ಬ ಕಾಜಿ ಅಥವಾ ನ್ಯಾಯಾಧೀಶನ ಹಕ್ಕು ಪೈಗಂಬರನ ಒಂದು ಪ್ರಸಿದ್ಧವಾದ ಹೇಳಿಕೆಯ ಮೇಲೆ ಆಧಾರಿತವಾಗಿದೆ. 'ಒಂದೊಮ್ಮೆ ಒಂದು ವಿವಾಹವು ಒಬ್ಬ ಪತ್ನಿಗೆ ಪ್ರತಿಕೂಲವಾಗಿದ್ದರೆ ಅದು ವಿಘಟಿತವಾಗಲಿ'. ಒಬ್ಬ ಮುಸ್ಲಿಮ್ ಪತ್ನಿಯ ನ್ಯಾಯಿಕ ವಿವಾಹ ವಿಚ್ಛೇದನೆಯ ಹಕ್ಕು ಕುರಾನಿನಿಂದ ಮತ್ತು ಪೈಗಂಬರನ ರೂಢಿಗಳಿಂದ ಮನ್ನಿಸಲ್ಪಟ್ಟಿದೆಯಾದರೂ ಸಹ ಬ್ರಿಟಿಶ್ ಕಾಲದಲ್ಲಿ ಭಾರತದ ನ್ಯಾಯಾಲಯಗಳು ಇದನ್ನು ಮನ್ನಿಸಿರಲಿಲ್ಲ. ಆ ಕಾಲದಲ್ಲಿ ಕೇವಲ ಎರಡು ಕಾರಣಗಳಿಗಾಗಿ ಒಬ್ಬ ಪತ್ನಿಯು ನ್ಯಾಯಾಲಯದಿಂದ ಒಂದು ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಪಡೆಯಬಹುದಿತ್ತು. (೧) ಆಕೆಯ ವಿರುದ್ಧ ಜಾರತ್ವದ ಸುಳ್ಳು ಆರೋಪವು ಪತಿಯಿಂದ ಮಾಡಲ್ಪಟ್ಟಿದ್ದರೆ, ಅಥವಾ (೨) ಪತಿಯ ನಪುಂಸಕತ್ವ. ಇವೆರಡರ ಹೊರತು ಬೇರೆ ಯಾವುದೇ ಕಾರಣಕ್ಕಾಗಿ ಪತ್ನಿಯು ನ್ಯಾಯಾಲಯದಿಂದ ಒಂದು ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಪಡೆಯುವಂತಿರಲಿಲ್ಲ. ೧೯೩೯ರ ಮಾರ್ಚ್ ೧೭ರಂದು 'ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ' ಇದು ಜಾರಿಗೆ ಬಂತು. ಈ ಅಧಿನಿಯಮದ ಪ್ರಕಾರ ಮುಸ್ಲಿಮ್ ಕಾನೂನಿನ ಮೇರೆಗೆ ವಿವಾಹಿತಳಾದ ಒಬ್ಬ ಪತ್ನಿಯು ಆ ಅಧಿನಿಯಮದಲ್ಲಿ ಹೇಳಲ್ಪಟ್ಟ ಯಾವುದಾದರೊಂದು ಕಾರಣಕ್ಕಾಗಿ ವಿವಾಹ ವಿಚ್ಛೇದನೆ ಪಡೆಯಲು ನ್ಯಾಯಾಲಯದಿಂದ ಒಂದು ಡಿಕ್ರಿ ಪಡೆಯಲು ಹಕ್ಕುದಾರಳಾಗಿದ್ದಳು. ಈ ಅಧಿನಿಯಮದಲ್ಲಿ ಹೇಳಲಾದ ಕಾರಣಗಳಲ್ಲಿ ಎರಡೂ ಕಾರಣಗಳು ಅಡಕವಾಗಿವೆ.

ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ ೧೯೩೯
(The Dissolution of Muslim Marriages Act, 1939)

ಈ ಅಧಿನಿಯಮವನ್ನು ಒಬ್ಬ ಮುಸ್ಲಿಮ್ ಪತ್ನಿಯ ವೈವಾಹಿಕ ವಿಮೋಚನೆಯ ಸಂಬಂಧದಲ್ಲಿ ಒಂದು ಪ್ರಮುಖ ಹೆಜ್ಜೆಯೆಂಬುದಾಗಿ ಎಣಿಸಲಾಗುತ್ತದೆ. ಈ ಅಧಿನಿಯಮಕ್ಕಿಂತ ಮೊದಲು ಇಸ್ಲಾಮಿ ಕಾನೂನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ನ್ಯಾಯಾಲಯಗಳು ಪತ್ನಿಯ ವಿವಾಹ ವಿಚ್ಛೇದನೆಯ ಹಕ್ಕನ್ನು ಅವಳಿಗೆ ನಿರಾಕರಿಸಿದ್ದವು, ಆದರೆ ಈ ಅಧಿನಿಯಮವು ಅವಳ ಆ ಹಕ್ಕನ್ನು ಆಕೆಗೆ ಮರಳಿ ಕೊಟ್ಟಿದೆ. ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ, ೧೯೩೯ ಇದರ ಪ್ರಮುಖ ಅಂಶಗಳ ಸಾರಾಂಶವು ಈ ಕೆಳಗಿನಂತಿದೆ :

ಎ) ಮುಸ್ಲಿಮ್ ಕಾನೂನಿನ ಪ್ರಕಾರ ವಿವಾಹಿತಳಾದ ಒಬ್ಬ ಪತ್ನಿಯು ಯಾವ ಕಾರಣಗಳ ಮೇಲೆ ವಿವಾಹ ವಿಚ್ಛೇದನೆಗಾಗಿ ಒಂದು ಅರ್ಜಿ ಸಲ್ಲಿಸಬಹುದೆಂದು ಈ ಅಧಿನಿಯಮದ ಕ. ೨ ಹೇಳುತ್ತದೆ. ಇಲ್ಲಿ ೯ ಕಾರಣಗಳ ಒಂದು ಯಾದಿಯು ಕೊಡಲ್ಪಟ್ಟಿದೆ ಮತ್ತು ಇವುಗಳಲ್ಲಿ ೭ ಕಾರಣಗಳು ಪತಿಯ ವೈವಾಹಿಕ ಅಪರಾಧಗಳಾಗಿವೆ ಮತ್ತು ಇವುಗಳ ಕಾರಣಕ್ಕಾಗಿ ಒಬ್ಬ ಪತ್ನಿಯು ನ್ಯಾಯಾಲಯ

ದಿಂದ ತನ್ನ ವಿವಾಹವನ್ನು ವಿಘಟಿತಗೊಳಿಸಬಹುದು. ಖಂಡ (vii) ಇದರ ಪ್ರಕಾರ ಒಬ್ಬ ಪತ್ನಿಯು ಒಂದು ನ್ಯಾಯಾಲಯದ ಡಿಕ್ರಿಯು ಮುಖಾಂತರ ತನ್ನ ತಾರುಣ್ಯದ ಆಯ್ಕೆಯನ್ನು ಜಾರಿಗೊಳಿಸಬಹುದು. ಕ. ೨ರಲ್ಲಿ ಹೇಳಲಾದ ೯ನೇ ಕಾರಣವು ಒಂದು ಅಧಿಶೇಷದ ಖಂಡವಾಗಿದ್ದು ಇದರ ಪ್ರಕಾರ ಮೇಲಿನ ೮ ಖಂಡಗಳಲ್ಲಿ ಸೇರಿಸಲ್ಪಟ್ಟಿಲ್ಲದ, ಆದರೆ ಮುಸ್ಲಿಮ್ ಕಾನೂನಿನಿಂದ ಮನ್ನಿಸಲಾದ ಯಾವುದಾದರೊಂದು ಕಾರಣದ ಮೇರೆಗೆ ಒಬ್ಬ ಪತ್ನಿಯು ಒಂದು ವಿವಾಹ ವಿಚ್ಛೇದನೆಯನ್ನು ಪಡೆಯಬಹುದು. ಉದಾಹರಣೆಗಾಗಿ, ಈ ಖಂಡದ ಮೇರೆಗೆ ಒಬ್ಬ ಪತ್ನಿಯು ತನ್ನ ಮೇಲೆ ಗಂಡನಿಂದ ಮಾಡಲ್ಪಟ್ಟ ಜಾರತ್ವದ ಸುಳ್ಳು ಆರೋಪದ ಮೇರೆಗೆ ಒಂದು ನ್ಯಾಯಾಲಯದ ಡಿಕ್ರಿಯಿಂದ ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಪಡೆಯಬಹುದು. ಈ ರೀತಿಯಾಗಿ ಈ ಅಧಿನಿಯಮವು ಒಬ್ಬ ಮುಸ್ಲಿಮ್ ಪತ್ನಿಗೆ ಶುದ್ಧ ಮುಸ್ಲಿಮ್ ಕಾನೂನಿನಿಂದ ಸಿಗುತ್ತಿರುವ ವಿವಾಹ ವಿಚ್ಛೇದನೆಯ ಹಕ್ಕನ್ನು ಉಳಿಸಿ ಅದರ ಹೊರತಾಗಿ ಇತರ ಹೆಚ್ಚಿನ ಹಕ್ಕುಗಳನ್ನು ಕೊಟ್ಟಿದೆ.

ಬಿ) ಈ ಅಧಿನಿಯಮದ ಕ. ೨ರ ಪ್ರಕಾರ ವೈವಾಹಿಕ ಪರಿಹಾರಗಳ ಕಾರಣಗಳು ಪತ್ನಿಗಷ್ಟೇ ಸಿಗುತ್ತವಲ್ಲದೆ ಪತಿಗೆ ಸಿಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಮುಸ್ಲಿಮ್ ಕಾನೂನು ವಿವಾಹ ವಿಚ್ಛೇದನೆಯ ಬಗ್ಗೆ ಪತಿಗೆ ಪರಮವಾದ ಒಂದು ಹಕ್ಕನ್ನು ಕೊಟ್ಟಿದೆ.

ಸಿ) ಈ ಅಧಿನಿಯಮದ ಕ. ೪ರ ಪ್ರಕಾರ ಒಂದೊಮ್ಮೆ ಪತ್ನಿಯು ಇಸ್ಲಾಂ ಧರ್ಮವನ್ನು ಪರಿತ್ಯಜನೆಮಾಡಿದರೆ ಮತ್ತು ಮುಸಲ್ಮಾನಳಾಗಿರುವದು ನಿಂತುಬಿಟ್ಟರೆ ಆ ವಿವಾಹವು ತನ್ನಿಂದ ತಾನಾಗಿಯೇ ವಿಘಟಿತಗೊಳ್ಳುವುದಿಲ್ಲ. ಇದೊಂದು ಹೊಸ ಉಪಬಂಧವಾಗಿದೆ. ಏಕೆಂದರೆ ೧೯೩೯ಕ್ಕಿಂತ ಮೊದಲು ಈ ಸಂಗತಿಯ ಬಗ್ಗೆ ಕಾನೂನು ಬೇರೆ ರೀತಿಯಾಗಿತ್ತು. ಆದುದರಿಂದ ಈಗ ಒಂದೊಮ್ಮೆ ಒಬ್ಬ ಪತ್ನಿಯು ತನ್ನ ಧರ್ಮವನ್ನು ಪರಿತ್ಯಜನೆ ಮಾಡಿದರೂ ಸಹ ಆಕೆಯು ಈ ಅಧಿನಿಯಮದ ಪ್ರಕಾರ ವಿವಾಹ ವಿಚ್ಛೇದನೆ ಇತ್ಯಾದಿಗಳ ತನ್ನ ಹಕ್ಕನ್ನು ಚಲಾಯಿಸಲು ಅಧಿಕಾರವುಳ್ಳವಳಾಗಿರುವಳು. ಆದುದರಿಂದ ಈ ಅಧಿನಿಯಮದ ಪ್ರಕಾರ ವಿವಾಹ ವಿಚ್ಛೇದನೆಯ ಹಕ್ಕುಗಳನ್ನು ಪಡೆಯಲು ಆ ಪತ್ನಿಯು ಮುಸ್ಲಿಮ್ ಕಾನೂನಿನ ಪ್ರಕಾರ ವಿವಾಹಿತಳಾಗಿದ್ದಿರಬೇಕು ಮತ್ತು ಈ ಅಧಿನಿಯಮದ ಪ್ರಕಾರ ವಿವಾಹ ವಿಚ್ಛೇದನೆಗಾಗಿ ಒಂದು ಅರ್ಜಿ ಮಾಡುವ ಕಾಲದಲ್ಲಿ ಆಕೆಯು ಒಬ್ಬ ಮುಸ್ಲಿಮ್ ಪತ್ನಿಯಾಗಿರಬೇಕಾಗಿಲ್ಲ. ಹೀಗೆ ಒಬ್ಬ ಮುಸ್ಲಿಮೇತರ ಪತ್ನಿಯೂ ಸಹ ಒಂದೊಮ್ಮೆ ಆಕೆಯ ವಿವಾಹವು ಮುಸ್ಲಿಮ್ ಕಾನೂನಿನ ಮೇರೆಗೆ ಮಾಡಲ್ಪಟ್ಟುದಾಗಿದ್ದರೆ ಈ ಅಧಿನಿಯಮದ ಉಪಬಂಧಗಳನ್ನು ಆಹ್ವಾನಿಸಬಹುದು.

ಡಿ) ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಹೊರತು, ಇಡೀ ಭಾರತಕ್ಕೆ ವ್ಯಾಪಕವಾಗುತ್ತದೆ. ಇದು ಎಲ್ಲ ಪಂಗಡಗಳ ಅಥವಾ ಪರಂಪರೆಗಳ

ಮುಸ್ಲಿಮ್ ಪತ್ನಿಯರಿಗೆ ಅನ್ವಯವಾಗುತ್ತದೆ. ಆದುದರಿಂದ ಈ ಅಧಿನಿಯಮವು ದೇಶದ ಯಾವುದೇ ಭಾಗದ ಒಬ್ಬ ಮುಸ್ಲಿಮ್ ಪತ್ನಿಯು ಮುಸ್ಲಿಮ್ ಕಾನೂನಿನ ಮೇರೆಗೆ ವಿವಾಹಿತಳಾಗಿದ್ದರೆ ಆಕೆಯ ಸಂಬಂಧದಲ್ಲಿ ಒಂದು ಏಕರೂಪೀ ಕಾನೂನನ್ನು ನಿರ್ಮಿಸಿದೆ.

ಪತ್ನಿಗೆ ನ್ಯಾಯಿಕ ವಿಚ್ಛೇದನೆ ಪಡೆಯಲು ಸಿಗುವ ಕಾರಣಗಳು
(Grounds for Judicial Divorce by Wife)

ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ ೧೯೩೯ ಇದರ ಕ. ೨ರ ಪ್ರಕಾರ ವಿವಾಹಿತಳಾದ ಒಬ್ಬ ನಾರಿಯು ಈ ಕಲಮಿನಲ್ಲಿ ಹೇಳಲಾದ ಕಾರಣಗಳಲ್ಲಿ ಯಾವುದಾದರೊಂದು ಕಾರಣದ ಮೇಲೆ ತನ್ನ ವಿವಾಹವನ್ನು ವಿಚ್ಛೇದಿತಗೊಳಿಸಲು ನ್ಯಾಯಾಲಯದಿಂದ ಒಂದು ಡಿಕ್ರಿ ಪಡೆಯಲು ಹಕ್ಕುದಾರಳಾಗಿರುವಳು. ಈ ಕಲಮಿನ ಪ್ರಯೋಜನವು ಈ ಅಧಿನಿಯಮವು ಆರಂಭವಾಗುವುದಕ್ಕಿಂತ ಮೊದಲು ಅಥವಾ ಬಳಿಕ ಮಾಡಲ್ಪಟ್ಟ ವಿವಾಹಗಳಿಗೆ ಸಿಗುತ್ತದೆ. ಕ. ೨ ಇದರ ಉಪಬಂಧಗಳು ಪೂರ್ವಾನ್ವಯಿಯಾಗಿವೆ. ಆ ನಿರ್ದಿಷ್ಟ ಪಡಿಸಲಾದ ಕಾರಣಗಳು ಈ ಕೆಳಗಿನವುಗಳಾಗಿವೆ :

i) ಪತಿಯು ನಾಲ್ಕು ವರ್ಷಗಳಿಂದ ನಾಪತ್ತೆಯಾಗಿರುವನು
(The husband is missing for four years)

ಒಂದೊಮ್ಮೆ ಪತಿಯು ನಾಪತ್ತೆಯಾಗಿದ್ದರೆ ಮತ್ತು ಅವನು ಎಲ್ಲಿರುವನೆಂಬುದು ನಾಲ್ಕು ವರ್ಷಗಳಿಂದ ಅಥವಾ ಅದಕ್ಕೂ ಹೆಚ್ಚಿನ ಕಾಲಾವಧಿಯಿಂದ ತಿಳಿದಿಲ್ಲವೆಂದಾದರೆ ಪತ್ನಿಯು ಈ ಅಧಿನಿಯಮದ ಕ-೨ ಖಂಡ (I) ಇದರ ಪ್ರಕಾರ ವಿವಾಹ ವಿಚ್ಛೇದನೆಗಾಗಿ ಒಂದು ಅರ್ಜಿ ಮಾಡಬಹುದು. ಒಂದೊಮ್ಮೆ ಪತಿಯು ಎಲ್ಲಿರುವನೆಂಬ ಬಗ್ಗೆ ಪತ್ನಿಗೆ ಅಥವಾ ಆ ತಿಳುವಳಿಕೆಯಿರಬೇಕಾಗಿರುವ ವ್ಯಕ್ತಿಗೆ ಗೊತ್ತಿಲ್ಲವೆಂದಾದರೆ ಮತ್ತು ಅವನನ್ನು ಹುಡುಕಿ ತೆಗೆಯುವದು ಸಾಧ್ಯವಿಲ್ಲವೆಂದಾದರೆ ಆಲ್ಲಿ ಆ ಪತಿಯು ನಾಪತ್ತೆಯಾಗಿರುವನೆಂದು ಎಣಿಸಲಾಗುತ್ತದೆ. ಕ-೩ರ ಪ್ರಕಾರ ಒಂದೊಮ್ಮೆ ಒಬ್ಬ ಪತ್ನಿಯು ಈ ಕಾರಣಕ್ಕಾಗಿ ವಿವಾಹ ವಿಚ್ಛೇದನೆಯ ಒಂದು ಅರ್ಜಿ ಸಲ್ಲಿಸಿದರೆ ಆಕೆಯು, ಒಂದೊಮ್ಮೆ ತನ್ನ ಪತಿಯು ಮೃತನಾಗಿದ್ದರೆ ಯಾರೆಲ್ಲ ಅವನ ವಾರಸುದಾರರಾಗುತ್ತಿದ್ದರೊ ಅವರ ಹೆಸರುಗಳನ್ನು ಮತ್ತು ವಿಳಾಸಗಳನ್ನು ನ್ಯಾಯಾಲಯಕ್ಕೆ ತಿಳಿಸಬೇಕಾಗುತ್ತದೆ. ತಂದೆಯ ಸಹೋದರ ಮತ್ತು ಪತಿಯ ಸಹೋದರರು ಒಂದೊಮ್ಮೆ ತನ್ನ ಪತಿಯ ಕಾನೂನೀ ವಾರಸುದಾರರಲ್ಲದಿದ್ದರೂ ಸಹ ಅವರ ಹೆಸರು ಮತ್ತು ವಿಳಾಸಗಳನ್ನು ತಿಳಿಸಬೇಕಾಗುತ್ತದೆ. ನ್ಯಾಯಾಲಯವು ಇಂತಹ ಎಲ್ಲ ವ್ಯಕ್ತಿಗಳಿಗೆ ಒಂದು ಸೂಚನೆ ಜಾರಿಮಾಡಿ ಅವರು ನ್ಯಾಯಾಲಯದ ಮುಂದೆ ಹಾಜರಾಗುವಂತೆ ಮಾಡಿ ಆಕೆಯ ನಾಪತ್ತೆಯಾಗಿರುವ ಪತಿಯ ಬಗೆ ಅವರಿಗೆ ಯಾವತ್ತೂ ತಿಳುವಳಿಕೆಯಿದೆಯೋ ಎಂದು

ಅವರನ್ನು ಕೇಳುತ್ತದೆ. ಒಂದೊಮ್ಮೆ ಅವರು ಅವಳ ಪತಿಯ ಬಗ್ಗೆ ಕಳೆದ ನಾಲ್ಕು ವರ್ಷಗಳಿಂದ ಅಥವಾ ಅದಕ್ಕೂ ದೀರ್ಘವಾದ ಕಾಲಾವಧಿಯಿಂದ ಏನೂ ತಿಳಿದಿಲ್ಲ ವೆಂದಾದರೆ ನ್ಯಾಯಾಲಯವು ಆ ವಿವಾಹದ ವಿಘಟನೆಗಾಗಿ ಒಂದು ಡಿಕ್ರಿಯನ್ನು ಮಂಜೂರು ಮಾಡುತ್ತದೆ. ಈ ಕಾರಣದ ಮೇಲೆ ನ್ಯಾಯಾಲಯವು ಒಂದು ಡಿಕ್ರಿ ಮಂಜೂರು ಮಾಡಿದರೆ ಆ ಡಿಕ್ರಿಯು ಅದನ್ನು ಮಂಜೂರು ಮಾಡಲ್ಪಟ್ಟ ದಿನಾಂಕದಿಂದ ಆರು ತಿಂಗಳುಗಳ ಕಾಲಾವಧಿಯು ಮುಗಿದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುತ್ತದೆ. ಒಂದೊಮ್ಮೆ ಆ ಆರು ತಿಂಗಳುಗಳ ಕಾಲಾವಧಿಯು ಮುಗಿಯುವುದಕ್ಕಿಂತ ಮೊದಲೇ ಆ ಪತಿಯು ನ್ಯಾಯಾಲಯದಲ್ಲಿ ವೈಯಕ್ತಿಕವಾಗಿ ಪ್ರತ್ಯಕ್ಷನಾದರೆ ಅಥವಾ ತನ್ನ ಕಾರ್ಯಭಾರಿಯು ಮುಖಾಂತರ ನ್ಯಾಯಾಲಯಕ್ಕೆ ಸೂಚನೆ ಕೊಟ್ಟರೆ ಮತ್ತು ಅವನು ತನ್ನ ವೈವಾಹಿಕ ಕರ್ತವ್ಯಗಳನ್ನು ನೆರವೇರಿಸಲು ಸಿದ್ಧನಾಗಿರುವನೆಂಬುದಾಗಿ ನ್ಯಾಯಾಲಯಕ್ಕೆ ಸಮಾಧಾನ ಪಡಿಸಿಕೊಟ್ಟರೆ ನ್ಯಾಯಾಲಯವು ಆ ಡಿಕ್ರಿಯನ್ನು ಕಿತ್ತು ಹಾಕುತ್ತದೆ ಮತ್ತು ಆ ವಿವಾಹವು ವಿಘಟಿತ ವಾಗುವುದಿಲ್ಲ.

ii) ಪತ್ನಿಗೆ ಜೀವನಾಂಶ ಕೊಡಲು ಪತಿಯ ವಿಫಲತೆ

(Failure of the husband to maintain the wife)

ಕ. ೨ (ii) ಇದರ ಪ್ರಕಾರ ಒಂದೊಮ್ಮೆ ಪತಿಯು ಎರಡು ವರ್ಷಗಳ ಅವಧಿಗೆ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ಪತ್ನಿಯನ್ನು ನಿರ್ಲಕ್ಷಿಸಿರುವನಾದರೆ ಅಥವಾ ಆಕೆಗೆ ಜೀವನಾಂಶದ ವ್ಯವಸ್ಥೆ ಮಾಡಲು ವಿಫಲನಾಗಿದ್ದರೆ ಆ ಪತ್ನಿಯು ತನ್ನ ವಿವಾಹವನ್ನು ವಿಘಟಿತಗೊಳಿಸಲು ಒಂದು ಡಿಕ್ರಿ ಪಡೆಯಲು ಹಕ್ಕುದಾರಳಾಗುವಳು ತನ್ನ ಪತ್ನಿಗೆ ಜೀವನಾಂಶ ಕೊಡುವದು ಪ್ರತಿಯೊಬ್ಬ ಪತಿಯ ಕಾನೂನೀ ಕರ್ತವ್ಯವಾಗಿರುತ್ತದೆ. ಒಂದೊಮ್ಮೆ ಪತಿಯು ತನ್ನ ಈ ಕರ್ತವ್ಯದಲ್ಲಿ ವಿಫಲನಾದರೆ ಈ ಕಾರಣದ ಮೇಲೆ ಪತ್ನಿಯು ವಿವಾಹ ವಿಚ್ಛೇದನೆಯನ್ನು ಪಡೆಯಬಹುದು. ಒಬ್ಬ ಪತಿಯು ನಿರ್ಲಕ್ಷದಿಂದಾಗಿ ಅಥವಾ ತನ್ನಲ್ಲಿ ಸಾಕಷ್ಟು ಆರ್ಥಿಕ ಅನುಕೂಲತೆ ಇಲ್ಲದ ಕಾರಣದಿಂದಾಗಿ ಪತ್ನಿಗೆ ಜೀವನಾಂಶ ಕೊಡಲು ವಿಫಲನಾಗಬಹುದು. ಈ ಎರಡೂ ಪ್ರಕರಣಗಳು ಪತ್ನಿಗೆ ಜೀವನಾಂಶ ಕೊಡುವಲ್ಲಿ ಪತಿಯಿಂದ ಆಗಿರುವ ವಿಫಲತೆಗಳೆಂದು ಎಣಿಸಲ್ಪಡುತ್ತವೆ ಮತ್ತು ಒಬ್ಬ ಪತ್ನಿಯು ಈ ಕಾರಣದ ಮೇಲೆ ತನ್ನ ವಿವಾಹವನ್ನು ವಿಘಟಿತಗೊಳಿಸಲು ಹಕ್ಕುದಾರಳಾಗುವಳು. ಒಂದೊಮ್ಮೆ ಒಬ್ಬ ಪತಿಯು ಬಡತನ, ನಿರುದ್ಯೋಗ, ಜೇಲುವಾಸ, ಅನಾರೋಗ್ಯ ಅಥವಾ ಇತರ ಯಾವುದಾದರೊಂದು ದುರದೃಷ್ಟದಿಂದಾಗಿ ಪತ್ನಿಗೆ ಜೀವನಾಂಶ ಕೊಡಲು ವಿಫಲನಾದರೂ ಸಹ ಪತ್ನಿಯು ತನ್ನ ವಿವಾಹವನ್ನು ವಿಘಟಿತಗೊಳಿಸಲು ಒಂದು ಡಿಕ್ರಿ ಪಡೆಯುವ ಹಕ್ಕನ್ನು ಹೊಂದಿರುವಳು.

ಮುಸ್ಲಿಮ್ ಕಾನೂನಿನ ಪ್ರಕಾರ ತನ್ನ ಪತ್ನಿಗೆ ಜೀವನಾಂಶ ಕೊಡಲ

ಪತಿಯ ಕರ್ತವ್ಯವು. ಆ ಪತ್ನಿಯು ತನ್ನ ವೈವಾಹಿಕ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಬಾಧ್ಯವಾಗಿರುತ್ತದೆ. ಆದುದರಿಂದ ಒಂದೊಮ್ಮೆ ಆ ಪತ್ನಿಯು ಯಾವತ್ತೂ ಯುಕ್ತ ಕಾರಣವಿಲ್ಲದೆ ಪತಿಯಿಂದ ಪ್ರತ್ಯೇಕವಾಗಿ ಜೀವಿಸುತ್ತಿದ್ದರೆ ಪತಿಯು ತನಗೆ ಜೀವನಾಂಶವನ್ನು ಕೊಡುತ್ತಿಲ್ಲ ಎಂಬ ಕಾರಣದ ಮೇಲೆ ಆಕೆಯು ಒಂದು ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಪಡೆಯುವಂತಿಲ್ಲ. ಇದಕ್ಕೆ ಕಾರಣವೇನೆಂದರೆ ಅವಳ ಸ್ವಂತ ನಡತೆಯು ಮುಸ್ಲಿಮ್ ಕಾನೂನಿನ ಪ್ರಕಾರ ಅವಳನ್ನು ಜೀವನಾಂಶ ಪಡೆಯುವ ಹಕ್ಕಿನಿಂದ ಲೋಪಗೊಳಿಸುತ್ತದೆ. ಒಬ್ಬ ಪತ್ನಿಯು ತನ್ನ ದೋಷಯುಕ್ತ ನಡತೆಯಿಂದಾಗಿ ಜೀವನಾಂಶವನ್ನು ಪಡೆಯುವ ಹಕ್ಕನ್ನು ಹೊಂದಿರುವಳಾದರೆ ಅಲ್ಲಿ ಈ ಕಾರಣವನ್ನು ಅವಳು ನ್ಯಾಯಿಕ ವಿವಾಹ ವಿಚ್ಛೇದನೆಗಾಗಿ ಒಂದು ಅರ್ಜಿ ಸಲ್ಲಿಸಿದಾಗ ಒಳ್ಳೆಯ ಪ್ರತಿವಾದವನ್ನಾಗಿ ಎತ್ತಬಹುದು. ಹೀಗೆ ಒಂದೊಮ್ಮೆ ಒಬ್ಬ ಪತ್ನಿಯು ಒಂದು ಚಿಕ್ಕ ಜಗಳದ ಮೇಲೆ ತನ್ನ ವೈವಾಹಿಕ ಗೃಹವನ್ನು ಬಿಟ್ಟು ಬಿಟ್ಟರೆ ಮತ್ತು ಎರಡು ವರ್ಷಗಳ ಕಾಲಾವಧಿಯೊಳಗೆ ಹಿಂತಿರುಗಿ ಬಾರದಿದ್ದರೆ ಆಕೆಯು ಈ ಖಂಡದ ಮೇರೆಗೆ ಒಂದು ನ್ಯಾಯಿಕ ವಿವಾಹ ವಿಚ್ಛೇದನೆಯನ್ನು ಪಡೆಯುವಂತಿಲ್ಲ, ಒಂದೊಮ್ಮೆ ಒಬ್ಬ ಪತ್ನಿಯು ಯಾವತ್ತೂ ಯೋಗ್ಯ ಕಾರಣವಿಲ್ಲದೆ ಪತಿಯಿಂದ ಎರಡು ವರ್ಷಗಳ ಕಾಲಾವಧಿಗೆ ಪ್ರತ್ಯೇಕವಾಗಿ ಜೀವಿಸಿದ್ದು ಆ ಬಳಿಕ ವಿವಾಹ ವಿಚ್ಛೇದನೆಗಾಗಿ ಈ ಅಧಿನಿಯಮದ ಕ. ೨ (ii) ಇದರ ಪ್ರಕಾರ ಒಂದು ಅರ್ಜಿ ಸಲ್ಲಿಸಿದರೆ ಅಲ್ಲಿ ಆಕೆಗೆ ವಿವಾಹ ವಿಚ್ಛೇದನೆಯನ್ನು ಮಂಜೂರುಗೊಳಿಸಲಾಗುವುದಿಲ್ಲ. ಆದರೆ ಒಂದೊಮ್ಮೆ ಒಬ್ಬ ಪತ್ನಿಯು ಯಾವುದಾದರೊಂದು ಯುಕ್ತ ಕಾರಣಕ್ಕಾಗಿ ಪತಿಯಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವಳಾದರೆ ಮತ್ತು ಎರಡು ವರ್ಷಗಳ ಕಾಲಾವಧಿಗೆ ಪತಿಯು ಆಕೆಗೆ ಜೀವನಾಂಶವನ್ನು ಕೊಡುತ್ತಿಲ್ಲವೆಂದಾದರೆ ಆಕೆಗೆ ಈ ಖಂಡದ ಮೇರೆಗೆ ನ್ಯಾಯಿಕ ವಿವಾಹ ವಿಚ್ಛೇದನೆಯನ್ನು ಪಡೆಯುವ ಹಕ್ಕು ಬರುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ತನಗೆ ಸಲ್ಲತಕ್ಕ ತತ್ಕ್ಷಣಿಕ ಕನ್ಯಾಶುಲ್ಕವು ಸಂದಾಯ ಮಾಡಿಲ್ಲದ ಕಾರಣದಿಂದಾಗಿ ಪತ್ನಿಯು ಪತಿಯಿಂದ ಪ್ರತ್ಯೇಕವಾಗಿ ಜೀವಿಸುತ್ತಿದ್ದರೆ ಇಂತಹ ಒಂದು ಪ್ರತ್ಯೇಕವಾದ ಜೀವಿಸುವಿಕೆಯು ಒಂದು ಯುಕ್ತ ಕಾರಣದಿಂದ ಕೂಡಿರುವುದಾಗಿರುತ್ತದೆ ಎಂಬುದಾಗಿ ಪಾಟ್ನಾ ಉಚ್ಚ ನ್ಯಾಯಾಲಯವು ಒಂದು ತೀರ್ಪು ಕೊಟ್ಟಿದೆ. ಇಂತಹ ಪ್ರಕರಣದಲ್ಲಿ ಪತಿಯಿಂದ ಜೀವನಾಂಶವು ಕೊಡಲ್ಪಟ್ಟಿಲ್ಲವೆಂಬ ಕಾರಣದ ಮೇಲೆ ಪತ್ನಿಯು ವಿವಾಹ ವಿಚ್ಛೇದನೆಯ ಒಂದು ಡಿಕ್ರಿಯನ್ನು ಪಡೆಯಬಹುದು. ಇಲ್ಲಿ ಹೇಳಲ್ಪಟ್ಟ ಜೀವನಾಂಶವು ಮುಸ್ಲಿಮ್ ಕಾನೂನಿನ ಪ್ರಕಾರ ಪತ್ನಿಗೆ ಕೊಡಬೇಕಾಗಿರುವ ಜೀವನಾಂಶವಾಗಿರುತ್ತದೆ ಮತ್ತು ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ (Criminal Procedure Code, 1973) ಇದರ ಕ. ೨೫ರಲ್ಲಿ ಹೇಳಲಾದ ಜೀವನಾಂಶದಿಂದ ಅದು ಭಿನ್ನವಾಗಿರುತ್ತದೆ. ಏಕೆಂದರೆ ಈ ಸಂಹಿತೆಯಲ್ಲಿ ಹೇಳಲಾದ ಜೀವನಾಂಶವು ಯಾವತ್ತೂ ಧರ್ಮಾವಲಂಬಿಗಳಿಗೆ ಸಂಬಂಧಪಟ್ಟ ನಿಯಮದ ಮೇಲೆ ಆಧಾರಿತವಾಗಿಲ್ಲ.

೩) ಪತಿಗೆ ೭ ವರ್ಷಗಳ ಕಾರಾಗ್ರಹ
(Imprisonment of the husband for 7 years)

ಒಂದೊಮ್ಮೆ ಪತಿಯು ೭ ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲದ ಕಾರಾಗ್ರಹವಾಸದ ಶಿಕ್ಷೆಯನ್ನು ಪಡೆದಿರುವನಾದರೆ ಈ ಕಾರಣಕ್ಕಾಗಿ ಪತ್ನಿಯು ನ್ಯಾಯಾಲಯದ ಒಂದು ಆದೇಶದ ಮೇರೆಗೆ ತನ್ನ ವಿವಾಹವನ್ನು ವಿಘಟಿತಗೊಳಿಸಬಹುದೆಂದು ಪರಂತುಕ (ಎ) ಇದನ್ನು ಕ. ೨ (iii) ಇದರೊಂದಿಗೆ ಓದಿದರೆ ತಿಳಿಯುತ್ತದೆ. ಇಲ್ಲಿ ಕಾರಾಗ್ರಹವಾಸದ ಶಿಕ್ಷೆಯು ಅಂತಿಮವಾಗಿರುವ ದಿನಾಂಕದಿಂದು ಮಾತ್ರ ಈ ಕಾರಣದ ಮೇಲೆ ನ್ಯಾಯಿಕ ವಿವಾಹ ವಿಚ್ಛೇದನೆ ಪಡೆಯಲು ಪತ್ನಿಯ ಹಕ್ಕು ಅಸ್ತಿತ್ವಕ್ಕೆ ಬರುತ್ತದೆ. ಆದುದರಿಂದ ತನಗೆ ಕೊಡಲಾದ ೭ ವರ್ಷದ ಕಾರಾಗ್ರಹವಾಸದ ಶಿಕ್ಷೆಯು ಅಂತಿಮ ನ್ಯಾಯಾಲಯದಿಂದ ಎತ್ತಿಹಿಡಿಯಲ್ಪಟ್ಟಾಗ ಅಥವಾ ಈ ತೀರ್ಪಿನ ವಿರುದ್ಧ ಮನವಿಮಾಡುವ ದಿನಾಂಕವು ಮುಗಿದ ಬಳಿಕ ಮಾತ್ರ ಇಂತಹ ಒಂದು ಡಿಕ್ರಿಯನ್ನು ಪತ್ನಿಯ ಪರವಾಗಿ ಮಂಜೂರು ಮಾಡಬಹುದು.

೪) ಮೂರು ವರ್ಷಗಳ ಅವಧಿಗೆ ತನ್ನ ವೈವಾಹಿಕ ಕರ್ತವ್ಯಗಳನ್ನು ಅನುಷ್ಠಾನಗೊಳಿಸಲು ಪತಿಯ ವಿಫಲತೆ
(Husband's failure to perform merital obligations for three years)

ಒಂದೊಮ್ಮೆ ಯುಕ್ತ ಕಾರಣವಿಲ್ಲದ ಮೂರು ವರ್ಷಗಳ ಕಾಲಾವಧಿಗೆ ಪತಿಯು ತನ್ನ ವೈವಾಹಿಕ ಕರ್ತವ್ಯಗಳನ್ನು ಅನುಷ್ಠಾನಗೊಳಿಸಲು ವಿಫಲನಾದರೆ ಪತ್ನಿಯು ಕ.೨(iv) ಇದರ ಮೇರೆಗೆ ಆ ವಿವಾಹವನ್ನು ವಿಘಟಿತಗೊಳಿಸಲು ಹಕ್ಕುದಾರಳಾಗುವಳು. ವೈವಾಹಿಕ ಕರ್ತವ್ಯಗಳೆಂದರೆ ಏನೆಂದು ಈ ಅಧಿನಿಯಮವು ಪರಿಭಾಷಿಸಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಪತಿಗೆ ಅನೇಕ ವೈವಾಹಿಕ ಕರ್ತವ್ಯಗಳಿರುತ್ತವೆ. ಆದರೆ ಈ ಖಂಡದ ಉದ್ದೇಶಕ್ಕಾಗಿ ಈ ಅಧಿನಿಯಮದ ಕ. ೨ರ ಖಂಡಗಳಲ್ಲಿ ಸೇರಿಸಲ್ಪಟ್ಟಿಲ್ಲದ ಯಾವತ್ತೂ ದಾಂಪತ್ಯದ ಕರ್ತವ್ಯಗಳನ್ನಷ್ಟೇ ಗಮನಿಸಲಾಗುತ್ತದೆ. ಒಂದೊಮ್ಮೆ ಪತಿಯು ಪತ್ನಿಯನ್ನು ಪರಿತ್ಯಜನೆಗೊಳಿಸಿದರೆ ಅಥವಾ ಯುಕ್ತ ಕಾರಣವಿಲ್ಲದೆ ಆಕೆಯೊಂದಿಗೆ ಸಹವಾಸವನ್ನು ಮಾಡುತ್ತಿಲ್ಲವೆಂದಾದರೆ ಅಲ್ಲಿ ವೈವಾಹಿಕ ಕರ್ತವ್ಯಗಳನ್ನು ಅನುಷ್ಠಾನಗೊಳಿಸಲು ಪತಿಯಿಂದ ವಿಫಲತೆಯಾಗಿದೆಯೆಂದು ಎಣಿಸಲಾಗುತ್ತದೆ. ಕನಿಷ್ಠ ಮೂರು ವರ್ಷಗಳ ಕಾಲಾವಧಿಗೆ ಯಾವತ್ತೂ ಯುಕ್ತ ಸಮರ್ಥನೆಯಿಲ್ಲದೆ ಪತಿಯಿಂದಾಗುವ ಇಂತಹ ಒಂದು ವಿಫಲತೆಯು ವಿವಾಹ ವಿಚ್ಛೇದನೆಯ ಒಂದು ಡಿಕ್ರಿ ಪಡೆಯಲು ಪತ್ನಿಗೆ ಒಂದು ಕಾರಣವನ್ನು ಕೊಡುತ್ತದೆ.

೫) ಪತಿಯ ನಪುಂಸಕತ್ವ (Imptency of fhe husband's)

ಈ ಅಧಿನಿಯಮದ ಕ. ೨ (v) ಇದರ ಪ್ರಕಾರ ಪತಿಯು ನಪುಂಸಕನಾಗಿರುವ

ನೆಂಬ ಕಾರಣದ ಮೇಲೆ ಪತ್ನಿಯು ತನ್ನ ವಿವಾಹವನ್ನು ವಿಘಟಿತಗೊಳಿಸಲು ಒಂದು ದಾವೆ ಹೂಡಬಹುದು. ಆದರೆ ವಿವಾಹ ವಿಘಟನೆಯ ಒಂದು ಡಿಕ್ರಿಯನ್ನು ಪಡೆಯಬೇಕಾದರೆ ಆ ಪತ್ನಿಯು ಈ ಎರಡು ಸಂಗತಿಗಳನ್ನು ಸಾಬೀತುಪಡಿಸಿ ತೋರಿಸಬೇಕಾಗುತ್ತದೆ. (೧) ಆ ವಿವಾಹದ ಕಾಲದಲ್ಲಿ ಪತಿಯು ನಪುಂಸಕನಾಗಿದ್ದನು ಮತ್ತು (೨) ಆ ದಾವೆಯು ಹೂಡಲ್ಪಡುವ ದಿನಾಂಕದಂದು ಅವನು ನಪುಂಸಕನಾಗಿ ಮುಂದುವರಿಯುತ್ತಿರುವನು. ಒಬ್ಬ ಪತ್ನಿಯು ಈ ಕಾರಣಕ್ಕಾಗಿ ಒಂದು ವಿವಾಹ ವಿಚ್ಛೆದನೆಯನ್ನು ಪಡೆಯಬೇಕಾದರೆ ಈ ಎರಡೂ ಸಂಗತಿಗಳನ್ನು ಆಕೆಯು ಸಿದ್ಧಮಾಡಿ ತೋರಿಸಬೇಕಾಗುತ್ತದೆ. ಈ ಕಾರಣದ ಮೇಲೆ ಒಂದು ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಜಾರಿ ಮಾಡುವುದಕ್ಕಿಂತ ಮೊದಲು, ಒಂದೊಮ್ಮೆ ಪತಿಯು ತನ್ನಲ್ಲಿ ಪುಂಸಕತ್ವವಿದೆ ಎಂಬುದಾಗಿ ಒಂದು ಅರ್ಜಿಯನ್ನು ಸಲ್ಲಿಸಿದರೆ, ನ್ಯಾಯಾಲಯವು ಅವನಿಗೆ ತನ್ನ ಪುಂಸಕತ್ವವನ್ನು ಸಿದ್ಧಮಾಡಿ ತೋರಿಸಲು ಒಂದು ವರ್ಷದ ಅವಧಿಯನ್ನು ಕೊಡಬೇಕಾಗುತ್ತದೆ. ಆದರೆ ಒಂದೊಮ್ಮೆ ಪತಿಯು ಇಂತಹ ಅರ್ಜಿಯನ್ನು ಸಲ್ಲಿಸದಿದ್ದರೆ ನ್ಯಾಯಾಲಯವು ಯಾವತ್ತೂ ವಿಳಂಬವಿಲ್ಲದೆ ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಮಂಜೂರು ಮಾಡುತ್ತದೆ. ಆದರೆ ಒಂದು ವರ್ಷದ ಕಾಲಾವಧಿಯೊಳಗೆ ಪತಿಯು ತನ್ನ ಪುಂಸಕತ್ವವನ್ನು ಸಿದ್ಧಮಾಡಿ ತೋರಿಸಿದರೆ ಅಲ್ಲಿ ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಮಂಜೂರು ಮಾಡುವಂತಿಲ್ಲ. ಆದರೆ ಪತ್ನಿಯ ಆರೋಪವನು ಅಲ್ಲಗಳೆಯುವಲ್ಲಿ ಅವನು ವಿಫಲನಾದರೆ ಆಗ ಆ ವಿವಾಹದ ವಿಘಟನೆಗಾಗಿ ಒಂದು ಡಿಕ್ರಿಯು ಮಂಜೂರು ಮಾಡಲಾಗುತ್ತದೆ.

ಒಂದೊಮ್ಮೆ ಒಬ್ಬ ಪತಿಯು ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಭೋಗ ಮಾಡಲು ಅನರ್ಹನಾಗಿದ್ದರೆ ಅವನನ್ನು ನಪುಂಸಕನೆಂದು ಹೇಳಲಾಗುತ್ತದೆ. ಕೆಲವೊಮ್ಮೆ ಒಬ್ಬ ಪತಿಯು ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಭೋಗ ಮಾಡಲು ಅಸಮರ್ಥನಾಗಿರಬಹುದು. ಆದರೆ ಇತರ ಯಾವಳಾದರೊಬ್ಬ ನಾರಿಯೊಂದಿಗೆ ಲೈಂಗಿಕ ಸಂಭೋಗ ಮಾಡಲು ಸಮರ್ಥನಾಗಿರಬಹುದು. ಇಲ್ಲಿ 'ಹೇಳಲಾದ ನಪುಂಸಕತ್ವವು ತನ್ನ ಪತ್ನಿಯ ಸಂಬಂಧದಲ್ಲಿ ನಪುಂಸಕತ್ವವಾಗಿರುವುದಲ್ಲದೆ ಇತರ ನಾರಿಯರ ಸಂಬಂಧದಲ್ಲಲ್ಲ. ಆದುದರಿಂದ ಒಂದೊಮ್ಮೆ ತಾನು ನಪುಂಸಕನಾಗಿರುವದು ನಿಂತುಬಿಟ್ಟಿದೆ ಎಂಬುದಾಗಿ ಒಬ್ಬ ಪತಿಯು ಹಕ್ಕು ದಾವೆ ಮಾಡುವವನಾದರೆ ಅವನು ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಭೋಗ ಮಾಡಲು ಸಮರ್ಥನಾಗಿರುವನೆಂಬುದನ್ನು ನ್ಯಾಯಾಲಯಕ್ಕೆ ಸಿದ್ಧಪಡಿಸಿ ತೋರಿಸಬೇಕಾಗುತ್ತದೆ. ಈ ಸಂಗತಿಯನ್ನು ಸಿದ್ಧಪಡಿಸಿ ತೋರಿಸಲು ಪತ್ನಿಯ ಸಹಕಾರದ ಅವಶ್ಯಕತೆಯಿರುತ್ತದೆ. ಆದರೆ ಈ ಬಗ್ಗೆ ಮೈಸೂರು ಉಚ್ಚ ನ್ಯಾಯಾಲಯವು ಕೊಟ್ಟಿರುವ ಒಂದು ತೀರ್ಪು ಸ್ವಲ್ಪ ಮಟ್ಟಿಗೆ ವಿಚಿತ್ರವಾಗಿರುವಂತೆ ಕಾಣಿಸುತ್ತದೆ. ಈ ನ್ಯಾಯಾಲಯದ ಒಂದು ತೀರ್ಪಿನ ಪ್ರಕಾರ ಪತಿಗೆ ತನ್ನ ನಪುಂಸಕತ್ವವು ನಿಂತುಬಿಟ್ಟಿದೆಯೆಂಬುದನ್ನು

ಸಾಬೀತು ಮಾಡಿ ತೋರಿಸಲು ಪತ್ನಿಯು ಅವನ ಮುಂದೆ ತನ್ನನ್ನು ತಾನು ಸಮರ್ಪಣೆ ಮಾಡಲು ಒತ್ತಾಯಿಸಲ್ಪಡುವಂತಿಲ್ಲ. (ಅಬ್ದುಲ್ ಅಜಿಮ್ ವಿ. ಫಾರ್ಹಿಮುನ್ನಿಸಾ, ಎ.ಐ.ಆರ್. (೧೯೩೯) ಮೈಸೂರ್ ೨೨೬)

ನ್ಯಾಯಿಕ ವಿವಾಹ ವಿಚ್ಛೇದನೆಯ ಒಂದು ಕಾರಣದ ರೀತಿಯಲ್ಲಿ ಪತಿಯ ನಪುಂಸಕತ್ವವು ಹಳೆಯ ಕಾನೂನಿನಿಂದಲೂ ಮನ್ನಿಸಲ್ಪಟ್ಟಿತ್ತು ಮತ್ತು ೧೯೩೯ಕ್ಕಿಂತ ಮೊದಲು ಈ ಕಾರಣದ ಮೇಲೆ ಪತಿಯು ವಿವಾಹ ವಿಚ್ಛೇದನೆಯ ಒಂದು ಡಿಕ್ರಿಯನ್ನು ಪಡೆಯಲು ಹಕ್ಕುದಾರಳಾಗಿದ್ದಳು. ಆದರೆ ಈ ಅಧಿನಿಯಮವು ಈ ವಿಷಯದ ಸಂಬಂಧದಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಿದೆ. ಹಳೆಯ ಮತ್ತು ಹೊಸ ಕಾನೂನಿನೊಳಗೆ ಈ ಕೆಳಗಿನ ಪ್ರಮುಖ ವ್ಯತ್ಯಾಸಗಳನ್ನು ಕಾಣಬಹುದು :

ಎ) ಹಳೆಯ ಕಾನೂನಿನ ಪ್ರಕಾರ ವಿವಾಹ ಕಾಲದಲ್ಲಿ ತನ್ನ ಪತಿಯ ನಪುಂಸಕತ್ವದ ಬಗ್ಗೆ ತನಗೆ ತಿಳುವಳಿಕೆ ಇದ್ದಿರಲಿಲ್ಲವೆಂದು ಪತ್ನಿಯು ಸಾಬೀತು ಪಡಿಸಿ ತೋರಿಸುವ ಅವಶ್ಯಕತೆಯಿತ್ತು. ಆದರೆ ಹೊಸ ಕಾನೂನಿನ ಪ್ರಕಾರ ಒಂದೊಮ್ಮೆ ವಿವಾಹ ಕಾಲದಲ್ಲಿ ಆಕೆಗೆ ಈ ಸಂಗತಿಯು ತಿಳಿದಿತ್ತೆಂದಾದರೂ ಸಹ ಆಕೆಯು ಈ ಕಾಯ್ದೆಯ ಮೇಲೆ ಒಂದು ವಿವಾಹ ವಿಚ್ಛೇದನೆಯ ಡಿಕ್ರಿಯನ್ನು ಪಡೆಯಬಹುದು.

ಬಿ) ಹಳೆಯ ಕಾನೂನಿನ ಪ್ರಕಾರ ಒಂದೊಮ್ಮೆ ಪತಿಯಿಂದ ಅದಕ್ಕಾಗಿ ಅರ್ಜಿ ಸಲ್ಲಿಸಲ್ಪಟ್ಟಿಲ್ಲವಾದರೂ ಸಹ, ಪತ್ನಿಯ ದಾವೆಯು ಒಂದು ವರ್ಷದ ಕಾಲಾವಧಿಗೆ ಹಿಂದೂಡಲ್ಪಡುತ್ತಿತ್ತು. ಈ ಹಿಂದೂಡಲ್ಪಟ್ಟ ಕಾಲಾವಧಿಯೊಳಗೆ ಪತಿಯು ತನ್ನ ನಪುಂಸಕತ್ವವನ್ನು ಸಾಬೀತುಪಡಿಸಿ ತೋರಿಸಲು ಒಂದು ಅವಕಾಶವನ್ನು ಪಡೆಯುತ್ತಿದ್ದನು. ಹೊಸ ಕಾನೂನಿನ ಪ್ರಕಾರ ಪತಿಯಿಂದ ಒಂದು ಆವೇದನೆಯು ಮಾಡಲ್ಪಟ್ಟರೆ ಮಾತ್ರ ಆ ದಾವೆಯು ಹಿಂದೂಡಲ್ಪಡುತ್ತದೆ. ಒಂದೊಮ್ಮೆ ಪತಿಯು ಇದಕ್ಕಾಗಿ ಒಂದು ಆವೇದನೆ ಮಾಡಿದ್ದರೆ ಆ ವಿವಾಹದ ವಿಘಟನೆಗಾಗಿ ತಕ್ಷಣದಲ್ಲಿ ಒಂದು ಡಿಕ್ರಿಯು ಮಂಜೂರು ಮಾಡಲ್ಪಡುತ್ತದೆ.

VI) ಪತಿಯ ಚಿತ್ತವಿಕಲತೆ, ಕುಷ್ಟರೋಗ ಅಥವಾ ಲೈಂಗಿಕ ರೋಗ

(Husband's insanity, leprosy or venereal Disease)

ಕ. ೨ (VI) ಇದರ ಪ್ರಕಾರ ಒಬ್ಬ ಪತ್ನಿಯು ತನ್ನ ಪತಿಯ ಚಿತ್ತವಿಕಲತೆ ಅಥವಾ ಕುಷ್ಟರೋಗ ಅಥವಾ ಲೈಂಗಿಕ ರೋಗದ ಕಾರಣಕ್ಕಾಗಿ ಒಂದು ವಿವಾಹ ವಿಚ್ಛೇದನೆಯನ್ನು ಪಡೆಯಲು ಹಕ್ಕುದಾರಳಾಗಿರುವಳು.

ಪತಿಯ ಚಿತ್ತವಿಕಲತೆಯು ಆ ದಾವೆಯನ್ನು ಹೂಡುವ ನಿಕಟಪೂರ್ವದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ವರ್ಷಗಳ ಕಾಲಾವಧಿಗೆ ಇದ್ದಿರಬೇಕು. ಈ

ಚಿತ್ತವಿಕಲತೆಯು ಚಿಕಿತ್ಸಾರ್ಹವೋ ಚಿಕಿತ್ಸಾರ್ಹವಲ್ಲ ಎಂಬ ಬಗ್ಗೆ ಈ ಅಧಿನಿಯಮವು ಏನನ್ನೂ ನಿರ್ದಿಷ್ಟವಾಗಿ ಹೇಳಿಲ್ಲ.

ಕುಷ್ಟರೋಗವು ಬಿಳಿ ಆಗಿರಬಹುದು ಅಥವಾ ಕಪ್ಪು ಅಥವಾ ಚರ್ಮವು ಉದುರಿ ಬೀಳುವಂತಹದ್ದಾಗಿರಬಹುದು. ಅದು ಶುಶ್ರೂಷಾರ್ಹವಾಗಿರಬಹುದು ಅಥವಾ ಶುಶ್ರೂಷಾರ್ಹವಾಗಿಲ್ಲದಿರಬಹುದು. ಈ ಅಧಿನಿಯಮವು ಕುಷ್ಟರೋಗದ ರೀತಿ ಅಥವಾ ಕಾಲಾವಧಿಯನ್ನು ನಿರ್ದಿಷ್ಟಗೊಳಿಸಿಲ್ಲ. ಆದುದರಿಂದ ನ್ಯಾಯಾಲಯಗಳು ಪರಿಣೇತೃಗಳಿಗೆ ನ್ಯಾಯವನ್ನು ಒದಗಿಸಿಕೊಡುವ ದೃಷ್ಟಿಯಿಂದ ಇದಕ್ಕೆ ಯಾವುದೇ ಅರ್ಥವನ್ನು ಕೊಡಬಹುದು.

ಲೈಂಗಿಕ ರೋಗವೆಂದರೆ ಲೈಂಗಿಕ ಅಂಗಗಳ ರೋಗ; ಈ ರೋಗವು ಒಂದು ಶಾಶ್ವತ ಸ್ವರೂಪದ್ದಾಗಿರಬೇಕು. ಅದರ ಕಾಲಾವಧಿಯು ಎಷ್ಟೇ ಇರಬಹುದು; ಅದಲ್ಲದೆ ಈ ರೋಗಗಳು ಪತಿಗೆ ಪತ್ನಿಯಿಂದಲೇ ಬಂದಿರುವದಾದರೂ ಸಹ ಈ ಕಾರಣದ ಮೇಲೆ ಆಕೆಯು ವಿವಾಹ ವಿಚ್ಛೇದನೆಯನ್ನು ಪಡೆಯಲು ಹಕ್ಕುದಾರಳಾಗಿರುವಳು.

VII) ತಾರುಣ್ಯದಲ್ಲಿ ಪತ್ನಿಯಿಂದ ಮಾಡಲಾಗುವ ಆಯ್ಕೆ (Option of Puberty by Wife)

ವಿವಾಹ ವಿಚ್ಛೇದನೆಗಾಗಿ ಪತ್ನಿಗೆ ಸಿಗುತ್ತಿರುವ ಈ ಕಾರಣವು ಪತಿಯ ಯಾವತ್ತೂ ದೋಷದ ಮೇಲೆ ಅವಲಂಬಿಸಿಲ್ಲ. ಇದೊಂದು ಸ್ವತಂತ್ರವಾದ ಉಪಬಂಧವಾಗಿದ್ದು ಇದರ ಪ್ರಕಾರ ಪತ್ನಿಯ ಇಚ್ಛೆಯ ಮೇರೆಗೆ ಒಂದು ವಿವಾಹವನ್ನು ಶೂನ್ಯಗೊಳಿಸಬಹುದು. ಕ. ೨ (VII) ಇದರ ಪ್ರಕಾರ ಒಂದೊಮ್ಮೆ ಒಬ್ಬ ಪತ್ನಿಯು ಅಲ್ಪವಯಿ ಇದ್ದಾಗ ಆಕೆಯ ತಂದೆ ಅಥವಾ ಸಂರಕ್ಷಕನು ಆಕೆಯ ವಿವಾಹ ಮಾಡಿಕೊಟ್ಟಿರುವನಾದರೆ, ಮತ್ತು ಆ ವಿವಾಹವು ಪೂರ್ಣಗೊಂಡಿಲ್ಲವೆಂದಾದರೆ ಆಕೆಯು ತಾರುಣ್ಯವನ್ನು ಮುಟ್ಟಿದಾಗ ತನ್ನ ವಿವಾಹವನ್ನು ವಿಘಟಿತಗೊಳಿಸುವದಕ್ಕಾಗಿ ಒಂದು ಡಿಕ್ರಿಯನ್ನು ಪಡೆಯಬಹುದು. ಈ ಹಕ್ಕು ಪತ್ನಿಗೆ ಹಳೆಯ ಕಾನೂನಿನ ಪ್ರಕಾರವು ಸಿಕ್ಕಿರುತ್ತದೆ. ಆದರೆ ಹೊಸ ಅಧಿನಿಯಮವು ಈ ವಿಷಯದ ಕಾನೂನಿನಲ್ಲಿ ಈ ಕೆಳಗಿನ ಬದಲಾವಣೆಗಳನ್ನು ಮಾಡಿದೆ :

ಎ) ಹಳೆಯ ಕಾನೂನಿನ ಪ್ರಕಾರ ಒಂದೊಮ್ಮೆ ಒಬ್ಬ ಅಲ್ಪವಯಿ ಹೆಣ್ಣಿನ ವಿವಾಹದ ಕರಾರು ಆಕೆಯ ತಂದೆಯಿಂದ ಅಥವಾ ತಂದೆಯ ತಂದೆಯಿಂದ ಮಾಡಲ್ಪಟ್ಟುದಾದರೆ ಆಕೆಗೆ ತಾರುಣ್ಯದಲ್ಲಿ ಆಯ್ಕೆಮಾಡುವ ಹಕ್ಕು ಸಿಗುತ್ತಿರಲಿಲ್ಲ. ಆದರೆ ಈಗ ಒಬ್ಬ ಪತ್ನಿಯು ಒಂದೊಮ್ಮೆ ತನ್ನ ವಿವಾಹವು ತಂದೆಯಿಂದ ಅಥವಾ ತಂದೆಯ ತಂದೆಯಿಂದ ಮಾಡಲ್ಪಟ್ಟುದಾದರೂ ಸಹ ತಾರುಣ್ಯದಲ್ಲಿ ಈ ಹಕ್ಕನ್ನು ಚಲಾಯಿಸಬಹುದು.

ಬಿ) ಎರಡನೆಯದಾಗಿ, ಹಳೆಯ ಕಾನೂನಿನ ಪ್ರಕಾರ ಒಬ್ಬ ಪತ್ನಿಯು ತನ್ನ ಈ ಹಕ್ಕನ್ನು ತಾರುಣ್ಯವನ್ನು ಮುಟ್ಟಿದ ತಕ್ಷಣದಲ್ಲಿ ಚಲಾಯಿಸಬೇಕಾಗುತ್ತಿತ್ತು. ಆದರೆ ಈಗ ಒಂದೊಮ್ಮೆ ಆಕೆಯ ವಿವಾಹವು ಪೂರ್ಣಗೊಂಡಿಲ್ಲವೆಂದಾದರೆ ಆಕೆಯು ೧೮ ವರ್ಷಗಳ ವಯಸ್ಸನ್ನು ಸೇರುವತನಕ ಈ ಹಕ್ಕನ್ನು ಚಲಾಯಿಸಬಹುದು.

VIII) ಗಂಡನಿಂದ ಕ್ರೌರ್ಯ (Cruelity by the Husband)

ಕ. ೨ (VIII) ಇದರ ಪ್ರಕಾರ ಒಂದೊಮ್ಮೆ ಗಂಡನು ಕ್ರೌರ್ಯದಿಂದ ತನ್ನ ಹೆಂಡತಿಯನ್ನು ನೋಡಿಕೊಳ್ಳುತ್ತಿರುವನೆಂದಾದರೆ ಆಕೆಯು ವಿವಾಹ ವಿಚ್ಛೇದನೆಗಾಗಿ ಒಂದು ದಾವೆ ಹೂಡಬಹುದು. ಈ ಅಧಿನಿಯಮಕ್ಕಿಂತ ಮೊದಲು ಪತಿಯಿಂದಾಗುವ ಕ್ರೌರ್ಯವೂ ವಿವಾಹ ವಿಚ್ಛೇದನೆಗಾಗಿ ಒಂದು ಪರ್ಯಾಪ್ತವಾದ ಕಾರಣವೆಂದು ಎಣಿಸಲಾಗುತ್ತಿತ್ತಾದರೂ ಸಹ ಅದರ ಪರಿಧಿಯು ಕೇವಲ ಶಾರೀರಿಕ ಹಿಂಸೆಗೆ ಸೀಮಿತವಾಗಿತ್ತು. ಈ ಅಧಿನಿಯಮವು ಈ ಪದದ ವ್ಯಾಪ್ತಿಯನ್ನು ವಿಶಾಲಗೊಳಿಸಿದೆ. ಹೊಸ ಕಾನೂನಿನ ಪ್ರಕಾರ ಕ್ರೌರ್ಯವು ಮಾನಸಿಕ ಹಿಂಸೆ ಮತ್ತು ಸರಿಯಾಗಿ ಕಾಣದಿರುವಿಕೆಯನ್ನೂ ಒಳಗೊಂಡಿರುತ್ತದೆ. ಪತಿಯಿಂದಾಗುವ ಕ್ರೌರ್ಯದ ಕೃತ್ಯಗಳ ಈ ಅಧಿನಿಯಮವು ಸ್ವಲ್ಪ ವಿವರಣೆ ಕೊಟ್ಟಿದೆ. ಆದರ ಸಾರಾಂಶವು ಈ ಕೆಳಗಿನಂತಿದೆ—

ಎ) ಪದೇ ಪದೇ ಪತ್ನಿಯ ಮೇಲೆ ಹಲ್ಲೆ ಮಾಡುವುದು ಅಥವಾ ತನ್ನ ಕ್ರೂರ ನಡತೆಯಿಂದಾಗಿ ಆಕೆಯ ಜೀವನವನ್ನು ಕಷ್ಟಮಯಗೊಳಿಸುವದು ಮತ್ತು ಇಲ್ಲಿ ಶಾರೀರಿಕ ಹಿಂಸೆಯನ್ನು ಕೊಡದಿದ್ದರೂ ಸಹ ಅದನ್ನು ಕ್ರೌರ್ಯವೆಂದು ಎಣಿಸಲಾಗುತ್ತದೆ. ಒಂದೊಮ್ಮೆ ಪತಿಯ ನಡತೆಯು ಪತ್ನಿಗೆ ಶಾರೀರಿಕವಾಗಿ ತೊಂದರೆಯನ್ನು ಕೊಡುತ್ತಿಲ್ಲವಾದರೂ ಸಹ ಪತ್ನಿಯ ಜೀವನವನ್ನು ದುಃಖಿತಗೊಳಿಸುವದನ್ನು ಆಕೆಯ ಪ್ರತಿಕ್ರೌರ್ಯವೆಂದು ಎಣಿಸಲಾಗುತ್ತದೆ. ಒಂದೊಮ್ಮೆ ಪತಿಯು ಪತ್ನಿಯೊಂದಿಗೆ ಮಾತನಾಡುವುದನ್ನು ಒಂದು ದೀರ್ಘಕಾಲಾವಧಿಯಲ್ಲಿ ನಿಲ್ಲಿಸಿದರೆ ಅಥವಾ ಯಾವತ್ತೂ ಸಮರ್ಥನೆಯಿಲ್ಲದೆ ಆಕೆಯಿಂದ ಬೇರೆಯಾಗಿ ಉಳಿದುಕೊಂಡರೆ ಇಲ್ಲಿ ಆಕೆಗೆ ಶಾರೀರಿಕವಾಗಿ ಹಿಂಸೆಯಾಗದಿದ್ದರೂ ಸಹ ಆಕೆಯ ಜೀವನದಲ್ಲಿ ಸಂತೋಷ ಮತ್ತು ಸುಖವು ನಷ್ಟವಾಗುತ್ತದೆ. ಇದೇ ರೀತಿಯಲ್ಲಿ ಒಂದೊಮ್ಮೆ ಪತಿಯು ಪದೇ ಪದೇ ಪತ್ನಿಗೆ ಬೈಯ್ಯುತ್ತಿದ್ದರೆ ಅಥವಾ ಆಕೆಯ ಚಾರಿತ್ರ್ಯದ ಬಗ್ಗೆ ಪದೇ ಪದೇ ಅವಮಾನಕಾರಕ ವಿಷಯಗಳನ್ನು ಹೇಳುತ್ತಿದ್ದರೆ ಅಲ್ಲ ಅಂತಹ ಪತಿಯ ನಡತೆಯು ಪತ್ನಿಗೆ ಮಾನಸಿಕ ಕ್ರೌರ್ಯವೆಂದು ಎಣಿಸಲ್ಪಡುತ್ತದೆ.

ಆದುದರಿಂದ ಪತ್ನಿಗೆ ಮಾನಸಿಕ ಕ್ಷತಿಯನ್ನು ಉಂಟುಮಾಡುವಂತಹ ಪತಿಯ ಯಾವುದೇ ರೀತಿಯ ನಡತೆಯು ಆಕೆಯ ಪ್ರತಿ ಒಂದು ಕ್ರೌರ್ಯವಾಗಿರುತ್ತದೆ. ಇಲ್ಲಿ ಗಮನಿಸಬೇಕಾಗಿರುವ ಇನ್ನೊಂದು ಸಂಗತಿಯು ಯಾವುದೆಂದರೆ ಒಂದು ಹಲೆ

ಅಥವಾ ಅವಮಾನಕಾರಕ ಭಾಷೆಯ ಉಪಯೋಗ ಇದನ್ನು ಕೇವಲ ಒಂದು ಬಾರಿ ಮಾಡಿದರೆ ಅದು ಪತಿಯಿಂದ ಪತ್ನಿಗೆ ಆಗಿರುವ ಕ್ರೌರ್ಯವೆಂದು ಎಣಿಸಲ್ಪಡುವುದಿಲ್ಲ. ಈ ಕೃತ್ಯವು ಪತಿಯಿಂದ ಪದೇ ಪದೇ ನಡೆಯುತ್ತಾ ಇದ್ದಿರಬೇಕು. ಆಗ ಮಾತ್ರ ಅವನಿಂದ ಕ್ರೌರ್ಯವಾಗಿದೆಯೆಂದು ಎಣಿಸಲಾಗುತ್ತದೆ.

ಬಿ) ಪತಿಯು ಕೆಟ್ಟ ಹೆಸರು ಪಡೆದಿರುವ ನಾರಿಯರೊಂದಿಗೆ ಕೂಡಿಕೊಂಡಿರುವನಾದರೆ ಅಥವಾ ಅವನು ಒಂದು ಅನೈತಿಕ ಜೀವನವನ್ನು ನಡೆಸುತ್ತಿರುವನಾದರೆ ಅದನ್ನು ಕ್ರೌರ್ಯವೆಂದು ಎಣಿಸಲಾಗುತ್ತದೆ. ಇಲ್ಲಿಯೂ ಸಹ ಪತಿಯು ಕೆಟ್ಟ ನಾರಿಯರೊಂದಿಗೆ ಒಂದು ಬಾರಿ ಕೂಡಿಕೊಂಡಿದ್ದಾನೆಂದಾದರೆ ಅದು ಈ ಖಂಡದ ಉಪಬಂಧವನ್ನು ಆಕರ್ಷಿಸುವುದಿಲ್ಲ. ಪತಿಯು ಬಾರಿ ಬಾರಿ ಕೆಟ್ಟ ಚಾರಿತ್ರ್ಯದ ಅನೇಕ ನಾರಿಯರೊಂದಿಗೆ ಬಾರಿ ಬಾರಿ ಕೂಡುವನೆಂದಾದರೆ ಅಲ್ಲಿ ಪತ್ನಿಯ ಪ್ರತಿ ಪತಿಯಿಂದ ಒಂದು ಕ್ರೌರ್ಯವಾಗಿದೆಯೆಂದು ಎಣಿಸಲಾಗುತ್ತದೆ.

ಸಿ) ಪತ್ನಿಯು ಒಂದು ಅನೈತಿಕ ಜೀವನವನ್ನು ನಡೆಸುವಂತೆ ಆಕೆಯನ್ನು ಬಲವತ್ತರಗೊಳಿಸುವ ಪ್ರಯತ್ನ. ಒಂದೊಮ್ಮೆ ಒಬ್ಬ ಪವಿತ್ರ ಹಾಗೂ ಧಾರ್ಮಿಕ ಸ್ವಭಾವದ ಒಬ್ಬ ನಾರಿಯು ಆಕೆಯ ಇಚ್ಛೆಯ ವಿರುದ್ಧವಾಗಿ ಒಂದು ಭ್ರಷ್ಟಾಚಾರದ ಮತ್ತು ಅನೈತಿಕ ಜೀವನವನ್ನು ನಡೆಸುವಂತೆ ಪತಿಯಿಂದ ಒತ್ತಾಯಿಸಲ್ಪಟ್ಟರೆ ಅದೊಂದು ಮಾನಸಿಕ ಹಿಂಸೆಯ ವಿಷಯವಾಗಿ ಎಣಿಸಲ್ಪಡುತ್ತದೆ. ಒಂದೊಮ್ಮೆ ಒಂದು ಅನೈತಿಕ ಜೀವನವನ್ನು ನಡೆಸುವಂತೆ ಪತಿಯು ಪತ್ನಿಯನ್ನು ಒತ್ತಾಯಿಸಿದರೆ ಅಲ್ಲಿ ಅವನ ನಡತೆಯು ತನ್ನ ಪತ್ನಿಯ ಪ್ರತಿ ಒಂದು ಮಾನಸಿಕ ಕ್ರೌರ್ಯದ ನಡತೆಯೆಂದು ಎಣಿಸಲ್ಪಡುತ್ತದೆ,

ಡಿ) ಒಂದೊಮ್ಮೆ ಪತಿಯು ಪತ್ನಿಯ ಸ್ವತ್ತನ್ನು ವಿಲೆ ಮಾಡುತ್ತಿರುವನಾದರೆ ಅಥವಾ ಆಕೆಗೆ ತನ್ನ ಸ್ವತ್ತಿನ ಮೇಲೆ ತನ್ನ ಹಕ್ಕನ್ನು ಚಲಾಯಿಸುವುದರಿಂದ ತಡೆಯುತ್ತಿರುವನೆಂದಾದರೆ ಅದು ಒಂದು ಕ್ರೌರ್ಯವೆಂದು ಎಣಿಸಲಾಗುತ್ತದೆ. ಪತಿಯು ಪತ್ನಿಯ ಸ್ವತ್ತಿನ ಒಂದು ಪ್ರಮುಖ ಭಾಗವನ್ನು ಮಾರಾಟಮಾಡಿದರೆ ಅಥವಾ ಅನ್ಯಥಾ ಹಸ್ತಾಂತರಿಸಿದರೆ ಆಗ ಆ ಪತಿಯ ನಡತೆಯನ್ನು ಒಂದು ಕ್ರೌರ್ಯವೆಂಬುದಾಗಿ ಎಣಿಸಲಾಗುತ್ತದೆ. ಒಂದೊಮ್ಮೆ ಪತಿಯು ಪತ್ನಿಯ ಒಂದು ಕ್ಷುಲ್ಲಕ ಸ್ವತ್ತನ್ನು ಮಾರಾಟಮಾಡಿದರೆ ಅಥವಾ ಅವಳ ಯಾವುದಾದರೊಂದು ಅವಶ್ಯಕತೆಗಾಗಿ ಅವಳ ಆಭರಣವನ್ನು ಮಾರಾಟಮಾಡಿದರೆ ಅದನ್ನು ಪತಿಯಿಂದಾಗಿರುವ ಒಂದು ಕ್ರೌರ್ಯವೆಂಬುದಾಗಿ ಎಣಿಸುವಂತಿಲ್ಲ.

ಇ) ಒಂದೊಮ್ಮೆ ಪತ್ನಿಯು ತನ್ನ ಧಾರ್ಮಿಕ ಆಚರಣೆಗಳನ್ನು ಮಾಡುವುದಕ್ಕೆ ಪತಿಯಿಂದ ಅಡೆತಡೆಗಳುಂಟಾದರೆ ಅಲ್ಲಿಯೂ ಸಹ ಅವನಿಂದ ಒಂದು ಕ್ರೌರ್ಯವಾಗಿದೆಯೆಂದು ಎಣಿಸಲಾಗುತ್ತದೆ. ಆದರೆ ಇಲ್ಲಿ ಅದೊಂದು ಕ್ರೌರ್ಯವೆಂದು ಎಣಿಸಲ್ಪಡಬೇಕಾದರೆ ಆ ನಿರ್ಬಂಧನೆಗಳು ಪತ್ನಿಯಲ್ಲಿರುವ ಮೂಲಭೂತ

ಧಾರ್ಮಿಕ ನಂಬಿಗೆಗಳ ಮೇಲೆ ಪರಿಣಾಮವು ಬೀರಬೇಕು. ಒಂದೊಮ್ಮೆ ಪತ್ನಿಯು ಅಂಥ ಶ್ರದ್ಧೆಯಿಂದ ಮಾಡುತ್ತಿರುವ ಧಾರ್ಮಿಕ ಕೆಲಸಗಳಿಗೆ ಪತಿಯು ಅಡ್ಡಿ ಮಾಡಿದರೆ ಅಲ್ಲಿ ಆವನಿಂದ ಒಂದು ಕ್ರೌರ್ಯವು ಮಾಡಲ್ಪಟ್ಟಿದೆಯೆಂದು ಎಣಿಸಲಾಗುವುದಿಲ್ಲ.

ಎಫ್) ಒಂದೊಮ್ಮೆ ಪತಿಗೆ ಒಬ್ಬಳಿಗಿಂತ ಹೆಚ್ಚು ಪತ್ನಿಯರಿದ್ದು ಆಕೆಯನ್ನು ಇತರ ಪತ್ನಿಯರಿಗೆ ಸಮಾನವಾಗಿ ನೋಡಿಕೊಳ್ಳುತ್ತಿಲ್ಲವೆಂದಾದರೆ ಅಲ್ಲಿ ಅದೊಂದು ಪತಿಯಿಂದಾಗುವ ಕ್ರೌರ್ಯವೆಂದು ಎಣಿಸಲ್ಪಡುತ್ತದೆ. ಉದಾಹರಣೆಗಾಗಿ, ಒಬ್ಬನಿಗೆ ಇಬ್ಬರು ಪತ್ನಿಯರಿದ್ದರೆ ಮತ್ತು ಅವರೊಳಗೆ ಅವನು ಒಬ್ಬಳನ್ನು ಪ್ರೀತಿಸಿ ಇನ್ನೊಬ್ಬಳನ್ನು ಹೊಡೆದೋಡಿಸುತ್ತಿರುವನೆಂದಾದರೆ ಆ ರೀತಿಯಾಗಿ ಹೊಡೆದೋಡಿಸಲ್ಪಟ್ಟ ಪತ್ನಿಯು ಕ್ರೌರ್ಯದ ಕಾರಣಕ್ಕಾಗಿ ಒಂದು ವಿವಾಹ ವಿಚ್ಛೇದನೆ ಕೊಡಲು ದಾವೆ ಹೂಡಬಹುದು. ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಕಾರಣದ ಮೇಲೆ ಅವನನ್ನು ಬಿಟ್ಟುಹೋದರೆ ಮತ್ತು ಅವಳನ್ನು ಪುನಃ ಕರೆತರುವುದಕ್ಕೋಸ್ಕರ ಪತಿಯಿಂದ ಯಾವುದೇ ರೀತಿಯ ಪ್ರಯತ್ನವು ನಡೆಯಲ್ಪಟ್ಟಿಲ್ಲವೆಂದಾದರೆ ಅಲ್ಲಿ ಅಸಮಾನತೆಯು ಸಿದ್ಧವಾಗುತ್ತದೆ ಮತ್ತು ಕ್ರೌರ್ಯದ ಕಾರಣದ ಮೇಲೆ ಪತ್ನಿಯು ವಿವಾಹ ವಿಚ್ಛೇದನೆಯ ಒಂದು ಡಿಕ್ರಿ ಪಡೆಯಲು ಹಕ್ಕುದಾರಳಾಗುವಳು.

ಜಿ) ಒಂದು ವಿವಾಹದ ವಿಘಟನೆಗಾಗಿ ಗಂಡನ ಕ್ರೌರ್ಯವು ಒಂದು ಕಾರಣವಾಗುವ ಬಗ್ಗೆ ಈ ಅಧಿನಿಯಮವು ಶಾರೀರಿಕ ಹಲ್ಲೆಯನ್ನಷ್ಟೇ ಅಲ್ಲ ಬದಲಾಗಿ ಪತ್ನಿಗೆ ಪತಿಯಿಂದ ಮಾಡಲಾಗುವ ಮಾನಸಿಕ ಹಿಂಸೆಯನ್ನೂ ಒಳಗೊಂಡಿರುತ್ತದೆ. ಮಾನಸಿಕ ಹಿಂಸೆಯೆಂದರೇನು ಎಂಬುದನ್ನು ಈ ಅಧಿನಿಯಮವು ಸ್ಪಷ್ಟವಾಗಿ ಪರಿಭಾಷಿಸಿದೆ. ಇದರ ಹೊರತಾಗಿ ನ್ಯಾಯಾಲಯವು ಇತರ ಸಂಗತಿಗಳನ್ನು ಮಾನಸಿಕ ಕ್ರೌರ್ಯವೆಂಬುದಾಗಿ ಎಣಿಸಬಹುದು.

IX) ಒಂದು ವಿವಾಹವನ್ನು ವಿಘಟಿತಗೊಳಿಸಲು ಮುಸ್ಲಿಮ್ ಕಾನೂನಿಂದ ವಿಧ್ಯುಕ್ತವೆಂದು ಎಣಿಸಲ್ಪಡುತ್ತಿರುವ ಇತರ ಯಾವತ್ತೂ ಕಾರಣ :

ಕ. ೨ (IX) ಇದೊಂದು ಅಭಿಶೇಷವಾದ ಖಂಡವಾಗಿತ್ತು. ಇದರ ಪ್ರಕಾರ ಒಬ್ಬ ಮುಸ್ಲಿಮ್ ಪತ್ನಿಯು ಮೇಲಿನ ಎಂಟು ಕಾರಣಗಳ ಹೊರತಾಗಿ ಮುಸ್ಲಿಮ್ ಕಾನೂನಿನಿಂದ ಮನ್ನಿಸಲ್ಪಟ್ಟ ಇತರ ಯಾವುದಾದರೊಂದು ಕಾರಣಕ್ಕಾಗಿ ತನ್ನ ವಿವಾಹವನ್ನು ವಿಘಟಿತಗೊಳಿಸಲು ಒಂದು ದಾವೆ ಹೂಡಬಹುದು. ಉದಾಹರಣೆಗಾಗಿ, ಹಳೆಯ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಪತ್ನಿಯ ಮೇಲೆ ಪತಿಯು ಜಾರತ್ವದ ಮಿಥ್ಯಾರೋಪ ಮಾಡಿದರೆ ಆಕೆಗೆ ಒಂದು ವಿವಾಹ ವಿಚ್ಛೇದನೆ ಪಡೆಯಲು ಅದೊಂದು ಪರ್ಯಾಪ್ತವಾದ ಕಾರಣವಾಗುತ್ತದೆ. ಈ ಖಂಡದ ಪ್ರಕಾರ

ಆಕೆಯು ಈಗಲೂ ಸಹ ಆ ಒಂದು ಕಾರಣವನ್ನು ಅಹ್ವಾನಿಸಿ ತನ್ನ ವಿವಾಹವನ್ನು ವಿಘಟಿತಗೊಳಿಸಬಹುದು.

ಪತ್ನಿಯ ವಿರುದ್ಧ ಜಾರತ್ವದ ಮಿಥ್ಯಾರೋಪ
(False change of adultery against the wife)

ಒಂದೊವ್ಮೆ ಒಬ್ಬ ಮುಸ್ಲಿಮ್ ಪತಿಯು ತನ್ನ ಪತ್ನಿಯ ಮೇಲೆ ಜಾರತ್ವದ ಆರೋಪ ಮಾಡಿದರೆ ಅಥವಾ ಆಕೆಯು ಅಪವಿತ್ರಳಾಗಿರುವಳೆಂದು ಹೇಳಿದರೆ ಅದನ್ನು ಸಾಬೀತುಪಡಿಸಿ ತೋರಿಸಬೇಕಾಗುತ್ತದೆ. ಒಂದೊವ್ಮೆ ಜಾರತ್ವದ ಆರೋಪವನ್ನು ಸಿದ್ಧಮಾಡಿ ತೋರಿಸುವಲ್ಲಿ ಪತಿಯು ವಿಫಲನಾದರೆ ಮತ್ತು ಅವನ ಈ ಆರೋಪವು ಸುಳ್ಳೆಂದು ಕಂಡುಬಂದರೆ ಆಗ ಪತ್ನಿಯು ಲಿಯಾಲ್ (lial) ಇದರ ಕಾರಣದ ಮೇರೆಗೆ ತನ್ನ ವಿವಾಹವನ್ನು ವಿಘಟಿತಗೊಳಿಸಲು ಹಕ್ಕುದಾರಳಾಗುವಳು. ಪತಿಯು ಜಾರತ್ವದ ಒಂದು ಸುಳ್ಳು ಆರೋಪಣೆಯನ್ನು ಮಾಡಿರುವನೆಂಬ ಮಾತ್ರಕ್ಕೆ ಒಂದು ವಿವಾಹವು ವಿಘಟಿತವಾಗುವುದಿಲ್ಲ; ಪತ್ನಿಯು ಇದಕ್ಕಾಗಿ ಒಂದು ದಾವೆ ಹೂಡಬೇಕಾಗುತ್ತದೆ. ಒಂದೊವ್ಮೆ ಪತ್ನಿಯು ಒಂದು ನ್ಯಾಯಾಲಯದಲ್ಲಿ ಇದರ ಬಗ್ಗೆ ದಾವೆ ಹೂಡಿದರೆ ಪತಿಯು ತನ್ನ ಆರೋಪಣೆಗಳನ್ನು ಪ್ರಮಾಣಮಾಡಿ ಪುಷ್ಟೀಕರಿಸಬೇಕಾಗುತ್ತದೆ. ಈ ಹಂತದಲ್ಲಿ ಪತಿಯು ಮುಂದೆ ಎರಡು ಪರ್ಯಾಯಗಳಿರುತ್ತವೆ. ಒಂದೇ ಅವನು ತನ್ನ ಆರೋಪಣೆಗಳನ್ನು ಹಿಂತೆಗೆದುಕೊಳ್ಳಬಹುದು ಅಥವಾ ತನ್ನ ಆರೋಪಣೆಗಳು ಸತ್ಯವೆಂದು ಅವನು ಪ್ರಮಾಣಮಾಡಿ ಪುಷ್ಟೀಕರಿಸಬಹುದು. ಒಂದೊವ್ಮೆ ಆ ಪತಿಯು ತನ್ನ ಆರೋಪಣೆಗಳನ್ನು ಹಿಂತೆಗೆದುಕೊಂಡರೆ ಪತ್ನಿಯು ವಿವಾಹ ವಿಚ್ಛೇದನೆ ಪಡೆಯುವಂತಿಲ್ಲ. ಒಂದು ವಿಚಾರಣೆಯು ಕೊನೆಗೊಳ್ಳುವುದಕ್ಕಿಂತ ಮೊದಲು ಯಾವುದೇ ಹಂತದಲ್ಲಿ ಪತಿಯು ತನ್ನ ಆರೋಪಣೆಗಳನ್ನು ಹಿಂತೆಗೆದುಕೊಳ್ಳಬಹುದು. ಒಂದೊವ್ಮೆ ಪತಿಯು ತನ್ನ ಆರೋಪಣೆಗಳನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದಾದರೆ ಅವನು ಅವುಗಳನ್ನು ನ್ಯಾಯಾಲಯದಲ್ಲಿ ಸಿದ್ಧ ಮಾಡಿ ತೋರಿಸಬೇಕಾಗುತ್ತದೆ. ಒಂದೊವ್ಮೆ ತನ್ನ ಪತ್ನಿಯು ನಿಜವಾಗಿ ಜಾರತ್ವದ ಅಪರಾಧ ಮಾಡಿರುವಳೆಂಬುದನ್ನು ಪತಿಯು ನ್ಯಾಯಾಲಯದಲ್ಲಿ ಸಿದ್ಧಮಾಡಿ ತೋರಿಸಿದರೆ ವಿವಾಹ ವಿಚ್ಛೇದನೆಗಾಗಿ ಪತ್ನಿಯ ದಾವೆಯು ವಿಫಲಗೊಳ್ಳುತ್ತದೆ. ಆದರೆ ಒಂದೊವ್ಮೆ ಪತಿಯು ತನ್ನ ಆರೋಪವನ್ನು ಸಾಬೀತುಪಡಿಸುವಲ್ಲಿ ವಿಫಲನಾದರೆ ನ್ಯಾಯಾಲಯವು ವಿವಾಹ ವಿಘಟನೆಗಾಗಿ ಒಂದು ಡಿಕ್ರಿಯನ್ನು ಮಂಜೂರು ಮಾಡುತ್ತದೆ.

ಒಂದು ಜಾರತ್ವದ ಮಿಥ್ಯಾರೋಪಣೆಯು ಒಂದು ವಿವಾಹ ವಿಘಟನೆಗೆ ಕಾರಣವಾಗಬೇಕಾದರೆ ಅಲ್ಲಿ ಆ ಮಿಥ್ಯಾರೋಪಣೆಯು ಸ್ವೇಚ್ಛೆಯಿಂದ ಹಾಗೂ ಅಕ್ರಮಕಾರತ್ವದಿಂದ ಮಾಡಲ್ಪಟ್ಟ ಆರೋಪಣೆಯಾಗಿರಬೇಕು. ಒಂದೊವ್ಮೆ ಪತ್ನಿಯು ತನ್ನ ನಡತೆಯಿಂದ ಪತಿಯ ಮನಸ್ಸಿಗೆ ನೋವನ್ನುಂಟು ಮಾಡುತ್ತಿರುವಳೆಂದಾದರೆ,

ಮತ್ತು ಪತಿಯು ಇದಕ್ಕೆ ಪ್ರತಿಯಾಗಿ ತನ್ನ ಪತ್ನಿಯ ಮೇಲೆ ಜಾರತ್ವದ ಆರೋಪಣೆ ಮಾಡಿದರೆ ಅಲ್ಲಿ ಪತ್ನಿಯ ಕೆಟ್ಟ ನಡತೆಯ ಸಂಬಂಧದಲ್ಲಿ ಪತಿಯಿಂದ ಮಾಡಲ್ಪಟ್ಟ ಈ ಆರೋಪಣೆಯನ್ನು ಒಂದು ವಿವಾಹ ವಿಚ್ಛೇದನೆಯ ಕಾರಣವನ್ನಾಗಿ ಮಾಡುವಂತಿಲ್ಲ.

ವಿವಾಹದ ಮೇಲೆ ಧರ್ಮ ಪರಿತ್ಯಾಗದ ಪರಿಣಾಮಗಳು
(Effects of Apostasy on marriage)

ಧರ್ಮತ್ಯಾಗವೆಂದರೆ ತನ್ನ ಧರ್ಮವನ್ನು ಪರಿತ್ಯಜನೆ ಮಾಡುವುದು. ಹಳೆಯ ಕಾನೂನಿನ ಮೇರೆಗೆ ವಿವಾಹದ ಪಕ್ಷಗಳಲ್ಲಿ ಯಾವುದಾದರೊಂದು ಪಕ್ಷವು ಇಸ್ಲಾಮನ್ನು ಪರಿತ್ಯಜನೆಮಾಡಿದರೆ ಆ ವಿವಾಹವು ಪೂರ್ಣವಾಗಿ ಮತ್ತು ತಕ್ಷಣದಲ್ಲಿ ವಿಘಟಿತಗೊಳ್ಳುತ್ತದೆ. ಆದರೆ ಮುಸ್ಲಿಮ್ ವಿವಾಹದ ವಿಘಟನೆಯ ಅಧಿನಿಯಮ, ೧೯೩೯ ಇದು ಜಾರಿಗೆ ಬಂದ ಬಳಿಕ ಈ ವಿಷಯದ ಬಗ್ಗೆ ಈ ಕಾನೂನು ಈ ಅಧಿನಿಯಮದ ಕ. ೪ ರಿಂದ ಮಾರ್ಪಾಟುಗೊಳಿಸಲ್ಪಟ್ಟಿದೆ. ಪತಿಯಿಂದ ಅಥವಾ ಪತ್ನಿಯಿಂದ ಮಾಡಲಾಗುವ ಧರ್ಮಪರಿತ್ಯಾಗದ ಪರಿಣಾಮಕ್ಕೆ ಸಂಬಂಧಪಟ್ಟ ಕಾನೂನು ಈ ಕೆಳಗಿನಂತಿದೆ :

೧) ಒಂದೊಮ್ಮೆ ಒಬ್ಬ ಮುಸ್ಲಿಮ್ ಪತಿಯು ಇಸ್ಲಾಮ್ ಧರ್ಮವನ್ನು ಪರಿತ್ಯಜನೆಮಾಡಿದರೆ ಆ ವಿವಾಹವು ತಕ್ಷಣದಲ್ಲಿ ವಿಘಟಿತಗೊಳ್ಳುತ್ತದೆ. ಮುಸ್ಲಿಂ ವಿವಾಹದ ವಿಘಟನೆಯ ಅಧಿನಿಯಮ, ೧೯೩೯ ಇದರ ಕ. ೪ ಒಬ್ಬ ಪತಿಯಿಂದಾಗುವ ಧರ್ಮತ್ಯಾಗಕ್ಕೆ ಅನ್ವಯವಾಗುವುದಿಲ್ಲ. ಆದುದರಿಂದ ಪತಿಯಿಂದ ಮಾಡಲ್ಪಡುವ ಧರ್ಮ ತ್ಯಾಗವು ಈಗಲೂ ಹಳೆಯ ಕಾನೂನಿನಿಂದ ಶಾಸಿತವಾಗಿರುತ್ತದೆ ಮತ್ತು ಒಬ್ಬ ಪತಿಯು ಇಸ್ಲಾಮ್ ಧರ್ಮವನ್ನು ಪರಿತ್ಯಾಗ ಮಾಡಿದರೆ ಅದು ತಕ್ಷಣ ಅವನ ವಿವಾಹದ ವಿಘಟನೆಯಲ್ಲಿ ಪರಿಣಾಮಿತವಾಗುತ್ತದೆ.

ಒಂದೊಮ್ಮೆ ಒಬ್ಬ ಮುಸ್ಲಿಮ್ ಪತಿಯು ಇತರ ಯಾವುದಾದರೊಂದು ಧರ್ಮಕ್ಕೆ ಮತಾಂತರಗೊಂಡರೆ ಅವನ ವಿವಾಹವು ತಕ್ಷಣ ವಿಘಟಿತಗೊಳ್ಳುತ್ತದೆ ಮತ್ತು ಆಕೆಯು ಆ ಪತಿಯ ಒಬ್ಬ ಮುಸ್ಲಿಮ್ ಪತ್ನಿಯಾಗಿ ಉಳಿಯುವುದಿಲ್ಲ. ಆದುದರಿಂದ ಆ ಪತ್ನಿಯು ಮುಸ್ಲಿಮ್ ಕಾನೂನಿನಿಂದ ಶಾಸಿತಳಾಗುವುದಿಲ್ಲ ಮತ್ತು ತನ್ನ ಇದ್ದತ್ ಕಾಲಾವಧಿಗೆ ಕಾಯದೇನೆ ಆಕೆಯು ತಕ್ಷಣ ಇನ್ನೊಬ್ಬ ವ್ಯಕ್ತಿಯನ್ನು ವಿವಾಹವಾಗಬಹುದು.

೩) ಒಂದೊಮ್ಮೆ ಒಬ್ಬ ಮುಸ್ಲಿಮ್ ಪತ್ನಿಯು ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿದರೆ ಆ ವಿವಾಹವು ವಿಘಟಿತಗೊಳ್ಳುವುದಿಲ್ಲ. ಒಬ್ಬ ಮುಸ್ಲಿಮ್ ಪತ್ನಿಯಿಂದಾದ ಧರ್ಮ ಪರಿತ್ಯಜನೆಯು ಒಂದು ವಿವಾಹದ ತಕ್ಷಣಿಕ ವಿಘಟನೆಯಾಗಿ ಕಾರ್ಯಾಚರಣೆಗೆ ಬರುವುದಿಲ್ಲ. ಅದಲ್ಲದೆ, ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿದ ಬಳಿಕವೂ ಸಹ ಒಂದೊಮ್ಮೆ ಆ ಪತ್ನಿಯು ಇಚ್ಛಿಸಿದರೆ ಆಕೆಯು ಈ ಅಧಿ

ನಿಯಮದ ಕ. ೨ರಲ್ಲಿ ನಿರ್ದಿಷ್ಟಗೊಳಿಸಲಾದ ಕಾರಣಗಳಲ್ಲಿ ಯಾವುದಾದರೊಂದು ಕಾರಣದ ಮೇಲೆ ಆ ವಿವಾಹವನ್ನು ವಿಘಟಿತಗೊಳಿಸಲು ಒಂದು ಡಿಕ್ರಿ ಪಡೆಯಬಹುದು.

೩) ಮೇಲಿನ ಪರಿಚ್ಛೇದದಲ್ಲಿ ಹೇಳಲಾದ ಉಪಬಂಧವು ಅನ್ವಯವಾಗಬೇಕಾದರೆ ಆ ಪತ್ನಿಯು ಜನ್ಮತಃ ಒಬ್ಬ ಮುಸಲ್ಮಾನಳಾಗಿರಬೇಕು. ಒಂದೊಮ್ಮೆ ಆ ಪತಿಯು ವಿವಾಹ ಕಾಲದಲ್ಲಿ ಮತಾಂತರದಿಂದ ಒಬ್ಬ ಮುಸಲ್ಮಾನಳಾಗಿದ್ದರೆ, ಮತ್ತು ಅಂತಹ ಮತಾಂತರಗೊಂಡ ಒಬ್ಬ ಮುಸ್ಲಿಮ್ ಪತ್ನಿಯು ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿ ತನ್ನ ಪೂರ್ವಧರ್ಮವನ್ನು ಮರಳಿ ಸ್ವೀಕರಿಸಿದರೆ ಅಲ್ಲಿ ಆ ವಿವಾಹವು ತಕ್ಷಣ ವಿಘಟಿತವಾಗುತ್ತದೆ. ಈ ರೀತಿಯಾಗಿ ಒಬ್ಬ ಮತಾಂತರಗೊಂಡ ಮುಸ್ಲಿಮ್ ಪತ್ನಿಯು ತನ್ನ ಧರ್ಮವನ್ನು ಪರಿತ್ಯಜನೆ ಮಾಡಿದರೆ ಈ ಧರ್ಮ ಪರಿತ್ಯಜನೆಯು ತಕ್ಷಣ ಆಕೆಯ ವಿವಾಹ ವಿಘಟನೆಯಲ್ಲಿ ಪರಿಣಾಮಿತವಾಗುತ್ತದೆ.

ವಿವಾಹ ವಿಚ್ಛೇದನೆಯ ಕಾನೂನೀ ಪರಿಣಾಮಗಳು
(Legal Effect of Divorce)

ಒಂದು ವಿವಾಹ ವಿಚ್ಛೇದನೆಯು ಯಾವುದೇ ರೀತಿಯಲ್ಲಿ ನಡೆದಿರಲಿ ಅದು ಪತಿ-ಪತ್ನಿಯರೊಳಗಿನ ವೈವಾಹಿಕ ಸಂಬಂಧವನ್ನು ಕಡಿಯುತ್ತದೆ. ಪ್ರತಿಯೊಂದು ರೀತಿಯ ವಿವಾಹ ವಿಚ್ಛೇದನೆಯು ಪೂರ್ಣಗೊಂಡ ಬಳಿಕ ಆ ವಿವಾಹವು ವಿಘಟಿತಗೊಳ್ಳುತ್ತದೆ ಮತ್ತು ಆ ಪಕ್ಷಗಳು ಪತಿ ಮತ್ತು ಪತ್ನಿಯರಾಗಿರುವುದು ನಿಂತುಬಿಡುತ್ತದೆ. ಒಂದು ವಿವಾಹ ವಿಚ್ಛೇದನೆಯ ಕಾನೂನೀ ಪರಿಣಾಮಗಳು ಈ ಕೆಳಗಿನಂತಿವೆ.

1) ಸಹವಾಸವು ಕಾನೂನು ಬಾಹಿರವಾಗಿರುತ್ತದೆ (Cohabitation becomes illegal)

ಒಂದು ವಿವಾಹ ವಿಚ್ಛೇದನೆಯು ಮುಗಿದ ಬಳಿಕ ಆ ಪತಿ-ಪತ್ನಿಯರೊಳಗಿನ ಸಹವಾಸವು ಕಾನೂನು ಬಾಹಿರವಾಗುತ್ತದೆ.

2) ಇದ್ದತ್ (Iddat)

ವಿವಾಹ ವಿಚ್ಛೇದನೆಯಾದ ಬಳಿಕ ಪತ್ನಿಯು ಮೂರು ಚಂದ್ರಮಾನ ಮಾಸಗಳ ಅವಧಿಗೆ, ಅಥವಾ ಒಂದೊಮ್ಮೆ ಆಕೆಯು ಗರ್ಭಿಣಿಯಾಗಿದ್ದರೆ ಆ ಮಗುವಿನ ಹೆರಿಗೆಯಾಗುವ ತನಕ ಆಕೆಯು ಇದ್ದತ್ ಆಚರಿಸಬೇಕಾಗುತ್ತದೆ. ಆದರೆ, ಆ ವಿವಾಹವು ಪೂರ್ಣಗೊಳ್ಳುವುದಕ್ಕಿಂತ ಮೊದಲು ಒಂದೊಮ್ಮೆ ವಿವಾಹ ವಿಚ್ಛೇದನೆಯಾದರೆ ಅಲ್ಲಿ ಪತ್ನಿಯು ಇದ್ದತ್ ಆಚರಿಸಬೇಕಾಗಿಲ್ಲ.

3) ಇದ್ದತ್ ಕಾಲದಲ್ಲಿ ಜೀವನಾಂಶ (Maintenance during Iddat)

ಇದ್ದತ್ ಕಾಲಾವಧಿಯಲ್ಲಿ ವಿವಾಹ ವಿಚ್ಛೇದಿತ ಪತ್ನಿಯು ತನ್ನ ಹಳೆಯ ಗಂಡನಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು.

4) ಇನ್ನೊಂದು ವಿವಾಹದ ಕರಾರು ಮಾಡುವ ಹಕ್ಕು
(Right to Contract another marriage)

ವಿವಾಹ ವಿಚ್ಛೇದನೆಯಾದ ಬಳಿಕ ಎರಡೂ ಪಕ್ಷಗಳು ಬೇರೆ ವ್ಯಕ್ತಿಗಳೊಂದಿಗೆ ವಿವಾಹದ ಕರಾರು ಮಾಡಿಕೊಳ್ಳಲು ಸ್ವತಂತ್ರರಾಗಿರುವರು. ಪತಿಯು ವಿವಾಹ ವಿಚ್ಛೇದನೆಯ ಬಳಿಕ ತಕ್ಷಣ ಇನ್ನೊಬ್ಬ ನಾರಿಯನ್ನು ವಿವಾಹವಾಗಬಹುದು. ಆದರೆ ಒಬ್ಬ ವಿವಾಹ ವಿಚ್ಛೇದಿತ ಪತ್ನಿಯು ಇದ್ದತ್ ಕಾಲಾವಧಿಯು ಮುಗಿಯುವುದಕ್ಕಿಂತ ಮೊದಲು ಇನ್ನೊಬ್ಬ ಪತಿಯನ್ನು ವಿವಾಹವಾಗುವಂತಿಲ್ಲ. ಒಂದೊಮ್ಮೆ ಒಂದು ವಿವಾಹವು ಪೂರ್ಣಗೊಳ್ಳುವುದಕ್ಕಿಂತ ಮೊದಲೇ ಅವರ ವಿವಾಹವು ವಿಘಟಿತಗೊಂಡಿದೆಯಾದರೆ ಅಲ್ಲಿ ಪತ್ನಿಯು ವಿವಾಹ ವಿಚ್ಛೇದನೆಯಾದ ತಕ್ಷಣ ಇನ್ನೊಂದು ವಿವಾಹದ ಕರಾರು ಮಾಡಿಕೊಳ್ಳಲು ಸ್ವತಂತ್ರಳಾಗಿರುವಳು.

ಆದರೆ ಒಂದೊಮ್ಮೆ ಒಬ್ಬ ಪತಿಗೆ ಒಂದು ವಿವಾಹ ವಿಚ್ಛೇದನೆಯ ಕಾಲದಲ್ಲಿ ನಾಲ್ವರು ಪತ್ನಿಯರಿದ್ದು ಅವರೊಳಗೆ ಯಾವಳಾದರೊಬ್ಬಳನ್ನು ಆತನು ವಿವಾಹ ವಿಚ್ಛೇದಿತಗೊಳಿಸಿರುವನಾದರೆ ಅಲ್ಲಿ ಆ ವಿಚ್ಛೇದಿತ ಪತ್ನಿಯ ಇದ್ದತ್ ಕಾಲಾವಧಿಯಲ್ಲಿ ಅವನು ಇನ್ನೊಂದು ವಿವಾಹದ ಕರಾರು ಮಾಡುವಂತಿಲ್ಲ.

5) ಕನ್ಯಾಶುಲ್ಕ (Dower)

ಅಸಂದೇಯ ಕನ್ಯಾಶುಲ್ಕವು ವಿಚ್ಛೇದಿತ ಪತ್ನಿಗೆ ತಕ್ಷಣ ಸಂದೇಯವಾಗುತ್ತದೆ. ಒಂದು ಕನ್ಯಾಶುಲ್ಕವು ತಕ್ಷಣಿಕವಾಗಿರಬಹುದು ಅಥವಾ ವಿಳಂಬಿತ, ಆದರೆ ಒಂದು ವಿವಾಹವು ವಿಚ್ಛೇದಿತವಾದರೆ ಪತ್ನಿಯು ತನ್ನ ಕನ್ಯಾಶುಲ್ಕವನ್ನು ತಕ್ಷಣದಲ್ಲಿ ಪಡೆಯಲು ಹಕ್ಕುದಾರಳಾಗುವಳು. ಒಂದೊಮ್ಮೆ ಆ ವಿವಾಹವು ಪೂರ್ತಿಗೊಂಡಿದ್ದರೆ ಅಲ್ಲಿ ಪತ್ನಿಯು ನಿರ್ದಿಷ್ಟಗೊಳಿಸಲಾದ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು; ಒಂದೊಮ್ಮೆ ಆ ವಿವಾಹವು ಪೂರ್ತಿಗೊಳ್ಳುವುದಕ್ಕಿಂತ ಮೊದಲು ಆ ವಿವಾಹವು ವಿಚ್ಛೇದಿತವಾದರೆ ಅಲ್ಲಿ ಆಕೆಯು ನಿರ್ದಿಷ್ಟ ಕನ್ಯಾಶುಲ್ಕದ ಕೇವಲ ಅರ್ಧವನ್ನು ಮಾತ್ರ ಪಡೆಯಲು ಹಕ್ಕುದಾರಳಾಗುವಳು. ಒಂದೊಮ್ಮೆ ಕನ್ಯಾಶುಲ್ಕವು ನಿರ್ದಿಷ್ಟಗೊಳಿಸಲ್ಪಟ್ಟಿಲ್ಲವೆಂದಾದರೆ ಆಕೆಯು ಸರಿಯಾದ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು. ಆದರೆ ಒಂದೊಮ್ಮೆ ಆ ವಿವಾಹವು ಪೂರ್ತಿಗೊಂಡಿಲ್ಲವೆಂದಾದರೆ ಆಕೆಯು ಕೇವಲ ಕೆಲವು ಉಡುಗೊರೆಗಳನ್ನಷ್ಟೇ ಪಡೆಯಲು ಹಕ್ಕುದಾರಳಾಗಿರುವಳು.

ಮುಸ್ಲಿಮ್ ವಿವಾಹಗಳ ವಿಘಟನೆಯ ಅಧಿನಿಯಮ, ೧೯೩೯ ಇದರ ಕ. ೫ರ ಪ್ರಕಾರ ಒಬ್ಬ ವಿವಾಹಿತ ನಾರಿಯ ಕನ್ಯಾಶುಲ್ಕದ ಹಕ್ಕಿನ ಮೇಲೆ ಈ ಅಧಿನಿಯಮವು ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ. ಒಂದೊಮ್ಮೆ ಒಬ್ಬ ಪತ್ನಿಯು ಈ ಅಧಿನಿಯಮದ ಕ. ೨ ರಲ್ಲಿ ನಿರ್ದಿಷ್ಟಗೊಳಿಸಲಾದ ಕಾರಣಗಳಲ್ಲಿ ಯಾವುದಾದ

ರೊಂದು ಕಾರಣದ ಮೇಲೆ ಒಂದು ನ್ಯಾಯಿಕ ವಿವಾಹ ವಿಚ್ಛೇದನೆ ಪಡೆಯ ಬಯಸಿದರೆ ಆಕೆಯು ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ತನ್ನ ಕನ್ಯಾಶುಲ್ಕವನ್ನು ಪಡೆಯಲು ಹಕ್ಕುದಾರಳಾಗುವಳು.

6) ವಿವಾಹ ವಿಚ್ಛೇದಿತ ದಂಪತಿಗಳೊಳಗೆ ಪುನರ್‌ವಿವಾಹ (Remarriage between the Divorced Couple)

ಒಂದು ವಿವಾಹವು ವಿಚ್ಛೇದಿತವಾದ ಬಳಿಕ ಅಲ್ಲಿ ಆ ಪಕ್ಷಗಳು ಪತಿ ಪತ್ನಿಯರಾಗಿರುವದು ನಿಂತು ಬಿಡುತ್ತದೆ. ಆದರೆ ಒಂದೊಮ್ಮೆ ಅವರು ಪುನಃ ಪತಿ ಪತ್ನಿಯರಾಗಿ ಬಾಳ್ವೆ ನಡೆಸಲು ಬಯಸಿದರೆ ಅವರು ಈ ಕೆಳಗಿನ ನಿಯಮಗಳ ಪ್ರಕಾರ ಪುನರ್‌ವಿವಾಹಿತರಾಗಬಹುದು;

I) ವಿಚ್ಛೇದಿತರಾದ ದಂಪತಿಗಳೊಳಗಿನ ಪುನರ್‌ವಿವಾಹವು ಒಂದು ವಿವಾಹದ ಹೊಸ ಕರಾರಾಗಿರುತ್ತದೆ ಮತ್ತು ಒಂದು ವಿವಾಹದಲ್ಲಿ ಬೇಕಾಗಿರುವ ಕನ್ಯಾಶುಲ್ಕ ಮತ್ತು ಇತರ ಔಪಚಾರಿಕತೆಗಳ ಅವಶ್ಯಕತೆಯಿರುತ್ತದೆ. ಇಂತಹ ವಿವಾಹವು ಪತ್ನಿಯ ಇದ್ದತ್ ಅವಧಿಯು ಮುಗಿದ ಬಳಿಕ ಮಾತ್ರ ಮಾಡಲ್ಪಡಬಹುದು. ಒಂದೊಮ್ಮೆ ವಿಚ್ಛೇದಿತ ದಂಪತಿಗಳು ಮತ್ತೊಮ್ಮೆ ಹೊಸ ವಿವಾಹದ ಕರಾರು ಮಾಡದೆ ಸಹವಾಸ ಮಾಡತೊಡಗಿದರೆ ಅವರ ಸಯುಕ್ತಿಯು ಕಾನೂನುಬಾಹಿರವೆಂದು ಎಣಿಸಲ್ಪಡುತ್ತದೆ.

II) ಒಂದೊಮ್ಮೆ ಯಾವುದಾದರೊಂದು ರೀತಿಯ ವಿವಾಹ ವಿಚ್ಛೇದನೆಯು ಪೂರ್ಣಗೊಂಡರೆ ಅಥವಾ ಒಂದು ವಿವಾಹ ವಿಚ್ಛೇದನೆಯು ತಲಾಕಿನ ಮೂರು ಉಚ್ಚರಣೆಗಳಿಂದಾಗಿ ಪೂರ್ಣಗೊಂಡಿದ್ದರೆ ಅಲ್ಲಿ ವಿಚ್ಛೇದಿತ ದಂಪತಿಗಳು ಈ ಕೆಳಗಿನ ಪ್ರಕ್ರಿಯೆಯನ್ನು ಅನುಸರಿಸದೆ ಪುನರ್‌ವಿವಾಹಿತರಾಗುವಂತಿಲ್ಲ.

III) ಆ ವಿಚ್ಛೇದಿತ ಪತ್ನಿಯು ಇನ್ನೊಬ್ಬ ವ್ಯಕ್ತಿಯನ್ನು ವಿವಾಹಿತಳಾಗಬೇಕು. ಆ ಇನ್ನೊಬ್ಬ ವ್ಯಕ್ತಿಯೊಂದಿಗಿನ ಆ ವಿವಾಹವು ಪೂರ್ಣಗೊಂಡಿರಬೇಕು. ಆ ವಿವಾಹವು ಆ ಪತಿಯಿಂದ ಕೊಡಲ್ಪಟ್ಟಿರುವ ವಿವಾಹ ವಿಚ್ಛೇದನೆಯಿಂದ ಅಥವಾ ಪತಿಯ ಮರಣದಿಂದ ವಿಘಟಿತವಾಗಿರಬೇಕು. ಆ ಬಳಿಕ ಪತ್ನಿಯು ಅವಶ್ಯಕವಾದ ಇದ್ದತ್ ಆಚರಿಸಬೇಕು. ಈ ಇದ್ದತ್ ಕಾಲಾವಧಿಯು ಮುಗಿದ ಬಳಿಕ ಆ ಪತ್ನಿಯು ಕಾನೂನು ಬದ್ಧವಾಗಿ ತನ್ನ ಹಳೆಯ ಪತಿಯನ್ನು ವಿವಾಹಿತಳಾಗಬಹುದು.

7) ವಾರಸಿನ ಪರಸ್ಪರ ಹಕ್ಕುಗಳು ನಿಂತುಬಿಡುತ್ತವೆ (Mutual Rights of Inheritance Cease)

ಒಂದು ವಿವಾಹ ವಿಚ್ಛೇದನೆಯು ಪೂರ್ಣಗೊಂಡ ಬಳಿಕ ಪತಿ-ಪತ್ನಿಯರು ತಮ್ಮ ಪರಸ್ಪರ ವಾರಸಿನ ಹಕ್ಕನ್ನು ಕಳೆದುಕೊಳ್ಳುವರು. ಉದಾಹರಣೆಗಾಗಿ, ಒಂದು ವಿವಾಹ ವಿಚ್ಛೇದನೆಯಾದ ಬಳಿಕ ಒಂದೊಮ್ಮೆ ಪತಿಯು ಮೃತನಾದರೆ ಅಲ್ಲಿ

ಅವನ ಹಳೆಯ ಪತಿಯು ಅವನ ಸ್ವತ್ತನ್ನು ವಾರಸು ಪಡೆಯುವಂತಿಲ್ಲ. ಇದೇ ರೀತಿಯಲ್ಲಿ ಒಂದೊಮ್ಮೆ ಪತ್ನಿಯು ಮೃತಳಾದರೆ ಅಲ್ಲಿ ಪತಿಯು ಆಕೆಯ ಸ್ವತ್ತಿನ ವಾರಸು ಪಡೆಯುವಂತಿಲ್ಲ. ಆದರೆ ಒಂದೊಮ್ಮೆ ಪತಿಯು ಮರಣ ಶಯ್ಯೆಯಲ್ಲಿದ್ದಾಗ ಅವನಿಗೆ ವಿವಾಹ ವಿಚ್ಛೇದನೆಯು ಕೊಡಲ್ಪಟ್ಟಿದ್ದರೆ ಈ ನಿಯಮವು ಅಲ್ಲಿ ಅನ್ವಯವಾಗುವುದಿಲ್ಲ.

ಮರಣ ಕಾಯಿಲೆಯ ಕಾಲದಲ್ಲಿ ವಿವಾಹ ವಿಚ್ಛೇದನೆ
(Marz-ul-Maut)

ಮರಣ ಕಾಯಿಲೆಯೆಂದರೆ ಒಬ್ಬ ವ್ಯಕ್ತಿಯು ತನ್ನ ಕಾಯಿಲೆಯ ಕಾಲದಲ್ಲಿ ತಾನು ಈ ಕಾಯಿಲೆಯಿಂದ ಸಾಯಲಿರುವೆನು ಎಂಬುದಾಗಿ ಪೂರ್ವಭಾವಿಯಾಗಿಯೆ ಎಣಿಸಿಕೊಳ್ಳುವನು ಮತ್ತು ಅದೇ ಕಾಯಿಲೆಯಿಂದಾಗಿ ಅವನು ಮೃತನಾಗುವನು. ಒಂದೊಮ್ಮೆ ಪತಿಯು ತನ್ನ ಮರಣ ಕಾಯಿಲೆಯ ಸಂದರ್ಭದಲ್ಲಿ ತನ್ನ ಪತ್ನಿಗೆ ವಿವಾಹ ವಿಚ್ಛೇದನೆಯನ್ನು ಕೊಟ್ಟಿದ್ದರೆ ಅಲ್ಲಿ ವಾರಸು ಪಡೆಯುವ ಹಕ್ಕುಗಳು ಈ ಕೆಳಗಿನ ನಿಯಮಗಳಿಗೆ ಬಾಧ್ಯವಾಗುತ್ತವೆ :

ಎ) ಸುನ್ನೀ ಕಾನೂನಿನ ಪ್ರಕಾರ ಒಂದೊಮ್ಮೆ ಪತ್ನಿಯ ಇದ್ದತ್ ಅವಧಿಯಲ್ಲಿ ಪತಿಯು ಮೃತನಾದರೆ, ಅಲ್ಲಿ ಆ ವಿವಾಹ ವಿಚ್ಛೇದನೆಗಾಗಿ ಪತ್ನಿಯು ಸ್ವತಃ ಒಂದು ಯಾಚನೆ ಮಾಡಿರದಿದ್ದರೆ ಅಲ್ಲಿ ಆಕೆಯು ವಾರಸು ಪಡೆಯಲು ಹಕ್ಕುದಾರಳಾಗುವಳು.

ಬಿ) ಶಿಯಾ ಕಾನೂನಿನ ಪ್ರಕಾರ ಒಂದು ವಿವಾಹ ವಿಚ್ಛೇದನೆಯ ಬಳಿಕ ಒಂದೊಮ್ಮೆ ಪತಿಯು ಒಂದು ವರ್ಷದ ಅವಧಿಯೊಳಗೆ ಮೃತನಾದರೆ ಆ ವಿಚ್ಛೇದಿತ ಪತ್ನಿಯು ಪತಿಯ ಸ್ವತ್ತುಗಳನ್ನು ವಾರಸು ಪಡೆಯಲು ಹಕ್ಕುದಾರಳಾಗುವಳು.

ಸಿ) ಮೇಲಿನ ಪರಿಸ್ಥಿತಿಗಳಲ್ಲಿ ಒಂದೊಮ್ಮೆ ಆ ವಿಚ್ಛೇದಿತ ಪತ್ನಿಯು ಇನ್ನೊಬ್ಬ ಪತಿಯನ್ನು ವಿವಾಹಿತಳಾಗಿದ್ದರೆ (ಎಂದರೆ ಹಳೆಯ ಗಂಡನ ಮರಣಕ್ಕಿಂತ ಮೊದಲು) ಆಕೆಯು ತನ್ನ ಹಳೆಯ ಗಂಡನ ಸ್ವತ್ತುಗಳನ್ನು ವಾರಸು ಪಡೆಯಲು ಹಕ್ಕುದಾರಳಲ್ಲ.

ಡಿ) ಒಂದೊಮ್ಮೆ ಆ ಪತ್ನಿಯು ತನ್ನ ಇದ್ದತ್ ಅವಧಿಯಲ್ಲಿ ಮೃತಳಾದರೆ (ಅಥವಾ ವಿವಾಹ ವಿಚ್ಛೇದನೆಯ ದಿನಾಂಕದಿಂದ ಒಂದು ವರ್ಷದೊಳಗೆ ಮೃತಳಾದರೆ) ಶಿಯಾ ಕಾನೂನಿನ ಪ್ರಕಾರ ಪತಿಯು ಆಕೆಯ ಸ್ವತ್ತುಗಳನ್ನು ವಾರಸು ಪಡೆಯುವಂತಿಲ್ಲ.

—

ಅಧ್ಯಾಯ ೭

ಪೈತೃಕತ್ವ ಮತ್ತು ಧರ್ಮಜತ್ವ
(Parentage and Legitimacy)

ಪೈತೃಕತ್ವ (Parentage)

ಪೈತೃಕತ್ವವೆಂದರೆ ಒಂದು ಮಗು ಮತ್ತು ಅದರ ಹೆತ್ತವರೊಳಗಿನ ಕಾನೂನೀ ಸಂಬಂಧ. ಒಂದು ಮಗುವಿನ ತಾಯಿ ಮತ್ತು ತಂದೆಯನ್ನು ಹೆತ್ತವರೆಂದು ಕರೆಯಲಾಗುತ್ತದೆ. ಈ ಕಾನೂನೀ ಸಂಬಂಧದ ಮಹತ್ವವೇನೆಂದರೆ ಇದರಲ್ಲಿ ಜೀವನಾಂಶ, ಸಂರಕ್ಷಕತ್ವ ಮತ್ತು ವಾರಸು ಇವುಗಳಿಗೆ ಸಂಬಂಧಪಟ್ಟ ಕೆಲವು ಹಕ್ಕುಗಳು ಮತ್ತು ಬಾಧ್ಯತೆಗಳು ಅಡಕವಾಗಿರುತ್ತವೆ.

ಮಾತೃತ್ವ ಮತ್ತು ಪಿತೃತ್ವ (Maternity and Paternity)

ಒಂದು ಮಗು ಮತ್ತು ಅದರ ತಾಯಿ ಇವರೊಳಗಿನ ಕಾನೂನೀ ಸಂಬಂಧವನ್ನು ಮಾತೃತ್ವವೆಂದು ಕರೆಯಲಾಗುತ್ತದೆ. ಮಾತೃತ್ವವು ಒಂದು ವಸ್ತುಸ್ಥಿತಿಯಾಗಿರುತ್ತದೆ. ಒಬ್ಬ ನಾರಿಯು ಆ ಮಗುವಿಗೆ ನಿಜವಾಗಿ ಜನ್ಮಕೊಟ್ಟದ್ದಳು ಎಂಬ ಸಂಗತಿಯು ಆಧಾರದ ಮೇರೆಗೆ ಆಕೆಯು ಮಾತೃತ್ವವನ್ನು ನಿರ್ಧರಿಸಲಾಗುತ್ತದೆ. ಇದರ ಹೊರತಾಗಿ ಇಲ್ಲಿ ಇನ್ನೇನನ್ನೂ ಸಾಬೀತುಪಡಿಸುವ ಅವಶ್ಯಕತೆಯಿಲ್ಲ. ಒಬ್ಬ ನಾರಿಯು ಮಾತೃತ್ವವನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಆ ಮಗುವಿನ ಜನನಕ್ಕಿಂತ ಮೊದಲು ಆಕೆಯು ಸಹವಾಸದಲ್ಲಿದ್ದಿರುವ ವ್ಯಕ್ತಿಯೊಂದಿಗಿನ ಸಂಬಂಧವು ಕಾನೂನುಬದ್ಧವೋ ಕಾನೂನುಬಾಹಿರವೆಂಬುದು ಇಲ್ಲಿ ಅಸಮಂಜಸವಾಗಿರುತ್ತದೆ. ಒಬ್ಬ ನಾರಿಯು ಒಂದು ಮಗುವಿಗೆ ಜನ್ಮಕೊಟ್ಟದ್ದಳು ಎಂಬುದಷ್ಟೇ ಆಕೆಯು ಆ ಮಗುವಿನ ತಾಯಿ ಎಂಬುದಕ್ಕೆ ಪರ್ಯಾಪ್ತವಾದ ಪುರಾವೆಯಾಗಿರುತ್ತದೆ. ಆದುದರಿಂದ ಒಂದು ಮಗುವು ತನ್ನ ತಾಯಿಯು ಕಾನೂನುಬದ್ಧ ಸಂಬಂಧದಿಂದ ಹುಟ್ಟಿರುವುದೋ ಅಥವಾ ಕಾನೂನುಬಾಹಿರ ಸಂಬಂಧದಿಂದ ಎಂಬುದು ಆ ಮಗುವು ತಾಯಿಯು ಸ್ವತ್ತಿನ ವಾರಸು ಪಡೆಯುವುದರ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದು ಮಗುವಿನ ಮಾತೃತ್ವವನ್ನು ಸ್ವೀಕರಿಸಬೇಕಾದರೆ ಆ ಮಗುವು ಆ ನಾರಿಯ ಕಾನೂನುಬದ್ಧವಾದ ವಿವಾಹದಲ್ಲಿ ಹುಟ್ಟಲ್ಪ

ಟ್ಟಿರಬೇಕು, ಒಂದು ಕಾನೂನುಬಾಹಿರ ಸಂಭೋಗದಲ್ಲಿ ಹುಟ್ಟಿಲ್ಪಟ್ಟ ಮಗುವು ಮಾತೃಹೀನ ಮಗುವೆಂದು ಎಣಿಸಲ್ಪಡುತ್ತದೆ ಮತ್ತು ಅದು ತಾಯಿಯ ಸ್ವತ್ತುಗಳನ್ನು ವಾರಸು ಪಡೆಯುವಂತಿಲ್ಲ.

ಒಂದು ಮಗು ಮತ್ತು ಅದರ ತಂದೆ ಇವರೊಳಗಿನ ಸಂಬಂಧವನ್ನು ಪಿತೃತ್ವವೆಂದು ಕರೆಯಲಾಗುತ್ತದೆ. ಒಂದು ಮಗುವಿನ ಪಿತೃತ್ವವನ್ನು ವಸ್ತುಸ್ಥಿತಿಯ ಆಧಾರದ ಮೇಲೆ ಸಾಬೀತುಪಡಿಸಲಾಗುವುದಿಲ್ಲ. ಮಾತೃತ್ವವು ಒಂದು ವಸ್ತುಸ್ಥಿತಿಯಾಗಿರುತ್ತದೆ. ಆದರೆ ಪಿತೃತ್ವವು ಒಂದು ಪೂರ್ವಭಾವನೆಯಾಗಿರುತ್ತದೆ. ಆದುದರಿಂದ ಒಂದು ಮಗುವಿನ ಪಿತೃತ್ವವನ್ನು ಕಾನೂನಿನ ಪೂರ್ವಭಾವನೆಯಿಂದ ನಿರ್ಣಯಿಸಲಾಗುತ್ತದೆ. ಈ ಕಾನೂನಿನ ಪೂರ್ವಭಾವನೆಗಾಗಿ ಆ ಮಗುವು ಅದರ ತಾಯಿ ಮತ್ತು ತಂದೆಯ ಕಾನೂನುಬದ್ಧವಾದ ಸಂಯುಕ್ತಿಯ ಕಾಲದಲ್ಲಿ ಗರ್ಭಸ್ಥವಾಗಿದ್ದು ಆ ಬಳಿಕ ತಾಯಿಯು ಅದಕ್ಕೆ ಜನ್ಮ ಕೊಟ್ಟಿದ್ದಳೆಂದು ಸಾಬೀತು ಪಡಿಸಬೇಕಾಗುತ್ತದೆ. ಒಂದು ಮಗುವಿನ ಪಿತೃತ್ವವು ಅದು ಗರ್ಭಸ್ಥವಾಗಿರುವಾಗ ಅಸ್ತಿತ್ವದಲ್ಲಿರುವ ಒಂದು ವಿವಾಹದ ಮೇಲೆ ಅವಲಂಬಿಸಿರುತ್ತದೆ. ಇಲ್ಲಿ ಒಂದು ವಿವಾಹವು ವಿಧ್ಯುಕ್ತವಾಗಿರಬಹುದು ಅಥವಾ ಕ್ರಮಬದ್ಧವಾಗಿಲ್ಲದಿರಬಹುದು, ಆದರೆ ಅದು ಶೂನ್ಯವಾಗಿರಬಾರದು. ಶೂನ್ಯ ವಿವಾಹವು ವಿವಾಹವೆಂದು ಎಣಿಸಲ್ಪಡುವುದಿಲ್ಲ. ಅದೊಂದು ಕಾನೂನುಬಾಹಿರವಾದ ಸಂಯುಕ್ತಿಯಾಗಿರುತ್ತದೆ. ಅಲ್ಲಿ ಸ್ತ್ರೀ ಪುರುಷರ ಕಾನೂನುಬಾಹಿರವಾದ ಸಂಯುಕ್ತಿಯಾಗಿದ್ದುದರಿಂದ ಆ ಸಂಯುಕ್ತಿಯಲ್ಲಿ ಗರ್ಭಸ್ಥವಾದ ಶಿಶುವಿಗೆ ಪಿತೃತ್ವವನ್ನು ತೋರಿಸಿಕೊಡಲಾಗುವುದಿಲ್ಲ. ಒಂದೊಮ್ಮೆ ಒಂದು ಮಗುವಿನ ಪಿತೃತ್ವವು ಸಿದ್ಧಪಡಿಸಲಾದರೆ ಆ ಮಗುವು ಧರ್ಮಜವೆಂದು ಎಣಿಸಲ್ಪಡುತ್ತದೆ.

ಧರ್ಮಜತ್ವ (Legitimacy)

ಧರ್ಮಜತ್ವವು ಒಂದು ಪ್ರಾಸ್ಥಿತಿಯಾಗಿರುತ್ತದೆ ಮತ್ತು ಅದು ಒಂದು ಮಗುವಿನ ಪಿತೃತ್ವದ ಸಂಗತಿಯ ನೇರ ಪರಿಣಾಮವಾಗಿರುತ್ತದೆ. ಆದುದರಿಂದ ಒಂದು ಮಗುವಿನ ಪಿತೃತ್ವವು ಸಿದ್ಧಪಡಿಸಿದಾಗ ಅದರ ಧರ್ಮಜತ್ವವೂ ಸಹ ಸಿದ್ಧಪಡಿಸಲಾಗುತ್ತದೆ. ಪಿತೃತ್ವವು ಧರ್ಮಜತ್ವದ ಆಧಾರವಾಗಿದ್ದು ಅದು ಒಂದು ವಿವಾಹದ ಅಸ್ತಿತ್ವವನ್ನು ಅವಲಂಬಿಸಿರುತ್ತದೆ. ಆದುದರಿಂದ ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಮಗುವಿನ ಧರ್ಮಜತ್ವವು ಆ ಮಗುವಿನ ತಂದೆ ಮತ್ತು ತಾಯಿ ಇವರೊಳಗಿನ ವಿವಾಹದ ಪ್ರತ್ಯಕ್ಷ ಅಥವಾ ಪರೋಕ್ಷ ಪುರಾವೆಯ ಆಧಾರದ ಮೇಲೆ ಸಿದ್ಧಪಡಿಸಲಾಗುತ್ತದೆ. ಒಂದು ವಿವಾಹದ ನೇರ ಪುರಾವೆಯು ಸಿಗದ ಪ್ರಕರಣದಲ್ಲಿ ಒಂದು ಕಾನೂನುಬದ್ಧವಾದ ವಿವಾಹದ ಅಸ್ತಿತ್ವದ ಬಗ್ಗೆ ಈ ಕೆಳಗಿನ ಸಂಗತಿಗಳಿಂದ ಒಂದು ಪೂರ್ವಭಾವನೆಯನ್ನು ತಳೆಯಬಹುದು—

I) ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಇವರೊಳಗಿನ ದೀರ್ಘಕಾಲದ ಸಹವಾಸ.

II) ಒಬ್ಬ ಗಂಡಸು ಒಬ್ಬ ಹೆಂಗಸನ್ನು ತನ್ನ ಪತ್ನಿಯೆಂಬುದಾಗಿ ಅಧಿ ಸ್ವೀಕರಿಸಿರುವನು, ಅಥವಾ

III) ತಾನು ಆ ಮಗುವಿನ ತಂದೆಯೆಂಬುದಾಗಿ ಒಬ್ಬ ವ್ಯಕ್ತಿಯು ಅಧಿ ಸ್ವೀಕೃತಿ ಕೊಡುತ್ತಿರುವನು.

ಇಲ್ಲಿ ಗಮನಿಸಬೇಕಾಗಿರುವ ಒಂದು ಮಹತ್ವದ ಸಂಗತಿಯು ಯಾವುದೆಂದರೆ ಇಲ್ಲಿ ಅಧಿಸ್ವೀಕೃತಿಯೆಂದರೆ ಒಂದು ಪಿತೃತ್ವವನ್ನು ಖಾತರಿಪಡಿಸುವ ಒಂದು ಘೋಷಣೆಯಾಗಿರುತ್ತದೆ. ಮತ್ತು ಒಂದು ವಿವಾಹವು ಅಸ್ತಿತ್ವದಲ್ಲಿದ್ದೂ ಸಹ ಒಂದು ಮಗುವಿನ ಪಿತೃತ್ವದ ಬಗ್ಗೆ ಸಂಶಯವಿದ್ದರೆ ಮತ್ತು ಅಲ್ಲಿ ಆ ವಿವಾಹದ ಬಗ್ಗೆ ಒಂದು ನೇರ ಪುರಾವೆ ಇಲ್ಲವಾದರೆ ಅಂತಹ ಪ್ರಕರಣದಲ್ಲಿ ಈ ರೀತಿಯ ಅಧಿ ಸ್ವೀಕೃತಿಯು ಕೊಡಲ್ಪಡುತ್ತದೆ. ಒಂದೊಮ್ಮೆ ಒಂದು ಮಗುವು ಅಧರ್ಮಜವಾಗಿದ್ದರೆ ಅಲ್ಲಿ ಒಂದು ಅಧಿಸ್ವೀಕೃತಿಯು ಆ ಮಗುವನ್ನು ಧರ್ಮಜಗೊಳಿಸುವದಿಲ್ಲ.

ಧರ್ಮಜತ್ವದ ಬಗ್ಗೆ ಈಗಿನ ಕಾನೂನು

(The Present Law of Legitimacy)

ಒಬ್ಬ ವ್ಯಕ್ತಿಯ ಧರ್ಮಜತ್ವದ ಸಂಶಯಾತೀತ ಪುರಾವೆಗೆ ಸಂಬಂಧಪಟ್ಟ ಒಂದು ಏಕರೂಪಿ ಕಾನೂನು ಭಾರತೀಯ ಸಾಕ್ಷ್ಯ ಅಧಿನಿಯಮ, ೧೮೭೨ (Indian Evidence act, 1872) ಇದರ ಕ. ೧೧೨ ಇದರಲ್ಲಿ ಹಾಕಲಾಗಿದೆ. ಈ ನಿಯಮವು ಎಲ್ಲಾ ಧರ್ಮದವರಿಗೆ ಅನ್ವಯವಾಗುತ್ತದೆ. ಈ ಕಲಮಿನಲ್ಲಿ ಉಪಬಂಧಿಸಲಾದ ಪ್ರಕಾರ ಈ ಕೆಳಗಿನ ಸಂಗತಿಗಳು ಒಬ್ಬ ವ್ಯಕ್ತಿಯ ಧರ್ಮಜತ್ವದ ಬಗ್ಗೆ ಸಂಶಯಾತೀತ ಪುರಾವೆಗಳಾಗಿರುತ್ತವೆ.

೧) ಆ ವ್ಯಕ್ತಿಯು ತನ್ನ ತಾಯಿ ಮತ್ತು ಇನ್ನೊಬ್ಬ ವ್ಯಕ್ತಿ ಇವರೊಳಗಿನ ಒಂದು ವಿಧ್ಯುಕ್ತವಾದ ವಿವಾಹವು ಮುಂದುವರಿಯುತ್ತಿರುವ ಕಾಲದಲ್ಲಿ ಜನಿಸಿದ್ದನು, ಅಥವಾ

೨) ಆ ವಿವಾಹವು ವಿಘಟಿತವಾಗಿ ೨೮೦ ದಿನಗಳೊಳಗೆ ಆ ವ್ಯಕ್ತಿಯು ಜನಿಸಿದ್ದನು ಮತ್ತು ಆ ಕಾಲದಲ್ಲಿ ಆ ತಾಯಿಯು ಅವಿವಾಹಿತಳಾಗಿ ಉಳಿದಿದ್ದಳು.

ಆದರೆ ಆ ವ್ಯಕ್ತಿಯು ಹುಟ್ಟಬಹುದಾದ ಕಾಲದಲ್ಲಿ ಆ ವಿವಾಹದ ಪಕ್ಷಗಾರರಿಗೆ ಪರಸ್ಪರ ಪ್ರವೇಶವಿದ್ದಿರಲಿಲ್ಲವೆಂಬುದನ್ನು ಇಲ್ಲಿ ತೋರಿಸಿ ಕೊಡುವಂತಿರಬಾರದು.

ಧರ್ಮಜತ್ವದ ಸಂಬಂಧದಲ್ಲಿ ಭಾರತೀಯ ಸಾಕ್ಷ್ಯ ಅಧಿನಿಯಮ ಇದರ

ನಿಯಮಗಳನ್ನು ಮುಸ್ಲಿಮ್ ಕಾನೂನಿನೊಂದಿಗೆ ತುಲನೆ ಮಾಡಿದರೆ ಅಲ್ಲಿ ಈ ಕೆಳಗಿನ ವ್ಯತ್ಯಾಸಗಳು ಕಂಡು ಬರುತ್ತವೆ :

೧) ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಧರ್ಮಜ ಮಗುವು ಒಂದು ವಿಧ್ಯುಕ್ತವಾದ ವಿವಾಹ ಕಾಲದಲ್ಲಿ ಹುಟ್ಟಿರುವುದಷ್ಟೇ ಅಲ್ಲ ಅದು ಗರ್ಭಸ್ಥವೂ ಆಗಿರಬೇಕು, ಆದರೆ ಸಾಕ್ಷ್ಯ ಅಧಿನಿಯಮದ ಪ್ರಕಾರ ವಿವಾಹದ ಒಂದು ದಿನದ ಬಳಿಕ ಹುಟ್ಟಿರುವ ಮಗುವೂ ಸಹ ಧರ್ಮಜವಾಗಬಹುದು.

೨) ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ವಿವಾಹವು ವಿಘಟಿತವಾಗಿ ಎರಡು ವರ್ಷಗಳ ಕಾಲಾವಧಿಯೊಳಗೆ ಹುಟ್ಟಿದ ಮಗುವೂ ಸಹ ಧರ್ಮಜವಾಗಬಹುದು. ಆದರೆ ಸಾಕ್ಷ್ಯ ಅಧಿನಿಯಮದ ಪ್ರಕಾರ ಒಂದು ವಿವಾಹವು ವಿಘಟಿತವಾಗಿ ೨೮೦ ದಿನಗಳ ಬಳಿಕ ಹುಟ್ಟಿರುವ ಒಂದು ಮಗುವನ್ನು ಧರ್ಮಜವೆಂದು ಎಣಿಸುವಂತಿಲ್ಲ.

೩) ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಕ್ರಮಬದ್ಧವಲ್ಲದ ವಿವಾಹದಲ್ಲಿ ಹುಟ್ಟಿರುವ ಒಂದು ಮಗುವು ಧರ್ಮಜವೆಂದು ಎಣಿಸಲ್ಪಡುತ್ತದೆ. ಆದರೆ ಸಾಕ್ಷ್ಯ ಅಧಿನಿಯಮದ ಪ್ರಕಾರ ಒಂದು ವಿಧ್ಯುಕ್ತವಾದ ವಿವಾಹದಿಂದ ಮಾತ್ರ ಹುಟ್ಟಿದ ಮಗುವು ಧರ್ಮಜವೆಂದು ಎಣಿಸಲ್ಪಡುತ್ತದೆ.

ಈ ಎರಡು ಕಾನೂನು ಪದ್ಧತಿಗಳೊಳಗೆ ಮೇಲ್ಕಾಣಿಸಲಾದ ಮೂಲಭೂತ ವ್ಯತ್ಯಾಸಗಳಿದ್ದಾಗ ಮುಸ್ಲಿಮ್ ಕಾನೂನಿನಿಂದ ಶಾಸಿತವಾಗಿರುವ ಒಂದು ವಿವಾಹದಲ್ಲಿ ಸಾಕ್ಷ್ಯ ಅಧಿನಿಯಮದ ನಿಯಮಗಳನ್ನು ಧರ್ಮಜತ್ವದ ಬಗ್ಗೆ ಅನ್ವಯಗೊಳಿಸುವುದು ಸರಿಯಲ್ಲವೆಂದು ಕಾಣುತ್ತದೆ. ಆದರೆ ಧರ್ಮಜತ್ವದ ಬಗ್ಗೆ ಭಾರತದ ನ್ಯಾಯಾಲಯಗಳು ಭಾರತೀಯ ಸಾಕ್ಷ್ಯ ಅಧಿನಿಯಮದ ಕ. ೧೧೨ನ್ನು ಅನ್ವಯಗೊಳಿಸಿದೆಯಲ್ಲದೆ ಧರ್ಮಜತ್ವದ ಬಗ್ಗೆ ಮುಸ್ಲಿಮ್ ಕಾನೂನನ್ನಲ್ಲ. ಒಂದು ಪ್ರಕರಣದಲ್ಲಿ ಇಬ್ಬರೂ ಪಕ್ಷಗಾರರು ಮುಸಲ್ಮಾನರಾಗಿದ್ದಾಗ ಪ್ರೀವಿಕೌನ್ಸಿಲ್ ಭಾರತೀಯ ಸಾಕ್ಷ್ಯ ಅಧಿನಿಯಮದ ಕ. ೧೧೨ನ್ನು ಅನ್ವಯಗೊಳಿಸಿದೆಯಲ್ಲದೆ ಮುಸ್ಲಿಮ್ ಕಾನೂನನ್ನಲ್ಲ.

ಪೈತೃಕತ್ವದ ಅಧಿಸ್ವೀಕೃತಿ (Acknowledgement Paternity)

ಒಬ್ಬ ವ್ಯಕ್ತಿಯು ಪೈತೃಕತ್ವವನ್ನು ಅಧಿಸ್ವೀಕೃತಗೊಳಿಸುವನೆಂದರೆ ಅವನು ಆ ಮಗುವಿನ ತಂದೆಯೆಂಬುದಾಗಿ ತನ್ನನ್ನು ತಾನು ಸ್ವೀಕರಿಸಿರುವನೆಂದು ಅರ್ಥ. ಒಂದೊಮ್ಮೆ ಒಂದು ಮಗುವಿನ ಜನನ ಅಥವಾ ಗರ್ಭಸ್ಥವಾಗಿರುವಿಕೆಯು ಅದರ ಹೆತ್ತವರ ವಿವಾಹವು ಸಿದ್ಧ ಮಾಡಿ ತೋರಿಸಲು ಅಸಾಧ್ಯವಾದ ಕಾರಣದಿಂದಾಗಿ ಆ ಮಗುವಿನ ಧರ್ಮಜತ್ವವು ಅನಿಶ್ಚಿತವಾಗಿದ್ದರೆ ಅಲ್ಲಿ ಪತಿಯು ಒಂದು ಘೋಷಣೆಯ ಮುಖಾಂತರ ತಾನು ಆ ಮಗುವಿನ ತಂದೆ ಎಂಬುದಾಗಿ ಅಧಿಸ್ವೀಕೃತಿಗೊಳಿಸ

ಬಹುದು. ಇಂತಹ ಒಂದು ಅಧಿಸ್ವೀಕೃತಿಯ ಪರಿಣಾಮವಾಗಿ ಅವನ ವಿವಾಹವು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ ಮತ್ತು ಆ ಮಗುವಿನ ಪೈತೃಕತ್ವವು ಧರ್ಮಜ ವೆಂದು ಎಣಿಸಲಾಗುತ್ತದೆ. ಆದರೆ ಒಂದು ಮಗುವು ಜಾರತ್ವದಿಂದ ಹುಟ್ಟಲ್ಪಟ್ಟು ದಾದರೆ ಅಥವಾ ಅದರ ತಂದೆ ತಾಯಿಯರ ವಿವಾಹವು ಮುಸ್ಲಿಮ್ ಕಾನೂನಿನಿಂದ ನಿಷೇಧಿಸಲ್ಪಟ್ಟಿದೆಯೆಂದಾದರೆ ಅಲ್ಲಿ ಒಂದು ಅಧಿಸ್ವೀಕೃತಿಯು ಆ ಮಗುವನ್ನು ಧರ್ಮಜಗೊಳಿಸುವುದಿಲ್ಲ. ಆದುದರಿಂದ ಪೈತೃಕತ್ವದ ಅಧಿಸ್ವೀಕೃತಿಯ ಸಿದ್ಧಾಂತದ ಪರಿಧಿಯು ತುಂಬಾ ಸೀಮಿತವಾಗಿದೆ. 'ಮೊಹಮ್ಮದ್ ಅಲಹಬಾದ್ ವಿ. ಮೊಹ ಮ್ಮದ್ ಇಸ್ಮಾಯಿಲ್' (Muhammad Allahabad Khan V. Muhammad Ismail) ಇದು ಪೈತೃಕತ್ವದ ಅಧಿಸ್ವೀಕೃತಿಯ ಬಗ್ಗೆ ಒಂದು ಪ್ರಮುಖ ಪ್ರಕರಣ ವಾಗಿರುತ್ತದೆ. ಈ ಪ್ರಕರಣದ ಮೇಲೆ ಅಲಹಾಬಾದ್ ಉಚ್ಚನ್ಯಾಯಾಲಯದ ಪೂರ್ಣಪೀಠವು ಕೊಟ್ಟಿರುವ ಒಂದು ತೀರ್ಪು ಈ ವಿಷಯದ ಮೇಲೆ ಒಂದು ಆಧಾರ ವೆಂದು ಎಣಿಸಲಾಗುತ್ತದೆ ಮತ್ತು ಅದನ್ನು ಪ್ರೀವಿಕೌನ್ಸಿಲ್ ಹಾಗೂ ಭಾರತದ ಇತರ ನ್ಯಾಯಾಲಯಗಳು ಸ್ವೀಕರಿಸಿವೆ. ಈ ಪ್ರಕರಣವು ಕೆಳಗಿನಂತಿದೆ.

ಮೊಹಮ್ಮದ್ ಅಲಹಬಾದ್ ಖಾನ್ ವಿ. ಮೊಹಮ್ಮದ ಇಸ್ಮಾಯಿಲ್
(Muhammad Allahabad Khan V. Muhammad Ismail)

ಸಿದ್ಧಾಂತ : ಮುಸ್ಲಿಮ್ ಕಾನೂನಿನ ಪ್ರಕಾರ ಪೈತೃಕತ್ವವು ಒಂದೇ ಕ್ರಮ ಬದ್ಧವಾದ ಅಥವಾ ಕ್ರಮಬದ್ಧವಾಗಿರದ ವಿವಾಹದಿಂದ ಹುಟ್ಟಿದುದರಿಂದ ಅಥವಾ ಅಧಿಸ್ವೀಕೃತಿಯಿಂದ ಸಿದ್ಧಪಡಿಸಲಾಗುತ್ತದೆ. ಪೈತೃಕತ್ವವು ಅನಿಶ್ಚಿತವಾದ ಪ್ರಕರಣ ಗಳಲ್ಲಿ ತಂದೆಯಿಂದ ಮಾಡಲ್ಪಡುವ ಅಧಿಸ್ವೀಕೃತಿಯು ವಿಧ್ಯುಕ್ತವಾಗಿರುತ್ತದೆ ಹಾಗೂ ಅದು ಕಾರ್ಯಾಚರಣೆಗೆ ಬರುತ್ತದೆ. ಈ ರೀತಿಯ ಒಂದು ಅಧಿಸ್ವೀಕೃತಿ ಯಾದ ಬಳಿಕ ಅಂತಹ ಒಂದು ಮಗುವು ಧರ್ಮಜವಾಗುತ್ತದೆ ಹಾಗೂ ವಾರಸು ಪಡೆಯಲು ಹಕ್ಕುಳ್ಳದ್ದಾಗುತ್ತದೆ.

ವಸ್ತುಸ್ಥಿತಿ : ಅಲಹಬಾದ್ ಖಾನ್ ಎಂಬ ಹೆಸರಿನ ವಾದಿಯು ೧೮೮೪ರ ಮೇ ತಿಂಗಳ ೧೩ನೇ ದಿನಾಂಕದಂದು ಮೀರತ್ತಿನ ಸಬ್ ನ್ಯಾಯಾಧೀಶರ ನ್ಯಾಯಾ ಲಯದಲ್ಲಿ ಒಂದು ದಾವೆ ಹೂಡಿದನು. ತನ್ನ ಮೃತ ತಂದೆ ಗುಲಾಮ್ ಘೌಸ ಖಾನ್ ಎಂಬವನು ಬಿಟ್ಟು ಹೋದ ಸ್ವತ್ತಿನಲ್ಲಿ ತನ್ನ ಪಾಲನ್ನು ಪಡೆಯುವ ಬಗ್ಗೆ ತನ್ನ ಹಕ್ಕನ್ನು ಘೋಷಿಬೇಕೆಂದು ಅವನು ಆ ದಾವೆಯಲ್ಲಿ ಬೇಡಿದನು.

ವಾದಿಯು ಗುಲಾಮ್ ಘೌಸ್‌ಖಾನ್ ಇವನ ಮಗನಲ್ಲವೆಂದು ಪ್ರತಿವಾದಿ ಗಳಾದ ಮೊಹಮ್ಮದ್ ಇಸ್ಮಾಯಿಲ್ ಅಲಿಖಾನ್ ಮತ್ತು ಇತರರು ವಾದಿಯ ಹಕ್ಕು ದಾವೆಯನ್ನು ವಿರೋಧಿಸಿದರು. ವಾದಿಯು ಮೋತಿಬೇಗಮ್ ಎಂಬ ನಾರಿಯು ಗುಲಾಮ್ ಘೌಸ್‌ಖಾನ್ ಎಂಬವನನ್ನು ವಿವಾಹವಾಗುವುದಕ್ಕಿಂತ ಮೊದಲೇ ಹುಟ್ಟಿದ್ದನು.

ಗುಲಾಮ್ ಘೌಸ್‌ಖಾನ್ ಇವನು ಅಲಹಬಾದ್‌ಖಾನ್ ಇವನನ್ನು ತನ್ನ ಮಗನೆಂಬುದಾಗಿ ಅಧಿಸ್ವೀಕೃತಿ ಕೊಟ್ಟಿರಲಿಲ್ಲ ಎಂಬ ಕಾರಣದ ಮೇಲೆ ವಿಚಾರಣಾ ನ್ಯಾಯಾಲಯವು ಈ ದಾವೆಯನ್ನು ಕಿತ್ತುಹಾಕಿತು. ವಾದಿಯು ಆ ಬಳಿಕ ಮನವಿ ಮಾಡಿದನು. ಮನವಿ ನ್ಯಾಯಾಲಯದಲ್ಲಿ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಲಾಯಿತು. ಕೊನೆಗೆ ವಾದಿಯು ಅಲಹಬಾದ್ ಉಚ್ಚನ್ಯಾಯಾಲಯಕ್ಕೆ ಮನವಿ ಸಲ್ಲಿಸಿದನು.

ತೀರ್ಪು : ಅಲಹಾಬಾದ ನ್ಯಾಯಾಲಯವು ಈ ಪ್ರಕರಣವನ್ನು ಹೆಚ್ಚಿನ ಪುರಾವೆಗಳ ಆಧಾರದ ಮೇಲೆ ನಿರ್ಣಯಿಸತಕ್ಕದೆಂದು ಹೇಳಿ ಇದನ್ನು ಪುನರ್ ವಿಚಾರಣೆಗಾಗಿ ಮರಳಿ ಕಳುಹಿಸಿತು. ಹಾಗೂ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಮೋದಿಬೇಗಮ್ ಇವಳು ಗುಲಾಮ್ ಘೌಸ್‌ಖಾನ್ ಇವನನ್ನು ವಿವಾಹಿತಳಾಗಿದ್ದಳು ಮತ್ತು ಇತರ ಯಾವನೇ ಒಬ್ಬ ವ್ಯಕ್ತಿಯೊಂದಿಗೆ ಆಕೆಯು ವಿವಾಹವಾದ ಬಗ್ಗೆ ಯಾವತ್ತೂ ಪುರಾವೆ ಇಲ್ಲ. ಗುಲಾಮ್ ಘೌಸಖಾನ ಇವನು ಆಕೆಯೊಂದಿಗೆ ದೀರ್ಘಕಾಲ ಬಾಳ್ವೆ ನಡೆಸಿದ್ದನು ಮತ್ತು ಆಕೆಯನ್ನು ತನ್ನ ಕಾನೂನುಬದ್ಧ ಪತ್ನಿಯಂತೆ ನೋಡಿಕೊಂಡಿದ್ದನು. ಆದರೆ ಅವರ ಈ ಸಹವಾಸದಿಂದ ಹುಟ್ಟಿರುವ ಮಗನನ್ನು ತನ್ನ ಮಗನೆಂಬುದಾಗಿ ಗುಲಾಮ್ ಘೌಸನಾನನು ಅಧಿಸ್ವೀಕೃತಿ ಕೊಟ್ಟಿರುವನು ಎಂಬ ಬಗ್ಗೆ ಇಲ್ಲಿ ಯಾವುದೇ ರೀತಿಯ ಪುರಾವೆ ಇಲ್ಲ. ಈ ಸಂಗತಿಗಳ ಹಿನ್ನೆಲೆಯಲ್ಲಿ ಹೊಸ ಪುರಾವೆಗಳನ್ನು ಗಮನಕ್ಕೆ ತೆಗೆದುಕೊಂಡು ಅಲಹಬಾದಖಾನ ಇವನ ಪ್ರಾಸ್ಥಿತಿಯನ್ನು ನಿರ್ಣಯಿಸಬೇಕು ಹಾಗೂ ಗುಲಾಮ್ ಘೌಸಖಾನ ಇವನ ಸ್ವತ್ತಿನ ವಾರಸು ಪಡೆಯುವಲ್ಲಿ ಇವನ ಸಾಮರ್ಥ್ಯವನ್ನು ನಿರ್ಣಯಿಸಬೇಕು.

ಅಧಿಸ್ವೀಕೃತಿಯು ವ್ಯಕ್ತವಾಗಿರಬಹುದು ಅಥವಾ ಅವ್ಯಕ್ತ
(Acknowledgement may be Express or implied)

ಒಬ್ಬ ವ್ಯಕ್ತಿಯು ತಾನು ಒಂದು ಮಗುವಿನ ತಂದೆಯೆಂಬುದಾಗಿ ವ್ಯಕ್ತವಾಗಿ ಘೋಷಿಸಬಹುದು ಅಥವಾ ಈ ಸಂಗತಿಯನ್ನು ಅವನ ನಡತೆಯಿಂದ ನಿರ್ಣಯಿಸಬಹುದು. ಆದರೆ ಅಲ್ಲಿ ಒಂದು ವಿಧ್ಯುಕ್ತವಾದ ಅಧಿಸ್ವೀಕೃತಿಯ ಷರತ್ತುಗಳು ಪೂರ್ತಿಗೊಳ್ಳಲ್ಪಡಬೇಕು. ಇಲ್ಲಿ ಒಂದು ಪೈತೃಕತ್ವದ ಅಧಿಸ್ವೀಕೃತಿಯ ಘೋಷಣೆಯು ಒಂದು ಸ್ಪಷ್ಟವಾದ ಪುರಾವೆಯು ಅವಶ್ಯಕತೆಯಿಲ್ಲ. ಒಂದೊಮ್ಮೆ ಒಬ್ಬ ವ್ಯಕ್ತಿಯು ಒಂದು ಮಗುವನ್ನು ತನ್ನ ಧರ್ಮಜ ಸಂತತಿಯೆಂಬಂತೆ ನೋಡಿಕೊಳ್ಳುತ್ತಿರುವನೆಂದಾದರೆ ಅಲ್ಲಿ ಅವನು ತನ್ನ ನಡತೆಯಿಂದ ಆ ಮಗುವಿನ ಪೈತೃಕತ್ವವನ್ನು

ಅಧಿಸ್ವೀಕೃತಿಗೊಳಿಸಿರುವನೆಂದು ಎಣಿಸಲಾಗುತ್ತದೆ. ಒಂದೊಮ್ಮೆ ಒಬ್ಬ ವ್ಯಕ್ತಿ ಮತ್ತು ಆ ಮಗುವಿನ ತಾಯಿ ಇವರೊಳಗಿನ ವಿವಾಹವು ಸಿದ್ಧವಾಗಿದ್ದರೆ ಮತ್ತು ಈ ಸಂಗತಿಯು ಪತಿಯ ಹೇಳಿಕೆಯಿಂದ ಪುಷ್ಟೀಕರಿಸಲ್ಪಟ್ಟಿದ್ದರೆ, ಆ ಹೇಳಿಕೆಯನ್ನು ಆ ಮಗುವಿನ ಪೈತೃಕತ್ವದ ಅವ್ಯಕ್ತ ಅಧಿಸ್ವೀಕೃತಿಯೆಂದು ಎಣಿಸಬಹುದು. ಒಂದು ಅವ್ಯಕ್ತವಾದ ಅಧಿಸ್ವೀಕೃತಿಯಲ್ಲಿ ಒಂದು ಮಗುವಿನ ಧರ್ಮಜತ್ವವನ್ನು ಸ್ವೀಕರಿಸುವಂತಹ ಒಂದು ಉದ್ದೇಶವನ್ನು ಅಂತಹ ನಡತೆಯಿಂದ ನಿರ್ಣಯಿಸಬೇಕಾಗುತ್ತದೆ.

ಒಂದು ವಿಧ್ಯುಕ್ತವಾದ ಅಧಿಸ್ವೀಕೃತಿಯ ಅವಶ್ಯಕತೆಗಳು

(Conditions for a Valid acknowledgement)

ಪೈತೃಕತ್ವದ ಅಧಿಸ್ವೀಕೃತಿಯು ಮುಸ್ಲಿಮ್ ಸಾರಯುಕ್ತ ಕಾನೂನಿನ ಒಂದು ಭಾಗವಾಗಿರುತ್ತದೆ. ಇದನ್ನು ಶುದ್ಧ ಮುಸ್ಲಿಮ್ ಕಾನೂನಿನ ಉಪಬಂಧಗಳ ಪ್ರಕಾರ ಮಾಡಬೇಕಾಗುತ್ತದೆ. ಒಂದು ವಿಧ್ಯುಕ್ತವಾದ ಅಧಿಸ್ವೀಕೃತಿಯಲ್ಲಿ ಈ ಕೆಳಗಿನ ಷರತ್ತುಗಳನ್ನು ಪೂರ್ತಿಗೊಳಿಸಲ್ಪಡಬೇಕಾಗುತ್ತದೆ.

೧) ಅಧಿಸ್ವೀಕೃತಿಗೊಳಿಸಲ್ಪಟ್ಟ ಆ ಮಗುವು ಒಂದು ಕಾನೂನು ಬಾಹಿರ ಸಂಭೋಗದ ಸಂತತಿಯಾಗಿರಬಾರದು. ಆ ಮಗುವು ಹುಟ್ಟಬೇಕಾದರೆ ಅಥವಾ ಗರ್ಭತಾಳಬೇಕಾದರೆ ಆ ಕಾಲದಲ್ಲಿ ಆ ಮಗುವಿನ ತಾಯಿ ಮತ್ತು ಅದರ ಅಧಿಸ್ವೀಕೃತಿಗಾರ ಇವರೊಳಗಿನ ಸಂಭೋಗವು ಕಾನೂನು ಬಾಹಿರವಾಗಿರಬಾರದು. ಹಾಗೆಂದರೆ ಆ ಮಗುವಿನ ತಾಯಿಯು ಆ ಅಧಿಸ್ವೀಕೃತಿಗಾರನ ನಿಷೇಧಿತ ಸಂಬಂಧದ ಹಂತದೊಳಗೆ ಬರಬಾರದು, ಅಥವಾ ಆ ಮಗುವನ್ನು ಗರ್ಭ ಧರಿಸುವ ಕಾಲದಲ್ಲಿ ಆಕೆಯು ಇನ್ನೊಬ್ಬ ವ್ಯಕ್ತಿಯ ಪತ್ನಿಯಾಗಿರಬಾರದು. ಆ ಮಗುವಿನ ತಾಯಿಯು ಆ ಮಗುವನ್ನು ಗರ್ಭ ಧರಿಸುವ ಕಾಲದಲ್ಲಿ ಆ ಅಧಿಸ್ವೀಕೃತಿಗಾರನ ರದ್ದುಗೊಳಿಸಲಾಗದಂತಹ ವಿವಾಹ ವಿಚ್ಛೇದನೆಯ ಪತ್ನಿಯಾಗಿರಬಾರದು. ಸಂಕ್ಷಿಪ್ತದಲ್ಲಿ ಹೇಳುವುದಿದ್ದರೆ ಆ ಅಧಿಸ್ವೀಕೃತಿಗೊಳಿಸಲ್ಪಟ್ಟ ಮಗುವಿನ ಗರ್ಭಧಾರಣೆಯ ಕಾಲದಲ್ಲಿ ಆ ಮಗುವಿನ ತಾಯಿ ಮತ್ತು ಅಧಿಸ್ವೀಕೃತಿಗಾರ ಇವರೊಳಗಿನ ಒಂದು ಕಾನೂನುಬದ್ಧವಾದ ವಿವಾಹವು ಮುಸ್ಲಿಮ್ ಕಾನೂನಿನ ಪ್ರಕಾರ ಕಾನೂನುಬದ್ಧವಾಗಿರಬೇಕು. ಒಂದೊಮ್ಮೆ ಅಂತಹ ಒಂದು ವಿವಾಹವು ಅಸಾಧ್ಯವಾಗಿದ್ದರೆ ಅಲ್ಲೊಂದು ಅಧಿಸ್ವೀಕೃತಿಯು ಮಾಡಲ್ಪಡುವದಿಲ್ಲ.

೨) ಆ ಅಧಿಸ್ವೀಕೃತಿಗಿಂತ ಮೊದಲು ಆ ಮಗುವಿನ ಪೈತೃಕತ್ವವು ಅನಿಶ್ಚಿತವಾಗಿರಬೇಕು. ಹಾಗೆಂದರೆ, ಆ ಮಗುವು ಇತರ ಯಾವತ್ತೂ ಗೊತ್ತಿರುವ ವ್ಯಕ್ತಿಯ ಸಂತತಿಯಾಗಿರಬಾರದು. ಒಂದೊಮ್ಮೆ ಇತರ ಯಾವನಾದರೊಬ್ಬ ವ್ಯಕ್ತಿಯು ಆ ಮಗುವಿನ ತಂದೆಯೆಂಬುದು ಸಿದ್ಧವಾದರೆ ಅಲ್ಲಿ ಆ ಅಧಿಸ್ವೀಕೃತಿಗಾರನು ಅದನ್ನು ತನ್ನ ಮಗುವೆಂದು ಅದನ್ನು ಸ್ವೀಕರಿಸುವಂತಿಲ್ಲ.

೩) ಅಧಿಸ್ವೀಕೃತಿಗಾರ ಮತ್ತು ಆ ಮಗು ಇವರೊಳಗಿನ ವಯಸ್ಸಿನ ವ್ಯತ್ಯಾ

ಸವು ಒಬ್ಬ ತಂದೆ ಮಗ ಇವರೊಳಗಿನ ಸಂಬಂಧಕ್ಕೆ ಹೋಲುವಂತಹದ್ದಾಗಿರಬೇಕು. ಒಂದೊಮ್ಮೆ ಅಧಿಸ್ವೀಕೃತಿಗಾರನು ಅಧಿಸ್ವೀಕೃತಿಗೊಳಿಸಲ್ಪಟ್ಟ ವ್ಯಕ್ತಿಗೆ ಸಮ ವಯಸ್ಕನಾಗಿದ್ದರೆ ಅಥವಾ ಅವನಿಗಿಂತ ಕಿರಿಯವನಾಗಿದ್ದರೆ ಅಲ್ಲಿ ಪೈತೃಕತ್ವದ ಅಧಿಸ್ವೀಕೃತಿಯು ಶೂನ್ಯವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಅಧಿಸ್ವೀಕೃತಿಗಾರ ಮತ್ತು ಅಧಿಸ್ವೀಕೃತಿಗೊಳಿಸಲ್ಪಟ್ಟ ಆ ಮಗು ಅವರಿಬ್ಬರು ತಂದೆ ಮಗುವಿನಂತೆ ಕಾಣುವುದಿಲ್ಲ. ಬೈಲಿ (Baillie) ಇವನ ಅಭಿಪ್ರಾಯದಂತೆ ಅಧಿಸ್ವೀಕೃತಿಗಾರನು ಅಧಿಸ್ವೀಕೃತಿಗೊಳಿಸಲ್ಪಟ್ಟ ವ್ಯಕ್ತಿಗಿಂತ ಕನಿಷ್ಠ ಪಕ್ಷ ಹನ್ನೆರಡುವರೆ ವರ್ಷ ಹಿರಿಯನಾಗಿರಬೇಕು.

೪) ಒಬ್ಬ ವ್ಯಕ್ತಿಯಿಂದ ಮಾಡಲ್ಪಡುವ ಪಿತೃತ್ವದ ಅಧಿಸ್ವೀಕೃತಿಯು ಆ ಮಗುವು ಕೇವಲ ತನ್ನ ಮಗ ಅಥವಾ ಮಗಳೆಂದು ಸ್ವೀಕಾರ ಮಾಡುವದಷ್ಟೇ ಅಲ್ಲ, ಬದಲಾಗಿ ತಾನು ಅದನ್ನು ವಾರಸು ಸಮೇತ ಎಲ್ಲಾ ಉದ್ದೇಶಗಳಿಗಾಗಿ ತನ್ನ ಧರ್ಮಜ ಮಗುವೆಂಬುದಾಗಿ ಸ್ವೀಕರಿಸುವ ಪರಿಣಾಮದಿಂದ ಕೂಡಿರಬೇಕು. ಅಧಿಸ್ವೀಕೃತಿಗಾರನು ಆ ಮಗುವನ್ನು ಕೇವಲ ತನ್ನ ಮಗು ಮತ್ತು ತಾನದರ ತಂದೆಯೆಂಬುದಷ್ಟೇ ಸ್ವೀಕೃತಿ ಮಾಡುವುದಲ್ಲ, ಬದಲಾಗಿ ಆ ಮಗುವನ್ನು ತನ್ನ ಧರ್ಮಜ ಸಂತತಿ ಎಂಬುದಾಗಿ ಅವನು ಸ್ವೀಕರಿಸಿರುವನು ಎಂಬ ಒಂದು ಉದ್ದೇಶವು ಅವನಿಂದ ಮಾಡಲ್ಪಡುವ ಅಧಿಸ್ವೀಕೃತಿಯಲ್ಲಿ ಕಂಡುಬರಬೇಕು. ಒಂದು ಮಗುವಿನ ಪ್ರತಿ ತೋರಿಸಲಾಗುವ ನೈಮಿತ್ತಿಕ ಪ್ರೀತಿ ಅಥವಾ ವಾತ್ಸಲ್ಯವು ಒಂದು ಮಗುವನ್ನು ಧರ್ಮಜಗೊಳಿಸುವದಿಲ್ಲ.

೫) ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಮಗುವು ವಿವೇಚನೆ ಮತ್ತು ತಿಳುವಳಿಕೆ ಹೊಂದುವ ವಯಸ್ಸಿಗೆ ಬಂದಾಗ ಆ ಅಧಿಸ್ವೀಕೃತಿಯನ್ನು ಅಲ್ಲಗಳೆಯುವ ಆಯ್ಕೆ ಮಾಡಲು ಶಕ್ತಿ ಪಡೆದಿರುತ್ತದೆ. ಒಂದು ಮಗುವು ವಯಸ್ಸಿಗೆ ಬಂದಾಗ ತನ್ನ ಪಿತೃತ್ವವನ್ನು ಅಲ್ಲಗಳೆದಿದೆಯೆಂದಾದರೆ ಅಲ್ಲಿ ಪಿತೃತ್ವದ ಅಧಿಸ್ವೀಕೃತಿಯು ವಿಧ್ಯುಕ್ತವಾಗುವುದಿಲ್ಲ. ತಂದೆ-ಮಗ ಸಂಬಂಧವು ಅಲ್ಲಗಳೆಯಲ್ಪಟ್ಟರೆ ಅಲ್ಲಿ ಪಿತೃತ್ವದ ಅಧಿಸ್ವೀಕೃತಿಯು ನಿಷ್ಫಲಾತ್ಮಕಗೊಳ್ಳುತ್ತದೆ. ಒಂದು ವಿಧ್ಯುಕ್ತವಾದ ಅಧಿಸ್ವೀಕೃತಿಯಾಗಲು ಆ ಮಗುವು ಆ ಅಧಿಸ್ವೀಕೃತಿಯನ್ನು ಅಲ್ಲಗಳೆಯಬಾರದು.

ಪಿತೃತ್ವದ ಅಧಿಸ್ವೀಕೃತಿಯನ್ನು ರದ್ದುಗೊಳಿಸುವಂತಿಲ್ಲ.

(Acknowledgement of Paternity is irrevokable)

ಒಂದು ಪಿತೃತ್ವದ ಅಧಿಸ್ವೀಕೃತಿಯು ಒಮ್ಮೆ ಮಾಡಲ್ಪಟ್ಟರೆ ಅದು ಅಧಿಸ್ವೀಕೃತಿಗಾರನಿಂದ ಆ ಬಳಿಕ ರದ್ದುಗೊಳಿಸಲ್ಪಡದಂತಹದ್ದಾಗಿರುತ್ತದೆ. ಇದು ಪೂರ್ಣ ಮತ್ತು ವಿಧ್ಯುಕ್ತವಾದ ಅಧಿಸ್ವೀಕೃತಿಯನ್ನು ರದ್ದುಗೊಳಿಸುವಂತಿಲ್ಲ. ಮತ್ತು ತದನಂತರ ಅದು ಅಧಿಸ್ವೀಕೃತಿಗಾರನಿಂದ ನಿರಾಕರಿಸಲ್ಪಟ್ಟರೆ ಅಥವಾ ಅಲ್ಲ

ಗಳೆಯಲ್ಪಟ್ಟರೆ ಆಗಲೇ ಅಧಿಸ್ವೀಕೃತಿಗೊಳಿಸಲ್ಪಟ್ಟ ಮಗುವಿನ ಧರ್ಮಜತ್ವದ ಮೇಲೆ ಅದು ಪರಿಣಾಮ ಬೀರುವುದಿಲ್ಲ.

ಪಿತೃತ್ವದ ಅಧಿಸ್ವೀಕೃತಿಯ ಕಾನೂನೀ ಪರಿಣಾಮಗಳು
(Legal Effects of acknowledgement of Paternity)

ಒಂದು ಪಿತೃತ್ವದ ವಿಧ್ಯುಕ್ತವಾದ ಅಧಿಸ್ವೀಕೃತಿಯು ಈ ಕೆಳಗಿನ ಕಾನೂನಿ ಪರಿಣಾಮಗಳನ್ನು ಉಂಟು ಮಾಡುತ್ತದೆ :

೧) ಅಧಿಸ್ವೀಕೃತಿಗೊಳಿಸಲ್ಪಟ್ಟ ಮಗುವು ಅಧಿಸ್ವೀಕೃತಿಗಾರನ ಧರ್ಮಜ ಸಂತತಿಯೆಂದು ಎಣಿಸಲ್ಪಡುತ್ತದೆ ಮತ್ತು ಅದರ ಪಿತೃತ್ವವು ಸಿದ್ಧಗೊಳ್ಳುತ್ತದೆ.

೨) ಒಂದು ಧರ್ಮಜ ಸಂತತಿಯ ರೀತಿಯಲ್ಲಿ ಆ ಮಗುವು ಅಧಿಸ್ವೀಕೃತಿಗಾರ, ಅದರ ತಾಯಿ, ಮತ್ತು ಇತರ ಸಂಬಂಧಿಕರ ವಾರಸು ಪಡೆಯಲು ಹಕ್ಕುಳ್ಳದ್ದಾಗುತ್ತದೆ.

೩) ಒಂದು ಮಗುವಿನ ಪಿತೃತ್ವದ ಅಧಿಸ್ವೀಕೃತಿಯು ಆ ಮಗುವಿನ ತಾಯಿ ಮತ್ತು ಅಧಿಸ್ವೀಕೃತಿಗಾರ ಇವರಿಬ್ಬರೊಳಗಿನ ಒಂದು ಕಾನೂನುಬದ್ಧವಾದ ವಿವಾಹವನ್ನು ಸಿದ್ಧಮಾಡಿ ತೋರಿಸುತ್ತದೆ. ಆ ಮಗುವಿನ ತಾಯಿಯು ಅಧಿಸ್ವೀಕೃತಿಗಾರನ ಪತ್ನಿಯ ಪ್ರಾಸ್ಥಿತಿಯನ್ನು ಪಡೆಯುವಳು ಮತ್ತು ಆಕೆಯೂ ಸಹ ತನ್ನ ಪತಿಯ ಸ್ವತ್ತುಗಳ ವಾರಸು ಪಡೆಯಲು ಹಕ್ಕುದಾರಳಾಗುವಳು.

ಇಸ್ಲಾಮಿನಲ್ಲಿ ದತ್ತಕ (Adoption in Islam)

ಮುಸ್ಲಿಮ್ ಕಾನೂನು ದತ್ತಕವನ್ನು ಮನ್ನಿಸುವುದಿಲ್ಲ. ಆದರೆ ಇಸ್ಲಾಮ್ ಪೂರ್ವ ಅರೇಬಿಯಾದಲ್ಲಿ ದತ್ತಕವು ಬಳಕೆಯಲ್ಲಿತ್ತು. ಇನ್ನೊಬ್ಬನ ಮಗುವನ್ನು ತನ್ನ ಮಗುವಿನಂತೆ ಸ್ವೀಕರಿಸುವ ರೀತಿಯ ದತ್ತಕವು ಕುರಾನಿನಲ್ಲಿ ವ್ಯಕ್ತವಾಗಿ ನಿಷೇಧಿಸಲಾಗಿದೆ. ಇದರ ಪರಿಣಾಮವಾಗಿ ದತ್ತಕವು ಇಸ್ಲಾಮಿಕವಾಗಿದೆ. ಮುಸ್ಲಿಮ್ ಕಾನೂನಿನಲ್ಲಿ ಮನ್ನಿಸಲ್ಪಟ್ಟ ಪಿತೃತ್ವದ ಅಧಿಸ್ವೀಕೃತಿಯು ದತ್ತಕವನ್ನು ಹೋಲುತ್ತದಾದರೂ ಸಹ ದತ್ತಕ ಮತ್ತು ಪಿತೃತ್ವದ ಅಧಿಸ್ವೀಕೃತಿ ಇವುಗಳೊಳಗೆ ಒಂದು ಮೂಲಭೂತವಾದ ವ್ಯತ್ಯಾಸವನ್ನು ಕಾಣಬಹುದು. ದತ್ತಕವು ನೈಸರ್ಗಿಕ ಪಿತೃತ್ವದ ಕೊರತೆಯಿಂದ ಉಂಟಾದರೆ ಅಧಿಸ್ವೀಕೃತಿಯು ನೈಸರ್ಗಿಕ ಪಿತೃತ್ವವನ್ನು ಸಿದ್ಧಮಾಡಿ ತೋರಿಸುವುದಾಗಿರುತ್ತದೆ.

ಆದರೆ ಕೆಲವು ಕ್ಷೇತ್ರಿಯ ಅಧಿನಿಯಮಗಳಲ್ಲಿ ಒಬ್ಬ ಮುಸಲ್ಮಾನನು ದತ್ತಕ ತೆಗೆದುಕೊಳ್ಳುವ ಬಗ್ಗೆ ಉಪಬಂಧಗಳು ಮಾಡಲ್ಪಟ್ಟಿವೆ. ಉದಾಹರಣೆಗಾಗಿ ಅವಧ್ ಸಂಪದದ ಅಧಿನಿಯಮ, ೧೮೬೯ (Oudh estate Act 1869) ಇದರಲ್ಲಿ ಒಬ್ಬ ಮುಸ್ಲಿಮ್ ತಾಲುಕೇದಾರನು ದತ್ತಕ ತೆಗೆದುಕೊಳ್ಳಲು ಸಮ್ಮತಿಸಲಾಗಿದೆ.

ಕೆಲವು ವರ್ಗಗಳ ಮುಸಲ್ಮಾನರಲ್ಲಿ ಅವರ ರೂಢಿಗತ ಕಾನೂನು ದತ್ತಕವನ್ನು ಸಮ್ಮತಿಸಿದೆ. ಶರೀಯತ್ ಅಧಿನಿಯಮ, ೧೯೩೭ ಇದು ಎಲ್ಲಾ ರೀತಿಯ ರೂಢಿ ಮತ್ತು ಬಳಕೆಗಳನ್ನು ರದ್ದುಗೊಳಿಸಿದೆ. ಆದರೆ ಶರೀಯತ್ ಅಧಿನಿಯಮದ ಕ. ೩ ಇದು ದತ್ತಕ, ಮರಣ ಶಾಸನ ಮತ್ತು ಮರಣೋತ್ತರ ದಾನಗಳು ಇವುಗಳ ಸಂಬಂಧದಲ್ಲಿ ಒಬ್ಬ ಮುಸಲ್ಮಾನನು ಮುಸ್ಲಿಮ್ ಕಾನೂನನ್ನು ತನಗೆ ಅನ್ವಯಿಸ ಬೇಕೆಂದು ವ್ಯಕ್ತವಾಗಿ ಘೋಷಿಸುವ ಹೊರತು ಅಲ್ಲಿ ಅವರ ರೂಢಿಗತ ಕಾನೂನನ್ನು ಅನ್ವಯಗೊಳಿಸಲಾಗುತ್ತದೆ. ಶರೀಯತ್ ಅಧಿನಿಯಮವು ಅನ್ವಯವಾಗದ ಪ್ರದೇಶದ ಒಬ್ಬ ಮುಸಲ್ಮಾನನು ಅವನ ರೂಢಿಗತ ಕಾನೂನಿನಲ್ಲಿ ಇದು ಬಳಕೆ ಯಲ್ಲಿದ್ದರೆ ಅವನು ದತ್ತಕ ಸ್ವೀಕರಿಸಬಹುದು. ಉದಾಹರಣೆಗಾಗಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಶರೀಯತ್ ಅಧಿನಿಯಮವು ಅನ್ವಯವಾಗುವುದಿಲ್ಲ. ಆದ್ದ ರಿಂದ ಇಲ್ಲಿ ರೂಢಿಗತ ಕಾನೂನಿನ ಪ್ರಕಾರ ಒಬ್ಬ ಮುಸಲ್ಮಾನನು ದತ್ತಕ ಸ್ವೀಕರಿಸಿ ದರೆ ಅಲ್ಲಿ ಅದು ಕಾನೂನುಬಾಹಿರವಾಗುವುದಿಲ್ಲ,

— —

ಅಧ್ಯಾಯ ೮

ಸಂರಕ್ಷಕತ್ವ (Guardianship)

ಪ್ರಸ್ತಾವನೆ :

ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟವಾದ ವಯೋಮಿತಿಗೆ ಮುಟ್ಟುವ ತನಕ ಅವನು ಒಬ್ಬ ಅಲ್ಪವಯಿಯೆಂದು ಎಣಿಸಲ್ಪಡುವನು. ಒಬ್ಬ ಅಲ್ಪವಯಿಯು ತನ್ನ ಕಾರ್ಯಕಲಾಪಗಳ ಕಾನೂನೀ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಸಮರ್ಥನಾಗಿರುವದಿಲ್ಲ. ಗೊತ್ತು ಮಾಡಲ್ಪಟ್ಟ ವಯಸ್ಸಿಗೆ ಮುಟ್ಟದಿರುವ ಒಬ್ಬ ವ್ಯಕ್ತಿಯ ಕಾನೂನೀ ಸ್ಥಿತಿಯನ್ನು ಅಲ್ಪವಯವೆಂದು ಕರೆಯಲಾಗುತ್ತದೆ. ಮುಸ್ಲಿಂ ಕಾನೂನಿನ ಪ್ರಕಾರ, ವಯಸ್ಕತನದ ವಯಸ್ಸು ಎರಡು ಪದ್ಧತಿಗಳಿಂದ ಪರಿನಿಯಮಿತವಾಗಿದೆ : ೧) ಶುದ್ಧ ಮುಸ್ಲಿಮ್ ಕಾನೂನು ಮತ್ತು ೨) ಶಾಸನಬದ್ಧ ಕಾನೂನು. ಶುದ್ಧ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ತಾರುಣ್ಯದ ವಯಸ್ಸನ್ನು ಮುಟ್ಟಿಲ್ಲವೆಂದಾದರೆ ಅವನು ಅಥವಾ ಅವಳು ಅಲ್ಪವಯಿಯೆಂದು ಎಣಿಸಲಾಗುತ್ತದೆ. ಶಾರೀರಿಕ ವೈಶಿಷ್ಟ್ಯಗಳ ಯಾವತ್ತೂ ಪುರಾವೆ ಇಲ್ಲದಾಗ ತಾರುಣ್ಯಗಳ ವಯಸ್ಸು ೧೮ ಎಂದು ಎಣಿಸಲ್ಪಡುತ್ತದೆ. ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆ ಇವುಗಳ ಉದ್ದೇಶಗಳಿಗಾಗಿ ತಾರುಣ್ಯದ ವಯಸ್ಸಿಗೆ ಬಾರದ ಒಬ್ಬ ವ್ಯಕ್ತಿಯನ್ನು ಒಬ್ಬ ಅಲ್ಪವಯಿಯೆಂದು ಎಣಿಸಲಾಗುತ್ತದೆ. ಮುಸಲ್ಮಾನರ ವಯಸ್ಕತನದ ಪ್ರಾಯವನ್ನು ಪರಿನಿಯಮಿತಗೊಳಿಸುವ ಶಾಸನಬದ್ಧ ನಿಯಮಗಳು ಈ ಕೆಳಗಿನಂತಿವೆ :

ಎ) ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆ ಇವುಗಳ ಹೊರತಾಗಿರುವ ಉದ್ದೇಶಗಳಿಗಾಗಿ ವಯಸ್ಕತನದ ಪ್ರಾಯವು ೧೮ ವಯಸ್ಸಿನದಾಗಿರುತ್ತದೆ. ೧೮ ವರ್ಷಗಳ ವಯಸ್ಸನ್ನು ಪೂರ್ತಿಗೊಳಿಸದ ಒಬ್ಬ ಮುಸಲ್ಮಾನನು ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆ ಇವುಗಳ ಹೊರತಾಗಿ ಇತರ ವಿಷಯಗಳಲ್ಲಿ ಒಬ್ಬ ಅಲ್ಪವಯಿ ಎಂಬುದಾಗಿ ಎಣಿಸಲ್ಪಡುವನು.

ಬಿ) ನ್ಯಾಯಾಲಯದಿಂದ ನೇಮಿಸಲ್ಪಟ್ಟಿರುವ ಒಬ್ಬ ಸಂರಕ್ಷಕನ ಸಂರಕ್ಷಣೆಯಲ್ಲಿರುವ ಒಬ್ಬ ಮುಸಲ್ಮಾನನು ಅಥವಾ ಸಂರಕ್ಷಿತರ ನ್ಯಾಯಾಲಯದ ಸಂರಕ್ಷಣೆಯಲ್ಲಿರುವ ಸ್ವತ್ತಿನ ಮಾಲಿಕನಾಗಿರುವ ಒಬ್ಬ ಮುಸಲ್ಮಾನನು ೨೧ ವರ್ಷಗಳ ವಯಸ್ಸನ್ನು ದಾಟಿದಾಗ ಮಾತ್ರ ಪ್ರಾಯಸ್ಥನಾಗುವನು. ಆದುದರಿಂದ ನ್ಯಾಯಾಲಯದಿಂದ ನೇಮಿಸಲ್ಪಟ್ಟಿರುವ ಸಂರಕ್ಷಕನ ಸಂರಕ್ಷಣೆಯಲ್ಲಿರುವ ಅಥವಾ ಯಾವಾ

ತನ ಸ್ವತ್ತು ಸಂರಕ್ಷಿತರ ನ್ಯಾಯಾಲಯದ ರಕ್ಷಣೆಯಲ್ಲಿದೆಯೋ ಅಂಥವನು ೨೧ ವರ್ಷಗಳ ವಯಸ್ಸನ್ನು ದಾಟಿದಾಗ ಮಾತ್ರ ವಯಸ್ಕನೆಂಬುದಾಗಿ ಎಣಿಸಲ್ಪಡುವನು.

ಸಿ) ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆ ಇವುಗಳ ಉದ್ದೇಶಗಳಿಗಾಗಿ ಒಬ್ಬ ಮುಸಲ್ಮಾನನು ತಾರುಣ್ಯದ ವಯಸ್ಸಿಗೆ ಬಂದಾಗ ವಯಸ್ಕನೆಂಬುದಾಗಿ ಎಣಿಸಲ್ಪಡುವನು. ಆದರೆ ಒಂದು ದಾವೆ ಹೂಡಬೇಕಾದರೆ, ಆ ದಾವೆಯು ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆ ಇವುಗಳಿಗೆ ಸಂಬಂಧಪಟ್ಟದಾಗಿದ್ದರೂ ಸಹ ಅಲ್ಲಿ ಕನಿಷ್ಠ ವಯೋಮಿತಿಯು ೧೮ ವರ್ಷ ವಯಸ್ಸಿನದ್ದಾಗಿರುತ್ತದೆ. ಆದುದರಿಂದ ೧೮ ವರ್ಷಗಳಿಗಿಂತ ಕಡಿಮೆ ವಯಸ್ಸಿನವನಾದ ಒಬ್ಬ ಮುಸಲ್ಮಾನನು ಅಲ್ಪವಯಿಯಾಗಿರುವನು ಮತ್ತು ತನ್ನ ವಿವಾಹ, ಕನ್ಯಾಶುಲ್ಕ ಅಥವಾ ವಿವಾಹ ವಿಚ್ಛೇದನೆ ಇವುಗಳ ಸಂಬಂಧದಲ್ಲಿ ಒಬ್ಬ ಮಿತ್ರನ ಹೊರತಾಗಿ ಸ್ವತಃ ಒಂದು ದಾವೆಯನ್ನು ಹೂಡುವಂತಿಲ್ಲ.

ಒಬ್ಬ ಅಲ್ಪವಯಿಯು ತನ್ನ ಹಿತಸಂಬಂಧವನ್ನು ರಕ್ಷಿಸಲು ಸಮರ್ಥನಲ್ಲವೆಂದು ಎಣಿಸಲ್ಪಡುವನು. ಆದುದರಿಂದ ಒಬ್ಬ ಅಲ್ಪವಯಿಯ ದೇಹ ಅಥವಾ ಸ್ವತ್ತು ಇವುಗಳ ರಕ್ಷಣೆಯು ಒಬ್ಬ ವಯಸ್ಕನಿಂದ ಆಗಬೇಕೆಂದು ಕಾನೂನು ಬಯಸುತ್ತದೆ. ಒಬ್ಬ ಅಲ್ಪವಯಿಯ ಜೀವ ಮತ್ತು ಸ್ವತ್ತಿನ ರಕ್ಷಣೆ ಹಾಗೂ ಅವನ ಪರವಾಗಿ ವ್ಯವಹರಿಸಲು ಕಾನೂನಿನಿಂದ ಪ್ರಾಧಿಕೃತನಾಗಿರುವ ಒಬ್ಬ ವ್ಯಕ್ತಿಯು ಸಂರಕ್ಷಿತನೆಂದು ಎಣಿಸಲ್ಪಡುವನು. ಮುಸ್ಲಿಂ ಕಾನೂನಿನ ಪ್ರಕಾರ ಒಬ್ಬ ಅಲ್ಪವಯಿಯ ವಿವಾಹ, ದೇಹ ಮತ್ತು ಸ್ವತ್ತು ಇವುಗಳ ರಕ್ಷಣೆಗಾಗಿ ಸಂರಕ್ಷಕರ ಅವಶ್ಯಕತೆಯಿರುತ್ತದೆ.

ಸಂರಕ್ಷಕರ ವರ್ಗೀಕರಣ (Classification of Guardians)

ಮೇಲೆ ಹೇಳಲಾದ ಉದ್ದೇಶಗಳಿಗಾಗಿ ಮುಸ್ಲಿಮ್ ಕಾನೂನು ಈ ಕೆಳಗಿನ ರೀತಿಯ ಸಂರಕ್ಷಕರನ್ನು ಮನ್ನಿಸುತ್ತದೆ.

೧) ನೈಸರ್ಗಿಕ ಅಥವಾ ಕಾನೂನೀ ಸಂರಕ್ಷಕ.

೨) ಮರಣ ಶಾಸನದಿಂದ ಸಂರಕ್ಷಕ.

೩) ನ್ಯಾಯಾಲಯದಿಂದ ನೇಮಿಸಲ್ಪಟ್ಟ ಸಂರಕ್ಷಕ ಅಥವಾ ಶಾಸನಬದ್ಧ ಸಂರಕ್ಷಕ ಮತ್ತು

೪) ವಾಸ್ತವಿಕ ಸಂರಕ್ಷಕ.

೧) ನೈಸರ್ಗಿಕ ಸಂರಕ್ಷಕ (Natural Guardian)

ನೈಸರ್ಗಿಕ ಸಂರಕ್ಷಕನೆಂದರೆ ಒಂದು ಮಗುವಿನ ಕಾರ್ಯಕಲಾಪಗಳನ್ನು ನಿಯಂತ್ರಿಸಲು ಮತ್ತು ಅದರ ಮೇಲ್ವಿಚಾರಣೆ ನಡೆಸಲು ಒಂದು ಕಾನೂನೀ

ಹಕ್ಕುಳ್ಳ ಒಬ್ಬ ವ್ಯಕ್ತಿಯಾಗಿರುವನು. ತಂದೆಯು ತನ್ನ ಮಗುವಿನ ನೈಸರ್ಗಿಕ ಸಂರಕ್ಷಕನೆಂಬುದಾಗಿ ಮುಸ್ಲಿಮ್ ಕಾನೂನಿನ ಎಲ್ಲಾ ಪರಂಪರೆಗಳು ಮನ್ನಿಸುತ್ತವೆ. ಅಲ್ಪವಯಿಯ ಸಂರಕ್ಷಕನಾಗಿ ವರ್ತಿಸಲು ತಂದೆಯ ಹಕ್ಕು ಒಂದು ಸ್ವತಂತ್ರವಾದ ಹಕ್ಕಾಗಿರುತ್ತದೆ ಮತ್ತು ಈ ಹಕ್ಕು ಅವನಿಗೆ ಇಸ್ಲಾಮಿನ ಸಾರಯುಕ್ತ ಕಾನೂನಿನಿಂದ ಕೊಡಲ್ಪಟ್ಟಿದೆ. ನೈಸರ್ಗಿಕ ಸಂರಕ್ಷಕನು ಕಾನೂನು ಮಾತ್ರ ಅಥವಾ ಕಾನೂನೀ ಸಂರಕ್ಷಕನೆಂಬುದಾಗಿಯೂ ಎಣಿಸಲ್ಪಡುವನು: ತಂದೆಯ ಗೈರುಹಾಜರಿಯಲ್ಲಿ ತಂದೆಯ ನಿಷ್ಪಾದಕನು ಕಾನೂನೀ ಸಂರಕ್ಷಕನಾಗಿ ವರ್ತಿಸಬಹುದು. ತಂದೆ ಅಥವಾ ತಂದೆಯ ನಿಷ್ಪಾದಕ ಇವರ ಗೈರು ಹಾಜರಿಯಲ್ಲಿ ಪೈತೃಕ ಅಜ್ಜ ಅಥವಾ ಪೈತೃಕ ಅಜ್ಜನ ನಿಷ್ಪಾದಕ ಇವರು ಕಾನೂನೀ ಸಂರಕ್ಷಕರಾಗಿ ವರ್ತಿಸಬಹುದು, ಈ ವ್ಯಕ್ತಿಗಳ ಹೊರತಾಗಿ ಮುಸ್ಲಿಮ್ ಕಾನೂನಿನಲ್ಲಿ ಯಾವನೇ ಒಬ್ಬ ವ್ಯಕ್ತಿಯು ನೈಸರ್ಗಿಕ ಅಥವಾ ಕಾನೂನೀ ಸಂರಕ್ಷಕನೆಂದು ಎಣಿಸಲ್ಪಡುವದಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ತಂದೆಯ ಗೈರು ಹಾಜರಿಯಲ್ಲಿ ಕೇವಲ ತಂದೆಯ ತಂದೆಯು ನೈಸರ್ಗಿಕ ಅಥವಾ ಕಾನೂನೀ ಸಂರಕ್ಷಕನಾಗಿ ವರ್ತಿಸಬಹುದು. ಈ ರೀತಿಯಾಗಿ ಒಂದೊಮ್ಮೆ ಪೈತೃಕ ಅಜ್ಜನು ಇಲ್ಲದಾಗ ತಂದೆಯ ನಿಷ್ಪಾದಕನು ಒಬ್ಬ ಕಾನೂನೀ ಸಂರಕ್ಷಕನಾಗಿ ವರ್ತಿಸುವಂತಿಲ್ಲ.

ಮರಣಶಾಸನದಿಂದ ಸಂರಕ್ಷಕ (Testamentery Guardian)

ಒಬ್ಬ ಅಲ್ಪವಯಿಯ ಸಂರಕ್ಷಕನಾಗಲು ಒಂದು ಮರಣಶಾಸನದ ಮೇರೆಗೆ ನೇಮಿಸಲ್ಪಟ್ಟಿರುವ ಒಬ್ಬ ವ್ಯಕ್ತಿಯನ್ನು ಮರಣಶಾಸನದಿಂದ ಸಂರಕ್ಷನೆಂದು ಕರೆಯಲಾಗುತ್ತದೆ. ಕೇವಲ ತಂದೆ ಅಥವಾ ಅವನ ಗೈರು ಹಾಜರಿಯಲ್ಲಿ, ಪೈತೃಕ ಅಜ್ಜನು ಒಬ್ಬ ಮರಣಶಾಸನದಿಂದ ಸಂರಕ್ಷಕನನ್ನು ನೇಮಿಸಬಹುದು. ಮರಣಶಾಸನದಿಂದ ಒಬ್ಬನನ್ನು ಸಂರಕ್ಷಕನನ್ನಾಗಿ ನೇಮಿಸಲು ಯಾವುದೇ ರೀತಿಯ ವಿಶೇಷ ಔಪಚಾರಿಕತೆಯ ಅವಶ್ಯಕತೆಯಿರುವುದಿಲ್ಲ. ಆದರೆ ಮರಣಶಾಸನದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನು ಸಂರಕ್ಷಕನಾಗಿ ವರ್ತಿಸಲು ಸಕ್ಷಮನಾಗಿರಬೇಕು. ಆದರೆ ಅವನೊಬ್ಬ ವಯಸ್ಕನಾಗಿದ್ದ ಚಿತ್ತಸ್ವಾಸ್ಥ್ಯವಳ್ಳ ವ್ಯಕ್ತಿಯಾಗಿರಬೇಕು. ಒಬ್ಬ ಮುಸಲ್ಮಾನೇತರನು ಅಥವಾ ಒಬ್ಬ ನಾರಿಯು ಮರಣಶಾಸನದಿಂದ ಸಂರಕ್ಷಿತಳಾಗಿ ನೇಮಿಸಲ್ಪಡಬಹುದು.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಬ್ಬ ಮುಸಲ್ಮಾನೇತರನು ಮರಣಶಾಸನದಿಂದ ಸಂರಕ್ಷಿತನಾಗಿ ನೇಮಿಸಲ್ಪಡುವುದಿಲ್ಲ.

ನ್ಯಾಯಾಲಯದಿಂದ ನೇಮಿಸಲ್ಪಟ್ಟ ಸಂರಕ್ಷಕ
(Guardian appointed by court)

ಒಬ್ಬ ನೈಸರ್ಗಿಕ ಅಥವಾ ಮರಣ ಶಾಸನದಿಂದ ನೇಮಿಸಲ್ಪಟ್ಟ ಸಂರಕ್ಷಕನಿಲ್ಲದಾಗ ಒಬ್ಬ ಅಲ್ಪವಯಿಯ ದೇಹ ಅಥವಾ ಸ್ವತ್ತು ಅಥವಾ ಇವೆರಡರ ರಕ್ಷಣೆಗಾಗಿ ಒಬ್ಬ ಸಂರಕ್ಷಕನನ್ನು ನೇಮಿಸಲು ನ್ಯಾಯಾಲಯವು ಶಕ್ತಿ ಪಡೆದಿರುತ್ತದೆ. ನ್ಯಾಯಾಲಯದಿಂದ ಮಾಡಲಾಗುವ ಸಂರಕ್ಷಕರ ನೇಮಕವು ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦ (Guardians and wards Act., 1890) ಇದರಿಂದ ಶಾಸಿತವಾಗಿದೆ ಮತ್ತು ಈ ಅಧಿನಿಯಮವು ಯಾವುದೇ ಧರ್ಮವನ್ನು ಅವಲಂಬಿಸಿರದೆ ಎಲ್ಲಾ ಭಾರತೀಯರಿಗೆ ಅನ್ವಯವಾಗುತ್ತದೆ. ಈ ಅಧಿನಿಯಮದ ಪ್ರಕಾರ ಭಾರತದಲ್ಲಿ ನ್ಯಾಯಾಲಯಗಳು ಅಲ್ಪವಯಿಯ ದೇಹ ಅಥವಾ ಸ್ವತ್ತಿಗೆ ಸಂರಕ್ಷಕರನ್ನು ನೇಮಿಸಲು ಪ್ರಾಧಿಕೃತಗೊಂಡಿದೆ. ಆದುದರಿಂದ ಈ ರೀತಿಯಾಗಿ ನೇಮಿಸಲ್ಪಟ್ಟ ಸಂರಕ್ಷಕರನ್ನು ಶಾಸನಬದ್ಧ ಸಂರಕ್ಷಕರೆಂದು ಕರೆಯಲಾಗುತ್ತದೆ. ಆದರೆ ವಿವಾಹದ ಸಂರಕ್ಷಕತನ ಇದರ ಬಗ್ಗೆ ಈ ಅಧಿನಿಯಮದಲ್ಲಿ ಯಾವತ್ತೂ ಉಪಬಂಧವು ಮಾಡಲಾಗಿಲ್ಲ. ಇದರ ಪರಿಣಾಮವಾಗಿ ವಿವಾಹದ ಸಂರಕ್ಷಕರರ ಹೊರತು ಒಬ್ಬ ಮುಸ್ಲಿಮ್ ಅಲ್ಪವಯಿಯ ದೇಹ ಮತ್ತು ಸ್ವತ್ತಿನ ಸಂಬಂಧದಲ್ಲಿ ನ್ಯಾಯಾಲಯವು ಸಂರಕ್ಷಕನನ್ನು ನೇಮಿಸಬಹುದು. ಕೆಲವು ಪ್ರಕರಣಗಳಲ್ಲಿ ಮುಸ್ಲಿಮ್ ಮತೀಯ ಕಾನೂನು ಮತ್ತು ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ ಇವುಗಳೊಳಗೆ ಸ್ವಲ್ಪ ವಿರೋಧಾಬಾಸವಿದೆ. ಒಂದೊಮ್ಮೆ ಮುಸ್ಲಿಮ್ ಮತೀಯ ಕಾನೂನು ಮತ್ತು ಈ ಅಧಿನಿಯಮ ಇವುಗಳೊಳಗೆ ಒಂದು ತಾಕಲಾಟ ಉಂಟಾದರೆ ಇಲ್ಲಿ ಈ ಅಧಿನಿಯಮವು ಮುಸ್ಲಿಮ್ ಕಾನೂನಿನ ಮೇಲೆ ಆದ್ಯತೆ ಪಡೆಯುತ್ತದೆ. ಇಲ್ಲಿ ಹೇಳಲಾದ ನ್ಯಾಯಾಲಯವು ಜಿಲ್ಲಾ ನ್ಯಾಯಾಲಯವಾಗಿದೆ.

ಈ ಕೆಳಗಿನವರಲ್ಲಿ ಯಾರಾದರೂ ಒಂದು ಆವೇದನೆ ಮಾಡಿದರೆ ಅಲ್ಲಿ ಒಬ್ಬ ಅಲ್ಪವಯಿಗಾಗಿ ಸಂರಕ್ಷಕನನ್ನು ನೇಮಿಸಲು ನ್ಯಾಯಾಲಯವು ಶಕ್ತಿ ಪಡೆದಿರುತ್ತದೆ.

I) ಒಬ್ಬ ಅಲ್ಪವಯಿಯ ಸಂರಕ್ಷಕನಾಗಲು ಇಚ್ಛುಕನಾಗಿರುವ ಅಥವಾ ಈ ಬಗ್ಗೆ ಹಕ್ಕುದಾವೆ ಮಾಡುತ್ತಿರುವ ಒಬ್ಬ ವ್ಯಕ್ತಿ, ಅಥವಾ

II) ಅಲ್ಪವಯಿಯ ಮಿತ್ರ ಅಥವಾ ಯಾವನೇ ಒಬ್ಬ ಸಂಬಂಧಿಕ, ಅಥವಾ

III) ಆ ಅಲ್ಪವಯಿಯು ಸಾಮಾನ್ಯವಾಗಿ ಅಧಿವಾಸಿಯಾಗಿರುವ ಜಿಲ್ಲೆಯ ಜಿಲ್ಲಾಧೀಶ. ಆ ಬಳಿಕ ಒಂದೊಮ್ಮೆ ಆ ಅಲ್ಪವಯಿಗೆ ಒಬ್ಬ ಸಂರಕ್ಷಕನನ್ನು ನೇಮಿಸುವುದು ಆ ಅಲ್ಪವಯಿಯ ಒಳ್ಳೆಯದಕ್ಕೆ ಎಂಬುದು ನ್ಯಾಯಾಲಯಕ್ಕೆ ಕಂಡು

ಬಂದರೆ ಆ ನ್ಯಾಯಾಲಯವು ಈ ಕೆಳಗಿನವುಗಳಲ್ಲಿ ಯಾವುದಾದರೊಂದು ಆದೇಶವನ್ನು ಜಾರಿ ಮಾಡಬಹುದು —

ಎ) ಅಲ್ಪವಯಿಯ ದೇಹ ಅಥವಾ ಸ್ವತ್ತು, ಅಥವಾ ಇವೆರಡಕ್ಕೆ ಒಬ್ಬ ಸಂರಕ್ಷಕನನ್ನು ನೇಮಿಸುವದು, ಅಥವಾ

ಬಿ) ಒಬ್ಬ ವ್ಯಕ್ತಿಯನ್ನು ಅಂತಹ ಒಬ್ಬ ಸಂರಕ್ಷಕನೆಂಬುದಾಗಿ ಘೋಷಿಸುವುದು.

ಈ ಅಧಿನಿಯಮದ ಕ. ೧೭ (೨) ಇದರಲ್ಲಿ ಉಪಬಂಧಿಸಲಾದ ಪ್ರಕಾರ ಅಲ್ಪವಯಿಗೆ ಒಬ್ಬ ಸಂರಕ್ಷಕನನ್ನು ನೇಮಿಸುವಾಗ ನ್ಯಾಯಾಲಯವು ಅಲ್ಲಿ ಆ ಅಲ್ಪವಯಿಯ ವಯಸ್ಸು, ಲಿಂಗ ಮತ್ತು ಮತಕ್ಕೆ ಗಮನ ಕೊಡುತ್ತದೆ; ಪ್ರಸ್ತಾವಿತ ಸಂರಕ್ಷಕನ ಚಾರಿತ್ರ್ಯ ಮತ್ತು ಸಾಮರ್ಥ್ಯ ಮತ್ತು ಆ ಅಲ್ಪವಯಿಗೆ ಅವನ ಸಂಬಂಧದ ಸಾಮಿಪ್ಯ; ಆ ಅಲ್ಪವಯಿಯ ಪೈತೃಕನ ಮರಣಪೂರ್ವ ಇಚ್ಛೆ ಮತ್ತು ಅಲ್ಪವಯಿ ಹಾಗು ಆ ಪ್ರಸ್ತಾವಿತ ಸಂರಕ್ಷಕ ಇವರೊಳಗಿನ ದೇಹ ಮತ್ತು ಸ್ವತ್ತು ಇವುಗಳ ಅಸ್ತಿತ್ವದಲ್ಲಿರುವ ಅಥವಾ ಹಿಂದಿನ ಸಂಬಂಧ. ಇದಲ್ಲದೆ ಒಂದೊಮ್ಮೆ ಆ ಅಲ್ಪವಯಿಯು ಒಂದು ಆದ್ಯತೆ ಕೊಡುವ ಸ್ಥಿತಿಯಲ್ಲಿದ್ದರೆ ಆ ಆದ್ಯತೆಯನ್ನು ನ್ಯಾಯಾಲಯವು ಗಮನಿಸಬೇಕಾಗುತ್ತದೆ. ಈ ಅಧಿನಿಯಮವು ಸಂರಕ್ಷಕರ ನೇಮಕದ ಬಗ್ಗೆ ಭಾರತದ ಎಲ್ಲ ವ್ಯಕ್ತಿಗಳಿಗೆ ಸಮಾನವಾದ ನಿಯಮವನ್ನು ಹಾಕಿಕೊಟ್ಟಿದೆಯಾದರೂ ಸಹ ಒಬ್ಬ ಸಂರಕ್ಷಕನನ್ನು ನೇಮಿಸುವಾಗ ನ್ಯಾಯಾಲಯವು ಆ ಅಲ್ಪವಯಿಯ ಧರ್ಮ ಮತ್ತು ಮತೀಯ ಕಾನೂನನ್ನು ಗಮನಿಸಬೇಕಾಗುತ್ತದೆ. ಆದರೆ ಇಲ್ಲಿ ಗಮನ ಕೊಡಬೇಕಾಗಿರುವ ಮುಖ್ಯ ಅಂಶವು ಅಲ್ಪವಯಿಯ ಏಳಿಗೆಯಾಗಿರುತ್ತದೆ; ಆದುದರಿಂದ ಮುಸ್ಲಿಮ್ ಮತೀಯ ಕಾನೂನನ್ನು ಗಮನಿಸಬೇಕಾದರೆ ಅದು ಆ ಅಲ್ಪವಯಿಯ ಉನ್ನತಿಗೆ ಸಹಾಯಕವಾಗಿರಬೇಕು.

ವಾಸ್ತವಿಕ ಸಂರಕ್ಷಕ (De-facto Guardian)

ವಾಸ್ತವಿಕ ಸಂರಕ್ಷಕನೆಂದರೆ ಒಂದು ಮಗುವಿನ ಅಭಿರಕ್ಷೆಯನ್ನು ಹೊಂದಿರುವ ಒಬ್ಬ ವ್ಯಕ್ತಿ. ಇವನು ಒಬ್ಬ ಕಾನೂನೀ ಸಂರಕ್ಷಕ ಅಥವಾ ಮರಣಶಾಸನದಿಂದ ಸಂರಕ್ಷಕ ಅಥವಾ ಶಾಸನಬದ್ಧ ಸಂರಕ್ಷಕನಲ್ಲ. ವಾಸ್ತವಿಕ ಸಂರಕ್ಷಕನು ಒಬ್ಬ ಅಲ್ಪವಯಿಯ ಸಂರಕ್ಷಕತ್ವವನ್ನು ಹೊಂದಲು ಪ್ರಾಧಿಕೃತನಾಗಿಲ್ಲದೆ ಆ ಅಲ್ಪವಯಿಯ ಸಂರಕ್ಷಕನಾಗಿ ನಿಜವಾಗಿ ವರ್ತಿಸುತ್ತಿರುವ ಒಬ್ಬ ವ್ಯಕ್ತಿ.

ಒಬ್ಬ ಅಲ್ಪವಯಿಯ ದೇಹಕ್ಕಾಗಿ ಸಂರಕ್ಷಕರು
(Guardians for the persons of a Minor)

ಅಲ್ಪವಯಿಯ ದೇಹದ ಸಂರಕ್ಷಕತನವೆಂದರೆ ಒಬ್ಬ ಅಲ್ಪವಯಿಯ ವ್ಯಕ್ತಿತ್ವದ ಎಲ್ಲಾ ಮೇಲ್ವಿಚಾರಣೆಗಳನ್ನು ಪಡೆದಿರುವಿಕೆ. ಇದು ಅಲ್ಪವಯಿಯನ್ನು

ಸಾಕಿ ಸಲಹುವ ಬಾಧ್ಯತೆಯನ್ನು ಒಳಗೊಂಡಿದ್ದು ಆ ಮಗುವಿನ ಬಗ್ಗೆ ಕಾಳಜಿ ವಹಿಸುವದು ಮತ್ತು ಅದರ ಉನ್ನತಿಗಾಗಿ ಪ್ರಯತ್ನಿಸುವದು ಇವುಗಳಿಂದ ಕೂಡಿಕೊಂಡಿರುತ್ತದೆ. ಒಬ್ಬ ಅಲ್ಪವಯಿ ವ್ಯಕ್ತಿಯ ದೇಹದ ಸಂರಕ್ಷಕತ್ವ ಮತ್ತು ಒಬ್ಬ ಅಲ್ಪವಯಿಯ ಅಭಿರಕ್ಷೆ ಇವೆರಡನ್ನು ಒಂದೇ ಅರ್ಥದಲ್ಲಿ ತಿಳಿಯಲಾಗುತ್ತದೆಯಾದರೂ ಸಹ ಮುಸ್ಲಿಮ್ ಕಾನೂನಿನಲ್ಲಿ ಇವೆರಡೂ ಒಂದು ಸಂರಕ್ಷಕತ್ವದ ಬೇರೆ ಬೇರೆ ಮುಖಗಳಾಗಿವೆ ಮತ್ತು ಇವು ಪ್ರತ್ಯೇಕ ಪ್ರತ್ಯೇಕವಾದ ನಿಯಮಗಳಿಂದ ಶಾಸಿಸಲ್ಪಟ್ಟಿರುತ್ತವೆ. ಒಂದು ಮಗುವಿನ ದೇಹದ ಸಂರಕ್ಷಕತ್ವವೆಂದರೆ ಒಂದು ಮಗುವು ಅಲ್ಪವಯಿಯಾಗಿದ್ದಾಗ ಅದರ ಮೇಲೆ ಒಂದು ನಿಯಂತ್ರಣವನ್ನಿಟ್ಟುಕೊಳ್ಳುವದು. ತಂದೆ ಅಥವಾ ಅವನ ನಿಷ್ಪಾದಕ ಅಥವಾ ಅಂಥವರಿಲ್ಲದಾಗ ಪೈತೃಕ ಅಜ್ಜ ಇವರು ಒಬ್ಬ ಅಲ್ಪವಯಿಯ ದೇಹದ ನೈಸರ್ಗಿಕ ಸಂರಕ್ಷಕರಾಗಿರುವರು. ಮಗುವಿನ ಅಭಿರಕ್ಷೆಯೆಂದರೆ ಆ ಮಗುವು ಒಂದು ನಿರ್ದಿಷ್ಟವಾದ ವಯಸ್ಸಿಗೆ ಬರುವ ತನಕ ಅದರ ಶಾರೀರಿಕ ಕಬ್ಜೆಯಾಗಿರುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ತಾಯಿಯು ಒಬ್ಬ ನೈಸರ್ಗಿಕ ಸಂರಕ್ಷಕಳೆಂದು ಎಣಿಸಲ್ಪಡುವದಿಲ್ಲವಾದರೂ ಸಹ ಅವಳು ಆ ಮಗುವು ಒಂದು ನಿರ್ದಿಷ್ಟವಾದ ವಯಸ್ಸಿಗೆ ಬರುವ ತನಕ ಅದರ ಅಭಿರಕ್ಷೆಯನ್ನು ಪಡೆಯಲು ಒಂದು ಹಕ್ಕನ್ನು ಹೊಂದಿರುವಳು. ಆದರೆ ತಂದೆ ಅಥವಾ ಪೈತೃಕ ಅಜ್ಜನು ಒಬ್ಬ ಅಲ್ಪವಯಿಯ ಆ ಇಡೀ ಅಲ್ಪವಯದ ಕಾಲಾವಧಿಯಲ್ಲಿ ಅದರ ದೇಹದ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ಹಕ್ಕುದಾರರಾಗಿರುವರು. ಆದುದರಿಂದ ತಾಯಿಯು ತನ್ನ ಮಗುವಿನ ಅಭಿರಕ್ಷೆಯನ್ನು ಪಡೆಯಲು ಹಕ್ಕುದಾರಳಾಗಿರುವಳು. ಈ ಹಕ್ಕು ಕೆಲವು ಕಾಲದ ತನಕ ಅವಳಲ್ಲಿರುತ್ತದೆ. ಇದಕ್ಕೆ ಕಾರಣವೇನೆಂದರೆ ಒಂದು ಮಗುವಿನ ಶೈಶವಾವಸ್ಥೆಯಲ್ಲಿ ತಾಯಿಯ ಹೊರತಾಗಿ ಇತರ ಯಾರೂ ಅದನ್ನು ಪಾಲನೆ ಮಾಡುವುದು ಸಾಧ್ಯವಾಗುವುದಿಲ್ಲ; ಆದರೆ ಆಕೆಯ ಈ ಅಭಿರಕ್ಷೆಯು ತಂದೆ ಅಥವಾ ಇತರ ನೈಸರ್ಗಿಕ ಸಂರಕ್ಷಕನ ಮೇಲ್ವಿಚಾರಣೆಗೆ ಬಾಧ್ಯವಾಗಿರುತ್ತವೆ.

ಒಂದು ಮಗುವಿನ ಅಭಿರಕ್ಷೆಗೆ ತಾಯಿಯ ಹಕ್ಕು

(Mother's Right to the Custody of a child)

ತನ್ನ ಮಗುವು ಒಂದು ನಿರ್ದಿಷ್ಟವಾದ ವಯಸ್ಸಿಗೆ ಬರುವ ತನಕ ಅದರ ಅಭಿರಕ್ಷೆ ಅಥವಾ ಶಾರೀರಿಕ ಕಬ್ಜೆಯನ್ನು ಹೊಂದಲು ಅದರ ತಾಯಿಯು ಹಕ್ಕುದಾರಳಾಗಿರುವಳು. ತಾಯಿಯು ಆ ಮಗುವಿನೊಂದಿಗಿನ ತನ್ನ ಒಂದು ವಿಶಿಷ್ಟವಾದ ಸಂಬಂಧದಿಂದಾಗಿ ಆ ಮಗುವಿಗೆ ನೈಸರ್ಗಿಕ ಪ್ರೀತಿ ಮತ್ತು ವಾತ್ಸಲ್ಯವನ್ನು ಕೊಡಲು ಅತ್ಯುತ್ತಮ ವ್ಯಕ್ತಿಯಾಗಿರುವಳು ಎಂಬ ಒಂದು ಪೂರ್ವಭಾವನೆಯ ಮೇಲೆ ಈ ನಿಯಮವು ಆಧಾರಿತವಾಗಿದೆ. ತಾಯಿಗೆ ತನ್ನ ಮಗುವಿನ ಅಭಿರಕ್ಷೆಯನ್ನು ನಿಸರ್ಗವೇ ಕೊಟ್ಟಿದೆಯೆಂದು ಹೇಳಲಾಗುತ್ತದೆ. ಏಕೆಂದರೆ ಮಗುವು ಜನಿಸುವುದಕ್ಕಿಂತ ಮೊದಲು ತಾಯಿಯ ಗರ್ಭದಲ್ಲಿರುತ್ತದೆ.

ಒಂದೊಮ್ಮೆ ಆ ಮಗುವು ಗಂಡುಮಗುವಾಗಿದ್ದರೆ ತಾಯಿಯು ಆ ಮಗುವಿನ ಅಭಿರಕ್ಷೆಯನ್ನು ಅದು ಏಳು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸುವ ತನಕ ಹೊಂದಬಹುದು. ಒಂದೊಮ್ಮೆ ಆ ಮಗುವು ಒಂದು ಹೆಣ್ಣಾಗಿದ್ದರೆ ಆ ಹೆಣ್ಣು ತನ್ನ ತಾರುಣ್ಯವನ್ನು ಮುಟ್ಟುವ ತನಕ ಆಕೆಯು ಅದರ ಅಭಿರಕ್ಷೆಯನ್ನು ಹೊಂದುವಳು,

ಒಂದು ಮಗುವು ಗಂಡುಮಗುವಾಗಿದ್ದರೆ ಅದು ಏಳು ವರ್ಷ ದಾಟುವ ತನಕ ಮತ್ತು ಅದೊಂದು ಹೆಣ್ಣುಮಗುವಾಗಿದ್ದರೆ ಅದು ತಾರುಣ್ಯವನ್ನು ಮುಟ್ಟುವ ತನಕ ಮತ್ತು ಆ ಮಗುವು ಒಂದೊಮ್ಮೆ ಪತಿಯಿಂದ ವಿಚ್ಛೇದಿತಳಾದರೆ ಅಥವಾ ವಿಧವೆಯಾಗಿದ್ದರೆ ಮತ್ತು ಅದು ಪುನರ್‌ವಿವಾಹವಾಗದಿದ್ದರೆ ತಾಯಿಯು ಅದರ ಅಭಿರಕ್ಷೆಯನ್ನು ಹೊಂದಲು ಹಕ್ಕುದಾರಳಾಗುವಳು. ಅದಲ್ಲದೆ ಒಂದೊಮ್ಮೆ ಒಬ್ಬ ತಾಯಿಯು ಮುಸಲ್ಮಾನಳಾಗಿರುವುದು ನಿಂತುಬಿಟ್ಟರೂ ಸಹ ಆ ಮಗುವಿನ ಅಭಿರಕ್ಷೆಯನ್ನು ಹೊಂದಲು ಆಕೆಗೆ ಒಂದು ಕಾನೂನಿನ ವಿಶೇಷಾಧಿಕಾರವಿದೆ. ತಾಯಿಯು ತನ್ನ ಮಗುವಿನ ಅಭಿರಕ್ಷೆಯನ್ನು ಹೊಂದಲು ಆಕೆಗೆ ಅದರೊಂದಿಗಿರುವ ಒಂದು ವಿಶಿಷ್ಟವಾದ ಸಂಬಂಧವೇ ಕಾರಣವೆಂದು ಈಗಾಗಲೇ ಹೇಳಲಾಗಿದೆ. ಆದುದರಿಂದ ಆಕೆಯು ತನ್ನ ಅಭಿರಕ್ಷೆಯಲ್ಲಿರುವ ಈ ಮಗುವನ್ನು ಇನ್ನೊಬ್ಬನ ಅಭಿರಕ್ಷೆಗೆ ಕೊಡುವಂತಿಲ್ಲ. ತಾಯಿಯ ಬಡತನ ಅಥವಾ ಅಸಮರ್ಥತೆ ಇವು ತನ್ನ ಮಗುವಿನ ಮೇಲೆ ಆಕೆಗಿರುವ ಅಭಿರಕ್ಷೆಯನ್ನು ಆಕೆಯಿಂದ ವಂಚಿಸುವುದಿಲ್ಲ. ಒಂದೊಮ್ಮೆ ತಾಯಿಯು ಬಡವಳಾಗಿದ್ದರೆ ಅಲ್ಲಿ ಆ ಮಗುವಿನ ಪಾಲನೆಗಾಗಿ ಸಾಕಷ್ಟು ವೆಚ್ಚವನ್ನು ಕೊಡುವುದು ತಂದೆಯ ಕರ್ತವ್ಯವಾಗಿರುತ್ತದೆ.

ಈ ಕೆಳಗಿನ ಪರಿಸ್ಥಿತಿಗಳಲ್ಲಿ ತಾಯಿಯು ಒಂದು ಮಗುವಿನ ಅಭಿರಕ್ಷೆಯನ್ನು ಹೊಂದಲು ಅನರ್ಹಳಾಗುವಳು :

ಎ) ವಿವಾಹ ವಿಚ್ಛೇದಿತಳಾದ ಅಥವಾ ವಿಧವೆಯಾದ ತಾಯಿಯು, ಒಂದು ಮಗುವಿನ ಅಭಿರಕ್ಷೆಯನ್ನು ಹೊಂದಿ ಇನ್ನೊಬ್ಬ ಪತಿಯನ್ನು ಪುನರ್ವಿವಾಹಿತಳಾಗಿದ್ದರೆ; ಮತ್ತು

ಬಿ) ಒಂದೊಮ್ಮೆ ಆ ತಾಯಿಯು ಅನೈತಿಕ ಜೀವನವನ್ನು ನಡೆಸುತ್ತಿರುವಳೆಂದಾದರೆ ಅಥವಾ ಅವಳೊಬ್ಬ ಕೆಟ್ಟ ಚಾರಿತ್ರ್ಯದವಳಾಗಿದ್ದರೆ ಅಥವಾ ಅನ್ಯಥಾ ಅವಳು ಅಂತಹ ನಡತೆಯ ಅಪರಾಧ ಮಾಡಿರುವಳಾದರೆ ಮತ್ತು ಅವಳ ಸಂಗಡ ಮಗುವನ್ನಿಡುವುದು ಮಗುವಿನ ಹಿತಕ್ಕೆ ಹಾನಿಕಾರಕವಾಗಿದ್ದರೆ,

ಸಿ) ಒಂದೊಮ್ಮೆ ಅವಳು ಆ ಮಗುವಿನ ಬಗ್ಗೆ ಯುಕ್ತ ಕಾಳಜಿ ವಹಿಸುತ್ತಿಲ್ಲವೆಂದಾದರೆ—

ತಾಯಿಯ ಗೈರು ಹಾಜರಿಯಲ್ಲಿ ಅಥವಾ ಮೇಲೆ ಹೇಳಲಾದ ಕಾರಣಗಳಿಂದಾಗಿ ಆಕೆಯು ಅನರ್ಹಗೊಳಿಸಲ್ಪಟ್ಟಿದ್ದರೆ ಈ ಕೆಳಗಿನ ಮಗುವಿನ ಹೆಣ್ಣು ಸಂಬಂಧಿ

ರರು ಅದರ ಅಭಿರಕ್ಷೆಯನ್ನು ಹೊಂದುವ ಹಕ್ಕನ್ನು ಪಡೆದಿರುವರು, ಅವರೊಳಗಿನ ಆದ್ಯತಾ ಯಾದಿಯು ಈ ಕೆಳಗಿನಂತಿದೆ:

I. ತಾಯಿಯ ತಾಯಿ;

II. ತಂದೆಯ ತಾಯಿ;

III. ತಾಯಿಯ ಅಜ್ಜ;

IV. ತಂದೆಯ ಅಜ್ಜಿ;

V. ಪೂರ್ಣ ಸಹೋದರಿ;

VI. ಏಕೋದರ ಸಹೋದರಿ;

VII. ಪೂರ್ಣ ಸಹೋದರಿಯ ಮಗಳು;

VIII. ಏಕೋದರ ಸಹೋದರಿಯ ಮಗಳು;

IX. ಪೂರ್ಣ ಮಾತೃ ಸಹೋದರ;

X. ಏಕೋದರ ಮಾತೃ ಸಹೋದರಿ, ಮತ್ತು

XI. ಪೂರ್ಣ ಪಿತೃ ಸಹೋದರಿ.

ಮೇಲಿನ ಯಾಧಿಯಲ್ಲಿ ಪಿತೃಸಹೋದರಿ ಮತ್ತು ಪೈತೃಕ ಅಜ್ಜಿ ಇವರನ್ನು ಕೂಡಿಸಲಾಗಿದ್ದರೂ ಸಹ ಇಲ್ಲಿ ಹೇಳಲಾದ ಹೆಣ್ಣು ಸಂಬಂಧಿಕರಲ್ಲಿ ರಕ್ತಸಂಬಂಧಿತ ಸಹೋದರಿ ಮತ್ತು ರಕ್ತಸಂಬಂಧಿತ ಸಹೋದರಿಯ ಮಗಳನ್ನು ಸೇರಿಸಲಾಗಿಲ್ಲ. ಮುಲ್ಲಾರವರ ಅಭಿಪ್ರಾಯದ ಪ್ರಕಾರ ಒಂದು ಆಕಸ್ಮಿಕತೆಯಿಂದಾಗಿ ಇವರು ಈ ಯಾದಿಯಿಂದ ಬಿಟ್ಟುಬಿಡಲ್ಪಟ್ಟಿರುವರು. ಇಲ್ಲಿ ಆದ್ಯತೆಯ ಅನುಕ್ರಮವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಾಗುತ್ತದೆ. ಈ ಯಾದಿಯಲ್ಲಿ ಹೇಳಲ್ಪಟ್ಟ ಒಬ್ಬ ಹೆಣ್ಣು ಸಂಬಂಧಿಕಳು ಅನರ್ಹಳಾಗಿರುವ ಹೊರತು ಅವಳ ಮೇಲೆ ಅವಳಿಗಿಂತ ಕೆಳಗೆ ಬರುವ ಇತರ ಸಂಬಂಧಿಕರಿಗೆ ಆದ್ಯತೆಯನ್ನು ಕೊಡುವಂತಿಲ್ಲ. ತಂದೆಯು ತನ್ನ ಅಲ್ಪವಯಿ ಮಗುವಿನ ಒಬ್ಬ ನೈಸರ್ಗಿಕ ಸಂರಕ್ಷಕನಾಗಿರುವನಾದರೂ ಸಹ ಅವನಿಗೆ ಮರಣ ಶಾಸನದಿಂದ ಒಬ್ಬ ಸಂರಕ್ಷಕನನ್ನು ನೇಮಿಸುವ ಯಾವತ್ತೂ ಹಕ್ಕಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಬ್ಬ ತಾಯಿಯು ತನ್ನ ಮಗುವು ಎರಡು ವರ್ಷ ಪ್ರಾಯದವನಾಗುವ ತನಕ ಮತ್ತು ಅದೊಂದು ಹೆಣ್ಣು ಮಗುವಾಗಿದ್ದರೆ ಅದು ಏಳು ವರ್ಷಗಳ ಪ್ರಾಯವನ್ನು ಮೀರುವ ತನಕ ಅದರ ಅಭಿರಕ್ಷೆಗೆ ಹಕ್ಕುಳ್ಳವಳಾಗುವಳು. ಒಂದೊಮ್ಮೆ ಆ ಗಂಡುಮಗುವು ಎರಡು ವರ್ಷ ಪ್ರಾಯವನ್ನು ಮುಗಿಸು

ವುದಕ್ಕಿಂತ ಮೊದಲು ಅಥವಾ ಆ ಹೆಣ್ಣು ತಾರುಣ್ಯದ ವಯಸ್ಸಿಗೆ ಬರುವುದಕ್ಕಿಂತ ಮೊದಲು ಅದರ ತಾಯಿಯು ಮೃತಳಾದರೆ ಅಲ್ಲಿ ಅಂತಹ ಮಗುವಿನ ಅಭಿರಕ್ಷೆಯು ಅದರ ತಂದೆಗೆ ಕೊಡಲಾಗುತ್ತದೆ. ತಂದೆಯ ಗೈರು ಹಾಜರಿಯಲ್ಲಿ ತಂದೆಯ ತಂದೆಯು ಆ ಮಗುವಿನ ಅಭಿರಕ್ಷೆಗೆ ಹಕ್ಕುದಾರನಾಗುವನು. ಒಂದೊಮ್ಮೆ ತಾಯಿ ಅಥವಾ ತಂದೆ ಅಥವಾ ತಂದೆಯ ತಂದೆ ಇಲ್ಲದಿದ್ದರೆ ಆ ಮಗುವಿನ ಅಭಿರಕ್ಷೆಗೆ ಯಾರು ಹಕ್ಕುದಾರರೆಂಬ ಬಗ್ಗೆ ಇಲ್ಲೇನೂ ಹೇಳಲಾಗಿಲ್ಲ.

ಒಂದು ಮಗುವಿನ ಅಭಿರಕ್ಷೆಗೆ ತಂದೆಯ ಹಕ್ಕು

(Father's Right to the custody of a child)

ಒಬ್ಬ ತಂದೆಯು ತನ್ನ ಮಗುವಿನ ಅಲ್ಪವಯದ ಈ ಕೆಳಗಿನ ಎರಡು ಹಂತಗಳಲ್ಲಿ ಅದರ ಅಭಿರಕ್ಷೆಗೆ ಹಕ್ಕುದಾರನಾಗಿರುವನು:

ಎ) ತಾಯಿಯ ಗೈರು ಹಾಜರಿಯಲ್ಲಿ ಅಥವಾ ಆಕೆಯ ಅನರ್ಹತೆಯಲ್ಲಿ ಮತ್ತು ಆ ಮಗುವಿನ ಇತರ ಸ್ತ್ರೀ ಸಂಬಂಧಿಕರು ಇಲ್ಲದಾಗ ಒಬ್ಬ ಅಲ್ಪವಯಿ ಹುಡುಗನ ಬಗ್ಗೆ ಅವನ ತಂದೆಯು ಆ ಹುಡುಗನ ಏಳು ವರ್ಷಗಳ ವಯಸ್ಸಿನ ತನಕ ಮತ್ತು ಒಬ್ಬ ಹುಡುಗಿಯ ಸಂಬಂಧದಲ್ಲಿ ಆಕೆಯು ತಾರುಣ್ಯವನ್ನು ಪಡೆಯುವ ತನಕ ತಂದೆಯು ಅಂತಹ ಮಗುವಿನ ಅಭಿರಕ್ಷೆಯನ್ನು ಹೊಂದಲು ಹಕ್ಕುದಾರನಾಗಿರುವನು.

ಬಿ) ಏಳು ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಒಬ್ಬ ಹುಡುಗನ ಸಂಬಂಧದಲ್ಲಿ ಮತ್ತು ತಾರುಣ್ಯವನ್ನು ಮೀರಿರುವ ಒಬ್ಬ ಹುಡುಗಿಯ ಸಂಬಂಧದಲ್ಲಿ ತಂದೆಯು ಆ ಮಗುವಿನ ಒಬ್ಬ ನೈಸರ್ಗಿಕ ಸಂರಕ್ಷಕನ ರೀತಿಯಲ್ಲಿ ಅಭಿರಕ್ಷೆಯನ್ನು ಹೊಂದಲು ಹಕ್ಕುದಾರನಾಗಿರುವನು.

ಅದರ ಅಭಿರಕ್ಷೆಯ ಉದ್ದೇಶದಿಂದ ಒಂದು ಮಗುವಿನ ಅಲ್ಪವಯವು ಎರಡು ಕಾಲಾವಧಿಗಳಲ್ಲಿ ವಿಭಜಿಸಲಾಗಿದೆ. ಒಂದು ಗಂಡು ಮಗುವಿನ ಸಂಬಂಧದಲ್ಲಾದರೆ ಅಲ್ಪವಯದ ಮೊದಲನೇ ಹಂತವು ಅದರ ಜನನದಿಂದ ಅದು ಏಳು ವರ್ಷಗಳ ವಯಸ್ಸನ್ನು ದಾಟುವ ತನಕ, ಮತ್ತು ಒಂದು ಹೆಣ್ಣು ಮಗುವಾದರೆ ಅದರ ಜನನದಿಂದ ಅದು ತಾರುಣ್ಯವನ್ನು ಸೇರುವ ತನಕ. ಎರಡನೇ ಹಂತದಲ್ಲಿ ಏಳನೇ ವರ್ಷವು ಮುಗಿದು ಆ ಹುಡುಗನು ೧೮ ವರ್ಷಗಳ ಪ್ರಾಯವನ್ನು ಮುಗಿಸುವ ತನಕ ಮತ್ತು ಹುಡುಗಿಯ ಸಂಬಂಧದಲ್ಲಿ ಆಕೆಯು ಅವಿವಾಹಿತಳಾಗಿದ್ದು ೧೮ ವರ್ಷ ವಯಸ್ಸನ್ನು ದಾಟುವ ತನಕ. ಮೊದಲನೇ ಹಂತದಲ್ಲಿ ಆ ಅಭಿರಕ್ಷೆಯು ತಾಯಿಯದ್ದಾಗಿರುತ್ತದೆ ಮತ್ತು ಎರಡನೆಯ ಹಂತದಲ್ಲಿ ಅದು ತಂದೆಗೆ ಸೇರುತ್ತದೆ. ಈ ರೀತಿಯಾಗಿ ತಂದೆಯು ಎರಡು ಪರಿಸ್ಥಿತಿಗಳಲ್ಲಿ ತನ್ನ ಅಲ್ಪವಯಿ ಮಕ್ಕಳ ಅಭಿರಕ್ಷೆಗೆ ಹಕ್ಕುದಾರನಾಗಿರುವದನ್ನು ಇಲ್ಲಿ ಕಾಣಬಹುದು.

ತಂದೆಯು ಗೈರು ಹಾಜರಿಯಲ್ಲಿ ಒಂದು ಮಗುವಿನ ಅಭಿರಕ್ಷೆಯು ಅದರ ಪೈತೃಕ ಗಂಡು ಸಂಬಂಧಿಕರಿಗೆ ಈ ಕೆಳಗಿನ ಆದ್ಯತೆಯ ಅನುಕ್ರಮದಲ್ಲಿ ಸೇರುತ್ತದೆ :

I. ಅತ್ಯಂತ ಸಮೀಪದ ಪೈತೃಕ ಅಜ್ಜ ;
II. ಪೂರ್ಣ ಸಹೋದರ;
III. ರಕ್ತ ಸಂಬಂಧೀ ಸಹೋದರ;
IV. ಪೂರ್ಣ ಸಹೋದರನ ಮಗ;
V. ರಕ್ತ ಸಂಬಂಧೀ ಸಹೋದರನ ಮಗ;
VI. ತಂದೆಯ ಪೂರ್ಣ ಸಹೋದರ;
VII. ತಂದೆಯ ರಕ್ತ ಸಂಬಂಧೀ ಸಹೋದರ;
VIII. ತಂದೆಯ ಪೂರ್ಣ ಸಹೋದರನ ಮಗ; ಮತ್ತು
IX. ತಂದೆಯ ರಕ್ತ ಸಂಬಂಧೀ ಸಹೋದರನ ಮಗ;

ಮೇಲೆ ಹೇಳಲ್ಪಟ್ಟ ಗಂಡು ಸಂಬಂಧಿಕರು ಹೊಂದುವ ಅಲ್ಪವಯಿಯ ಅಭಿರಕ್ಷೆಯು ಒಂದು ಪರಂತುಕಕ್ಕೆ ಬಾಧ್ಯವಾಗಿದೆ. ಅದೇನೆಂದರೆ ಆ ಗಂಡು ಸಂಬಂಧಿಕನು ಆ ಅವಿವಾಹಿತ ಹುಡುಗಿಯ ಅಭಿರಕ್ಷೆಯನ್ನು ಹೊಂದಬೇಕಾದರೆ ಅವನು ಆಕೆಯ ನಿಷೇಧಿತ ಹಂತದೊಳಗೆ ಬಂದಿರಬೇಕು. ಉದಾಹರಣೆಗಾಗಿ, ಒಂದು ಗಂಡುಮಗುವನ್ನು ತಂದೆಯ ಪೂರ್ಣ ಸಹೋದರನ ಒಬ್ಬ ಮಗನ ಅಭಿರಕ್ಷೆಯಲ್ಲಿ ಹಾಕಬಹುದು. ಆದರೆ ಒಂದು ಹೆಣ್ಣುಮಗುವನ್ನು ಅವನ ಅಭಿರಕ್ಷೆಯಲ್ಲಿ ಹಾಕುವಂತಿಲ್ಲ. ಏಕೆಂದರೆ ಮುಸ್ಲಿಮ್ ಕಾನೂನಿನಿಂದ ಗೊತ್ತುಮಾಡಲ್ಪಟ್ಟ ವೈವಾಹಿಕ ನಿಷೇಧದ ಸಂಬಂಧದೊಳಗೆ ಇವರು ಬರುವುದಿಲ್ಲ. ಈ ನಿಯಮದ ಉದ್ದೇಶವೇನೆಂದರೆ ಒಬ್ಬ ಅವಿವಾಹಿತ ಹೆಣ್ಣಿನ ಅಭಿರಕ್ಷೆಯ ಅನುಚಿತ ಲಾಭಪಡೆಯುವ ಸಂಭವವನ್ನು ತಪ್ಪಿಸುವದಾಗಿರುತ್ತದೆ.

ತಂದೆ ಅಥವಾ ಅವನ ಗೈರುಹಾಜರಿಯಲ್ಲಿ ಪೈತೃಕ ಅಜ್ಜನು ಆ ಅಲ್ಪವಯಿಯ ದೇಹದ ಬಗ್ಗೆ ಮರಣ ಶಾಸನದಿಂದ ಒಬ್ಬ ಸಂರಕ್ಷಕನನ್ನು ನೇಮಿಸಬಹುದು. ಆದರೆ ಆ ಮರಣ ಶಾಸನವನ್ನು ನಿಷ್ಪಾದನೆಗೊಳಿಸುವಾಗ ತಂದೆಯು ಸ್ವತಃ ಆ ಮಗುವಿನ ಅಭಿರಕ್ಷಣೆಗೆ ಹಕ್ಕುದಾರನಾಗಿರಬೇಕು,

ಮೇಲೆ ಹೇಳಲ್ಪಟ್ಟ ಗಂಡು ಸಂಬಂಧಿಕರು ಅಥವಾ ಮರಣ ಶಾಸನದಿಂದ ಸಂರಕ್ಷಕರು ಇಲ್ಲದಾಗ ಅಥವಾ ಅವರು ಅಯೋಗ್ಯರೆಂದು ಕಂಡುಬಂದರೆ ಒಬ್ಬ ಅಲ್ಪವಯಿಯ ದೇಹದ ಬಗ್ಗೆ ಒಬ್ಬ ಸಂರಕ್ಷಕನನ್ನು ನೇಮಿಸಲು ನ್ಯಾಯಾಲಯವು ಶಕ್ತಿ ಪಡೆದಿರುತ್ತದೆ.

ಒಂದು ಅಧರ್ಮಜದ ಮಗುವಿನ ಅಭಿರಕ್ಷೆ
(Custody of an illegitimate child)

ಒಂದು ಅಧರ್ಮಜ ಮಗುವಿನ ಕಲ್ಪಿತ ತಂದೆಯು ಅದರ ಸಂರಕ್ಷಕನಾಗುವುದಿಲ್ಲ. ಒಂದು ಅಧರ್ಮಜ ಮಗುವಿನ ಸಂರಕ್ಷಕತ್ವವು ಅವರ ತಾಯಿಗೆ ಸೇರುತ್ತದೆ. ಆದುದರಿಂದ ತಾಯಿ ಮಾತ್ರ ಅಂತಹ ಒಂದು ಮಗುವಿನ ನೈಸರ್ಗಿಕ ಸಂರಕ್ಷಕಳಾಗಿರಬಹುದು. ತಾಯಿಯು ಇಲ್ಲದಾಗ, ಆಕೆಯ ಪ್ರತಿಸ್ಥಾಪಿತರು ಆ ಮಗುವಿನ ಅಭಿರಕ್ಷೆಗೆ ಹಕ್ಕುದಾರರಾಗುವರು.

ಒಬ್ಬ ಅಲ್ಪವಯೀ ಪತ್ನಿಯ ಅಭಿರಕ್ಷೆ
(Custody of a minor wife)

ಒಂದೊಮ್ಮೆ ಒಬ್ಬ ಮುಸ್ಲಿಮ್ ಹುಡುಗಿಯು ತಾರುಣ್ಯವನ್ನು ಮುಟ್ಟುವದಕ್ಕಿಂತ ಮೊದಲೇ ವಿವಾಹಿತಳಾಗಿದ್ದರೆ ಆಕೆಯು ತಾರುಣ್ಯದ ವಯಸ್ಸನ್ನು ಮುಟ್ಟುವತನಕ ಆಕೆಯ ಅಭಿರಕ್ಷೆಯು ಆಕೆಯ ಗಂಡನಿಗೆ ಕೊಡಲಾಗುವದಿಲ್ಲ. 'ನೂರ್ ಖಾದಿರ್ ವಿ. ಜುಲೇಖಾ ಬಿಬೀ'(Nur Kadir V. Zuleikha Bibi) ಪ್ರಕರಣದಲ್ಲಿ ಕೊಡಲಾದ ತೀರ್ಪಿನ ಪ್ರಕಾರ ಮುಸ್ಲಿಮ್ ಕಾನೂನಿನಲ್ಲಿ ತಾಯಿ ಅಥವಾ ಒಬ್ಬ ಪ್ರತಿಸ್ಥಾಪಿತ ತಾಯಿಯು ಒಬ್ಬ ಅಲ್ಪವಯಿ ಪತ್ನಿಯ ಗಂಡನ ಪ್ರತಿಯಾಗಿ ಆ ಅಲ್ಪವಯಿ ಪತ್ನಿಯ ಅಭಿರಕ್ಷೆಯನ್ನು ಹೊಂದಲು ಹಕ್ಕುದಾರಳಾಗಿರುವಳು. ಹೀಗೆ ಮುಸ್ಲಿಮ್ ಕಾನೂನಿನ ಪ್ರಕಾರ ತಾರುಣ್ಯಕ್ಕೆ ಬಾರದ ಒಬ್ಬ ಮುಸ್ಲಿಮ್ ಪತ್ನಿಯ ಅಭಿರಕ್ಷೆಯು ಆಕೆಯ ತಾಯಿಗೆ ಹೋಗುತ್ತದಲ್ಲದೆ ಗಂಡನಿಗಲ್ಲ. ಆದರೆ ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦ (Guardians and wards Act, 1890) ಇದರ ಕ. ೧೯ರ ಪ್ರಕಾರ ಪತಿಯು ತನ್ನ ಅಲ್ಪವಯಿ ಪತ್ನಿಯ ಸಂರಕ್ಷಕನಾಗುವ ಹಕ್ಕನ್ನು ಹೊಂದಿರುವನು ಮತ್ತು ನ್ಯಾಯಾಲಯಕ್ಕೆ ಅವನು ಸಂರಕ್ಷಕನಾಗಲು ಅಯೋಗ್ಯನೆಂದು ಕಂಡುಬರುವ ಹೊರತು ಅವನನ್ನು ತನ್ನ ಅಲ್ಪವಯಿ ಪತ್ನಿಯ ಸಂರಕ್ಷಕನಾಗುವದರಿಂದ ತಪ್ಪಿಸುವಂತಿಲ್ಲ.

ವಿವಾಹಕ್ಕಾಗಿ ಸಂರಕ್ಷಕತ್ವ (Guardianship for Marriage)

ತಾರುಣ್ಯದ ವಯಸ್ಸಿಗಿಂತ ಕಡಿಮೆ ವಯಸ್ಸಿನ ಒಬ್ಬ ಹುಡುಗ ಅಥವಾ ಒಬ್ಬ ಹುಡುಗಿಯ ವಿವಾಹವು ಅವರ ಒಬ್ಬ ವಿವಾಹ ಸಂರಕ್ಷಕನಿಂದ ಮಾಡಲ್ಪಟ್ಟ ಹೊರತು ಅದು ವಿಧ್ಯುಕ್ತವೆಂದು ಎಣಿಸಲ್ಪಡುವುದಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವಿವಾಹ ಸಂರಕ್ಷಕನೆಂದರೆ ಇನ್ನೊಬ್ಬ ವ್ಯಕ್ತಿಯ ವಿವಾಹದ ಕರಾರು ಮಾಡಲು ಪ್ರಾಧಿಕೃತನಾಗಿರುವ ವ್ಯಕ್ತಿ. ಈ ಪ್ರಾಧಿಕಾರವನ್ನು ವಿವಾಹಕ್ಕಾಗಿ ಸಂರಕ್ಷಕತ್ವ ಎಂದು ಕರೆಯಲಾಗುತ್ತದೆ. ವಿವಾಹಕ್ಕಾಗಿ ಸಂರಕ್ಷಕತ್ವವು ಒಂದು ಬೇರೆ ರೀತಿಯ ಸಂರಕ್ಷಕತ್ವವಾಗಿರುತ್ತದೆ ಮತ್ತು ಅದನ್ನು ಒಬ್ಬ ಅಲ್ಪವಯಿಯ

ದೇಹದ ಅಥವಾ ಸ್ವತ್ತಿನ ಸಂರಕ್ಷಕತ್ವದಿಂದ ಪ್ರತ್ಯೇಕಿಸಬೇಕಾಗುತ್ತದೆ. ಒಬ್ಬ ಅಲ್ಪವಯಿಯ ದೇಹ ಅಥವಾ ಸ್ವತ್ತಿನ ಸಂಬಂಧದಲ್ಲಿ ಸಂರಕ್ಷಕನೆಂಬುದಾಗಿ ನೇಮಿಸಲ್ಪಟ್ಟ ಒಬ್ಬ ವ್ಯಕ್ತಿಯು ಆ ಅಲ್ಪವಯಿಯ ವಿವಾಹದ ಕರಾರು ಮಾಡಲು ಒಬ್ಬ ಸಂರಕ್ಷನಾಗುವದಿಲ್ಲ. ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦ (Guardian and wards act, 1890) ಇದರ ಉಪಬಂಧಗಳು ಒಬ್ಬ ಅಲ್ಪವಯಿಯ ದೇಹ ಅಥವಾ ಸ್ವತ್ತಿನ ಸಂರಕ್ಷಕತ್ವಕ್ಕೆ ಮಾತ್ರ ಅನ್ವಯವಾಗುತ್ತವಲ್ಲದೆ ಅವನ ವೈವಾಹಿಕ ವಿಷಯಗಳ ಸಂಬಂಧದಲ್ಲಿ ಅನ್ವಯವಾಗುವುದಿಲ್ಲ. ಆದುದರಿಂದ ವೈವಾಹಿಕ ಸಂರಕ್ಷಕತ್ವದ ನಿಯಮಗಳು ಶುದ್ಧ ಮುಸ್ಲಿಮ್ ಕಾನೂನಿನಿಂದ ಶಾಸಿತವಾಗುತ್ತವೆ. ಒಬ್ಬ ವಿವಾಹ ಸಂರಕ್ಷಕನು ಒಬ್ಬ ಅಲ್ಪವಯಿಯ ವಿವಾಹದ ಕರಾರನ್ನಷ್ಟೇ ಅಲ್ಲ. ಬದಲಾಗಿ ಒಬ್ಬ ಚಿತ್ತವಿಕಲ ಹುಡುಗ ಅಥವಾ ಹುಡುಗಿಯ ವಿವಾಹದ ಕರಾರನ್ನು ಮಾಡಲೂ ಸಮರ್ಥನಾಗಿರುವನು. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವಿವಾಹ ಸಂರಕ್ಷಕನು ತನ್ನ ಸಂರಕ್ಷಿತರ ಸಮ್ಮತಿಯಿಲ್ಲದೆಯೂ ಸಹ ಅವರ ಮೇಲೆ ವೈವಾಹಿಕ ಪ್ರಾಸ್ಥಿತಿಯನ್ನು ಪ್ರದಾನಮಾಡಲು ಹಕ್ಕುಳ್ಳವನಾಗುವನು.

ಯಾರೆಲ್ಲ ವೈವಾಹಿಕ ಸಂರಕ್ಷಕರು? (Who are the marriage Guardians?)

ಈ ಕೆಳಗಿನ ವ್ಯಕ್ತಿಗಳು ಆದ್ಯತೆಯ ಅನುಕ್ರಮಣದಲ್ಲಿ ಒಬ್ಬ ಅಲ್ಪವಯಿಯ ವಿವಾಹದ ಸಂರಕ್ಷಕರಾಗಿ ವ್ಯವಹರಿಸಲು ಹಕ್ಕುದಾರರಾಗಿರುವರು:

೧) ತಂದೆ;

೨) ಪೈತೃಕ ಅಜ್ಜ, ಎಷ್ಟೇ ಮೇಲಿನವರಾಗಿರಲಿ,

೩) ಸಹೋದರ ಅಥವಾ ತಂದೆಯ ಕುಟುಂಬದ ಇತರ ಗಂಡು ಸದಸ್ಯರು

೪) ತಾಯಿ

೫) ಮಾತೃಕ ಸಂಬಂಧಿಕರು, ಉದಾಹರಣೆಗಾಗಿ, ಮಾತೃ ಸಹೋದರ ಮತ್ತು ಮಾತೃ ಸಹೋದರಿ ಹಾಗೂ ನಿಷೇಧಿತ ಹಂತದೊಳಗಿನ ಇತರ ಮಾತೃಕ ಸಂಬಂಧಿಕರು

೬) ಖಾಜಿ ಅಥವಾ ನ್ಯಾಯಾಲಯ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಅಲ್ಪವಯಿಯ ವಿವಾಹದ ಸಂರಕ್ಷಕರು ಈ ಕೆಳಗಿನವರು ಮಾತ್ರ ಆಗಿರುವರು.

೧) ತಂದೆ, ಮತ್ತು ೨) ಪೈತೃಕ ಅಜ್ಜ

ವೈವಾಹಿಕ ಸಂರಕ್ಷಕನಾಗಿ ವ್ಯವಹರಿಸಲು ಹಕ್ಕುದಾರರಾಗಿರುವ ವ್ಯಕ್ತಿಗಳು ಮೇಲೆ ಹೇಳಲಾದ ಆದ್ಯತೆಯ ಪ್ರಕಾರ ವರ್ತಿಸಬೇಕಾಗುತ್ತದೆ ಮತ್ತು ಈ ಆದ್ಯತಾ ಅನುಕ್ರಮವು ಕಟ್ಟುನಿಟ್ಟಾಗಿ ಅನುಸರಿಸಲ್ಪಡಬೇಕಾಗುತ್ತದೆ. ಒಬ್ಬ ಅಲ್ಪವಯಿಯ ವಿವಾಹದ ಕರಾರು ಮಾಡಲು ಹಕ್ಕುದಾರನಾಗಿರುವ ಒಬ್ಬ ವಿವಾಹ ಸಂರಕ್ಷಕನು ಒಂದು ಮರಣಶಾಸನದಿಂದ ಈ ಕಾರಣಕ್ಕೋಸ್ಕರ ಇನ್ನೊಬ್ಬ ವ್ಯಕ್ತಿಯನ್ನು ನೇಮಿಸುವಂತಿಲ್ಲ ಹಾಗೂ ಅವನು ಈ ಆದ್ಯತೆಯ ಅನುಕ್ರಮವನ್ನು ಬದಲಾಯಿಸುವಂತಿಲ್ಲ. ವೈವಾಹಿಕ ಉದ್ದೇಶಗಳಿಗಾಗಿ ಮರಣಶಾಸನದಿಂದ ಸಂರಕ್ಷಕರನ್ನು ಮನ್ನಿಸಲಾಗುವುದಿಲ್ಲ. ಒಬ್ಬ ಸಮೀಪಸ್ಥ ಸಂರಕ್ಷಕನು ದೂರಸ್ಥ ಸಂರಕ್ಷಕನನ್ನು ಹೊರಗಿಡುವನು, ಮತ್ತು ಸಮೀಪಸ್ಥ ಸಂರಕ್ಷಕನು ಅಸ್ತಿತ್ವದಲ್ಲಿದ್ದಾಗ ದೂರಸ್ಥ ಸಂರಕ್ಷಕನು ಅಲ್ಪವಯಿಯ ವಿವಾಹದ ಕರಾರು ಮಾಡುವಂತಿಲ್ಲ. ಒಂದೊಮ್ಮೆ ಒಬ್ಬ ಅಲ್ಪವಯಿಯ ಸಮೀಪಸ್ಥ ಸಂರಕ್ಷಕನು ಜೀವಂತನಾಗಿದ್ದಾಗ ಆ ಅಲ್ಪವಯಿಯ ಒಬ್ಬ ದೂರಸ್ಥ ಸಂರಕ್ಷಕನು ಒಂದು ವಿವಾಹದ ಕರಾರನ್ನು ಮಾಡಿರುವನಾದರೆ ಮತ್ತು ಆ ಕರಾರಿಗೆ ಆ ಸಮೀಪಸ್ಥ ಸಂರಕ್ಷಕನ ಸಮ್ಮತಿಯಿಲ್ಲವಾದರೆ ಆ ವಿವಾಹವು ಶೂನ್ಯವಾಗುತ್ತದೆ ಮತ್ತು ಆ ವಿವಾಹವು ಒಂದೊಮ್ಮೆ ಪೂರ್ಣಗೊಂಡಿದೆಯಾದರೂ ಸಹ ಅದು ವಿಧ್ಯುಕ್ತವಾಗುವುದಿಲ್ಲ. ಆದರೆ ಒಬ್ಬ ದೂರಸ್ಥ ಸಂರಕ್ಷಕನು ಒಂದು ವಿವಾಹದ ಕರಾರನ್ನು ಮಾಡಿರುವನಾದರೆ ಮತ್ತು ಆ ಕರಾರು ಸಮೀಪಸ್ಥ ಸಂರಕ್ಷಕನಿಂದ ಅನುಸಮರ್ಥಿಸಲ್ಪಟ್ಟಿದೆಯೆಂದಾದರೆ ಅಲ್ಲಿ ಆ ವಿವಾಹವು ವಿಧ್ಯುಕ್ತಗೊಳ್ಳುತ್ತದೆ.

ಒಂದೊಮ್ಮೆ ಒಬ್ಬ ಸರಿಯಾದ ವಿವಾಹ ಸಂರಕ್ಷಕನು ತನ್ನ ಮಾನಸಿಕ ಅಸ್ವಾಸ್ಥ್ಯದಿಂದಾಗಿ ಒಂದು ವಿವಾಹದ ಕರಾರು ಮಾಡಲು ಅಸಮರ್ಥನಾಗಿದ್ದರೆ ಅಲ್ಲಿ ಅವನ ನಂತರದ ಇನ್ನೊಬ್ಬ ಸಂರಕ್ಷಕನು ಆ ವಿವಾಹದ ಕರಾರು ಮಾಡಬಹುದು. ಇದೇ ರೀತಿಯಲ್ಲಿ ಒಬ್ಬ ಅಲ್ಪವಯಿಯ ತಂದೆಯು ತನ್ನ ಅಲ್ಪವಯಿಗಿಂತ ತುಂಬಾ ದೂರದಲ್ಲಿದ್ದು ತನ್ನ ಅಲ್ಪವಯಿಯ ವಿವಾಹವನ್ನು ಮಾಡುವಂತಿಲ್ಲವೆಂದಾದರೆ ಅಲ್ಲಿ ಆದ್ಯತೆಯ ಅನುಕ್ರಮದಲ್ಲಿ ಆ ತಂದೆಯ ನಂತರ ಬರುವ ಸಂರಕ್ಷಕನು ಒಬ್ಬ ಅಲ್ಪವಯಿಯ ವಿವಾಹದ ಕರಾರನ್ನು ಮಾಡಬಹುದು. ಒಬ್ಬ ಮುಸ್ಲಿಂ ತಂದೆಯು ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿದ ಮೇಲೆ ತನ್ನ ಅಲ್ಪವಯಿ ಮಗುವಿನ ವಿವಾಹವನ್ನು ಮಾಡಬಹುದೋ ಎಂಬ ಬಗ್ಗೆ ಅನಿಶ್ಚಿತತೆಯಿದೆ.

ಹೆಣ್ಣು ಅಥವಾ ಗಂಡು ಮಗುವು ತಾರುಣ್ಯದ ವಯಸ್ಸಿಗೆ ಬಂದಾಗ ಅಲ್ಲಿ ಜಬರ (jabar) ಇದರ ಹಕ್ಕು ಅಥವಾ ವಿವಾಹ ಸಂರಕ್ಷಕತನದ ಹಕ್ಕು ಕೊನೆಗೊಳ್ಳುತ್ತದೆ. ಆದರೆ ಶಫಿ (Shafie) ಮತ್ತು ಮಲ್ಲಿಕಿ (Maliki) ಪರಂಪರೆಗಳ ಪ್ರಕಾರ ಒಬ್ಬ ಹೆಣ್ಣು ಮಗುವಿನ ಸಂಬಂಧದಲ್ಲಿ ಆಕೆಯ ವಿವಾಹವಾಗುವ ತನಕ ಸಂರಕ್ಷಕನ ಈ ಹಕ್ಕು ಮುಂದುವರಿಯುತ್ತದೆ.

ಸ್ವತ್ತಿನ ಸಂರಕ್ಷಕತ್ವ
(Guardianship of the Property)

ಅಲ್ಪವಯಿಯ ಸ್ವತ್ತಿನ ಕಾನೂನೀ ಸಂರಕ್ಷಕರು
(Legal Guardians of the Minor's Property)

ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ಈ ಕೆಳಗಿನ ವ್ಯಕ್ತಿಗಳು ಈ ಕೆಳಗೆ ತೋರಿಸಲಾದ ಆದ್ಯತೆಯ ಅನುಕ್ರಮದಲ್ಲಿ ಅಲ್ಪವಯಿಯ ಸ್ವತ್ತಿನ ಕಾನೂನೀ ಸಂರಕ್ಷಕರಾಗಿ ಮನ್ನಿಸಲ್ಪಟ್ಟಿರುವರು—

೧) ತಂದೆ

೨) ತಂದೆಯಿಂದ ಒಂದು ಮರಣ ಶಾಸನದ ಮೂಲಕ ನೇಮಿಸಲ್ಪಟ್ಟ ನಿಷ್ಪಾದಕರು.

೩) ಪೈತೃಕ ಅಜ್ಜ

೪) ಒಂದು ಮರಣ ಶಾಸನದ ಮೇರೆಗೆ ಪೈತೃಕ ಅಜ್ಜನಿಂದ ನೇಮಿಸಲ್ಪಟ್ಟ ನಿಷ್ಪಾದಕ.

ಒಬ್ಬ ಅಲ್ಪವಯಿಯ ಸ್ವತ್ತಿನ ಸಂರಕ್ಷಕತ್ವವು ಮೂಲತಃ ಆ ಅಲ್ಪವಯಿಯ ಒಬ್ಬ ನೈಸರ್ಗಿಕ ಸಂರಕ್ಷಕನಾಗಿರುವ ತಂದೆಗೆ ಸೇರುತ್ತದೆ. ತಂದೆಯ ಮರಣದ ಬಳಿಕ ತಂದೆಯಿಂದ ಮರಣಶಾಸನದ ಮೂಲಕ ನೇಮಿಸಲ್ಪಟ್ಟಿರುವ ಒಬ್ಬ ನಿಷ್ಪಾದಕನಿಗೆ ಈ ಹಕ್ಕು ಸೇರುತ್ತದೆ. ಇಂತಹ ಒಬ್ಬ ನಿಷ್ಪಾದಕನು ತಂದೆಯ ಮರಣ ಶಾಸನದಿಂದ ಪಡೆದಿರುವ ಪ್ರಾಧಿಕಾರದ ಮೇರೆಗೆ ಆ ಅಲ್ಪವಯಿಯ ಸ್ವತ್ತಿನ ಒಬ್ಬ ಕಾನೂನೀ ಸಂರಕ್ಷಕನಾಗಿ ವ್ಯವಹರಿಸುವನು. ನಿಷ್ಪಾದಕ ಸಂರಕ್ಷಕ ಇವನನ್ನು ಒಬ್ಬ ಮರಣಶಾಸನದಿಂದ ಸಂರಕ್ಷಕನೆಂಬುದಾಗಿಯೂ ಕರೆಯಲಾಗುತ್ತದೆ. ಏಕೆಂದರೆ ಅವನು ತಂದೆಯ ಮರಣಶಾಸನದಿಂದ ಒಬ್ಬ ಸಂರಕ್ಷಿತನಾಗಿ ನೇಮಿಸಲ್ಪಟ್ಟಿರುವವನಾಗಿರುವನು. ಒಂದೊಮ್ಮೆ ಒಬ್ಬ ವ್ಯಕ್ತಿಯು ನಿಷ್ಪಾದಕನಾಗಿ ಒಂದು ಮರಣ ಶಾಸನದಿಂದ ನೇಮಿಸಲ್ಪಟ್ಟಿಲ್ಲವೆಂದಾದರೆ ಆಗ ತಂದೆಯ ಮರಣದ ಬಳಿಕ ಆ ಅಲ್ಪವಯಿಯ ಪೈತೃಕ ಅಜ್ಜನು ಅವನ ಸ್ವತ್ತಿನ ಸಂರಕ್ಷಕನಾಗಿ ವ್ಯವಹರಿಸಲು ಹಕ್ಕುದಾರನಾಗುವನು. ಆ ಅಜ್ಜನ ಮರಣದ ಬಳಿಕ ಆ ಅಜ್ಜನಿಗೆ ಯಾವನಾದರೊಬ್ಬ ನಿಷ್ಪಾದಕನಿದ್ದರೆ ಅತನು ಆ ಅಲ್ಪವಯಿಯ ಸ್ವತ್ತಿನ ಸಂರಕ್ಷಕನಾಗಿ ವ್ಯವಹರಿಸುವನು. ಆದರೆ ಒಬ್ಬ ಅಲ್ಪವಯಿಗೆ ತಂದೆ ಅಥವಾ ತಂದೆಯ ನಿಷ್ಪಾದಕನು ಇಲ್ಲವಾದರೆ, ಹಾಗೂ ಪೈತೃಕ ಅಜ್ಜ ಮತ್ತು ಪೈತೃಕ ಅಜ್ಜನ ನಿಷ್ಪಾದಕನಿಲ್ಲವೆಂದಾದರೆ ಅಲ್ಲಿ ಆ ಅಲ್ಪವಯಿಯ ಸ್ವತ್ತಿನ ಬಗ್ಗೆ 'ಸಂರಕ್ಷಕ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦' ಇದರ ಮೇರೆಗೆ ನ್ಯಾಯಾಲಯವು ಒಬ್ಬ ಸಂರಕ್ಷಕನನ್ನು ನೇಮಿಸುತ್ತದೆ. ಹೀಗೆ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಅಲ್ಪವಯಿಯ ಸ್ವತ್ತಿನ ಬಗ್ಗೆ ಅವನ ತಂದೆ ಅಥವಾ ಪೈತೃಕ ಅಜ್ಜ ಇವರಷ್ಟೇ ಸಂರಕ್ಷಕರಾಗಿ ವ್ಯವಹರಿಸಬಹುದು. ಇತರ ಯಾವನೇ ಒಬ್ಬ ಸಂಬಂಧಿಕನು ಈ ಪ್ರಾಸ್ಥಿತಿಯನ್ನು ಪಡೆಯುವುದಿಲ್ಲ.

ಆದರೆ ತಂದೆ ಮತ್ತು ಪೈತೃಕ ಅಜ್ಜ ಇವರು ತಮ್ಮ ನಿಷ್ಪಾದಕರಾಗಿ ಯಾರನ್ನು ನೇಮಿಸುವರೋ ಅವರು ಮರಣಶಾಸನದಿಂದ ಸಂರಕ್ಷಕರಾಗಿ ಅಲ್ಪವಯಿಯು ಸ್ವತ್ತಿನ ವ್ಯವಹರಣೆ ಮಾಡಬಹುದು.

ಕಾನೂನೀ ಸಂರಕ್ಷಕನ ಶಕ್ತಿಗಳು (Powers of the legal Guardians)

ಒಬ್ಬ ಸಂರಕ್ಷಿತನ ಸ್ವತ್ತಿನ ಬಗ್ಗೆ ಅದರ ಸಂರಕ್ಷಕನು ಒಬ್ಬ ಸಾಮಾನ್ಯ ವಿವೇಕವುಳ್ಳ ವ್ಯಕ್ತಿಯು ತನ್ನ ಸ್ವಂತ ಸ್ವತ್ತಿನ ಬಗ್ಗೆ ಎಷ್ಟೊಂದು ಕಾಳಜಿ ವಹಿಸುತ್ತಿದ್ದನೋ ಅಷ್ಟೆ ಕಾಳಜಿಯನ್ನು ವಹಿಸಬೇಕಾಗುತ್ತದೆ; ಮತ್ತು 'ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦' ಇದರ ಉಪಬಂಧಗಳಿಗೆ ಬಾಧ್ಯನಾಗಿ ಆತನು ಆ ಅಲ್ಪವಯಿಯು ಸ್ವತ್ತಿನ ವಸೂಲಿ, ರಕ್ಷಣೆ ಮತ್ತು ಪ್ರಯೋಜನಕ್ಕಾಗಿ ಎಲ್ಲಾ ಯುಕ್ತ ಕೃತ್ಯಗಳನ್ನು ಮಾಡಬಹುದು. ಒಬ್ಬ ಅಲ್ಪವಯಿಯು ಸ್ವತ್ತಿನ ಸಂಬಂಧದಲ್ಲಿ ಯಾವ ರೀತಿಯಾಗಿ ವ್ಯವಹರಿಸಬೇಕೆಂದು ಒಬ್ಬ ಕಾನೂನೀ ಸಂರಕ್ಷಕನ ಶಕ್ತಿಗಳು ಆ ಅಲ್ಪವಯಿಯು ಸ್ವತ್ತಿನ ಸ್ವರೂಪವನ್ನು ಅವಲಂಬಿಸಿಕೊಂಡಿರುತ್ತವೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಸಂರಕ್ಷಕನು ತನ್ನ ಸಂರಕ್ಷಿತನ ಚರಸ್ವತ್ತಿನ ಹಸ್ತಾಂತರಣದ ಬಗ್ಗೆ ಸ್ಥಿರಸ್ವತ್ತಿಗಿಂತಲೂ ಹೆಚ್ಚಿನ ಶಕ್ತಿಯನ್ನು ಪಡೆದಿರುವನು. ಸ್ಥಿರ ಸ್ವತ್ತಿನ ಸಂಬಂಧದಲ್ಲಿ ಒಬ್ಬ ಕಾನೂನೀ ಸಂರಕ್ಷಕನಿಗೆ ಹಸ್ತಾಂತರಣಗೊಳಿಸುವ ಹಕ್ಕು ತುಂಬಾ ಸೀಮಿತವಾಗಿದೆ.

ಒಬ್ಬ ಸಂರಕ್ಷಕನಿಂದ ಅಲ್ಪವಯಿಯು ಸ್ಥಿರ ಸ್ವತ್ತಿನ ಹಸ್ತಾಂತರಣ
(Transfer of Immovable Property by a legal Guardian)

ಮುಸ್ಲಿಮ್ ಮತೀಯ ಕಾನೂನು ಮತ್ತು ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦ ಇದರ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಭಾರತದ ನ್ಯಾಯಾಲಯಗಳು ಅಲ್ಪವಯಿಯು ಸ್ಥಿರ ಸ್ವತ್ತಿನ ಹಸ್ತಾಂತರಣದ ಸಂಬಂಧದಲ್ಲಿ ಸಂರಕ್ಷಕನ ಶಕ್ತಿಯ ಬಗ್ಗೆ ನಿರ್ದಿಷ್ಟವಾದ ನಿಯಮಗಳನ್ನು ಹಾಕಿದೆ. ಒಬ್ಬ ಅಲ್ಪವಯಿಯು ಸ್ಥಿರಸ್ವತ್ತಿನ ನಿಕಾಲೆಮಾಡುವಿಕೆಯ ಸಂಬಂಧದಲ್ಲಿ ಆ ಅಲ್ಪವಯಿಯು ಸಂರಕ್ಷಕನ ವ್ಯಾಪ್ತಿ ಮತ್ತು ಕಾನೂನೀ ಮಿತಿಗಳು ಈ ಕೆಳಗಿನಂತಿವೆ:

ವಿಕ್ರಯ (Sale)

ಒಬ್ಬ ಕಾನೂನೀ ಸಂರಕ್ಷಕನು ತನ್ನ ಸಂರಕ್ಷಿತನ ಸ್ಥಿರ ಸ್ವತ್ತುಗಳನ್ನು ಮಾರಾಟ ಮಾಡುವ ಶಕ್ತಿಯನ್ನು ಹೊಂದಿರುವುದಿಲ್ಲ. ಆದರೆ ಈ ಕೆಳಗಿನ ಅಪವಾದಿಕ ಪರಿಸ್ಥಿತಿಗಳಲ್ಲಿ ಒಬ್ಬ ಕಾನೂನೀ ಸಂರಕ್ಷಕನು ತನ್ನ ಅಲ್ಪವಯಿ ಸಂರಕ್ಷಿತನ ಸ್ಥಿರ ಸ್ವತ್ತುಗಳನ್ನು ಮಾರಾಟಮಾಡಲು ಪ್ರಾಧಿಕೃತನಾಗಿರುವನು—

೧) ಒಂದೊಮ್ಮೆ ಆ ವಿಕ್ರಯದಿಂದ ಆ ಸಂರಕ್ಷಕನು ಆ ಸ್ವತ್ತಿನ ದುಪ್ಪಟ್ಟು ಮೌಲ್ಯವನ್ನು ಪಡೆಯಬಹುದಾದರೆ,

೨) ಆ ಅಲ್ಪವಯಿಯ ಜೀವನಾಂಶಕ್ಕಾಗಿ ಆ ವಿಕ್ರಯವು ಪರಮವಾಗಿ ಆವಶ್ಯಕವಾಗಿದ್ದರೆ.

೩) ಆ ಅಲ್ಪವಯಿಯು ಯಾವಾತನ ಸ್ವತ್ತಿನ ವಾರಸು ಪಡೆದಿರುವನೊ ಆತನ ಋಣಗಳನ್ನು ಸಂದಾಯಮಾಡಲು ಈ ವಿಕ್ರಯದ ಆವಶ್ಯಕತೆಯಿದ್ದರೆ.

೪) ಒಂದೊಮ್ಮೆ ಮರಣ ಶಾಸಕನ ಮರಣ ಶಾಸನದಲ್ಲಿ ಕಾನೂನೀ ವೆಚ್ಚ ಇತ್ಯಾದಿಗಳ ಸಂದಾಯದ ಬಗ್ಗೆ ಕೆಲವು ಉಪಬಂಧಗಳಿದ್ದರೆ ಮತ್ತು ಈ ಸ್ವತ್ತನ್ನು ಮಾರಾಟ ಮಾಡದಿದ್ದರೆ ಆ ವೆಚ್ಚಗಳನ್ನು ಸಂದಾಯ ಮಾಡುವುದು ಅಸಾಧ್ಯ ವಾಗಿದ್ದರೆ ಅಲ್ಲಿ ಈ ಸ್ವತ್ತುಗಳನ್ನು ಮಾರಾಟಮಾಡಬಹುದು.

೫) ಒಂದೊಮ್ಮೆ ಆ ಸ್ವತ್ತು ಪ್ರಯೋಜಕ ಸ್ವತ್ತಲ್ಲವೆಂದಾದರೆ, ಉದಾ ಹರಣೆಗಾಗಿ, ಒಂದು ಸ್ವತ್ತನ್ನು ಇಟ್ಟುಕೊಳ್ಳಲು ಮತ್ತು ಅದರ ತೀರ್ವೆ ಇತ್ಯಾದಿ ಗಳನ್ನು ತುಂಬಿಸಲು ಅದರಿಂದ ಬರುವ ಪ್ರಯೋಜನಕ್ಕಿಂತಲೂ ಹೆಚ್ಚು ತಗಲುತ್ತಿದೆ ಯೆಂದಾದರೆ.

೬) ಒಂದೊಮ್ಮೆ ಆ ಸ್ವತ್ತು ಅತಿಯಾದ ಬಡ್ಡಿ ಹೇರುವ ಸಾಲಗಾರನ ಕೈಯಲ್ಲಿದ್ದರೆ ಮತ್ತು ಅಂಥವನಿಂದ ಆ ಸ್ವತ್ತನ್ನು ಮರಳಿ ಪಡೆಯುವದು ಅಸಾಧ್ಯ ವೆಂಬುದಾಗಿ ಆ ಸಂರಕ್ಷಕನಿಗೆ ನಂಬಲು ಯುಕ್ತವಾದ ಕಾರಣವಿದ್ದರೆ.

೭) ಒಂದೊಮ್ಮೆ ಆ ಸ್ವತ್ತು ನಾಶಗೊಳ್ಳುತ್ತಿದೆಯಾದರೆ ಅಥವಾ ಹಾಳಾ ಗುತ್ತಿದೆಯಾದರೆ ಅಥವಾ ಅದು ಬೇಗನೆ ನಷ್ಟವಾಗುವಂಥ ಒಂದು ತತ್ಕ್ಷಣಿತ ಅಪಾಯದಲ್ಲಿದ್ದರೆ.

ಒಬ್ಬ ಅಲ್ಪವಯಿಯ ಸ್ವತ್ತನ್ನು ನಿಕಾಲೆ ಮಾಡಲು ಸಂರಕ್ಷಕನ ಶಕ್ತಿಯು ತುಂಬಾ ಸೀಮಿತವಾಗಿದೆಯೆಂಬುದು ಮೇಲಿನ ಯಾದಿಯಿಂದ ತಿಳಿಯುತ್ತದೆ. ಒಬ್ಬ ಅಲ್ಪವಯಿಯ ಸ್ವತ್ತನ್ನು ಕೇವಲ ಅಪವಾದಿಕ ಪರಿಸ್ಥಿತಿಗಳಲ್ಲಿ ಮಾರಾಟ ಮಾಡ ಬಹುದು. ಆ ಅಪವಾದಿಕ ಪರಿಸ್ಥಿತಿಗಳು ಎಂಥವುಗಳೆಂದರೆ ಆ ಸ್ವತ್ತುಗಳ ಮಾರಾಟವು ಒಂದೇ ಪರಮವಾಗಿ ಆವಶ್ಯಕವಾಗಿರಬೇಕು ಅಥವಾ ಅಲ್ಪವಯಿಗೆ ಆ ಮಾರಾಟದಿಂದ ಪ್ರಯೋಜನವಾಗಲಿದೆಯೆಂಬುದು ವ್ಯಕ್ತವಾಗಿ ತಿಳಿದುಬರ ಬೇಕು. ಒಬ್ಬ ಅಲ್ಪವಯಿಗೆ ಅನೇಕ ಸ್ವತ್ತುಗಳಿದ್ದರೆ ಅಲ್ಲಿ ಯಾವುದಾದರೊಂದು ನಿರ್ದಿಷ್ಟ ಸ್ವತ್ತಿನ ಮಾರಾಟವು ಯುಕ್ತವಾಗಿ ಸಮರ್ಥನೀಯವಾಗಿರಬೇಕು. ಒಂದು ವಿಕ್ರಯದಲ್ಲಿ ಆ ಅಲ್ಪವಯಿಗೆ ಪ್ರಯೋಜನವಾಗುವುದಷ್ಟೇ ಮಹತ್ವದ್ದಾಗಿರು ತ್ತದೆ. ಒಬ್ಬ ಸಂರಕ್ಷಕನು ತನ್ನ ಅಥವಾ ತನ್ನ ಮಿತ್ರರ ಅಥವಾ ಸಂಬಂಧಿಕರ ಪ್ರಯೋಜನಕ್ಕಾಗಿ ಅಲ್ಪವಯಿಯ ಸ್ವತ್ತುಗಳನ್ನು ಮಾರಾಟಮಾಡ-ವಂತಿಲ್ಲ.

ಅಡಮಾನ (Mortgage)

ಒಬ್ಬ ಕಾನೂನೀ ಸಂರಕ್ಷಕನು ಅಲ್ಪವಯಿಯ ಸ್ವತ್ತನ್ನು ಯಾವ ಕಾರಣಗಳ

ಗಾಗಿ ಮಾರಾಟ ಮಾಡಬಹುದೋ ಅವೇ ಕಾರಣಗಳಿಗಾಗಿ ಮತ್ತು ಅದೇ ಷರತ್ತಿಗೆ ಬಾಧ್ಯನಾಗಿ ಅದನ್ನು ಅಡವಮಾನಗೊಳಿಸಬಹುದು. ಒಬ್ಬ ಸಂರಕ್ಷಕನು ಅಲ್ಪ ವಯಿಯು ಸ್ವತ್ತನ್ನು ಆ ಅಲ್ಪವಯಿಯು ಪ್ರಯೋಜನಕ್ಕಾಗಿ ಅಥವಾ ಆ ಸ್ವತ್ತಿನ ಹಿತಕ್ಕಾಗಿ ಮಾತ್ರ ಅಡವಮಾನಗೊಳಿಸಬಹುದು.

ಭೋಗಾರ್ಪಣೆ (Lease)

ಅಲ್ಪವಯಿಯು ಒಂದು ಸ್ವತ್ತನ್ನು ಭೋಗಾರ್ಪಣೆಮಾಡಬೇಕಾದರೆ ಅದು ಅಲ್ಪವಯಿಗೆ ಪ್ರಯೋಜನಕಾರಿಯಾಗಿರಬೇಕು ಅಥವಾ ಅದು ಆ ಸ್ವತ್ತಿನ ಹಿತದಿಂದ ಮಾಡಲ್ಪಟ್ಟುದಾಗಿರಬೇಕು. ಆದುದರಿಂದ ತನ್ನ ಸಂರಕ್ಷಿತನಿಗೆ ಅದರಿಂದ ಪ್ರಯೋಜನವಾಗುವುದೆಂದಾದರೆ ಮಾತ್ರ ಒಬ್ಬ ಕಾನೂನೀ ಸಂರಕ್ಷಕನು ಒಬ್ಬ ಅಲ್ಪವಯಿಯು ಸ್ವತ್ತನ್ನು ಭೋಗಾರ್ಪಣೆಗೊಳಿಸಬಹುದು. ಒಬ್ಬ ಅಲ್ಪವಯಿಯು ಸ್ವತ್ತಿನ ಭೋಗಾರ್ಪಣೆಯು ಆ ಅಲ್ಪವಯಿಯು ಅಲ್ಪವಯುವನ್ನು ಮೀರುವ ಕಾಲಕ್ಕೆ ಮಾಡುವಂತಿಲ್ಲ.

ಒಬ್ಬ ಕಾನೂನೀ ಸಂರಕ್ಷಕನಿಂದ ಚರಸ್ವತ್ತಿನ ಹಸ್ತಾಂತರಣ (Transfer of Moveable Property by a legal Guardian)

ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಕಾನೂನೀ ಸಂರಕ್ಷಕನು ತನ್ನ ಸಂರಕ್ಷಿತನ ಚರಸ್ವತ್ತುಗಳೊಂದಿಗೆ ವ್ಯವಹರಿಸುವ ಹಕ್ಕನ್ನು ಹೊಂದಿರುವನು. ಒಬ್ಬ ಸಂರಕ್ಷಕನು ತನ್ನ ಸಂರಕ್ಷಿತನ ಚರಸ್ವತ್ತನ್ನು ಗಿರವಿ ಅಥವಾ ಒತ್ತೆಯಿಡಬಹುದು. ಆದರೆ ಇದು ಆ ಸಂರಕ್ಷಿತನ ಹಿತದ ದೃಷ್ಟಿಯಿಂದ ಅವಶ್ಯಕವಾಗಿರಬೇಕು. ಉದಾಹರಣೆಗಾಗಿ, ಅವನ ಬಟ್ಟೆ, ಆಹಾರ, ಔಷಧೋಪಚಾರ ಇತ್ಯಾದಿಗಳು.

ಕಾನೂನೀ ಸಂರಕ್ಷಕನ ಕರಾರುಮಾಡುವ ಶಕ್ತಿ (Legal Guardian's power to enter into contracts)

ಒಬ್ಬ ಕಾನೂನೀ ಸಂರಕ್ಷಕನು ತನ್ನ ಸಂರಕ್ಷಿತನ ಪರವಾಗಿ ಕರಾರುಗಳಲ್ಲಿ ಸೇರಲು ಹಕ್ಕುದಾರನಾಗಿರುವನು ಮತ್ತು ಅಂತಹ ಕರಾರುಗಳು ಅಲ್ಪವಯಿಯನ್ನು ಹಾಗೂ ಆ ಅಲ್ಪವಯಿಯು ಸಂಪದವನ್ನು ಬಾಧ್ಯಗೊಳಿಸುತ್ತದೆ. ಇಂತಹ ಕರಾರನ್ನು ಆ ಅಲ್ಪವಯಿಯ ವಿರುದ್ಧ ಜಾರಿಗೊಳಿಸಬಹುದು ಮತ್ತು ಆ ಅಲ್ಪವಯಿಯೂ ಸಹ ಆ ಕರಾರನ್ನು ಮೂರನೇ ಪಕ್ಷಗಾರನ ವಿರುದ್ಧ ವಿರುದ್ಧ ಜಾರಿಗೊಳಿಸಬಹುದು.

ಕಾನೂನೀ ಸಂರಕ್ಷಕನಿಂದ ಪೂರ್ವಕ್ರಯಾಧಿಕಾರದ ಹಕ್ಕಿನ ಚಲಾವಣೆ (Exercise of Pre-Emption by legal Guardian)

ಒಬ್ಬ ಕಾನೂನೀ ಸಂರಕ್ಷಕನು ತನ್ನ ಸಂರಕ್ಷಿತನ ಪರವಾಗಿ ಪೂರ್ವಕ್ರಯಾಧಿ

ಕಾರದ ಹಕ್ಕನ್ನು ಚಲಾಯಿಸಬಹುದು. ಒಂದೊಮ್ಮೆ ಅದು ತನ್ನ ಸಂರಕ್ಷಿತನಿಗೆ ಪ್ರಯೋಜಕವಾಗುವಂತಹದಾಗಿದ್ದರೆ ಆ ಸಂರಕ್ಷಕನು ಈ ಹಕ್ಕನ್ನು ಚಲಾಯಿಸುವುದರಿಂದ ನಿರಾಕರಿಸಬಹುದು.

ಒಬ್ಬ ಕಾನೂನೀ ಸಂರಕ್ಷಕನಿಂದ ಒಂದು ಋಣದ ಅಧಿಸ್ವೀಕೃತಿ
(Acknowledgement of debt by a legal Guardian)

ಒಬ್ಬ ಕಾನೂನೀ ಸಂರಕ್ಷಕನು ತನ್ನ ಸಂರಕ್ಷಿತನ ಪರವಾಗಿ ಒಂದು ಋಣವನ್ನು ಅಧಿಸ್ವೀಕೃತಿಗೊಳಿಸಿ ಅದಕ್ಕೆ ಹೊಸ ಜೀವದಾನ ಕೊಡಬಹುದು. ಸಂರಕ್ಷಕನಿಂದ ಮಾಡಲಾಗುವ ಒಂದು ಋಣದ ಅಧಿಸ್ವೀಕೃತಿಯು ಮುಸ್ಲಿಮ್ ಕಾನೂನಿನಿಂದ ಮನ್ನಿಸಲಾಗಿದೆ. ಏಕೆಂದರೆ ಈ ರೀತಿಯಾಗಿ ಅಧಿಸ್ವೀಕೃತಿ ಕೊಡುವುದರಿಂದಾಗಿ ಆ ಅಲ್ಪವಯಿಯು ತನ್ನ ಋಣದಾತರಿಗೆ ಆ ಋಣವನ್ನು ಸಂದಾಯಮಾಡಲು ಹೆಚ್ಚಿನ ಕಾಲಾವಧಿಯನ್ನು ಪಡೆಯುವನು.

ಅಲ್ಪವಯಿಯ ಸ್ವತ್ತಿನ ಮರಣ ಶಾಸನದಿಂದ ಸಂರಕ್ಷಕರು
(Testamentary Guardians of the Minors Property)

ತಂದೆ ಮತ್ತು ಪೈತೃಕ ಅಜ್ಜ ಇವರು ಮರಣ ಶಾಸನದಿಂದ ತಮ್ಮ ನಿಷ್ಪಾದಕರ ನೇಮಕ ಮಾಡಲು ಶಕ್ತಿಪಡೆದಿರುವರೆಂಬುದನ್ನು ನಾವು ಈಗಾಗಲೇ ನೋಡಿರುವೆವು. ಇಂತಹ ನಿಷ್ಪಾದಕ – ಸಂರಕ್ಷಕ ಇವರನ್ನು ಮರಣ ಶಾಸನದಿಂದ ಸಂರಕ್ಷಿತರೆಂದು ಕರೆಯಲಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಇಂತಹ ಸಂರಕ್ಷಕರು ತಂದೆಯ ಅಥವಾ ಪೈತೃಕ ಅಜ್ಜನ ಮರಣಶಾಸನದಿಂದ ನೈಸರ್ಗಿಕ ಸಂರಕ್ಷಕರಾಗಿ ವ್ಯವಹರಿಸಲು ಪ್ರಾಧಿಕಾರವನ್ನು ಪಡೆಯುವರು. ಒಬ್ಬ ಮರಣ ಶಾಸನದಿಂದ ಸಂರಕ್ಷಕನು ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಕಾನೂನೀ ಸಂರಕ್ಷಕನಾಗಿರುವನು. ಅಲ್ಪವಯಿಯ ಸ್ವತ್ತಿನೊಂದಿಗೆ ವ್ಯವಹಾರ ಮಾಡಲು ಈ ಮರಣಶಾಸನದಿಂದ ಸಂರಕ್ಷಕರು ಒಬ್ಬ ತಂದೆ ಅಥವಾ ಪೈತೃಕ ಅಜ್ಜನಷ್ಟೇ ಶಕ್ತಿ ಪಡೆದಿರುವರು. ಇವರು ನೈಸರ್ಗಿಕ ಸಂರಕ್ಷಕರಿಗೆ ಪ್ರತಿಸ್ಥಾಪಿಸಲ್ಪಟ್ಟವರೆಂದು ಎಣಿಸಲ್ಪಡುವರು.

ನ್ಯಾಯಾಲಯದಿಂದ ನೇಮಿಸಲ್ಪಟ್ಟ ಸ್ವತ್ತಿನ ಸಂರಕ್ಷಕರು
(Guardians of property appointed by court)

ಒಬ್ಬ ಅಲ್ಪವಯಿಯ ಸ್ವತ್ತಿನ ಸಂಬಂಧದಲ್ಲಿ ಕಾನೂನೀ ಸಂರಕ್ಷಕರು ಇಲ್ಲದಾಗ ನ್ಯಾಯಾಲಯವು ಅಲ್ಪವಯಿಯ ಸ್ವತ್ತಿನ ಸಂರಕ್ಷಕರನ್ನು ನೇಮಿಸುತ್ತದೆ. ಈ ರೀತಿಯ ನೇಮಕಗಳಿಗೆ ಸಂಬಂಧಪಟ್ಟ ನಿಯಮಗಳನ್ನು ನಾವು ಈಗಾಗಲೇ ನೋಡಿರುವೆವು. ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನನ್ನು ಪ್ರಮಾಣಿತ ಸಂರಕ್ಷಕನೆಂದು ಕರೆಯಲಾಗುತ್ತದೆ.

ಅಲ್ಪವಯಿಯ ಸ್ಥಿರಸ್ವತ್ತಿನೊಂದಿಗೆ ವ್ಯವಹರಿಸಲು ನ್ಯಾಯಾಲಯ ದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನ ಶಕ್ತಿಗಳು

(Powers of a Guardian appointed by court to deal with immovable property)

ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನ ಶಕ್ತಿಗಳು ಮತ್ತು ಕರ್ತವ್ಯಗಳು 'ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦' ಇದರ ಉಪಬಂಧಗಳಿಂದ ಶಾಸಿತವಾಗಿವೆ. ಈ ಅಧಿನಿಯಮದ ಕ. ೩೩ರ ಪ್ರಕಾರ ನ್ಯಾಯಾಲಯವು ಒಬ್ಬ ಸಂರಕ್ಷಕನ ಶಕ್ತಿಗಳನ್ನು ಕಾಲದಿಂದ ಕಾಲಕ್ಕೆ ಪರಿಭಾಷಿಸಲು, ನಿಯಂತ್ರಿಸಲು ಅಥವಾ ವ್ಯಾಪಕಗೊಳಿಸಲು ಶಕ್ತಿಗಳನ್ನು ಪಡೆದಿದೆ. ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನು ನ್ಯಾಯಾಲಯದ ಮಂಜೂರಾತಿಯನ್ನು ಪಡೆಯದೆ ಒಬ್ಬ ಅಲ್ಪವಯಿಯ ಸ್ವತ್ತಿನೊಂದಿಗೆ ತನಗೆ ಇಷ್ಟಬಂದ ರೀತಿಯಲ್ಲಿ ವ್ಯವಹರಿಸಲು ಪ್ರಾಧಿಕಾರವನ್ನು ಪಡೆದಿಲ್ಲ. ಇಂತಹ ಒಬ್ಬ ಸಂರಕ್ಷಕನು ನ್ಯಾಯಾಲಯದ ಒಂದು ಪೂರ್ವ ಸಮ್ಮತಿಯಿಲ್ಲದೆ ಆ ಅಲ್ಪವಯಿಯ ಸ್ಥಿರಸ್ವತ್ತನ್ನು ಮಾರಾಟ, ವಿನಿಮಯ, ಅಡಮಾನ, ಪ್ರಭಾರ, ಅಥವಾ ಅನ್ಯಥಾ ಹಸ್ತಾಂತರಣ ಮಾಡುವಂತಿಲ್ಲ. ಒಬ್ಬ ಸಂರಕ್ಷಿತನ ಸ್ವತ್ತನ್ನು ಹಸ್ತಾಂತರಣಗೊಳಿಸಲು ನ್ಯಾಯಾಲಯವು ಸಮ್ಮತಿ ಕೊಡಬೇಕಾದರೆ ಅದು ಆ ಸಂರಕ್ಷಿತನಿಗೆ ಪರಮವಾಗಿ ಅವಶ್ಯಕವಾಗಿರಬೇಕು ಅಥವಾ ಅವನಿಗೆ ವ್ಯಕ್ತವಾಗಿ ಪ್ರಯೋಜಕವಾಗಿರಬೇಕು. ಒಂದೊಮ್ಮೆ ನ್ಯಾಯಾಲಯವು ಒಬ್ಬ ಸಂರಕ್ಷಿತನ ಸ್ವತ್ತನ್ನು ಹಸ್ತಾಂತರಗೊಳಿಸಲು ಸಂರಕ್ಷಿತನಿಗೆ ಸಮ್ಮತಿ ಕೊಟ್ಟರೆ ಆ ಸಂರಕ್ಷಕನು ಆ ಸ್ವತ್ತನ್ನು ಹಸ್ತಾಂತರಗೊಳಿಸಬಹುದು, ಮತ್ತು ಒಂದೊಮ್ಮೆ ಈ ಸಮ್ಮತಿಯು ಕೆಲವು ಷರತ್ತುಗಳಿಗೆ ಬಾಧ್ಯವಾಗಿದ್ದರೆ ಅಂತಹ ಸಂರಕ್ಷಕನು ಆ ಸ್ವತ್ತಿನ ಹಸ್ತಾಂತರಣವನ್ನು ಆ ಷರತ್ತುಗಳಿಗೆ ಬಾಧ್ಯನಾಗಿ ಮಾಡಬೇಕಾಗುತ್ತದೆ.

ಭೋಗಾರ್ಪಣೆ (Lease)

ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನು ಆ ಅಲ್ಪವಯಿಯ ಸ್ವತ್ತನ್ನು ಐದು ವರ್ಷಗಳ ಒಂದು ಕಾಲಾವಧಿಗೆ ಅಥವಾ ಆ ಅಲ್ಪವಯಿಯು ವಯಸ್ಕನಾಗಿ ಒಂದು ವರ್ಷ ಕಳೆಯುವಷ್ಟರ ಅವಧಿಯ ಮಟ್ಟಿಗೆ ಆ ಸ್ವತ್ತಿನ ಭೋಗಾರ್ಪಣೆ ಮಾಡಲು ಹಕ್ಕುದಾರನಾಗಿರುವನು. ಈ ಎರಡು ಅವಧಿಗಳನ್ನು ಮೀರುವ ಕಾಲಾವಧಿಗೆ ಭೋಗಾರ್ಪಣೆ ಮಾಡುವದಿದ್ದರೆ ಆ ಸಂರಕ್ಷಕನು ನ್ಯಾಯಾಲಯದ ಪೂರ್ವಸಮ್ಮತಿಯನ್ನು ಪಡೆಯಬೇಕಾಗುತ್ತದೆ. ಆದರೆ ನ್ಯಾಯಾಲಯದಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನು ಮೇಲಿನ ನಿಯಮಗಳನ್ನು ಮೀರಿ ಒಂದು ಭೋಗಾರ್ಪಣೆ ಮಾಡಿದರೆ ಆ ಭೋಗಾರ್ಪಣೆಯು ಶೂನ್ಯವಾಗುವುದಿಲ್ಲ: ಆ ಅಲ್ಪವಯಿಯು ಪ್ರಾಯಸ್ಥ ವಯಸ್ಸಿಗೆ ಬಂದಾಗ ಅಂತಹ ಭೋಗಾರ್ಪಣೆಯನ್ನು

ಶೂನ್ಯ ಮಾಡುವ ಆಯ್ಕೆ ಮಾಡಬಹುದು. ಅಂತಹ ಒಂದು ಹಸ್ತಾಂತರಣವನ್ನು ಆ ಹಸ್ತಾಂತರಣದಿಂದ ಪರಿಣಾಮಿತರಾಗಿರುವ ವ್ಯಕ್ತಿಗಳ ಇಚ್ಛೆಯ ಮೇರೆಗೂ ಶೂನ್ಯಗೊಳಿಸಬಹುದು.

ಚರಸ್ವತ್ತಿನೊಂದಿಗೆ ವ್ಯವಹರಿಸುವ ಶಕ್ತಿಗಳು

(Powers to deal with Movable Property)

ನ್ಯಾಯಾಲಯದಿಂದ ನೇಮಿಸಲ್ಪರುವ ಒಬ್ಬ ಸಂರಕ್ಷಕನು ನ್ಯಾಯಾಲಯದ ಪೂರ್ವ ಸಮ್ಮತಿಯಿಲ್ಲದೆ ಆ ಅಲ್ಪವಯಿಯ ಚರಸ್ವತ್ತುಗಳೊಂದಿಗೆ ವ್ಯವಹರಿಸಲು ಶಕ್ತಿ ಪಡೆದಿರುವನು. ಆದರೆ ಆ ಸಂರಕ್ಷಕನು ಅಲ್ಪವಯಿಯ ಚರಸ್ವತ್ತುಗಳೊಂದಿಗೆ ಕಾಳಜಿ ವಹಿಸಿ ವ್ಯವಹರಿಸಬೇಕಾಗುತ್ತದೆ, ಮತ್ತು ಇದು ಹೇಗಿರಬೇಕೆಂದರೆ ಒಬ್ಬ ಸಾಮಾನ್ಯ ವಿವೇಕವುಳ್ಳ ವ್ಯಕ್ತಿಯು ತನ್ನದೇ ಆಗಿರುವ ಸ್ವತ್ತಿನೊಂದಿಗೆ ಯಾವ ರೀತಿಯಿಂದ ವ್ಯವಹರಿಸುತ್ತಿದ್ದನೋ ಅದೇ ರೀತಿಯಿಂದ ವ್ಯವಹರಿಸಬೇಕಾಗುತ್ತದೆ.

ಅಲ್ಪವಯಿಯ ಸ್ವತ್ತಿನ ವಾಸ್ತವಿಕ ಸಂರಕ್ಷರಕ

(De-facto Guardian of the Minor's Property)

ಒಬ್ಬ ವಾಸ್ತವಿಕ ಸಂರಕ್ಷಕನೆಂದರೆ ಮುಸ್ಲಿಮ್ ಮತೀಯ ಕಾನೂನಿನ ಮೇರೆಗೆ ಅಥವಾ ಸಂರಕ್ಷಕರ ಮತ್ತು ಸಂರಕ್ಷಿತರ ಅಧಿನಿಯಮ, ೧೮೯೦ ಇವುಗಳ ಮೇರೆಗೆ ಒಬ್ಬ ಸಂರಕ್ಷಿಕನಾಗಿ ನೇಮಿಸಲ್ಪಟ್ಟಿಲ್ಲದೆ, ಆದರೆ ಒಬ್ಬ ಸಂರಕ್ಷಕನ ಕಾರ್ಯಕಲಾಪ ಗಳನ್ನು ನಡೆಸುವ ಶಕ್ತಿಯನ್ನು ಹೊಂದಿರುವ ಒಬ್ಬ ವ್ಯಕ್ತಿ. ಒಬ್ಬ ವಾಸ್ತವಿಕ ಸಂರಕ್ಷಕನು ಕಾನೂನಿನ ದೃಷ್ಟಿಯಲ್ಲಿ ಒಬ್ಬ ಸಂರಕ್ಷಕನಾಗಿಲ್ಲ ಮತ್ತು ಅವನೊಬ್ಬ ಅನಧಿಕೃತ ವ್ಯಕ್ತಿಯಾಗಿದ್ದು ಅಲ್ಪವಯಿಯ ಸ್ವತ್ತುಗಳೊಂದಿಗೆ ವ್ಯವಹರಿಸುವವ ನಾಗಿರುವನು.

ಸ್ಥಿರ ಸ್ವತ್ತಿನೊಂದಿಗೆ ವ್ಯವಹರಿಸಲು ವಾಸ್ತವಿಕ ಸಂರಕ್ಷಕನ ಶಕ್ತಿಗಳು

(Powers of the De-facto Guardian to deal with immovable property)

ಒಬ್ಬ ವಾಸ್ತವಿಕ ಸಂರಕ್ಷಕನು ಒಬ್ಬ ಅಲ್ಪವಯಿಯ ಸ್ಥಿರ ಸ್ವತ್ತಿನೊಂದಿಗೆ ವ್ಯವಹರಿಸಲು ಪ್ರಾಧಿಕೃತನಲ್ಲ. ಆದುದರಿಂದ ಒಬ್ಬ ಅಲ್ಪವಯಿಯ ಸ್ಥಿರಸ್ವತ್ತಿನೊಳಗಿನ ಯಾವತ್ತೂ ಹಿತಸಂಬಂಧ ಅಥವಾ ಹಕ್ಕನ್ನು ಅವನು ಹಸ್ತಾಂತರಣ ಗೊಳಿಸಿದರೆ ಅದು ಮೂಲದಿಂದಲೇ ಶೂನ್ಯವಾಗಿರುತ್ತದೆ. ಈ ವಿಷಯವು 'ಇಮಾಮ್ ಬಂದಿ ವಿ. ಮುತ್ಸದ್ದಿ' (Imam bandi V. mutsaddi) ಪ್ರಕರಣದಲ್ಲಿ ಕೊಡಲಾದ ತೀರ್ಪಿನಿಂದ ಸ್ಪಷ್ಟಗೊಳಿಸಲಾಗಿದೆ. ಆ ಪ್ರಕರಣವು ಈ ಕೆಳಗಿನಂತಿದೆ—

ಇಮಾಮ್ ಬಂಧಿ ವಿ. ಮುತ್ಸದ್ದಿ
(Imam bandi V. Mutsaddi)

ಸಿದ್ಧಾಂತ : ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಅಲ್ಪವಯಿಯು ಕಾನೂನೀ ಸಂರಕಕ್ಷಕನಾಗಿರದೆ ಆ ಅಲ್ಪವಯಿಯ ದೇಹ ಅಥವಾ ಸ್ವತ್ತಿನ ಮೇಲ್ವಿಚಾರಣೆ ಹೊಂದಿರುವ ಒಬ್ಬ ವ್ಯಕ್ತಿಯನ್ನು ಸಾಮಾನ್ಯವಾಗಿ ವಾಸ್ತವಿಕ ಸಂರಕ್ಷಕನೆಂದು ಕರೆಯಲಾಗುತ್ತದೆ. ಒಬ್ಬ ವಾಸ್ತವಿಕ ಸಂರಕ್ಷಕನು ಆ ಅಲ್ಪವಯಿಯ ಸ್ಥಿರ ಸ್ವತ್ತಿನಲ್ಲಿರುವ ಹಿತಸಂಬಂಧವನ್ನು ಹಸ್ತಾಂತರಣಗೊಳಿಸುವಂತಿಲ್ಲ. ಒಂದೊಮ್ಮೆ ಇಂತಹ ಒಂದು ಅನಧಿಕೃತವಾದ ಹಸ್ತಾಂತರಣದಿಂದ ಒಬ್ಬ ಅಲ್ಪವಯಿಯ ಸ್ವತ್ತು ಇನ್ನೊಬ್ಬ ವ್ಯಕ್ತಿಯ ಕಬ್ಜೆಗೆ ಹೋದರೆ ಅಂತಹ ಇನ್ನೊಬ್ಬ ವ್ಯಕ್ತಿಯನ್ನು ಒಬ್ಬ ಅತಿಕ್ರಮಣಗಾರನೆಂದು ಎಣಿಸಲಾಗುತ್ತದೆ ಮತ್ತು ಆ ಸ್ವತ್ತನ್ನು ಅಂತಹ ಮೂರನೇ ಪಕ್ಷಗಾರನಿಂದ ಮರಳಿ ಪಡೆಯಬಹುದು. ಒಬ್ಬ ವಾಸ್ತವಿಕ ಸಂರಕ್ಷಕನು ತನ್ನ ಮೇಲ್ವಿಚಾರಣೆಯಲ್ಲಿದ್ದಿರುವ ಅಲ್ಪವಯಿಯ ಚರಸ್ವತ್ತುಗಳ ಗಿರವಿ ಅಥವಾ ಒತ್ತೆಯಂತಹ ಹಸ್ತಾಂತರಣಗಳನ್ನು ಮಾಡಬಹುದು, ಆದರೆ ಆ ರೀತಿಯ ವ್ಯವಹಾರವು ಆ ಅಲ್ಪವಯಿಯ ಪರಮವಾದ ಅವಶ್ಯಕತೆಗಳಿಗಾಗಿ ಮಾಡಲ್ಪಟ್ಟುದಾಗಿರಬೇಕು.

ವಸ್ತುಸ್ಥಿತಿ : ಸರನ್ ಜಿಲ್ಲೆಯ ಶಿವನ್ ಎಂಬ ಊರಿನ ಮೊಹಮ್ಮದ್ ಇಸ್ಮಾಯಿಲ್ ಅಲಿಖಾನ್ ಎಂಬವನು ೧೯೦೬ರ ಮಾರ್ಚ ೨[illegible] ರಂದು ಮೃತನಾಗಿದ್ದನು. ಅವನ ಹಿಂದೆ ಮೂವರು ವಿಧವೆಯರು ಮತ್ತು ಆ ಮೂವರು ವಿಧವೆಯರಿಂದ ಅನೇಕ ಮಕ್ಕಳು ಉತ್ತರ ಜೀವಿಗಳಾಗಿ ಉಳಿದಿದ್ದರು.

೧೯೦೮ ರ ಜೂನ್ ೧೦ರಂದು ಆವನ ವಿಧವೆಯರೊಳಗೆ ಒಬ್ಬಳಾದ ಏನಾಯತ್ ಜೊಹರಾ ಎಂಬವಳು ಆಕೆಯ ಇಬ್ಬರು ಮಕ್ಕಳ ವಾಸ್ತವಿಕ ಸಂರಕ್ಷಕಳಾಗಿದ್ದಳು ಮತ್ತು ಈ ದಿನಾಂಕದಂದು ಆಕೆಯು ತನ್ನ ಹಾಗೂ ತನ್ನ ಅಲ್ಪವಯಿ ಮಕ್ಕಳ ಪಾಲಿನ ಸ್ವತ್ತನ್ನು ಹಜ್ ಮುತ್ಸದ್ದಿ ಮತ್ತು ಗುಲ್ಜರ್ ಹುಸೇನ್ ಎಂಬವರಿಗೆ ಹಸ್ತಾಂತರಣಗೊಳಿಸಿದಳು.

ಯಥಾ ಪ್ರಕಾರವಾಗಿ ಪ್ರತಿವಾದಿ ಒಂದು ಮತ್ತು ಎರಡು ಇವರು ಆ ಪಾಲುಗಳ ಸ್ವಾಮಿಗಳಾಗಿರುವೆವು, ಆದುದರಿಂದ ತಮ್ಮ ಹೆಸರನ್ನು ಆ ಸ್ವತ್ತಿನ ಮಾಲಿಕರೆಂಬುದಾಗಿ ನೋಂದಾಯಿಸಬೇಕೆಂದು ಡೆಪ್ಯೂಟಿ ಕಲೆಕ್ಟರನಿಗೆ ಅರ್ಜಿ ಮಾಡಿದರು. ಈ ಅರ್ಜಿಯು ಇಮಾಮ್ ಬಾದಿ ಮತ್ತು ಅಮಿರ್ ಜಹಾನ್ ಎಂಬವರಿಂದ ವಿರೋಧಿಸಲಾಯಿತು. ಇದಕ್ಕೆ ಅವರು ಕೊಟ್ಟಿರುವ ಕಾರಣವೇನೆಂದರೆ ಇನಾಯಿತ್ ಜೊಹರಾ ಈಕೆಯು ಇಸ್ಮಾಯಿಲ್ ಅಲಿಖಾನ್‌ನನ್ನು ವಿವಾಹಿತಳಾಗಿರಲಿಲ್ಲ ಮತ್ತು ಆಕೆಯ ಮಕ್ಕಳು ಅಧರ್ಮಜರಾಗಿರುವರು. ಪ್ರತಿವಾದಿಗಳಿಂದ ಮಾಡಲ್ಪಟ್ಟ ಅರ್ಜಿಗಳು ಕಿತ್ತು ಹಾಕಲ್ಪಟ್ಟವು.

ಆ ಬಳಿಕ ಹಾಜಿ ಮುತ್ಸದ್ದಿ ಮತ್ತು ಗುಲ್ಜರ ಹುಸೇನ್ ಇವರು ಮನವಿದಾರರ ವಿರುದ್ಧ ಒಂದು ದಾವೆ ಹೂಡಿದರು. ಇನಾಯಿತ್ ಜೊಹರಾ ಇವಳು

ಮೊಹಮ್ಮದ್ ಇಸ್ಮಾಯಿಲ್ ಖಾನ್ ಈತನ ಪತ್ನಿಯಾಗಿರುವಳು ಮತ್ತು ಪ್ರತಿವಾದಿಗಳಾದ ನಾಲ್ಕು ಮತ್ತು ಐದು ಇವರು ಇಸ್ಮಾಯಿಲ್ ಅಲಿಖಾನ್ ಇವನ ಧರ್ಮಜ ಮಕ್ಕಳಾಗಿರುವರು ಹಾಗೂ ತಾವು ಖರೀದಿ ಮಾಡಿರುವ ಸ್ವತ್ತಿನಲ್ಲಿ ಆ ಮಕ್ಕಳು ಪಾಲು ಹೊಂದಿರುವರು ಎಂಬುದಾಗಿತ್ತು ಅವರ ವಾದ. ತಮಗೆ ಆ ಸ್ವತ್ತಿನ ಕಬ್ಜೆಯನ್ನು ಹಾಗೂ ಇತರ ಪರಿಹಾರಗಳನ್ನು ಒದಗಿಸಬೇಕೆಂದು ಅವರು ನ್ಯಾಯಾಲಯದಲ್ಲಿ ಬೇಡಿಕೊಂಡರು.

ಈ ವಿವಾಹವು ನಡೆದಿಲ್ಲ ಹಾಗೂ ಆ ಮಕ್ಕಳು ಅಧರ್ಮಜರೆಂದು ಮನವಿದಾರರು ವಾದಿಸಿದರು. ಪ್ರತಿವಾದಿ ೩ ಮತ್ತು ೫ ಈ ದಾವೆಯನ್ನು ವಿರೋಧಿಸಲಿಲ್ಲ.

ನ್ಯಾಯಾಲಯದ ಮುಂದೆ ಬಂದಿರುವ ಮುಖ್ಯ ಪ್ರಶ್ನೆ ಯಾವುದೆಂದರೆ ಮೂರನೇ ಪ್ರತಿವಾದಿಯ ವಿವಾಹ ಮತ್ತು ಆಕೆಯ ಮಕ್ಕಳ ಧರ್ಮಜತ್ವ; ಪ್ರತಿವಾದಿ ೧ ಮತ್ತು ೨ ಇವರ ಪರವಾಗಿ ೧೯೦೬ ರ ಜೂನ್ ೧೦ ರಂದು ಮಾಡಲ್ಪಟ್ಟ ಹಸ್ತಾಂತರಣದ ಪರಿಣಾಮ ಮತ್ತು ಆ ಹಸ್ತಾಂತರಣವನ್ನು ಮನವಿದಾರರು ಪ್ರಶ್ನಿಸಬಹುದೇ ಎಂಬುದು. ಸಬೋರ್ಡಿನೇಟ್ ನ್ಯಾಯಾಧೀಶನು ಈ ದಾವೆಯನ್ನು ಪ್ರತಿವಾದಿ ೧ ಮತ್ತು ೨ ಇವರ ಪರವಾಗಿ ನಿರ್ಣಯಿಸಿ ಅವರಿಗೆ ಡಿಕ್ರಿ ಮಂಜೂರು ಮಾಡಿತು ಮತ್ತು ವೆಚ್ಚಗಳನ್ನು ಕೊಡಿಸಿತು.

ಉಚ್ಚನ್ಯಾಯಾಲಯವು ಈ ಕೆಳಗಿನ ತೀರ್ಪು ಕೊಟ್ಟಿತು. ಪ್ರತಿವಾದಿ ೩ ಈಕೆಯು ಇಸ್ಮಾಯಿಲ್ ಅಲಿಖಾನನ ಕಾನೂನುಬದ್ಧಳಾಗಿರುವ ಪತ್ನಿಯಾಗಿರುವಳು ಮತ್ತು ಪ್ರತಿವಾದಿ ೪ ಮತ್ತು ೫ ಇವರು ಕಾನೂನುಬದ್ಧ ಮಕ್ಕಳಾಗಿರುವರು. ಇಲ್ಲಿ ವಾಸ್ತವಿಕ ಸಂರಕ್ಷಕಳಾಗಿರುವ ಪ್ರತಿವಾದಿ ೩ ಈಕೆಯು ತನ್ನ ಅಲ್ಪವಯಿ ಮಕ್ಕಳ ಸ್ವತ್ತನ್ನು ಹಸ್ತಾಂತರಣಗೊಳಿಸುವ ಹಕ್ಕನ್ನು ಹೊಂದಿರುವಳೋ ಎಂಬ ಪ್ರಶ್ನೆಯು ಬರುವುದಿಲ್ಲ. ಆದುದರಿಂದ ಉಚ್ಚ ನ್ಯಾಯಾಲಯವು ಈ ದಾವೆಯನ್ನು ಕಿತ್ತು ಹಾಕಿತು. ಮನವಿದಾರರು ಕೊನೆಗೆ ಪ್ರೀವಿ ಕೌನ್ಸಿಲಿಗೆ ಮನವಿ ಮಾಡಿದರು.

ತೀರ್ಪು : ಭಾಗತಃ ಈ ಮನವಿಯನ್ನು ಸಮ್ಮತಿಸಿ ಪ್ರೀವಿ ಕೌನ್ಸಿಲ್ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಜೊಹರಾಳಿಂದ ಹುಟ್ಟಿರುವ ಮಕ್ಕಳು ತನ್ನ ಮಕ್ಕಳೆಂಬುದಾಗಿ ಮೃತನು ಅಧಿಸ್ವೀಕೃತಿ ಕೊಟ್ಟ ಬಗ್ಗೆ ಸ್ಪಷ್ಟವಾದ ಪುರಾವೆ ಇದೆ. ಆದುದರಿಂದ ಮೃತನು ಜೊಹರಾಳೊಂದಿಗೆ ವಿವಾಹಿತನಾಗಿರುವನೆಂಬ ಒಂದು ಪೂರ್ವಭಾವನೆಯುಂಟಾಗುತ್ತದೆ. ಆದುದರಿಂದ ಜೊಹರಾ ಮತ್ತು ಆಕೆಯ ಮಕ್ಕಳು ಮೃತನ ಸ್ವತ್ತಿನೊಂದಿಗೆ ವಾರಸು ಪಡೆಯಲು ಹಕ್ಕುದಾರರಾಗಿರುವರು. ಜೊಹರಾಳಿಗೆ ಅಲ್ಪವಯಿಗಳ ಪಾಲಿನೊಂದಿಗೆ ವ್ಯವಹರಿಸುವ ಶಕ್ತಿಯಿದ್ದಿರಲಿಲ್ಲ; ಆದರೆ ಅವಳ ಸ್ವಂತ ಪಾಲು ಆ ವಿಕ್ರಯ ಪತ್ರದೊಂದಿಗೆ ಹಸ್ತಾಂತರಣವಾಗಿದೆ. ಈ ಎಲ್ಲಾ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ವಾದಿಗಳ ಪರವಾಗಿ ನ್ಯಾಯಾಲಯವು

ಮಂಜೂರು ಮಾಡಿದ ಡಿಕ್ರಿಯು ಪುಷ್ಟೀಕರಿಸಲಾಗಿದೆ, ಆದರೆ ಪ್ರತಿವಾದಿ ೯ ಮತ್ತು ೧೦ (ಇನಾಯಿಕ್ ಜೊಹರಾ ಮತ್ತು ಈಕೆಯ ಮಕ್ಕಳು) ಇವರ ಪಾಲುಗಳ ಕಬ್ಜೆ ಯನ್ನು ವಿಮೋಚನೆಗೊಳಿಸಬೇಕಾಗುತ್ತದೆ.

ಚರಸ್ವತ್ತುಗಳೊಂದಿಗೆ ವ್ಯವಹರಿಸಲು ಒಬ್ಬ ವಾಸ್ತವಿಕ ಸಂರಕ್ಷಕನ ಶಕ್ತಿಗಳು
(Powers of the De-facto Guardian to deal with movable)

ಒಬ್ಬ ವಾಸ್ತವಿಕ ಸಂರಕ್ಷಕನು ಒಬ್ಬ ಅಲ್ಪವಯಿಯ ಚರಸ್ವತ್ತುಗಳನ್ನು ವಿಕ್ರಯ ಮಾಡಲು ಅಥವಾ ಒತ್ತೆಯಿಡಲು ಶಕ್ತಿ ಪಡೆದಿರುವನು, ಆದರೆ ಅಂತಹ ಒಂದು ಹಸ್ತಾಂತರಣವು ಆ ಅಲ್ಪವಯಿಯ ಜೀವನಾಂಶಕಗಳಾದ ಆಹಾರ, ಔಷಧಿ, ಬಟ್ಟೆ ಇತ್ಯಾದಿಗಳ ಸಂಬಂಧದಲ್ಲಿ ಮಾಡಲ್ಪಟ್ಟುದ್ದಾಗಿರಬೇಕು. ಆದುದರಿಂದ ಒಬ್ಬ ಅಲ್ಪವಯಿಯ ವಾಸ್ತವಿಕ ಸಂರಕ್ಷಕನು ಮಾಡುವ ಚರಸ್ವತ್ತಿನ ಹಸ್ತಾಂತರಣವು ಅಲ್ಪವಯಿಗಳ ಅವಶ್ಯಕತೆಯ ಷರತ್ತಿಗೆ ಬಾಧ್ಯವಾಗಿದೆ; ಒಂದೊಮ್ಮೆ ಒಬ್ಬ ಅಲ್ಪವಯಿಯ ಚರಸ್ವತ್ತಿನ ಒಂದು ಹಸ್ತಾಂತರಣವು ಇತರ ಯಾವುದಾದರೊಂದು ಉದ್ದೇಶಕ್ಕಾಗಿ ಮಾಡಲ್ಪಟ್ಟುದಾದರೆ ಅದು ವಿಧ್ಯುಕ್ತವೆಂದು ಎಣಿಸಲ್ಪಡುವುದಿಲ್ಲ.

——

ಅಧ್ಯಾಯ ೯

ಜೀವನಾಂಶ
Maintenance

ಜೀವನಾಂಶವೆಂದರೆ ಜೀವನಕ್ಕೆ ಅವಶ್ಯವಾಗಿರುವ ಆಹಾರ, ಬಟ್ಟೆ, ವಸತಿ ಮತ್ತು ಇತರ ಆವಶ್ಯಕತೆಗಳಾಗಿರುತ್ತವೆ. ಜೀವನಾಂಶ ಕೊಡುವ ಕರ್ತವ್ಯಗಳೆಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಆಹಾರ, ವಸತಿ, ಬಟ್ಟೆ ಇತ್ಯಾದಿಗಳನ್ನು ಪೂರೈಸುವ ಒಂದು ಬಾಧ್ಯತೆಯಾಗಿರುತ್ತದೆ. ಇಸ್ಲಾಮ್ ಪೂರ್ವ ಅರಬಿನಲ್ಲಿ ತಮ್ಮ ಮಕ್ಕಳಿಗೆ ಜೀವನಾಂಶವನ್ನು ಕೊಡಲು ಹೆತ್ತವರು ಬಾಧ್ಯರಾಗಿರಲಿಲ್ಲ. ಅದೇ ರೀತಿಯಲ್ಲಿ ಮಕ್ಕಳೂ ಸಹ ತಮ್ಮ ಮುದಿ ತಂದೆ-ತಾಯಿಗಳನ್ನು ಸಾಕಲು ಬಾಧ್ಯರಾಗಿರಲಿಲ್ಲ. ಇಸ್ಲಾಮ್ ಧರ್ಮದ ಸ್ಥಾಪನೆಯಾದ ಬಳಿಕ ಜೀವನಾಂಶದ ಬಗ್ಗೆ ಪೈಗಂಬರನು ಮಹತ್ವದ ಘೋಷಣೆ ಮಾಡಿದನು. ಈ ಘೋಷಣೆಯ ಪ್ರಕಾರ ಒಂದು ಮಗುವು ಹುಟ್ಟಿದಾಗ ಆ ಮಗುವು ತನ್ನನ್ನು ತಾನು ನೋಡಿಕೊಳ್ಳಲು ಸಮರ್ಥನಾಗುವ ತನಕ ಅದಕ್ಕೆ ಸಂರಕ್ಷಣೆ ಮಾಡಲು ಅದರ ತಂದೆಯು ಬಾಧ್ಯನಾಗಿರುವನು. ಮುದಿ ಹಾಗೂ ಅಶಕ್ತ ಹೆತ್ತವರಿಗೆ ಜೀವನಾಂಶ ಕೊಡುವದು ಮಕ್ಕಳ ಕರ್ತವ್ಯವೆಂದೂ ಇಸ್ಲಾಮಿನಲ್ಲಿ ಹೇಳಲಾಗಿದೆ. ಮುಸ್ಲಿಮ್ ಕಾನೂನಿನ ಪ್ರಕಾರ ಜೀವನಾಂಶವೆಂದರೆ ಏನೆಂಬುದನ್ನು ನೋಡುವುದಕ್ಕಿಂತ ಮೊದಲು ಜೀವನಾಂಶಕ್ಕೆ ಸಂಬಂಧಪಟ್ಟ ಇಸ್ಲಾಮೀ ಕಾನೂನಿನ ಮೂಲಭೂತ ಸಿದ್ಧಾಂತಗಳನ್ನು ನೋಡುವ ಆವಶ್ಯಕತೆಯಿದೆ. ಮೊದಲನೆಯದಾಗಿ ಯಾವ ವ್ಯಕ್ತಿಗಳು ಇತರರ ಮೇಲೆ ಅವಲಂಬಿತರಾಗಿರುತ್ತಾರೋ ಅವರನ್ನು ಸಾಕುವ ಬಗ್ಗೆ ಇಸ್ಲಾಮ್ ಸಮ್ಮತಿಸುತ್ತದೆ. ಇದು ಒಂದೇ ಅಪ್ರಾಯಸ್ಥತೆ ಅಥವಾ ವೃದ್ಧಾಪ್ಯ ಅಥವಾ ತಮ್ಮನ್ನು ತಾವು ಸಾಕಿಕೊಳ್ಳಲು ಸಾಮರ್ಥ್ಯವಿಲ್ಲದಿರುವಿಕೆ. ಒಬ್ಬ ವ್ಯಕ್ತಿಗೆ ತನ್ನನ್ನು ತಾನು ಸಾಕಲು ಯಾವುದೇ ಒಂದು ದಾರಿಯಿಲ್ಲದೆ ಅವನು ಭಿಕ್ಷೆ ಬೇಡುವಂತಹ ಒಂದು ಪರಿಸ್ಥಿತಿ ಬರುವ ಕಾಲದಲ್ಲಿ ಮಾತ್ರ ಒಬ್ಬನು ಇನ್ನೊಬ್ಬನನ್ನು ಸಾಕಲು ಕರ್ತವ್ಯಬದ್ಧನಾಗುವನು. ಸಶಕ್ತರಾದ ಮತ್ತು ಧನಾಢ್ಯನಾದ ಪ್ರತಿಯೊಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು. ಎರಡನೆಯದಾಗಿ ಇತರರಿಗೆ ಕೊಡುತ್ತಿರುವ ಜೀವನಾಂಶವು ಇಸ್ಲಾಮಿನಲ್ಲಿ ಸಾಕಷ್ಟು ಸೀಮಿತವಾಗಿದೆ. ಇನ್ನೊಬ್ಬನಿಗೆ ಜೀವನಾಂಶ ಕೊಡುವವನು ಸ್ವತಃ ಉತ್ತೀಯ ಹಾನಿಯನ್ನು ಅನುಭವಿಸಬಾರದೆಂಬುದು ಇಸ್ಲಾಮಿನ ಒಂದು ಸಿದ್ಧಾಂತವಾಗಿದೆ. ಒಬ್ಬ ಪತ್ನಿಯ ಹೊರತಾಗಿ ಇತರ ವ್ಯಕ್ತಿಗಳಿಗೆ ಕೊಡಲಾಗುವ ಜೀವ

ನಾಂಶವು ಅವರ ಸ್ವತ್ತಿನಿಂದ ಕೊಡಲ್ಪಡಬೇಕು. ಇದಕ್ಕೆ ಕಾರಣವೇನೆಂದರೆ ಇಸ್ಲಾಮಿನಲ್ಲಿ ಸ್ವತ್ತಿನ ಪರಿಕಲ್ಪನೆಯು ಒಂದು ವೈಯಕ್ತಿಕ ಸ್ವತ್ತಾಗಿರುತ್ತದೆ. ಮತ್ತು ಅಲ್ಲಿ ಅವಿಭಕ್ತ ಕುಟುಂಬದ ಸ್ವತ್ತಿನ ಪರಿಕಲ್ಪನೆಯಿರುವುದಿಲ್ಲ. ಆದರೆ ಪತಿಯ ಪ್ರಕರಣವು ಒಂದು ಅಪವಾದವಾಗಿರುತ್ತದೆ. ಪತ್ನಿಯು ಸ್ವತಃ ಸಾಕಷ್ಟು ಸ್ವತ್ತನ್ನು ಹೊಂದಿರುವಳಾದರೂ ಸಹ ಪತಿಯು ಆಕೆಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ ಮತ್ತು ಅದು ತನ್ನ ಸ್ವಂತ ಸ್ವತ್ತಿನಿಂದ ಕೊಡಲ್ಪಡಬೇಕಾಗುತ್ತದೆ.

ಜೀವನಾಂಶ ಪಡೆಯಲು ಹಕ್ಕುದಾರರಾಗಿರುವ ವ್ಯಕ್ತಿಗಳು
(Persons entitied to maintenance)

ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ಎರಡು ಕಾರಣಗಳಿಂದಾಗಿ ಇನ್ನೊಬ್ಬನಿಂದ ಜೀವನಾಂಶ ಪಡೆಯಲು ಹಕ್ಕುದಾರನಾಗಿರುವನು. ಆ ಕಾರಣವು ಯಾವುದೆಂದರೆ, ೧) ವಿವಾಹ ಮತ್ತು ೨) ರಕ್ತಸಂಬಂಧ. ಪತಿಯಿಂದ ಜೀವನಾಂಶ ಪಡೆಯುವ ಪತ್ನಿಯ ಹಕ್ಕು ಪರಮವಾಗಿರುತ್ತದೆ ಮತ್ತು ಪತ್ನಿಗೆ ಅವಶ್ಯಕತೆಯಿರಲಿ ಅಥವಾ ಇಲ್ಲದಿರಲಿ ಪತಿಯು ಆಕೆಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು. ಜೀವನಾಂಶ ಪಡೆಯಲು ಹಕ್ಕುದಾರರಾಗಿರುವ ಎರಡನೇ ವರ್ಗದ ವ್ಯಕ್ತಿಗಳು ತಮ್ಮ ರಕ್ತಸಂಬಂಧದಿಂದಾಗಿ ಈ ಹಕ್ಕನ್ನು ಹೊಂದಿರುವರು. ಅವರು ಯಾರೆಂದರೆ :

ಎ) ಚಿಕ್ಕಮಕ್ಕಳು ಮತ್ತು ಸ್ವತಃ ದುಡಿಯಲು ಅಸಮರ್ಥರಾಗಿರುವ ಹೆತ್ತವರು ಮತ್ತು

ಬಿ) ನಿಷೇಧಿತ ಹಂತದೊಳಗೆ ಬರುವ ಇತರ ವ್ಯಕ್ತಿಗಳು. ಈ ರೀತಿಯಾಗಿ ಮುಸ್ಲಿಮ್ ಕಾನೂನಿನ ಪ್ರಕಾರ ಈ ಕೆಳಗಿನ ವ್ಯಕ್ತಿಗಳು ಜೀವನಾಂಶ ಪಡೆಯಲು ಹಕ್ಕುದಾರರಾಗಿರುವರು :

೧) ಪತ್ನಿ,

೨) ಚಿಕ್ಕಮಕ್ಕಳು,

೩) ಸ್ವತಃ ದುಡಿಯಲು ಅಸಮರ್ಥರಾಗಿರುವ ಹೆತ್ತವರು, ಮತ್ತು

೪) ನಿಷೇಧಿತ ಹಂತದೊಳಗೆ ಬರುವ ಇತರ ನಿರ್ಗತಿಕ ಸಂಬಂಧಿಕರು.

ಪತ್ನಿಗೆ ಜೀವನಾಂಶ (Maintenance of the wife)

ಮುಸ್ಲಿಮ್ ಕಾನೂನಿನ ಮೇರೆಗೆ ಜೀವನಾಂಶ ಪಡೆಯುವ ಪತ್ನಿಯ ಹಕ್ಕು ಪರಮವಾದ ಹಕ್ಕಾಗಿರುತ್ತದೆ. ಈ ಹಕ್ಕು ಅವಳಿಗೆ ತನ್ನ ಪ್ರಾಸ್ಥಿತಿಯಿಂದ ಸಿಗುತ್ತದೆ. ತನ್ನ ಪತ್ನಿಗೆ ಜೀವನಾಂಶವನ್ನು ಒದಗಿಸಲು ಪತಿಯು ಬಾಧ್ಯನಾಗಿರುವನು, ಮತ್ತು ಇಲ್ಲಿ ಪತ್ನಿಯಲ್ಲಿ ಸಾಕಷ್ಟು ಸಂಪತ್ತಿದ್ದರೂ ಸಹ ಅಥವಾ ಪತಿಯು ತುಂಬಾ

ಬಡತನದಲ್ಲಿದ್ದರೂ ಸಹ ಈ ಬಾಧ್ಯತೆಯ ಮೇಲೆ ಅದು ಪರಿಣಾಮ ಬೀರುವುದಿಲ್ಲ. ಪತಿಯಿಂದ ತನ್ನ ಜೀವನಾಂಶವನ್ನು ಪಡೆಯುವ ಪತ್ನಿಯ ಹಕ್ಕು ಆತನಿಂದ ಜೀವನಾಂಶ ಪಡೆಯುವ ಇತರರ ಹಕ್ಕಿನ ಮೇಲೆ ಆದ್ಯತೆಯನ್ನು ಪಡೆಯುತ್ತದೆ. ಪತ್ನಿಯು ತನ್ನ ಕಿರಿಯ ಮಕ್ಕಳ ಮೇಲೂ ಜೀವನಾಂಶದ ಸಂಬಂಧದಲ್ಲಿ ಬಾಧ್ಯತೆಯನ್ನು ಪಡೆಯುವಳು. ಇದಕ್ಕೆ ಕಾರಣವೇನೆಂದರೆ ಪತ್ನಿಯನ್ನು ಬೇರು ಮತ್ತು ಮಕ್ಕಳನ್ನು ಶಾಖೆಗಳೆಂದು ಎಣಿಸಲಾಗುತ್ತದೆ. ಜೀವನಾಂಶ ಪಡೆಯುವ ಪತ್ನಿಯ ಈ ಹಕ್ಕು ಮುಸ್ಲಿಮ್ ಮತೀಯ ಕಾನೂನಿನಿಂದ ಪರಿನಿಯೋಜಿತವಾಗಿದೆ ಮತ್ತು ಅದು ಅಪರಾಧಿಕ ಕಾನೂನಿನಿಂದ ಅನುಪೂರಕವಾಗಿದೆ.

ಪತ್ನಿಯ ಜೀವನಾಂಶದ ಹಕ್ಕಿಗೆ ಷರತ್ತುಗಳು
(Conditions for wife's Right of maintenance)

ಪತಿಯು ಪತ್ನಿಗೆ ಆಕೆಯ ಇಡೀ ಜೀವಮಾನಕ್ಕೆ ಜೀವನಾಂಶವನ್ನು ಒದಗಿಸುವನೆಂಬ ಒಂದು ನಿಬಂಧನೆಯು ವಿವಾಹದ ಕರಾರಿನಲ್ಲಿ ಅವ್ಯಕ್ತವಾಗಿ ಕೂಡಿರುತ್ತದೆ. ಜೀವನಾಂಶದ ಹಕ್ಕು ಯಾವುದೇ ಒಂದು ಪ್ರತ್ಯೇಕವಾದ ಜೀವನಾಂಶದ ಒಪ್ಪಂದದ ಮೇಲೆ ಆಧಾರಿತವಾಗಿಲ್ಲ; ಈ ಬಗ್ಗೆ ಪತಿ-ಪತ್ನಿಯರೊಳಗೆ ಯಾವುದೇ ರೀತಿಯ ಒಂದು ಒಪ್ಪಂದವಿಲ್ಲದಿದ್ದರೂ ಸಹ ಪತಿಯು ಆಕೆಗೆ ಜೀವನಾಂಶವನ್ನು ಕೊಡಲು ಬಾಧ್ಯನಾಗಿರುವನು. ಒಬ್ಬ ಪತ್ನಿಯು ಮುಸಲ್ಮಾನಳಾಗಿರಲಿ ಅಥವಾ ಮುಸಲ್ಮಾನೇತರಳಾಗಿರಲಿ, ಶ್ರೀಮಂತಳಾಗಿರಲಿ ಅಥವಾ ಬಡವಳಾಗಿರಲಿ, ಒಳ್ಳೆಯ ಆರೋಗ್ಯದಲ್ಲಿರಲಿ, ಅಥವಾ ಅಂಗವಿಕಲಳಾಗಿರಲಿ, ಕಿರಿಯಳಾಗಿರಲಿ ಅಥವಾ ವಯಸ್ಕಳಾಗಿರಲಿ ಆದರೆ ಅವಳ ಜೀವನಾಂಶ ಪಡೆಯುವ ಹಕ್ಕು ಅಸ್ತಿತ್ವದಲ್ಲಿರುತ್ತದೆ. ಜೀವನಾಂಶ ಪಡೆಯುವ ಪತ್ನಿಯ ಹಕ್ಕು ಈ ಕೆಳಗಿನ ಷರತ್ತುಗಳಿಗೆ ಬಾಧ್ಯವಾಗಿರುತ್ತದೆ.

೧) ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಪತ್ನಿಯು ತನ್ನ ಪತಿಯಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರಬೇಕಾದರೆ ಆ ವಿವಾಹವು ವಿಧ್ಯುಕ್ತವಾಗಿರಬೇಕು. ಒಂದೊಮ್ಮೆ ಆ ವಿವಾಹವು ಕ್ರಮಬದ್ಧವಾಗಿಲ್ಲದಿದ್ದರೆ ಪತಿಯು ಆ ಪತ್ನಿಗೆ ಜೀವನಾಂಶ ಕೊಡಲು ಬಾಧ್ಯನಲ್ಲ. ಉದಾಹರಣೆಗಾಗಿ, ಒಂದೊಮ್ಮೆ ಒಬ್ಬ ಸುನ್ನೀ ಪತಿಯು ಐದನೇ ವಿವಾಹದ ಕರಾರು ಮಾಡಿಕೊಂಡರೆ ಆ ವಿವಾಹವು ಕ್ರಮಬದ್ಧವಾಗುವುದಿಲ್ಲ ಮತ್ತು ಆ ಐದನೆ ಪತ್ನಿಯು ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ಜೀವನಾಂಶ ಪಡೆಯಲು ಹಕ್ಕುದಾರಳಲ್ಲ. ಆದರೆ ಆಕೆಯ ವಿವಾಹವು ಸಾಕ್ಷಿದಾರರ ಕೊರತೆಯಿಂದಾಗಿ ಕ್ರಮಬದ್ಧವಾಗಿಲ್ಲದಿದ್ದರೆ ಆಕೆಯು ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು ಮತ್ತು ಅಲ್ಲಿ ಆಕೆಯ ವಿವಾಹವನ್ನು ಕ್ರಮಬದ್ಧ ಹಾಗೂ ವಿಧ್ಯುಕ್ತವಾದುದೆಂದು ಎಣಿಸಲಾಗುತ್ತದೆ.

ಶಿಯಾ ಕಾನೂನಿನ ಪ್ರಕಾರ ಒಂದು ಮುತಾ ವಿವಾಹವು ಕಾನೂನುಬದ್ಧ

ವಾಗಿರುತ್ತದೆ, ಆದರೆ ಈ ರೀತಿಯ ವಿವಾಹದ ಪತ್ನಿಯು ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ' ಜೀವನಾಂಶ ಪಡೆಯಲು ಹಕ್ಕುದಾರಳಲ್ಲ. ಆದರೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ೧೯೭೩, ಇದರ ಕ. ೧೨೫ ರ ಮೇರೆಗೆ ಒಬ್ಬ ಮುತಾ ಪತ್ನಿಯು ತನ್ನ ಪತಿಯಿಂದ ಜೀವನಾಂಶವನ್ನು ಪಡೆಯಬಹುದು.

೨) ಪತ್ನಿಗೆ ಜೀವನಾಂಶ ಕೊಡಲು ಪತಿಯ ಹಕ್ಕು ಆಕೆಯು ತಾರುಣ್ಯಾವಸ್ಥೆಗೆ ಬಂದ ಮೇಲೆ ಆರಂಭವಾಗುತ್ತದೆ ಮತ್ತು ಅದಕ್ಕಿಂತ ಮೊದಲಲ್ಲ. ಒಂದೊಮ್ಮೆ ಒಬ್ಬ ಪತ್ನಿಯು ಲೈಂಗಿಕ ಸಂಭೋಗಕ್ಕೆ ಅತ್ಯಂತ ಚಿಕ್ಕವಳಾಗಿದ್ದರೆ ಮತ್ತು ಆಕೆಯು ತನ್ನ ಹೆತ್ತವರೊಂದಿಗೆ ಜೀವಿಸುತ್ತಿರುವಳೆಂದಾದರೆ ಆಕೆಯು ಜೀವನಾಂಶಕ್ಕೋಸ್ಕರ ಹಕ್ಕು ದಾವೆ ಮಾಡುವಂತಿಲ್ಲ.

೩) ತನ್ನ ಪತಿಯಿಂದ ಜೀವನಾಂಶ ಪಡೆಯುವ ಒಬ್ಬ ಮುಸ್ಲಿಮ್ ಪತ್ನಿಯ ಹಕ್ಕು ಒಂದು ಪರಮವಾದ ಹಕ್ಕಾಗಿದೆಯಾದರೂ ಸಹ ಇದಕ್ಕಾಗಿ ಆಕೆಯು ಆತನಿಗೆ ನಿಷ್ಠಳಾಗಿರಬೇಕು ಮತ್ತು ಆತನ ಆಜ್ಞಾ ಪಾಲಕಳಾಗಿರಬೇಕು. ಒಬ್ಬ ಪತ್ನಿಯು ಜಾರತ್ವದಲ್ಲಿ ಜೀವಿಸುತ್ತಿರುವಳೆಂದಾದರೆ ಆಕೆಯು ತನ್ನ ಪತಿಯಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರಳೆಂದು ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಕ. ೧೨೫ (IV) ಇದರಲ್ಲಿ ಹೇಳಲಾಗಿದೆ. ಒಂದೊಮ್ಮೆ ಪತ್ನಿಯು ಸ್ವತಃ ತನ್ನ ವೈವಾಹಿಕ ಕರ್ತವ್ಯಗಳನ್ನು ಪಾಲಿಸುತ್ತಿಲ್ಲವೆಂದಾದರೆ ಆಕೆಯು ತನ್ನ ಪತಿಯಿಂದ ಜೀವನಾಂಶಕ್ಕಾಗಿ ಹಕ್ಕುದಾವೆಮಾಡುವ ಅಧಿಕಾರವನ್ನು ಹೊಂದಿರುವದಿಲ್ಲ. ಉದಾಹರಣೆಗಾಗಿ, ಒಬ್ಬ ಪತ್ನಿಯು ತನ್ನ ಗಂಡನೊಂದಿಗೆ ಸಹವಾಸ ಮಾಡಲು ಸಿದ್ಧಳಾಗಿಲ್ಲವೆಂದಾದರೆ ಮತ್ತು ಅವನು ಸಮೀಪ ಹೋದರೂ ನಿರಾಕರಿಸಿದರೆ ಆಕೆಯು ಜೀವನಾಂಶಕ್ಕೋಸ್ಕರ ಹಕ್ಕುದಾವೆ ಮಾಡುವಂತಿಲ್ಲ. ಇದೇ ರೀತಿಯಲ್ಲಿ ಒಂದೊಮ್ಮೆ ಆಕೆಯು ಪತಿಯ ಯುಕ್ತವಾದ ಆದೇಶಗಳನ್ನು ಶಿರಸಾವಹಿಸುವದಿಲ್ಲವೆಂದಾದರೆ ಅಥವಾ ಪತಿಯಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವಳೆಂದಾದರೆ ಆಕೆಯು ಪತಿಯ ವಿರುದ್ಧ ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುವಳು. ಒಬ್ಬ ಮುಸ್ಲಿಮ್ ಪತ್ನಿಯು ತನ್ನ ನಡತೆಯಿಂದಾಗಿ ವೈವಾಹಿಕ ಬಾಧ್ಯತೆಗಳನ್ನು ಉಲ್ಲಂಘಿಸಿರುವಳೆಂದಾದರೆ ಅಲ್ಲಿ ಆಕೆಯು ಪತಿಯಿಂದ ಜೀವನಾಂಶವನ್ನು ಪಡೆಯುವಂತಿಲ್ಲ. ಯಾವ ನಡತೆಯು ಸಮರ್ಥನೀಯ ಮತ್ತು ಯಾವ ನಡತೆಯು ಅಸಮರ್ಥನೀಯವೆಂಬುದಾಗಿ ನ್ಯಾಯಾಲಯವು ವಸ್ತುಸ್ಥಿತಿಗಳ ಹಾಗೂ ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗಳ ಆಧಾರದ ಮೇಲೆ ನಿರ್ಣಯಿಸಬೇಕಾಗುತ್ತದೆ. ಒಂದೊಮ್ಮೆ ಪತ್ನಿಯ ನಡತೆಯು ಕಾನೂನಿನ ದೃಷ್ಟಿಯಲ್ಲಿ ಸಮರ್ಥನೀಯವಾಗಿದ್ದರೆ, ಪತಿಯು ಆಕೆಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ಅವನು ಪತ್ನಿಯ ಮೇಲೆ ವೈವಾಹಿಕ ಹಕ್ಕುಗಳನ್ನು ಚಲಾಯಿಸುವಲ್ಲಿ ಅಸಮರ್ಥನಾಗಿದ್ದರೂ ಸಹ ಅದು ಅವನ ಈ ಕರ್ತವ್ಯದ ಮೇಲೆ ಪರಿಣಾಮ ಬೀರುವುದಿಲ್ಲ ತ್ಯಾಬ್ಜಿಯವರ

(Tyabji) ಅಭಿಪ್ರಾಯದಂತೆ ಈ ಕೆಳಗಿನ ಎರಡು ಪ್ರಕರಣಗಳಲ್ಲಿ ಪತ್ನಿಯು ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ.

ಎ) ಕಾನೂನುಬದ್ಧ ಕಾರಣಗಳ ಮೇಲೆ ಒಂದೊಮ್ಮೆ ಆಕೆಯು ಗಂಡನಿಗೆ ಪ್ರವೇಶವನ್ನು ನಿರಾಕರಿಸಿದರೆ, ಅಥವಾ

ಬ) ಒಂದೊಮ್ಮೆ ಆ ವಿವಾಹವು (i) ಪತಿಯು ತಾರುಣ್ಯಾವಸ್ಥೆಗೆ ಬಾರದಿರುವ ಕಾರಣದಿಂದ; ಅಥವಾ (ii) ಅವನ ಸಮ್ಮತಿಯ ಮೇರೆಗೆ ಆಕೆಯು ಅವನಿಂದ ಗೈರುಹಾಜರಾಗಿದ್ದರೆ, ಅಥವಾ (iii) ಆಕೆಯ ಅನಾರೋಗ್ಯದಿಂದಾಗಿ; ಅಥವಾ (iv) ಅವನ ವೈರೂಪ್ಯದಿಂದಾಗಿ ಆ ವಿವಾಹವನ್ನು ಪೂರ್ತಿಗೊಳಿಸಲಾಗುವುದಿಲ್ಲವೆಂದಾದರೆ,

ಒಂದೊಮ್ಮೆ ಒಬ್ಬ ಪತ್ನಿಯ ವಿವಾಹವು ಪೂರ್ತಿಗೊಳಿಸಲ್ಪಟ್ಟಿಲ್ಲವೆಂದಾದರೆ ಮತ್ತು ಆಕೆಯು ಅಭಿಯಾಚನೆ ಮಾಡಿದಾಗ ಆಕೆಯ ತತ್ಕ್ಷಣಿಕ ಕನ್ಯಾಶುಲ್ಕವು ಸಂದಾಯಗೊಳಿಸಲ್ಪಟ್ಟಿಲ್ಲವೆಂದಾದರೆ ಆಕೆಯು ಕಾನೂನುಬದ್ಧವಾಗಿ ಪತಿಗೃಹವನ್ನು ಅಥವಾ ಅವನೊಂದಿಗೆ ಸಹವಾಸಮಾಡಲು ನಿರಾಕರಿಸಬಹುದು. ತತ್ಕ್ಷಣಿಕ ಕನ್ಯಾಶುಲ್ಕದ ಸಂದಾಯವಾಗದಿರುವಿಕೆಯು ಪ್ರತ್ಯೇಕವಾಗಿ ಜೀವಿಸಲು ಅಥವಾ ಪತಿಗೆ ತನ್ನ ಸಹವಾಸವನ್ನು ನಿರಾಕರಿಸಲು ಒಂದು ಕಾನೂನುಬದ್ಧವಾದ ಕಾರಣವಾಗಿರುತ್ತದೆ. ಆದರೆ ಇದರಿಂದ ಆಕೆಯು ತನ್ನ ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ ಮತ್ತು ಪತಿಯು ಆಕೆಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು. ಇದೇ ರೀತಿಯಲ್ಲಿ ಒಂದೊಮ್ಮೆ ಪತ್ನಿಯು ತನ್ನ ಪತಿಯ ಕ್ರೂರ ವರ್ತನೆಯ ಕಾರಣದಿಂದಾಗಿ ಅವನಿಂದ ಬೇರೆಯಾಗಿ ವಾಸಿಸುತ್ತಿರುವಳೆಂದಾದರೆ ಆಕೆಯು ಅವನಿಂದ ಜೀವನಾಂಶ ಪಡೆಯಲು ಹಕ್ಕುಳ್ಳವಳಾಗುವಳು. ಪತ್ನಿಯ ಮೂಲಭೂತ ಬಾಧ್ಯತೆಗಳಲ್ಲಿ ಪತಿಗೆ ತನ್ನೊಂದಿಗೆ ಸಹವಾಸ ಮಾಡಲು ಸಮ್ಮತಿಸುವದೂ ಒಂದು. ಯಾವುದೇ ಒಂದು ನ್ಯಾಯಬದ್ಧವಾದ ಕಾರಣವಿಲ್ಲದೆ ಪತಿಗೆ ತನ್ನ ಸಹವಾಸವನ್ನು ನಿರಾಕರಿಸಿದರೆ ಆಕೆಯು ತನ್ನ ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುವಳು. ಆದರೆ ಪತ್ನಿಯ ಅನಾರೋಗ್ಯ, ವೃದ್ಧಾಪ್ಯ, ಅಥವಾ ದೋಷಯುಕ್ತ ಅಂಗಾಂಗಗಳ ಕಾರಣದಿಂದಾಗಿ ಆಕೆಯು ಪತಿಯೊಂದಿಗೆ ಸಹವಾಸ ಮಾಡುವದು ಅಸಾಧ್ಯವೆಂದಾದರೆ ಅಲ್ಲಿ ಆಕೆಯು ವೈವಾಹಿಕ ಬಾಧ್ಯತೆಗಳನ್ನು ಉಲ್ಲಂಘನೆ ಮಾಡಿರುವಳೆಂದು ಹೇಳಲಾಗುವುದಿಲ್ಲ ಮತ್ತು ಆಕೆಯು ಕಾನೂನುಬದ್ಧವಾಗಿ ತನ್ನ ಪತಿಯಿಂದ ಜೀವನಾಂಶವನ್ನು ಪಡೆಯಬಹುದು. 'ಇತ್ವಾರಿ ವಿ. ಅಸ್ಘಾರಿ' (Itwari V. Asghari) ಪ್ರಕರಣದಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ಕೊಟ್ಟಿರುವ ಒಂದು ತೀರ್ಪಿನ ಪ್ರಕಾರ ಮುಸ್ಲಿಮ್ ಕಾನೂನು ಒಂದು ನಿಯಮಿತ ಮಟ್ಟಕ್ಕೆ ಬಹುಪತ್ನಿತ್ವವನ್ನು ಸಮ್ಮತಿಸುತ್ತಿದೆಯಾದರೂ ಸಹ

ಪತಿಯಿಂದಾಗುವ ಎರಡನೇ ವಿವಾಹವು ಆ ಪತ್ನಿಯ ಪ್ರತಿ ಒಂದು ಮುಂದು ವರಿಯುತ್ತಿರುವ ಅಕ್ರಮವಾಗಿರುತ್ತದೆ. ಆದುದರಿಂದ ಯಾವ ಒಬ್ಬ ನಾರಿಯ ಪತಿಯು ಎರಡನೇ ವಿವಾಹವಾಗಿರುವನೊ ಅಂತಹ ಹೆಂಗಸು ಪತಿಯಿಂದ ಪ್ರತ್ಯೇಕವಾಗಿ ಜೀವಿಸಿ 'ಅಪರಾಧಿಕ ಪ್ರಕ್ರಿಯಾ ಸಂಹಿತೆ' (Criminal Procedure Code) ಇದರ ಪ್ರಕಾರ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು. ಇದೇ ರೀತಿಯಲ್ಲಿ ಒಂದೊಮ್ಮೆ ಪತಿಯು ಒಬ್ಬ ಉಪಪತ್ನಿಯನ್ನು ಇಟ್ಟುಕೊಂಡಿರುವ ನಾದರೆ ಈ ಕಾರಣದ ಮೇಲೆ ಪತ್ನಿಯು ಪತಿಯಿಂದ ಪ್ರತ್ಯೇಕವಾಗಿ ಜೀವಿಸುತ್ತಿದ್ದು ಅವನಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರಳಾಗಿರುವಳು.

ಒಬ್ಬ ಮುಸ್ಲಿಮ್ ಪತ್ನಿಯ ಜೀವನಾಂಶದ ಹಕ್ಕು ಕೇವಲ ಆಕೆಯ ಮತೀಯ ಕಾನೂನಿನಿಂದ ಕೊಡಲ್ಪಟ್ಟಿಲ್ಲ; ಆಕೆಗೆ ಈ ಹಕ್ಕು ಅಪರಾಧಿಕ ಪ್ರಕ್ರಿಯಾ ಸಂಹಿತೆ ಯಿಂದಲೂ ಸಿಗುತ್ತದೆ. ಆದುದರಿಂದ ಪತ್ನಿಯ ವೈವಾಹಿಕ ಬಾಧ್ಯತೆಗಳನ್ನು ಅನುಷ್ಠಾನಗೊಳಿಸಲು ನಿರಾಕರಿಸುವಿಕೆಯು ಕೇವಲ ಮುಸ್ಲಿಮ್ ಮತೀಯ ಕಾನೂ ನಿನ ಅಧೀನವಷ್ಟೇ ಅಲ್ಲ. ಬದಲಾಗಿ ಅಪರಾಧಿಕ ಪ್ರಕ್ರಿಯಾ ಸಂಹಿತೆಯು ಅನುಸಾರವೂ ನಿರ್ಣಯಿಸಬೇಕಾಗುತ್ತದೆ. ಒಬ್ಬ ಪತ್ನಿಯು ಯಾವುದೇ ಮತದವಳಾಗಿರಲಿ, ಆದರೆ ಆಕೆಯ ಜೀವನಾಂಶದ ಹಕ್ಕು ಒಂದು ಶಾಸನಬದ್ಧವಾದ ಹಕ್ಕಾಗಿದ್ದು ಇದು ಆಕೆಯ ಮತೀಯ ಕಾನೂನಿನಿಂದ ಪರಿಣಾಮಿತವಾಗುವುದಿಲ್ಲ.

ಆದುದರಿಂದ ಒಬ್ಬ ಮುಸ್ಲಿಮ್ ಪತ್ನಿಯು ತನ್ನ ಪತಿಯ ದ್ವಿತೀಯ ವಿವಾಹದ ಕಾರಣದಿಂದಾಗಿ ಅವನಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವಳೆಂದಾದರೆ ಆಕೆಯು ಅಪರಾಧಿಕ ಪ್ರಕ್ರಿಯಾ ಸಂಹಿತೆ ಇದರ ಮೇರೆಗೆ ಅವನಿಂದ ಜೀವನಾಂಶ ವನ್ನು ಪಡೆಯಲು ಹಕ್ಕುದಾರಳಾಗಿರುವಳು. ಆದರೆ ಇದೇ ಕಾಲದಲ್ಲಿ ಪತಿಯು ದಾಂಪತ್ಯದ ಹಕ್ಕುಗಳ ಪುನಸ್ಸ್ವಾಧೀನತೆಗಾಗಿ ತನ್ನ ಮತೀಯ ಕಾನೂನಿನ ಮೇರೆಗೆ ಒಂದು ದಾವೆ ಹೂಡಲು ಹಕ್ಕುದಾರನಾಗಿರುವನು. ಪತಿಯು ದ್ವಿತೀಯ ವಿವಾಹ ವಾದಾಗ ಪತ್ನಿಯು ಅವನಿಂದ ಪ್ರತ್ಯೇಕವಾಗಿ ಜೀವಿಸಿ ಅವನಿಂದ ಜೀವನಾಂಶಕ್ಕಾಗಿ ಹಕ್ಕು ದಾವೆ ಮಾಡುವ ಬಗ್ಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಮತ್ತು ಮುಸ್ಲಿಮ್ ಮತೀಯ ಕಾನೂನು ಇವುಗಳೊಳಗೆ ಒಂದು ತಾಕಲಾಟವಿದ್ದಂತೆ ತೋರುತ್ತದೆ. ತನ್ನ ಪತಿಯ ದ್ವಿತೀಯ ವಿವಾಹದ ಕಾರಣದಿಂದಾಗಿ ಒಂದೊಮ್ಮೆ ಒಬ್ಬ ಮುಸ್ಲಿಮ್ ಪತ್ನಿಯು ಅವನಿಂದ ಪ್ರತ್ಯೇಕಿತಳಾಗಿ ಜೀವಿಸಿದ್ದರೆ ಆಕೆಯು ತನ್ನ ಪತಿಯಿಂದ ಜೀವನಾಂಶವನ್ನು ಪಡೆಯುವಂತಿಲ್ಲವೆಂದು ಮಧ್ಯಪ್ರದೇಶ ಉಚ್ಚ ನ್ಯಾಯಾ ಲಯವು ಒಂದು ತೀರ್ಪು ಕೊಟ್ಟಿದೆ. ಈ ತಾಕಲಾಟಗಳ ಸಂಬಂಧದಲ್ಲಿ ಯಾವುದೇ ಒಂದು ಅಂತಿಮ ತೀರ್ಪು ಇನ್ನೂ ಕೊಡಲ್ಪಟ್ಟಿಲ್ಲವೆಂದಾದುದರಿಂದ ತನ್ನ ಪತಿಯ ದ್ವಿತೀಯ ವಿವಾಹದ ಕಾರಣದಿಂದಾಗಿ ಅವನಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವ ಒಬ್ಬ ಮುಸ್ಲಿಮ್ ಪತ್ನಿಯು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಮೇರೆಗೆ ಪಡೆ

ಯುವ ಜೀವನಾಂಶದ ಹಕ್ಕು ಕೇವಲ ತಾತ್ಕಾಲಿಕವಾದುದೆಂದು ಹೇಳಬಹುದು. ಏಕೆಂದರೆ ಪತಿ-ಪತ್ನಿಯರೊಳಗಿನ ಈ ವಿವಾಹವನ್ನು ಅವರ ಮತೀಯ ಕಾನೂನಿನ ಮೇರೆಗೆ ನಿರ್ಣಯಿಸಬೇಕಾಗುತ್ತದೆ.

ಈ ಹಕ್ಕಿನ ಜಾರಿಗೊಳಿಸುವಿಕೆ

(Enforcement of the Right)

ಒಬ್ಬ ಮುಸ್ಲಿಮ್ ಪತಿಯು ಯಾವತ್ತೂ ಕಾನೂನುಬದ್ಧವಾದ ಕಾರಣವಿಲ್ಲದೆ ಪತ್ನಿಗೆ ಜೀವನಾಂಶ ಕೊಡಲು ನಿರ್ಲಕ್ಷಿಸಿದರೆ ಆಕೆಯು ಜೀವನಾಂಶಕ್ಕಾಗಿ ಒಂದು ದಿವಾನೀ ನ್ಯಾಯಾಲಯದಲ್ಲಿ ತನ್ನ ಮತೀಯ ಕಾನೂನಿನ ಮೇರೆಗೆ ಒಂದು ದಾವೆ ಹೂಡಬಹುದು. ಇದರ ಹೊರತಾಗಿ ಆಕೆಯು ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಅನುಸಾರವೂ ಒಂದು ಫಿರ್ಯಾದಿ ಕೊಟ್ಟು ತನ್ನ ಜೀವನಾಂಶ ಪಡೆಯುವ ಹಕ್ಕನ್ನು ಜಾರಿಗೊಳಿಸಬಹುದು. ಒಂದೊಮ್ಮೆ ಅಂತಹ ಒಬ್ಬ ಮುಸ್ಲಿಮ್ ಪತ್ನಿಯು ಒಂದು ದಿವಾನೀ ನ್ಯಾಯಾಲಯದಲ್ಲಿ ದಾವೆ ಹೂಡಿ ತನ್ನ ಈ ಹಕ್ಕನ್ನು ಜಾರಿಗೊಳಿಸಬಯಸಿದರೆ ಅಲ್ಲಿ ಆ ನ್ಯಾಯಾಲಯವು ಮುಸ್ಲಿಮ್ ಮತೀಯ ಕಾನೂನನ್ನು ಅನ್ವಯಗೊಳಿಸುತ್ತದೆ. ಈ ಹಕ್ಕು ದಾವೆಯು ಮುಸ್ಲಿಮ್ ಕಾನೂನಿನ ಪ್ರಕಾರ ಸಮರ್ಥನೀಯವಾಗಿದ್ದರೆ ಆಕೆಯ ಪರವಾಗಿ ಒಂದು ಡಿಕ್ರಿಯು ಮಂಜೂರು ಮಾಡಲಾಗುತ್ತದೆ ಮತ್ತು ಆಕೆಗೆ ಕೊಡಬೇಕಾಗಿರುವ ಜೀವನಾಂಶದ ಪ್ರಮಾಣವನ್ನು ನ್ಯಾಯಾಲಯವು ನಿರ್ಣಯಿಸುತ್ತದೆ. ಒಂದೊಮ್ಮೆ ಒಬ್ಬ ಮುಸ್ಲಿಂ ಪತ್ನಿಯು ತುರ್ತು ಅವಶ್ಯಕತೆಯ ಕಾರಣದಿಂದಾಗಿ ಜೀವನಾಂಶಕ್ಕಾಗಿ ಒಂದು ಅರ್ಜಿ ಸಲ್ಲಿಸಿದರೆ ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಕ. ೧೨೫ರ ಮೇರೆಗೆ ಆಕೆಗೆ ಜೀವನಾಂಶವನ್ನು ಸಲ್ಲಿಸುವಂತೆ ಆಕೆಯ ಪತಿಗೆ ದಂಡಾಧೀಶನು ಆದೇಶಿಸಬಹುದು. ಅಪರಾಧಿಕ ಪ್ರಕ್ರಿಯಾ ಸಂಹಿತೆ ಇದರ ಕ. ೧೨೫ರ ಮೇರೆಗೆ ಒಬ್ಬ ಪ್ರಥಮ ದರ್ಜೆಯ ನ್ಯಾಯಾಧೀಶನು, ಪತಿಯು ತನ್ನ ಪತ್ನಿಗೆ ಜೀವನಾಂಶವನ್ನು ನಿರ್ಲಕ್ಷಿಸುತ್ತಿರುವನು ಅಥವಾ ನಿರಾಕರಿಸುತ್ತಿರುವನು ಎಂಬ ಬಗ್ಗೆ ಪುರಾವೆಯನ್ನು ನೋಡಿ ಸಮಾಧಾನಪಟ್ಟರೆ ಪತಿಯು ಆಕೆಗೆ ರೂ. ೫೦೦ ಮೀರದಷ್ಟು ಜೀವನಾಂಶವನ್ನು ಪ್ರತಿ ತಿಂಗಳು ಸಲ್ಲಿಸಬೇಕೆಂದು ಆದೇಶಿಸಬಹುದು. ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ನ್ಯಾಯಾಲಯವು ಜೀವನಾಂಶದ ಮೊಬಲಗಿನಲ್ಲಿ ಯಾವತ್ತೂ ಬದಲಾವಣೆಗಳನ್ನು ಮಾಡಬಹುದು. ಇದೇ ಕಾಲದಲ್ಲಿ ಒಂದೊಮ್ಮೆ ಆ ಪತ್ನಿಯು ಒಂದು ಡಿಕ್ರಿಯನ್ನು ಪಡೆದಿರುವಳೆಂದಾದರೆ ಆ ದಂಡಾಧೀಶನು ತನ್ನ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಅದರಲ್ಲಿ ಮಾರ್ಪಾಡುಗಳನ್ನು ಮಾಡಬಹುದು. ಇಂತಹ ಜೀವನಾಂಶವು ಆ ಆದೇಶದ ದಿನಾಂಕದಿಂದ ಅಥವಾ ಅರ್ಜಿ ಮಾಡಲಾದ ದಿನಾಂಕದಿಂದ ಕೊಡಿಸಲಾಗುತ್ತದೆ. ಶಿಯಾ ಮತ್ತು ಶಫಿ ಪರಂಪರೆಗಳ ಹೊರತಾಗಿ ಮುಸ್ಲಿಮ್ ಕಾನೂನಿನ ಎಲ್ಲಾ ಪರಂಪರೆಗಳ ಮೇರೆಗೆ

ಪತ್ನಿಯು ಜೀವನಾಂಶದ ಹಳೇ ಬಾಕಿಗಳನ್ನು ಪಡೆಯಲು ಹಕ್ಕುದಾರಳಲ್ಲ. ಶಿಯಾ ಮತ್ತು ಶಫೀ ಪರಂಪರೆಗಳ ಪ್ರಕಾರ ಒಬ್ಬ ಪತ್ನಿಯು ಜೀವನಾಂಶದ ಹಳೆಯ ಬಾಕಿಗಳನ್ನು ಸಹ ವಸೂಲಿ ಮಾಡಿಕೊಳ್ಳಬಹುದು. ಆದರೆ ಜೀವನಾಂಶದ ಬಗ್ಗೆ ಪತಿ-ಪತ್ನಿಯರೊಳಗೆ ಆಗಲೇ ಒಂದು ಒಪ್ಪಂದವಾಗಿದ್ದರೆ ಅಲ್ಲಿ ಹಳೆಯ ಜೀವನಾಂಶವನ್ನೂ ಸಹ ವಸೂಲಿ ಮಾಡಿಕೊಳ್ಳಬಹುದು. ಇದು ಎಲ್ಲಾ ಮುಸ್ಲಿಮ್ ಪರಂಪರೆಗಳಿಗೆ ಅನ್ವಯವಾಗುತ್ತದೆ. ಒಂದು ನ್ಯಾಯಾಲಯವು ಜೀವನಾಂಶ ಸಲ್ಲಿಸುವ ಬಗ್ಗೆ ಆದೇಶ ಮಾಡಿದ್ದು ಆಕೆಯ ಜೀವನಾಂಶವು ಸಂದಾಯ ವಾಗಿರದಿದ್ದರೆ ಒಬ್ಬ ಪತ್ನಿಯು ತನ್ನ ಜೀವನಾಂಶದ ಹಳೇ ಬಾಕಿಗಾಗಿ ಹಕ್ಕು ದಾವೆ ಮಾಡಬಹುದು. ಒಬ್ಬ ದಂಡಾಧೀಶನು ಅಪರಾಧಿಕ ಪ್ರಕ್ರಿಯಾ ಸಂಹಿತೆ ಇದರ ಪ್ರಕಾರ ಒಬ್ಬ ಮುಸ್ಲಿಮ್ ಪತ್ನಿಗೆ ಜೀವನಾಂಶವನ್ನು ಸಲ್ಲಿಸುವಂತೆ ಆದೇಶ ಮಾಡಲಾಗಿದ್ದು ಮತ್ತು ಪತಿಯು ಈ ಆದೇಶದ ಪಾಲನೆ ಮಾಡಿರದಿದ್ದರೆ ಅಥವಾ ಪಾಲನೆ ಮಾಡದಿರುವಿಕೆಗೆ ಯುಕ್ತ ಕಾರಣವಿಲ್ಲದಿದ್ದರೆ, ಆ ನ್ಯಾಯಾಧೀಶನು ಜುಲ್ಮಾನೆ ಹೇರಲು ಜಾರಿ ಮಾಡುವ ವಾರಂಟಿನ ರೀತಿಯಲ್ಲಿ ಆ ಜೀವನಾಂಶದ ಮೊಬಲಗಿಗಾಗಿ ಜಾರಿ ಮಾಡಬಹುದು ಮತ್ತು ಅಂತಹ ವಾರಂಟ್ ಜಾರಿಗೊಳಿಸ ಲಾದ ಬಳಿಕ ಒಂದೊಮ್ಮೆ ಪತಿಯು ಜೀವನಾಂಶದ ಮೊಬಲಗನ್ನು ಸಂದಾಯ ಮಾಡುತ್ತಿಲ್ಲವೆಂದಾದರೆ ಅವನಿಗೆ ಜೇಲು ಶಿಕ್ಷೆಯನ್ನು ವಿಧಿಸಬಹುದು. ಈ ಕಾರಣಕ್ಕಾಗಿ ವಿಧಿಸಲಾಗುವ ಜೇಲು ವಾಸವು ಒಂದು ತಿಂಗಳ ಕಾಲಾವಧಿಗೆ ಅಥವಾ ಜೀವನಾಂಶವನ್ನು ಸಂದಾಯ ಮಾಡಬೇಕಾಗಿರುವ ಕಾಲಾವಧಿಗೆ ಹಾಗೂ ಇವು ಗಳೊಳಗೆ ಯಾವ ಕಾಲಾವಧಿಯು ಚಿಕ್ಕದಾಗಿದೆಯೊ ಅಷ್ಟರ ವರೆಗೆ ವಿಸ್ತರಿಸ ಲ್ಪಡಬಹುದು.

ವಿಚ್ಛೇದಿತ ಪತ್ನಿಗೆ ಜೀವನಾಂಶ
(Maintenance of the Divorced Wife)

ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವಿಚ್ಛೇದಿತ ಪತ್ನಿಯು ತನ್ನ ಇದ್ದತ್ ಕಾಲಾವಧಿಯಲ್ಲಿ ಪತಿಯಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು. ಇದಕ್ಕೆ ಕಾರಣವೇನಂದರೆ ಒಬ್ಬ ಮುಸ್ಲಿಂ ಪತ್ನಿಯು ತನ್ನ ಇದ್ದತ್ ಆಚರಣೆಯ ಕಾಲದಲ್ಲಿ ಮತ್ತೊಂದು ವಿವಾಹದ ಕರಾರನ್ನು ಮಾಡಿಕೊಳ್ಳುವಂತಿಲ್ಲ. ಆದುದ ರಿಂದ ತನ್ನ ವಿಚ್ಛೇದಿತ ಪತ್ನಿಯು ಇದ್ದತ್ ಆಚರಣೆಯ ಕಾಲದಲ್ಲಿ ಆಕೆಗೆ ಪತಿಯು ಜೀವನಾಂಶವನ್ನು ಕೊಡಲು ಬಾಧ್ಯನೆಂಬುದಾಗಿ ಉಪಬಂಧಿಸಲಾಗಿದೆ. ಹನಫಿ ಕಾನೂನಿನ ಪ್ರಕಾರ ರದ್ದುಗೊಳಿಸಬಹುದಾದಂತಹ ಅಥವಾ ರದ್ದುಗೊಳಿಸಲಾಗ ದಂತಹ ತಲಾಕಿನಿಂದ ವಿಚ್ಛೇದಿತಳಾದ ಪತ್ನಿಯು ಇದ್ದತ್ ಕಾಲಾವಧಿಯಲ್ಲಿ ಪತಿ ಯಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರಳಾಗಿರುವಳು. ಒಂದೊಮ್ಮೆ ತಲಾಕಿನ ಕಾಲದಲ್ಲಿ ಪತ್ನಿಯು ಗರ್ಭಿಣಿಯಾಗಿರುವಳಾದರೆ ಅಂತಹ ಪತ್ನಿಯು

ಬಾಣಂತಿಯಾಗುವ ತನಕ ಆಕೆಗೆ ಜೀವನಾಂಶ ಕೊಡಲು ಪತಿಯು ಬಾಧ್ಯನಾಗಿರುವನು. ಒಂದೊಮ್ಮೆ ಪತಿಯು ಪತ್ನಿಯ ಗೈರುಹಾಜರಿಯಲ್ಲಿ ತಲಾಕ್ ಉಚ್ಚರಿಸಿರುವನಾದರೆ ಅಲ್ಲಿ ಆ ತಲಾಕಿನ ಸಂಗತಿಯು ತನ್ನ ಗಮನಕ್ಕೆ ಬಂದಿರುವ ದಿನಾಂಕದಿಂದ ಜೀವನಾಂಶ ಪಡೆಯಲು ಪತ್ನಿಯು ಹಕ್ಕುದಾರಳಾಗಿರುವಳು. ಹೀಗೆ ಒಂದು ವಿವಾಹ ವಿಚ್ಛೇದನೆಯ ಬಗ್ಗೆ ಪತಿಯು ಪತ್ನಿಗೆ ಒಂದು ಸೂಚನೆ ಕೊಟ್ಟಿದ್ದರೆ ಅಲ್ಲಿ ಆ ಪತ್ನಿಯು ಆ ಸೂಚನೆಯನ್ನು ಪಡೆದಿರುವ ದಿನಾಂಕದಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರಳಾಗುವಳು ಮತ್ತು ಅಲ್ಲಿ ಪತಿಯು ಹಿಂದಿನ ಒಂದು ದಿನಾಂಕವನ್ನು ವಿವಾಹ ವಿಚ್ಛೇದನೆಯ ದಿನಾಂಕವೆಂದು ಸೂಚಿಸಿರುವನಾದರೂ ಸಹ ಅವನಿಂದ ಸೂಚಿಸಲ್ಪಟ್ಟ ಈ ದಿನಾಂಕವು ಜೀವನಾಂಶದ ಉದ್ದೇಶಕ್ಕಾಗಿ ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಬ್ಬ ಪತ್ನಿಯು ಜೀವನಾಂಶದ ಹಳೆಯ ಬಾಕಿಗಳನ್ನು ವಸೂಲಿ ಮಾಡಿಕೊಳ್ಳಲು ಹಕ್ಕುದಾರಳಾಗಿರುವಳು ಮತ್ತು ಇದರ ಬಗ್ಗೆ ಪತಿ-ಪತ್ನಿಯರೊಳಗೆ ಯಾವುದೇ ಒಂದು ನಿರ್ದಿಷ್ಟವಾದ ಕರಾರು ನಡೆದಿರಬೇಕಾಗಿಲ್ಲ. ಈ ವಿಷಯದ ಬಗ್ಗೆ ಶಫೀ ಕಾನೂನು ಶಿಯಾ ಕಾನೂನಿನ ದೃಷ್ಟಿಕೋನವನ್ನೇ ತೆಗೆದುಕೊಂಡಿದೆ.

'ಅಪರಾಧಿಕ ಪ್ರಕ್ರಿಯಾ ಸಂಹಿತೆ' ಇದರ ಮೇರೆಗೆ ಒಬ್ಬ ವಿಚ್ಛೇದಿತ ಪತ್ನಿಗೆ ಜೀವನಾಂಶ (Maintenance of Divorced Wife under Criminal Procedure Code)

ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಕ. ೧೨೫ರ ಮೇರೆಗೆ 'ಪತ್ನಿ' ಎಂಬ ಪದವು ಒಬ್ಬ ವಿಚ್ಛೇದಿತ ಪತ್ನಿ ಅಥವಾ ಪತಿಯಿಂದ ವಿಚ್ಛೇದನೆ ಪಡೆದಿದ್ದು ಪುನರ್ವಿವಾಹಿತಳಾಗಿರದ ಒಬ್ಬ ಪತ್ನಿ ಇವರನ್ನು ಒಳಗೊಂಡಿರುತ್ತದೆ; ಇಲ್ಲಿ ಅವರ ವಿವಾಹವು ಪಕ್ಷಗಾರರ ಕೃತ್ಯದಿಂದ ಅಥವಾ ಒಂದು ನ್ಯಾಯಿಕ ಡಿಕ್ರಿಯಿಂದ ವಿಘಟಿತವಾಗಿರಬಹುದು. ಮುಸ್ಲಿಮ್ ಕಾನೂನಿನ ಪ್ರಕಾರ ತನ್ನ ಪತ್ನಿಗೆ ಜೀವನಾಂಶ ಕೊಡಲು ಪತಿಯ ಬಾಧ್ಯತೆಯು ಆಕೆಯ ಇದ್ದತ್ ಕಾಲಾವಧಿಯು ಮುಗಿದಾಗ ಕೊನೆಗೊಳ್ಳುತ್ತದೆ ಮತ್ತು ಇಲ್ಲಿ ಆಕೆಯು ಪುನರ್ವಿವಾಹಿತಳಾದರೂ ಸಹ ಅದು ಇದರ ಮೇಲೆ ಯಾವತ್ತೂ ಪರಿಣಾಮವನ್ನು ಬೀರುವುದಿಲ್ಲ. ಆದರೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಇದರ ಪ್ರಕಾರ ಒಬ್ಬ ವಿಚ್ಛೇದಿತ ಪತ್ನಿಯು ಒಂದೊಮ್ಮೆ ಅವಿವಾಹಿತೆಯಾಗಿ ಉಳಿದರೆ ಆಕೆಯು ತನ್ನ ಇದ್ದತ್ ಕಾಲಾವಧಿಯು ಬಳಿಕವೂ ಸಹ ತನ್ನ ಪತಿಯಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರಳಾಗಿರುವಳು. ಹೀಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಪ್ರಕಾರ ಒಬ್ಬ ಮುಸ್ಲಿಮ್

ಪತಿಯು ತನ್ನ ಪತ್ನಿಗೆ ವಿಚ್ಛೇದನೆ ಕೊಡುವುದರಿಂದ ಆಕೆಗೆ ಜೀವನಾಂಶವನ್ನು ಕೊಡುವ ತನ್ನ ಕರ್ತವ್ಯದಿಂದ ತಪ್ಪಿಸಿಕೊಳ್ಳುವಂತಿಲ್ಲ. ಆದರೆ ಒಬ್ಬ ವಿಚ್ಛೇದಿತ ಪತ್ನಿಯು ತನ್ನ ಜೀವನಾಂಶಕ್ಕಾಗಿ ಹಕ್ಕುದಾವೆ ಮಾಡುವಿಕೆಯು ಈ ಸಂಹಿತೆಯ ಕ. ೧೨೭(೩) ಇದಕ್ಕೆ ಬಾಧ್ಯವಾಗಿದೆ, ಮತ್ತು ಈ ಕೆಳಗಿನ ಪರಿಸ್ಥಿತಿಗಳಲ್ಲಿ ಪತ್ನಿಗೆ ಜೀವನಾಂಶ ಸಲ್ಲಿಸಬೇಕೆಂದು ಮಾಡಲಾಗುವ ಒಂದು ಆದೇಶವು ರದ್ದುಗೊಳಿಸಲಾಗುತ್ತದೆ :

ಎ) ಒಂದೊಮ್ಮೆ ಆ ವಿಚ್ಛೇದಿತ ನಾರಿಯು ಪುನರ್ವಿವಾಹಿತಳಾದರೆ.

ಬಿ) ಒಂದೊಮ್ಮೆ ಅಂತಹ ಒಬ್ಬ ನಾರಿಯು ಯಾವತ್ತೂ ರೂಢಿಗತ ಅಥವಾ ಮತೀಯ ಕಾನೂನಿನ ಪ್ರಕಾರ ತನಗೆ ಸಂದೇಯವಾಗಿರುವ ಮೊಬಲಗನ್ನು ಪಡೆದಿರುವಳಾದರೆ, ಮತ್ತು

ಸಿ) ಒಂದೊಮ್ಮೆ ಅಂತಹ ಒಬ್ಬ ನಾರಿಯು ಪತಿಯಿಂದ ವಿಚ್ಛೇದನೆ ಪಡೆದ ಬಳಿಕ ಸ್ವೇಚ್ಛೆಯಿಂದ ತನ್ನ ಜೀವನಾಂಶದ ಹಕ್ಕನ್ನು ಸಮರ್ಪಿಸಿರುವಳೆಂದಾದರೆ.

ವಿಧವೆಗೆ ಜೀವನಾಂಶ (Maintenance of Widow)

ಪತಿಯು ಮೃತನಾದ ತತ್‌ಕ್ಷಣದಲ್ಲಿ ಆಕೆಯ ಜೀವನಾಂಶದ ಹಕ್ಕು ಕೊನೆಗೊಳ್ಳುತ್ತದೆ. ಪತಿಯ ಮರಣದ ಬಳಿಕ ಪತ್ನಿಯು ತನ್ನ ಇದ್ದತ್ ಕಾಲಾವಧಿಯಲ್ಲೂ ಸಹ ಜೀವನಾಂಶವನ್ನು ಪಡೆಯಲು ಹಕ್ಕುದಾರಳಾಗುವದಿಲ್ಲ. ಇಂತಹ ಪ್ರಸಂಗದಲ್ಲಿ ಆಕೆಯು ತನ್ನ ಪತಿಯ ಸಂಬಂಧಿಕರಿಂದಾಗಲಿ ಅಥವಾ ಪತಿಯ ಸ್ವತ್ತಿನಿಂದಾಗಲಿ ಜೀವನಾಂಶ ಪಡೆಯಲು ಹಕ್ಕುದಾರಳಲ್ಲ. ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರಲ್ಲಿ ಬರುವ 'ಪತ್ನಿ' ಎಂಬ ಪದವು ವಿಧವೆಯನ್ನು ಒಳಗೊಳ್ಳುವುದಿಲ್ಲ. ಆದುದರಿಂದ ಈ ಸಂಹಿತೆಯ ಪ್ರಕಾರ ಒಬ್ಬ ವಿಧವೆಯು ಜೀವನಾಂಶ ಪಡೆಯಲು ಹಕ್ಕುದಾವೆ ಮಾಡುವಂತಿಲ್ಲ.

ಮಕ್ಕಳಿಗೆ ಜೀವನಾಂಶ (Maintenance to Children)

ತಂದೆಯು ತನ್ನ ಮಕ್ಕಳ ಕಾನೂನೀ ಸಂರಕ್ಷಕನಾಗಿರುವನು. ಆದುದರಿಂದ ತನ್ನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಜೀವನಾಂಶ ಕೊಡಲು ತಂದೆಯು ಪ್ರಾಥಮಿಕವಾಗಿ ಹೊಣೆಯಾಗುವನು. ಮಗನು ತಾರುಣ್ಯಕ್ಕೆ ಬರುವಷ್ಟು ಕಾಲ ಅವನಿಗೆ ಜೀವನಾಂಶ ಕೊಡಲು ಒಬ್ಬ ತಂದೆಯು ಬಾಧ್ಯನಾಗಿರುವನು. 'ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩' ಇದರ ಮೇರೆಗೆ ಒಬ್ಬ ಮಗನು ೧೮ ವರ್ಷಗಳ ತನಕ ಜೀವನಾಂಶಕ್ಕಾಗಿ ಹಕ್ಕುದಾವೆ ಮಾಡಲು ಅಧಿಕಾರ ಹೊಂದಿರುವನು. ಒಬ್ಬ ವಯಸ್ಕ ಮಗನು ನಿರ್ಯೋಗ್ಯ ಅಥವಾ ತನ್ನನ್ನು ತಾನು ನೋಡಿಕೊಳ್ಳಲು ಅನರ್ಹನಾಗಿರುವ ಹೊರತು ಅವನ ತಂದೆಯು ಅವನಿಗೆ ಜೀವನಾಂಶ ಕೊಡಲು ಬಾಧ್ಯನಲ್ಲ. ಯಾವತ್ತೂ ಒಂದು ಯುಕ್ತ ಕಾರಣವಿಲ್ಲದೆ ಒಬ್ಬ ಅಲ್ಪವಯಿ ಮಗನು ತನ್ನ ತಂದೆ

ಯೊಂದಿಗೆ ಜೀವಿಸುತ್ತಿಲ್ಲವೆಂದಾದರೆ ಅಲ್ಲಿ ಅಂತಹ ಅಲ್ಪವಯಿ ಮಗನಿಗೆ ಜೀವನಾಂಶ ಕೊಡಲು ತಂದೆಯು ಬಾಧ್ಯನಲ್ಲ. ಒಂದು ಯುಕ್ತ ಕಾರಣವಿಲ್ಲದೆ ತನ್ನ ತಂದೆಯಿಂದ ಪ್ರತ್ಯೇಕವಾಗಿ ಜೀವಿಸುತ್ತಿರುವ ಒಬ್ಬ ಅಲ್ಪವಯಿ ಮಗನು ತನ್ನ ತಂದೆಯಿಂದ ಜೀವನಾಂಶ ಪಡೆಯುವದಕ್ಕಾಗಿ ಹಕ್ಕು ದಾವೆ ಮಾಡುವಂತಿಲ್ಲ.

ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ತಂದೆಯು ತನ್ನ ಮಗಳು ವಿವಾಹಿತಳಾಗುವ ತನಕ ಆಕೆಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು. ಒಬ್ಬ ವಿಧವೆಯಾದ ಅಥವಾ ವಿಚ್ಛೇದಿತಳಾಗ ಮಗಳು ತನ್ನ ತಂದೆಯಿಂದ ಜೀವನಾಂಶ ಪಡೆಯಲು ಹಕ್ಕುದಾರಳಾಗಿರುವಳು. ಆದರೆ ಒಬ್ಬ ಅವಿವಾಹಿತ ಮಗಳು ಯುಕ್ತ ಕಾರಣವಿಲ್ಲದೆ ತನ್ನ ತಂದೆಯಿಂದ ಪ್ರತ್ಯೇಕವಾಗಿ ಜೀವಿಸುತ್ತಿದ್ದರೆ ಆಕೆಯು ಜೀವನಾಂಶಕ್ಕಾಗಿ ತನ್ನ ತಂದೆಯ ಪ್ರತಿ ಹಕ್ಕುದಾವೆ ಮಾಡುವಂತಿಲ್ಲ. ವಿಧವೆಯಾದ ಅಥವಾ ವಿಚ್ಛೇದಿತಳಾದ ಮಗಳು ಒಂದೊಮ್ಮೆ ತನ್ನನ್ನು ತಾನು ನೋಡಿಕೊಳ್ಳಲು ಅಸಮರ್ಥಳಾಗಿದ್ದರೆ ಅಲ್ಲಿಯೂ ಸಹ ತಂದೆಯು ಆಕೆಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ.

ಒಂದೊಮ್ಮೆ ಮಕ್ಕಳು ತಮ್ಮ ತಾಯಿಯ ಅಥವಾ ಇತರ ಯಾವನಾದರೊಬ್ಬ ಅಭಿರಕ್ಷೆಯಲ್ಲಿದ್ದರೆ ತಂದೆಯು ಆ ಮಕ್ಕಳಿಗೆ ಜೀವನಾಂಶ ಕೊಡುವ ಬಾಧ್ಯತೆಯಿಂದ ಪಾರಾಗುವುದಿಲ್ಲ. ಒಂದೊಮ್ಮೆ ತನ್ನ ಮಕ್ಕಳು ತನ್ನ ಅಭಿರಕ್ಷೆಯಲ್ಲಿಲ್ಲದಿದ್ದರೂ ಸಹ ತಂದೆಯು ಆ ಮಕ್ಕಳಿಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ ತಂದೆಯು ತನ್ನ ಮಕ್ಕಳ ಕಾನೂನೀ ಹಾಗೂ ನೈಸರ್ಗಿಕ ಸಂರಕ್ಷಕನಾಗಿರುವನು.

ತನ್ನ ಮಕ್ಕಳಿಗೆ ಜೀವನಾಂಶ ಕೊಡುವಲ್ಲಿ ಒಂದೊಮ್ಮೆ ತಂದೆಯು ಸಾಕಷ್ಟು ಆರ್ಥಿಕ ಅನುಕೂಲತೆಗಳನ್ನು ಹೊಂದಿಲ್ಲವೆಂದಾದರೆ ಮತ್ತು ಒಂದೊಮ್ಮೆ ಆ ಮಕ್ಕಳ ತಾಯಿಯು ಆರ್ಥಿಕ ಅನುಕೂಲತೆಯನ್ನು ಹೊಂದಿರುವಳೆಂದಾದರೆ ಆಕೆಯು ತನ್ನ ಮಕ್ಕಳಿಗೆ ಜೀವನಾಂಶ ಕೊಡಲು ಬಾಧ್ಯಳಾಗಿರುವಳು. ಆದರೆ ಒಂದೊಮ್ಮೆ ತಾಯಿಯೂ ಸಹ ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿ ಇಲ್ಲದಿದ್ದರೆ ಆಗ ಆ ಮಕ್ಕಳಿಗೆ ಜೀವನಾಂಶ ಕೊಡುವ ಹೊಣೆಗಾರಿಕೆಯು ಪೈತೃಕ ಅಜ್ಜನಿಗೆ ಹೋಗುತ್ತದೆ.

ಅಧರ್ಮಜ ಮಕ್ಕಳಿಗೆ ಜೀವನಾಂಶ
(Maintenance of Illegitimate Children)

ತಂದೆಯು ತನ್ನ ಅಧರ್ಮಜ ಮಕ್ಕಳ ಒಬ್ಬ ಕಾನೂನೀ ಸಂರಕ್ಷಕನಾಗಿರುವುದಿಲ್ಲ. ಆದುದರಿಂದ ತನ್ನ ಅಧರ್ಮಜ ಮಗ ಅಥವಾ ಮಗಳಿಗೆ ಜೀವನಾಂಶ ಕೊಡಲು ಆತನು ಬಾಧ್ಯನಲ್ಲ. ಹನಫಿ ಕಾನೂನಿನ ಪ್ರಕಾರ ಒಂದು ಅಧರ್ಮಜ ಮಗುವು ತನ್ನ ತಾಯಿಯಿಂದ ಜೀವನಾಂಶ ಪಡೆಯಲು ಹಕ್ಕುಳ್ಳದ್ದಾಗಿರುತ್ತದೆ. ಆದರೆ ಇತ್ನಾ ಅಶಾರಿಯಾ ಪರಂಪರೆಯ ಪ್ರಕಾರ ಒಂದು ಅಧರ್ಮಜ ಮಗುವು

ತನ್ನ ತಂದೆಯಿಂದಾಗಲಿ ಅಥವಾ ತಾಯಿಯಿಂದಾಗಲಿ ಜೀವನಾಂಶ ಪಡೆಯಲು ಹಕ್ಕುಳ್ಳದ್ದಾಗಿರುವುದಿಲ್ಲ.

ಆದರೆ ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩ ಇದರ ಕ. ೧೨೫ರ ಪ್ರಕಾರ ಒಬ್ಬ ತಂದೆಯು, ಬೇಕಾದರೆ ಅವನು ಮುಸಲ್ಮಾನನಾಗಿರಲಿ ಅಥವಾ ಆಗದಿರಲಿ, ತನ್ನ ಅಧರ್ಮಜ ಮಕ್ಕಳಿಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು. ಈ ಸಂಹಿತೆಯ ಕ. ೧೨೫ರ ಪ್ರಕಾರ ಒಂದೊಮ್ಮೆ ಒಬ್ಬ ವ್ಯಕ್ತಿಯು ಸಾಕಷ್ಟು ಆರ್ಥಿಕ ಅನುಕೂಲತೆಗಳನ್ನು ಹೊಂದಿದ್ದು ತನ್ನ ಧರ್ಮಜ ಅಥವಾ ಅಧರ್ಮಜ ಅಲ್ಪವಯಿ ಮಕ್ಕಳನ್ನು, ಅಥವಾ ತನ್ನ ಧರ್ಮಜ ಅಥವಾ ಅಧರ್ಮಜ ಮಕ್ಕಳು ವಯಸ್ಸಿಗೆ ಬಂದಿದ್ದು ತಮ್ಮನ್ನು ತಾವು ನೋಡಿಕೊಳ್ಳಲು ಅಸಮರ್ಥರಾಗಿದ್ದರೆ, ಅಂತಹ ವ್ಯಕ್ತಿಯು ತನ್ನ ಈ ಧರ್ಮಜ ಹಾಗೂ ಅಧರ್ಮಜ ಮಕ್ಕಳಿಗೆ ಜೀವನಾಂಶ ಕೊಡುವಂತೆ ಒಬ್ಬ ದಂಡಾಧೀಶನು ಆದೇಶಿಸಬಹುದು.

ಹೆತ್ತವರಿಗೆ ಜೀವನಾಂಶ (Maintenance of Parents)

ಮುಸ್ಲಿಮ್ ಕಾನೂನಿನ ಪ್ರಕಾರ ಮಕ್ಕಳು ತಮ್ಮ ದಾರಿದ್ರ್ಯಾವಸ್ಥೆಯಲ್ಲಿರುವ ಹೆತ್ತವರಿಗೆ ಜೀವನಾಂಶ ಕೊಡಲು ಬಾಧ್ಯರಾಗಿರುವರು. ಇದರ ಬಗ್ಗೆ ಇಸ್ಲಾಮಿನ ತತ್ವವು ಹೇಗಿದೆಯೆಂದರೆ ಮಕ್ಕಳು ತಮ್ಮ ಹೆತ್ತವರಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರರಾಗಿರುವುದರಿಂದ ತಮ್ಮ ಹೆತ್ತವರಿಗೆ ಜೀವನಾಂಶವನ್ನು ಕೊಡಲು ಇವರು ಕರ್ತವ್ಯಬದ್ಧರಾಗಿರುವರು. ಹೆತ್ತವರಿಗೆ ಜೀವನಾಂಶವನ್ನು ಕೊಡುವ ಬಗ್ಗೆ ಮುಸ್ಲಿಮ್ ಕಾನೂನಿನ ನಿಯಮಗಳು ಈ ಕೆಳಗಿನಂತಿವೆ :

೧) ತಮ್ಮ ಹೆತ್ತವರು ದಾರಿದ್ರ್ಯಾವಸ್ಥೆಯಲ್ಲಿದ್ದು ಮತ್ತು ಮಕ್ಕಳು ಸಾಕಷ್ಟು ಆರ್ಥಿಕ ಅನುಕೂಲತೆಗಳನ್ನು ಹೊಂದಿರುವರೆಂದಾದರೆ ಅಲ್ಲಿ ಅಂತಹ ಹೆತ್ತವರಿಗೆ ಜೀವನಾಂಶವನ್ನು ಒದಗಿಸಲು ಆ ಮಕ್ಕಳು ಬಾಧ್ಯರಾಗಿರುವರು.

೨) ಮಗಂದಿರು ಮತ್ತು ಮಗಳಂದಿರು ತಮ್ಮ ಹೆತ್ತವರಿಗೆ ಜೀವನಾಂಶವನ್ನು ಕೊಡಲು ಸಮಾನರಾಗಿ ಬಾಧ್ಯರಾಗಿರುವರು. ಈ ಬಾಧ್ಯತೆಯ ಬಗ್ಗೆ ಮಗ ಮತ್ತು ಮಗಳು ಇವರೊಳಗೆ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಅವರ ಈ ಬಾಧ್ಯತೆಯು ಜಂಟಿ ಹಾಗೂ ಸಮಾನವಾಗಿರುತ್ತದೆ. ಒಂದೊಮ್ಮೆ ಕೆಲವು ಮಕ್ಕಳೊಳಗೆ ಒಬ್ಬನು ಆರ್ಥಿಕ ಅನುಕೂಲತೆಗಳನ್ನು ಹೊಂದಿರುವನಾದರೆ ಮತ್ತು ಉಳಿದವರು ಆರ್ಥಿಕ ಅನುಕೂಲತೆಗಳನ್ನು ಹೊಂದಿಲ್ಲವೆಂದಾದರೆ ಅಲ್ಲಿ ಆರ್ಥಿಕ ಅನುಕೂಲತೆಗಳನ್ನು ಹೊಂದಿರುವ ಮಗನು ತನ್ನ ಹೆತ್ತವರಿಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ.

೩) ಒಬ್ಬ ಮಗನು ಕಷ್ಟದಲ್ಲಿದ್ದರೂ ಸಹ ಮತ್ತು ತನ್ನ ತಾಯಿಯು ಬಡವಳಾಗಿದ್ದರೆ ಮತ್ತು ಆಕೆಯು ದಾರಿದ್ರ್ಯಾವಸ್ಥೆಯಲ್ಲಿಲ್ಲದಿದ್ದರೂ ಸಹ ಆಕೆಗೆ

ಜೀವನಾಂಶವನ್ನು ಕೊಡಲು ಬಾಧ್ಯನಾಗಿರುವನು. ಒಬ್ಬ ಮಗನು ಬಡವನಾಗಿದ್ದು ಒಂದಿಷ್ಟು ದುಡಿಮೆಯುಳ್ಳವನಾಗಿದ್ದರೆ ಏನನ್ನೂ ದುಡಿಯುತ್ತಿಲ್ಲದ ತನ್ನ ಬಡ ತಂದೆಗೆ ಜೀವನಾಂಶ ಕೊಡಲು ಬಾಧ್ಯನಾಗಿರುವನು.

೪) ಒಂದೊಮ್ಮೆ ಒಬ್ಬ ಮಗನು ತನ್ನ ತಂದೆ-ತಾಯಿಗಳೊಳಗೆ ಒಬ್ಬನನ್ನು ಮಾತ್ರ ಸಾಕಲು ಶಕ್ತಿ ಪಡೆದಿರುವನೇದಾದರೆ ಅಲ್ಲಿ ತಾಯಿಯು ತಂದೆಯ ಮೇಲೆ ಆದ್ಯತೆ ಪಡೆಯುವಳು. ಆದರೆ ಶಿಯಾ ಕಾನೂನಿನ ಇತ್ನಾ ಅಶಾರಿಯಾ ಪರಂಪರೆಯ ಪ್ರಕಾರ ಒಂದೊಮ್ಮೆ ತಂದೆ-ತಾಯಿಯರಿಬ್ಬರೂ ಬಡವರಾಗಿದ್ದು ಮಗನಲ್ಲಿ ಸ್ವಲ್ಪಮಟ್ಟಿಗೆ ಆದಾಯವಿದ್ದರೆ ಅವನು ತಂದೆ-ತಾಯಿಯರೊಳಗೆ ಜೀವನಾಂಶವನ್ನು ಹಂಚಬಹುದು.

೫) ಒಂದೊಮ್ಮೆ ಮಕ್ಕಳು ತಮ್ಮ ಹೆತ್ತವರನ್ನು ಪ್ರತ್ಯೇಕವಾಗಿ ಪೋಷಿಸಲು ಅಸಮರ್ಥರಾಗಿದ್ದರೆ ಅವರು ತಮ್ಮ ಹೆತ್ತವರನ್ನು ತಮ್ಮೊಂದಿಗೆ ಇಟ್ಟುಕೊಂಡು ಅವರನ್ನು ಪೋಷಿಸುವಂತೆ ಆ ಮಕ್ಕಳ ಮೇಲೆ ಒತ್ತಡ ತರಬಹುದು.

೬) ಒಬ್ಬ ಮಗನು ತನ್ನ ಸ್ವಂತ ತಾಯಿಯಾಗಿರದ ಆದರೆ ತನ್ನ ತಂದೆಯ ಪತ್ನಿಯಾಗಿರುವ ಒಬ್ಬ ನಾರಿಗೆ ಜೀವನಾಂಶ ಕೊಡಲು ಬಾಧ್ಯನಲ್ಲ. ಒಂದೊಮ್ಮೆ ಒಬ್ಬ ತಂದೆಗೆ ಇಬ್ಬರು ಅಥವಾ ಅಧಿಕ ಪತ್ನಿಯರಿದ್ದರೆ ಅವರೊಳಗೆ ಯಾವಳಾದರೊಬ್ಬಳನ್ನು ಪೋಷಿಸುವಂತಹ ಖರ್ಚನ್ನು ಅವನ ಕೈಯಲ್ಲಿ ಕೊಡಬೇಕು ಮತ್ತು ಅವನು ಅದನ್ನು ಅವರೆಲ್ಲರೊಳಗೆ ಸಮಾನವಾಗಿ ಹಂಚುವನು.

೭) ಒಂದೊಮ್ಮೆ ಹೆತ್ತವರು ಬಡವರಾಗಿದ್ದರೆ ಮತ್ತು ಅವರ ಧರ್ಮವು ಮಕ್ಕಳ ಧರ್ಮದಿಂದ ಭಿನ್ನವಾಗಿದ್ದರೆ ಅಲ್ಲಿಯೂ ಸಹ ಆ ಹೆತ್ತವರು ಮಕ್ಕಳಿಂದ ಜೀವನಾಂಶ ಪಡೆಯಲು ಹಕ್ಕುದಾರರಾಗಿರುವರು.

ಅಜ್ಜ ಮತ್ತು ಅಜ್ಜಿಗೆ ಜೀವನಾಂಶ
(Maintenance to Grand parents)

ಒಂದೊಮ್ಮೆ ಪೈತೃಕ ಅಥವಾ ಮಾತೃಕ ಅಜ್ಜ ಅಜ್ಜಿಯರು ಬಡವರಾಗಿದ್ದರೆ ಮತ್ತು ಅವರ ಜೀವಸಕ್ಕಾಗಿ ಸಹಾಯದ ಅವಶ್ಯಕತೆಯಿದ್ದರೆ ಅಲ್ಲಿ ಮಕ್ಕಳು ಅವರಿಗೆ ಜೀವನಾಂಶವನ್ನು ಕೊಡಲು ಬಾಧ್ಯರಾಗಿರುವರು. ತಂದೆತಾಯಿಗಳು ಯಾವ ರೀತಿಯಲ್ಲಿ ತಮ್ಮ ಮಕ್ಕಳಿಂದ ಜೀವನಾಂಶ ಪಡೆಯಲು ಹಕ್ಕುದಾರರಾಗಿರುವರೊ ಅದೇ ರೀತಿಯಲ್ಲಿ ಅಜ್ಜ ಮತ್ತು ಅಜ್ಜಿ ತಮ್ಮ ಮೊಮ್ಮಕ್ಕಳಿಂದ ಜೀವನಾಂಶ ಪಡೆಯಲು ಹಕ್ಕುದಾರರಾಗಿರುವರು. ಆದರೆ, ಒಂದೊಮ್ಮೆ ಅಜ್ಜ ಅಜ್ಜಿಯರಿಗೆ

ತಮ್ಮವೇ ಆಗಿರುವ ಮಕ್ಕಳಿದ್ದರೆ ಅವರು ಮೊಮ್ಮಕ್ಕಳಿಂದ ಜೀವನಾಂಶವನ್ನು ಪಡೆಯಲು ಹಕ್ಕುದಾರರಲ್ಲ.

ಹೆತ್ತವರಿಗೆ ಜೀವನಾಂಶ ಕೊಡಲು ಶಾಸನಬದ್ಧ ಉಪಬಂಧಗಳು (Statutory Provisions for Maintenance of the Parents)

'ಅಪರಾಧಿಕ ಪ್ರಕ್ರಿಯಾ ಸಂಹಿತೆ, ೧೯೭೩' ಇದರ ಕ. ೧೭೫ ರಲ್ಲಿ ಹೆತ್ತವರಿಗೆ ಜೀವನಾಂಶ ಕೊಡುವ ಬಗ್ಗೆ ಉಪಬಂಧ ಮಾಡಲಾಗಿದೆ. ಒಬ್ಬ ವ್ಯಕ್ತಿಯು ಸಾಕಷ್ಟು ಆರ್ಥಿಕ ಅನುಕೂಲತೆಗಳನ್ನು ಹೊಂದಿರುವನಾದರೆ ಮತ್ತು ತನ್ನ ತಂದೆ ಅಥವಾ ತಾಯಿಗೆ ಜೀವನಾಂಶ ಕೊಡಲು ನಿರಾಕರಿಸುತ್ತಿರುವನೆಂದಾದರೆ ಅಂತಹ ವ್ಯಕ್ತಿಯು ತನ್ನ ಹೆತ್ತವರಿಗೆ ಮಾಸಿಕ ರೂ. ೫೦೦ ಮೀರದಂತೆ ಪ್ರತಿ ತಿಂಗಳು ಜೀವನಾಂಶವನ್ನು ಕೊಡಬೇಕೆಂದು ಒಬ್ಬ ಪ್ರಥಮ ದರ್ಜೆಯ ದಂಡಾಧೀಶನು ಆದೇಶ ಮಾಡಬಹುದು. ಹೆತ್ತವರ ಜೀವನಾಂಶಕ್ಕೆ ಸಂಬಂಧಿಸುವ ಶಾಸನಬದ್ಧ ನಿಯಮಗಳು ಮಕ್ಕಳ ಜೀವನಾಂಶದ ಸಂಬಂಧದಲ್ಲಿ ಹೇಗಿವೆಯೋ ಹಾಗೆಯೇ ಇವೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯು ಎಲ್ಲ ಮತಾನುಯಾಯಿಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ ಮತ್ತು ಮತದ ಭಿನ್ನತೆಯು ಅದರ ಮೇಲೆ ಯಾವುದೇ ರೀತಿಯ ಪರಿಣಾಮವನ್ನು ಬೀರುವುದಿಲ್ಲ. ಇದರ ಪರಿಣಾಮವಾಗಿ ಒಂದೊಮ್ಮೆ ಹೆತ್ತವರು ಮುಸಲ್ಮಾನರಾಗಿರುವದು ನಿಂತುಬಿಟ್ಟರೂ ಸಹ ತಮ್ಮ ಮಕ್ಕಳಿಂದ ಜೀವನಾಂಶ ಪಡೆಯುವ ಅವರ ಹಕ್ಕು ನಿರ್ಮೂಲವಾಗುವುದಿಲ್ಲ.

ಸಂಬಂಧಿಕರಿಗೆ ಜೀವನಾಂಶ (Maintenance of Relatives)

ಒಬ್ಬ ದಾರಿದ್ರ್ಯಾವಸ್ಥೆಯಲ್ಲಿರುವ ವ್ಯಕ್ತಿಗೆ ಜೀವನಾಂಶವನ್ನು ಸಲ್ಲಿಸಲು ನೇರ ವಂಶಜರು ವಿಫಲರಾದರೆ ಅಲ್ಲಿ ಪಾರ್ಶ್ವಿಕರು ಅವನಿಗೆ ಜೀವನಾಂಶವನ್ನು ಒದಗಿಸಲು ಬಾಧ್ಯರಾಗಿರುವರು. ಸಂಬಂಧಿಕರಿಗೆ ಜೀವನಾಂಶ ಕೊಡುವ ಬಗ್ಗೆ ಮುಸ್ಲಿಮ್ ಕಾನೂನು ಪಾರಸ್ಪರಿಕತೆಯ ಸಿದ್ಧಾಂತದ ಮೇಲೆ ಆಧಾರಿತವಾಗಿದೆ. ಸಂಬಂಧಿಕರು ಒಬ್ಬ ವ್ಯಕ್ತಿಯ ಸ್ವತ್ತಿನ ವಾರಸು ಪಡೆಯಲು ಹಕ್ಕುಳ್ಳವರಾಗಿದ್ದುದರಿಂದ ಅವರಿಗೆ ತಮ್ಮ ಸಂಬಂಧಿಕರೊಳಗೆ ದಾರಿದ್ರ್ಯಾವಸ್ಥೆಯಲ್ಲಿರುವ ವ್ಯಕ್ತಿಗಳಿಗೆ ಜೀವನಾಂಶವನ್ನು ಕೊಡುವ ಒಂದು ತತ್ಸಮಾನವಾದ ಬಾಧ್ಯತೆಯು ಬರುತ್ತದೆ. ಆದರೆ ಒಬ್ಬ ವ್ಯಕ್ತಿಗೆ ಜೀವನಾಂಶ ಕೊಡಲು ಪಾರ್ಶ್ವಿಕ ಸಂಬಂಧಿಕರ ಕರ್ತವ್ಯವು ಒಂದು ಪರಂತುಕಕ್ಕೆ ಬಾಧ್ಯವಾಗಿದೆ. ಆ ಪರಂತುಕವು ಯಾವುದೆಂದರೆ ಆ ರೀತಿಯಾಗಿ ಜೀವನಾಂಶವನ್ನು ಪಡೆಯುತ್ತಿರುವ ಒಬ್ಬ ವ್ಯಕ್ತಿಯ ಕಬ್ಜೆಯಲ್ಲಿ ಯಾವತ್ತೂ ಸ್ವತ್ತು ಇದ್ದಿತೆಂದಾದರೆ, ಅಥವಾ ಅವನು ತನ್ನ ಜೀವನಕ್ಕಾಗಿ ಸಂಪಾದನೆ ಮಾಡಲು ಸಮರ್ಥನಾಗಿದ್ದರೆ, ಆಗ ಅಂತಹ ಪಾರ್ಶ್ವಿಕ ಸಂಬಂಧಿಕರು ಆ ಜೀವನಾಂಶದ ವೆಚ್ಚವನ್ನು ಅಂತಹ ವ್ಯಕ್ತಿಯ ತಂದೆಯಿಂದ ವಸೂಲು ಮಾಡಿಕೊಳ್ಳಬಹುದು ಮತ್ತು ಅಂತಹ ಸ್ವತ್ತಿ

ನಿಂದ ಅಥವಾ ತನ್ನ ಮಗನ ದುಡಿಮೆಯಿಂದ ಆ ವೆಚ್ಚವನ್ನು ತುಂಬಿಕೊಳ್ಳಬಹುದು. ಸಂಬಂಧಿಕರ ಜೀವನಾಂಶವನ್ನು ಪಡೆಯುವ ಹಕ್ಕು ಒಬ್ಬ ವ್ಯಕ್ತಿಯು ನಿಷೇಧಿತ ಹಂತದೊಳಗೆ ಬಂದರೆ ಮಾತ್ರ ಸಿಗುತ್ತದೆ. ಎರಡನೆಯದಾಗಿ, ಅಂತಹ ಸಂಬಂಧಿಕನು ತನ್ನಿಂದ ಜೀವನಾಂಶ ಪಡೆಯಲಿರುವ ವ್ಯಕ್ತಿಯ ಸ್ವತ್ತಿನಲ್ಲಿ ತನಗೆ ಇದ್ದಿರುವ ಪಾಲಿನ ಮಟ್ಟಿಗಷ್ಟೇ ಅಂತಹವನಿಗೆ ಜೀವನಾಂಶವನ್ನು ಕೊಡಲು ಬಾಧ್ಯನಾಗಿರುವನು.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಪಾರ್ಶ್ವಿಕರು ಯಾವತ್ತೂ ಜೀವನಾಂಶಕ್ಕೆ ಹಕ್ಕುಳ್ಳವರಲ್ಲ.

ಪುತ್ರ ವಧುವಿಗೆ ಜೀವನಾಂಶ (Maintenance Daughter-in-Law)

ಒಬ್ಬ ಮುಸಲ್ಮಾನನು ತನ್ನ ಪುತ್ರವಧುವಿಗೆ ಜೀವನಾಂಶವನ್ನು ಕೊಡಲು ಬಾಧ್ಯನಲ್ಲ. ಒಂದೊಮ್ಮೆ ಆ ಪುತ್ರವಧುವು ವಿಧವೆಯಾಗಿದ್ದರೆ ಅಥವಾ ತನ್ನನ್ನು ತಾನು ಪೋಷಿಸಿಕೊಳ್ಳಲು ಅಸಮರ್ಥಳಾಗಿದ್ದರೂ ಸಹ ಅಲ್ಲಿ ಪತಿಯ ಪಿತನು ಆಕೆಗೆ ಜೀವನಾಂಶ ಕೊಡಲು ಬಾಧ್ಯನಲ್ಲ.

——

ಅಧ್ಯಾಯ ೧೦

ದಾನ (Gift)

ದಾನವೆಂದರೆ ಸ್ವತ್ತಿನ ಒಂದು ಹಸ್ತಾಂತರಣವಾಗಿದ್ದು ಅದರಲ್ಲಿ ಸ್ವಾಮಿತ್ವವು ಒಬ್ಬ ಜೀವಿತ ವ್ಯಕ್ತಿಯಿಂದ ಇನ್ನೊಬ್ಬ ಜೀವಿತ ವ್ಯಕ್ತಿಗೆ ಹಸ್ತಾಂತರಣವಾಗುತ್ತದೆ ಮತ್ತು, ಆ ಹಸ್ತಾಂತರಣದಲ್ಲಿ ಯಾವತ್ತೂ ಪ್ರತಿಫಲವಿರುವುದಿಲ್ಲ. ಆದುದರಿಂದ ಒಂದು ದಾನವು ಜೀವಿತ ವ್ಯಕ್ತಿಗಳೊಳಗಾಗುವ ಒಂದು ಹಸ್ತಾಂತರಣವಾಗಿರುತ್ತದೆ. ಒಂದೊಮ್ಮೆ ಒಂದು ಸ್ವತ್ತಿನ ಹಸ್ತಾಂತರಣವು ಹಸ್ತಾಂತರಿಯ ಮರಣದ ಬಳಿಕ ಕಾರ್ಯಾಚರಣೆಗೆ ಬರುವದಾದರೆ ಆ ವ್ಯವಹಾರವು ಒಂದು ದಾನವಾಗುವುದಿಲ್ಲ. ಅದೊಂದು ಮರಣ ಶಾಸನವಾಗುತ್ತದೆ. ಅದಲ್ಲದೆ ದಾನವು ಒಂದು ಉಚಿತವಾದ ಹಸ್ತಾಂತರಣವಾಗಿರುತ್ತದೆ. ಇಲ್ಲಿ ಯಾವುದೇ ರೀತಿಯ ಪ್ರತಿಫಲವಿರುವುದಿಲ್ಲ. ಒಂದೊಮ್ಮೆ ಯಾವುದಾದರೊಂದು ಪ್ರತಿಫಲದ ಬದಲಾಗಿ ಒಂದು ಸ್ವತ್ತಿನಲ್ಲಿರುವ ಸ್ವಾಮಿತ್ವವು ಹಸ್ತಾಂತರಿಸಲ್ಪಟ್ಟರೆ ಅದೊಂದು ದಾನವಾಗುವದಿಲ್ಲ; ಬದಲಾಗಿ ಅದೊಂದು ವಿಕ್ರಯ ಅಥವಾ ವಿನಿಮಯವೆಂದು ಎಣಿಸಲ್ಪಡುತ್ತದೆ. ದಾನವೆಂದರೆ ಒಂದು ಅಸ್ತಿತ್ವದಲ್ಲಿರುವ ಸ್ವತ್ತಿನ ಸ್ವಾಮಿತ್ವವು ಜೀವಿತ ವ್ಯಕ್ತಿಗಳೊಳಗೆ ಹಸ್ತಾಂತರಿಸಲ್ಪಡುವದು. 'ದಾನ' ಈ ಪದದ ಈ ಅರ್ಥವು ಎಲ್ಲಾ ಕಾನೂನು ಪದ್ಧತಿಗಳಿಂದ ಸ್ವೀಕರಿಸಲ್ಪಟ್ಟಿದೆ ಮತ್ತು ಮಹಮ್ಮದೀಯ ಕಾನೂನು ಇದಕ್ಕೆ ಅಪವಾದವಲ್ಲ. ಮುಸ್ಲಿಮ್ ಕಾನೂನಿನಲ್ಲಿ ಒಂದು ದಾನವು 'ಹಿಬಾ' (Hiba) ಎಂದು ಕರೆಯಲ್ಪಡುತ್ತದೆ. ಒಬ್ಬ ಮುಸಲ್ಮಾನನು ದಾನದಿಂದ ತನ್ನ ಸ್ವತ್ತನ್ನು ಹಸ್ತಾಂತರಿಸಿದರೆ, ಆ ಹಸ್ತಾಂತರಣವು ಹಿಬಾ ಅಥವಾ ಒಂದು 'ಮುಸ್ಲಿಮ್ ದಾನ' ಎಂದು ಕರೆಯಲ್ಪಡುತ್ತದೆ. ಇಲ್ಲಿ ದಾನವನ್ನು ಪಡೆದಿರುವ ವ್ಯಕ್ತಿಯ ಧರ್ಮವು ಅಸಮಂಜಸವಾಗಿರುತ್ತದೆ. ಒಂದೊಮ್ಮೆ ಹಸ್ತಾಂತರಿಯು ಒಬ್ಬ ಮುಸಲ್ಮಾನನಾಗಿದ್ದರೆ ಆ ದಾನವು ಹಿಬಾ ಆಗುತ್ತದೆ. ಹೀಗೆ, ಒಂದೊಮ್ಮೆ ಒಬ್ಬ ಮುಸಲ್ಮಾನನು ಒಬ್ಬ ಹಿಂದುವಿನ ಪರವಾಗಿ ತನ್ನ ಸ್ವತ್ತನ್ನು ದಾನ ಮಾಡಿದರೆ ಆ ದಾನವು ಒಂದು ಹಿಬಾ ಆಗುತ್ತದೆ. ಒಂದು ದಾನವು ಒಂದು ಸ್ವತ್ತಿನ ಹಸ್ತಾಂತರಣವಾಗುವುದರಿಂದ ಅದು 'ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨' ಇದರಿಂದ ಶಾಸಿತವಾಗುತ್ತದೆ. 'ಸ್ವತ್ತು ಹಸ್ತಾಂತರಣ ಅಧಿನಿಯಮ' ಅದರ ಅಧ್ಯಾಯ VII ಭಾರತದಲ್ಲಿ ಎಲ್ಲಾ ಮತದ ವ್ಯಕ್ತಿಗಳಿಂದ ಮಾಡಲ್ಪಡುವ ದಾನಗಳಿಗೆ ಅನ್ವಯವಾಗುತ್ತದೆ. ಆದರೆ ಸ್ವತ್ತು ಹಸ್ತಾಂತರಣ ಅಧಿನಿಯಮ ಇದರ ಅಧ್ಯಾಯ VII ಇದರ ಉಪಬಂಧಗಳು 'ಮುಸ್ಲಿಮ್ ದಾನ

ಗಳಿಗೆ' ಅಥವಾ ಹಿಬಾ ಇದಕ್ಕೆ ಅನ್ವಯವಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಮುಸಲ್ಮಾನೇತರರಿಂದ ಮಾಡಲ್ಪಡುವ ದಾನವು ಮತ್ತು ಒಂದು ಹಿಬಾ ಇವುಗಳೊಳಗೆ ಮೂಲಭೂತ ಸ್ವರೂಪದಲ್ಲಿ ಯಾವತ್ತೂ ವ್ಯತ್ಯಾಸವಿಲ್ಲದಿದ್ದರೂ ಸಹ, ಹಿಬಾ ಇದರ ಔಪಚಾರಿಕತೆಗಳು ಮುಸಲ್ಮಾನೇತರರಿಂದ ಮಾಡಲಾಗುವ ದಾನಗಳಿಂದ ಭಿನ್ನವಾಗಿರುತ್ತವೆ. ಈ ವಿಷಯದ ಬಗ್ಗೆ ಎಲ್ಲಾ ಭಾರತೀಯರಿಗೆ ಅನ್ವಯವಾಗುವಂತಹ ನಿಯಮಗಳ ನಿರ್ಮಾಣವು ಮುಸ್ಲಿಮ್ ಮತೀಯ ಕಾನೂನಿನೊಂದಿಗೆ ವಿರೋಧವಾಗಿದ್ದುದರಿಂದ ಹಿಬಾ ಇದನ್ನು ಸ್ವತ್ತು ಹಸ್ತಾಂತರಣ ಅಧಿನಿಯಮ ಇದರ ಅಧ್ಯಾಯ VII ರಿಂದ ಹೊರತು ಪಡಿಸಲಾಗಿದೆ. ಅದಲ್ಲದೆ ಶರೀಯತ್ ಅಧಿನಿಯಮ ೧೯೩೭ ಇದು ಒಂದೊಮ್ಮೆ ಪಕ್ಷಗಾರರು ಮುಸಲ್ಮಾನರಾಗಿದ್ದರೆ ಅಲ್ಲಿ ದಾನದ ವಿಷಯಗಳಿಗೆ ಮುಸ್ಲಿಮ್ ಮತೀಯ ಕಾನೂನನ್ನು ಅನ್ವಯಗೊಳಿಸಬೇಕೆಂದು ಹೇಳಿದೆ. ಇದರ ಪರಿಣಾಮವಾಗಿ ಮುಸಲ್ಮಾನೇತರರಿಂದ ಮಾಡಲ್ಪಡುವ ದಾನಗಳು ಭಾರತದಲ್ಲಿ ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨ ಇದರಿಂದ ಶಾಸಿತವಾಗಿವೆ. ಆದರೆ ಮುಸಲ್ಮಾನರಿಂದ ಮಾಡಲ್ಪಡುವ ದಾನಗಳು ಮುಸ್ಲಿಮ್ ಮತೀಯ ಕಾನೂನುಗಳಿಂದ ಶಾಸಿತವಾಗಿವೆ. ಜೀವಿತರಾಗಿರುವ ಮುಸಲ್ಮಾನರಿಂದ ಮಾಡಲ್ಪಡುವ ವಿಕ್ರಯ, ವಿನಿಮಯ, ಅಡಮಾನ ಅಥವಾ ಭೋಗಾರ್ಪಣೆ ಇತ್ಯಾದಿ ಹಸ್ತಾಂತರಣಗಳು ಸ್ವತ್ತು ಹಸ್ತಾಂತರಣ ಅಧಿನಿಯಮದಿಂದ ಶಾಸಿತವಾಗಿವೆಯಲ್ಲದೆ ಮುಸ್ಲಿಮ್ ಕಾನೂನಿನಿಂದಲ್ಲ. ಈ ಅಧಿನಿಯಮವು ಮುಸಲ್ಮಾನರಿಂದ ಮಾಡಲಾಗುವ ದಾನಗಳಿಂದಷ್ಟೇ ಹೊರತುಪಡಿಸಿದೆ. ಮುಸ್ಲಿಮ್ ದಾನಗಳು ಸಾಂವಿಧಾನಿಕವಾಗಿ ವಿಧ್ಯುಕ್ತವಾಗಿದೆಯೆಂದು ಎಲ್ಲರೂ ಸ್ವೀಕರಿಸಿರುವರು. ಮುಸ್ಲಿಮ್ ದಾನಗಳು ಮುಸ್ಲಿಮ್ ಧರ್ಮದ ಒಂದು ಭಾಗವೆಂದು ಎಣಿಸಲ್ಪಡುತ್ತವೆ. ಆದುದರಿಂದ ಇವು ಶರೀಯತ್ ಅಧಿನಿಯಮ ೧೯೩೭ ಇದರಲ್ಲಿ ಕೂಡಿಸಲಾಗಿವೆ. ಇದೇ ಕಾರಣದಿಂದಾಗಿ ಇವು ಮುಸ್ಲಿಮ್ ಮತೀಯ ಕಾನೂನಿನಿಂದ ಶಾಸಿಸಲ್ಪಡುತ್ತವೆ: ಆದುದರಿಂದ ಸ್ವತ್ತು ಹಸ್ತಾಂತರಣ ಅಧಿನಿಯಮ ಇದರ ಕ. ೧೨೯ ರಲ್ಲಿ ಮುಸಲ್ಮಾನರಿಗೆ ಕೊಡಲಾದ ಈ ರಿಯಾಯಿತಿಯು ಭಾರತದ ಸಂವಿಧಾನದ ಅನುಚ್ಛೇದ ೧೪ ಇದನ್ನು ಉಲ್ಲಂಘಿಸುವುದಿಲ್ಲ. ದಾನಗಳಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿನ ನಿಯಮಗಳು ಯುಕ್ತ ವರ್ಗೀಕರಣದ ಮೇಲೆ ಆಧಾರಿತವಾಗಿವೆ ಮತ್ತು ಮುಸಲ್ಮಾನರಿಂದ ಮಾಡಲ್ಪಡುವ ದಾನಗಳ ಸಂಬಂಧದಲ್ಲಿ ಒಂದು ಪ್ರತ್ಯೇಕ ಕಾನೂನನ್ನು ಅನುಮತಿಸುವುದು ಒಂದು ತಾರತಮ್ಯವಾಗುವುದಿಲ್ಲ ಎಂಬುದಾಗಿ ನ್ಯಾಯಾಲಯಗಳು ತೀರ್ಪು ಕೊಟ್ಟಿವೆ. ಇಲ್ಲಿ 'ಹಿಬಾ' ಇವರ ಜಾಗೆಯಲ್ಲಿ 'ದಾನ' ಎಂಬ ಪದವು ಕೇವಲ ಅನುಕೂಲತೆಗಾಗಿ ಉಪಯೋಗಿಸಲಾಗಿದೆಯಲ್ಲದೆ ನಿಜವಾಗಿ ದಾನ ಇದು ಹಿಬಾದಿಂದ ಪ್ರತ್ಯೇಕವಾಗಿರುತ್ತದೆ.

ಹಿಬಾ ಇದರ ಒಂದು ವೈಶಿಷ್ಟ್ಯವೆಂದರೆ ಮುಸ್ಲಿಮ್ ಕಾನೂನು ಕೆಲವು

ವಿಶಿಷ್ಟ ರೀತಿಯ ದಾನಗಳನ್ನು ಮನ್ನಿಸುತ್ತದೆ ಮತ್ತು ಇವು ಇತರ ಕಾನೂನು ಪದ್ಧತಿಗಳಿಂದ ಮನ್ನಿಸಲ್ಪಟ್ಟಿಲ್ಲ. ಉದಾಹರಣೆಗಾಗಿ, 'ಹಿಬಾ-ಬಿಲ್-ಇವಾಜ್' (Hiba-bil-Ewaz), ಮತ್ತು 'ಹಿಬಾ-ಬಾ-ಶರ್ತ-ಉಲ್-ಇವಾಜ್ (Hiba-ba-sharat-uil-Ewaz) ಇವನ್ನು ಮುಸ್ಲಿಂ ಕಾನೂನಿನಲ್ಲಿ ಮನ್ನಿಸಲಾಗಿದೆ; ಮುಸ್ಲಿಂ ಕಾನೂನಿನ ಪ್ರಕಾರ ಈ ಎರಡು ಹಸ್ತಾಂತರಣಗಳು ವಿಶಿಷ್ಟ ರೀತಿಯ ದಾನಗಳೆಂದು ಎಣಿಸಲ್ಪಡುತ್ತವೆ. ಆದರೆ ವಾಸ್ತವಿಕವಾಗಿ ಈ ರೀತಿಯ ದಾನಗಳು ಕೇವಲ ನಾಮಮಾತ್ರವಾಗಿರುತ್ತವೆ. ಭಾರತದ ನ್ಯಾಯಾಲಯಗಳು ಇವನ್ನು ದಾನಗಳೆಂದು ಎಣಿಸುವುದಿಲ್ಲ. 'ಹಿಬಾ-ಬಿಲ್-ಇವಾಜ್' ಇವನ್ನು ನ್ಯಾಯಾಲಯಗಳು ಒಂದು ವಿಕ್ರಯ ಅಥವಾ ವಿನಿಮಯವೆಂದು ಮಾತ್ರ ಎಣಿಸುತ್ತವೆ. ಇದೇ ರೀತಿಯಲ್ಲಿ 'ಹಿಬಾ-ಬಾ-ಶರ್ತ್-ಉಲ್-ಇವಾಜ್' ಇದನ್ನು ಪೂರ್ವವರ್ತಿ ಪರತ್ತಿನ ಹಿಬಾ ಎಂದು ಎಣಿಸಿವೆ. ಇದಕ್ಕೆ ಕಾರಣವೇನೆಂದರೆ ಒಬ್ಬ ಮುಸಲ್ಮಾನನಿಂದ ಮಾಡಲ್ಪಟ್ಟ ಒಂದು ಹಸ್ತಾಂತರಣವು ಹಿಬಾ ಎಂದು ಎಣಿಸಲ್ಪಡುತ್ತದೊ ಇಲ್ಲವೆಂಬುದಾಗಿ ಪರೀಕ್ಷಿಸಲು ನ್ಯಾಯಾಲಯಗಳು ಈ ರೀತಿಯ ಹಸ್ತಾಂತರಗಳು 'ದಾನ' ಇದರ ಅರ್ಥವ್ಯಾಪ್ತಿಯೊಳಗೆ ಬರುತ್ತವೊ ಇಲ್ಲವೆಂದು ನೋಡುತ್ತವೆ. ಒಂದೊಮ್ಮೆ ಅಂತಹ ಒಂದು ಹಸ್ತಾಂತರವು 'ದಾನ' ಇದರ ಅರ್ಥವ್ಯಾಪ್ತಿಯೊಳಗೆ ಬರುವುದಿಲ್ಲ ವೆಂದಾದರೆ ಅದನ್ನು ನ್ಯಾಯಾಲಯಗಳು ಹಿಬಾ ಎಂದು ಎಣಿಸುವುದಿಲ್ಲ ಮತ್ತು ಅಲ್ಲಿ ಭಾರತದ ಸಾಮಾನ್ಯ ಕಾನೂನು ಅನ್ವಯಿಸಲಾಗುತ್ತದೆ. ಆದರೆ ಒಬ್ಬ ಮುಸಲ್ಮಾನನಿಂದ ಮಾಡಲ್ಪಟ್ಟಿರುವ ಒಂದು ಹಸ್ತಾಂತರಣವು 'ದಾನ' ಇದರ ಅರ್ಥವ್ಯಾಪ್ತಿಯೊಳಗೆ ಬಂದರೆ ಆ ವ್ಯವಹಾರವು ಒಂದು ಹಿಬಾ ಎಂದು ಎಣಿಸಲ್ಪಡುತ್ತದೆ ಮತ್ತು ಅದರ ವಿಧ್ಯುಕ್ತತೆ ಮತ್ತು ಕಾನೂನೀ ಪರಿಣಾಮಗಳು ಮುಸ್ಲಿಂ ಮತೀಯ ಕಾನೂನಿನ ಮೇರೆಗೆ ನಿರ್ಣಯಿಸಲಾಗುತ್ತವೆ. ಹಿಬಾ ಇದು ಪರತ್ತು ಬಾಹಿರವಾದ ಒಂದು ದಾನಕ್ಕೆ ಸಮಾನವಾಗಿರುತ್ತದೆ.

ದಾನದ ರೀತಿಯಲ್ಲಿ ಮಾಡಲ್ಪಡುವ ಹಸ್ತಾಂತರಣವು ಇಸ್ಲಾಮಿನ ಆರಂಭದ ದಿನಗಳಿಂದಲೇ ಕಾನೂನುಬದ್ಧವೆಂದು ಮನ್ನಿಸಲ್ಪಟ್ಟಿವೆ. ಅರಬಿನ ಜನರು ಪರಸ್ಪರರಿಗೆ ದಾನಗಳನ್ನು ಕೊಟ್ಟು ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯಗಳನ್ನು ಗಳಿಸುವಂತೆ ಪೈಗಂಬರರು ನಿರ್ದೇಶಿಸಿದ್ದದೆ.

ಹಿಬಾ ಇದರ ಪರಿಭಾಷೆ (Definition of Gift)

ಹಿಬಾ ಎಂದರೆ ಅಸ್ತಿತ್ವದಲ್ಲಿರುವ ಒಂದು ಸ್ವತ್ತಿನ ಪರತ್ತುಬಾಹಿರ ಹಸ್ತಾಂತರಣವಾಗಿದ್ದು ಅದು ತತ್‌ಕ್ಷಣದಲ್ಲಿ ಮಾಡಲಾಗುತ್ತದೆ ಮತ್ತು ಅದರಲ್ಲಿ ಯಾವತ್ತೂ ಪ್ರತಿಫಲವಿರುವುದಿಲ್ಲ. ಈ ಪರಿಭಾಷೆಯ ವಿಶ್ಲೇಷಣೆ ಮಾಡಿದರೆ ಅದರಲ್ಲಿ ಈ ಕೆಳಗಿನ ಅಂಶಗಳನ್ನು ಕಾಣಬಹುದು.

ಮೊದಲನೆಯದಾಗಿ ಹಿಬಾ ಅಥವಾ ಒಂದು ದಾನವು ಒಬ್ಬ ವ್ಯಕ್ತಿಯು

ಒಂದು ಸ್ವತ್ತಿನಲ್ಲಿರುವ ತನ್ನ ಸ್ವಾಮಿತ್ವದ ಹಕ್ಕುಗಳನ್ನು ಇನ್ನೊಬ್ಬ ವ್ಯಕ್ತಿಗೆ ಪ್ರದಾನ ಮಾಡುವದನ್ನು ಸೂಚಿಸುತ್ತದೆ. ದಾನವು ಪಕ್ಷಗಾರರ ಕೃತ್ಯದಿಂದಾಗಿ ಆಗುವ ಒಂದು ಸ್ವತ್ತಿನ ಹಸ್ತಾಂತರಣವಲ್ಲದೆ ಅದು ಕಾನೂನಿನ ಕಾರ್ಯಾಚರಣೆ ಯಿಂದಾಗಿ ಆಗುವ ಹಸ್ತಾಂತರಣವಲ್ಲ. ಒಂದು ದಾನದಲ್ಲಿ ಒಬ್ಬ ಜೀವಿತ ವ್ಯಕ್ತಿಯು ಸ್ವೇಚ್ಛೆಯಿಂದ ತನ್ನ ಸ್ವತ್ತುಗಳನ್ನು ಇನ್ನೊಬ್ಬ ಜೀವಿತ ವ್ಯಕ್ತಿಗೆ ಕೊಡುವನು.

ಎರಡನೆಯದಾಗಿ ದಾನವು ಒಂದು ಸ್ವತ್ತಿನ ಷರತ್ತುಬಾಹೀರವಾದ ಹಸ್ತಾಂತ ರಣವಾಗಿರುತ್ತವೆ. ಹಸ್ತಾಂತರಿಯು ಆ ದಾನಮಾಡಲ್ಪಟ್ಟ ಸ್ವತ್ತಿನ ಉಪಯೋ ಗದ ಬಗ್ಗೆ ಯಾವತ್ತೂ ಷರತ್ತು ಅಥವಾ ನಿರ್ಬಂಧಗಳನ್ನು ಹೇರುವುದಿಲ್ಲ. ಒಂದು ಸ್ವತ್ತಿನ ಸೀಮಿತ ಅಥವಾ ಭಾಗತಃ ದಾನವೂ ಮಾಡಲ್ಪಡಬಹುದು. ದಾನ ಮಾಡಲ್ಪಟ್ಟ ಸ್ವತ್ತಿನ ಅಪೂರ್ಣವಾದ ಹಕ್ಕುಗಳನ್ನು ಅಥವಾ ಷರತ್ತುಬದ್ಧವಾಗಿ ಅಥವಾ ನಿರ್ಬಂಧನೆಗಳಿಗೆ ಬಾಧ್ಯವಾಗಿ ಒಂದು ದಾನ ಮಾಡುವದು ಒಂದು ದಾನದ ಬಾವಸ್ವರೂಪಕ್ಕೆ ವಿರೋಧವಾಗಿರುತ್ತದೆ. ಆದುದರಿಂದ ಒಂದು ದಾನದಲ್ಲಿ ಇಂತಹ ಷರತ್ತುಗಳನ್ನು ಅಥವಾ ನಿರ್ಬಂಧನೆಗಳನ್ನು ಹೇರಿದರೆ, ಆ ಷರತ್ತುಗಳು ಶೂನ್ಯವೆಂದು ಎಣಿಸಲ್ಪಡುತ್ತವೆ ಮತ್ತು ಆ ಹಸ್ತಾಂತರಿತನು ಅಲ್ಲಿ ಪರಮವಾದ ಹಿತಸಂಬಂಧವನ್ನು ಹೊಂದುವನು.

ಮೂರನೆಯದಾಗಿ, ಒಂದು ದಾನದಲ್ಲಿ ಹಸ್ತಾಂತರಿಯು ಆ ಸ್ವತ್ತನ್ನು ಹಸ್ತಾಂತರಿಗೆ ತಕ್ಷಣದಲ್ಲಿ ಹಸ್ತಾಂತರಿಸುವ ಉದ್ದೇಶವನ್ನು ಹೊಂದಿರುತ್ತಾನೆ. ಒಂದು ದಾನವು ಒಂದು ಸ್ವತ್ತಿನ ವರ್ತಮಾನ ಹಸ್ತಾಂತರಣವಾಗಿರುತ್ತವೆ. ಒಂದು ಸ್ವತ್ತು ತಕ್ಷಣದಲ್ಲಿ ಹಸ್ತಾಂತರಿತನಿಗೆ ಸಂಕ್ರಾಂತವಾಗಬೇಕಾಗಿದ್ದರೆ ಅದು ದಾನದ ಕಾಲದಲ್ಲಿ ಅಸ್ತಿತ್ವದಲ್ಲಿದ್ದಿರಬೇಕು. ಒಂದು ಭಾವೀ ಸ್ವತ್ತಿನ ದಾನವು ಶೂನ್ಯ ವಾಗಿರುತ್ತದೆ.

ನಾಲ್ಕನೆಯದಾಗಿ, ದಾನವು ಪ್ರತಿಫಲವಿಲ್ಲದೆ ಮಾಡಲ್ಪಟ್ಟ ಸ್ವತ್ತಿನ ಹಸ್ತಾಂತರಣವಾಗಿರುತ್ತದೆ. ಒಂದು ದಾನ ಮಾಡಿದ ಬಗ್ಗೆ ದಾನಿಗೆ ಏನನ್ನಾದರೂ ಕೊಡಬೇಕೆಂಬ ಯಾವತ್ತೂ ಒಂದು ನಿರ್ಬಂಧನೆಯಿದ್ದರೆ ಅದು ಒಂದು ದಾನದ ಸ್ವರೂಪಕ್ಕೆ ವಿರುದ್ಧವಾಗಿರುತ್ತದೆ. ಒಂದೊಮ್ಮೆ ಒಂದು ದಾನದ ಬದಲಾಗಿ ಏನನ್ನಾದರೂ ಸ್ವೀಕರಿಸಿದರೆ ಅದೊಂದು ದಾನವಾಗುವುದಿಲ್ಲ.

ಒಂದು ವಿಧ್ಯುಕ್ತವಾದ ಹಿಬಾ ಇದರ ಅವಶ್ಯಕತೆಗಳು
(Essentials of a valid Hiba)

ಮುಸ್ಲಿಮ್ ಕಾನೂನಿನ ಪ್ರಕಾರ ಈ ಕೆಳಗಿನವುಗಳು ಒಂದು ವಿಧ್ಯುಕ್ತವಾದ ದಾನದ ಅವಶ್ಯಕತೆಗಳಾಗಿರುತ್ತವೆ :

I. ಆ ದಾನದ ಘೋಷಣೆ,

II. ಆ ದಾನದ ಸ್ವೀಕೃತಿ, ಮತ್ತು

III. ದಾನ ಮಾಡಲ್ಪಟ್ಟ ಸ್ವತ್ತಿನ ಕಬ್ಜೆಯ ಪ್ರದಾಯಕತ್ವ.

ಈ ಮೂರು ಷರತ್ತುಗಳು ಪೂರ್ತಿಗೊಳ್ಳದಿದ್ದರೆ ಒಂದು ಹಿಬಾ ಇದು ವಿಧ್ಯುಕ್ತವೆಂದು ಎಣಿಸಲ್ಪಡುವುದಿಲ್ಲ.

I) ಘೋಷಣೆ (Declaration)

ಘೋಷಣೆಯೆಂದರೆ ಒಂದು ಮೌಖಿಕ ಅಥವಾ ಲಿಖಿತ ಹೇಳಿಕೆಯಾಗಿದ್ದು ಅದು ದಾನ ಮಾಡುವ ವ್ಯಕ್ತಿಯ ಉದ್ದೇಶವನ್ನು ಸೂಚಿಸುತ್ತದೆ. ತಾನು ಒಂದು ದಾನ ಮಾಡಬಯಸುತ್ತೇನೆ ಎಂಬುದಾಗಿ ಹಸ್ತಾಂತರಿಯಿಂದ ಒಂದು ಘೋಷಣೆಯು ಮಾಡಲ್ಪಟ್ಟಿರಬೇಕು. ಒಂದು ದಾನದ ಮೂಲಕ ತನ್ನ ಸ್ವತ್ತನ್ನು ಹಸ್ತಾಂತರಿಸುವ ಬಗ್ಗೆ ಘೋಷಣೆ ಅಥವಾ ಹೇಳಿಕೆ ಕೊಡುವ ವ್ಯಕ್ತಿಯನ್ನು ದಾನಿಯೆಂದು ಕರೆಯಲಾಗುತ್ತದೆ. ಯಾವ ವ್ಯಕ್ತಿಯ ಪರವಾಗಿ ಆ ಸ್ವತ್ತು ಹಸ್ತಾಂತರಿಸಲ್ಪಡುತ್ತದೊ ಆ ವ್ಯಕ್ತಿಯನ್ನು ಆದಾತ ಎಂದು ಕರೆಯಲಾಗುತ್ತದೆ. ಆದ್ದರಿಂದ ಘೋಷಣೆಯೆಂದರೆ ಒಂದು ಸ್ವತ್ತಿನಲ್ಲಿರುವ ತನ್ನ ಸ್ವಾಮಿತ್ವದಿಂದ ತನ್ನನ್ನು ತಾನು ವಿಹೀನಗೊಳಿಸುವ ಬಗ್ಗೆ ದಾನಿಯ ಉದ್ದೇಶವಾಗಿದ್ದು ಮತ್ತು ಆ ಸ್ವಾಮಿತ್ವವನ್ನು ಆದಾತನಲ್ಲಿ ನಿಹಿತಗೊಳಿಸುವ ಬಗ್ಗೆ ಆ ಘೋಷಣೆಯ ಅಭಿವ್ಯಕ್ತಿಯಾಗಿರುತ್ತದೆ. ಆ ಘೋಷಣೆಯು ಸ್ಪಷ್ಟ ಶಬ್ದಗಳಲ್ಲಿ ಮಾಡಲ್ಪಟ್ಟಿರಬೇಕು; ಆ ಸಂದಿಗ್ಧವಾದ ಶಬ್ದಗಳಲ್ಲಿ ಮಾಡಲ್ಪಟ್ಟ ಒಂದು ದಾನದ ಘೋಷಣೆಯು ಶೂನ್ಯವಾಗಿರುತ್ತದೆ. ಹಾಗೆಂದರೆ ಒಂದು ದಾನದ ಘೋಷಣೆಯು ದಾನಿಯು ಒಂದು ಸ್ವತ್ತಿನಲ್ಲಿರುವ ತನ್ನ ಸ್ವಾಮಿತ್ವವನ್ನು ಪೂರ್ಣವಾಗಿ ಪರಿತ್ಯಜಿಸುವನೆಂದು ವ್ಯಕ್ತವಾಗಿ ಸೂಚಿಸಬೇಕು.

ಸ್ವೇಚ್ಛೆಯ ಘೋಷಣೆ (Voluntary declaration)

ಒಂದು ದಾನದ ಘೋಷಣೆಯು ಸ್ವೇಚ್ಛೆಯಿಂದ ಮಾಡಲ್ಪಟ್ಟುದ್ದಾಗಿರಬೇಕು. ಹಾಗೆಂದರೆ, ಆ ದಾನವನ್ನು ಮಾಡುವಲ್ಲಿ ದಾನಿಯ ಸಮ್ಮತಿಯು ಸ್ವತಂತ್ರವಾಗಿ ಇದ್ದಿರಬೇಕು. ಒಂದೊವ್ಮೆ ಆ ದಾನಿಯು ಬಲಪ್ರಯೋಗ, ಜಬರ್ದಸ್ತಿ, ಅನುಚಿತ ಪ್ರಭಾವ ಅಥವಾ ಮೋಸದ ಕಾರಣದಿಂದ ಒಂದು ದಾನದ ಘೋಷಣೆಯನ್ನು ಮಾಡಿರುವನೆಂದಾದರೆ ಆ ದಾನವು ವಿಧ್ಯುಕ್ತವೆಂದು ಎಣಿಸಲ್ಪಡುವದಿಲ್ಲ. ಇದರ ಇನ್ನೊಂದು ಅರ್ಥವೇನೆಂದರೆ ದಾನಿಯು ಆ ವ್ಯವಹಾರವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾನೆ ಮತ್ತು ಅವನು ಆ ದಾನ ಮಾಡಲು ಬಾಹ್ಯ ಪ್ರಭಾವಗಳಿಗೆ ಒಳಪಟ್ಟಿಲ್ಲ. ಒಂದೊವ್ಮೆ ತಾನು ದಾನಪತ್ರವನ್ನು

ದದೇ ಅದರ ಮೇಲೆ ಸಹಿ ಮಾಡಿರುವೆನು ಅಥವಾ ಅದನ್ನು ಘೋಷಣೆ ಮಾಡಿರು ನು ಎಂಬುದಾಗಿ ಒಂದೊಮ್ಮೆ ಒಬ್ಬ ದಾನಿಯು ಹಕ್ಕುದಾವೆ ಮಾಡಿದರೆ ಅಲ್ಲಿ ಂತಹ ದಾನಿಯ ಕೃತ್ಯವು ಸ್ವತಂತ್ರವಾದುದೆಂದು ಎಣಿಸಲ್ಪಡುವುದಿಲ್ಲ ಮತ್ತು ದಾನವು ಶೂನ್ಯವಾಗಿರುತ್ತದೆ. ಆದರೆ ಒಂದು ದಾನದ ಸಂಬಂಧದಲ್ಲಿ ತಿಳಿವಿಲ್ಲ ರುವಿಕೆ ಅಥವಾ ಅನುಚಿತ ಪ್ರಭಾವ ಇವುಗಳನ್ನು ಕಟ್ಟುನಿಟ್ಟಾಗಿ, ಸಾಬೀತು ಡಿಸಿ ತೋರಿಸಬೇಕಾಗುತ್ತದೆ. ದಾನಿಯು ಒಬ್ಬ ಅಶಿಕ್ಷಿತ ವ್ಯಕ್ತಿ ಅಥವಾ ರದೆಯೊಳಗಿರುವ ಒಬ್ಬ ನಾರಿ ಎಂಬ ಮಾತ್ರಕ್ಕೆ ದಾನಿಯು ತನ್ನ ಘೋಷಣೆಯ ನೂನೀ ಅರ್ಥವನ್ನು ತಿಳಿದುಕೊಂಡಿಲ್ಲ ಅಥವಾ ಅಲ್ಲೊಂದು ಅನುಚಿತ ಪ್ರಭಾವ ತ್ತು ಎಂಬುದಾಗಿ ಎಣಿಸುವಂತಿಲ್ಲ.

ಸದ್ಭಾವಿಕ ಘೋಷಣೆ (Bonafide Declaration)

ದಾನಗಳು ಪ್ರಾಮಾಣಿಕವಾಗಿ ಮಾಡಲ್ಪಟ್ಟುವಾಗಿರಬೇಕು. ಒಂದೊಮ್ಮೆ ಣದಾತರನ್ನು ಮೋಸಗೊಳಿಸುವ ಉದ್ದೇಶದಿಂದ ಒಂದು ದಾನವು ಮಾಡಲ್ಪಟ್ಟಿ ರೆ ಅಲ್ಲಿ ಆ ಋಣದಾತರ ಇಚ್ಛೆಯ ಮೇರೆಗೆ ಆ ದಾನವು ಶೂನ್ಯಕರಣೀಯವಾಗು ದೆ. ಆದರೆ ಒಬ್ಬ ದಾನಿಗೆ ಸಾಕಷ್ಟು ಋಣದಾತರಿದ್ದರು ಎಂಬ ಕಾರಣಮಾತ್ರ ಂದ ಅವನ ಉದ್ದೇಶವು ಅಪ್ರಾಮಾಣಿಕವಾಗಿದ್ದಿತೆಂದು ಹೇಳವಂತಿಲ್ಲ.

ಮೌಖಿಕ ಅಥವಾ ಲಿಖಿತ (Oral or in Writing)

ಒಂದು ಹಿಬಾ ಮೌಖಿಕವಾಗಿ ಮಾಡಲ್ಪಡಬಹುದು. ಅದನ್ನು ಲಿಖಿತಗೊ ಸುವ ಅವಶ್ಯಕತೆಯಿಲ್ಲ. ದಾನಿಯು ತಾನು ಮಾಡುತ್ತಿರುವ ದಾನದ ಬಗ್ಗೆ ಯಿಮಾತಿನಿಂದ ಒಂದು ಘೋಷಣೆ ಮಾಡಬಹುದು ಅಥವಾ ಒಂದು ದಾನಪತ್ರ ನ್ನು ಬರೆದು ಇದನ್ನು ಘೋಷಿಸಬಹುದು. ಒಂದೊಮ್ಮೆ ಒಂದು ವ್ಯವಹಾರವು ರವಣಿಗೆಯಲ್ಲಿದ್ದರೆ ಅದು ಸಾಮಾನ್ಯವಾಗಿ ಇಬ್ಬರು ಸಾಕ್ಷಿದಾರರಿಂದ ಅಭಿಪ್ರಮಾ ತಗೊಳಿಸಲ್ಪಟ್ಟು ನೋಂದಾಯಿಸಲ್ಪಡಬೇಕಾಗುತ್ತದೆ. ಆದರೆ, ಮುಸ್ಲಿಮ್ ನೂನಿನ ಪ್ರಕಾರ ಒಂದು ದಾನವು ಅಭಿಪ್ರಮಾಣಿತಗೊಳಿಸಲ್ಪಡುವ ಅಥವಾ ೋಂದಾಯಿಸಲ್ಪಡುವ ಅವಶ್ಯಕತೆಯಿಲ್ಲ. ಏಕೆಂದರೆ ಒಂದು ಚರ ಅಥವಾ ಸ್ಥಿರ ತ್ತಿನ ದಾನವನ್ನು ವಿಧ್ಯುಕ್ತಗೊಳಿಸಲು ಅದಕ್ಕೆ ಲಿಖಿತಗೊಳಿಸುವ ಅವಶ್ಯಕತೆ ರುವುದಿಲ್ಲ. ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨ ಇದರ ಕ. ೧೨೩ರಲ್ಲಿ ದು ಸ್ಥಿರಸ್ವತ್ತಿನ ದಾನವನ್ನು ಲಿಖಿತಗೊಳಿಸಿ ನೋಂದಾಯಿಸುವುದನ್ನು ಕಡ್ಡಾಯ ಳಿಸಿದೆಯಾದರೂ ಸಹ ಮುಸಲ್ಮಾನರಿಂದ ಮಾಡಲ್ಪಡುವ ದಾನಗಳಿಗೆ ಈ ಪಬಂಧಗಳು ಅನ್ವಯವಾಗುವುದಿಲ್ಲ. ಒಂದು ವಿಧ್ಯುಕ್ತವಾದ ದಾನವನ್ನು ರ್ಣಿಸಲು ಮುಸ್ಲಿಮ್ ಕಾನೂನಿನ ಪ್ರಕಾರ ಅವಶ್ಯಕವಾಗಿರುವ ಸಂಗತಿಗಳು

ಪೂರೈಸಲ್ಪಟ್ಟಿದೆ. ಅಲ್ಲಿ ಒಂದು ಮೌಖಿಕ ದಾದವು ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಒಂದು ದಾನವು ಲಿಖಿತಗೊಳಿಸಲ್ಪಟ್ಟರೆ ಅದನ್ನು ಹಿಬಾನಾಮ ಎಂಬುದಾಗಿ ಕರೆಯಲಾಗುತ್ತಿದೆ.

ದಾನಿಯು ಸಕ್ಷಮತೆ (Competency of the Donor)

ಒಂದು ದಾನದ ಘೋಷಣೆಯು ದಾನಿಯಿಂದ ಮಾಡಲ್ಪಡುತ್ತದೆ. ದಾನಿಯು ಒಬ್ಬ ಸಕ್ಷಮನಾದ ವ್ಯಕ್ತಿಯಾಗಿರಬೇಕು. ಒಬ್ಬ ಮುಸಲ್ಮಾನನು ದಾನ ಮಾಡಲು ಸಾಮರ್ಥ್ಯ ಹಾಗೂ ಹಕ್ಕನ್ನು ಹೊಂದಿರುವನಾದರೆ ಅವನು ಒಂದು ದಾನ ಮಾಡಲು ಸಕ್ಷಮನಾಗಿರುವನು. ವಯಸ್ಕತನದ ವಯಸ್ಸಿಗೆ ಬಂದಿರುವ ಬುದ್ಧಿ ಸ್ವಾಸ್ಥ್ಯವುಳ್ಳ ಪ್ರತಿಯೊಬ್ಬ ಮುಸಲ್ಮಾನನು ಒಂದು ದಾನ ಮಾಡಲು ಸಕ್ಷಮನಾಗಿರುವನು. ದಾನ, ಮರಣಶಾಸನ, ವಕ್ಫ ಇತ್ಯಾದಿಗಳ ಉದ್ದೇಶಗಳಿಗಾಗಿ ವಯಸ್ಕತನದ ವಯಸ್ಸು ಭಾರತೀಯ ವಯಸ್ಕತನದ ಅಧಿನಿಯಮ ೧೮೭೫ ಇದರಿಂದ ಶಾಸಿತವಾಗುತ್ತದೆ. ಕೇವಲ ವಿವಾಹ, ಕನ್ಯಾಶುಲ್ಕ ಮತ್ತು ವಿವಾಹ ವಿಚ್ಛೇದನೆಯ ಸಂಬಂಧದಲ್ಲಿ ತಾರುಣ್ಯದ ವಯಸ್ಸನ್ನು ವಯಸ್ಕತನದ ವಯಸ್ಸೆಂದು ಎಣಿಸಲಾಗುತ್ತದೆ. ಈ ವಯಸ್ಕತನವು ದಾನ ಮತ್ತು ಮರಣಶಾಸನಗಳಿಗೆ ಅನ್ವಯವಾಗುವುದಿಲ್ಲ. ಭಾರತೀಯ ವಯಸ್ಕತನದ ಅಧಿನಿಯಮ ಇದರ ಕ.೧೦೦ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ೧೮ರ ವಯಸ್ಸನ್ನು ಮುಗಿಸಿದಾಗ ಒಬ್ಬ ವಯಸ್ಕನೆಂದು ಎಣಿಸಲ್ಪಡುವನು. ಒಂದೊಮ್ಮೆ ಒಬ್ಬ ಅಲ್ಪವಯಿಯು ಸಂರಕ್ಷಿತರ ನ್ಯಾಯಾಲಯದ ಮೇಲ್ವಿಚಾರಣೆಗೆ ಒಳಪಟ್ಟಿರುವನಾದರೆ ಅಂಥವನು ತನ್ನ ೨೧ ರ ವಯಸ್ಸನ್ನು ಮುಗಿಸಿದಾಗ ವಯಸ್ಕನಾಗುವನೆಂದು ಎಣಿಸಲ್ಪಡುವನು. ಹೀಗೆ ಒಬ್ಬ ಮುಸಲ್ಮಾನನು ತನ್ನ ೧೮ರ ಅಥವಾ ೨೧ರ ವಯಸ್ಸನ್ನು ದಾಟಿದ ಬಳಿಕ ಮಾತ್ರ ಒಂದು ದಾನ ಮಾಡಲು ವಯಸ್ಕನೆಂದು ಎಣಿಸಲ್ಪಡುವನು. ಒಬ್ಬ ಅಲ್ಪವಯಿಯಿಂದ ಮಾಡಲ್ಪಟ್ಟ ಒಂದು ದಾನವು ಶೂನ್ಯವಾಗುತ್ತದೆ. ಇದೇ ರೀತಿಯಲ್ಲಿ ದಾನಿಯು ಚಿತ್ತಸ್ವಾಸ್ಥ್ಯವುಳ್ಳವನಾಗಿರಬೇಕು. ಒಬ್ಬ ಚಿತ್ತವಿಕಲ ವ್ಯಕ್ತಿಯು ತನ್ನ ಕಾರ್ಯಕಲಾಪಗಳ ಅರ್ಥವನ್ನು ತಿಳಿದುಕೊಳ್ಳಲು ಅಸಮರ್ಥನಾಗಿರುವನು. ಆದರೆ ಒಬ್ಬ ಚಿತ್ತಸ್ವಾಸ್ಥ್ಯವಿಲ್ಲದ ವ್ಯಕ್ತಿಯು ಸ್ವಸ್ಥಚಿತ್ತನಾದಾಗ ಮಾಡಿರುವ ಒಂದು ದಾನವು ವಿಧ್ಯುಕ್ತವಾದ ದಾನವೆಂದು ಎಣಿಸಲ್ಪಡುತ್ತದೆ.

ದಾನದ ಮೂಲಕ ಸ್ವತ್ತುಗಳನ್ನು ಹಸ್ತಾಂತರಣಗೊಳಿಸಲು ಒಬ್ಬ ಮುಸಲ್ಮಾನನನ್ನು ಸಕ್ಷಮಗೊಳಿಸಲು ಅವನ ಸಾಮರ್ಥ್ಯವಷ್ಟೇ ಪರ್ಯಾಪ್ತವಾಗುವುದಿಲ್ಲ. ಆ ದಾನಿಗೆ ಆ ದಾನ ಮಾಡುವ ಹಕ್ಕೂ ಸಹ ಇದ್ದಿರಬೇಕು. ದಾನ ಮಾಡಲು ಸಾಮರ್ಥ್ಯವಿದ್ದರೂ ಸಹ ಒಬ್ಬ ವ್ಯಕ್ತಿಯಲ್ಲಿ ಸ್ವಂತ ಸ್ವತ್ತು ಇಲ್ಲವೆಂದಾದರೆ ಅವನು ಅದನ್ನು ದಾನ ಮಾಡುವಂತಿಲ್ಲ. ಒಬ್ಬ ದಾನಿಯು ತನ್ನ ಸ್ವಾಮಿತ್ವಕ್ಕೆ ಒಳಪಟ್ಟಿರುವ ಸ್ವತ್ತನ್ನಷ್ಟೇ ದಾನ ಮಾಡಬಹುದು. ಒಂದು ದಾನದ ವ್ಯವ

ಹಾರದಲ್ಲಿ ಹಸ್ತಾಂತರಿಸಲ್ಪಟ್ಟಿರುವ ಸ್ವತ್ತಿನಲ್ಲಿರುವ ಪರಮಹಿತ ಸಂಬಂಧವು ಹಸ್ತಾಂತರಿಸಲ್ಪಡುತ್ತದೆ; ಆದುದರಿಂದ ಆದಾತನಿಗೆ ಸಂಕ್ರಾಂತಗೊಳಿಸಲಾಗುವ ಸ್ವತ್ತಿನಲ್ಲಿ ಆ ದಾನಿಗೆ ಹಕ್ಕಿರಬೇಕು. ಕೆಲವು ರೀತಿಯ ಸ್ವತ್ತುಗಳು ಹಸ್ತಾಂತರಣೀಯವಲ್ಲವೆಂದು ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨ ಇದರ ಕ. ೬ರಲ್ಲಿ ಹೇಳಲಾಗಿದೆ. ಇಂತಹ ಸ್ವತ್ತುಗಳ ಸ್ವಾಮಿತ್ವವನ್ನು ಹೊಂದಿರುವ ವ್ಯಕ್ತಿಗೆ ಅವುಗಳನ್ನು ಪರಾಧೀನ ಮಾಡುವ ಹಕ್ಕಿರುವದಿಲ್ಲ. ಹಸ್ತಾಂತರಣೀಯವಲ್ಲದ ಹಕ್ಕುಗಳನ್ನು ಒಂದು ದಾನವಾಗಿ ಘೋಷಿಸಲು ಯಾವನೇ ವ್ಯಕ್ತಿಯು ಹಕ್ಕು ಹೊಂದಿರುವುದಿಲ್ಲ.

II) ಸ್ವೀಕೃತಿ (Acceptence)

ದಾನವು ಒಂದು ದ್ವಿಪಕ್ಷೀಯ ವ್ಯವಹಾರವಾಗಿರುತ್ತದೆ. ಈ ವ್ಯವಹಾರದಲ್ಲಿ ಮೊದಲನೇ ಹೆಜ್ಜೆಯು ಒಂದು ಘೋಷಣೆಯಾಗಿರುತ್ತದೆ ಮತ್ತು ಎರಡನೆಯದು ಸ್ವೀಕೃತಿ. ಸ್ವೀಕೃತಿಯಿಂದ ಹಸ್ತಾಂತರಿತನು ಆ ಸ್ವತ್ತನ್ನು ತೆಗೆದುಕೊಂಡು ಆದರ ಸ್ವಾಮಿಯಾಗುವ ಉದ್ದೇಶವು ತಿಳಿದು ಬರುತ್ತವೆ. ಸ್ವೀಕೃತಿಯಿಲ್ಲದೆ ಒಂದು ದಾನವು ಪೂರ್ಣಗೊಳ್ಳುವುದಿಲ್ಲ. ಒಂದು ದಾನದ ಸ್ವೀಕೃತಿಯು ಆದಾತನಿಂದ ಅಥವಾ ಆ ಆದಾತನ ಪರವಾಗಿ ಇತರ ಯಾವನಾದರೊಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟದಾಗಿರುತ್ತದೆ.

ಆದಾತನು ಯಾವನೇ ಒಬ್ಬ ವ್ಯಕ್ತಿಯಾಗಿರಬಹುದು
(Donee may be any person)

ಯಾವನೇ ಒಬ್ಬ ವ್ಯಕ್ತಿಯು ಆದಾತನಾಗಿರಬಹುದು ಮತ್ತು ಆ ವ್ಯಕ್ತಿಯು ಅಸ್ತಿತ್ವದಲ್ಲಿದ್ದಿರಬೇಕು. ಒಬ್ಬ ಸಕ್ಷಮ ಅದಾತನೆಂಬುದಾಗಿ ಹೇಳಲ್ಪಡಬೇಕಾದರೆ ಅವನು ಆ ಘೋಷಣೆಯ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದಿರಬೇಕು. ಒಬ್ಬ ಅದಾತನು ಯಾವುದೇ ಧರ್ಮದ ಅಥವಾ ಲಿಂಗದ ಅಥವಾ ವಯಸ್ಸಿನ ಅಥವಾ ಮನಃಸ್ಥಿತಿಯ ವ್ಯಕ್ತಿಯಾಗಿರಬಹುದು. ಹೀಗೆ, ಒಬ್ಬ ಮುಸಲ್ಮಾನನು ಒಬ್ಬ ಹಿಂದು ಅಥವಾ ಕ್ರೈಸ್ತನ ಪರವಾಗಿ ಒಂದು ಕಾನೂನುಬದ್ಧವಾದ ಹಿಬಾ ಮಾಡಬಹುದು. ಇದೇ ರೀತಿಯಲ್ಲಿ ಒಬ್ಬ ನಾರಿ ಅಥವಾ ಅಲ್ಪವಯಿ ಅಥವಾ ಚಿತ್ತವಿಕಲನ ಪರವಾಗಿ ಮಾಡಲಾದ ಒಂದು ಹಿಬಾವೂ ಸಹ ವಿಧ್ಯುಕ್ತವೆಂದು ಎಣಿಸಲ್ಪಡುತ್ತದೆ.

ಒಬ್ಬ ಅಜಾತ ವ್ಯಕ್ತಿಗೆ ಮಾಡಲಾಗುವ ದಾನ
(Gift to an unborn person)

ಒಂದು ದಾನದ ಘೋಷಣೆಯು ಮಾಡಲ್ಪಡುವ ಕಾಲದಲ್ಲಿ ಆದಾತನು ಅಸ್ತಿತ್ವದಲ್ಲಿದ್ದಿರುವ ಒಬ್ಬ ವ್ಯಕ್ತಿಯಾಗಿದ್ದಿರಬೇಕು. ಇನ್ನೂ ಹುಟ್ಟದಿರುವ ಒಬ್ಬ ವ್ಯಕ್ತಿ ಅಥವಾ ಅಸ್ತಿತ್ವದಲ್ಲಿರದ ಒಬ್ಬ ವ್ಯಕ್ತಿ ಇವರಿಗೆ ಮಾಡಲ್ಪಡುವ ಒಂದು

ದಾನವು ಶೂನ್ಯವಾಗಿರುತ್ತದೆ. ಒಬ್ಬ ಅಜಾತ ವ್ಯಕ್ತಿಗೆ ಮಾಡಲಾದ ಒಂದು ದಾನವು ಮೂಲತಃ ಶೂನ್ಯವಾಗಿದ್ದುದರಿಂದ ಅಂತಹ ಒಬ್ಬ ಅದಾತನು ಆ ಹಸ್ತಾಂತರಣದ ಬಳಿಕ ಜನಿಸಿದರೂ ಸಹ ಅವನಿಗೆ ಆ ಸ್ವತ್ತು ಸಿಗುವುದಿಲ್ಲ. ಆದರೆ ಒಂದೊಮ್ಮೆ ಆ ಆದಾತನು ಘೋಷಣೆಯ ಕಾಲದಲ್ಲಿ ತಾಯಿಯ ಗರ್ಭದಲ್ಲಿದ್ದು ಆ ಘೋಷಣೆಯ ದಿನಾಂಕದಿಂದ ೬ ತಿಂಗಳೊಳಗೆ ಜನಿಸಿದರೆ ಅಲ್ಲಿ ಅವನ ಪರವಾಗಿ ಮಾಡಲ್ಪಟ್ಟ ಘೋಷಣೆಯು ವಿಧ್ಯುಕ್ತವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಹಿಬಾ ಇದೊಂದು ಸ್ವಾಮಿತ್ವದ ಹಸ್ತಾಂತರಣವಾಗಿದ್ದು ಅದರ ಘೋಷಣೆಯು ಮಾಡಲ್ಪಟ್ಟ ತಕ್ಷಣದಲ್ಲಿ ಅದರ ಸ್ವಾಮಿತ್ವವು ದಾನಿಯಿಂದ ಪರ್ಯವಸಾನಗೊಳ್ಳುತ್ತದೆ. ಸ್ವಾಮಿಯಿಲ್ಲದ ಒಂದು ಸ್ವತ್ತು ಇರುವಂತಿಲ್ಲವೆಂಬ ಒಂದು ಪ್ರಸಿದ್ಧ ಸಿದ್ಧಾಂತದ ಮೇರೆಗೆ ಈ ನಿಯಮವು ಮಾಡಲ್ಪಟ್ಟಿದೆ. ಆದುದರಿಂದ ಒಂದು ಹಿಬಾ ಇದರ ಘೋಷಣೆಯ ಕಾಲದಲ್ಲಿ ಯಾವನಾದರೊಬ್ಬ ವ್ಯಕ್ತಿಯು ಅಸ್ತಿತ್ವದಲ್ಲಿದ್ದಿರಬೇಕು ಮತ್ತು ಆ ವ್ಯಕ್ತಿಯು ಆ ದಾನವನ್ನು ಪಡೆಯುವವನಾಗಿರಬೇಕು. ಆದರೆ ಶಿಯಾ ಕಾನೂನಿನ ಪ್ರಕಾರ ಒಂದು ಜೀವಾವಧಿ ಹಿತಸಂಬಂಧದ ಒಂದು ದಾನವನ್ನು ಒಬ್ಬ ಅಜಾತ ವ್ಯಕ್ತಿಯ ಪರವಾಗಿ ಕಾನೂನುಬದ್ಧವಾಗಿ ಮಾಡಬಹುದು. ಆದರೆ ಶಿಯಾ ಕಾನೂನಿನ ಪ್ರಕಾರವೂ ಸಹ ಒಬ್ಬ ಅಜಾತ ವ್ಯಕ್ತಿಗೆ ಮಾಡಲಾದ ದಾನವು ಶೂನ್ಯವಾಗಿರುತ್ತದೆ ಮತ್ತು ಈ ಕಾನೂನಿನ ಪ್ರಕಾರ ಒಂದು ಜೀವಾವಧಿ ಸಂಬಂಧದಲ್ಲಿ ಮಾತ್ರ ಒಬ್ಬ ಅಜಾತ ವ್ಯಕ್ತಿಗೆ ದಾನ ಮಾಡಬಹುದು.

ಆದಾತನು ಒಬ್ಬ ನ್ಯಾಯಿಕ ವ್ಯಕ್ತಿಯಾಗಿರಬಹುದು
(Donee may be a Juristic Person)

ಕಾನೂನಿನ ದೃಷ್ಟಿಯಲ್ಲಿ 'ವ್ಯಕ್ತಿ' ಎಂಬ ಪದವು ಒಬ್ಬ ಮಾನವನಷ್ಟೇ ಅಲ್ಲ ಬದಲಾಗಿ ಒಬ್ಬ ನ್ಯಾಯಿಕ ಅಥವಾ ಕಾನೂನೀ ವ್ಯಕ್ತಿಯನ್ನೂ ಸೂಚಿಸುತ್ತದೆ. ಕಾನೂನೀ ಅಥವಾ ನ್ಯಾಯಿಕ ವ್ಯಕ್ತಿಗಳಿಗೆ ಶಾರೀರಿಕ ಅಸ್ತಿತ್ವವಿದ್ದರೂ ಸಹ ಅನುಕೂಲತೆಯ ಕಾರಣದ ಮೇಲೆ ಇವರನ್ನು ವ್ಯಕ್ತಿಗಳೆಂದು ಎಣಿಸಲಾಗುತ್ತದೆ. ಉದಾಹರಣೆಗಾಗಿ, ಒಂದು ಸಂಸ್ಥೆ ಅಥವಾ ಒಂದು ಮಸೀದಿ ಇತ್ಯಾದಿ ಒಂದು ನ್ಯಾಯಿಕ ವ್ಯಕ್ತಿಯಾಗಿರುತ್ತದೆ. ಒಂದು ನ್ಯಾಯಿಕ ವ್ಯಕ್ತಿಯು ಒಂದು ಕಾನೂನುಬದ್ಧವಾದ ಅದಾತವಾಗಿರಬಹುದು. ಒಂದು ಶಾಲೆ ಅಥವಾ ಒಂದು ಮಸೀದಿಯ ಪರವಾಗಿ ಮಾಡಲಾದ ಒಂದು ದಾನವು ವಿಧ್ಯುಕ್ತವಾಗಿರುತ್ತದೆ. ಒಂದೊಮ್ಮೆ ಒಬ್ಬ ಮುಸಲ್ಮಾನನು ಒಂದು ಸಂಸ್ಥೆಯ ಅಥವಾ ಒಂದು ಮಸೀದಿಯ ದುರಸ್ತಿಗಾಗಿ ಸ್ವಲ್ಪ ಹಣವನ್ನು ದಾನ ಮಾಡಿದರೆ ಆ ದಾನವು ವಿಧ್ಯುಕ್ತವಾಗಿರುತ್ತದೆ. ಒಂದು ಸಂಸ್ಥೆ ಅಥವಾ ಇತರ ಯಾವತ್ತೂ ನ್ಯಾಯಿಕ ವ್ಯಕ್ತಿಯ ಪರವಾಗಿ ಅದರ ಪ್ರತಿಬಂಧಕ ಅಥವಾ ಇತರ ಯಾವನಾದರೊಬ್ಬ ಸಕ್ಷಮ ಪ್ರಾಧಿಕಾರಿಯು ಆ ದಾನದ ಸ್ವೀಕೃತಿ ಮಾಡಲು ಸಕ್ಷಮನಾಗಿರುವನು.

ಅಲ್ಪವಯಿ ಅಥವಾ ಚಿತ್ತವಿಕಲನಾದ ಆದಾತ
(Minor or Insane donee)

ಒಬ್ಬ ಅಲ್ಪವಯಿ ಅಥವಾ ಚಿತ್ತಸ್ವಾಸ್ಥ್ಯವಿಲ್ಲದ ಒಬ್ಬ ವ್ಯಕ್ತಿಗೆ ಮಾಡಲಾದ ಒಂದು ದಾನವು ಅಂತಹವನ ಸಂರಕ್ಷಕನಿಂದ ಸ್ವೀಕರಿಸಲ್ಪಟ್ಟಿರಬೇಕು. ಒಬ್ಬ ಅಲ್ಪವಯಿ ಅಥವಾ ಚಿತ್ತಸ್ವಾಸ್ಥ್ಯವಿಲ್ಲದ ವ್ಯಕ್ತಿಗೆ ಮಾಡಲಾದ ದಾನವು ಅಂಥವನ ಸಂರಕ್ಷಕನಿಂದ ಸ್ವೀಕರಿಸಲ್ಪಟ್ಟಿಲ್ಲವೆಂದಾದರೆ ಅದು ಶೂನ್ಯವಾಗಿರುತ್ತದೆ. ಒಂದು ದಾನದ ಸ್ವೀಕೃತಿಯ ಉದ್ದೇಶಗಳಿಗಾಗಿ, ಈ ಕೆಳಗಿನ ವ್ಯಕ್ತಿಗಳನ್ನು ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನ ಸಂರಕ್ಷಕರೆಂದು ಎಣಿಸಲಾಗುತ್ತದೆ :

I) ತಂದೆ,

II) ತಂದೆಯ ನಿಷ್ಪಾದಕ,

III) ಪೈತೃಕ ಅಜ್ಜ,

IV) ಪೈತೃಕ ಅಜ್ಜನ ನಿಷ್ಪಾದಕ.

ಈ ಸಂರಕ್ಷಕರು ಆದ್ಯತೆಯ ಅನುಕ್ರಮಣದ ಮೇಲೆ ಇರುವರು. ಹಾಗೆಂದರೆ, ತಂದೆಯು ಅಸ್ತಿತ್ವದಲ್ಲಿದ್ದಾಗ ಅಲ್ಲಿ ಪೈತೃಕ ಅಜ್ಜನು ಆ ಕೊಡುಗೆಯ ಸ್ವೀಕೃತಿಯನ್ನು ಮಾಡುವಂತಿಲ್ಲ. ಮೇಲೆ ಹೇಳಲ್ಪಟ್ಟ ವ್ಯಕ್ತಿಗಳ ಗೈರುಹಾಜರಿಯಲ್ಲಿ ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲ ವ್ಯಕ್ತಿಯ ಪರವಾಗಿ ಒಂದು ದಾನವು ಆ ಸ್ವತ್ತಿನ ಸಂರಕ್ಷಕನಿಂದ ಸ್ವೀಕರಿಸಲ್ಪಡುತ್ತದೆ. ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲ ವ್ಯಕ್ತಿಯ ಪರವಾಗಿ ಒಂದು ದಾನ ಕೊಟ್ಟ ಸ್ವತ್ತಿನ ಸ್ವಾಮಿತ್ವವನ್ನು ಸ್ವೀಕರಿಸುವ ವ್ಯಕ್ತಿಯು ಆ ಸ್ವತ್ತಿನ ಕಬ್ಜೆಯನ್ನೂ ಸಹ ಪಡೆಯುವನು. ಒಬ್ಬ ಸಂರಕ್ಷಕನು ಸ್ವತಃ ತನ್ನ ಸಂರಕ್ಷಿತರಿಗೆ ಒಂದು ದಾನ ಮಾಡಿದರೆ, ಆ ದಾನದ ಬಗ್ಗೆ ಅವನು ಮಾಡುವ ಘೋಷಣೆಯು ಆ ಸ್ವತ್ತಿನ ಸ್ವಾಮಿಯ ರೂಪದಲ್ಲಿ ಮಾಡಲ್ಪಡುತ್ತದೆ. ಆದರೆ ಅವನಿಂದ ಮಾಡಲ್ಪಡುವ ಸ್ವೀಕೃತಿಯು ಆ ಅಲ್ಪವಯಿ ಅಥವಾ ಚಿತ್ತವಿಕಲ ವ್ಯಕ್ತಿಯ ಸಂರಕ್ಷಕನ ನಾತೆ ಮಾಡಲಾಗುತ್ತದೆ.

ಇಬ್ಬರು ಅಥವಾ ಹೆಚ್ಚಿನ ಆದಾತರು
(Two or more donees)

ಆದಾತನು ಒಬ್ಬ ವ್ಯಕ್ತಿಯಾಗಿರಬಹುದು ಅಥವಾ ವ್ಯಕ್ತಿಗಳ ಒಂದು ವರ್ಗವಾಗಿರಬಹುದು. ಆದರೆ ಒಬ್ಬ ಆದಾತನು ವ್ಯಕ್ತಿಗಳ ಸಮೂಹವಿದ್ದಾಗ ಆ ಗುಂಪಿನ ಎಲ್ಲಾ ವ್ಯಕ್ತಿಗಳು ಖಾತರಿಪಡಿಸಿಕೊಳ್ಳುವಂತಹವರಾಗಿರಬೇಕು ಮತ್ತು ಆ ದಾನವು ಅವರೆಲ್ಲರಿಂದ ಸ್ವೀಕರಿಸಲ್ಪಡಬೇಕು. ಇದರ ಹೊರತಾಗಿ, ಇಲ್ಲಿ ಪ್ರತಿಯೊಬ್ಬ ಆದಾತನ ಪಾಲು ಆ ದಾನಿಯಿಂದ ಪರಿಭಾಷಿಸಲ್ಪಟ್ಟಿರಬೇಕು.

III) ಕಬ್ಜೆಯ ಪ್ರದಾಯಕತ್ವ

(Delivery of Possession)

ಕಬ್ಜೆಯು ಪ್ರದಾಯಕತ್ವವು ಒಂದು ವಿಧ್ಯುಕ್ತವಾದ ಹಿಬಾದಲ್ಲಿ ಮೂರನೇ ಅವಶ್ಯಕ ಷರತ್ತಾಗಿರುತ್ತದೆ. ಕಬ್ಜೆಯ ಪ್ರದಾಯಕತ್ವದಿಂದ ದಾನಿಯು ಆ ಸ್ವತ್ತಿನ ಕಬ್ಜೆಯನ್ನು ಆದಾತನ ಕೈಗೆ ಹಾಕುವನು. ದಾನ ಮಾಡಲ್ಪಟ್ಟ ಸ್ವತ್ತು ಆದಾತನಿಗೆ ಹಸ್ತಾಂತರಣ ಅಥವಾ ಪ್ರದಾನ ಮಾಡಲ್ಪಟ್ಟ ಬಳಿಕ ಮಾತ್ರ ಅದೊಂದು ಪೂರ್ಣವಾದ ದಾನವೆಂದು ಎಣಿಸಲ್ಪಡುತ್ತದೆ. ಒಂದು ಘೋಷಣೆಯೊಂದಿಗೆ ಆರಂಭವಾದ ಒಂದು ದಾನದ ವ್ಯವಹಾರವು ಆ ಆದಾತನಿಗೆ ಸ್ವತ್ತಿನ ಭೌತಿಕ ಕಬ್ಜೆಯನ್ನು ಕೊಡುವದರೊಂದಿಗೆ ಪೂರ್ಣಗೊಳ್ಳುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಕಬ್ಜೆಯ ಪ್ರದಾಯಕತ್ವದ ಬಳಿಕ ಮಾತ್ರ ಒಂದು ದಾನವು ಪೂರ್ಣಗೊಳ್ಳುತ್ತದೆ. ಆದುದರಿಂದ ಯಾವ ದಿನಾಂಕದಂದು ಒಂದು ಸ್ವತ್ತಿನ ಕಬ್ಜೆಯು ಆದಾತನಿಗೆ ಪ್ರದಾನ ಮಾಡಲ್ಪಟ್ಟಿತೊ ಆ ದಿನಾಂಕದಂದು ಆ ದಾನವು ಕಾರ್ಯಾಚರಣೆಗೆ ಬರುತ್ತದೆ; ಹಾಗೂ ಇದು ಆ ದಾನದ ಘೋಷಣೆ ಮಾಡಿದ ದಿನಾಂಕದಂದು ಕಾರ್ಯಾಚರಣೆಗೆ ಬರುವುದಿಲ್ಲ. ಕಬ್ಜೆಯ ಪ್ರದಾಯಕತ್ವವೆಂದರೆ ಒಂದು ದಾನದ ವಿಷಯ ವಸ್ತುವನ್ನು ಆದಾತನಿಗೆ ಹಸ್ತಾಂತರಣ ಮಾಡುವದು. ಒಬ್ಬ ದಾನಿಯು ಹಿಬಾ ಇದರ ಘೋಷಣೆ ಮಾಡಿದಾಗ ಅವನು ಕೇವಲ ಆ ಸ್ವಾಮಿತ್ವವನ್ನು ಹಸ್ತಾಂತರಿಸುವನು. ಇದರ ಸ್ವೀಕೃತಿಯೊಂದಿಗೆ ಆದಾತನಿಂದ ಆ ಸ್ವಾಮಿತ್ವವು ಸ್ವೀಕರಿಸಲ್ಪಟ್ಟಿದೆಯೆಂದು ಎಣಿಸಲಾಗುತ್ತದೆ. ಒಂದೊಮ್ಮೆ ಆ ಸ್ವತ್ತಿನ ಸ್ವಾಮಿತ್ವವು ಆದಾತನಿಗೆ ಕೊಡಲ್ಪಟ್ಟದ್ದು ಅದು ಆದಾತನಿಗೆ ಹಸ್ತಾಂತರಿಸಲ್ಪಟ್ಟಿಲ್ಲವೆಂದಾದರೆ ಅಲ್ಲಿ ಆ ಘೋಷಣೆಯು ನಿಷ್ಪ್ರಯೋಜಕವಾಗುತ್ತದೆ. ಒಬ್ಬ ಆದಾತನು ತನ್ನ ಉಪಯೋಗಕ್ಕಾಗಿ ಆ ಸ್ವತ್ತನ್ನು ಪಡೆಯುವದಿಲ್ಲವೆಂದಾದರೆ ಅಲ್ಲಿ ದಾನಿಯಿಂದ ಮಾಡಲಾಗುವ ಒಂದು ದಾನದ ಘೋಷಣೆಯು ಅರ್ಥಹೀನವಾಗುತ್ತದೆ. ಒಂದು ದಾನವನ್ನು ಪೂರ್ಣಗೊಳಿಸಲು ದಾನಿಯು ಆ ಸ್ವತ್ತಿನ ಸ್ವಾಮಿತ್ವವನ್ನಷ್ಟೇ ಅಲ್ಲ; ಅದರ ಕಬ್ಜೆಯನ್ನೂ ಸಹ ಆದಾತನ ಪರವಾಗಿ ತೊರೆಯಬೇಕಾಗುತ್ತದೆ. ಒಂದು ಕಬ್ಜೆಯ ಪ್ರದಾಯಕತ್ವದ ರೀತಿಯು ದಾನ ಮಾಡಲ್ಪಟ್ಟ ಸ್ವತ್ತಿನ ಸ್ವರೂಪವನ್ನು ಅವಲಂಬಿಸಿರುತ್ತದೆ. ಒಂದು ಕಾನೂನುಬದ್ಧವಾದ ಕಬ್ಜೆಯು ಪ್ರದಾಯಕತ್ವವಾಗಬೇಕಾದರೆ ದಾನಿಯು ಆ ಸ್ವತ್ತಿನ ಮೇಲೆ ಭೌತಿಕ ನಿಯಂತ್ರಣವನ್ನು ಪಡೆಯುವಂತೆ ಮಾಡಬೇಕಾಗುತ್ತದೆ. ಒಂದು ಕಬ್ಜೆಯ ಪ್ರದಾಯಕತ್ವವು ನೈಜವಾಗಿರಬಹುದು ಅಥವಾ ಪ್ರಲಕ್ಷಿತ.

ಕಬ್ಜೆಯ ನೈಜ ಪ್ರದಾಯಕತ್ವ

(Actual delivery of possession)

ಒಂದೊಮ್ಮೆ ಒಂದು ಸ್ವತ್ತು ಆದಾತನಿಗೆ ಭೌತಿಕವಾಗಿ ಕೊಡಲ್ಪಟ್ಟರೆ ಅಲ್ಲಿ

ಒಂದು ಕಬ್ಜೆಯ ನೈಜ ಪ್ರದಾಯಕತ್ವವಾಗುತ್ತದೆ. ಆದರೆ ಈ ರೀತಿಯ ಕಬ್ಜೆಯನ್ನು ಕೇವಲ ಭೌತಿಕ ಕಬ್ಜೆ ಪಡೆಯಲು ಸಾಮರ್ಥ್ಯವುಳ್ಳಂತ ಸ್ವತ್ತುಗಳ ಸಂಬಂಧದಲ್ಲಿ ಮಾತ್ರ ಕೊಡಲಾಗುತ್ತದೆ. ಸಾಮಾನ್ಯವಾಗಿ ಭೌತಿಕ ಸ್ವತ್ತುಗಳನ್ನಷ್ಟೇ ಆದಾತನಿಗೆ ನೈಜ ಕಬ್ಜೆಯಿಂದ ಪ್ರದಾನ ಮಾಡಲಾಗುತ್ತದೆ. ಒಂದು ಸ್ಥಾವರವಾದ ಸ್ವತ್ತು ಚರಸ್ವತ್ತಾಗಬಹುದು ಅಥವಾ ಸ್ಥಿರವಾದುದು; ಉದಾಹರಣೆಗಾಗಿ, ಚಿನ್ನಾಭರಣ, ಹಣಕಾಸು, ಕುದುರೆ, ಒಂದು ಭೂಭಾಗ ಅಥವಾ ಒಂದು ಮನೆ ಇತ್ಯಾದಿ. ಒಂದೊಮ್ಮೆ ಅದೊಂದು ಚರಸ್ವತ್ತಾದರೆ ಅದನ್ನು ನೈಜ ಹಸ್ತಾಂತರಣದಿಂದ ಆದಾತನಿಗೆ ಕೊಡಬಹುದು; ಇಲ್ಲಿ ಒಂದು ಲೆಕ್ಕದ ಪುಸ್ತಕದಲ್ಲಿ ಮಾಡಲಾಗಿರುವ ಒಂದು ಪ್ರವಿಷ್ಟಿ ಅಥವಾ ನೋಂದಣಿ ಇದು ಒಂದು ಕಬ್ಜೆಯ ಪ್ರದಾಯಕತ್ವಕ್ಕೆ ಪರ್ಯಾಪ್ತವಾಗುವುದಿಲ್ಲ. ಇದೇ ರೀತಿಯಲ್ಲಿ, ಒಂದು ಸ್ವತ್ತು ಸ್ಥಿರಸ್ವತ್ತಾಗಿದ್ದರೆ ಅದರ ಕಬ್ಜೆಯ ನೈಜ ಪ್ರದಾಯಕತ್ವವು ಆ ದಾನವನ್ನು ವಿಧ್ಯುಕ್ತಗೊಳಿಸಲು ಅವಶ್ಯಕವಾಗಿರುತ್ತದೆ. ಇದೇ ರೀತಿಯಲ್ಲಿ ಒಂದು ಸ್ವತ್ತು ಸ್ಥಿರ ಸ್ವತ್ತಾಗಿದ್ದರೆ ಆ ದಾನವನ್ನು ವಿಧ್ಯುಕ್ತಗೊಳಿಸಲು ಅದರ ನೈಜ ಪ್ರದಾಯಕತ್ವದ ಅವಶ್ಯಕತೆಯಿರುತ್ತದೆ. ಆದರೆ ಒಂದು ಸ್ಥಿರಸ್ವತ್ತನ್ನು ಚರಸ್ವತ್ತಿನಂತೆ ಅಷ್ಟೊಂದು ಸುಲಭವಾಗಿ ತೆಗೆದುಕೊಡಲಿಕ್ಕಾಗುವದಿಲ್ಲ. ಆದುದರಿಂದ ಒಂದೊಮ್ಮೆ ದಾನ ಮಾಡಲ್ಪಟ್ಟ ಸ್ವತ್ತು ಒಂದು ಭೂಮಿ, ಮನೆ ಅಥವಾ ಒಂದು ತೋಟವಾಗಿದ್ದರೆ ಆ ಸ್ವತ್ತಿನ ದಾನಿಯು ಆ ಸ್ವತ್ತಿನೊಂದಿಗಿನ ತನ್ನ ಎಲ್ಲಾ ವ್ಯವಹಾರಗಳನ್ನು ಬಿಟ್ಟುಕೊಟ್ಟು ಮತ್ತು ಆ ಸ್ವತ್ತನ್ನು ಪೂರ್ಣವಾಗಿ ಆದಾತನ ನಿಯಂತ್ರಣಕ್ಕೆ ಕೊಟ್ಟು ಅದರ ಕಬ್ಜೆಯನ್ನು ಪ್ರದಾನಗೊಳಿಸಬಹುದು. ಉದಾಹರಣೆಗಾಗಿ, ಒಂದೊಮ್ಮೆ ದಾನಿಯು ತಾನು ನಿವಾಸಮಾಡುತ್ತಿರುವ ಒಂದು ಮನೆಯ ದಾನ ಮಾಡಿದರೆ, ಅವನು ಅದನ್ನು ತೆರವು ಮಾಡಿ ಆದಾತನಿಗೆ ಅಲ್ಲಿ ನಿವಾಸ ಮಾಡುವಂತೆ ಅನುಕೂಲಮಾಡಿಕೊಡಬೇಕಾಗುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ, ಒಂದೊಮ್ಮೆ ಒಂದು ಸ್ವತ್ತನ್ನು ಭೌತಿಕವಾಗಿ ಸಂಕ್ರಾಂತಗೊಳಿಸುವುದು ಸಾಧ್ಯವಿಲ್ಲವೆಂದಾದರೆ ಆ ರೀತಿಯ ಒಂದು ಸಂಕ್ರಾಂತಗೊಳಿಸುವಿಕೆಯ ಅವಶ್ಯಕತೆಯಿರುತ್ತದೆ; ಮತ್ತು ಅಂತಹ ಪ್ರಕರಣಗಳಲ್ಲಿ ಕೇವಲ ಹೆಸರನ್ನು ಬದಲಾಯಿಸುವದರಿಂದ ಒಂದು ದಾನವು ಪೂರ್ಣಗೊಳ್ಳುವದಿಲ್ಲ. ಆದುದರಿಂದ ಒಂದು ದಾನದ ಸಂಬಂಧದಲ್ಲಿ ಒಂದು ಕಬ್ಜೆಯ ಪ್ರದಾಯಕತ್ವವು ಪೂರ್ಣಗೊಳ್ಳಬೇಕಾದರೆ ಅಲ್ಲಿ ಆ ಸ್ವತ್ತಿನ ಭೌತಿಕ ಕಬ್ಜೆಯನ್ನು ಕೊಡುವದು ಸಾಧ್ಯವೆಂದಾದರೆ ಅಲ್ಲಿ ಭೌತಿಕ ಕಬ್ಜೆಯನ್ನಷ್ಟೇ ಕೊಡಬೇಕಾಗುತ್ತದೆ ಮತ್ತು ಆಗ ಮಾತ್ರ ಅಲ್ಲೊಂದು ಕಬ್ಜೆಯ ನೈಜ ಪ್ರದಾಯಕತ್ವವಾಗಿದೆಯೆಂದು ಎಣಿಸಲಾಗುತ್ತದೆ.

ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವ

(Constructive delivery of possession)

ಕ್ರಮಬದ್ಧ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವೆಂದರೆ ಒಂದು ಸ್ವತ್ತಿನ

ಸಾಂಕೇತಿಕ ಹಸ್ತಾಂತರಣ. ಒಂದೊಮ್ಮೆ ದಾನಿಯು ಆ ಸ್ವತ್ತನ್ನು ನಿಜವಾಗಿ ಪ್ರದಾನ ಮಾಡದೇ ಆ ಸ್ವತ್ತಿನ ಕಬ್ಜೆಯು ಆದಾತನಿಗೆ ಕೊಡಲ್ಪಟ್ಟಿದೆಯೆಂದು ಕಾನೂನಿನಿಂದ ಪೂರ್ವಭಾವನೆಯಾಗುವ ರೀತಿಯ ಯಾವುದಾದರೊಂದು ಕೃತ್ಯವನ್ನು ಮಾಡಿದರೆ ಅಲ್ಲಿ ಅದೊಂದು ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಒಂದು ಸ್ವತ್ತಿನ ಸ್ವರೂಪವು ಎಂಥದ್ದೆಂದರೆ ಅದರ ಭೌತಿಕ ಕಬ್ಜೆಯನ್ನು ಕೊಡುವದು ಸಾಧ್ಯವಾಗುವದಿಲ್ಲ ಮತ್ತು ಅದರ ನೈಜ ಪ್ರದಾಯಕತ್ವವು ಅಸಾಧ್ಯವಾಗಿರುತ್ತದೆ. ಅಂತಹ ಸ್ವತ್ತುಗಳ ಸಂಬಂಧದಲ್ಲಿ ಒಂದು ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವು ಆ ದಾನವನ್ನು ಪೂರ್ಣಗೊಳಿಸಲು ಪರ್ಯಾಪ್ತವಾಗಿರುತ್ತದೆ. ಅನೇಕ ಸ್ವತ್ತುಗಳಿಗೆ ಭೌತಿಕ ಅಸ್ತಿತ್ವವಿರುವುದಿಲ್ಲ ಮತ್ತು ಅವುಗಳನ್ನು ಅಮೂರ್ತ ಸ್ವತ್ತುಗಳೆಂದು ಕರೆಯಲಾಗುತ್ತದೆ. ಒಂದು ಅಮೂರ್ತ ಸ್ವತ್ತಿನ ಕಬ್ಜೆಯನ್ನು ಪಡೆಯುವುದಿಲ್ಲವೆಂದಾದರೂ ಸಹ ಅದರ ಸ್ವಾಮಿತ್ವವನ್ನು ಪಡೆಯಬಹುದು ಮತ್ತು ಅದರ ಸ್ವಾಮಿಯು ಅದನ್ನು ಒಂದು ಕಾನೂನುಬದ್ಧವಾದ ರೀತಿಯಲ್ಲಿ ದಾನ ಮಾಡಬಹುದು. ಆದುದರಿಂದ ಅಮೂರ್ತ ಸ್ವತ್ತುಗಳ ಸಂಬಂಧದಲ್ಲಿ ಕೇವಲ ಪ್ರಲಕ್ಷಿತ ಪ್ರದಾಯಕತ್ವವು ಸಾಧ್ಯವಾಗಿರುತ್ತದೆ, ಮತ್ತು ಕಾನೂನಿನ ಮೇರೆಗೆ ಈ ರೀತಿಯ ಕಬ್ಜೆಯ ಪ್ರದಾಯಕತ್ವವು ಒಂದು ವಿಧ್ಯುಕ್ತವಾದ ದಾನದ ಅವಶ್ಯಕತೆಯನ್ನು ಪೂರ್ತಿಗೊಳಿಸುತ್ತದೆ. ಒಂದು ಅಮೂರ್ತ ಸ್ವತ್ತಿನ ದಾನದ ಸಂಬಂಧದಲ್ಲಿ ದಾನ ಮಾಡಲ್ಪಟ್ಟ ಸ್ವತ್ತಿನಲ್ಲಿರುವ ಎಲ್ಲಾ ಪ್ರಯೋಜನಗಳನ್ನು ಪರಿತ್ಯಜನೆ ಮಾಡಲು ದಾನಿಯು ಉದ್ದೇಶಪಟ್ಟಿರುವುದನ್ನು ತೋರಿಸುವಂತಹ ಯಾವುದಾದರೊಂದು ಕೃತ್ಯವನ್ನು ಒಂದು ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವೆಂದು ಎಣಿಸಲಾಗುತ್ತದೆ.

ಈ ಕೆಳಗಿನ ಎರಡು ಪರಿಸ್ಥಿತಿಗಳಲ್ಲಿ ಒಂದು ಸ್ವತ್ತಿನ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವು ಒಂದು ವಿಧ್ಯುಕ್ತವಾದ ದಾನವನ್ನು ನಿರ್ಮಿಸುತ್ತದೆ:
I) ಒಂದೊಮ್ಮೆ ಆ ಸ್ವತ್ತು ಒಂದು ಅಮೂರ್ತವಾದ ಸ್ವತ್ತಾಗಿದ್ದರೆ, ಮತ್ತು
II) ಒಂದೊಮ್ಮೆ ಆ ಸ್ವತ್ತು ಮೂರ್ತವಾಗಿರುವ ಸ್ವತ್ತಾಗಿದ್ದರೆ, ಆದರೆ ಅದರ ನೈಜ ಪ್ರದಾಯಕತ್ವವು ಅಸಾಧ್ಯವಾಗಿದ್ದರೆ, ಇಂತಹ ಪ್ರಕರಣಗಳಲ್ಲಿ ದಾನಿಯಿಂದ ಮಾಡಲ್ಪಟ್ಟಿರುವ ಒಂದು ಕೃತ್ಯವು ದಾನ ಮಾಡಲು ಅವನ ಉದ್ದೇಶವನ್ನು ಸೂಚಿಸುವದಾದರೆ ಅಲ್ಲಿ ಒಂದು ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವು ಉಂಟಾಗಿದೆಯೆಂದು ಎಣಿಸಲಾಗುತ್ತದೆ. ಆದುದರಿಂದ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವದ ಪ್ರಕಾರಗಳು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಬೇರೆ ಬೇರೆ ರೀತಿಯವುಗಳಾಗಿರಬಹುದು. ಹೀಗೆ, ಒಂದೊಮ್ಮೆ ಜಮೀನು, ಅಥವಾ ದಾರಿಯ ಹಕ್ಕುಗಳ ಒಂದು ದಾನವು ಮಾಡಲ್ಪಟ್ಟಿದೆಯೆಂದಾದರೆ ಅಲ್ಲಿ ಭೂಕೀರ್ವ ಕಾಗದ ಪತ್ರಗಳ ಮೇಲೆ ಹೆಸರಿನ ಬದಲಾವಣೆಯಾದಾಗ ಅಲ್ಲಿ ಒಂದು ಕಬ್ಜೆಯ ಪ್ರದಾಯಕತ್ವವಾಗಿದೆಯೆಂಬ ಕಾನೂನೀ ಪ್ರಭಾವವುಂಟಾಗುತ್ತದೆ. ಒಂದು ಸರಕಾರಿ ಪ್ರಾಮಿಸರಿ ನೋಟಿನ

ಮೇಲೆ ಪ್ರಷ್ಠಾಂಕನಗೊಳಿಸಿ ಅದನ್ನು ಹಸ್ತಾಂತರಿತನಿಗೆ ಪ್ರದಾನ ಮಾಡುವುದರಿಂದ ಅಲ್ಲಿ ಆ ಪ್ರಾಮಿಸರಿ ನೋಟಿನ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವಾಗಿದೆಯೆಂದು ಎಣಿಸಲಾಗುತ್ತದೆ. ಆದುದರಿಂದ, ಒಂದು ಸರಕಾರಿ ಪ್ರಾಮಿಸರಿ ನೋಟಿನ ದಾನದ ಸಂಬಂಧದಲ್ಲಿ ಅದನ್ನು ಪ್ರಷ್ಠಾಂಕನಗೊಳಿಸಿದ ಬಳಿಕ ದಾನಿಯು ಅದನ್ನು ಆದಾತನಿಗೆ ಕೊಟ್ಟರೆ ಅಲ್ಲಿ ಅದರ ಕಬ್ಜೆಯ ಪ್ರದಾಯಕತ್ವವು ಪೂರ್ಣಗೊಂಡಿದೆಯೆಂದು ಎಣಿಸಲಾಗುತ್ತದೆ ಮತ್ತು ಆ ದಾನವು ವಿಧ್ಯುಕ್ತವಾಗಿರುತ್ತದೆ. ಈ ಸಂಗತಿಯು 'ನವಾಬ್ ಅಮಜಾದ್, ಅಲಿಖಾನ್ ವಿ. ಮೊಹಮ್ಮದಿ ಬೇಗಮ್' (Nawab umjad Ally Khan V. Mohumdee begum) ಪ್ರಕರಣದಿಂದ ಸ್ಪಷ್ಟವಾಗುತ್ತದೆ. ಆ ಪ್ರಕರಣವು ಈ ಕೆಳಗಿನಂತಿವೆ.

ನವಾಬ್ ಅಮಜಾದ್ ಅಲಿಖಾನ್ ವಿ. ಮುಹಮ್ಮದಿ ಬೇಗಮ್
(Nawab Umjad Ally Khan V. Mohumadee begum)

ಸಿದ್ಧಾಂತ : ಮಹಮದೀಯ ಕಾನೂನಿನ ಪ್ರಕಾರ ಒಂದು ದಾನವು ಪರಮವಾಗಿರಬೇಕಾಗುತ್ತದೆ. ಒಂದೊಮ್ಮೆ ಒಂದು ದಾನದಲ್ಲಿ ಯಾವುದಾದರೊಂದು ಷರತ್ತನ್ನು ಸೇರಿಸಿದರೆ ಆ ಷರತ್ತು ಶೂನ್ಯವಾಗಿರುತ್ತದೆ ಮತ್ತು ಆ ದಾನವು ವಿಧ್ಯುಕ್ತವಾಗಿ ಉಳಿಯುತ್ತದೆ ಹಾಗೂ ಅಲ್ಲಿ ಯಾವುದೇ ಒಂದು ಷರತ್ತು ಹಚ್ಚಲ್ಪಟ್ಟಿಲ್ಲ ಎಂಬಂತೆನೆ ಆ ದಾನವು ಕಾರ್ಯಾಚರಣೆಗೆ ಬರುತ್ತದೆ. ಆದಾತನ ಜೀವಮಾನದಲ್ಲಿ ಒಂದು ಫಲೋಪಭೋಗವನ್ನು ಕಾಯ್ದಿರಿಸಲಾಗಿತ್ತು ಎಂಬ ಮಾತ್ರಕ್ಕೆ ಆ ದಾನವು ಅಸಿಂಧುವಾಗುವದಿಲ್ಲ.

ವಸ್ತುಸ್ಥಿತಿ : ನವಾಬ್ ಮೂರುವಾರೂದ್ ದೌಲಾ (Nawab Mooruwarood dowlah) ಎಂಬವನು ಅವಧ್ ಸಂಸ್ಥಾನದ ಪ್ರಧಾನಮಂತ್ರಿಯಾಗಿದ್ದನು ಮತ್ತು ಅವನಲ್ಲಿ ಸಾಕಷ್ಟು ಸಂಪತ್ತು ಕೂಡಿಕೊಂಡಿತ್ತು. ಅವನು ತನ್ನ ಸಂಪತ್ತಿನ ಬಹುಭಾಗವನ್ನು ಬ್ರಿಟಿಶ್ ಸರಕಾರದ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ್ದನು. ೧೮೪೮ ರಲ್ಲಿ ಈ ಪ್ರಾಮಿಸರಿ ನೋಟುಗಳನ್ನು ತನ್ನ ಮಗ ನವಾಬ್ ಅಮಜಾದ್ ಅಲಿಖಾನ್ ಇವನಿಗೆ ದಾನ ಮಾಡಿದನು. ಈ ಪ್ರಾಮಿಸರಿ ನೋಟುಗಳ ಒಟ್ಟು ಮೊಬಲಗು ರೂ. ೬,೭೪೦೦೦ ಆಗಿತ್ತು. ಈ ನೋಟುಗಳನ್ನು ರೋಕಡಾ ಮಾಡಿಕೊಳ್ಳಬಹುದೆಂದು ಸರಕಾರವು ೧೮೫೩ರಲ್ಲಿ ಒಂದು ಸೂಚನೆ ಕೊಟ್ಟಿತು. ಈ ಮನವಿದಾರನು ತನ್ನ ಈ ಆಯ್ಕೆಯನ್ನು ಚಲಾವಣೆ ಮಾಡಿ ರೂ. ೭.೩೫.೦೦೦ ಪಡೆದನು. ತನ್ನ ಪ್ರಾಮಿಸರಿ ನೋಟುಗಳ ಮೇಲಿನ ಬಡ್ಡಿಯನ್ನು ತನ್ನ ತಂದೆಗೆ ಕಳುಹಿಸುವಂತೆ ಮನವಿದಾರನು ಪ್ರಾಧಿಕಾರಿಗಳಿಗೆ ಬರೆದನು. ನವಾಬನು ತನ್ನಲ್ಲಿರುವ ಇತರ ಸರಕಾರಿ ನೋಟುಗಳನ್ನು ತನ್ನ ಪತ್ನಿಯ ಹೆಸರಿಗೆ ಪ್ರಷ್ಠಾಂಕಿತಗೊಳಿಸಿದನು ಮತ್ತು ಅವುಗಳ ಮೌಲ್ಯವು ರೂ. ೨,೪೧,೬೦೦ ಆಗಿತ್ತು.

ಆ ಬಳಿಕ ನವಾಬನು ಇನ್ನೂ ಎರಡು ದಾನಗಳನ್ನು ನಿಷ್ಪಾದನೆಗೊಳಿಸಿದನು. ಈ ದಾನದ ಮುಖಾಂತರ ನವಾಬನು ಲಕ್ನೋದಲ್ಲಿರುವ ತನ್ನ ಕೆಲವು ಮನೆಗಳನ್ನು ಮತ್ತು ಇತರ ಕೆಲವು ಗ್ರಾಮಗಳನ್ನು ಮನವಿದಾರನಿಗೆ ಕೊಟ್ಟನು. ಆದರೆ ತನ್ನ ಜೀವಾವಧಿಯಲ್ಲಿ ಅವುಗಳ ಉಪಯೋಗವನ್ನು ತಾನೇ ಇಟ್ಟುಕೊಂಡನು. ಆ ಬಳಿಕ ೧೮೫೭ ರ ಜೂನ್ ೧ ರಂದು ಅವನು ಇನ್ನೂ ಎರಡು ದಾನಗಳನ್ನು ಮನವಿ ದಾರನ ಮಗಂದಿರಿಗೆ ನಿಷ್ಪಾದನೆ ಮಾಡಿದನು ಮತ್ತು ತನ್ನ ಜೀವಮಾನಕ್ಕೆ ಅವುಗಳ ಫಲೋಪಭೋಗವನ್ನು ಕಾಯ್ದಿರಿಸಿದನು. ಈ ನವಾಬನು ೧೮೫೮ ರ ಅಕ್ಟೋಬರ್ ೪ ರಂದು ಮೃತನಾದನು. ಅವನು ಮೃತನಾದಾಗ ಮನವಿದಾರನಾದ ಅವನ ಮಗ, ನಾಲ್ವರು ಮಗಳಂದಿರು ಮತ್ತು ಒಬ್ಬ ವಿಧವೆ, ಪ್ರತಿವಾದಿಗಳು ಇವರು ಅವನ ಉತ್ತರ ಜೀವಿಗಳಾಗಿ ಉಳಿದರು.

೧೮೬೦ ರ ಮೇ ೫ ರಂದು ಸರಕಾರವು ಮನವಿದಾರನಿಗೆ ಲಕ್ನೋ ಮತ್ತು ಇತರ ಜಿಲ್ಹೆಗಳಲ್ಲಿರುವ ಗ್ರಾಮಗಳ ಮಾಲಿಕತ್ವವನ್ನು ಮಂಜೂರು ಮಾಡಿತು. ಮನ ವಿದಾರನು ತನ್ನ ಸಹೋದರಿಯನ್ನು ಸಹ ವಾರಸುದಾರಳನ್ನಾಗಿ ಸ್ವೀಕರಿಸಿದನು. ಆದರೆ ಆ ಮರಣಶಾಸನದಲ್ಲಿ ಉಲ್ಲೇಖಿಸಲಾದ ಋಣ ಮತ್ತು ಕನ್ಯಾಶುಲ್ಕವು ಸಂದಾಯವಾಗುವ ತನಕ ಅದನ್ನು ಮುಂದೂಡಿದನು.

೧೮೬೦ರ ಡಿಶೆಂಬರ್ ೧೮ರಂದು ಇಬ್ಬರು ಪ್ರತಿವಾದಿಗಳು ಒಂದು ದಾವೆ ಹೂಡಿದರು. ನವಾಬನ ಮಗಳಂದಿರು ಲಕ್ನೋ ದಿವಾನೀ ನ್ಯಾಯಾಲಯದಲ್ಲಿ ಮನವಿದಾರನ ವಿರುದ್ಧ ಒಂದು ದಾವೆ ಹೂಡಿದರು. ಇವರು ಆನುವಂಶಿಕತೆ ಮತ್ತು ಜಂಟಿ ವಾರಸಿನ ಮೇಲೆ ಹಕ್ಕುದಾವೆ ಮಾಡಿದರು. ಅವರ ವಾದದ ಪ್ರಕಾರ ನವಾ ಬನು ಒಂದು ಮರಣಶಾಸನವಿಲ್ಲದೇ ಮೃತನಾಗಿರುವನು ಮತ್ತು ಇದರಿಂದಾಗಿ ಲಕ್ನೋ ಜಿಲ್ಹೆಗಳಲ್ಲಿರುವ ಅವನ ಗ್ರಾಮಗಳಿಗೆ ತಾವು ಹಕ್ಕುದಾರರಾಗಿರುವೆವು ಎಂಬುದಾಗಿತ್ತು. ಪ್ರಾಮಿಸರಿ ನೋಟುಗಳಲ್ಲಿರುವ ಅವನ ಹಕ್ಕೂ ಸಹ ಹಸ್ತಾಂತ ರಿಸಲ್ಪಟ್ಟಿಲ್ಲವೆಂದು ಅವರು ವಾದಿಸಿದರು.

ಸಿವಿಲ್ ನ್ಯಾಯಾಧೀಶನು ಈ ರೀತಿಯ ತೀರ್ಪು ಕೊಟ್ಟನು :—

ರೂ. ೭,೩೫,೦೦೦ ಮೌಲ್ಯದ ಸರಕಾರಿ ಪ್ರಾಮಿಸರಿ ನೋಟುಗಳ ದಾನವು ಒಂದು ವಿಧ್ಯುಕ್ತವಾದ ದಾನವಾಗಿರುತ್ತದೆ. ಆ ವಿಧವೆಗೆ ಮಾಡಲಾದ ರೂಪಾಯಿ ೨,೪೧,೬೦೦ ಮೌಲ್ಯದ ಸರಕಾರಿ ನೋಟುಗಳ ದಾನವೂ ಸಹ ವಿಧ್ಯುಕ್ತವಾಗಿರು ತ್ತದೆ. ನವಾಬನ ಮರಣದ ಬಳಿಕ ಆಕೆಗೆ ಕೊಡಲಾದ ರೂ. ೯,೫೦,೦೦೦ ಮೌಲ್ಯದ ನೋಟುಗಳು ಸರಿಯಾಗಿ ಪ್ರಷ್ಠಾಂಕಿತಗೊಳಿಸಲ್ಪಟ್ಟಿವೆ. ಆಕೆಯ ಎಲ್ಲಾ ಕನ್ಯಾ ಶುಲ್ಕದ ಹಕ್ಕುದಾವೆಗಳು ಇದರಿಂದ ವಿಮೋಚಿಸಲ್ಪಟ್ಟಿವೆ.

ಈ ಡಿಕ್ರಿಯಿಂದ ಅತೃಪ್ತನಾದ ಮನವಿದಾರನು ಜ್ಯುಡೀಶಿಯಲ್ ಕಮಿಶನರ್ ಇವನಿಗೆ ಮನವಿ ಮಾಡಿದನು ಮತ್ತು ಇಲ್ಲಿ ಸಿವಿಲ್ ನ್ಯಾಯಾಲಯದ ತೀರ್ಪನ್ನು

ಎತ್ತಿ ಹಿಡಿಯಲಾಯಿತು. ಮನವಿದಾರನು ಕೊನೆಗೆ ಪ್ರೀವಿ ಕೌನ್ಸಿಲ್ಲಿಗೆ ಮನವಿ ಸಲ್ಲಿಸಿದನು ಮತ್ತು ವಿಧವೆಯು ಇಲ್ಲಿ ಸಹ ಪ್ರತಿವಾದಿಯಾಗಿ ಸೇರಿಸಲ್ಪಟ್ಟಳು.

ತೀರ್ಪು : ಪ್ರೀವಿ ಕೌನ್ಸಿಲ್ ಜ್ಯೂಡಿಶಿಯಲ್ ಕಮೀಶನರನ ತೀರ್ಪನ್ನು ಬದಲಾಯಿಸಿತು. ಇದರ ಅಭಿಪ್ರಾಯದ ಪ್ರಕಾರ ಮನವಿದಾರನ ಪರವಾಗಿ ಮಾಡಲ್ಪಟ್ಟ ದಾನವು ವಿಧ್ಯುಕ್ತವಾಗಿರುತ್ತದೆ ಮತ್ತು ಇದರಲ್ಲಿ ಫಲೋಪಭೋಗವನ್ನು ತಂದೆಯು ಕಾಯ್ದಿರಿಸಿರುವನಾದರೂ ಸಹ ಅದು ಈ ದಾನದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವುದಿಲ್ಲ. ರೂ. ೭,೩೫,೦೦೦ ಮೌಲ್ಯದ ಸರಕಾರೀ ಪ್ರಾಮಿಸರಿ ನೋಟುಗಳನ್ನು ನವಾಬನು ದಾನ ಮಾಡಿರುವನಾದುದರಿಂದ ಅದು ಮನವಿದಾರನ ಪ್ರತ್ಯೇಕವಾದ ಸ್ವತ್ತಾಗಿರುತ್ತದೆ ಮತ್ತು ಆ ಮೊಬಲಗಿನಲ್ಲಿ ವಾರಸು ಪಡೆಯಲು ಇತರ ಯಾವನಿಗೂ ಹಕ್ಕಿರುವುದಿಲ್ಲ.

ಕೆಲವು ಪರಿಸ್ಥಿತಿಗಳಲ್ಲಿ ಮುಸ್ಲಿಮ್ ಕಾನೂನಿನ ಪ್ರಕಾರ ಮಾಡಲಾಗುವ ಒಂದು ದಾನದಲ್ಲಿ ದಾನಿಯು ಆ ಸ್ವತ್ತಿನ ಫಲೋಪಭೋಗವನ್ನು ತನಗಾಗಿ ಕಾಯ್ದಿರಿಸಿ ಅಥವಾ ದಾನ ಮಾಡಲ್ಪಟ್ಟ ಸ್ವತ್ತಿನ ಪ್ರಯೋಜನವನ್ನು ತನಗೆ ಕಾಯ್ದಿರಿಸಿ ಒಂದು ದಾನ ಮಾಡಿದರೆ ಅದು ವಿಧ್ಯುಕ್ತವಾದ ದಾನವೆಂದು ಎಣಿಸಲ್ಪಡುತ್ತದೆ. ಈ ರೀತಿಯ ಕಾಯ್ದಿರಿಸುವಿಕೆಯಿಂದ ಕೂಡಿರುವ ಒಂದು ದಾನದಲ್ಲಿ ಆ ಸ್ವತ್ತಿನ ಕಬ್ಜೆಯು ದಾನಿಯ ವಶದಲ್ಲಿರುತ್ತದೆ. ಏಕೆಂದರೆ ಆ ಸ್ವತ್ತಿನ ಪ್ರಯೋಜನವನ್ನು ಅವನೇ ಅನುಭೋಗಿಸುವವನಾಗಿರುವನು. ಆದುದರಿಂದ ಒಂದೊಮ್ಮೆ ಒಬ್ಬ ದಾನಿಯು ತಾನು ದಾನ ಮಾಡಿರುವ ಸ್ವತ್ತಿನ ವಸ್ತುವನ್ನು ಕೊಟ್ಟುಬಿಟ್ಟು ಅದರ ಫಲೋಪಭೋಗವನ್ನು ತನಗಾಗಿ ಕಾಯ್ದಿರಿಸಿದರೆ, ಅಂತಹ ಪ್ರಕರಣಗಳಲ್ಲಿ ಆ ದಾನದ ದಿನಾಂಕದ ಬಳಿಕ ಆದಾತನು ಆ ಸ್ವತ್ತಿಗೆ ಸಂಬಂಧಪಟ್ಟ ರಾಜಸ್ವ ಅಥವಾ ಇತರ ಸರಕಾರೀ ತೀರ್ವೆಗಳನ್ನು ಸಂದಾಯ ಮಾಡಿದರೆ ಅಲ್ಲಿ ಒಂದು ದಾನದ ಪೂರ್ವಭಾವನೆಯುಂಟಾಗುತ್ತದೆ. ಆದಾತನಿಂದ ಸಂದಾಯ ಮಾಡಲ್ಪಟ್ಟಿರುವ ರಾಜಸ್ವವು ದಾನ ಮಾಡಲ್ಪಟ್ಟ ಸ್ವತ್ತಿನ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವೆಂದು ಎಣಿಸಲ್ಪಡುತ್ತದೆ ಮತ್ತು ಆ ದಾನವು ಪೂರ್ಣಗೊಳ್ಳುತ್ತದೆ. ಈ ವಿಷಯವು 'ಮಹಮ್ಮದ್ ಅಬ್ದುಲ್ ಘನಿಖಾನ್ ವಿ. ಫಕ್ರ ಜಹಾನ್ ಬೇಗಮ್ (Mohammad Abdul Ghane Khan V. Fakhr Jahan Begum) ಪ್ರಕರಣದಲ್ಲಿ ಸ್ಪಷ್ಟಗೊಳಿಸಲಾಗಿದೆ. ಈ ಪ್ರಕರಣವು ಈ ಕೆಳಗಿನಂತಿದೆ.

ಮುಹಮ್ಮದ್ ಅಬ್ದುಲ್‌ಘನಿಖಾನ್ ವಿ. ಫಕ್ರ ಜಹಾನ್ ಬೇಗಮ್
(Mohammad Abdul Ghani Khan V. Fakhr Jahan Begum)

ಸಿದ್ಧಾಂತ : ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ದಾನವು ವಿಧ್ಯುಕ್ತವಾದುದೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಈ ಕೆಳಗಿನ ಸಂಗತಿಗಳಿರಬೇಕು.

I. ದಾನಿಯಿಂದ ಆದಾತನಿಗೆ ಘೋಷಣೆ ಮಾಡಲ್ಪಟ್ಟಿರಬೇಕು.

II. ಆದಾತನಿಂದ ಅಥವಾ ಅವನ ಪರವಾಗಿ ಇನ್ನೊಬ್ಬ ವ್ಯಕ್ತಿಯಿಂದ ವ್ಯಕ್ತವಾಗಿ ಅಥವಾ ಅವ್ಯಕ್ತವಾಗಿ ಆ ದಾನವು ಸ್ವೀಕರಿಸಲ್ಪಟ್ಟಿರಬೇಕು,

III. ದಾನಿಯಿಂದ ಆದಾತನಿಗೆ ಆ ದಾನದ ವಿಷಯ ವಸ್ತುವಿನ ಕಬ್ಜೆಯ ಪ್ರದಾಯತ್ವವು ಮಾಡಲ್ಪಟ್ಟಿರಬೇಕು. ಒಂದು ದಾನವು ಪೂರ್ಣಗೊಳ್ಳಬೇಕಾದರೆ ಅಲ್ಲಿ ಆದಾತನಿಂದ ಆ ದಾನದ ಪ್ರಲಕ್ಷಿತ ಅಥವಾ ನೈಜ ಕಬ್ಜೆಯು ನಡೆದಿರಬೇಕು.

ವಸ್ತುಸ್ಥಿತಿ : ನಿಯಾಮತ್ ಉಲ್ಲಾಖಾನ್ ಎಂಬವನು ಅವಧ್ ಇಲ್ಲಿಯ ಒಬ್ಬ ತಾಲೂಕ್‌ದಾರನಾಗಿದ್ದನು. ೧೮೫೭ರ ಯುದ್ಧದ ಬಳಿಕ ಬ್ರಿಟಿಶ್ ಸರಕಾರವು ಇವನಿಗೆ ಮೌಝಾಗಾಂಧಿಯಾ ಎಂಬ ಗ್ರಾಮಗಳ ಹೊರತಾಗಿ ಜಬಲ್‌ಪುರ್ ತಾಲೂಕನ್ನು ಉಂಬಳಿ ಕೊಟ್ಟಿತು. ಮೌಝಾಗಾಂಧಿಯಾ ಇದು ಮುನ್ನಿಬೀಬೀ ಎಂಬವಳಿಗೆ ಕೊಡಲ್ಪಟ್ಟಿತು.

೧೮೬೭ನೇ ಅಗಷ್ಟ ೨೯ರಂದು ನಿಯಾಮತ್ ಉಲ್ಲಾಖಾನ್ ಇವನು ಸಂತತಿಯಿಲ್ಲದೆ ಮೃತನಾದನು. ಮತ್ತು ಮುನ್ನಿಬೀಬಿ ಈಕೆಯ ಪರವಾಗಿ ಅವನು ಒಂದು ಮರಣಶಾಸನವನ್ನು ಮಾಡಿದನು. ಆದುದರಿಂದ ನಿಯಾಮತ್ ಉಲ್ಲಾಖಾನ್ ಇವನ ಮರಣವಾದ ತಕ್ಷಣದಲ್ಲಿ ಆ ತಾಲೂಕು ಮುನ್ನಿಬೀಬಿಯಲ್ಲಿ ಸಂಕ್ರಾಂತವಾಯಿತು. ೧೮೮೪ರ ಮಾರ್ಚ ೭ರಂದು ಆಕೆಯು ಒಂದು ದಾನದ ಪತ್ರವನ್ನು ನಿಷ್ಪಾದನೆಗೊಳಿಸಿದಳು ಮತ್ತು ಆ ದಾನವು ನಿಯಾಮತ್ ಉಲ್ಲಾಖಾನ್ ಇವನ ಸಹೋದರನಾದ ಮೊಹಮ್ಮದ್‌ಲಫ್ತ್ ಉಲ್ಲಾಖಾನ್ ಎಂಬವನಿಗೆ ಮಾಡಲ್ಪಟ್ಟದಾಗಿತ್ತು. ಆ ದಾನ ಪತ್ರವು ಈ ರೀತಿ ಇತ್ತು :

ನಾನು ಈ ಕೆಳಗೆ ಹೇಳಲ್ಪಟ್ಟ ಗ್ರಾಮಗಳ ಹೊರತಾಗಿ ನನ್ನ ಚರ ಮತ್ತು ಸ್ಥಿರ ಸ್ವತ್ತು ಹಾಗೂ ಎಲ್ಲಾ ಜಮೀನ್ದಾರಿ ಮತ್ತು ಲಂಬಂದಾರಿ ಸಂಪದಗಳನ್ನು ಮಹಮ್ಮದ್‌ಲತಿಫ್ ಉಲ್ಲಾಖಾನ್ ಇವನಿಗೆ ದಾನ ಮಾಡಿರುವೆನು ಮತ್ತು ಈ ಸ್ವತ್ತುಗಳಿಂದ ಹೊರತುಪಡಿಸಲಾದ ಗ್ರಾಮವು ನನ್ನ ಜೀವಮಾನಕ್ಕೆ ಹಾಗೂ ನನ್ನ ಮೇಲೆ ಅವಲಂಬಿಸಿರುವ ಸಂಬಂಧಿಕರಿಗಾಗಿ ನನ್ನ ಕಬ್ಜೆಯಲ್ಲಿ ಉಳಿಯುವದು ಮತ್ತು ಇದು ಭಾಡಿಗೆ ಮತ್ತು ಸರಕಾರೀ ರಾಜಸ್ವದಿಂದ ಮುಕ್ತವಾಗಿರುವದು— ಇಂತಹ ಗ್ರಾಮವನ್ನು ನಾನು ನನ್ನ ಜೀವಮಾನದಲ್ಲಿ ಅಡಮಾನ ಅಥವಾ ವಿಕ್ರಯ ಅಥವಾ ದಾನದಿಂದ ಹಸ್ತಾಂತರಿಸುವದಿಲ್ಲ ಮತ್ತು ನನ್ನ ಮರಣದ ಬಳಿಕ ಈ ಆದಾತನು ಇವುಗಳ ಮಾಲಿಕನಾಗುವನು ಮತ್ತು ಇವುಗಳ ರಾಜಸ್ವವನ್ನು ಆದಾತನು ಇಲಾಖಾದಿಂದ ಸಂದಾಯ ಮಾಡುವನು ಮತ್ತು ಈ ಸಂಪದಗಳಿಗೆ ಸಂಬಂಧಪಟ್ಟ ಋಣಗಳನ್ನೂ ಸಹ ಅವನು ಆದರಿಂದಲೇ ಸಂದಾಯ ಮಾಡುವನು'. ಮೌಝಾಗಾಂಧಿಯಾವನ್ನು ಹೊರತು ಅವನು ಎಲ್ಲಾ ಕಬ್ಜೆಗಳನ್ನು ಪಡೆದನು. ೧೯೦೬ರಲ್ಲಿ ಮುನ್ನಿಬೀಬಿಯು ಮೃತಳಾದಳು. ಆಕೆಯ ಮರಣದ ಬಳಿಕ ಮಹಮ್ಮದ್‌ಲತೀಫ್ ಉಲ್ಲಾಖಾನ್ ಇವನು ಮೌಝಾಗಾಂಧಿಯಾ ಇದನ್ನು ರೂ. ೧೧೦೦೦ಕ್ಕೆ ಪ್ರತಿವಾದಿ

ಯಾದ ಪಂಡಿತ್ ಶಿವ್‌ದಯಾಳ್ ಇವನಿಗೆ ಅಡಮಾನಗೊಳಿಸಿದನು. ಮಹಮ್ಮದ್ ಲತೀಫ್ ಉಲ್ಲಾ ಖಾನ್ ಇವನ ಮರಣದ ಬಳಿಕ ಇವನ ಮಗ ಹಮೀದ್ ಮಹಮ್ಮದ್ ಉಲ್ಲಾ ಖಾನ್ ಇವನು ಆ ಸ್ವತ್ತನ್ನು ತನ್ನ ಪತ್ನಿಯರಾದ ಫಕ್ರ್ ಜಹಾನ್ ಬೇಗಮ್ ಮತ್ತು ಅಸಗರಿ ಬೇಗಮ್ ಇವರಿಗೆ ಹಸ್ತಾಂತರಿಸಿದನು. ೧೯೧೩ರ ಜನವರಿ ೧೭ರಂದು ಪಂಡಿತ್ ಶಿ. ದಯಾಳ್ ಇವನಿಗೆ ಸಲ್ಲತಕ್ಕ ಹಣವು ರೂ. ೨೦,೦೮೦ ಆಗಿತ್ತು. ಈ ಹಣವನ್ನು ಸಂದಾಯ ಮಾಡುವದಕ್ಕಾಗಿ ಹಮೀದ್ ಉಲ್ಲಾ ಖಾನ್ ಮತ್ತು ಅವನ ತಾಯಿ ಅಸಗರಿ ಬೇಗಮ್ ಇವರು ಮೌರ್ಝಾಗಾಂಧಿಯಾ ಇದನ್ನು ಪಂಡಿತ್ ಶಿವ್‌ದಯಾಳ್‌ನಿಗೆ ರೂ, ೨೧,೦೦೦ಕ್ಕೆ ಮಾರಾಟ ಮಾಡಿದನು.

ಮುನ್ನಿಬೀಬಿಯ ವಾರಸುದಾರರಾದ ಮಹಮ್ಮದ್ ಅಬ್ದುಲ್ ಘನಿಖಾನ್ ಮತ್ತು ಮಹಮ್ಮದ್ ಅಬ್ದುಲ್ ರಹಮಾನ್‌ಖಾನ್ ಇವರು ಫಕ್ರಜಹನ್‌ಬೇಗಮ್, ಅಸಗರಿ ಬೇಗಮ್, ಹಮೀದ್ ಉಲ್ಲಾ ಖಾನ್ ಮತ್ತು ಪಂಡಿತ್ ಶಿವ್‌ದಯಾಳ್ ಇವರ ವಿರುದ್ಧ ಒಂದು ದಾವೆ ಹೂಡಿದರು. ತಾವೆಲ್ಲ ಮುನ್ನಿಬೀಬಿ ಇವಳ ವಾರಸುದಾರಳಾಗಿರುವ ಕಾರಣದಿಂದಾಗಿ ಆ ಎಲ್ಲಾ ಸ್ವತ್ತುಗಳ ಕಬ್ಜೆಯನ್ನು ಹೊಂದಲು ತಾವು ಹಕ್ಕುದಾರರಾಗಿರುವೆವು ಮತ್ತು ಪ್ರತಿವಾದಿಗಳಿಗೆ ಈ ಸ್ವತ್ತುಗಳ ಸಂಬಂಧದಲ್ಲಿ ಯಾವತ್ತೂ ಹಕ್ಕಿಲ್ಲವೆಂದು ಅವರು ವಾದಿಸಿದರು.

ಸಬೋರ್ಡಿನೇಟ್ ನ್ಯಾಯಾಧೀಶರು ೧೮೮೪ರ ಮಾರ್ಚ್ ೭ರಂದು ಆ ದಸ್ತಾವೇಜು ಒಂದು ಮರಣಶಾಸನವಾಗಿದೆಯಲ್ಲದೆ ದಾನವಾಗಿಲ್ಲ ಎಂಬುದಾಗಿ ಅರ್ಥಾನ್ವಯನ ಮಾಡಿದನು. ಆ ಬಳಿಕ ಅವಧ್ ಇಲ್ಲಿಯ ಜ್ಯೂಡೀಶಿಯಲ್ ಕಮೀಷನರನಿಗೆ ಮನವಿ ಸಲ್ಲಿಸಲಾಯಿತು. ಜ್ಯುಡೀಶಿಯಲ್ ಕಮೀಷನರನು ಕೊಟ್ಟ ತೀರ್ಪಿನ ಪ್ರಕಾರ ಆ ದಸ್ತಾವೇಜು ಒಂದು ದಾನವಾಗಿತ್ತು ಮತ್ತು ಅದರ ಪ್ರಕಾರ ಎಲ್ಲಾ ಸ್ವತ್ತು ಮಹಮ್ಮದ್ ಲತೀಫ್ ಉಲ್ಲಾ ಖಾನ್ ಇವನಿಗೆ ಸಂಕ್ರಾಂತವಾಗುತ್ತದೆ. ಈ ತೀರ್ಪಿನ ವಿರುದ್ಧ ಪ್ರೀವಿ ಕೌನ್ಸಿಲ್ಲಿಗೆ ಮನವಿ ಸಲ್ಲಿಸಲಾಯಿತು.

ತೀರ್ಪು : ಆ ಮನವಿಯನ್ನು ಕಿತ್ತು ಹಾಕಿ ಪ್ರೀವಿ ಕೌನ್ಸಿಲ್ ಈ ಕೆಳಗಿನ ತೀರ್ಪು ಕೊಟ್ಟಿತು :

೧೮೮೪ನೇ ಮಾರ್ಚ್ ೭ ರ ಒಂದು ದಸ್ತಾವೇಜು ಒಂದು ದಾನವಾಗಿರುತ್ತದೆ. ಮಹಮ್ಮದ್‌ಲತೀಫ್ ಉಲ್ಲಾ ಖಾನ್ ಇವನು ಪ್ರಲಕ್ಷಿತವಾಗಿ ಅದರ ಕಬ್ಜೆಯನ್ನು ಪಡೆದಿರುವನೆಂದು ಎಣಿಸಲ್ಪಡುತ್ತಾನೆ, ಇಲ್ಲಿ ಅವನು ಆ ಸ್ವತ್ತಿನ ವಸ್ತುವಿನ ಭೌತಿಕ ಕಬ್ಜೆಯನ್ನು ಹೊಂದಿಲ್ಲದಿದ್ದರೂ ಸಹ ಅವನು ಪ್ರಲಕ್ಷಿತ ಕಬ್ಜೆಯನ್ನು ಹೊಂದಿರುವನೆಂದು ಎಣಿಸಲ್ಪಡುವನು. ದಾನಿಯು ದಾನ ಮಾಡಲ್ಪಟ್ಟ ಸ್ವತ್ತಿನ ಫಲೋಪಭೋಗವನ್ನು ಕಾಯ್ದಿರಿಸುವ ಮಾತ್ರಕ್ಕೆ ಮುಸ್ಲಿಮ್ ಕಾನೂನಿನ ಪ್ರಕಾರ ಆ ದಾನವು ಶೂನ್ಯವಾಗುವದಿಲ್ಲ. ಅದುದರಿಂದ ಈ ದಾನವು ವಿಧ್ಯುಕ್ತವಾಗಿರುತ್ತದೆ.

ನೋಂದಣಿಯು ಅವಶ್ಯಕವೂ ಅಲ್ಲ ಮತ್ತು ಪರ್ಯಾಪ್ತವೂ ಆಗುವದಿಲ್ಲ
(Registration neither essential nor sufficient)

ಮುಸ್ಲಿಮ್ ಕಾನೂನಿನ ಪ್ರಕಾರ ನೋಂದಣಿಯು ಸ್ಥಿರಸ್ವತ್ತುಗಳ ದಾನಗಳನ್ನು ವಿಧ್ಯುಕ್ತಗೊಳಿಸಲು ಅವಶ್ಯಕವೂ ಅಲ್ಲ ಮತ್ತು ಪರ್ಯಾಪ್ತವೂ ಆಗಿರುವುದಿಲ್ಲ. ಭಾರತದಲ್ಲಿ ಒಬ್ಬ ಮುಸಲ್ಮಾನನ ಹೊರತಾಗಿ ಯಾವನಾದರೊಬ್ಬ ವ್ಯಕ್ತಿಯು ಒಂದು ಸ್ಥಿರಸ್ವತ್ತಿನ ದಾನ ಮಾಡಿದರೆ ಆ ದಾನವು ಬರವಣಿಗೆಯಲ್ಲಿ ಮಾಡಲ್ಪಟ್ಟಿದ್ದು ಸರಿಯಾಗಿ ನೋಂದಾಯಿಸಲ್ಪಡದಿದ್ದರೆ ಅದು ವಿಧ್ಯುಕ್ತವಾಗುವುದಿಲ್ಲ. ಆದರೆ ಸ್ವತ್ತು ಹಸ್ತಾಂತರಣ ಅಧಿನಿಯಮ ಇದರ ಕ. ೧೨೯ ಮುಸಲ್ಮಾನರಿಂದ ಮಾಡಲ್ಪಡುವ ದಾನಗಳಿಗೆ ಅನ್ವಯವಾಗುವುದಿಲ್ಲ. ಆದುದರಿಂದ ಮುಸಲ್ಮಾನರಿಂದ ಮಾಡಲ್ಪಡುವ ಒಂದು ದಾನವು ಕಾರ್ಯಾಚರಣೆಗೆ ಬರಬೇಕಾದರೆ ಅದರ ಕಬ್ಜೆಯ ಪ್ರದಾಯಕತ್ವವು ಮಾಡಲ್ಪಡಬೇಕು ಮತ್ತು ಈ ರೀತಿಯ ಪ್ರಕ್ರಿಯೆಯು ಚರ ಹಾಗೂ ಸ್ಥಿರ ಸ್ವತ್ತುಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ. ಒಂದು ಚರ ಅಥವಾ ಸ್ಥಿರ ಸ್ವತ್ತಿನ ಒಂದು ಹಿಬಾ ಇದು ಮೌಖಿಕವಾಗಿ ಮಾಡಲ್ಪಟ್ಟಿರಲಿ ಅಥವಾ ಲಿಖಿತವಾಗಿ ಇದು ವಿಧ್ಯುಕ್ತವಾಗಿರುತ್ತದೆ; ಇಲ್ಲಿ ಕಬ್ಜೆಯ ಪ್ರದಾಯಕತ್ವವು ನೈಜವಾಗಿ ಅಥವಾ ಪ್ರಲಕ್ಷಿತವಾಗಿ ಆಗಿದ್ದರೆ ಇಲ್ಲಿ ಆ ದಾನವನ್ನು ಅಭಿಪ್ರಮಾಣನಗೊಳಿಸುವ ಅಥವಾ ನೋಂದಾಯಿಸುವ ಅವಶ್ಯಕತೆಯಿಲ್ಲ.

ಮುಸ್ಲಿಮ್ ಕಾನೂನಿನ ಈ ನಿಯಮದ ಇನ್ನೊಂದು ಅಂಶವು ಯಾವುದೆಂದರೆ ಒಂದು ದಾನವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ನೋಂದಣಿಯು ಅದಕ್ಕೆ ಪರ್ಯಾಪ್ತವಾಗುವುದಿಲ್ಲ. ಇದರ ಅರ್ಥವೇನೆಂದರೆ ಒಂದು ದಾನವು ವಿಧ್ಯುಕ್ತವಾದುದೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಅದರ ಕಬ್ಜೆಯ ನೈಜ ಅಥವಾ ಪ್ರಲಕ್ಷಿತ ಪ್ರದಾಯಕತ್ವವು ಮಾಡಲ್ಪಟ್ಟಿರಬೇಕು. ಒಂದೊಮ್ಮೆ ಅದು ಈ ರೀತಿಯಾಗಿ ಪ್ರದಾನ ಮಾಡಲ್ಪಟ್ಟಿಲ್ಲದೆ ನೋಂದಾಯಿಸಲ್ಪಟ್ಟಿದ್ದರೂ ಸಹ ಅದು ಒಂದು ವಿಧ್ಯುಕ್ತವಾದ ದಾನವೆಂದು ಎಣಿಸಲ್ಪಡುವದಿಲ್ಲ. ಒಬ್ಬ ಮುಸಲ್ಮಾನನಿಂದ ಮಾಡಲ್ಪಟ್ಟಿರುವ ಒಂದು ದಾನದಲ್ಲಿ ಒಂದೊಮ್ಮೆ ಆ ದಾನವು ನೋಂದಾಯಿಸಲ್ಪಟ್ಟಿದ್ದರೂ ಸಹ ಅದರ ಕಬ್ಜೆಯ ಪ್ರದಾಯಕತ್ವವು ಮಾಡಲ್ಪಟ್ಟಿಲ್ಲವೆಂದಾದರೆ ಆ ನೋಂದಣಿಯು ಆ ದಾನವನ್ನು ವಿಧ್ಯುಕ್ತಗೊಳಿಸುವದಿಲ್ಲ.

ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ದಾನವು ಪೂರ್ಣಗೊಳ್ಳಲು ಅದನ್ನು ನೋಂದಾಯಿಸುವ ಅವಶ್ಯಕತೆಯಿಲ್ಲದಿದ್ದರೂ ಸಹ ಭಾರತದಲ್ಲಿ ಮುಸಲ್ಮಾನರು ಒಂದು ದಾನ ಮಾಡುವಾಗ ಅದರ ಕಬ್ಜೆಯ ಪ್ರದಾಯಕತ್ವವನ್ನು ಮಾಡುವುದಷ್ಟೇ ಅಲ್ಲ; ಅವರು ಆ ಹಿಬಾವನ್ನು ಒಂದು ನೋಂದಾಯಿಸಲ್ಪಟ್ಟ ದಸ್ತಾವೇಜಿನಿಂದ ಮಾಡುವ ಒಂದು ವಾಡಿಕೆಯಿದೆ. ಇದಕ್ಕೆ ಕಾರಣವೇನೆಂದರೆ ನೋಂದಾಯಿಸುವಿಕೆಗೆ ಒಂದು ಮಹತ್ವದ ಸಾಕ್ಷ್ಯದ ಮೌಲ್ಯವಿರುತ್ತದೆ ಮತ್ತು

ಅದೊಂದು ಸ್ವತ್ತಿನ ಹಸ್ತಾಂತರಣದ ಬಗ್ಗೆ ಒಂದು ಕಾನೂನೀ ಪುರಾವೆಯಾಗಿರುತ್ತದೆ. ಒಂದೊಮ್ಮೆ ನೋಂದಣೆ ಮಾಡದೆ ಒಂದು ಹಿಬಾವು ಮಾಡಲ್ಪಟ್ಟರೆ ಒಂದೊಮ್ಮೆ ಆ ದಾನಪತ್ರವು ಕಳೆದು ಹೋದರೆ ಅಥವಾ ಸಾಕ್ಷಿದಾರರು ಮೃತರಾದರೆ ಆ ದಾನವನ್ನು ಸಾಬೀತುಗೊಳಿಸುವದು ಕಷ್ಟವಾಗುತ್ತದೆ.

ಕಬ್ಜೆಯ ಪ್ರದಾಯಕತ್ವವು ಎಂದು ಪೂರ್ಣಗೊಳ್ಳುತ್ತದೆ ?
(When the delivery of possession is Complete ?)

ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ದಾನವು ಪೂರ್ಣಗೊಳ್ಳಬೇಕಾದರೆ ಅಲ್ಲಿ ಕಬ್ಜೆಯ ಪ್ರದಾಯಕತ್ವವು ಮಾಡಲ್ಪಟ್ಟಿರಬೇಕು. ಒಂದೊಮ್ಮೆ ಕಬ್ಜೆಯ ಪ್ರದಾಯಕತ್ವವು ಅಪೂರ್ಣವಾಗಿದ್ದರೆ ಅಲ್ಲಿ ಆ ದಾನವು ಅಪೂರ್ಣವೆಂದು ಎಣಿಸಲ್ಪಡುತ್ತದೆ ಮತ್ತು ಸ್ವತ್ತಿನಲ್ಲಿರುವ ಹಕ್ಕು ಆದಾತನಿಗೆ ಸಂಕ್ರಾಂತವಾಗುವುದಿಲ್ಲ. ಒಬ್ಬ ಆದಾತನು ಆ ದಾನ ಮಾಡಿರುವ ಸ್ವತ್ತಿನ ಸ್ವಾಮಿತ್ವವನ್ನು ಎಂದು ಪಡೆದಿರುವನು ಎಂಬುದು ಆ ಸ್ವತ್ತಿನ ಕಬ್ಜೆಯ ಪ್ರದಾಯಕತ್ವವು ಎಂದು ಪೂರ್ಣಗೊಂಡಿದೆ ಎಂಬುದರ ಮೇಲೆ ಆಧಾರಿತವಾಗಿರುತ್ತದೆ. ಎರಡನೆಯದಾಗಿ, ಸಾಮಾನ್ಯವಾಗಿ ಒಂದು ದಾನವು ಮಾಡಲ್ಪಟ್ಟ ಬಳಿಕ ಅದರ ಕಬ್ಜೆಯ ಪ್ರದಾಯಕತ್ವವು ಪೂರ್ಣಗೊಂಡರೆ ಆ ದಾನವು ರದ್ದುಗೊಳ್ಳಲ್ಪಡುವುದಿಲ್ಲ. ಆದುದರಿಂದ ದಾನ ಮಾಡಲ್ಪಟ್ಟ ಸ್ವತ್ತು ಕಬ್ಜೆಯ ಪ್ರದಾಯಕತ್ವವು ಎಂದು ಮಾಡಲ್ಪಟ್ಟಿತು ಎಂಬುದನ್ನು ನಿರ್ದಿಷ್ಟಗೊಳಿಸುವ ಅವಶ್ಯಕತೆಯಿರುತ್ತದೆ. ಚರ ಸ್ವತ್ತುಗಳ ಸಂಬಂಧದಲ್ಲಿ ಆ ಸ್ವತ್ತಿನ ಕಬ್ಜೆಯು ಭೌತಿಕವಾಗಿ ಆದಾತನಿಗೆ ಹಸ್ತಾಂತರಿಸಲ್ಪಟ್ಟಾಗ ಅಲ್ಲಿ ಅದರ ಕಬ್ಜೆಯ ಪ್ರದಾಯಕತ್ವವು ಉಂಟಾಗಿದೆಯೆಂದು ಹೇಳಲಾಗುತ್ತದೆ. ಆದರೆ ಸ್ಥಿರ ಅಥವಾ ಅಮೂರ್ತ ಸ್ವತ್ತುಗಳ ಸಂಬಂಧದಲ್ಲಿ ಕಬ್ಜೆಯ ಪ್ರದಾಯಕತ್ವದ ನಿಖರವಾದ ಕಾಲವನ್ನು ಸಾಬೀತು ಪಡಿಸುವದು ಕಷ್ಟವಾಗುತ್ತದೆ. ಸ್ಥಿರ ಮತ್ತು ಅಮೂರ್ತ ಸ್ವತ್ತುಗಳ ದಾನಗಳ ಸಂಬಂಧದಲ್ಲಿ ಅವುಗಳ ಕಬ್ಜೆಯ ಪ್ರದಾಯಕತ್ವದ ನಿಖರವಾದ ಕಾಲವನ್ನು ನಿರ್ಣಯಿಸುವ ಬಗ್ಗೆ ಭಾರತದ ನ್ಯಾಯಾಲಯುಗಳು ಎರಡು ರೀತಿಯ ದೃಷ್ಟಿಕೋನಗಳನ್ನು ಹೊಂದಿವೆ. ಒಂದು ದೃಷ್ಟಿಕೋನದ ಪ್ರಕಾರ ಆದಾತನು ಆ ದಾನದ ಸ್ವತ್ತುಗಳಿಂದ ಪ್ರಯೋಜನವನ್ನು ಪಡೆಯತೊಡಗಿದಾಗ ಅದರ ಕಬ್ಜೆಯ ಪ್ರಲಕ್ಷಿತ ಪ್ರದಾಯಕತ್ವವು ಪೂರ್ಣಗೊಳ್ಳುತ್ತದೆ. ದಾನ ಮಾಡಲ್ಪಟ್ಟ ಒಂದು ಸ್ವತ್ತಿನಿಂದ ದಾನಿಯು ಪ್ರಯೋಜನ ಪಡೆಯುತ್ತಿರುವನೆಂದಾದರೆ ಅಲ್ಲಿ ಅದರ ಕಬ್ಜೆಯ ಪ್ರದಾಯಕತ್ವವು ಪೂರ್ಣಗೊಂಡಿಲ್ಲವೆಂದು ಎಣಿಸಲಾಗುತ್ತದೆ. ನ್ಯಾಯಾಲಯುಗಳ ಈ ದೃಷ್ಟಿಕೋನವನ್ನು 'ಪ್ರಯೋಜಕ ಸಿದ್ಧಾಂತ' (Benefit theory) ಎಂದು ಕರೆಯಲಾಗುತ್ತದೆ. ಎರಡನೇ ದೃಷ್ಟಿಕೋನದ ಪ್ರಕಾರ ಯಾವ ದಿನಾಂಕದಂದು ದಾನಿಯು ಆ ಸ್ವತ್ತಿನ ಕಬ್ಜೆಯನ್ನು ಆದಾತನಿಗೆ ಹಸ್ತಾಂತರಿಸಬಯಸಿದನೋ ಆ ದಿನದಂದು ಅದರ ಕಬ್ಜೆಯ ಪ್ರದಾಯಕತ್ವವು

ಪೂರ್ಣಗೊಳ್ಳುತ್ತದೆ. ಈ ದೃಷ್ಟಿಕೋನವನ್ನು 'ಉದ್ದೇಶ ಸಿದ್ಧಾಂತ' (Intention Theory) ಎಂದು ಕರೆಯಲಾಗುತ್ತದೆ. ಇಲ್ಲಿ ದಾನಿಯ ಉದ್ದೇಶವನ್ನು ವಸ್ತುಸ್ಥಿತಿಯ ಆಧಾರದ ಮೇಲೆ ಸಾಬೀತುಪಡಿಸಬೇಕಾಗುತ್ತದೆ. ಇದು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಬೇರೆ ಬೇರೆ ರೀತಿಯವುಗಳಾಗಿರಬಹುದು.

ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನಿಗೆ ದಾನ
(Gift to a minor or lunatic)

ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲ ವ್ಯಕ್ತಿಯ ಪರವಾಗಿ ಒಂದು ದಾನವು ಕಾನೂನುಬದ್ಧವಾಗಿ ಮಾಡಲ್ಪಡಬಹುದು. ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನ ಪರವಾಗಿ ಆ ದಾನವನ್ನು ಅವನ ಸಂರಕ್ಷಕನು ಸ್ವೀಕರಿಸಬಹುದು. ಕಬ್ಜೆಯ ಪ್ರದಾಯಕತ್ವವನ್ನೂ ಸಹ ಅಂತಹ ಸಂರಕ್ಷಕನು ಪೂರ್ಣಗೊಳಿಸಬಹುದು. ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನಿಗೆ ಸಂರಕ್ಷಕನಿಲ್ಲದಿದ್ದರೆ ಆಗ ಅವನ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಯು ಇಂತಹ ದಾನದ ಸ್ವೀಕೃತಿಯನ್ನು ಕೊಡಬಹುದು. ಆದುದರಿಂದ ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನಿಗೆ ಒಬ್ಬ ಕಾನೂನೀ ಸಂರಕ್ಷಕನಿಲ್ಲದಾಗ ಆ ಅಲ್ಪವಯಿ ಅಥವಾ ಚಿತ್ತವಿಕಲನ ಪರವಾಗಿ ಅವನ ವಾಸ್ತವಿಕ ಸಂರಕ್ಷಕನು ಆ ದಾನದ ಸ್ವೀಕೃಯನ್ನು ಕೊಡಬಹುದು ಮತ್ತು ಅದರ ಕಬ್ಜೆಯನ್ನು ಪಡೆಯಬಹುದು. ಆದರೆ ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲನಿಗೆ ಮಾಡಲಾದ ಒಂದು ಕಬ್ಜೆಯ ಪ್ರದಾಯಕತ್ವವು ಒಬ್ಬ ಕಾನೂನೀ ಸಂರಕ್ಷಕನೂ ಅಲ್ಲ ಮತ್ತು ವಾಸ್ತವಿಕ ಸಂರಕ್ಷಕನೂ ಅಲ್ಲದಿರುವ ಒಬ್ಬ ವ್ಯಕ್ತಿಯಿಂದ ಪಡೆಯಲ್ಪಟ್ಟರೆ ಆ ದಾನವು ಪರಿಣಾಮಿತವಾಗುವುದಿಲ್ಲ ಮತ್ತು ಅದು ಶೂನ್ಯವಾಗಿರುತ್ತದೆ.

ಒಂದು ಟ್ರಸ್ಟಿನ ಮುಖಾಂತರ ಒಂದು ದಾನ
(Gift through the medium of a trust)

ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿ ತನ್ನ ಸ್ವತ್ತನ್ನು ಒಂದು ಟ್ರಸ್ಟಿನ ಮುಖಾಂತರವೂ ದಾನ ಮಾಡಬಹುದು. ಒಂದು ನೇರವಾಗಿ ಮಾಡಲಾದ ದಾನ ಮತ್ತು ಒಂದು ಟ್ರಸ್ಟಿನ ಮುಖಾಂತರ ಮಾಡಲಾದ ದಾನ ಇವುಗಳೊಳಗಿನ ವ್ಯತ್ಯಾಸವೇನೆಂದರೆ ಮೊದಲನೆಯ ರೀತಿಯ ದಾನದಲ್ಲಿ ಆದಾತನು ಆ ಸ್ವತ್ತನ್ನು ನೇರವಾಗಿ ದಾನಿಯಿಂದ ಪಡೆಯುವನು, ಆದರೆ ಎರಡನೆ ರೀತಿಯ ದಾನದಲ್ಲಿ ಆದಾತನು ಆ ಸ್ವತ್ತನ್ನು ಟ್ರಸ್ಟಿಗಳ ಮೂಲಕ ಪಡೆಯುವನು. ಒಂದು ಟ್ರಸ್ಟಿನ ಮುಖಾಂತರ ಮಾಡಲ್ಪಟ್ಟ ದಾನದಲ್ಲಿ ಟ್ರಸ್ಟಿಗಳು ಕೇವಲ ಆ ಸ್ವತ್ತಿನ ಕಬ್ಜೆಯನ್ನು ಹೊಂದಿರುವರು ಮತ್ತು ಅದನ್ನು ಆದಾತನ ಪ್ರಯೋಜನಕ್ಕಾಗಿ ಸಂರಕ್ಷಿಸುವರು. ಟ್ರಸ್ಟಿನ ಮುಖಾಂತರ ಮಾಡಲ್ಪಡುವ ದಾನಗಳಲ್ಲಿ ಆ ದಾನದ ಸ್ವೀಕೃತಿ ಮತ್ತು ನೈಜ ಅಥವಾ ಪ್ರುಲಕ್ಷಿತ ಕಬ್ಜೆಯ ಪ್ರದಾಯಕತ್ವವು ಟ್ರಸ್ಟಿಗಳಿಂದ ಮಾಡಲ್ಪಡುತ್ತದೆ. ಟ್ರಸ್ಟಿಗಳಿಂದ

ಒಂದು ಟ್ರಸ್ಟ್ ಪತ್ರವು ನಿಷ್ಪಾದಿಸಲ್ಪಟ್ಟರೆ ಅಲ್ಲಿ ಟ್ರಸ್ಟಿಗಳು ಆ ದಾನವನ್ನು ಸ್ವೀಕರಿಸಿರುವರು ಮತ್ತು ಆದಾತನ ಪರವಾಗಿ ಅದರ ಕಬ್ಜೆಯನ್ನು ಹೊಂದಿರುವರು ಎಂಬುದನ್ನು ತೋರಿಸುತ್ತದೆ.

ಕಬ್ಜೆಯ ಪ್ರದಾಯಕತ್ವದ ಅವಶ್ಯಕತೆ ಇಲ್ಲದಂತಹ ದಾನಗಳು

(Gifts in which Delivery of possessiou is not necessary)

ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ದಾನವು ಪೂರ್ಣಗೊಳ್ಳಬೇಕಾದರೆ ಅಲ್ಲಿ ಕಬ್ಜೆಯ ಒಂದು ಪ್ರದಾಯಕತ್ವವು ನಡೆಯಬೇಕೆಂಬ ಒಂದು ಸಾಮಾನ್ಯ ನಿಯಮವಿದೆ. ಆದರೆ ಈ ಸಾಮಾನ್ಯ ನಿಯಮಕ್ಕೆ ಕೆಲವು ಅಪವಾದಗಳಿವೆ. ಈ ಕೆಳಗಿನ ಪ್ರಕರಣಗಳಲ್ಲಿ ಒಂದು ದಾನದಲ್ಲಿ ಕಬ್ಜೆಯ ಪ್ರದಾಯಕತ್ವವು ಅವಶ್ಯಕವಾಗಿರುವುದಿಲ್ಲ ಮತ್ತು ಕಬ್ಜೆಯ ಹಸ್ತಾಂತರಣವಿಲ್ಲದೆಯೂ ಸಹ ಒಂದು ದಾನವು ವಿಧ್ಯುಕ್ತವಾಗಿರುತ್ತದೆ.

I) ಒಂದೊಮ್ಮೆ ಒಂದು ದಾನ ಮಾಡಲ್ಪಟ್ಟ ಮನೆಯೊಳಗೆ ದಾನಿ ಮತ್ತು ಆದಾತ ಇವರಿಬ್ಬರೂ ವಾಸಿಸುತ್ತಿರುವರೆಂದಾದರೆ

(Where donor and donee both reside in the House Gifted)

ಒಂದೊಮ್ಮೆ ದಾನ ಮಾಡಲ್ಪಟ್ಟ ವಸ್ತುವು ಒಂದು ಮನೆಯಾಗಿದ್ದು ಮತ್ತು ದಾನಿ ಹಾಗೂ ಆದಾತ ಇವರಿಬ್ಬರೂ ಅದರೊಳಗೆ ವಾಸಿಸುತ್ತಿರುವರೆಂದಾದರೆ ಅಲ್ಲಿ ಒಂದು ದಾನವನ್ನು ಪೂರ್ಣಗೊಳಿಸಲು ಕಬ್ಜೆಯ ಔಪಚಾರಿಕ ಪ್ರದಾಯಕತ್ವದ ಅವಶ್ಯಕತೆಯಿರುವದಿಲ್ಲ. ಆದರೆ ಇಲ್ಲಿ ದಾನ ಮಾಡುವ ಉದ್ದೇಶವನ್ನು ವ್ಯಕ್ತಪಡಿಸುವಂತಹ ಒಂದು ಪ್ರಕಟಿತ ಕೃತ್ಯ ಅಥವಾ ಕಂಡುಬರುವಂತಹ ಕಾರ್ಯ ಕಲಾಪವು ದಾನಿಯಿಂದ ನಡೆಯಲ್ಪಟ್ಟಿರಬೇಕು.

II) ಪತಿಯಿಂದ ಪತ್ನಿಗೆ ದಾನ

(Gift by Husband to wife)

ಒಂದೊಮ್ಮೆ ಪತಿಯಿಂದ ಪತ್ನಿಗೆ ಅಥವಾ ಪತ್ನಿಯಿಂದ ಪತಿಗೆ ಒಂದು ಸ್ಥಿರ ಸ್ವತ್ತಿನ ದಾನವು ಮಾಡಲ್ಪಟ್ಟರೆ ಅಲ್ಲಿ ಕಬ್ಜೆಯ ಹಸ್ತಾಂತರಣದ ಅವಶ್ಯಕತೆಯಿಲ್ಲ. ಈ ನಿಯಮಕ್ಕೆ ಕಾರಣವೇನೆಂದರೆ ಪತಿ-ಪತ್ನಿಯರು ಸಂಗಡ ಜೀವಿಸಿದರೆ ಮಾತ್ರ ಅವರು ಪರಸ್ಪರರ ಪ್ರತಿಯಾಗಿ ವೈವಾಹಿಕ ಬಾಧ್ಯತೆಯನ್ನು ನಡೆಸಬಹುದು. ಅದಲ್ಲದೆ ಸಾಮಾನ್ಯವಾಗಿ ಭಾರತದ ಸಮಾಜದಲ್ಲಿ ಪತ್ನಿಯ ಸ್ವತ್ತು ಪತಿಯಿಂದ ಆಕೆಯ ಪರವಾಗಿ ನೋಡಿಕೊಳ್ಳಲ್ಪಡುತ್ತದೆ.

III) ಸಂರಕ್ಷಿತನಿಗೆ ಸಂರಕ್ಷಕನಿಂದ ದಾನ
(Gift by Guardiae to word)

ಒಬ್ಬ ಅಲ್ಪವಯಿ ಅಥವಾ ಚಿತ್ತವಿಕಲ ವ್ಯಕ್ತಿಗೆ ಮಾಡಲಾಗುವ ಒಂದು ದಾನದಲ್ಲಿ ಆ ಸ್ವತ್ತಿನ ಕಬ್ಜೆಯನ್ನು ಸಂರಕ್ಷಕನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಒಂದೊಮ್ಮೆ ಸಂರಕ್ಷಕನು ಸ್ವತಃ ತನ್ನ ಸಂರಕ್ಷಿತನಿಗೆ ಒಂದು ದಾನ ಮಾಡಿದರೆ ಅಲ್ಲಿ ಕಬ್ಜೆಯ ಪ್ರದಾಯಕತ್ವದ ಅವಶ್ಯಕತೆಯಿರುವುದಿಲ್ಲ.

IV) ಆಗಲೇ ಆದಾತನ ಕಬ್ಜೆಯಲ್ಲಿದ್ದಿರುವ ಒಂದು ಸ್ವತ್ತಿನ ದಾನ
(Gift of a property already in possession of Donee)

ಕಬ್ಜೆಯ ಪ್ರದಾಯಕತ್ವದ ಉದ್ದೇಶವು ಯಾವುದೆಂದರೆ ದಾನ ಮಾಡಲ್ಪಟ್ಟ ಸ್ವತ್ತಿನ ಮೇಲೆ ಆದಾತನಿಗೆ ಭೌತಿಕ ನಿಯಂತ್ರಣವನ್ನು ಕೊಡುವದಾಗಿರುತ್ತದೆ. ಆದರೆ ಒಂದೊಮ್ಮೆ ದಾನ ಮಾಡಲ್ಪಟ್ಟಿರುವ ವಸ್ತುವು ಆಗಲೇ ಆದಾತನ ಕಬ್ಜೆಯಲ್ಲಿದ್ದರೆ, ಅಲ್ಲಿ ಆದಾತನಿಗೆ ಹಸ್ತಾಂತರಿಸಲು ಆ ದಾನದ ಸಂಬಂಧದಲ್ಲಿ ದಾನಿಯ ಕೈಯೊಳಗೆ ಏನೂ ಉಳಿಯುವುದಿಲ್ಲ. ಆದುದರಿಂದ ಇತರ ಯಾವುದಾದರೊಂದು ಸಾಮರ್ಥ್ಯದ ಮೇರೆಗೆ ಆದಾತನು ಆ ಸ್ವತ್ತಿನ ಕಬ್ಜೆಯನ್ನು ಹೊಂದಿರುವನಾದರೆ, ಅಲ್ಲಿ ಆದಾತನು ಆ ದಾನದ ಕೇವಲ ಸ್ವೀಕೃತಿಯನ್ನು ಘೋಷಿಸುವದರೊಂದಿಗೆ ಆ ದಾನವು ಪೂರ್ಣಗೊಳ್ಳುತ್ತದೆ. ಇಲ್ಲಿ ಒಂದು ದಾನವನ್ನು ಪೂರ್ಣಗೊಳಿಸಲು ಯಾವತ್ತೂ ಒಂದು ಔಪಚಾರಿಕ ರೀತಿಯ ಪ್ರದಾಯಕತ್ವದ ಅವಶ್ಯಕತೆಯಿರುವದಿಲ್ಲ.

ದಾನದ ವಿಷಯ ವಸ್ತು
The Subject matter of Gift

ಸ್ವತ್ತು (Property)

ದಾನಿಯಿಂದ ಆದಾತನಿಗೆ ಹಸ್ತಾಂತರಿಸಲ್ಪಟ್ಟಿರುವ ಸ್ವತ್ತು ಒಂದು ದಾನದ ವಿಷಯ ವಸ್ತುವಾಗಿರುತ್ತದೆ. ಒಂದು ದಾನವನ್ನು ಮಾಡುವ ಕಾಲದಲ್ಲಿ ದಾನಿಯ ಸ್ವಾಮಿತ್ವಕ್ಕೆ ಒಳಪಟ್ಟಿರುವ ಯಾವುದೇ ರೀತಿಯ ಒಂದು ಸ್ವತ್ತು ಒಂದು ದಾನದ ವಿಷಯವಸ್ತುವಾಗಿರಬಹುದು, ಆದರೆ ಆ ಸ್ವತ್ತು ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨ ಇದರ ಉಪಬಂಧಗಳ ಮೇರೆಗೆ ಹಸ್ತಾಂತರಣೀಯವಾಗಿರಬೇಕು. ಆದುದರಿಂದ ಸ್ವಾಮಿತ್ವವನ್ನು ಚಲಾಯಿಸಬಹುದಾದ ಯಾವುದೇ ರೀತಿಯ ಸ್ವತ್ತು ಒಂದು ದಾನದ ಮುಖಾಂತರ ಹಸ್ತಾಂತರಿಸಲ್ಪಡಬಹುದು. ದಾನವು ಸ್ವಾಮಿತ್ವದ ಒಂದು ಹಸ್ತಾಂತರಣವಾಗಿರುತ್ತದೆ. ಆದುದರಿಂದ ದಾನದ ಘೋಷಣೆ ಮಾಡುವ ಕಾಲದಲ್ಲಿ ದಾನಿಯು ಅದರ ಸ್ವಾಮಿತ್ವವನ್ನು ಹೊಂದಿರಬೇಕಾಗುತ್ತದೆ. ಇದೇ ರೀತಿಯಲ್ಲಿ ಮೂರ್ತ ಹಾಗೂ ಅಮೂರ್ತ ಸ್ವತ್ತುಗಳು ಒಂದು ದಾನದ ವಿಷಯ ವಸ್ತುಗಳಾಗಿರಬಹುದು. ಮುಸ್ಲಿಮ್ ಕಾನೂನು ಪೂರ್ವಾರ್ಜಿತ ಮತ್ತು ಸ್ವಾರ್ಜಿತ ಸ್ವತ್ತಿನೊಳಗೆ ಯಾವುದೇ ರೀತಿಯ ವ್ಯತ್ಯಾಸವನ್ನು ಕಲ್ಪಿಸುವದಿಲ್ಲವಾದುದರಿಂದ

ಈ ಎರಡು ರೀತಿಯ ತತ್ವಗಳನ್ನು ದಾನದ ಮೂಲಕ ಹಸ್ತಾಂತರಿಸಬಹುದು. ಸಂಕ್ಷೇಪದಲ್ಲಿ ಹೇಳುವದಿದ್ದರೆ, ದಾನಗಳ ಉದ್ದೇಶಕ್ಕಾಗಿ ಪೂರ್ವಾರ್ಜಿತ ಮತ್ತು ಸ್ವಾರ್ಜಿತ, ಚರ ಮತ್ತು ಸ್ಥಿರಮೂರ್ತ ಮತ್ತು ಅಮೂರ್ತ ಸ್ವತ್ತುಗಳೊಳಗೆ ಯಾವುದೇ ರೀತಿಯ ವ್ಯತ್ಯಾಸಗಳಿರುವುದಿಲ್ಲ. ಇಲ್ಲಿ ಮನ್ನಿಸಲ್ಪಟ್ಟ ಏಕಮೇವ ಷರತ್ತು ಯಾವುದೆಂದರೆ ಆ ಸ್ವತ್ತು ದಾನಿಯ ಸ್ವಾಮಿತ್ವಕ್ಕೆ ಒಳಪಟ್ಟಿರಬೇಕು. ಮತ್ತು ಅದೊಂದು ಹಸ್ತಾಂತರಣೀಯವಾದ ಸ್ವತ್ತಾಗಿರಬೇಕು.

ಭಾವೀ ಸ್ವತ್ತಿನ ದಾನ (Gift of Future Property)

ಒಂದು ಭಾವೀ ಸ್ವತ್ತಿನ ದಾನವು ಶೂನ್ಯವಾಗಿರುತ್ತದೆ. ಒಂದು ದಾನದ ವಿಷಯವಸ್ತುವಾಗಿರುವ ಸ್ವತ್ತು ಆ ದಾನದ ಘೋಷಣೆ ಮಾಡುವ ಕಾಲದಲ್ಲಿ ಅಸ್ತಿತ್ವದಲ್ಲಿದ್ದಿರಬೇಕು. ಒಂದು ಸ್ವತ್ತಿನ ದಾನದೊಂದಿಗೆ ದಾನಿಯು ಆ ಸ್ವತ್ತಿನ ಮೇಲಿರುವ ತನ್ನ ಕಾನೂನೀ ನಿಯಂತ್ರಣ ಮತ್ತು ಸ್ವಾಮಿತ್ವವನ್ನು ಹಸ್ತಾಂತರಿಸುವನೆಂದು ಎಣಿಸಲಾಗುತ್ತದೆ. ಸ್ವಾಮಿತ್ವವು ಸಿದ್ಧವಾಗಬೇಕಾದರೆ ಆ ಸ್ವತ್ತು ಅಸ್ತಿತ್ವದಲ್ಲಿ ಇದ್ದಿರಬೇಕಾಗುತ್ತದೆ; ಯಾವುದೇ ಒಂದು ಸ್ವತ್ತು ಇಲ್ಲದಾಗ ಅಲ್ಲಿ ಅದರ ಸ್ವಾಮಿತ್ವವು ಇರುವುದಿಲ್ಲ. ಆದುದರಿಂದ ಒಂದೊಮ್ಮೆ ಒಂದು ಸ್ವತ್ತು ಅಸ್ತಿತ್ವದಲ್ಲಿಲ್ಲವೆಂದಾದರೆ ಅದರ ಸ್ವಾಮಿತ್ವವು ಅಸ್ತಿತ್ವದಲ್ಲಿರುವದಿಲ್ಲ ಮತ್ತು ಒಂದೊಮ್ಮೆ ಸ್ವಾಮಿತ್ವವು ಅಸ್ತಿತ್ವದಲ್ಲಿಲ್ಲವೆಂದಾದರೆ ಅಲ್ಲಿ ಏನನ್ನೂ ಹಸ್ತಾಂತರಿಸುವಂತಿಲ್ಲ. ಇದೇ ಕಾರಣಕ್ಕಾಗಿ ಒಂದೊಮ್ಮೆ ದಾನದ ಘೋಷಣೆಯ ಕಾಲದಲ್ಲಿ ಅಸ್ತಿತ್ವದಲ್ಲಿರದ ಒಂದು ಸ್ವತ್ತು ಆ ಬಳಿಕ ಭವಿಷ್ಯತ್ತಿನಲ್ಲಿ ಅಸ್ತಿತ್ವಕ್ಕೆ ಬರಲಿದೆಯಾದರೂ ಸಹ ಅಂತಹ ಸ್ವತ್ತಿನ ಒಂದು ದಾನವು ಕಾನೂನುಬಾಹಿರವಾಗಿರುತ್ತದೆ.

ವಾದಯೋಗ್ಯ ಹಕ್ಕುದಾವೆಗಳ ದಾನ
(Gift of a actionable claims)

ವಾದಯೋಗ್ಯ ಹಕ್ಕು ದಾವೆಯು ಒಂದು ಅಮೂರ್ತವಾದ ಸ್ವತ್ತಾಗಿರುತ್ತದೆ ಮತ್ತು ಒಬ್ಬ ವ್ಯಕ್ತಿಯು ಅದರ ಸ್ವಾಮಿತ್ವವನ್ನು ಹೊಂದಬಹುದು. ಆದುದರಿಂದ ಸ್ವಾಮಿಯು ಅದನ್ನು ಒಂದು ದಾನದ ಮೂಲಕ ಹಸ್ತಾಂತರಿಸಬಹುದು. ಒಂದು ವಾದಯೋಗ್ಯ ಹಕ್ಕು ದಾವೆಯೊಳಗೆ ಎ) ಒಂದು ಅಭದ್ರವಾದ ಋಣ ಅಥವಾ, ಬಿ) ಹಕ್ಕು ದಾವೆ ಮಾಡುತ್ತಿರುವವನ ಕಬ್ಜೆಯಲ್ಲಿಲ್ಲದಂತಹ ಒಂದು ಚರಸ್ವತ್ತಿನಲ್ಲಿರುವ ಯಾವತ್ತೂ ಹಿತಸಂಬಂಧವಿರಬಹುದು. ವಾದಯೋಗ್ಯ ಹಕ್ಕುದಾವೆಗಳ ಹೊರತಾಗಿ ಒಬ್ಬ ವ್ಯಕ್ತಿಯ ಸ್ವಾಮಿತ್ವಕ್ಕೆ ಒಳಪಟ್ಟಿರುವ ಪ್ರಯೋಜಕ ಹಿತ ಸಂಬಂಧವೂ ಸಹ ಒಂದು ದಾನದ ವಿಷಯ ವಸ್ತುವಾಗಿರಬಹುದು. ಇಲ್ಲಿ ಆ ಪ್ರಯೋಜಕ ಹಿತಸಂಬಂಧವು ಒಂದು ಚರಸ್ವತ್ತಿನಲ್ಲಿದೆಯೋ ಅಥವಾ ಸ್ಥಿರಸ್ವತ್ತಿನಲ್ಲಿದೆ ಎಂಬುದು ಮಹತ್ವದ್ದಲ್ಲ.

ವಾದಯೋಗ್ಯ ಹಕ್ಕು ದಾವೆಗಳನ್ನು ಮತ್ತು ಅಮೂರ್ತ ಸ್ವತ್ತುಗಳ ಕಬ್ಜೆಯನ್ನು ಪಡೆಯುವದು ಸಾಧ್ಯವಾಗುವುದಿಲ್ಲ. ಆದುದರಿಂದ ಇವುಗಳ ನೈಜ ಕಬ್ಜೆಯು ಪ್ರದಾಯಕತ್ವವು ಸಾಧ್ಯವಾಗುವುದಿಲ್ಲ. ಇವುಗಳ ಕಬ್ಜೆಯು ನೈಜ ಪ್ರದಾಯಕತ್ವವನ್ನು ಕಾನೂನು ಬಯಸುವದಿಲ್ಲ. ಆದರೆ ಇಲ್ಲಿ ಗಮನಿಸಬೇಕಾಗಿರುವ ಒಂದು ಮಹತ್ವದ ಸಂಗತಿಯು ಯಾವುದೆಂದರೆ ಒಂದು ವಾದಯೋಗ್ಯ ಹಕ್ಕುದಾವೆಯು ಒಂದು ದಾನವನ್ನು 'ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨' ಇದರ ಉಪಬಂಧಗಳಿಗೆ ಅನುಗುಣವಾಗಿಯೇ ಮಾಡಬೇಕಾಗುತ್ತದೆ, ಏಕೆಂದರೆ ಈ ಅಧಿನಿಯಮದಲ್ಲಿ ವಾದಯೋಗ್ಯ ಹಕ್ಕು ದಾವೆಗಳ ಹಸ್ತಾಂತರಣವನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ ಮತ್ತು ಒಂದೊಮ್ಮೆ ಇದಕ್ಕೆ ವಿರುದ್ಧವಾಗಿರುವಂತಹ ಯಾವತ್ತೂ ನಿಯಮಗಳು ಮುಸ್ಲಿಮ್ ಕಾನೂನಿನಲ್ಲಿದ್ದರೆ ಆ ನಿಯಮಗಳು ವಾದಯೋಗ್ಯ ಹಕ್ಕು ದಾವೆಗಳ ಹಸ್ತಾಂತರಣಕ್ಕೆ ಅನ್ವಯವಾಗುವುದಿಲ್ಲ ಮತ್ತು ಇಲ್ಲಿ ಪಕ್ಷಗಾರರು ಮುಸಲ್ಮಾನರಿದ್ದರೂ ಸಹ ಅದು ಇದರ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಬೀರುವದಿಲ್ಲ. ಆದುಧರಿಂದ ಒಬ್ಬ ಮುಸಲ್ಮಾನನು ಒಂದು ವಾದಯೋಗ್ಯ ಹಕ್ಕುದಾವೆಯ ದಾನ ಮಾಡಿದರೆ ಅದನ್ನು ಅವನು ಲಿಖಿತಗೊಳಿಸಿ ಹಸ್ತಾಕ್ಷರಿತಗೊಳಿಸಿರುವ ಹೊರತು ಅದು ವಿಧ್ಯುಕ್ತವಾಗಿರುವುದಿಲ್ಲ. ಆದರೆ, ಒಂದು ವಾದಯೋಗ್ಯ ಹಕ್ಕು ದಾವೆಯು ದಾಖಿಯನ್ನು ಪ್ರಷ್ಠಾಂಕಿತಗೊಳಿಸಿ ಅದನ್ನು ಕಾನೂನುಬದ್ಧವಾಗಿ ಹಸ್ತಾಂತರಣಗೊಳಿಸಬಹುದು; ಈ ಬಗ್ಗ ನಾಮಾಂತರಣಗೊಳಿಸುವ ಒಂದು ಪ್ರತ್ಯೇಕವಾದ ದಾಖಲೆಯ ಅವಶ್ಯಕತೆಯಿರುವದಿಲ್ಲ.

ಶಿಯಾ ಕಾನೂನು (Shia Law)

'ಶರಯಾ-ಉಲ್-ಇಸ್ಲಾಮ್ (Sharaya-ul-Islam) ಎಂಬ ಒಂದು ಶಿಯಾ ಕಾನೂನಿನ ಅಧಿಕೃತ ಗ್ರಂಥದ ಪ್ರಕಾರ ಋಣಿಯಲ್ಲದ ಇತರ ಯಾವನದರೊಬ್ಬ ವ್ಯಕ್ತಿಗೆ ಮಾಡಲಾಗುವ ಒಂದು ಋಣದ ದಾನವು ಶೂನ್ಯವಾಗಿರುತ್ತದೆ. ಋಣಿಯ ಪರವಾಗಿ ಋಣದಾತನಿಂದ ಮಾಡಲಾಗುವ ಒಂದು ಋಣದ ದಾನವು ವಿಧ್ಯುಕ್ತವಾಗಿರುತ್ತದೆ.

ಒಂದು ವಿಮೋಚನೆಯ ನೀತಿ ಸಮ್ಮತತೆಯ ದಾನ (Gift of an equity of Redemption)

ಒಬ್ಬ ಅಡಮಾನಿಯು ತನ್ನ ಒಂದು ಸ್ಥಿರಸ್ವತ್ತಿನ ಭದ್ರತೆಯ ಅಡಮಾನಿತನಿಂದ ಒಂದು ಸಾಲವನ್ನು ಪಡೆದ ಬಳಿಕ ಅಡಮಾನಿತನಿಗೆ ಆ ಹಣವನ್ನು ಸಂದಾಯ ಮಾಡಿ ತನ್ನ ಸ್ವತ್ತನ್ನು ವಿಮೋಚನೆಗೊಳಿಸಲು ಅವನಿಗೊಂದು ನೀತಿಸಮ್ಮತವಾದ ಹಕ್ಕಿರುತ್ತದೆ. ಅಡಮಾನಿಯ ಈ ಹಕ್ಕನ್ನು ವಿಮೋಚನೆಯ ನೀತಿಸಮ್ಮತತೆಯೆಂದು ಕರೆಯಲಾಗುತ್ತದೆ. ವಿಮೋಚನೆಯ ನೀತಿ ಸಮ್ಮತತೆಯು ಅಡಮಾನಿಯ

ಒಂದು ಪ್ರಯೋಜಕ ಹಿತಸಂಬಂಧವಾಗಿರುತ್ತದೆ ಮತ್ತು ಅದು ಅವನ ಸ್ವಾಮಿತ್ವಕ್ಕೆ ಒಳಪಟ್ಟುದಾಗಿರುತ್ತದೆ. ಒಬ್ಬ ಅಡವಾನಿಯು ತನ್ನ ನೀತಿ ಸಮ್ಮತತೆಯ ಹಕ್ಕನ್ನು ದಾನ ಮಾಡಬಹುದು. ಒಂದು ವಿಮೋಚನೆಯ ನೀತಿ ಸಮ್ಮತತೆಯ ದಾನ ಮಾಡಿದಾಗ ಅಲ್ಲಿ ಆದಾತನು ಆ ಸ್ವತ್ತಿನ ಋಣವನ್ನು ಸಂದಾಯ ಮಾಡಿ ಅಡ ಮಾನಿತರಿಂದ ಆ ಅಡಮಾನವನ್ನು ವಿಮೋಚನೆಗೊಳಿಸಲು ಹಕ್ಕುದಾರನಾಗಿರು ವನು.

ಕನ್ಯಾಶುಲ್ಕದ ದಾನ (Gift of mahr)

ಒಬ್ಬ ಪತ್ನಿಯು ತನ್ನ ಕನ್ಯಾಶುಲ್ಕವನ್ನು ಪತಿಯ ಪರವಾಗಿ ದಾನ ಮಾಡ ಬಹುದು. ಒಂದು ಕನ್ಯಾಶುಲ್ಕದ ಹಕ್ಕು ಒಬ್ಬ ಪತ್ನಿಯಲ್ಲಿ ನಿಹಿತವಾದ ತಕ್ಷಣದಲ್ಲಿ ಅದು ಆಕೆಯ ಸ್ವತ್ತಾಗಿರುತ್ತದೆ, ಮತ್ತು ಆಕೆಯು ತನಗೆ ಇಷ್ಟಬಂದ ರೀತಿಯಲ್ಲಿ ಅದರೊಂದಿಗೆ ವ್ಯವಹರಿಸಬಹುದು. ಕನ್ಯಾಶುಲ್ಕವು ಪತಿಯಿಂದ ಪತ್ನಿಗೆ ಸಲ್ಲಬೇಕಾ ಗಿರುವ ಒಂದು ಋಣವಾಗಿರುತ್ತದೆ. ಒಂದು ಋಣದ ಬಗ್ಗೆ ಹಕ್ಕುದಾವೆ ಮಾಡುವ ಅಧಿಕಾರವು ಒಂದು ವಾದಯೋಗ್ಯ ಹಕ್ಕುದಾವೆಯಾಗಿರುತ್ತದೆ. ಆದುದರಿಂದ ಪತ್ನಿಯ ಕನ್ಯಾಶುಲ್ಕದ ಹಕ್ಕು ಆಕೆಯ ವಾದಯೋಗ್ಯ ಹಕ್ಕುದಾವೆಯಾಗಿರುತ್ತದೆ. ಅದನ್ನು ಆಕೆಯು ಒಂದು 'ಹಿಬಾ' ಇದರ ವಿಷಯವಸ್ತುವನ್ನಾಗಿ ಮಾಡಬಹುದು. ಕನ್ಯಾಶುಲ್ಕವು ಪತ್ನಿಯ ಒಂದು ವೈಯಕ್ತಿಕ ಹಕ್ಕಾಗಿರುತ್ತದೆ ಮತ್ತು ಅದನ್ನು ಪತ್ನಿಯ ಹೊರತಾಗಿ ಇತರ ಯಾವನೇ ಒಬ್ಬ ವ್ಯಕ್ತಿಯು ಚಲಾಯಿಸುವಂತಿಲ್ಲ. ಆದರೆ ಆಕೆಯು ಈ ಹಕ್ಕನ್ನು ತನ್ನ ಪತಿಯ ಪರವಾಗಿ ಪರಿತ್ಯಜನೆ ಮಾಡಬಹು ದೆಂದು ಮುಸ್ಲಿಂ ಕಾನೂನಿನಲ್ಲಿ ಉಪಬಂಧಿಸಲಾಗಿದೆ. ಕಾನೂನಿನ ಭಾಷೆಯಲ್ಲಿ ಈ ರೀತಿಯ ಹಕ್ಕಿನ ಪರಿತ್ಯಜನೆಯೆಂದರೆ ಅದೊಂದು ಪತಿಯ ಪರವಾಗಿ ಮಾಡಲಾಗುವ ದಾನವಾಗಿರುತ್ತದೆ. ಆದರೆ ಕನ್ಯಾಶುಲ್ಕದ ಹಕ್ಕು ಒಂದು ದಾನದ ವಿಶಿಷ್ಟವಾದ ವಿಷಯ ವಸ್ತುವಾಗಿರುತ್ತದೆ. ಅದರ ದಾನವು ಈ ಕೆಳಗಿನ ಎರಡು ವಿಶೇಷ ನಿಯಮ ಗಳಿಗೆ ಬಾಧ್ಯವಾಗಿರುತ್ತದೆ:

ಎ) ಒಬ್ಬ ಪತ್ನಿಯು ತನಗೆ ಸಂದಾಯವಾಗಬೇಕಾಗಿರುವ ಕನ್ಯಾಶುಲ್ಕ ವನ್ನು ತನ್ನ ಪತಿಗೆ ಷರತ್ತುಬದ್ಧವಾಗಿ ದಾನ ಮಾಡಬಹುದು, ಮತ್ತು ಒಂದೊಮ್ಮೆ ಆ ಷರತ್ತು ಪೂರ್ತಿಗೊಳಿಸಲ್ಪಡದಿದ್ದರೆ, ಆ ಕನ್ಯಾಶುಲ್ಕವನ್ನು ತನಗೆ ಸಲ್ಲಿಸುವಂತೆ ಆಕೆಯು ಅವನಲ್ಲಿ ಅಭಿಯಾಚನೆ ಮಾಡಬಹುದು;

ಬಿ) ಒಬ್ಬ ಪತ್ನಿಯು ತನ್ನ ಮೃತಪತಿಗೆ ತನ್ನ ಕನ್ಯಾಶುಲ್ಕವನ್ನು ದಾನ ಮಾಡಿದರೆ ಅದು ಸಿಂಧುವಾಗಿರುತ್ತದೆ ಮತ್ತು ಅದು ಕನ್ಯಾಶುಲ್ಕವನ್ನು ಹಕ್ಕು ದಾವೆ ಮಾಡಿ ಪಡೆಯುವ ಬಗ್ಗೆ ಆ ವಿಧವೆಯ ಹಕ್ಕನ್ನು ನಿರ್ಮೂಲನಗೊಳಿಸುತ್ತದೆ.

ಒಂದು ಕನ್ಯಾಶುಲ್ಕದ ದಾನವು ಒಂದು ವಾದಯೋಗ್ಯ ಹಕ್ಕುದಾವೆಯ ದಾನ ವಾಗಿರುತ್ತದೆ. ಆದುದರಿಂದ ಅದನ್ನು ಬರವಣಿಗೆಯಲ್ಲಿ ಮಾಡಬೇಕಾಗುತ್ತದೆ.

ಅದನ್ನು ಬಾಯಿಮಾತಿನಲ್ಲಿ ಮಾಡುವಂತಿಲ್ಲ. ಆದರೆ ನೋಂದಣಿಯು ಇದಕ್ಕೆ ಆವಶ್ಯಕವಲ್ಲ.

ದಾನದ ವಿಷಯವಸ್ತುವಿನ ರೀತಿಯಲ್ಲಿ ಸೇವೆಗಳು
(Services as Subject-matter of Gift)

ಒಂದು ದಾನದ ವಿಷಯವಸ್ತುವು ಕಾನೂನಿನ ದೃಷ್ಟಿಯಲ್ಲಿ ಉತ್ತೀಯ ಮೌಲ್ಯವುಳ್ಳದ್ದಾಗಿರಬೇಕಾಗುತ್ತದೆ. ಸೇವೆಗಳು ಅಥವಾ ನೈಸರ್ಗಿಕ ಪ್ರೇಮ ಮತ್ತು ವಾತ್ಸಲ್ಯ ಇವು ಸ್ವತ್ತುಗಳೆಂದು ಎಣಿಸಲ್ಪಡುವುದಿಲ್ಲ. ಆದುದರಿಂದ ಇವು ಒಂದು ಹಿಬಾ ಇದರ ವಿಷಯ ವಸ್ತುವಾಗುವದಿಲ್ಲ. ಸೇವೆಗಳು ಅಥವಾ ಪ್ರೇಮ ಮತ್ತು ವಾತ್ಸಲ್ಯ ಇವುಗಳ ದಾನವು ಒಂದು ದಾನವೆಂದು ಎಣಿಸಲ್ಪಡುವುದಿಲ್ಲ.

ಮುಷಾ ಇದರ ದಾನ: ಮುಷಾ ಇದರ ಬಗ್ಗೆ ಹನಫಿ ಕಾನೂನು
(Gift of Mushaa : The Hanafi doctrine of Mushaa)

'ಮುಷಾ' ಈ ಶಬ್ದದ ಮೂಲವು ಅರಬಿ ಶಬ್ದ ಷುಯಾ ಆಗಿರುತ್ತದೆ. ಷುಯಾ ಎಂದರೆ ಅಸ್ತವ್ಯಸ್ತತೆ. ಮುಸ್ಲಿಮ್ ಕಾನೂನಿನ ಪ್ರಕಾರ ಮುಷಾ ಎಂದರೆ ಒಂದು ಅವಿಭಕ್ತ ಸ್ವತ್ತಿನಲ್ಲಿರುವ ವಿಭಜಿತವಾಗಿರದ ಪಾಲಿನಲ್ಲಿರುವ ಒಂದು ಸ್ವತ್ತಾಗಿರುತ್ತದೆ ಮತ್ತು ಇದು ಚರಸ್ವತ್ತಾಗಿರಬಹುದು ಅಥವಾ ಸ್ಥಿರಸ್ವತ್ತು. ಆದುದರಿಂದ ಮುಷಾ ಎಂಬುದು ಒಂದು ಸಹಸ್ವಾಮಿತ್ವದ ಅಥವಾ ಜಂಟಿ ಮಾಲಿಕತ್ವದ ಸ್ವತ್ತಾಗಿರುತ್ತದೆ. ಒಂದೊಮ್ಮೆ ಇಂತಹ ಸ್ವತ್ತಿನ ಅನೇಕ ಸ್ವಾಮಿಗಳೊಳಗೆ ಯಾವನಾದರೊಬ್ಬನು ತನ್ನ ಪಾಲನ್ನು ಒಂದು ದಾನವಾಗಿ ಕೊಟ್ಟರೆ ಅಲ್ಲಿ ಆ ಸ್ವತ್ತಿನ ಯಾವ ಭಾಗವನ್ನು ಆದಾತನಿಗೆ ಕೊಡಬೇಕೆಂಬ ಬಗ್ಗೆ ಒಂದು ಅಸ್ತವ್ಯಸ್ತತೆಯುಂಟಾಗುತ್ತದೆ. ಇಂತಹ ಸ್ವತ್ತಿನ ಕಬ್ಜೆಯು ಪ್ರದಾಯಕತ್ವದ ಹಂತದಲ್ಲಿ ಉಂಟಾಗಬಹುದಾದ ಅಸ್ತವ್ಯಸ್ತತೆಯನ್ನು ಮತ್ತು ತೊಂದರೆಯನ್ನು ತಪ್ಪಿಸುವ ಉದ್ದೇಶದಿಂದಾಗಿ ಹನಫಿ ನ್ಯಾಯದರ್ಶಿಗಳು ಮುಷಾ ಸಿದ್ಧಾಂತವನ್ನು ನಿರ್ಮಿಸಿರುವರು. ಒಂದು ದಾನದ ವಿಷಯ ವಸ್ತುಗಳು ಸಹಸ್ವಾಮಿತ್ವದ ಅಥವಾ ಜಂಟಿ ಸ್ವತ್ತಾಗಿದ್ದರೆ ಅಲ್ಲಿ ಆ ದಾನದ ವಿಧ್ಯುಕ್ತತೆಯನ್ನು ಪರೀಕ್ಷಿಸುವ ಉದ್ದೇಶದಿಂದ ಅದಕ್ಕೆ ಮುಷಾ ಸಿದ್ಧಾಂತವು ಅನ್ವಯಗೊಳಿಸಲಾಗುತ್ತದೆ. ಮುಷಾ ಇದರ ಬಗ್ಗೆ ಹನಫಿ ಸಿದ್ಧಾಂತದ ಪ್ರಕಾರ ಒಂದು ಸಹಸ್ವಾಮಿತ್ವದ ಸ್ವತ್ತು ವಿಭಜನೆಯಾಗಿರದೆ ಅದರೊಳಗಿನ ಒಂದು ಪಾಲನ್ನು ಒಬ್ಬನು ದಾನ ಮಾಡಿ ಅದರ ಕಬ್ಜೆಯು ನೈಜ ಪ್ರದಾಯಕತ್ವ ಮಾಡಿದರೆ ಅದು ಅಸಿಂಧುವಾಗಿರುತ್ತದೆ. ಆದರೆ ಒಂದೊಮ್ಮೆ ಆ ಸಹಸ್ವಾಮಿತ್ವದ ಸ್ವತ್ತು ಅವಿಭಜನೀಯವಾಗಿದ್ದರೆ ಅಲ್ಲಿ ಮುಷಾ ಸಿದ್ಧಾಂತವು ಅನ್ವಯವಾಗುವದಿಲ್ಲ.

ಒಂದು ದಾನದ ವಿಷಯ ವಸ್ತುವಾಗಿರುವ ಒಂದು ಮುಷಾ ಅಥವಾ ವಿಭಜನೆಯಾಗಿರದ ಒಂದು ಸ್ವತ್ತು ಎರಡು ರೀತಿಯದ್ದಾಗಿರಬಹುದು : ಎ) ಅದೊಂದು

ವಿಭಜನೆಯಾಗದಿರುವ ಸ್ವತ್ತಾಗಿದ್ದು ಅಲ್ಲಿ ವಿಭಜನೆಯು ಅಸಾಧ್ಯವಾಗಿರಬಹುದು; ಮತ್ತು ಬಿ) ಅದೊಂದು ವಿಭಜನೆಯಾಗಿರದ ಸ್ವತ್ತಾಗಿದ್ದು ಅದು ವಿಭಜಿಸಲು ಸಾಧ್ಯವಾದುದಾಗಿರಬಹುದು.

ಅವಿಭಜನೀಯ ಮುಷಾ (Mushaa Indivisible)

ಕೆಲವು ರೀತಿಯ ಸ್ವತ್ತುಗಳು ತಮ್ಮ ಸ್ವರೂಪದಿಂದಲೇ ಅವಿಭಜನೀಯ ವಾಗಿರುತ್ತವೆ. ಒಂದೊಮ್ಮೆ ಅಂತಹ ಒಂದು ಸ್ವತ್ತು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ಸಹಸ್ವಾಮಿತ್ವಕ್ಕೆ ಒಳಪಟ್ಟಿದ್ದರೆ, ಅವರ ನಿರ್ದಿಷ್ಟವಾದ ಸ್ವತ್ತು ಪರಿಭಾಷಿಸಲ್ಪಡಬಹುದು. ಆದರೆ ಆ ಸ್ವತ್ತಿನ ಯಾವ ನಿರ್ದಿಷ್ಟವಾದ ಭಾಗವು ಅವರೊಳಗೆ ಪ್ರತಿಯೊಬ್ಬನ ಪಾಲಿಗೆ ಬರುವದೆಂಬುದು ನಿರ್ಣಯಿಸಲಿಕ್ಕಾಗುವುದಿಲ್ಲ. ಇಂತಹ ಒಂದು ಸ್ವತ್ತಿನ ಭೌತಿಕ ವಿಭಜನೆಯು ಅಸಾಧ್ಯವಾಗಿರುತ್ತದೆ. ಉದಾಹರಣೆಗಾಗಿ ಒಂದು ಸಾಮೂಹಿಕ ಸ್ನಾನಗೃಹ ಅಥವಾ ಒಂದು ಚಲನಚಿತ್ರಗೃಹ ಇತ್ಯಾದಿ ಇವು ಮುಷಾ ಸ್ವತ್ತುಗಳಾಗಿರುತ್ತವೆ. ಒಂದು ನದಿಯ ತಟದಲ್ಲಿ ಒಂದು ಸಾಮೂಹಿಕ ಸ್ನಾನದ ಪ್ರದೇಶವಿದ್ದರೆ ಮತ್ತು ಆ ಸ್ನಾನದ ಪ್ರದೇಶವು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ಸಹಸ್ವಾಮಿತ್ವಕ್ಕೆ ಒಳಪಟ್ಟಿದ್ದರೆ, ಅಲ್ಲಿ ಆ ಸ್ವತ್ತಿನ ಪ್ರತಿಯೊಬ್ಬ ಸ್ವಾಮಿಯು ತನ್ನ ಹಕ್ಕಿನ ಬಗ್ಗೆ ತನಗೆ ಇಷ್ಟ ಬಂದಂತೆ ವರ್ತಿಸಲು ಹಕ್ಕುದಾರನಾಗಿರುವನು. ಆದರೆ ಅವರೊಳಗಿನ ಯಾವನಾದರೊಬ್ಬ ಪಾಲುಗಾರನು ತನ್ನ ಪಾಲುಗಳನ್ನು ಪ್ರತ್ಯೇಕಗೊಳಿಸಬಯಸಿದರೆ ಅಲ್ಲಿ ಆ ಇಡೀ ಸ್ನಾನದ ಪ್ರದೇಶವು ನಿಷ್ಪ್ರಯೋಜಕವಾಗಿರುತ್ತದೆ. ಇದೇ ರೀತಿಯಲ್ಲಿ ಒಂದೊಮ್ಮೆ ಒಂದು ಮಾಳಿಗೆಯ ಮೆಟ್ಟಲು ಅನೇಕ ವ್ಯಕ್ತಿಗಳ ಸ್ವಾಮಿತ್ವಕ್ಕೆ ಒಳಪಟ್ಟಿದ್ದರೆ ಯಾವನಾದರೊಬ್ಬನು ಅದರೊಳಗಿನ ತನ್ನ ಪಾಲನ್ನು ಹಸ್ತಾಂತರಣಗೊಳಿಸಿದರೆ ಅಲ್ಲಿ ಆ ಇಡೀ ಮಾಳಿಗೆ ಮೆಟ್ಟಲು ನಿಷ್ಪ್ರಯೋಜಕವಾಗುತ್ತದೆ.

ಮುಸ್ಲಿಮ್ ಕಾನೂನಿನ ಪ್ರತಿಯೊಂದು ಪರಂಪರೆಯ ಪ್ರಕಾರ ಅವಿಭಜನಿಯ ಮುಷಾ ಇದರ ಒಂದು ದಾನವು ಯಾವತ್ತೂ ವಿಭಜನೆಯಿಲ್ಲದೆ ಮತ್ತು ಕಬ್ಜೆಯ ನೈಜ ಪ್ರದಾಯಕತ್ವವಿಲ್ಲದೆ ಮಾಡಲ್ಪಟ್ಟರೆ ಅದು ವಿಧ್ಯುಕ್ತವಾಗಿರುತ್ತದೆ. ಹೀಗೆ, ಒಂದು ಟರ್ಕಿಶ್ ಬಾತ್ ಇದರ ವ್ಯವಹಾರದೊಳಗಿನ ಒಂದು ಪಾಲಿನ ದಾನವು, ಅಥವಾ ಒಂದು ನದೀತಟದಲ್ಲಿರುವ ಸ್ನಾನದ ಪ್ರದೇಶದಲ್ಲಿರುವ ಒಬ್ಬನ ಪಾಲಿನ ದಾನವು ಅಲ್ಲಿ ಆತನ ನಿರ್ದಿಷ್ಟವಾದ ಪಾಲನ್ನು ಪ್ರತ್ಯೇಕಗೊಳಿಸದೆ ಮಾಡಲ್ಪಟ್ಟಿದ್ದರೆ ಅದು ವಿಧ್ಯುಕ್ತವಾಗಿರುತ್ತದೆ.

ವಿಭಜನೀಯವಾದ ಮುಷಾ (Mushaa Divisible)

ಒಂದೊಮ್ಮೆ ಒಂದು ಸ್ವತ್ತು ಸಹಸ್ವಾಮಿತ್ವಕ್ಕೆ ಒಳಪಟ್ಟಿದ್ದು ಅದರ ವಿಭಜನೆ ಮಾಡಿದರೆ ಅದರ ಮೂಲ ಸ್ವರೂಪಕ್ಕೆ ಯಾವುದೇ ರೀತಿಯ ಧಕ್ಕೆಯುಂಟಾ

ಗುವದಿಲ್ಲವೆಂದಾದರೆ ಆ ಸ್ವತ್ತು ವಿಭಜನೀಯ ಮುಷಾ ಎಂಬುದಾಗಿ ಕರೆಯಲ್ಪಡುತ್ತದೆ. ಉದಾಹರಣೆಗಾಗಿ, ಸಹಸ್ವಾಮಿತ್ವಕ್ಕೆ ಒಳಪಟ್ಟಿರುವ ಒಂದು ಭೂಮಿ, ಮನೆ ಅಥವಾ ಒಂದು ತೋಟ ಇವು ವಿಭಜನೀಯವಾಗಿರುವ ಮುಷಾ ಆಗಿರುತ್ತವೆ. ಒಂದೊಮ್ಮೆ ಒಂದು ಭೂಮಿಯ ಬಗ್ಗೆ ಇಬ್ಬರು ಅಥವಾ ಹೆಚ್ಚಿನ ಜಂಟಿ ಸ್ವಾಮಿಗಳಿದ್ದರೆ ಅಲ್ಲಿ ಅದನ್ನು ವಿಭಜನೆ ಮಾಡಿ ಮತ್ತು ಬೇರೆ ಬೇರೆ ಸ್ವಾಮಿಗಳ ಭಾಗಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಸಾಧ್ಯವಾಗಿರುತ್ತದೆ. ಒಂದು ವಿಭಜನೀಯವಾದ ಮುಷಾದಲ್ಲಿ ಆ ಸ್ವತ್ತಿನ ಮೂಲ ಸ್ವರೂಪಕ್ಕೆ ಯಾವುದೇ ರೀತಿಯ ತೊಂದರೆಯನ್ನುಂಟು ಮಾಡದೆ ಅದನ್ನು ವಿಭಜನೆ ಮಾಡುವದು ಸಾಧ್ಯವಾಗಿರುತ್ತದೆ.

ಒಂದೊಮ್ಮೆ ಒಂದು ಹಿಬಾ ಇದರ ವಿಷಯ ವಸ್ತುವು ವಿಭಜನೀಯವಾದ ಮುಷಾ ಆಗಿದ್ದರೆ ಅಲ್ಲಿ ಹನಫೀ ಸಿದ್ಧಾಂತವು ಅನ್ವಯವಾಗುತ್ತದೆ ಮತ್ತು ಆ ದಾನವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ದಾನ ಮಾಡಲ್ಪಟ್ಟ ನಿರ್ದಿಷ್ಟವಾದ ಪಾಲು ಪ್ರತ್ಯೇಕಿಸಲ್ಪಟ್ಟಿದ್ದು ಆದಾತನಿಗೆ ನಿಜವಾಗಿ ಕೊಡಲ್ಪಟ್ಟಿರಬೇಕು. ಹನಫೀ ಸಿದ್ಧಾಂತದ ಪ್ರಕಾರ ವಿಭಜನೀಯವಾದ ಒಂದು ಮುಷಾ ಇದರ ಒಂದು ದಾನವು ಕಬ್ಜೆಯ ನೈಜ ಪ್ರದಾಯಕತ್ವ ಹಾಗೂ ವಿಭಜನೆ ಇಲ್ಲದೆ ಮಾಡಲ್ಪಟ್ಟಿದ್ದರೆ ಅದು ಮೂಲತಃ ಶೂನ್ಯವಾಗಿರುವದಿಲ್ಲ, ಬದಲಾಗಿ ಕೇವಲ ಕ್ರಮಬದ್ಧವಲ್ಲದುದಾಗಿರುತ್ತದೆ. ಒಂದೊಮ್ಮೆ ಇಂತಹ ಒಂದು ದಾನವು ಮಾಡಲ್ಪಟ್ಟಿದ್ದರೆ ಅದನ್ನು ತದನಂತರದ ವಿಭಜನೆಯಿಂದ ಮತ್ತು ಆ ಸ್ವತ್ತಿನಲ್ಲಿರುವ ನಿರ್ದಿಷ್ಟ ಪಾಲಿನ ನೈಜ ಕಬ್ಜೆಯನ್ನು ಆದಾತನಿಗೆ ಕೊಟ್ಟು ಅದನ್ನು ಕ್ರಮಬದ್ಧಗೊಳಿಸಬಹುದು. ಆದುದರಿಂದ ಮುಷಾ ಇದರ ಸಿದ್ಧಾಂತವು ಅನ್ವಯ ಹಾಗೂ ಪರಿಣಾಮದಲ್ಲಿ ನಿಯಮಿತವಾಗಿದೆ. ಈ ಸಿದ್ಧಾಂತದ ಕಾರ್ಯಾಚರಣೆಯು ಈ ಕೆಳಗಿನ ಷರತ್ತುಗಳಿಗೆ ಬಾಧ್ಯವಾಗಿದೆ.

I. ಒಂದೊಮ್ಮೆ ಆ ಸ್ವತ್ತು ವಿಭಜನೀಯವಲ್ಲವೆಂದಾಗಿದ್ದರೆ ಅಲ್ಲಿ ಮುಷಾ ಇದರ ಸಿದ್ಧಾಂತ ಅನ್ವಯವಾಗುವುದಿಲ್ಲ.

II. ಒಂದೊಮ್ಮೆ ಆ ಸ್ವತ್ತು ವಿಭಜನೀಯವಾಗಿದ್ದರೆ ಅಲ್ಲಿ ಇದು ಅನ್ವಯಗೊಳ್ಳುತ್ತದೆ. ಆದರೆ ಕೇವಲ ಹನಫಿ ಪರಂಪರೆಯ ಮೇರೆಗೆ. ಹಾಗೆಂದರೆ ಒಂದೊಮ್ಮೆ ದಾನಿಯು ಹನಫಿ ಪರಂಪರಯವನಾಗಿದ್ದರೆ ಮಾತ್ರ ಅಲ್ಲಿ ಅಂತಹ ದಾನಗಳಿಗೆ ಮುಷಾ ನಿಯಮವನ್ನು ಅನ್ವಯಗೊಳಿಸಬಹುದು. ಒಂದೊಮ್ಮೆ ದಾನಿಯು ಮುಸ್ಲಿಮ್ ಕಾನೂನಿನ ಇತರ ಯಾವದಾದರೊಂದು ಪರಂಪರೆಯವನಾಗಿದ್ದರೆ ಅಲ್ಲಿ ಈ ಸಿದ್ಧಾಂತವು ಅನ್ವಯವಾಗುವದಿಲ್ಲ ಮತ್ತು ಈ ದಾನವು ವಿಭಜನೆಯಿಲ್ಲದೆಯೂ ಸಹ ವಿಧ್ಯುಕ್ತವಾದುದೆಂದು ಎಣಿಸಲ್ಪಡುತ್ತದೆ.

III. ಹನಫೀ ಪರಂಪರೆಯ ಪ್ರಕಾರವೂ ಸಹ ಒಂದೊಮ್ಮೆ ಒಂದು ದಾನವು

ಮುಷಾ ಇದರ ವಿರುದ್ಧ ಮಾಡಲ್ಪಟ್ಟಿದ್ದರೂ ಸಹ ಅಲ್ಲಿ ಆ ದಾನವು ಶೂನ್ಯವಲ್ಲ, ಬದಲಾಗಿ ಅದು ಕೇವಲ ಕ್ರಮಬದ್ಧವಾದುದಲ್ಲ ಎಂಬುದಾಗಿ ಎಣಿಸಲ್ಪಡುತ್ತದೆ.

IV. ಹನಫೀ ಕಾನೂನು ಈ ಸಿದ್ಧಾಂತಕ್ಕೆ ಕೆಲವು ಅಪವಾದಗಳನ್ನು ಮನ್ನಿಸಿದೆ ಮತ್ತು ಆ ಅಪವಾದಿಕ ಪ್ರಕರಣಗಳಲ್ಲಿ ಈ ಸಿದ್ಧಾಂತವನ್ನು ಉಲ್ಲಂಘನೆ ಮಾಡಿಯೂ ಸಹ ಮಾಡಲಾದ ಕೆಲವು ದಾನಗಳು ವಿಧ್ಯುಕ್ತವಾದುವೆಂದು ಎಣಿಸಲ್ಪಡುತ್ತವೆ.

ಮುಷಾ ಸಿದ್ಧಾಂತದ ಅಪವಾದಗಳು

(Exceptions to the doctrine of Mushaa)

ಮುಷಾ ಸಿದ್ಧಾಂತದ ಅನ್ವಯಕ್ಕೆ ಇತಿಮಿತಿಗಳಿವೆ ಮತ್ತು ಅದು ಅನೇಕ ಷರತ್ತುಗಳಿಗೆ ಬಾಧ್ಯವಾಗಿರುತ್ತದೆ. ಮುಷಾ ಸಿದ್ಧಾಂತದ ಅನ್ವಯುದ ಅಪವಾದಗಳು ಈ ಕೆಳಗಿನವುಗಳಾಗಿವೆ :

1) ಸಹ ವಾರಸುದಾರರಿಗೆ ಮುಷಾ ಇದರ ದಾನ

(Gift of Mushaa to co-heir)

ಒಂದೊಮ್ಮೆ ದಾನಿ ಮತ್ತು ಆದಾತ ಇವರಿಬ್ಬರು ಸಹವಾರಸುದಾರರಾಗಿದ್ದರೆ, ಹಾಗೆಂದರೆ ಅವರಿಬ್ಬರು ಏಕಕಾಲದಲ್ಲಿ ಒಬ್ಬ ವ್ಯಕ್ತಿಯ ಸ್ವತ್ತುಗಳ ವಾರಸು ಪಡಯಲು ಹಕ್ಕುದಾರರಾಗಿರುವರೆಂದಾದರೆ ಅಲ್ಲಿ ವಿಭಜನೆ ಇಲ್ಲದೆ ಒಂದು ಸ್ವತ್ತಿನ ದಾನ ಮಾಡಲ್ಪಟ್ಟಿದ್ದರೂ ಸಹ ಅದು ವಿಧ್ಯುಕ್ತವಾದುದೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಒಬ್ಬ ವ್ಯಕ್ತಿಯು ತನ್ನ ಹಿಂದೆ ಒಬ್ಬ ಮಗ, ಒಬ್ಬ ಮಗಳು ಮತ್ತು ತಾಯಿಯನ್ನು ಬಿಟ್ಟು ಮೃತನಾದರೆ ಅಲ್ಲಿ ಆ ಮಗ, ಮಗಳು, ಮತ್ತು ಆ ತಾಯಿ ಅವರೆಲ್ಲರೂ ಸಹ ವಾರಸುದಾರರಾಗುವರು. ಮತ್ತು ಅವರೆಲ್ಲ ಮೃತನ ಸ್ವತ್ತುಗಳ ವಾರಸು ಪಡೆಯಲು ಹಕ್ಕುದಾರರಾಗುವರು.

2) ಜಮೀನ್ದಾರಿಯೊಳಗಿನ ಒಂದು ಪಾಲಿನ ದಾನ

(Gift of a share in Zamindari)

ಒಂದೊಮ್ಮೆ ಒಂದು ಜಮೀನ್ದಾರಿ ಅಥವಾ ಒಂದು ತಾಲೂಕಿನ ಒಂದು ಪಾಲನ್ನು ಅದರ ಯಾವನಾದರೊಬ್ಬ ಸಹಪಾಲುದಾರನು ದಾನ ಮಾಡಿದ್ದರೆ ಅಲ್ಲಿ ಮುಷಾ ಇದರ ಸಿದ್ಧಾಂತವು ಅನ್ವಯವಾಗುವದಿಲ್ಲ. ಜಮೀನ್ದಾರಿ ಪದ್ಧತಿಯಲ್ಲಿ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಅದರ ಸಹಪಾಲುದಾರರಾಗಿರುವದು ಸಾಧ್ಯವಾಗುತ್ತಿತ್ತು ಮತ್ತು ಅವರ ನಿರ್ದಿಷ್ಟವಾದ ಪಾಲುಗಳ ಸಂಬಂಧದಲ್ಲಿ ಅವರು ಸ್ವಾಮಿಗಳಾಗಿರುತ್ತಿದ್ದರು. ಆ ಸಹಸ್ವಾಮಿಗಳೊಳಗೆ ಯಾವನಾದರೊಬ್ಬನು ಆ ಜಮೀನ್ದಾರಿಯಲ್ಲಿರುವ ತನ್ನ ಸ್ವತ್ತನ್ನು ದಾನ ಮಾಡಿದ್ದರೆ ಅಲ್ಲಿ ಅದರ ಭೌತಿಕ

ವಿಭಜನೆಯಿಲ್ಲದೆ ಹಾಗೂ ಕಬ್ಜೆಯು ನೈಜ ಪ್ರದಾಯಕತ್ವವಿಲ್ಲದೆಯೂ ಸಹ ಅದು ಒಂದು ವಿಧ್ಯುಕ್ತವಾದ ದಾನವೆಂಬುದಾಗಿ ಎಣಿಸಲ್ಪಡುತ್ತಿತ್ತು.

3) ಭೂಧಾರಕ ಕಂಪನಿಗಳೊಳಗಿನ ಒಂದು ಪಾಲಿನ ದಾನ

(Gift of a share in land company)

ಆದಾತನು ತಾನು ಪಡೆದಿರುವ ದಾನವನ್ನು ತೆಗೆದುಕೊಳ್ಳುವ ಕಾಲದಲ್ಲಿ ಉಂಟಾಗುವ ಅಸ್ತವ್ಯಸ್ತತೆಯನ್ನು ತಪ್ಪಿಸುವ ಉದ್ದೇಶದಿಂದ ಮುಷಾ ಸಿದ್ಧಾಂತವು ಹನಫೀ ಕಾನೂನಿನಿಂದ ನಿರ್ಮಿಸಲ್ಪಟ್ಟಿತು. ಭೂಧಾರಕ ಕಂಪನಿಗಳಲ್ಲಿ ಅಥವಾ ದೊಡ್ಡ ವ್ಯಾಪಾರೀ ಕಂಪನಿಗಳಲ್ಲಿ ಅವುಗಳ ಸ್ವಾಮಿತ್ವವು ಅನೇಕ ನಿರ್ದಿಷ್ಟವಾದ ಪಾಲುಗಳಲ್ಲಿ ಇರುತ್ತದೆ, ಆದುದರಿಂದ ಒಬ್ಬನು ತನ್ನ ಒಂದು ಪಾಲನ್ನು ಇತರರ ಪಾಲುಗಳಿಂದ ಪ್ರತ್ಯೇಕಗೊಳಿಸಿ ಅದನ್ನು ದಾನ ಮಾಡುವುದರಿಂದ ಅಸ್ತವ್ಯಸ್ತತೆ ಮತ್ತು ಅನಾನುಕೂಲತೆಗಳುಂಟಾಗಬಹುದು. ಈ ರೀತಿಯ ದಾನವು ಮುಷಾ ಸಿದ್ಧಾಂತಕ್ಕೆ ವಿರೋಧವಾಗಿರುತ್ತದೆ. ಆದುದರಿಂದ ಇಂತಹ ಪ್ರಕರಣಗಳಲ್ಲಿ ಈ ಸಿದ್ಧಾಂತವು ಅನ್ವಯವಾಗುವುದಿಲ್ಲ.

4) ಒಂದು ಪೇಟೆಯಲ್ಲಿ ಸ್ಥಿತವಾಗಿರುವ ಅಬಾಧಿತ ಸ್ವತ್ತಿನೊಳಗಿನ ಒಂದು ಪಾಲಿನ ದಾನ

(Gift of a share in Free hold property in Commercial town)

ಒಂದು ಪೇಟೆಯಲ್ಲಿ ಅಥವಾ ದೊಡ್ಡ ನಗರದಲ್ಲಿರುವ ಅಬಾಧಿತ ಭೂಸ್ವತ್ತಿನ ವಿಭಜನೆಗೆ ಕಾನೂನು ಅಷ್ಟೊಂದು ಅನುಕೂಲವಾಗಿಲ್ಲ, ದೊಡ್ಡ ನಗರಗಳಲ್ಲಿ ಮನೆಗಳನ್ನು ಸರಿಯಾದ ಯೋಜನೆಯ ಪ್ರಕಾರ ಕಟ್ಟಲಾಗುತ್ತದೆ ಮತ್ತು ಅವುಗಳ ವಿಭಜನೆ ಮಾಡಲು ತುಂಬಾ ಸಮಯ ಬೇಕಾಗಬಹುದು ಮತ್ತು ಪುನಃ ಅದಕ್ಕಾಗಿ ಒಂದು ನಿರಾಶೆ ಮಾಡಬೇಕಾಗಬಹುದು. ಆದುದರಿಂದ ಅಂತಹ ಸ್ವತ್ತಿನ ಒಂದು ಭಾಗವು ದಾನ ಮಾಡಲ್ಪಟ್ಟಿದ್ದರೆ ಅಲ್ಲಿ ಆ ದಾನವು ಪೂರ್ವ ವಿಭಜನೆಯಿಲ್ಲದೆ ಪೂರ್ಣಗೊಂಡಿದೆಯೆಂದು ಎಣಿಸಲಾಗುತ್ತದೆ.

ಶಿಯಾ ಮತ್ತು ಶಫಿ ಕಾನೂನು

(Shia and Shafi Law)

ಶಿಯಾ ಕಾನೂನು ಮುಷಾ ಸಿದ್ಧಾಂತವನ್ನು ಮನ್ನಿಸುವುದಿಲ್ಲ. ಶಿಯಾ ಕಾನೂನಿನ ಪ್ರಕಾರ ವಿಭಜಿಸಬಹುದಾದ ಜಂಟಿ ಸ್ವತ್ತಿನೊಳಗಿನ ಒಂದು ದಾನವು ವಿಧ್ಯುಕ್ತವಾಗಿರುತ್ತದೆ ಮತ್ತು ಅದಕ್ಕಾಗಿ ವಿಭಜನೆ ಮಾಡಿರಬೇಕಾಗುವದಿಲ್ಲ. ಇದೇ ರೀತಿಯಲ್ಲಿ ಶಫಿ ಪರಂಪರೆಯ ಪ್ರಕಾರವೂ ಸಹ ಒಂದು ಪೂರ್ವ ವಿಭಜನೆಯಿಲ್ಲದೆ ಮುಷಾ ರೀತಿಯ ಒಂದು ದಾನವು ಮಾಡಲ್ಪಟ್ಟಿದ್ದರೂ ಸಹ ಅದು ವಿಧ್ಯುಕ್ತವಾಗಿರುತ್ತದೆ.

ಷರತ್ತುಬದ್ಧ ಮತ್ತು ಘಟನಾವಲಂಬಿ ದಾನಗಳು
(Conditional and Contingent Gifts)

ಷರತ್ತುಬದ್ಧ ದಾನಗಳು (Conditional Gifts)

ಒಬ್ಬ ದಾನಿಯು ತನ್ನ ಸ್ವತ್ತುಗಳನ್ನು ತನಗೆ ಇಷ್ಟಬಂದ ವ್ಯಕ್ತಿಗೆ ಮತ್ತು ಯಾವುದೇ ರೀತಿಯ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ದಾನ ಮಾಡುವ ಹಕ್ಕನ್ನು ಪಡೆದಿರುತ್ತಾನೆ. ಆದುದರಿಂದ ಒಂದು ದಾನವು ಒಂದೇ ಸ್ವತಂತ್ರವಾಗಿರಬಹುದು ಅಥವಾ ಅದು ಯಾವುದಾದರೊಂದು ಷರತ್ತಿಗೆ ಬಾಧ್ಯವಾಗಿರಬಹುದು. ಒಂದು ದಾನವು ಷರತ್ತುಬದ್ಧವಾಗಿದ್ದರೆ ಅಲ್ಲಿ ದಾನಿಯು ಆ ದಾನದ ಬಗ್ಗೆ ಕೆಲವು ಷರತ್ತುಗಳನ್ನು ಅಥವಾ ನಿಬಂಧನೆಗಳನ್ನು ಹೇರುವನು ಮತ್ತು ಆ ಷರತ್ತನ್ನು ಸ್ವೀಕರಿಸಬೇಕಾದರೆ ಆದಾತನು ಆ ಷರತ್ತುಗಳನ್ನು ಪೂರ್ತಿಗೊಳಿಸಬೇಕಾಗುತ್ತದೆ. ಷರತ್ತುಬದ್ಧ ದಾನಗಳಲ್ಲಿ ಬರುವ ಷರತ್ತು ಉತ್ತರವರ್ತಿ ಷರತ್ತಾಗಿರುತ್ತದೆ. ಹಾಗೆಂದರೆ, ಒಂದು ದಾನವು ಆಗಲೇ ಪೂರ್ಣಗೊಂಡ ಬಳಿಕ ಆದಾತನು ಆ ಷರತ್ತುಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಅದಲ್ಲದೆ, ಒಂದು ಷರತ್ತನ್ನು ಪೂರ್ತಿಗೊಳಿಸುವದು ಅಥವಾ ಪೂರ್ತಿಗೊಳಿಸದೇ ಇರುವದು ಆ ಪಕ್ಷಗಾರರ ಇಚ್ಛೆಯನ್ನು ಅವಲಂಬಿಸಿರುತ್ತದೆ.

ಮುಸ್ಲಿಮ್ ಕಾನೂನಿನ ಪ್ರಕಾರ ಒಂದೊಮ್ಮೆ ಒಂದು ದಾನವು ಕೆಲವು ಷರತ್ತುಗಳಿಗೆ ಬಾಧ್ಯವಾಗಿ ಮಾಡಲ್ಪಟ್ಟುದಾಗಿದ್ದರೆ ಅಲ್ಲಿ ಆ ದಾನವು ವಿಧ್ಯುಕ್ತವಾಗಿರುತ್ತದೆ ಆದರೆ ಆ ಷರತ್ತುಗಳು ಶೂನ್ಯವಾಗಿರುತ್ತವೆ. ಹಾಗೆಂದರೆ, ಒಬ್ಬ ದಾನಿಯು ಒಂದೊಮ್ಮೆ ತನ್ನ ಸ್ವತ್ತುಗಳನ್ನು ದಾನ ಮಾಡುವಾಗ ಆ ದಾನಕ್ಕೆ ಕೆಲವು ಷರತ್ತುಗಳನ್ನು ಹಚ್ಚಿರುವನಾದರೆ ಅಲ್ಲಿ ಆ ಷರತ್ತುಗಳು ಶೂನ್ಯವಾಗಿದ್ದುದರಿಂದ ಆದಾತನು ಆ ಷರತ್ತುಗಳನ್ನು ಪೂರ್ಣಗೊಳಿಸಬೇಕಾಗಿಲ್ಲ. ಆದಾತನಿಂದ ಷರತ್ತುಗಳ ಪೂರ್ತಿಗೊಳಿಸದಿಲ್ಲದಿರುವಿಕೆಯು ಆ ದಾನದ ವಿಧ್ಯುಕ್ತತೆಯ ಮೇಲೆ ಯಾವತ್ತೂ ಪರಿಣಾಮ ಬೀರುವದಿಲ್ಲ ಮತ್ತು ಆ ದಾನವು ಅಲ್ಲಿ ಯಾವತ್ತೂ ಷರತ್ತು ಇಲ್ಲದೆನೇ ಮಾಡಲ್ಪಟ್ಟುದೆಂಬುದಾಗಿ ಎಣಿಸಲಾಗುತ್ತದೆ. ಈ ನಿಯಮದ ಕಾರಣವು ತುಂಬಾ ಸರಳವಾಗಿದೆ. ದಾನವೆಂದರೆ ಒಂದು ಸ್ವತ್ತಿನ ಹಸ್ತಾಂತರಣವಾಗಿದ್ದು ಅದರಲ್ಲಿ ಸ್ವಾಮಿತ್ವವು ಅಥವಾ ಪರಮ ಹಿತಸಂಬಂಧವು ಹಸ್ತಾಂತರಿಸಲ್ಪಡುತ್ತದೆ. ಒಂದು ದಾನದಲ್ಲಿ ಪರಮ ಹಿತಸಂಬಂಧಕ್ಕಿಂತ ಕಡಿಮೆಯದನ್ನು ಹಸ್ತಾಂತರಿಸಲಾಗುವದಿಲ್ಲ. ಆದುದರಿಂದ ಒಂದು ದಾನವು ಮಾಡಲ್ಪಟ್ಟರೆ ಅಲ್ಲಿ ದಾನ ಮಾಡಲ್ಪಟ್ಟ ಸ್ವತ್ತಿನಲ್ಲಿರುವ ಪೂರ್ಣಸ್ವಾಮಿತ್ವವನ್ನು ಆ ಆದಾತನು ಪಡೆದಿರುವನೆಂಬ ಒಂದು ಪೂರ್ವಭಾವನೆಯಿರುತ್ತದೆ. ಇಲ್ಲಿ ಆದಾತನು ಆ ಸ್ವತ್ತಿನ ಮೇಲೆ ಪೂರ್ಣ ಸ್ವಾಮಿತ್ವದ ನಿಯಂತ್ರಣವನ್ನು ಪಡೆಯುವನು. ಆ ಅನುದಾನದ ಪೂರ್ಣತ್ವಕ್ಕೆ ತೊಂದರೆ ಮಾಡುವ ಅಥವಾ ಅದರೊಂದಿಗೆ ಅಸಂಗತವಾಗಿರುವ ಯಾವುದೇ ಒಂದು ಷರತ್ತು

ಶೂನ್ಯವಾಗಿರುತ್ತದೆ. ಆದರೆ ಆ ಅನುದಾನ ಅಥವಾ ಸ್ವಾಮಿತ್ವದ ಹಸ್ತಾಂತರಣ ಅದು ಪೂರ್ಣವಾಗಿದ್ದುದರಿಂದ ಆ ದಾನವು ವಿಧ್ಯುಕ್ತವಾಗಿರುತ್ತದೆ.

ಆದಾಯವನ್ನು ಅಥವಾ ಫಲೋಪಭೋಗವನ್ನು ಕಾಯ್ದಿರಿಸುವ ಷರತ್ತು
(Condition reserving the income or the usufruct)

ಒಂದು ಷರತ್ತುಬದ್ಧ ದಾನದಲ್ಲಿ ಒಂದೊಮ್ಮೆ ಆ ಷರತ್ತು ಆ ಅನುದಾನದ ಪೂರ್ಣತ್ವವನ್ನು ಕುಂಠಿತಗೊಳಿಸುತ್ತದಾದರೆ ಅಲ್ಲಿ ಆ ಷರತ್ತು ಶೂನ್ಯವಾಗಿರುತ್ತದೆ ಮತ್ತು ಅದನ್ನು ಗಮನಿಸಬೇಕಾಗಿರುವುದಿಲ್ಲ. ಹಾಗೆಂದರೆ ಒಂದು ದಾನಕ್ಕೆ ಹಚ್ಚಲಾದ ಷರತ್ತು ಆ ದಾನದ ವಸ್ತುವಿನ ಒಂದು ಭಾಗವನ್ನು ಹಿಂತಿರುಗಿಸುವಂತಹ ತಾತ್ಪರ್ಯವುಳ್ಳದ್ದಾಗಿದ್ದರೆ ಅಲ್ಲಿ ಆ ಷರತ್ತು ಶೂನ್ಯವಾಗಿರುತ್ತದೆ. ಪ್ರತಿಯೊಂದು ಸ್ವತ್ತಿನಲ್ಲಿ ಎರಡು ಭಾಗಗಳಿರುತ್ತವೆ; ಮೊದಲನೆಯದು ಅದರ ಭೌತಿಕ ಅಸ್ತಿತ್ವವಾಗಿರುತ್ತದೆ, ಹಾಗೆಂದರೆ ಆ ದಾನದ ವಿಷಯ ವಸ್ತು, ಮತ್ತು ಎರಡನೆಯ ಭಾಗವು ಅದರ ಫಲೋಪಭೋಗವಾಗಿರುತ್ತದೆ, ಹಾಗೆಂದರೆ ಆ ಸ್ವತ್ತಿನಿಂದ ಬರುವ ಆದಾಯ ಅಥವಾ ಪ್ರಯೋಜನವಾಗಿರುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಒಂದು ಸ್ವತ್ತು ತೋಟವಾಗಿದ್ದರೆ ಆ ತೋಟವು ಒಂದು ಭೌತಿಕ ವಸ್ತುವಾಗಿರುತ್ತದೆ ಮತ್ತು ನಿಯತಕಾಲಿಕವಾಗಿ ಅದರಿಂದ ಬರುವ ಹೂವು, ಹಣ್ಣು, ಕಾಯಿ ಇತ್ಯಾದಿ ಅದರ ಫಲೋಪಭೋಗವಾಗಿರುತ್ತವೆ. ಒಂದೊಮ್ಮೆ ಒಂದು ದಾನಕ್ಕೆ ಯಾವುದಾದರೊಂದು ಷರತ್ತು ಹಚ್ಚಲ್ಪಟ್ಟಿದ್ದರೆ ಮತ್ತು ಆ ಷರತ್ತು ಆ ದಾನದ ಆದಾತನ ಸ್ವಾಮಿತ್ವದ ಮೇಲೆ ಪರಿಣಾಮ ಬೀರುವದೆಂದಾದರೆ ಅಲ್ಲಿ ಆ ಷರತ್ತು ಶೂನ್ಯವಾಗಿರುತ್ತದೆ. ಆದರೆ ಆ ದಾನವು ವಿಧ್ಯುಕ್ತವಾಗಿರುತ್ತದೆ ಎಂಬುದನ್ನು ನಾವು ಈಗಾಗಲೇ ನೋಡಿರುವೆವು. ಆದರೆ ಒಂದೊಮ್ಮೆ ಒಂದು ದಾನದ ವಸ್ತುವಿನಿಂದ ಬರುವ ಫಲೋಪಭೋಗ ಅಥವಾ ಆದಾಯವನ್ನು ಆ ದಾನಿಯು ತನ್ನ ಜೀವಮಾನಕ್ಕೆ ಅಥವಾ ಇನ್ನೊಬ್ಬನ ಜೀವಮಾನಕ್ಕೆ ಕಾಯ್ದಿರಿಸಿದರೆ ಅಲ್ಲಿ ಆ ಷರತ್ತು ಹಾಗೂ ಆ ದಾನ ಇವೆರಡೂ ವಿಧ್ಯುಕ್ತವಾಗಿರುತ್ತವೆ.

ಷರತ್ತುಬದ್ಧ ದಾನಗಳಿಗೆ ಸಂಬಂಧಿಸಿರುವ ಕಾನೂನಿನ ಸಾರಾಂಶವು ಈ ಕೆಳಗಿನಂತಿದೆ:

೧) ಒಂದು ಷರತ್ತಿನೊಂದಿಗೆ ಮಾಡಲಾದ ಒಂದು ದಾನವು ವಿಧ್ಯುಕ್ತವಾಗಿರುತ್ತದೆ ಮತ್ತು ಆ ಷರತ್ತು ಶೂನ್ಯವಾಗಿರುತ್ತದೆ, ಹಾಗೂ ಆ ಷರತ್ತಿನ ಕಡೆ ಗಮನ ಕೊಡಬೇಕಾಗಿಲ್ಲ, ಮತ್ತು ಅಲ್ಲಿ ಆದಾತನು ಆ ಸ್ವತ್ತನ್ನು ಪರಮವಾಗಿ ಪಡೆಯುವನು. ಅಲ್ಲಿ ಆದಾನಕ್ಕೆ ಯಾವುದೇ ರೀತಿಯ ಷರತ್ತು ಹಚ್ಚಲ್ಪಟ್ಟಿಲ್ಲ ಎಂಬಂತನೇ ತಿಳಿಯಲಾಗುತ್ತದೆ.

೨) ಆದರೆ ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಆದಾತನು ಕೇವಲ ಜೀವಾವಧಿಗೆ ಮಾತ್ರ ಹಿತಸಂಬಂಧವನ್ನು ಪಡೆಯುವನೆಂಬ ಒಂದು ಷರತ್ತು ಹಾಕ

ಲ್ಪಟ್ಟಿದ್ದರೆ ಆ ದಾನ ಹಾಗೂ ಆ ಷರತ್ತು ವಿಧ್ಯುಕ್ತವಾಗಿರುತ್ತದೆ ಮತ್ತು ಆದಾತನು ಆ ದಾನ ಮಾಡಲ್ಪಟ್ಟ ಸ್ವತ್ತಿನಲ್ಲಿ ಜೀವಾವಧಿ ಹಿತಸಂಬಂಧ ವನ್ನು ಪಡೆಯುವನು.

೩) ಶಿಯಾ ಮತ್ತು ಸುನ್ನೀ ಇವೆರಡೂ ಪರಂಪರೆಗಳ ಪ್ರಕಾರ ಒಂದೊಮ್ಮೆ ಒಂದು ದಾನಕ್ಕೆ ಹಚ್ಚಲ್ಪಟ್ಟ ಷರತ್ತಿನ ಪ್ರಕಾರ ಆ ದಾನ ಮಾಡಲ್ಪಟ್ಟ ಸ್ವತ್ತಿನಿಂದ ಬರುವ ಆದಾಯವನ್ನು ದಾನಿಗೆ ಅಥವಾ ದಾನಿಯಿಂದ ಹೆಸರಿಸ ಲ್ಪಟ್ಟ ಇತರ ಯಾವನಾದರೊಬ್ಬ ವ್ಯಕ್ತಿಯ ಜೀವಮಾನಕ್ಕೆ ಹಿಂತಿರುಗಿಸ ಬೇಕೆಂದಿದ್ದರೆ ಆ ದಾನ ಮತ್ತು ಆ ಷರತ್ತು ವಿಧ್ಯುಕ್ತವಾಗಿರುತ್ತದೆ.

ಘಟನಾವಲಂಬಿ ದಾನ (Contingent Gift)

ಒಂದು ಘಟನೆಯು ಘಟಿಸುವಿಕೆಗೆ ಬಾಧ್ಯವಾಗಿ ಮಾಡಲಾದ ಒಂದು ದಾನ ವನ್ನು ಒಂದು ಘಟನಾವಲಂಬಿ ದಾನವೆಂದು ಕರೆಯಲಾಗುತ್ತದೆ. ಆ ಪಕ್ಷಗಾರರ ಇಚ್ಛೆಯ ಮೇಲೆ ಅವಲಂಬಿಸಿರದ ಯಾವುದಾದರೊಂದು ಭಾವೀ ಅನಿಶ್ಚಿತ ಘಟ ನೆಯ ಘಟಿಸುವಿಕೆಯನ್ನು ಅವಲಂಬಿಸಿರುವ ಒಂದು ದಾನವನ್ನು ಘಟನಾವಲಂಬಿ ದಾನವೆಂದು ಕರೆಯಲಾಗುತ್ತದೆ. ಒಂದು ಭಾವಿ ಘಟನೆಯೆಂದರೆ ಅದೊಂದು ಕೇವಲ ಸಂಭಾವ್ಯ ಘಟನೆಯಾಗಿರುತ್ತದೆ ಮತ್ತು ಅದು ಘಟಿಸಬಹುದು ಅಥವಾ ಘಟಿಸದೇ ಇರಬಹುದು. ಒಂದು ಷರತ್ತು ಮತ್ತು ಒಂದು ಘಟನಾವಲಂಬನೆ ಇವುಗಳೊಳಗಿನ ವ್ಯತ್ಯಾಸವೇನೆಂದರೆ ಒಂದು ಷರತ್ತಿನ ಪೂರ್ತಿಗೊಳಿಸುವಿಕೆಯು ಆ ಪಕ್ಷಗಾರರ ಇಚ್ಛೆಯ ಮೇರೆಗೆ ಅವಲಂಬಿಸಿರುತ್ತದೆ. ಆದರೆ ಒಂದು ಘಟನೆಯು ಘಟಿಸುವಿಕೆಯು ಅವರ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ.

ಒಂದು ಘಟನಾವಲಂಬಿ ದಾನವು ಮುಸ್ಲಿಮ್ ಕಾನೂನಿನ ಎಲ್ಲಾ ಪರಂಪರೆ ಗಳ ಪ್ರಕಾರ ಶೂನ್ಯವಾಗಿರುತ್ತದೆ. ಒಂದೊಮ್ಮೆ ಒಂದು ಅನಿಶ್ಚಿತವಾದ ಭಾವೀ ಘಟನೆಯ ಘಟಿಸುವಿಕೆಗೆ ಅವಲಂಬಿಸಿಕೊಂಡು ಒಬ್ಬ ದಾನಿಯು ಒಂದು ದಾನ ಮಾಡಿದರೆ ಅವನ ಆ ಕೃತ್ಯವನ್ನು ಒಂದು ದಾನವೆಂದು ಎಣಿಸಲಾಗುವುದಿಲ್ಲ ಮತ್ತು ಅಲ್ಲಿ ಆದಾತನು ಯಾವತ್ತೂ ಸ್ವತ್ತನ್ನು ಪಡೆಯುವಂತಿಲ್ಲ.

ಶಿಯಾ ಕಾನೂನು (Shia Law)

ಸಾಮಾನ್ಯವಾಗಿ ಒಂದು ಘಟನಾವಲಂಬಿ ದಾನವು ಶೂನ್ಯವಾಗಿರುತ್ತದೆ. ಆದರೆ ಶಿಯಾ ಕಾನೂನಿನ ಪ್ರಕಾರ ಒಂದು ರುಕ್ಬಾ (Ruquba) ಇದರ ದಾನವು ಕಾನೂನುಬದ್ಧವಾಗಿರುತ್ತದೆ. ರುಕ್ಬಾ ಎಂದರೆ ಯಾವುದಾದರೊಂದು ಘಟನೆ ಯನ್ನು ಅವಲಂಬಿಸಿ ಒಂದು ದಾನದ ವಸ್ತುವಿನ ಫಲೋಪಭೋಗವನ್ನು ಪಡೆ ಯುವ ಹಕ್ಕಾಗಿರುತ್ತದೆ.

ಜೀವಾವಧಿ ಹಿತಸಂಬಂಧದ ದಾನಗಳು
(Gifts of life interest)

ಮುಸ್ಲಿಮ್ ಕಾನೂನಿನಲ್ಲಿ ಸ್ವತ್ತು ಎಂಬ ಪದವು ಉಪಯೋಗಿಸಲ್ಪಟ್ಟಾಗ ಅಲ್ಲಿ ಅದು ಸ್ವತ್ತಿನ ಎರಡು ಅಂಗಗಳನ್ನು ಸೂಚಿಸುತ್ತದೆ. ಆ ಎರಡು ಅಂಗಗಳು ಯಾವವೆಂದರೆ ಆ ಸ್ವತ್ತಿನ ಭೌತಿಕ ಅಸ್ತಿತ್ವ ಹಾಗೂ ಅದರ ಫಲೋಪಭೋಗ. ಆದುದರಿಂದ ಸಾಮಾನ್ಯವಾಗಿ ಒಂದು ಸ್ವತ್ತಿನ ಹಸ್ತಾಂತರಣವೆಂದರೆ ಆ ಸ್ವತ್ತಿನ ಭೌತಿಕ ಅಸ್ತಿತ್ವ ಹಾಗೂ ಅದರಿಂದ ಬರುವ ಎಲ್ಲಾ ಪ್ರಯೋಜಕ ಹಿತಸಂಬಂಧಗಳಾಗಿರುತ್ತವೆ. ಹಾಗೆಂದರೆ ಅನ್ಯಥಾ ಉಪಬಂಧಿಸಲಾಗದ ಹೊರತು, ಒಂದು ಸ್ವತ್ತಿನ ಭೌತಿಕ ಅಸ್ತಿತ್ವವು ಹಸ್ತಾಂತರಿಸಲ್ಪಟ್ಟಾಗ ಅಲ್ಲಿ ಅದಕ್ಕೆ ಪಾರ್ಶ್ವಿಕವಾಗಿರುವ ಎಲ್ಲಾ ಫಲೋಪಭೋಗಿ ಪ್ರಯೋಜನಗಳೂ ಸಹ ಹಸ್ತಾಂತರಿತನಿಗೆ ಸೇರುವದೆಂಬುದು ಅವ್ಯಕ್ತವಾಗಿ ಸೂಚಿಸಲ್ಪಡುತ್ತದೆ. ಆದರೆ ತಾಂತ್ರಿಕವಾಗಿ, ಒಂದು ಸ್ವತ್ತಿನ ಭೌತಿಕ ಅಸ್ತಿತ್ವದ ಸ್ವಾಮಿತ್ವವು ಆ ಸ್ವತ್ತಿನ ಫಲೋಪಭೋಗದ ಸ್ವಾಮಿತ್ವದಿಂದ ಭಿನ್ನವಾಗಿರುತ್ತದೆ. ಉದಾಹರಣೆಗಾಗಿ, ಒಂದು ತೋಟವು ಭೌತಿಕ ಅಸ್ತಿತ್ವವಾಗಿರುತ್ತದೆ ಮತ್ತು ಅದು ಅದರ ಸ್ವಾಮಿಯ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಆದರೆ ಅದರ ಫಲೋಪಭೋಗ ಎಂದರೆ, ಅದರಿಂದ ಬರುವ ಹಣ್ಣು, ಹೂ ಇತ್ಯಾದಿ ಫಲಗಳು ಇತರ ಯಾವನಾದರೊಬ್ಬ ವ್ಯಕ್ತಿಯ ಸ್ವಾಮಿತ್ವಕ್ಕೆ ಒಳಪಟ್ಟಿರಬಹುದು. ಉದಾಹರಣೆಗಾಗಿ, ಒಂದು ಮಾವಿನ ತೋಟದ ಮಾಲಿಕನು ಅದರ ಮಾವಿನ ಹಣ್ಣನ್ನು ಕೊಯ್ಯುವ ಒಂದು ವರ್ಷದ ಹಕ್ಕನ್ನು ಇನ್ನೊಬ್ಬನಿಗೆ ಕೊಡಬಹುದು, ಮತ್ತು ಇಲ್ಲಿ ಆ ಇನ್ನೊಬ್ಬ ವ್ಯಕ್ತಿಯು ಆ ತೋಟದಲ್ಲಿ ಬರುವ ಎಲ್ಲಾ ಮಾವಿನ ಹಣ್ಣುಗಳ ಸಂಬಂಧದಲ್ಲಿ ಒಂದು ವರ್ಷದ ಮಟ್ಟಿಗೆ ಸ್ವಾಮಿತ್ವವನ್ನು ಪಡೆಯುವನು. ಒಂದು ಸ್ವತ್ತಿನ ಮಾಲಿಕನು ಆ ಸ್ವತ್ತನ್ನು ತನ್ನಲ್ಲಿಟ್ಟುಕೊಂಡು ಅದರ ಫಲೋಪಭೋಗವನ್ನು ಮಾರಾಟ ಮಾಡಬಹುದು. ಇದೇ ರೀತಿಯಲ್ಲಿ ಅವನು ಆ ಸ್ವತ್ತನ್ನು ತನ್ನಲ್ಲಿಟ್ಟುಕೊಂಡು ಅದರ ಫಲೋಪಭೋಗವನ್ನು ಇನ್ನೊಬ್ಬನಿಗೆ ಒಂದು ನಿರ್ದಿಷ್ಟವಾದ ಕಾಲಾವಧಿಗೆ ದಾನ ಮಾಡಬಹುದು. ಇಂತಹ ಒಂದು ಪ್ರಕರಣದಲ್ಲಿ ಅದಾತನು ಆ ಸ್ವತ್ತಿನಲ್ಲಿ ಯಾವತ್ತೂ ಹಿತಸಂಬಂಧವನ್ನು ಪಡೆಯನು. ಆದರೆ ಅವನು ಆ ಒಂದು ನಿರ್ದಿಷ್ಟವಾದ ಕಾಲಾವಧಿಗೆ ಅದರಿಂದ ಬರುವ ಉತ್ಪನ್ನಗಳಲ್ಲಿ ಅಥವಾ ಪ್ರಯೋಜನಗಳಲ್ಲಿ ಪರಮವಾದ ಹಿತಸಂಬಂಧವನ್ನು ಪಡೆಯಬಹುದು. ಒಂದು ಸ್ವತ್ತಿನ ಭೌತಿಕ ಅಸ್ತಿತ್ವದ ಮೇಲಿನ ಸ್ವಾಮಿತ್ವ ಮತ್ತು ಆ ಸ್ವತ್ತಿನ ಒಂದು ಫಲೋಪಭೋಗದ ಸ್ವಾಮಿತ್ವ ಇವುಗಳೊಳಗಿನ ಬೇಧಗಳ ಪರಿಕಲ್ಪನೆಯು ಶಿಯಾ ಕಾನೂನಿನ ಮೇರೆಗೆ ವಿಧ್ಯುಕ್ತವಾಗಿರುವ ಒಂದು ಜೀವಾವಧಿ ಹಿತಸಂಬಂಧದ ದಾನದ ಆಧಾರವಾಗಿದೆ. ಆದುದರಿಂದ ಒಬ್ಬ ವ್ಯಕ್ತಿಗೆ ಒಂದು ಜೀವಾವಧಿ ಹಿತಸಂಬಂಧವು ಪ್ರದಾನ ಮಾಡಲ್ಪಟ್ಟರೆ ಅಲ್ಲಿ ಒಂದು ನಿಯಮಿತ ಕಾಲಾವಧಿಗೆ ಆ ಸ್ವತ್ತಿನ ಫಲೋಪಭೋಗದ ಸ್ವಾಮಿತ್ವವು ಹಸ್ತಾಂತರಿಸಲ್ಪಟ್ಟಂತಾಗುತ್ತದೆ.

ದಾನಗಳ ರದ್ದಿಯಾತಿ (Revocation of Gifts)

ದಾನವು ಒಂದು ಸ್ವೇಚ್ಛೆಯಿಂದ ಮತ್ತು ಉಚಿತವಾಗಿ ಮಾಡಲಾಗುವ ಹಸ್ತಾಂತರಣವಾಗಿರುತ್ತದೆ. ಇಲ್ಲಿ ದಾನಿಯು ತನ್ನ ಸ್ವತ್ತುಗಳನ್ನು ತನ್ನ ಸ್ವೇಚ್ಛೆಯ ಮೇರೆಗೆ ಹಾಗೂ ಯಾವತ್ತೂ ಪ್ರತಿಫಲವಿಲ್ಲದೆ ಮಾಡುವನು. ಒಂದು ದಾನದ ಮೊದಲನೇ ಎರಡು ಹಂತಗಳಲ್ಲಿ ಬರುವ ಘೋಷಣೆ ಮತ್ತು ಸ್ವೀಕೃತಿ ಇವು ಯಾವತ್ತೂ ಪ್ರತಿಫಲವಿಲ್ಲದ ಒಂದು ಕರಾರಾಗಿರುತ್ತದೆ. ಆದುದರಿಂದ ಕಬ್ಜೆಯ ಪ್ರದಾಯಕತ್ವಕ್ಕಿಂತ ಮೊದಲು ಒಂದು ದಾನವು ಪೂರ್ಣಗೊಳ್ಳುವುದಿಲ್ಲ. ಒಂದು ಕಬ್ಜೆಯು ನೈಜ ಅಥವಾ ಪ್ರಲಕ್ಷಿತ ಪ್ರದಾಯಕತ್ವವು ಆಗುವ ತನಕ ಅಲ್ಲೊಂದು ದಾನವು ಮಾಡಲ್ಪಟ್ಟಿದೆಯೆಂದು ಎಣಿಸಲಾಗುವುದಿಲ್ಲ; ಅದು ಕೇವಲ ಒಂದು ವಚನವಾಗಿರುತ್ತದೆ. ಆದುದರಿಂದ ಮುಸ್ಲಿಮ್ ಕಾನೂನಿನ ಎಲ್ಲಾ ಪರಂಪರೆಗಳ ಪ್ರಕಾರ ಒಂದು ಸ್ವತ್ತಿನ ಕಬ್ಜೆಯ ಪ್ರದಾಯಕತ್ವಕ್ಕಿಂತ ಮೊದಲು ಯಾವುದೇ ಕಾಲದಲ್ಲಿ ದಾನಿಯು ಒಂದು ದಾನವನ್ನು ರದ್ದುಗೊಳಿಸಬಹುದು. ಅದಲ್ಲದೆ ಒಂದು ರದ್ದಿಯಾತಿಯ ಬಳಿಕ ಆ ಆದಾತನು ಇಲ್ಲಿ ಒಂದು ವಚನದ ಉಲ್ಲಂಘನೆಯಾಗಿದೆಯೆಂದು ದಾನಿಯಿಂದ ಯಾವತ್ತೂ ಪರಿಹಾರವನ್ನು ಪಡೆಯಲು ಹಕ್ಕುದಾರನಲ್ಲ. ಒಂದು ದಾನವನ್ನು ಕೇವಲ ದಾನಿಯು ರದ್ದುಗೊಳಿಸಬಹುದು. ಆದುದರಿಂದ ಒಂದು ದಾನವು ಪೂರ್ಣಗೊಳ್ಳುವುದಕ್ಕಿಂತ ಮೊದಲು ಆ ದಾನಿಯು ಮೃತನಾದರೆ ಅಲ್ಲಿ ಅವನ ವಾರಸುದಾರರು ಆದಾನವನ್ನು ರದ್ದುಗೊಳಿಸುವ ಹಕ್ಕನ್ನು ಹೊಂದಿರುವುದಿಲ್ಲ.

ಒಂದು ಕಬ್ಜೆಯ ಪ್ರದಾಯಕತ್ವದ ಬಳಿಕ ದಾನಿಯು ಒಂದು ಘೋಷಣೆ ಮಾಡಿ ಅದನ್ನು ರದ್ದುಗೊಳಿಸುವಂತಿಲ್ಲ. ಆದರೆ ಒಂದು ನ್ಯಾಯಾಲಯದ ಡಿಕ್ರಿಯಿಂದ ಒಂದು ದಾನದ ಕಬ್ಜೆಯ ಪ್ರದಾಯಕತ್ವದ ಬಳಿಕವೂ ಸಹ ಆ ದಾನವನ್ನು ಅಸಿಂಧುಗೊಳಿಸಬಹುದು. ಈ ರೀತಿಯಾಗಿ ನ್ಯಾಯಾಲಯದ ಡಿಕ್ರಿಯ ಮೂಲಕ ಒಂದು ದಾನವನ್ನು ರದ್ದುಗೊಳಿಸಬೇಕಾದರೆ ಅಲ್ಲಿ ವಸ್ತುಸ್ಥಿತಿಯ ಬಗ್ಗೆ ತಪ್ಪು ಕಲ್ಪನೆ ಅಥವಾ ಸಮ್ಮತಿಯು ಸ್ವತಂತ್ರವಾಗದಿರುವಿಕೆ ಅಥವಾ, ಆದಾನವನ್ನು ರದ್ದುಗೊಳಿಸಲು ಯುಕ್ತ ಹಾಗೂ ಪರ್ಯಾಪ್ತ ಕಾರಣವಿದ್ದರೆ ಮಾತ್ರ ನ್ಯಾಯಾಲಯದ ಡಿಕ್ರಿಯ ಮುಖಾಂತರ ಅದನ್ನು ರದ್ದುಗೊಳಿಸಬಹುದು. ಹೀಗೆ, ಕಬ್ಜೆಯ ಪ್ರದಾಯಕತ್ವದ ಬಳಿಕ ಒಂದು ದಾನವನ್ನು ನ್ಯಾಯಾಲಯದ ಡಿಕ್ರಿಯ ಹೊರತಾಗಿ ರದ್ದುಗೊಳಿಸುವಂತಿಲ್ಲ. ಒಂದು ದಾನವನ್ನು ರದ್ದುಗೊಳಿಸುವಂತಹ ಒಂದು ಡಿಕ್ರಿಯು ಮಂಜೂರಾಗುವ ತನಕ ಆ ದಾನವು ಊರ್ಜಿತಾವಸ್ಥೆಯಲ್ಲಿಯೇ ಉಳಿದಿರುತ್ತದೆ ಮತ್ತು ಆದಾತನು ಆ ಸ್ವತ್ತನ್ನು ಅನುಭವಿಸಲು ಅಥವಾ ಅದನ್ನು ಹಸ್ತಾಂತರಿಸಲು ಹಕ್ಕುದಾರನಾಗಿರುವನು. ಆದರೆ ಒಂದೊಮ್ಮೆ ಆ ಒಂದು ದಾನವು ರದ್ದುಗೊಳಿಸಲಾಗದಂತಹ ಸ್ವರೂಪದ್ದಾಗಿದ್ದರೆ ಅದನ್ನು ನ್ಯಾಯಾಲಯವೂ ರದ್ದುಗೊಳಿಸುವಂತಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದು ಕಬ್ಜೆಯ ಪ್ರದಾಯಕತ್ವದ ಬಳಿಕವೂ ಸಹ ದಾನಿಯು ಒಂದು ದಾನವನ್ನು ಕೇವಲ ಘೋಷಣೆ ಮಾಡಿ ರದ್ದುಗೊಳಿಸಬಹುದು. ಇದಕ್ಕಾಗಿ ನ್ಯಾಯಾಲಯದ ಒಂದು ಡಿಕ್ರಿಯು ಅವಶ್ಯಕತೆಯಿರುವುದಿಲ್ಲ. ಆದರೆ ಶಿಯಾ ಕಾನೂನಿನ ಪ್ರಕಾರವೂ ಸಹ ಒಂದೊಮ್ಮೆ ಒಂದು ದಾನವು ರದ್ದುಗೊಳಿಸಲಾರದಂತಹದಾಗಿದ್ದರೆ ಅಲ್ಲಿ ಆ ದಾನವನ್ನು ರದ್ದುಗೊಳಿಸುವಂತಿಲ್ಲ.

ರದ್ದುಗೊಳಿಸಲಾಗದಂತಹ ದಾನಗಳು
(Irrvocable Gifts)

ರದ್ದುಗೊಳಿಸಲಾಗದಂತಹ ದಾನಗಳನ್ನು ಕಬ್ಜೆಯ ಪ್ರದಾಯಕತ್ವದ ಬಳಿಕ ನ್ಯಾಯಾಲಯದ ಒಂದು ಡಿಕ್ರಿಯಿಂದಲೂ ರದ್ದುಗೊಳಿಸಲಿಕ್ಕಾಗುವದಿಲ್ಲ. ಈ ಕೆಳಗಿನ ಪ್ರಕರಣಗಳಲ್ಲಿ ಒಂದು ದಾನವು ರದ್ದುಗೊಳಿಸಲಾಗದಂತಹದ್ದಾಗಿರುತ್ತದೆ:

1) ಪತಿಯಿಂದ ಪತ್ನಿಗೆ ಅಥವಾ ಪತ್ನಿಯಿಂದ ಪತಿಗೆ ಕೊಡಲಾದ ದಾನ

ದಾನಿ ಮತ್ತು ಆದಾತ ಇವರಿಬ್ಬರೂ ಪರಿಣೀತ್ರಗಳಾಗಿದ್ದರೆ ಅಲ್ಲಿ ಒಮ್ಮೆ ಮಾಡಿದ ದಾನವನ್ನು ಆ ಬಳಿಕ ರದ್ದುಗೊಳಿಸುವಂತಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಪತಿಯಿಂದ ಪತ್ನಿಗೆ ಅಥವಾ ಪತ್ನಿಯಿಂದ ಪತಿಗೆ ಮಾಡಲಾದ ಒಂದು ದಾನವನ್ನು ಕಬ್ಜೆಯ ಪ್ರದಾಯಕತ್ವದ ಬಳಿಕವೂ ರದ್ದುಗೊಳಿಸಬಹುದು.

2) ಒಂದೊಮ್ಮೆ ದಾನಿ ಮತ್ತು ಆದಾತ ಇವರಿಬ್ಬರೂ ನಿಷೇಧಿತ ಸಂಬಂಧದ ಹಂತದವರಾಗಿದ್ದರೆ (where donor and the donee are within the prohibited relationship)

ಒಂದೊಮ್ಮೆ ದಾನಿ ಮತ್ತು ಆದಾತ ಇವರಿಬ್ಬರೂ ಪರಸ್ಪರ ವಿರೋಧಿ ಲಿಂಗದವರಾಗಿದ್ದರೆ ಇವರೊಳಗಿನ ಒಂದು ವಿವಾಹವು ನಿಷೇಧಿಸಲ್ಪಡುತ್ತಿತ್ತೆಂದಾದರೆ ಅಲ್ಲಿ ಅವರ ವಿವಾಹವು ಶೂನ್ಯವಾಗುತ್ತದೆ ಮತ್ತು ಅಂಥವರು ನಿಷೇಧಿತ ಸಂಬಂಧದೊಳಗೆ ಬರುವವರೆಂದು ಎಣಿಸಲ್ಪಡುತ್ತಾರೆ. ಇಂತಹ ಒಂದು ಪ್ರಕರಣದಲ್ಲಿ ಒಬ್ಬ ಸಂಬಂಧಿಕನಿಂದ ಇನ್ನೊಬ್ಬ ಸಂಬಂಧಿಕನಿಗೆ ಮಾಡಲಾಗುವ ಒಂದು ದಾನವನ್ನು ರದ್ದುಗೊಳಿಸುವಂತಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ರಕ್ತದಿಂದ ಸಂಬಂಧಿತನಾಗಿರುವ ಯಾವನೇ ಒಬ್ಬ ವ್ಯಕ್ತಿಗೆ ಮಾಡಲ್ಪಟ್ಟಿರುವ ಒಂದು ದಾನವು, ಮತ್ತು ಅವರು ನಿಷೇಧಿತ ಸಂಬಂಧ

ದೊಳಗೆ ಬರುವದಿಲ್ಲವಾದರೂ ಸಹ ಅಲ್ಲಿ ಕಬ್ಜೆಯು ಪ್ರದಾಯಕತ್ವದ ಬಳಿಕ ಅದನ್ನು ರದ್ದುಗೊಳಿಸಬಹುದು.

3) **ಒಂದೊಮ್ಮೆ ದಾನಿ ಅಥವಾ ಆದಾತ ಮೃತನಾಗಿದ್ದರೆ**
(Where the donor or the donee is dead)

ಒಂದು ದಾನದಲ್ಲಿ ಪ್ರತಿಫಲದ ಹೊರತಾಗಿ ಕರಾರಿನ ಇತರ ಎರಡು ಅಂಶಗಳು ಇದ್ದುದರಿಂದ ಈ ನಿಯಮವು ಸ್ವೀಕರಿಸಲ್ಪಟ್ಟಿದೆ. ಒಂದೊಮ್ಮೆ ಒಂದು ದಾನವು ಪೂರ್ಣಗೊಂಡ ಬಳಿಕ ಒಂದು ನ್ಯಾಯಾಲಯವು ಆ ದಾನವನ್ನು ಅಸಿಂಧುಗೊಳಿಸಿದರೆ ಆಗ ಆದಾತನ ವಾರಸುದಾರರ ವಿರುದ್ಧ ಅದನ್ನು ಮಂಜೂರು ಮಾಡಬೇಕಾಗುತ್ತದೆ. ಆದರೆ ಇದು ಸಾಧ್ಯವಾಗುವದಿಲ್ಲ, ಏಕೆಂದರೆ ದಾನಿಯಿಂದ ವಾರಸುದಾರರು ಈ ದಾನದ ವ್ಯವಹಾರದಲ್ಲಿ ಒಂದು ಪಕ್ಷವಾಗಿರುವುದಿಲ್ಲ.

4) **ಒಂದೊಮ್ಮೆ ಆದಾತನು ಆ ಸ್ವತ್ತನ್ನು ಇನ್ನೊಬ್ಬ ವ್ಯಕ್ತಿಗೆ ಹಸ್ತಾಂತರಿಸಿರುವನಾದರೆ (Where the donee has transferred the property to another person)**

ಒಂದು ದಾನದ ಮುಕ್ತಾಯದ ಬಳಿಕ ಅಲ್ಲಿ ಆದಾತನು ಆ ದಾನದ ಸ್ವತ್ತಿನ ಪರಮಸ್ವಾಮಿಯಾಗುವನು. ಆದುದರಿಂದ ಆದಾತನು ಆ ಸ್ವತ್ತನ್ನು ಇನ್ನೊಬ್ಬ ವ್ಯಕ್ತಿಗೆ ಹಸ್ತಾಂತರಣಗೊಳಿಸಬಹುದು. ಒಂದೊಮ್ಮೆ ಆದಾತನು ತಾನು ದಾನ ಪಡೆದಿರುವ ಸ್ವತ್ತನ್ನು ಒಬ್ಬ ಮೂರನೇ ವ್ಯಕ್ತಿಗೆ ಹಸ್ತಾಂತರಣ ಮಾಡಿದ ಬಳಿಕ ಆ ದಾನವನ್ನು ಶೂನ್ಯಗೊಳಿಸಿದರೆ ಅದು ಆ ಮೂರನೇ ವ್ಯಕ್ತಿಗೆ ತನ್ನಿಂದ ಯಾವುದೇ ತಪ್ಪಿಲ್ಲದೆ ಹಾನಿಯನ್ನುಂಟು ಮಾಡಬಹುದು.

5) **ಒಂದೊಮ್ಮೆ ಆ ಸ್ವತ್ತು ಕಳೆದು ಹೋಗಿದ್ದರೆ ಅಥವಾ ನಷ್ಟವಾಗಿದ್ದರೆ—**
(Where the property is lost or has been destroyed)

ಒಂದು ದಾನವು ರದ್ದುಗೊಳಿಸಲ್ಪಟ್ಟರೆ ಸಾಮಾನ್ಯವಾಗಿ ಆ ಸ್ವತ್ತು ದಾನಿಗೆ ಮರಳಿ ಹೋಗುತ್ತದೆ ಮತ್ತು ಒಂದೊಮ್ಮೆ ಅದು ನಷ್ಟ ಅಥವಾ ನಾಶವಾಗಿದ್ದರೆ ಅಲ್ಲಿ ದಾನಿಗೆ ಮರಳಿ ಹೋಗಲು ಏನೂ ಉಳಿದಿರುವದಿಲ್ಲ. ಆದುದರಿಂದ ಒಂದು ದಾನ ಮಾಡಲ್ಪಟ್ಟ ಸ್ವತ್ತು ನಷ್ಟವಾಗಿದ್ದರೆ ಅಥವಾ ಅನ್ಯಥಾ ಅದು ಸಿಗುತ್ತಿಲ್ಲವೆಂದಾದರೆ ಅಲ್ಲಿ ಆ ರದ್ದಿಯಾತಿಯು ಅರ್ಥಹೀನವಾಗುತ್ತದೆ.

6) **ಒಂದೊಮ್ಮೆ ಆ ಸ್ವತ್ತಿನ ಮೌಲ್ಯವು ತದನಂತರ ಹೆಚ್ಚಾದರೆ—**
(Where the value of the property Increases subsequently)

ಒಂದೊಮ್ಮೆ ದಾನ ಮಾಡಲ್ಪಟ್ಟ ಸ್ವತ್ತು ಹೆಚ್ಚಳದಿಂದಾಗಿ ಅಥವಾ ಯಾವುದಾದರೊಂದು ಆಕಸ್ಮಿಕತೆಯಿಂದಾಗಿ ತನ್ನ ಮೌಲ್ಯದಲ್ಲಿ ವೃದ್ಧಿಗೊಂಡರೆ ಅಲ್ಲಿ ಆ

ದಾನವನ್ನು ರದ್ದುಗೊಳಿಸುವಂತಿಲ್ಲ. ಏಕೆಂದರೆ ದಾನ ಮಾಡಲ್ಪಟ್ಟ ಬಳಿಕ ಒಂದೊಮ್ಮೆ ಆ ದಾನದ ಸ್ವತ್ತಿನ ಮೌಲ್ಯವು ಹೆಚ್ಚಾದರೆ ಬಹುಶಃ ಆಗಿ ಆ ದಾನಿಗಳಿಗೆ ಆ ದಾನದಲ್ಲಿ ಹೊಸ ಆಸಕ್ತಿ ಹುಟ್ಟಿ ಅವರು ಅದನ್ನು ಮರಳಿ ಕೇಳುವ ಸಂಭವವಿರುತ್ತದೆ. ಆದುದರಿಂದ ಈ ನಿಯಮವು ಮಾಡಲ್ಪಟ್ಟಿದೆ. ಇಂತಹ ಒಂದ ಅಭಿಲಾಷೆಯಿಂದಾಗಿ ದಾನಿಯು ಆ ದಾನವನ್ನು ರದ್ದುಗೊಳಿಸಬಾರದೆಂಬುದೇ ಮುಸ್ಲಿಮ್ ಕಾನೂನಿನ ಉದ್ದೇಶವಾಗಿದೆ.

7) ಒಂದೊಮ್ಮೆ ದಾನ ಮಾಡಲ್ಪಟ್ಟ ಸ್ವತ್ತನ್ನು ಗುರುತಿಸುವುದು ಕಷ್ಟವಾಗುವ ಮಟ್ಟಿಗೆ ಅದರಲ್ಲಿ ಬದಲಾವಣೆಯಾದರೆ –

(Where the property given is changed beyond indentification)

ಒಂದೊಮ್ಮೆ ದಾನ ಮಾಡಲ್ಪಟ್ಟ ಸ್ವತ್ತಿನ ಗಾತ್ರ, ಸ್ವರೂಪ ಇತ್ಯಾದಿಗಳಲ್ಲಿ ಬದಲಾವಣೆಯಾಗಿ ಅದನ್ನು ಗುರುತು ಮಾಡುವದೇ ಕಷ್ಟವಾಗಿದ್ದರೆ ಅಂತಹ ಒಂದು ದಾನವನ್ನು ರದ್ದುಗೊಳಿಸುವಂತಿಲ್ಲ. ಉದಾಹರಣೆಗಾಗಿ, ಒಂದೊಮ್ಮೆ ಒಂದು ಚಿನ್ನದ ತುಂಡು ಇನ್ನೊಬ್ಬನಿಗೆ ದಾನ ಮಾಡಲ್ಪಟ್ಟಿದ್ದು ಆದಾತನು ಅದನ್ನು ಒಂದು ಆಭರಣದಲ್ಲಿ ಪರಿವರ್ತಿಸಿರುವನಾದರೆ ಅಲ್ಲಿ ಆ ದಾನದ ತುಂಡನ್ನು ಮರಳಿ ಪಡೆಯುವದು ಸಾಧ್ಯವಾಗುವುದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಆ ದಾನವನ್ನು ರದ್ದುಗೊಳಿಸಲಾಗುವುದಿಲ್ಲ. ಏಕೆಂದರೆ ಇಲ್ಲಿ ಒಂದೊಮ್ಮೆ ಆ ದಾನವು ರದ್ದುಗೊಳಿಸಲ್ಪಟ್ಟರೆ ಆ ಮೂಲ ಸ್ವತ್ತನ್ನು ಮರಳಿ ಪಡೆಯುವದು ಸಾಧ್ಯವಾಗುವುದಿಲ್ಲ.

8) ಒಂದೊಮ್ಮೆ ಧಾರ್ಮಿಕ ಅಥವಾ ಆಧ್ಯಾತ್ಮಿಕ ಪ್ರಯೋಜನವನ್ನು ಪಡೆಯುವ ಉದ್ದೇಶದಿಂದ ದಾನವು ಮಾಡಲ್ಪಟ್ಟಿದ್ದರೆ—

(Where the Gift has been made to Secure religious or Spiritual benefits)

ಒಂದೊಮ್ಮೆ ಒಂದು ದಾನವು ನೈಸರ್ಗಿಕ ಪ್ರೀತಿ ಮತ್ತು ವಾತ್ಸಲ್ಯದಿಂದ ಮಾಡಲ್ಪಟ್ಟಿಲ್ಲದೆ ಅದನ್ನು ಧಾರ್ಮಿಕ ಉದ್ದೇಶಗಳಿಂದಾಗಿ ಮಾಡಲ್ಪಟ್ಟಿದ್ದರೆ ಅಲ್ಲಿ ಅಂತಹ ಒಂದು ದಾನವನ್ನು ರದ್ದುಗೊಳಿಸಿದರೆ ಅಲ್ಲಿ ಧಾರ್ಮಿಕ ಬಾಧ್ಯತೆಯನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ಈ ರೀತಿಯ ಧಾರ್ಮಿಕ ಬಾಧ್ಯತೆಯ ಉಲ್ಲಂಘನೆಯು ಸಮ್ಮತಿಸಲ್ಪಡುವದಿಲ್ಲ. ಧಾರ್ಮಿಕ ಅಥವಾ ಆಧ್ಯಾತ್ಮಿಕ ಉದ್ದೇಶದಿಂದ ಮಾಡಲ್ಪಡುವ ಒಂದು ದಾನವನ್ನು ಸದಾಕಾ ಎಂದು ಕರೆಯಲಾಗುತ್ತದೆ. ಅದನ್ನು ರದ್ದುಗೊಳಿಸುವಂತಿಲ್ಲ.

9) ಒಂದೊಮ್ಮೆ ಆ ದಾನವು ಹಿಬಾ-ಬಿಲ್-ಇವಾಜ್ ಇವರ ರೀತಿಯಲ್ಲಿ ಮಾಡಲ್ಪಟ್ಟಿದ್ದರೆ

(When a Gift is in the form of Hiba-bil-Iwaz)

ಒಂದೊಮ್ಮೆ ದಾನಿಯು ತಾನು ಮಾಡಿರುವ ದಾನದ ಪ್ರತಿಯಾಗಿ ಏನನ್ನಾ

ದರೂ ಪ್ರತಿಫಲದಂತೆ ಸ್ವೀಕರಿಸಿರುವನೆಂದಾದರೆ ಅಲ್ಲಿ ಆ ಹಸ್ತಾಂತರಣವನ್ನು ರದ್ದುಗೊಳಿಸುವಂತಿಲ್ಲ. ಹಿಬಾ-ಬಿಲ್-ಇವಾಜ್ ಇದು ಒಂದು ದಾನವಲ್ಲ. ಇದನ್ನು ಒಂದು ವಿಕ್ರಯ ಅಥವಾ ವಿನಿಮಯವೆಂದು ಎಣಿಸಲಾಗುತ್ತದೆ. ಆದುದರಿಂದ ಇದನ್ನು ರದ್ದುಗೊಳಿಸುವಂತಿಲ್ಲ.

ಹಿಬಾ-ಬಿಲ್-ಇವಾಜ್ (Hiba-bil-Iwaz)

ಹಿಬಾ-ಬಿಲ್-ಇವಾಜ್ ಇದು ಮುಸ್ಲಿಮ್ ಮತೀಯ ಕಾನೂನಿನ ಒಂದು ವಿಶಿಷ್ಟವಾದ ಪರಿಕಲ್ಪನೆಯಾಗಿರುತ್ತದೆ. ಹಿಬಾ ಎಂದರೆ ದಾನ ಮತ್ತು ಇವಾಜ್ ಎಂದರೆ ಒಂದು ಪ್ರತಿಫಲ ಅಥವಾ ಅದಕ್ಕೆ ಪ್ರತಿಯಾಗಿ ಪಡೆಯಲಾದುದು. ಆದುದರಿಂದ ಹಿಬಾ-ಬಿಲ್-ಇವಾಜ್ ಎಂದರೆ ಇದೊಂದು ಪ್ರತಿಫಲಕ್ಕಾಗಿ ಮಾಡಲಾದ ದಾನವಾಗಿರುತ್ತದೆ. ಎಲ್ಲಾ ಕಾನೂನು ಪದ್ಧತಿಗಳಲ್ಲಿ ಒಂದು ದಾನದ ವ್ಯವಹಾರದಲ್ಲಿ ಅದಕ್ಕೆ ಪ್ರತಿಯಾಗಿ ಏನನ್ನಾದರೂ ಪಡೆಯುವಂತಹ ಒಂದು ಪರಿಕಲ್ಪನೆಯಿರುವುದಿಲ್ಲ. ಆದರೆ ಮುಸ್ಲಿಮ್ ಕಾನೂನು ಮಾತ್ರ ಒಂದು ಪ್ರತಿಫಲವನ್ನು ಪಡೆದು ಮಾಡಿದಂತಹ ಒಂದು ದಾನವನ್ನು ನಿರ್ಮಿಸುತ್ತದೆ. ಒಂದೊಮ್ಮೆ ಒಂದು ದಾನವು ಮಾಡಲ್ಪಟ್ಟು ಅದು ಪೂರ್ಣಗೊಂಡರೆ ಮತ್ತು ತದನಂತರ ಆದಾತನು ಈ ದಾನದ ಬದಲಾಗಿ ದಾನಿಗೆ ಏನನ್ನಾದರೂ ಸಲ್ಲಿಸಿದರೆ ಅಲ್ಲಿ ಆ ದಾನವನ್ನು ಹಿಬಾ-ಬಿಲ್-ಇವಾಜ್ ಎಂದು ಕರೆಯಲಾಗುತ್ತದೆ. ಉದಾಹರಣೆಗಾಗಿ, 'ಎ' ಎಂಬವನು 'ಬಿ' ಎಂಬವನಿಗೆ ಒಂದು ಮನೆಯನ್ನು ದಾನ ಕೊಡುವನು ಮತ್ತು ತದನಂತರ 'ಬಿ' ಎಂಬವನು ಒಂದು ಮೋಟಾರ್ ಕಾರನ್ನು 'ಎ' ಎಂಬವನಿಗೆ ದಾನ ಮಾಡುವನು. ಈ ಮೋಟಾರ್ ಕಾರನ್ನು 'ಎ' ಇವನಿಗೆ ಕೊಡಲು ಕಾರಣವೇನೆಂದರೆ 'ಎ' ಯು ತನಗೆ ಕೊಟ್ಟಿರುವ ದಾನವೆಂಬುದಾಗಿ 'ಬಿ' ಯು ಹೇಳುತ್ತಿದ್ದಾನೆ. ಇಲ್ಲಿ ಆ ಮನೆಯು ಆ ಕಾರಿನ ಪ್ರತಿಫಲಕ್ಕಾಗಿ ಮಾಡಲ್ಪಟ್ಟಿದೆಂದು ಎಣಿಸಲಾಗುತ್ತದೆ. ಆದುದರಿಂದ ಇದು ಹಿಬಾ-ಬಿಲ್-ಇವಾಜ್ ಆಗುತ್ತದೆ. ಈ ರೀತಿಯಾಗಿ, ಆ ಎರಡನೇ ದಾನವು ಮೂಲ ದಾನಕ್ಕೆ ಪ್ರತಿಫಲವಾಗಿರುತ್ತದೆ. ಹಿಬಾ-ಬಿಲ್-ಇವಾಜ್ ಇದು ಭಾರತದಲ್ಲಿ ಸ್ವೀಕರಿಸಲ್ಪಟ್ಟ ಮತ್ತು ಮನ್ನಿಸಲ್ಪಟ್ಟ ಪ್ರಕಾರ ಆ ಎರಡನೇ ದಾನವು ಮೂಲ ದಾನಕ್ಕೆ ಪ್ರತಿಯಾಗಿ ಮಾಡಲ್ಪಟ್ಟಿದೆಂದು ಎಣಿಸಲ್ಪಡುತ್ತದೆ. ಆದುದರಿಂದ ಇದು ಹೆಸರಿಗೆ ಮಾತ್ರ ಒಂದು ದಾನವಾಗಿರುತ್ತದೆ. ಇದರ ಕಾನೂನೀ ಸ್ವರೂಪವು ಹೇಗಿದೆಯೆಂದರೆ ಈ ರೀತಿಯ ದಾನವು ಒಂದೇ ವಿಕ್ರಯವಾಗಿರುತ್ತದೆ ಅಥವಾ ವಿನಿಮಯವಾಗಿರುತ್ತದೆ. ಅದು ಒಂದು ವಿಕ್ರಯವೋ ವಿನಿಮಯವೆಂಬುದು ಅಲ್ಲಿ ಪ್ರತಿಫಲವಾಗಿ ಹಣ ಕೊಡಲ್ಪಟ್ಟಿದೆಯೋ ಅಥವಾ ಇತರ ಯಾವುದಾದರೊಂದು ಸ್ವತ್ತು ಕೊಡಲ್ಪಟ್ಟಿದೆ ಎಂಬುದರ ಮೇಲೆ ಆಧಾರಿತವಾಗಿರುತ್ತದೆ. ಇದರ ಪರಿಣಾಮವಾಗಿ ಹಿಬಾ ಇದರ ಮುಸ್ಲಿಮ್ ಕಾನೂನಿನ ನಿಯಮಗಳು ಇದಕ್ಕೆ ಅನ್ವಯವಾಗುವದಿಲ್ಲ. ಹಿಬಾ-ಬಿಲ್-ಇವಾಜ್

ಇದು ಆರಂಭದಲ್ಲಿ ಒಂದು ದಾನವಾಗಿದ್ದರೂ ಸಹ ಬಳಿಕ ಇದೊಂದು ವಿಕ್ರಯ ಅಥವಾ ವಿನಿಮಯದಲ್ಲಿ ಮಾರ್ಪಾಡುಗೊಳ್ಳುತ್ತದೆ;

ಹಿಬಾ–ಬಿಲ್–ಇವಾಜ್ ಇದರ ಅವಶ್ಯಕತೆಗಳು
(Essentials of the Hiba-bil-Iwaz)

ಇಬಾ–ಬಿಲ್–ಇವಾಜ್ ಇದು ಯಾವುದಾದರೊಂದು ಪ್ರತಿಫಲದ ಪ್ರತಿಯಾಗಿ ಮಾಡಲಾಗುವ ದಾನವಾಗಿರುತ್ತದೆ. ಒಂದು ಹಸ್ತಾಂತರಣವನ್ನು ಹಿಬಾ-ಬಿಲ್–ಇವಾಜ್ ಎಂಬುದಾಗಿ ಎಣಿಸಬೇಕಾದರೆ ಅಲ್ಲಿ ಈ ಕೆಳಗಿನ ಎರಡು ಷರತ್ತುಗಳು ಪೂರ್ತಿಗೊಳ್ಳಲ್ಪಡಬೇಕು.

ಎ) ದಾನಿಯಿಂದ ಒಂದು ವಿಧ್ಯುಕ್ತವಾದ ಮತ್ತು ಪೂರ್ಣವಾದ ದಾನವು ಮಾಡಲ್ಪಟ್ಟಿರಬೇಕು
(A Valid and complete Gift by the donor)

ಇಲ್ಲಿ ದಾನಿಯು ಆದಾತನ ಪರವಾಗಿ ಒಂದು ವಿಧ್ಯುಕ್ತವಾದ ಹಾಗೂ ಎಲ್ಲಾ ರೀತಿಗಳಿಂದ ಪೂರ್ಣವಾಗಿರುವ ಒಂದು ದಾನವನ್ನು ಮಾಡಿರಬೇಕು. ಒಂದು ಸ್ವತ್ತಿನಲ್ಲಿರುವ ತನ್ನ ಸ್ವಾಮಿತ್ವವನ್ನು ಆದಾತನಿಗೆ ಹಸ್ತಾಂತರಣಗೊಳಿಸಲು ದಾನಿಯಲ್ಲಿ ಒಂದು ಸದ್ಭಾವಿಕ ಉದ್ದೇಶವಿದ್ದಿರಬೇಕು. ದಾನಿಯ ಸ್ವಾಮಿತ್ವಕ್ಕೆ ಒಳಪಟ್ಟಿರುವ ಆ ಸ್ವತ್ತು ಅಸ್ತಿತ್ವದಲ್ಲಿರುವ ಸ್ವತ್ತಾಗಿರಬೇಕು ಮತ್ತು ಆ ಹಸ್ತಾಂತರಣವನ್ನು ತತ್‌ಕ್ಷಣದಲ್ಲಿ ಮಾಡಿರಬೇಕು. ಒಂದು ಭಾವೀ ದಿನಾಂಕದಂದು ಒಂದು ಸ್ವತ್ತನ್ನು ಹಸ್ತಾಂತರಣಗೊಳಿಸುವೆನೆಂದು ಮಾಡಲಾಗುವ ಒಂದು ಘೋಷಣೆಯು ಕೇವಲ ಒಂದು ದಾನದ ವಚನವಾಗಿರುತ್ತದೆ. ಆದಾತನ ಪರವಾಗಿ ದಾನಿಯಿಂದ ಮಾಡಲಾಗುವ ಮೂಲ ಹಸ್ತಾಂತರಣವನ್ನು ಮುಸ್ಲಿಮ್ ಕಾನೂನಿನ ಉಪಬಂಧಗಳಿಗೆ ಅನುಗುಣವಾಗಿ ಪೂರ್ಣಗೊಳಿಸಬೇಕಾಗುತ್ತದೆ. ಹಿಬಾ-ಬಿಲ್-ಇವಾಜ್ ಇದು ಮೂಲತಃ ಒಂದು ಶುದ್ಧ ದಾನವಾಗಿರುತ್ತದೆ. ಒಂದೊಮ್ಮೆ ದಾನಿಯು ಆ ದಾನವನ್ನು ಮಾಡುವ ಕಾಲದಲ್ಲಿ ಇದನ್ನು ಒಂದು ಪ್ರತಿಫಲದ ದೃಷ್ಟಿಯಿಂದ ಮಾಡಲಾಗಿದೆ ಎಂಬುದಾಗಿ ಘೋಷಿಸಿದರೂ ಸಹ ಅದೊಂದು ಶುದ್ಧ ದಾನವೆಂದು ಎಣಿಸಲ್ಪಡುತ್ತದೆ. ಆ ಮೂಲ ದಾನದ ಪ್ರತಿಯಾಗಿ ಆದಾತನು ದಾನಿಗೆ ಏನನ್ನಾದರೂ ದಾನ ಕೊಟ್ಟಾಗ ಅಲ್ಲಿ ಆ ಮೂಲ ದಾನವು ಒಂದು ಹಿಬಾ-ಬಿಲ್-ಇವಾಜ್ ಆಗುತ್ತದೆ,

ಬಿ) ಆದಾತನಿಂದ ಮಾಡಲಾಗುವ ಪ್ರತಿಫಲದ ನೈಜ ಸಂದಾಯ
(Actual payment of consideration by the donee)

ಇಲ್ಲಿ ಈ ದಾನವು ಪೂರ್ಣಗೊಂಡ ಬಳಿಕ ಆದಾತನು ದಾನಿಗೆ ಏನನ್ನಾದರೂ ಸಂದಾಯ ಮಾಡಬೇಕಾಗುತ್ತದೆ. ಒಂದು ದಾನ ಮಾಡುವಾಗ ಅದನ್ನು ಒಂದು

ಪ್ರತಿಫಲದ ಉದ್ದೇಶದಿಂದ ಮಾಡಲಾಗಿದೆಯೆಂದು ಕೇವಲ ಘೋಷಣೆ ಮಾಡಿದರೆ ಅದು ಪರ್ಯಾಪ್ತವಾಗುವದಿಲ್ಲ; ಆ ದಾನದಲ್ಲಿ ನಿರ್ದೇಶಿಸಲಾದ ಆ ಪ್ರತಿಫಲವನ್ನು ಆದಾತನು ದಾನಿಗೆ ನಿಜವಾಗಿ ಸಂದಾಯ ಮಾಡಬೇಕಾಗುತ್ತದೆ. ಇಲ್ಲಿ ಒಂದು ಮಹತ್ವದ ಸಂಗತಿಯು ಯಾವುದೆಂದರೆ ಆದಾತನಿಂದ ಮಾಡಲಾಗುವ ಒಂದು ಪ್ರತಿಫಲದ ಸಂದಾಯವು ಐಚ್ಛಿಕವಾಗಿ ಮಾಡಲ್ಪಟ್ಟುದಾಗಿರಬೇಕು. ಒಂದೊಮ್ಮೆ ಆದಾತನು ಪ್ರತಿಫಲವನ್ನು ಸಂದಾಯ ಮಾಡಿದರೆ ಅಲ್ಲಿ ಆ ದಾನವು ಹಿಬಾ-ಬಿಲ್-ಇವಾಜ್ ಆಗುತ್ತದೆ. ಒಂದೊಮ್ಮೆ ಆದಾತನು ಏನನ್ನೂ ಸಂದಾಯ ಮಾಡದಿದ್ದರೆ ಅಲ್ಲಿ ಆ ದಾನವು ಒಂದು ಶುದ್ಧ ಹಿಬಾ ಆಗುತ್ತದೆ.

ಆದಾತನು ದಾನಿಗೆ ಸಂದಾಯ ಮಾಡುವ ಪ್ರತಿಫಲವು ಆ ದಾನದ ಕಾಲದಲ್ಲಿ ಹೆಸರಿಸಲ್ಪಟ್ಟ ವಸ್ತುವೇ ಆಗಿರಬೇಕು. ಮೂಲ ದಾನದಲ್ಲಿ ಗೊತ್ತುಪಡಿಸಲಾದ ವಸ್ತುವಿನ ಹೊರತಾಗಿ ಇತರ ಯಾವುದಾದರೊಂದು ಸ್ವತ್ತನ್ನು ಹಸ್ತಾಂತರಣಗೊಳಿಸಿದರೆ ಅದನ್ನು ಒಂದು ಇವಾಜ್ ಇದರ ಸಂದಾಯವೆಂದು ಎಣಿಸಲಾಗುವದಿಲ್ಲ. ಅದಲ್ಲದೆ ದಾನಿಯು ದಾನ ಮಾಡುವ ಕಾಲದಲ್ಲಿ ತಾನು ಯಾವ ಪ್ರತಿಫಲಕ್ಕೋಸ್ಕರ ಇದನ್ನು ದಾನ ಮಾಡುತ್ತಿದ್ದೇನೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದಾತನು ಒಂದು ದಾನವನ್ನು ಪಡೆದ ಬಳಿಕ ಸ್ವತಂತ್ರವಾಗಿ ಯಾವುದಾದರೊಂದು ದಾನವನ್ನು ಆ ದಾನಿಗೆ ಮಾಡಿದರೆ ಅದನ್ನು ಅಲ್ಲಿ ಆ ಮೂಲದಾನದ ಒಂದು ಪ್ರತಿಫಲ ಎಂಬುದಾಗಿ ಎಣಿಸಲಾಗುವದಿಲ್ಲ. ಆದರೆ ಆದಾತನು ದಾನಿಗೆ ಸಲ್ಲಿಸುವ ಪ್ರತಿಫಲವು ದಾನ ಮಾಡಲ್ಪಟ್ಟ ಸ್ವತ್ತಿನ ಮೌಲ್ಯಕ್ಕೆ ಸಮಾನವಾಗಿರಬೇಕಾಗಿಲ್ಲ. ಅದೊಂದು ನಾಮ ಮಾತ್ರ ಪ್ರತಿಫಲವಾಗಿರಬಹುದು ಅಥವಾ ಒಂದು ಅತ್ಯಂತ ಕಡಿಮೆ ಮೌಲ್ಯದ ದಾನ.

ಹಿಬಾ-ಬಿಲ್-ಇವಾಜ್ ಇದರ ಕಾನೂನೀ ಪ್ರಾಸಂಗೀಕತೆಗಳು (Legal incidents of Hiba-bil-Iwaz)

ಭಾರತದಲ್ಲಿ ಹಿಬಾ-ಬಿಲ್-ಇವಾಜ್ ಇದು ಕೇವಲ ಹೆಸರಿಗೆ ಮಾತ್ರ ಒಂದು ಹಿಬಾ ಆಗಿರುತ್ತದೆ. ಈ ರೀತಿಯ ಒಂದು ಸ್ವತ್ತಿನ ಹಸ್ತಾಂತರಣವನ್ನು ಒಂದು ದಾನವೆಂಬುದಾಗಿ ಎಣಿಸಲಾಗುವದಿಲ್ಲ. ಇದಕ್ಕೆ ಕಾರಣವೇನೆಂದರೆ ಯಾವುದಾದರೊಂದು ಪ್ರತಿಫಲದ ಪ್ರತಿಯಾಗಿ ಮಾಡಲಾಗುವ ಒಂದು ದಾನವು ಒಂದು ದಾನವಲ್ಲ. ಈ ರೀತಿಯ ಒಂದು ವ್ಯವಹಾರದ ಕಾನೂನೀ ಪರಿಣಾಮಗಳ ಸಾರಾಂಶವು ಈ ಕೆಳಗಿನಂತಿದೆ :

೧) ಹಿಬಾ-ಬಿಲ್-ಇವಾಜ್ ಇದು ಒಂದೇ ಒಂದು ವಿಕ್ರಯವಾಗಿರುತ್ತದೆ ಅಥವಾ ಒಂದು ವಿನಿಮಯ. ಇದು ವಿಕ್ರಯವೋ ವಿನಿಮಯವೆಂಬುದು ಅಲ್ಲಿ ಆದಾತನು ಸಲ್ಲಿಸುತ್ತಿರುವ ಪ್ರತಿಫಲವನ್ನು ಅವಲಂಬಿಸಿರುತ್ತದೆ. ಹೀಗೆ ಒಂದೊಮ್ಮೆ ಆ ಪ್ರತಿಫಲವು ಹಣದ ರೂಪದಲ್ಲಿದ್ದರೆ ಅಲ್ಲಿ ಆ ವ್ಯವಹಾರವು ಒಂದು ವಿಕ್ರಯ

ವೆಂಬುದಾಗಿ ಎಣಿಸಲ್ಪಡುತ್ತದೆ. ಇದೇ ರೀತಿಯಲ್ಲಿ, ಇವಾಜ್ ಇದೊಂದು ಸ್ವತ್ತಾಗಿದ್ದರೆ ಅಲ್ಲಿ ಅದೊಂದು ವಿನಿಮಯವೆಂದು ಎಣಿಸಲ್ಪಡುತ್ತದೆ. ಆದುದರಿಂದ ಹಿಬಾ ಇದಕ್ಕೆ ಸಂಬಂಧಪಟ್ಟಿರುವ ಮುಸ್ಲಿಮ್ ಕಾನೂನಿನ ನಿಯಮಗಳು ಹಿಬಾ-ಬಿಲ್-ಇವಾಜ್ ಇದಕ್ಕೆ ಅನ್ವಯವಾಗುವುದಿಲ್ಲ. ಈ ರೀತಿಯ ವ್ಯವಹಾರವನ್ನು ಕೇವಲ ಘೋಷಣೆ, ಸ್ವೀಕೃತಿ ಮತ್ತು ಕಬ್ಜೆಯ ಪ್ರದಾಯಕತ್ವದಿಂದ ಪೂರ್ಣಗೊಳಿಸಲಾಗುವದಿಲ್ಲ. ಒಂದು ವಿಧ್ಯುಕ್ತವಾದ ಹಿಬಾ-ಬಿಲ್-ಇವಾಜ್ ಇದಕ್ಕೆ ಒಂದು ವಿಧ್ಯುಕ್ತವಾದ ವಿಕ್ರಯ ಅಥವಾ ವಿನಿಮಯಕ್ಕೆ ಬೇಕಾಗಿರುವ ಔಪಚಾರಿಕತೆಗಳ ಅವಶ್ಯಕತೆಯಿರುತ್ತದೆ. ಒಂದೊಮ್ಮೆ ಆ ಇವಾಜ್ ಹಣವಾಗಿದ್ದರೆ ಅಲ್ಲಿ ಆ ವ್ಯವಹಾರವನ್ನು ಒಂದು ವಿಕ್ರಯವೆಂಬುದಾಗಿ ಎಣಿಸಲಾಗುತ್ತದೆ, ಮತ್ತು ಇಂತಹ ಒಂದು ವ್ಯವಹಾರವನ್ನು ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨ ಇದರ ಕ. ೫೪ರ ಉಪಬಂಧಗಳಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಹಾಗೆಂದರೆ, ಒಂದೊಮ್ಮೆ ಒಂದು ಸ್ಥಿರಸ್ವತ್ತಿನ ದಾನವು ಮಾಡಲ್ಪಟ್ಟರೆ ಮತ್ತು ಆದರ ಮೌಲ್ಯವು ರೂ. ೧೦೦ ಇದಕ್ಕಿಂತ ಹೆಚ್ಚಿನದಾಗಿದ್ದರೆ ಅಲ್ಲಿ ಆದನ್ನು ಬರವಣಿಗೆಯಲ್ಲಿ ಮಾಡಬೇಕಾಗುತ್ತದೆ. ಅದಲ್ಲದೆ, ಆ ದಸ್ತಾವೇಜನ್ನು ದಾನಿಯು ನಿಷ್ಪಾದಿಸಬೇಕಾಗುತ್ತದೆ. ಮತ್ತು ಅದನ್ನು ಯಥಾ ಪ್ರಕಾರವಾಗಿ ಅಭಿಪ್ರಮಾಣನಗೊಳಿಸಿ ನೋಂದಾಯಿಸಬೇಕಾಗುತ್ತದೆ. ಒಂದೊಮ್ಮೆ ಇವಾಜ್ ಇದು ಯಾವುದಾದರೊಂದು ಸ್ವತ್ತಾಗಿದ್ದರೆ ಅಲ್ಲಿ ಹಿಬಾ-ಬಿಲ್-ಇವಾಜ್ ಇಗನ್ನು ಒಂದು ವಿನಿಮಯವೆಂಬುದಾಗಿ ಎಣಿಸಲಾಗುತ್ತದೆ. ಆದುದರಿಂದ ಇಂತಹ ಒಂದು ಪ್ರಕರಣದಲ್ಲಿ ಸ್ವತ್ತು ಹಸ್ತಾಂತರಣ ಅಧಿನಿಯಮ, ೧೮೮೨, ಇದರ ಕ. ೧೧೮ರ ಉಪಬಂಧಗಳಿಗೆ ಅನುಗುಣವಾಗಿ ಈ ವ್ಯವಹಾರವನ್ನು ಪೂರ್ಣಗೊಳಿಸಬೇಕಾಗುತ್ತದೆ. ಅದೇನೆಂದರೆ ಆ ಸ್ವತ್ತಿನ ಮೌಲ್ಯವು ರೂ. ೧೦೦ ಇದಕ್ಕಿಂತ ಹೆಚ್ಚಿನದಾಗಿದ್ದರೆ ಅಲ್ಲಿ ನೋಂದಾಯಿಸಲ್ಪಟ್ಟ ದಸ್ತಾವೇಜಿನಿಂದ ಆ ವ್ಯವಹಾರವನ್ನು ಮಾಡಬೇಕಾಗುತ್ತದೆ.

೨) ಹಿಬಾದಲ್ಲಿ ಆವಶ್ಯಕವಾಗಿರುವ ಕಬ್ಜೆಯ ಪ್ರದಾಯಕತ್ವವು ಒಂದು ಹಿಬಾ-ಬಿಲ್-ಇವಾಜ್ ಇದನ್ನು ವಿಧ್ಯುಕ್ತಗೊಳಿಸಲು ಅವಶ್ಯಕವಲ್ಲ. ಪತ್ನಿಗೆ ಸಂದಾಯ ಮಾಡಬೇಕಾಗಿರುವ ಕನ್ಯಾಶುಲ್ಕದ ಬದಲಾಗಿ ಪತಿಯಿಂದ ಆಕೆಗೆ ಮಾಡಲಾಗುವ ಸ್ವತ್ತಿನ ಒಂದು ಹಸ್ತಾಂತರಣವು ಒಂದು ವಿಕ್ರಯವೆಂಬುದಾಗಿ ಎಣಿಸಲ್ಪಡುತ್ತದೆ. ಇಲ್ಲಿ ಕಬ್ಜೆಯ ಪ್ರದಾಯಕತ್ವದ ಅವಶ್ಯಕತೆಯಿರುವುದಿಲ್ಲ. ಆದರೆ ನೋಂದಣಿಯ ಅವಶ್ಯಕತೆಯಿರುತ್ತದೆ. ಏಕೆಂದರೆ ಈ ರೀತಿಯ ಒಂದು ಹಸ್ತಾಂತರಣವನ್ನು ಮೌಖಿಕವಾಗಿ ಮಾಡುವಂತಿಲ್ಲ.

೩) ಹಿಬಾ-ಬಿಲ್-ಇವಾಜ್ ಇದೊಂದು ವಿನಿಮಯ ಅಥವಾ ವಿಕ್ರಯವಾಗಿದ್ದುದರಿಂದ ಇದನ್ನು ರದ್ದುಗೊಳಿಸುವಂತಿಲ್ಲ; ಈಗಾಗಲೇ ನಾವು ಚರ್ಚಿಸಿದಂತೆ ಕೆಲವು ಪ್ರಕರಣಗಳ ಹೊರತಾಗಿ ಒಂದು ಹಿಬಾ ಇದು ರದ್ದುಗೊಳಿಸುವಂತಹದ್ದಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಒಂದು ದಾನದಲ್ಲಿ ಪ್ರತಿಫಲವಿಲ್ಲದೆ

ಹಸ್ತಾಂತರಣ ಮಾಡಲಾಗುವುದರಿಂದ ಒಂದೊಮ್ಮೆ ದಾನಿಯು ದಾನದ ಘೋಷಣೆ ಮಾಡಿದ ಬಳಿಕವೂ ಸಹ ಅದನ್ನು ರದ್ದುಗೊಳಿಸಿದರೆ ಅಲ್ಲಿ ಆದಾತನಿಗೆ ಯಾವುದೇ ರೀತಿಯ ಹಾನಿಯುಂಟಾಗುವುದಿಲ್ಲ. ಆದರೆ ಹಿಬಾ-ಬಿಲ್-ಇವಾಜ್ ಇದೊಂದು ಪ್ರತಿಫಲಕ್ಕಾಗಿ ಮಾಡಲಾಗುವ ಹಸ್ತಾಂತರಣವಾದುದರಿಂದ ಇದನ್ನು ದಾನಿಯು ರದ್ದುಗೊಳಿಸುವುದನ್ನು ಕಾನೂನು ಸಮ್ಮತಿಸುವುದಿಲ್ಲ.

೪) ಸುನ್ನೀ ಕಾನೂನಿನ ಪ್ರಕಾರ ಅವಿಭಕ್ತ ಸ್ವತ್ತುಗಳ ದಾನಗಳಿಗೆ ಅನ್ವಯವಾಗುವ ಮುಷಾ ಇದರ ಸಿದ್ಧಾಂತವು ಹಿಬಾ-ಬಿಲ್-ಇವಾಜ್ ರೀತಿಯ ವ್ಯವಹಾರಗಳಿಗೆ ಅನ್ವಯವಾಗುವುದಿಲ್ಲ, ಒಂದೊಮ್ಮೆ ಒಂದು ಸಹಸ್ವಾಮಿತ್ವದ ಸ್ವತ್ತಿನಲ್ಲಿರುವ ಒಂದು ಪಾಲನ್ನು ಒಬ್ಬನು ಯಾವುದಾದರೊಂದು ಪ್ರತಿಫಲಕ್ಕಾಗಿ ದಾನ ಮಾಡಿದರೆ ಅಲ್ಲಿ ಆ ದಾನವು ಆ ಸಹಸ್ವಾಮಿತ್ವದ ಸ್ವತ್ತಿನ ವಿಭಜನೆಯಾಗದಿದ್ದರೂ ಸಹ ಮತ್ತು ಅಲ್ಲಿ ಕಬ್ಜೆಯ ಪ್ರದಾಯಕತ್ವವು ನಡೆದಿಲ್ಲವಾದರೂ ಸಹ ಅದು ವಿಧ್ಯುಕ್ತವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಒಂದು ಹಿಬಾ-ಬಿಲ್-ಇವಾಜ್ ಇದನ್ನು ಒಂದು ದಾನವೆಂಬುದಾಗಿ ಎಣಿಸಲಾಗುವುದಿಲ್ಲ. ಇದನ್ನು ಒಂದು ವಿಕ್ರಯ ಅಥವಾ ವಿನಿಮಯಕ್ಕೆ ಸಮಾನವೆಂಬುದಾಗಿ ಎಣಿಸಲಾಗುತ್ತದೆ. ಆದುದರಿಂದ ಇಲ್ಲಿ ಮುಷಾ ಇದರ ಸಿದ್ಧಾಂತವು ಅನ್ವಯವಾಗುವುದಿಲ್ಲ.

೫) ಒಂದೊಮ್ಮೆ ಒಂದು ಹಸ್ತಾಂತರಣವು ಒಂದು ಹಿಬಾ-ಬಿಲ್-ಇವಾಜ್ ಆಗಿದ್ದರೆ ಅಲ್ಲಿ ಪೂರ್ವ ಕ್ರಯಾಧಿಕಾರವುಳ್ಳವನು ತನ್ನ ಪೂರ್ವಕ್ರಯಾಧಿಕಾರದ ಹಕ್ಕನ್ನು ಚಲಾಯಿಸಬಹುದು. ಪೂರ್ವಕ್ರಯಾಧಿಕಾರದ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ಪಕ್ಕದಲ್ಲಿರುವ ಸ್ವತ್ತಿನ ವಿಕ್ರಯವಾದಾಗ ಅದನ್ನು ಮರಳಿ ಖರೀದಿ ಮಾಡಲು ಹಕ್ಕುಳ್ಳವನಾಗಿರುವನು. ಒಂದು ವಿಕ್ರಯದ ರೀತಿಯ ಹಸ್ತಾಂತರಣದಲ್ಲಿ ಮಾತ್ರ ಈ ಹಕ್ಕು ಬರುತ್ತದೆ. ಒಂದೊಮ್ಮೆ ಅದೊಂದು ದಾನವಾಗಿದ್ದರೆ ಅಥವಾ ಇತರ ಯಾವುದಾದರೊಂದು ರೀತಿಯ ಹಸ್ತಾಂತರಣವಾಗಿದ್ದರೆ ಅಲ್ಲಿ ಈ ಹಕ್ಕನ್ನು ಚಲಾಯಿಸುವಂತಿಲ್ಲ. ಒಂದು ಹಿಬಾದಲ್ಲಿ ಪೂರ್ವಕ್ರಯಾಧಿಕಾರದ ಹಕ್ಕನ್ನು ಚಲಾಯಿಸುವಂತಿಲ್ಲ. ಆದರೆ ಹಿಬಾ-ಬಿಲ್-ಇವಾಜ್ ಇದರ ಪ್ರಕರಣದಲ್ಲಿ ಆ ಹಕ್ಕನ್ನು ಚಲಾಯಿಸಬಹುದು.

ಹಿಬಾ-ಬಾ-ಷರ್ತುಲ್-ಇವಾಜ್
(Hiba-Ba-Shartul-Iwaz)

ವಿನಿಮಯದಲ್ಲಿ ಏನನ್ನಾದರೂ ಪಡೆಯುವ ಒಂದು ವ್ಯಕ್ತ ಉಪಬಂಧವಿರುವ ಒಂದು ದಾನವು ಒಂದು ಹಿಬಾ-ಬಾ-ಷರ್ತುಲ್-ಇವಾಜ್ ಎಂದು ಕರೆಯಲ್ಪಡುತ್ತದೆ. ಈ ವ್ಯವಹಾರದಲ್ಲಿ ಆದಾತನು ಸ್ವೇಚ್ಛೆಯಿಂದ ದಾನಿಗೆ ಯಾವತ್ತೂ ಪ್ರತಿಫಲವನ್ನು ಸಲ್ಲಿಸುವುದಿಲ್ಲ; ಇಲ್ಲಿ ಆ ಪ್ರತಿಫಲವು ಆ ದಾನದ ಒಂದು ಪೂರ್ವವರ್ತಿ ಷರತ್ತಾಗಿದೆ ಎಂಬ ಕಾರಣ ಮಾತ್ರದಿಂದ ಆದಾತನು ಅದನ್ನು ಸಂದಾಯ

ಮಾಡುವನು. ಈ ರೀತಿಯ ದಾನಗಳಲ್ಲಿ ದಾನ ಮತ್ತು ಇವಾಜ್ ಇವೆರಡು ಸಮವರ್ತಿಗಳಾಗಿರುತ್ತವೆ. ಇಲ್ಲಿ ಪ್ರತಿಫಲದ ಸಂದಾಯವು ಒಂದು ದಾನದಲ್ಲಿ ಒಂದು ಷರತ್ತಾಗಿರುತ್ತದೆ. ಇಲ್ಲಿ ಒಂದು ಮೂಲ ದಾನವನ್ನು ಮಾಡುವ ಮೊದಲನೇ ಹಂತದಲ್ಲಿ ದಾನಿ ಮತ್ತು ಆದಾತರ ಪ್ರತಿಫಲದ ಸಂದಾಯವನ್ನು ಗಮನದಲ್ಲಿಟ್ಟುಕೊಂಡಿರುವರು. ಇದರ ಪರಿಣಾಮವಾಗಿ ಒಂದು ಹಿಬಾ-ಬಾ-ಷರ್ತುಲ್-ಇವಾಜ್ ಇದೊಂದು ಮೂಲತಃ ಶುದ್ಧ ದಾನವಾಗಿರುತ್ತದೆ ಮತ್ತು ಇದಕ್ಕೆ ಸಂದಾಯ ಮಾಡಲಾಗುವ ಇವಾಜ್ ಅಥವಾ ಪ್ರತಿಫಲವೂ ಸಹ ಆರಂಭ ದಲ್ಲಿ ಒಂದು ಸ್ವತಂತ್ರವಾದ ದಾನವಾಗಿರುತ್ತದೆ. ಆದರೆ ಆದಾತನು ಇವಾಜ್ ಇದರ ದಾನವನ್ನು ಪೂರ್ಣಗೊಳಿಸಿದ ತಕ್ಷಣದಲ್ಲಿ ಮೂಲ ದಾನವು ಒಂದು ದಾನ ವಾಗಿ ಉಳಿಯದೆ ಅದೊಂದು ವಿಕ್ರಯ ಅಥವಾ ವಿನಿಮಯದಲ್ಲಿ ಮಾರ್ಪಾಡು ಗೊಳ್ಳುತ್ತದೆ. ಇಲ್ಲಿ ಪ್ರತಿಫಲದ ರೀತಿಯಲ್ಲಿ ಒಂದು ವಸ್ತುವನ್ನು ಕೊಡಬಹುದು. ಒಂದು ಹಿಬಾ-ಬಾ-ಷರ್ತುಲ್-ಇವಾಜ್ ಇದರ ಕಾನೂನೀ ಪ್ರಾಸಂಗಿಕತೆಗಳು ಈ ಕೆಳಗಿನವುಗಳಾಗಿವೆ.

I. ಇಲ್ಲಿ ಇಡೀ ವ್ಯವಹಾರವು ಎರಡು ಸ್ವತಂತ್ರವಾದ ದಾನಗಳಿಂದ ಕೂಡಿ ಕೊಂಡಿದೆಯಾದುದರಿಂದ ಇಲ್ಲಿ ಕಬ್ಜೆಯ ಪ್ರದಾಯಕತ್ವವು ನಡೆಯಬೇಕಾಗುತ್ತದೆ.

II. ಆರಂಭದ ಹಂತದಲ್ಲಿ ಇದನ್ನು ರದ್ದುಗೊಳಿಸಬಹುದು. ಆದರೆ ಆ ದಾನದ ಷರತ್ತನ್ನು ಪೂರ್ತಿಗೊಳಿಸುವದಕ್ಕಾಗಿ ಆದಾತನು ಆ ಪ್ರತಿಫಲವನ್ನು ಸಂದಾಯ ಮಾಡಿದ ತಕ್ಷಣದಲ್ಲಿ ಆ ವ್ಯವಹಾರವು ರದ್ದುಗೊಳಿಸಲಾರದಂತಹ ದ್ದಾಗುತ್ತದೆ.

III. ಆರಂಭದಲ್ಲಿ ಹಿಬಾ-ಬಾ-ಷರ್ತುಲ್-ಇವಾಜ್ ಇದೊಂದು ದಾನ ದಂತಿರುತ್ತದೆ. ಆದರೆ ವಚನಕೊಟ್ಟ ಪ್ರತಿಫಲವು ಸಂದಾಯವಾದ ಬಳಿಕ ಇದೊಂದು ವಿಕ್ರಯದಂತೆ ಕಾರ್ಯಾಚರಣೆಗೆ ಬರುತ್ತದೆ.

IV. ಇದು ಯಥಾ ಪ್ರಕಾರವಾಗಿ ಪೂರ್ಣಗೊಂಡ ಬಳಿಕ ಹಿಬಾ-ಬಾ-ಷರ್ತುಲ್-ಇವಾಜ್ ಇದರ ವ್ಯವಹಾರವು ಪೂರ್ವ ಕ್ರಯಾಧಿಕಾರದ ಹಕ್ಕಿಗೆ ಬಾಧ್ಯ ವಾಗಿರುತ್ತದೆ.

ಹಿಬಾ-ಬಾ-ಷರ್ತುಲ್-ಇವಾಜ್ ಇದು ಕೇವಲ ಕಾನೂನು ಪಂಡಿತರೊಳಗೆ ಮಾತ್ರ ಮಹತ್ವವನ್ನು ಪಡೆದಿದೆ. ಈ ರೀತಿಯ ವ್ಯವಹಾರವು ಭಾರತೀಯ ಮುಸ ಲ್ಮಾನರೊಳಗೆ ಬಳಕೆಯಲ್ಲಿಲ್ಲ.

ಸತ್ಕಾ (Satqua)

ಧಾರ್ಮಿಕ ಅಥವಾ ಆಧ್ಯಾತ್ಮಿಕ ಪ್ರಯೋಜನವನ್ನು ಪಡೆಯುವ ಉದ್ದೇಶ ದಿಂದ ಒಂದು ದಾನವು ಮಾಡಲ್ಪಟ್ಟರೆ ಅಂತಹ ವ್ಯವಹಾರವನ್ನು ಸತ್ಕಾ ಎಂದು

ಕರೆಯಲಾಗುತ್ತದೆ. ಒಂದು ಹಿಬಾ ಮತ್ತು ಸತ್ಕಾ ಇವುಗಳೊಳಗಿನ ವ್ಯತ್ಯಾಸವು ಯಾವುದೆಂದರೆ ಒಂದು ಹಿಬಾ ಇದನ್ನು ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯದಿಂದ ಮಾಡಲಾಗುತ್ತದೆ. ಆದರೆ ಸತ್ಕಾ ಇದು ಪರಮಾತ್ಮನನ್ನು ತೃಪ್ತಿ ಪಡಿಸುವದ ಕ್ಕೋಸ್ಕರ ಮಾಡಲಾಗುತ್ತದೆ. ಈ ರೀತಿಯಾಗಿ ಮಾಡಲಾಗುವ ಸ್ವತ್ತಿನ ಹಸ್ತಾಂತ ರಣದ ವ್ಯವಹಾರದಲ್ಲಿ ಆ ಹಸ್ತಾಂತರಣದ ಉದ್ದೇಶದ ಹೊರತಾಗಿ ಅಲ್ಲಿ ಒಂದು ಹಿಬಾ ಮತ್ತು ಸತ್ಕಾ ಇವುಗಳೊಳಗೆ ಯಾವುದೇ ರೀತಿಯ ವ್ಯತ್ಯಾಸವಿರುವದಿಲ್ಲ. ಆದುದರಿಂದ ಒಂದು ಹಿಬಾವನ್ನು ಪೂರ್ತಿಗೊಳಿಸಲು ಬೇಕಾಗಿರುವ ಷರತ್ತುಗಳನ್ನು ಒಂದು ಸತ್ಕಾದಲ್ಲಿಯೂ ಸಹ ಪೂರ್ತಿಗೊಳಿಸಬೇಕಾಗುತ್ತದೆ. ಆದುದರಿಂದ ಒಂದು ಸತ್ಕಾದಲ್ಲಿ ಘೋಷಣೆ, ಸ್ವೀಕೃತಿ ಮತ್ತು ಕಬ್ಜೆಯ ಪ್ರದಾಯಕತ್ವ ಈ ಮೂರು ಅಂಶಗಳು ಇರಬೇಕಾಗುತ್ತದೆ. ಸತ್ಕಾ ಇದನ್ನು ಒಬ್ಬ ಶ್ರೀಮಂತ ಅಥವಾ ಬಡ ಆದಾತನ ಪರವಾಗಿ ಮಾಡಬಹುದು. ಒಂದೊಮ್ಮೆ ಒಂದು ಸತ್ಕಾ ಇದು ಒಬ್ಬ ಶ್ರೀಮಂತ ಆದಾತನ ಪರವಾಗಿ ಮಾಡಲ್ಪಟ್ಟುದಾಗಿದ್ದರೂ ಸಹ ಅದು ಧಾರ್ಮಿಕ ಪ್ರಯೋಜನಗಳನ್ನು ಪಡೆಯುವ ಉದ್ದೇಶದಿಂದ ಮಾಡಲ್ಪಟ್ಟುದಾಗಿದ್ದರೆ ಅದು ವಿಧ್ಯುಕ್ತವಾಗಿರುತ್ತದೆ. ಒಂದು ದಾನದ ವಿಷಯ ವಸ್ತುವಾಗಬಹುದಾದ ಯಾವುದೇ ರೀತಿಯ ಒಂದು ಸ್ವತ್ತು ಒಂದು ಸತ್ಕಾ ಇದರ ವಿಷಯ ವಸ್ತುವಾಗಬಹುದು. ಹನಫೀ ಕಾನೂನಿನ ಮುಷಾ ನಿಯಮವು ಸತ್ಕಾ ಇದಕ್ಕೂ ಅನ್ವಯವಾಗುತ್ತದೆ. ಆದರೆ ಒಂದು ಸತ್ಕಾ ಇದು ಹಿಬಾದಿಂದ ಈ ಕೆಳಗಿನ ರೀತಿಗಳಲ್ಲಿ ಭಿನ್ನವಾಗಿರುತ್ತದೆ:

I. ಇಲ್ಲಿ ವ್ಯಕ್ತ ಸ್ವೀಕೃತಿಯ ಅವಶ್ಯಕತೆಯಿರುವುದಿಲ್ಲ; ಇದೊಂದು ಅವ್ಯಕ್ತ ವಾದ ಮತ್ತು ಪರಿಸ್ಥಿತಿಗಳಿಂದ ಅನುಮಾನಿಸಬಹುದಾದ ಸ್ವೀಕೃತಿಯಾಗಿರಬಹುದು.

II. ಒಂದು ಸತ್ಕಾದಲ್ಲಿ ಒಂದು ದಾನವು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿ ಗಳೊಳಗೆ ಮಾಡಲ್ಪಡಬಹುದು ಮತ್ತು ಅಲ್ಲಿ ಆ ಇಬ್ಬರ ಅಥವಾ ಹೆಚ್ಚಿನ ವ್ಯಕ್ತಿ ಗಳ ಪಾಲುಗಳನ್ನು ನಿರ್ದಿಷ್ಟಗೊಳಿಸುವ ಅವಶ್ಯಕತೆಯಿಲ್ಲ ಹಾಗೂ ಆ ಸ್ವತ್ತನ್ನು ವಿಭಜನೆಗೊಳಿಸುವ ಅವಶ್ಯಕತೆಯೂ ಇರುವುದಿಲ್ಲ.

III. ಒಮ್ಮೆ ಮಾಡಲಾದ ಸತ್ಕಾವನ್ನು ಆ ಬಳಿಕ ರದ್ದುಗೊಳಿಸುವಂತಿಲ್ಲ.

ಒಂದು ವಕ್ಫ್ ಇದರ ಉದ್ದೇಶವೂ ಸಹ ಧಾರ್ಮಿಕ ಮತ್ತು ಧರ್ಮದಾಯ ವಾಗಿರುತ್ತದೆ. ಆದರೆ ವಕ್ಫ್ ಮತ್ತು ಸತ್ಕಾ ಇವುಗಳೊಳಗೆ ಒಂದು ಮೂಲಭೂತ ವ್ಯತ್ಯಾಸವಿದೆ. ಒಂದು ವಕ್ಫ್ ಇದರ ವಿಷಯವಸ್ತುವು ಶಾಶ್ವತವಾಗಿ ಅಬಂಧಿತ ವಾಗಿರುತ್ತದೆ, ಮತ್ತು ಅದರ ಫಲೋಪಭೋಗ ಮಾತ್ರ ಉಪಯೋಗಿಸಲಾಗು ತ್ತದೆ. ವಕ್ಫ್ ಇದರ ಒಂದು ಸ್ವತ್ತನ್ನು ಹಸ್ತಾಂತರಣಗೊಳಿಸುವಂತಿಲ್ಲ. ಆದರೆ ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಗಳಿಗಾಗಿ ಉಪಯೋಗಿಸಬಹುದು. ಒಂದೊಮ್ಮೆ ಒಂದು ಸತ್ಕಾವು ಮಾಡಲ್ಪಟ್ಟರೆ ಅದರ ಧಾರ್ಮಿಕ ಉದ್ದೇಶವು ಆ ಸ್ವತ್ತು ಹಸ್ತಾಂತರಿಸಲ್ಪಟ್ಟ ತಕ್ಷಣದಲ್ಲಿ ಇಡೇರಿತೆಂದು ಎಣಿಸಲಾಗುತ್ತದೆ. ಆದುದ

ರಿಂದ ಒಂದು ಸತ್ಕಾರದಲ್ಲಿ ಹಸ್ತಾಂತರಿತನು ಆ ಸ್ವತ್ತು ದಾನ ಮಾಡಲ್ಪಟ್ಟ ತಕ್ಷಣ ದಲ್ಲಿ ಅದರ ಸ್ವಾಮಿತ್ವವನ್ನು ಪಡೆಯುವನು.

ಅರಿಯತ್ (Areeat)

ಒಂದು ಸ್ವತ್ತನ್ನು ಅನುಭೋಗಿಸುವ ಹಕ್ಕಿನ ಒಂದು ನಿರ್ದಿಷ್ಟ ಕಾಲಾವಧಿಯ ಹಸ್ತಾಂತರಣವನ್ನು ಒಂದು ಅರಿಯತ್ ಎಂದು ಕರೆಯಲಾಗುತ್ತದೆ. ದಾನದಲ್ಲಿ ಒಂದು ಸ್ವತ್ತಿನ ಸ್ವಾಮಿತ್ವದ ಹಸ್ತಾಂತರಣವಾಗುತ್ತದೆ, ಆದರೆ ಅರಿಯತ್ ಇದ ರಲ್ಲಿ ಒಂದು ಸ್ವತ್ತಿನ ಭೋಗಾರ್ಪಣೆ ಮಾತ್ರ ಹಸ್ತಾಂತರಿಸಲ್ಪಡುತ್ತದೆ. ಇಲ್ಲಿ ಒಂದು ಫಲೋಪಭೋಗವನ್ನು ಯಾವದೇ ರೀತಿಯ ಪ್ರತಿಫಲವಿಲ್ಲದೆ ಹಸ್ತಾಂತರಿಸ ಲಾಗುತ್ತದೆ. ಹಸ್ತಾಂತರಿತನು ಕೇವಲ ಫಲೋಪಭೋಗದ ಸ್ವಾಮಿತ್ವವನ್ನು ಪಡೆಯುವನು ಮತ್ತು ಅದೂ ಸಹ ಒಂದು ನಿಯಮಿತವಾದ ಕಾಲಾವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಆ ಹಸ್ತಾಂತರಿತನು ಹಸ್ತಾಂತರಿತರಿಗೆ ಇಷ್ಟವಿದ್ದಷ್ಟು ಕಾಲ ಮಾತ್ರ ಆ ಫಲೋಪಭೋಗವನ್ನು ಅನುಭೋಗಿಸುವನು. ಅರಿಯತ್ ಇದೊಂದು ಒಬ್ಬ ವ್ಯಕ್ತಿಯ ಪರವಾಗಿ ಮಾಡಲ್ಪಟ್ಟ ಒಂದು ಮಂಜೂರಾತಿಯಾ ಗಿದ್ದು ಇಲ್ಲಿ ಆ ಮಂಜೂರಾತಿ ಪಡೆದ ವ್ಯಕ್ತಿಯು ಆ ನಿರ್ದಿಷ್ಟವಾದ ಕಾಲಾವಧಿಗೆ ಮಾತ್ರ ಆ ಸ್ವತ್ತನ್ನು ಉಪಯೋಗಿಸಬಹುದು. ಇಲ್ಲಿ ಮಂಜೂರಾತಿ ಕೊಟ್ಟಿರುವ ವ್ಯಕ್ತಿಯ ಸ್ವತ್ತನ್ನು ಒಂದು ನಿಯಮಿತ ಕಾಲಾವಧಿಗೆ ಮಾತ್ರ ಉಪಯೋಗಿಸಲು ಇದೊಂದು ಸರಳವಾದ ಸಮ್ಮತಿಯಾಗಿರುತ್ತದೆ. ಆದುದರಿಂದ ಒಂದು ಹಿಬಾ ವನ್ನು ಪೂರ್ಣಗೊಳಿಸಲು ಅವಶ್ಯಕವಾಗಿರುವ ಘೋಷಣೆ ಮತ್ತು ಸ್ವೀಕೃತಿ ಇವು ಗಳು ಅರಿಯತ್ ರೀತಿಯ ಹಸ್ತಾಂತರಣದಲ್ಲಿ ಅವಶ್ಯಕವಲ್ಲ. ಅರಿಯತ್ ಇದರ ಕಾನೂನೀ ಪ್ರಾಸಂಗಿಕತೆಗಳು ಈ ಕೆಳಗಿನಂತಿವೆ.

I. ಅರಿಯತ್ ಇದೊಂದು ಪ್ರತಿಫಲವಿಲ್ಲದೆ ಕೊಡಲಾದ ತಾತ್ಕಾಲಿಕ ಲೈಸನ್ಸ್ ಆಗಿರುತ್ತದೆ.

II. ಇದೊಂದು ನಿರ್ದಿಷ್ಟವಾದ ಕಾಲಾವಧಿಗೆ ಮಾತ್ರ ಮಾಡಲ್ಪಟ್ಟು ದಾಗಿರುತ್ತದೆ.

III. ಇದನ್ನು ದಾನಿಯ ಇಚ್ಛೆಯ ಮೇರೆಗೆ ರದ್ದುಗೊಳಿಸಬಹುದು.

IV. ಇದೊಂದು ಆದಾತನ ವೈಯಕ್ತಿಕ ಹಕ್ಕಾಗಿದ್ದುದರಿಂದ ಇದನ್ನು ಹಸ್ತಾಂತರಿಸುವಂತಿಲ್ಲ ಹಾಗೂ ಅವನ ವಾರಸುದಾರರು ಇದರ ವಾರಸು ಪಡೆಯು ವಂತಿಲ್ಲ.

V. ಒಂದೊಮ್ಮೆ ಒಂದು ಜೀವನಾಂಶದ ಅನುದಾನದ ರೀತಿಯಲ್ಲಿ ಒಂದು ಫಲೋಪಭೋಗದ ಹಕ್ಕು ಒಬ್ಬ ವ್ಯಕ್ತಿಯ ಪರವಾಗಿ ಹಸ್ತಾಂತರಿಸಲ್ಪಟ್ಟರೆ ಅಲ್ಲಿ ಆ ವ್ಯವಹಾರವು ಒಂದು ಅರಿಯತ್ ಆಗುವದಲ್ಲದೆ ಒಂದು ಹಿಬಾ ಆಗುವುದಿಲ್ಲ.

ಅಧ್ಯಾಯ 11

ಮರಣ ಶಾಸನಗಳು

Wills

ಪ್ರಸ್ತಾವನೆ

ಒಂದು ಸ್ವತ್ತಿನ ಹಸ್ತಾಂತರಣವು ಜೀವಿತವ್ಯಕ್ತಿಗಳೊಳಗೆ ನಡೆಯಬಹುದು ಅಥವಾ ಮರಣ ಶಾಸನದಿಂದಾಗಿ ಹಾಗೆಂದರೆ ಒಂದು ಸ್ವತ್ತಿನ ಸ್ವಾಮಿಯು ತನ್ನ ಜೀವಮಾನದಲ್ಲಿ ತನ್ನ ಸ್ವತ್ತನ್ನು ಹಸ್ತಾಂತರಿಸಬಹುದು ಅಥವಾ ಆ ಹಸ್ತಾಂತರಣವು ತನ್ನ ಮರಣದ ಬಳಿಕ ಕಾರ್ಯಾಚರಣೆಗೆ ಬರಬೇಕೆಂದು ಇಚ್ಛಿಸಬಹುದು. ಒಂದೊಮ್ಮೆ ತನ್ನ ಮರಣದ ಬಳಿಕ ತನ್ನ ಸ್ವತ್ತುಗಳನ್ನು ಯಾವನಾದರೊಬ್ಬ ವ್ಯಕ್ತಿಗೆ ದಾನವಾಗಿ ಕೊಡಬೇಕೆಂದು ಒಬ್ಬ ವ್ಯಕ್ತಿಯು ಮೌಖಿಕವಾಗಿ ಅಥವಾ ಲಿಖಿತವಾಗಿ ಒಂದು ಘೋಷಣೆ ಮಾಡಿದರೆ ಅಲ್ಲಿ ಆ ಹಸ್ತಾಂತರಣವನ್ನು ಒಂದು ಮರಣಶಾಸನ ವೆಂದು ಕರೆಯಲಾಗುತ್ತದೆ. ಮರಣ ಶಾಸನವು ಒಂದು ಸ್ವಾಮಿತ್ವದ ವಿಚಿತ್ರ ಹಸ್ತಾಂತರಣವಾಗಿರುತ್ತದೆ. ಆದರೆ ಅದು ಆ ಹಸ್ತಾಂತರಿಯ ಮರಣದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುತ್ತದೆ. ಒಂದು ದಾನವು ಪೂರ್ತಿಗೊಂಡ ತಕ್ಷಣವಲ್ಲಿ ಕಾರ್ಯಾಚರಣೆಗೆ ಬರುತ್ತದೆ. ಇದರ ಪರಿಣಾಮವಾಗಿ ಒಂದು ದಾನದ ವ್ಯವಹಾರದಲ್ಲಿ ಹಸ್ತಾಂತರಿತನು ಆ ದಾನದ ಕಾನೂನೀ ಔಪಚಾರಿಕತೆಗಳು ಪೂರ್ಣಗೊಂಡ ತಕ್ಷಣ ದಲ್ಲಿ ಆ ಸ್ವತ್ತನ್ನು ಪಡೆಯುವನು. ಆದರೆ ಒಂದು ಮರಣ ಶಾಸನದಲ್ಲಿ ಹಸ್ತಾಂತರಿಯ ಮರಣಕ್ಕಿಂತ ಮೊದಲು ಹಸ್ತಾಂತರಿತನು ಏನನ್ನೂ ಪಡೆಯುವುದಿಲ್ಲ. ಒಬ್ಬ ವ್ಯಕ್ತಿಯು ಮೃತನಾದ ಬಳಿಕ ಅವನ ಸ್ವತ್ತುಗಳನ್ನು ಯಾವ ರೀತಿಯಲ್ಲಿ ವಂಟನೆ ಮಾಡಬೇಕೆಂಬ ಬಗ್ಗೆ ಆ ವ್ಯಕ್ತಿಯ ಅಂತಿಮ ಇಚ್ಛೆಯನ್ನು ಮರಣಶಾಸನವು ಸೂಚಿಸುತ್ತದೆ. ಆದುದ ರಿಂದ ಎಲ್ಲಾ ಕಾನೂನು ಪದ್ಧತಿಗಳಲ್ಲಿ ಒಬ್ಬ ವ್ಯಕ್ತಿಯು ಮರಣದ ಬಳಿಕ ತನ್ನ ಸ್ವತ್ತು ಗಳ ಪ್ರಾಪ್ತಿಯ ಬಗ್ಗೆ ಅವನ ಇಚ್ಛೆಯನ್ನು ಗೌರವಿಸುವದಕ್ಕಾಗಿ ನಿಯಮಗಳು ಮಾಡ ಲ್ಪಟ್ಟಿವೆ. ಆದರೆ ಒಬ್ಬ ವ್ಯಕ್ತಿಯು ಮಾಡಿರುವ ಕೊನೇ ಮರಣ ಶಾಸನವು ಅವನಿಂದ ಮಾಡಲ್ಪಟ್ಟ ಅದಕ್ಕಿಂತ ಹಿಂದಿನ ಮರಣಶಾಸನಗಳ ಮೇಲೆ ಆದ್ಯತೆ ಪಡೆಯುತ್ತದೆ. ಮರಣ ಶಾಸನಗಳ ಸಂಬಂಧದಲ್ಲಿ ಇನ್ನೊಂದು ಮಹತ್ವದ ಸಂಗತಿಯು ಯಾವುದೆಂದರೆ ಇಲ್ಲಿ ಒಂದು ಸ್ವತ್ತಿನ ಹಸ್ತಾಂತರಣವು ನಡೆಯುತ್ತದಾದರೂ ಅದು ಸ್ವತ್ತು ಹಸ್ತಾಂತ ರಣ ಅಧಿನಿಯಮ, 1882 ಇದರ ಉಪಬಂಧಗಳಿಂದ ಶಾಸಿತವಾಗುವುದಿಲ್ಲ. ಸ್ವತ್ತು ಹಸ್ತಾಂತರಣ ಅಧಿನಿಯಮ ಇದು ಜೀವಿತವ್ಯಕ್ತಿಗಳೊಳಗಿನ ಹಸ್ತಾಂತರಣಗಳನ್ನಷ್ಟೇ

ವಿನಿಯಮಿತಗೊಳಿಸುತ್ತದೆ ಒಂದು ಮರಣ ಶಾಸನದ ಮೂಲಕ ಮಾಡಲಾದ ಹಸ್ತಾಂತರಣವು ಹಸ್ತಾಂತರಿಯ ಮರಣದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುವುದಾದುದರಿಂದ ಒಬ್ಬ ವ್ಯಕ್ತಿಯು ಒಂದು ಮರಣ ಶಾಸನವನ್ನು ಮಾಡಿ ಮೃತನಾದರೆ ಅಲ್ಲಿ ಅವನ ಸ್ವತ್ತಿನ ಪ್ರಾಪ್ತಿಯು ಅವನ ಮತೀಯ ಕಾನೂನಿನಿಂದ ಶಾಸಿತವಾಗುತ್ತದೆ. ಆದರೆ ಒಂದೊಮ್ಮೆ ಒಬ್ಬ ಹಿಂದು ಅಥವಾ ಮುಸಲ್ಮಾನನು ವಿಶೇಷ ವಿವಾಹಗಳ ಅಧಿನಿಯಮ, 1954 (Special marriage Act, 1954) ಇದರ ಪ್ರಕಾರ ವಿವಾಹಿತನಾಗಿದ್ದರೆ ಅವನಿಂದ ನಿಷ್ಪಾದಿಸಲ್ಪಟ್ಟ ಮರಣ ಶಾಸನವು ಅವನ ಮತೀಯ ಕಾನೂನಿನಿಂದ ಶಾಸಿತವಾಗುವುದಿಲ್ಲ. ಅಂತಹ ಪ್ರಕರಣದಲ್ಲಿ ಆ ಮರಣ ಶಾಸನವು ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925(Indian Succession Act, 1925) ಇದರ ಉಪಬಂಧದಿಂದ ವಿನಿಯಮಿತವಾಗುತ್ತದೆ. ಒಬ್ಬ ಮುಸಲ್ಮಾನನಿಂದ ನಿಷ್ಪಾದಿಸಲಾದ ಒಂದು ಮರಣ ಶಾಸನವನ್ನು ವಸೀಯತ್ ಎಂದು ಕರೆಯಲಾಗುತ್ತದೆ, ಒಂದು ಮರಣಶಾಸನವನ್ನು ನಿಷ್ಪಾದಿಸುವ ಒಬ್ಬ ವ್ಯಕ್ತಿಯನ್ನು ಉತ್ತರದಾನಿ ಎಂಬುದಾಗಿಯೂ ಮತ್ತು ಯಾವ ವ್ಯಕ್ತಿಯ ಪರವಾಗಿ ಒಂದು ಮರಣ ಶಾಸನವು ಮಾಡಲ್ಪಟ್ಟಿದೆಯೋ ಆ ವ್ಯಕ್ತಿಯನ್ನು ಒಬ್ಬ ಉತ್ತರದಾತ ಎಂಬುದಾಗಿಯೂ ಕರೆಯಲಾಗುತ್ತದೆ.

ಒಬ್ಬ ವ್ಯಕ್ತಿಯ ಮರಣದ ಬಳಿಕ ಅವನ ಸ್ವತ್ತುಗಳ ವಂಟನೆಯು ಎರಡು ರೀತಿಗಳಿಂದ ಮಾಡಲಾಗುತ್ತದೆ: ಅದು ಮರಣ ಶಾಸನವಿಲ್ಲದ ಉತ್ತರಾಧಿಕಾರ ಮತ್ತು ಮರಣ ಶಾಸನದಿಂದಾದ ಉತ್ತರಾಧಿಕಾರವಾಗಿರುತ್ತದೆ. ಮರಣಶಾಸನವಿಲ್ಲದ ಉತ್ತರಾಧಿಕಾರವನ್ನು ವಾರಸು ಎಂದು ಕರೆಯಲಾಗುತ್ತದೆ ಮತ್ತು ಇದರಲ್ಲಿ ಒಬ್ಬ ವ್ಯಕ್ತಿಯ ಮರಣದ ಬಳಿಕ ಅವನ ಸ್ವತ್ತು ಅವನ ವಾರಸುದಾರರೊಳಗೆ ಆ ವಾರಸಿಗೆ ಸಂಬಂಧಪಟ್ಟ ನಿಯಮಗಳ ಪ್ರಕಾರ ಪ್ರಾಪ್ತವಾಗುತ್ತದೆ. ವಾರಸಿಗೆ ಸಂಬಂಧಪಟ್ಟ ಕಾನೂನಿನಲ್ಲಿ ಕಾನೂನೀ ವಾರಸುದಾರರು ಮತ್ತು ಮೃತನ ಸ್ವತ್ತುಗಳಲ್ಲಿ ಅವರ ಪಾಲುಗಳು ಸ್ಪಷ್ಟವಾಗಿ ಪರಿಭಾಷಿಸಲ್ಪಟ್ಟಿರುತ್ತವೆ. ಆದರೆ ಮರಣ ಶಾಸನದಲ್ಲಿ ಮರಣಶಾಸಕನ ಇಷ್ಟದ ಪ್ರಕಾರ ಅವನ ಸ್ವತ್ತು ಇನ್ನೊಬ್ಬನಿಗೆ ಪ್ರಾಪ್ತವಾಗುತ್ತದೆ. ಆದುದರಿಂದ ಒಬ್ಬ ವ್ಯಕ್ತಿಯು ಒಂದು ಮರಣ ಶಾಸನವು ಅವನ ವಾರಸುದಾರರು ಪಡೆಯಬಹುದಾದಂತಹ ವಾರಸಿನ ನಿರ್ದಿಷ್ಟವಾದ ನಿಯಮಗಳನ್ನು ಬದಲಾಯಿಸಬಹುದು. ಮರಣ ಶಾಸನಗಳಿಗೆ ಸಂಬಂಧಪಟ್ಟ ಉಪಬಂಧಗಳ ನಿರ್ವಹಿಸುವಿಕೆಯು ಕುರಾನಿನಿಂದ ಹಾಗೂ ಪೈಗಂಬರನ ರೂಢಿಗಳಿಂದ ಮನ್ನಿಸಲ್ಪಟ್ಟಿದೆ.

ವಾರಸಿನ ಕಾನೂನು ಮತ್ತು ಒಂದು ಮರಣ ಶಾಸನದ ಮೇರೆಗೆ ಪ್ರಾಪ್ತವಾಗುವ ಸ್ವತ್ತುಗಳ ಕಾನೂನು ಇವುಗಳೊಳಗೆ ಮುಸ್ಲಿಮ್ ಕಾನೂನು ಒಂದು ಯುಕ್ತವಾದ ಸಂಬಂಧವನ್ನು ನಿರ್ಮಿಸಿದೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ಕಾನೂನೀ ವಾರಸುದಾರರ ಸಮ್ಮತಿಯಿಲ್ಲದೆ ತನ್ನ ಇಡೀ ಸ್ವತ್ತಿನ ಬಗ್ಗೆ

ಒಂದು ಮರಣ ಶಾಸನವನ್ನು ಮಾಡುವಂತಿಲ್ಲ. ತನ್ನ ವಾರಸುದಾರರ ಸಮ್ಮತಿಯಿಲ್ಲದೆ ಅವನು ಕೇವಲ ಮೂರನೇ ಒಂದರಷ್ಟು ಸ್ವತ್ತನ್ನು ಮಾತ್ರ ತನ್ನ ಮರಣ ಶಾಸನದಿಂದ ಕೊಡಬಹುದು. ಇತರ ಕಾನೂನು ಪದ್ಧತಿಗಳ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ಇಡೀ ಸ್ವತ್ತಿನ ಬಗ್ಗೆ ಒಂದು ಮರಣ ಶಾಸನವನ್ನು ಮಾಡಬಹುದು. ಆದರೆ ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ಒಬ್ಬನು ಇಡೀ ಸ್ವತ್ತಿನ ಬಗ್ಗೆ ಮರಣ ಶಾಸನವನ್ನು ಮಾಡುವಂತಿಲ್ಲ ಒಂದೊಮ್ಮೆ ಒಬ್ಬನಿಗೆ ಈ ಬಗ್ಗೆ ಸಮ್ಮತಿಯು ಕೊಡಲ್ಪಟ್ಟರೆ ಅದು ವಾರಸು ಸಂಬಂಧದ ಕುರಾನಿನ ಕಾನೂನಿಗೆ ವಿರೋಧವಾಗಿರುತ್ತದೆ ಮತ್ತು ದೇವರ ಶಬ್ದಗಳಿಗೂ ಅಗೌರವ ತೋರಿಸಿದಂತಾಗುತ್ತದೆ. ಇದೇ ರೀತಿಯಲ್ಲಿ ಒಬ್ಬ ವ್ಯಕ್ತಿಗೆ ಒಂದು ಮರಣ ಶಾಸನವನ್ನು ಮಾಡುವ ಸಮ್ಮತಿಯು ಕೊಡಲ್ಪಡದಿದ್ದರೆ ಅಲ್ಲಿ ಆ ವ್ಯಕ್ತಿಯ ಕೊನೆಯ ಇಚ್ಛೆಗೆ ಗೌರವ ತೋರಿಸಿದಂತಾಗುತ್ತದೆ.

ಒಂದು ಮರಣ ಶಾಸನ ಇದರ ಪರಿಭಾಷೆ (Definition of a will)

ತ್ಯಾಬ್ಜಿಯವರ ಪ್ರಕಾರ ಒಂದು ಮರಣ ಶಾಸನವೆಂದರೆ ಒಬ್ಬ ಮುಸಲ್ಮಾನನು ತನ್ನ ಮರಣದ ಬಳಿಕ ತನ್ನ ಸ್ವತ್ತನ್ನು ಯಾವ ರೀತಿಯಲ್ಲಿ ಪರಿಣಾಮಿತಗೊಳಿಸಬೇಕೆಂದು ಮಾಡಿರುವ ತನ್ನ ಉದ್ದೇಶದ ಕಾನೂನೀ ಘೋಷಣೆಯಾಗಿರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಒಂದು ಮರಣ ಶಾಸನವೆಂದರೆ ಅದು ಒಬ್ಬ ವ್ಯಕ್ತಿಯು ಮೃತನಾದ ಬಳಿಕ ಅವನ ಸ್ವತ್ತುಗಳನ್ನು ಯಾವ ರೀತಿಯಲ್ಲಿ ಹಂಚಬೇಕೆಂಬುದಾಗಿ ಅವನ ಕೊನೆಯ ಇಚ್ಛೆಯಾಗಿರುತ್ತದೆ. ಒಬ್ಬ ವ್ಯಕ್ತಿಯು ಒಂದು ಮರಣ ಶಾಸನ ಮಾಡಿದರೆ ಮತ್ತು ಆ ಮರಣ ಶಾಸನದಲ್ಲಿ ತನ್ನ ಸ್ವತ್ತನ್ನು ಯಾರಿಗೆ ಕೊಡಬೇಕೆಂಬುದಾಗಿ ಅವನು ನಿರ್ದಿಷ್ಟಪಡಿಸಿದ್ದರೆ ಅವನ ಮರಣದ ಬಳಿಕ ಆ ಸ್ವತ್ತು ಆ ವ್ಯಕ್ತಿಗೆ ಕೊಡಲ್ಪಡುತ್ತದೆ. ಆ ಬಳಿಕ ಉಳಿದಿರುವ ಸ್ವತ್ತನ್ನು ಅವನ ಕಾನೂನೀ ವಾರಸುದಾರರೊಳಗೆ ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿನ ಅನುಸಾರ ಅವರವರ ಪಾಲುಗಳನ್ನು ಹಂಚಲಾಗುತ್ತದೆ. ಹೀಗೆ ಯಾವಾತನ ಪರವಾಗಿ ಒಂದು ಮರಣ ಶಾಸನವು ಮಾಡಲ್ಪಟ್ಟಿದೆಯೋ ಆತನು ಆ ಮೃತನ ವಾರಸುದಾರನಲ್ಲದಿದ್ದರೂ ಸಹ ಆ ಸ್ವತ್ತನ್ನು ಪಡೆಯುವನು.

ಒಂದು ಮರಣ ಶಾಸನದ ಅವಶ್ಯಕತೆಗಳು (Essentials of a will)

ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಮರಣ ಶಾಸನವು ವಿಧ್ಯುಕ್ತವೆಂದು ಎಣಿಸಲ್ಪಡಬೇಕಾದರೆ ಅಲ್ಲಿ ಈ ಕೆಳಗಿನ ಅವಶ್ಯಕತೆಗಳಿರಬೇಕಾಗುತ್ತದೆ.

i) ಉತ್ತರದಾನಿ ಮತ್ತು ಉತ್ತರಾಧಾತ ಇವರಿಬ್ಬರೂ ಸಮಕ್ಷಮರಾಗಿರಬೇಕು;

ii) ಅಲ್ಲೊಂದು ಸ್ವತಂತ್ರವಾದ ಸಮ್ಮತಿಯು ಇದ್ದಿರಬೇಕು;

iii) ಔಪಚಾರಿಕತೆಗಳು ಪೂರ್ಣಗೊಳಿಸಲ್ಪಡಬೇಕು;

iv) ಆ ಸ್ವತ್ತು ದಾನ ಮಾಡಲ್ಪಡುವಂತಹದ್ದಾಗಿರಬೇಕು. ಮತ್ತು

v) ಉತ್ತರದಾನಿಗೆ ಮರಣ ಶಾಸನ ಮಾಡುವ ಹಕ್ಕು ಇದ್ದಿರಬೇಕು.

ಉತ್ತರದಾನಿಯ ಸಾಮರ್ಥ್ಯ (Capacity of the legator)

ಒಂದು ಮರಣ ಶಾಸನವನ್ನು ಮಾಡುವ ವ್ಯಕ್ತಿಯನ್ನು ಉತ್ತರದಾನಿಗೆ ಅಥವಾ ಮರಣಶಾಸಕ ಎಂಬುದಾಗಿ ಕರೆಯಲಾಗುತ್ತದೆ. ಆ ಉತ್ತರದಾನಿಗೆ ಒಂದು ಮರಣ ಶಾಸನ ಮಾಡುವ ಸಾಮರ್ಥ್ಯವು ಇದ್ದಿರಬೇಕು. ಚಿತ್ತಸ್ವಾಸ್ಥ್ಯವಿದ್ದು ವಯಸ್ಕ ವಯಸ್ಸಿಗೆ ಬಂದಿರುವ ಪ್ರತಿಯೊಬ್ಬ ಮುಸಲ್ಮಾನನಿಗೆ ಮರಣಶಾಸನವನ್ನು ಮಾಡುವ ಸಾಮರ್ಥ್ಯವು ಇದ್ದಿರುತ್ತದೆ.

ಆ ಮರಣ ಶಾಸಕನು ಆ ಮರಣ ಶಾಸನವನ್ನು ನಿರ್ಮಿಸುವ ಕಾಲದಲ್ಲಿ ಒಬ್ಬ ಮುಸಲ್ಮಾನನಾಗಿದ್ದಿರಬೇಕು. ಒಂದು ಮರಣ ಶಾಸನವನ್ನು ನಿಷ್ಪಾದಿಸುವ ಕಾಲದಲ್ಲಿ ಆ ಉತ್ತರದಾನಿಯು ಒಬ್ಬ ಮುಸಲ್ಮಾನನಾಗಿದ್ದರೆ ಮಾತ್ರ ಆ ಮರಣ ಶಾಸನವು ಮುಸ್ಲಿಮ್ ಮತೀಯ ಕಾನೂನಿನ ಉಪಬಂಧಗಳಿಂದ ವಿನಿಯಮಿತಗೊಳ್ಳುತ್ತದೆ. ಒಂದೊಮ್ಮೆ ಒಬ್ಬ ಮುಸಲ್ಮಾನನು ವಿಶೇಷ ವಿವಾಹಗಳ ಅಧಿನಿಯಮ, 1954 ಇದರ ಮೇರೆಗೆ ಒಂದು ವಿವಾಹದ ಕರಾರನ್ನು ಮಾಡಿಕೊಂಡಿರುವನೆಂದಾದರೆ ಅಲ್ಲಿ ಅವನಿಂದ ನಿಷ್ಪಾದಿಸಲ್ಪಡುವ ಒಂದು ಮರಣ ಶಾಸನವು ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 ಇದರ ಉಪಬಂಧಗಳಿಂದ ಶಾಸಿಸಲ್ಪಡುತ್ತದೆ. ಒಂದು ಮರಣ ಶಾಸನವು ಉತ್ತರ ದಾನಿಯ ಮರಣದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುತ್ತದೆ. ಅವನ ಮರಣಕ್ಕಿಂತ ಮೊದಲು ಇದೊಂದು ಕೇವಲ ಘೋಷಣೆಯಾಗಿರುತ್ತದೆ, ಮತ್ತು ಈ ಘೋಷಣೆಯು ಅವನ ಮರಣದ ಬಳಿಕ ಉತ್ತರಾದಾತನಿಗೆ ಅವನ ಸ್ವತ್ತು ಸಿಗುವದೆಂಬ ಬಗ್ಗೆ ಇದೊಂದು ಘೋಷಣೆಯಾಗಿರುತ್ತದೆ. ಒಬ್ಬ ವ್ಯಕ್ತಿಯು ಒಂದು ಮರಣ ಶಾಸನವನ್ನು ಮಾಡುವ ಕಾಲದಲ್ಲಿ ಒಬ್ಬ ಮುಸಲ್ಮಾನದಾಗಿದ್ದು ಆ ಬಳಿಕ ಅವನು ಇಸ್ಲಾಮ್ ಧರ್ಮವನ್ನು ಪರಿತ್ಯಜನೆ ಮಾಡಿ ಮರಣಕಾಲದಲ್ಲಿ ಅವನೊಬ್ಬ ಮುಸಲ್ಮಾನನಾಗಿರದೆ ಉಳಿದಿರುವಂತಹ ಪ್ರಕರಣಗಳಿರಬಹುದು, ಒಂದೊಮ್ಮೆ ಒಬ್ಬ ಮುಸಲ್ಮಾನನು ಒಂದು ಮರಣ ಶಾಸನವನ್ನು ಮಾಡಿ ಆದರೆ ಮರಣ ಕಾಲದಲ್ಲಿ ಅವನೊಬ್ಬ ಮುಸಲ್ಮಾನನಾಗಿರದಿದ್ದರೆ ಅಲ್ಲಿ ಹನಫೀ ಕಾನೂನಿನ ಪ್ರಕಾರ ಆ ಮರಣ ಶಾಸನವು ವಿಧ್ಯುಕ್ತವಾಗಿರುತ್ತದೆ. ಆದರೆ ಮಲ್ಲಿಕೀ ಕಾನೂನಿನ ಪ್ರಕಾರ ಆ ಮರಣ ಶಾಸನವು ಉಧ್ಯುಕ್ತವೆಂಬುದಾಗಿ ಎಣಿಯಲ್ಪಡಬೇಕಾದರೆ ಆ ಮರಣ ಶಾಸಕನ ಮರಣ ಕಾಲದಲ್ಲೂ ಸಹ ಮುಸಲ್ಮಾನನಾಗಿಯೇ ಇದ್ದಿರಬೇಕು. ಈ ರೀತಿಯಾಗಿ ಹನಫೀ ಕಾನೂನಿನ ಪ್ರಕಾರ ಧರ್ಮ ಪರಿತ್ಯಜನೆಯು ಒಂದು ಮರಣ ಶಾಸನವನ್ನು ಅಸಿಂಧುಗೊಳಿಸುವದಿಲ್ಲ. ಆದರೆ

ಮಲ್ಲಿಕೀ ಕಾನೂನಿನ ಪ್ರಕಾರ ಇಸ್ಲಾಮನ್ನು ಪರಿತ್ಯಜನೆ ಮಾಡಿದುದರಿಂದ ಆ ಮರಣ ಶಾಸನವು ಅಸಿಂಧುವಾಗುತ್ತದೆ,

ಒಂದು ಮರಣ ಶಾಸನವನ್ನು ನಿಷ್ಪಾದಿಸುವ ಕಾಲದಲ್ಲಿ ಆ ಮರಣ ಶಾಸಕನು ಚಿತ್ತಸ್ವಾಸ್ಥ್ಯವುಳ್ಳವನಾಗಿರಬೇಕು. ಒಬ್ಬ ಚಿತ್ತವಿಕಲ ವ್ಯಕ್ತಿಯಿಂದ ನಿಷ್ಪಾದಿಸಲ್ಪಟ್ಟ ಒಂದು ಮರಣ ಶಾಸನವು ಶೂನ್ಯವಾಗಿರುತ್ತದೆ. ಇಂಗ್ಲೀಷ್ ಕಾನೂನಿನ ಪ್ರಕಾರ ಒಬ್ಬ ಚಿತ್ತವಿಕಲ ವ್ಯಕ್ತಿಯು ಹುಚ್ಚು ಇಳಿದ ಹೊತ್ತಿನಲ್ಲಿ ಮಾಡಿರುವ ಒಂದು ಮರಣ ಶಾಸನವು ವಿಧ್ಯುಕ್ತವಾಗಿರುತ್ತದೆ. ಆದರೆ ಈ ವಿಷಯದ ಬಗ್ಗೆ ಮುಸ್ಲಿಮ್ ಕಾನೂನಿನ ಸ್ಥಿತಿಯು ಭಿನ್ನವಾಗಿದೆ. ಮುಸ್ಲಿಮ್ ಕಾನೂನಿನ ಪ್ರಕಾರ ಮರಣ ಶಾಸಕನು ಒಬ್ಬ ಪರಿಪೂರ್ಣವಾದ ಚಿತ್ತಸ್ವಾಸ್ಥ್ಯದಿಂದ ಕೂಡಿರಬೇಕು. ಹಾಗೆಂದರೆ ಮರಣ ಶಾಸಕನು ಆ ಮರಣ ಶಾಸನವನ್ನು ಮಾಡುವ ಕಾಲದಲ್ಲಷ್ಟೇ ಅಲ್ಲ ಇತರ ಕಾಲದಲ್ಲೂ ಸಹ ತನ್ನ ಮರಣ ಶಾಸನದ ಪರಿಣಾಮವನ್ನು ತಿಳಿದು ಕೊಳ್ಳಲು ಸಮರ್ಥನಾಗಿರಬೇಕು. ಆದುದರಿಂದ ಮುಸ್ಲಿಮ ಕಾನೂನಿನ ಪ್ರಕಾರ ಒಬ್ಬ ಚಿತ್ತವಿಕಲ ವ್ಯಕ್ತಿಯು ಚಿತ್ತಸ್ವಾಸ್ಥ್ಯದ ಕಾಲದಲ್ಲಿ ನಿಷ್ಪಾದಿಸಿದ ಒಂದು ಮರಣ ಶಾಸನವು ವಿಧ್ಯುಕ್ತ ಎಂಬುದಾಗಿ ಎಣಿಸಲ್ಪಡಬೇಕಾದರೆ ಅವನು ಆ ಮರಣಶಾಸನದ ನಿಷ್ಪಾದನೆಯ ದಿನಾಂಕದಿಂದ ಕನಿಷ್ಠಪಕ್ಷ 6 ತಿಂಗಳುಗಳ ಕಾಲಾವಧಿಗೆ ಚಿತ್ತಸ್ವಾಸ್ಥ್ಯನಾಗಿರಬೇಕಾಗುತ್ತದೆ.

ಮರಣಶಾಸಕನು ಒಬ್ಬ ಪ್ರಾಯಸ್ಥ ವಯಸ್ಕನಾಗಿರಬೇಕು. ಆ ಮರಣ ಶಾಸನವನ್ನು ನಿಷ್ಪಾದಿಸುವ ಕಾಲದಲ್ಲಿ ಅವನು ವಯಸ್ಕತನದ ವಯಸ್ಸನ್ನು ಮುಟ್ಟಿರಬೇಕು. ಒಂದು ಮರಣಶಾಸನವನ್ನು ಮಾಡುವ ಉದ್ದೇಶಗಳಿಗಾಗಿ ವಯಸ್ಕತನದ ವಯಸ್ಸು ಭಾರತೀಯ ವಯಸ್ಕತನ ಅಧಿನಿಯಮ, 1875 (Indian majority Act, 18·5) ಇದರ ಉಪಬಂಧಗಳಿಂದ ಶಾಸಿತವಾಗಿದೆ, ಮತ್ತು ಇದರ ಪ್ರಕಾರ ಒಬ್ಬ ವ್ಯಕ್ತಿಯು ತನ್ನ 18 ರ ವಯಸ್ಸನ್ನು ದಾಟಿದಾಗ ಅವನು ವಯಸ್ಕತನವನ್ನು ಮುಟ್ಟುವನು· ಆದರೆ ಒಂದೊಮ್ಮೆ ಆ ವ್ಯಕ್ತಿಯು ಸಂರಕ್ಷಿತರ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿದ್ದರೆ ಅಲ್ಲಿ ಅವನು 21 ರ ವಯಸ್ಸನ್ನು ದಾಟಿದಾಗ ಮಾತ್ರ ವಯಸ್ಕನೆಂಬುದಾಗಿ ಎಣಿಸಲ್ಪಡುವನು. ಈ ರೀತಿಯಾಗಿ, ಒಬ್ಬ ಮರಣಶಾಸಕನು 18ರ ವಯಸ್ಸನ್ನು ದಾಟಿರಬೇಕು. ಅಥವಾ ಯಥಾಪ್ರಕಾರವಾಗಿ 21ರ ವಯಸ್ಸನ್ನು ದಾಟಿರಬೇಕು. ಆಗ ಮಾತ್ರ ಅವನು ಒಂದು ವಿಧ್ಯುಕ್ತವಾದ ಮರಣಶಾಸನವನ್ನು ನಿಷ್ಪಾದಿಸಬಹುದು. ಒಬ್ಬ ಅಲ್ಪವಯಿಯಿಂದ ನಿಷ್ಪಾದಿಸಲ್ಪಟ್ಟ ಒಂದು ಮರಣ ಶಾಸನವು ಶೂನ್ಯವಾಗಿರುತ್ತದೆ. ಆದರೆ ಒಂದೊಮ್ಮೆ ಒಬ್ಬ ವ್ಯಕ್ತಿಯು ತನ್ನ ಅಲ್ಪವಯದ ಕಾಲಾವಧಿಯಲ್ಲಿ ಒಂದು ಮರಣ ಶಾಸನವನ್ನು ಮಾಡಿ ಪ್ರಾಯಸ್ಥ ವಯಸ್ಸಿಗೆ ಬಂದಾಗ ಅದಕ್ಕೆ ಅನುಸಮರ್ಥನೆ ಕೊಟ್ಟರೆ ಅದೊಂದು ವಿಧ್ಯುಕ್ತವಾದ ಮರಣಶಾಸನ ಎಂಬುದಾಗಿ ಎಣಿಸಲ್ಪಡುತ್ತದೆ.

ಉತ್ತರದಾನಿಯಿಂದ ಆತ್ಮಹತ್ಯೆಯ ಪ್ರಯತ್ನ (Suicide Attempt by legator)

ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಒಬ್ಬ ವ್ಯಕ್ತಿಯು ಒಂದು ಆತ್ಮ ಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುವನಾದರೆ ಮತ್ತು ಆ ಬಳಿಕ ಯಾವುದಾದರೊಂದು ಮರಣಶಾಸನವನ್ನು ಮಾಡಿದರೆ ಆ ಮರಣಶಾಸನವು ಶೂನ್ಯವಾಗಿರುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಒಬ್ಬ ವ್ಯಕ್ತಿಯು ಗಂಭೀರವಾಗಿ ತನ್ನನ್ನು ತಾನು ಗಾಯಗೊಳಿಸುವನು ಅಥವಾ ತನ್ನ ಮರಣಕ್ಕಾಗಿ ವಿಷಸೇವನೆ ಮಾಡುವನು ಮತ್ತು ಆ ಬಳಿಕ ಒಂದು ಮರಣಶಾಸನವನ್ನು ಮಾಡಿದರೆ ಅದು ಶೂನ್ಯವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಒಬ್ಬ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಅವನಿಗೆ ಬುದ್ಧಿಸ್ಥಿಮಿತತೆ ಇರುವುದಿಲ್ಲ. ಅವನು ಅಂತಹ ಒಂದು ಪ್ರಯತ್ನವು ಮಾಡತೊಡಗಿದ ಬಳಿಕ ಅವನ ಮಾನಸಿಕ ಸಾಮರ್ಥ್ಯವು ಸಂಪೂರ್ಣವಾಗಿ ನಾಶವಾಗುತ್ತದೆ. ಆದರೆ ಸುನ್ನೀ ಕಾನೂನಿನ ಪ್ರಕಾರ ಈ ಮನಃಸ್ಥಿತಿಯಲ್ಲಿ ಮಾಡಲ್ಪಟ್ಟ ಒಂದು ಮರಣ ಶಾಸನವೂ ಸಹ ವಿಧ್ಯುಕ್ತವಾಗಿರುತ್ತದೆ.

ಒಂದೊಮ್ಮೆ ಒಬ್ಬ ವ್ಯಕ್ತಿಯು ಒಂದು ಮರಣಶಾಸನವನ್ನು ನಿಷ್ಪಾದನೆಗೊಳಿಸಿದ ಬಳಿಕ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆ ಅಲ್ಲಿ ಸುನ್ನೀ ಹಾಗೂ ಶಿಯಾ ಕಾನೂನಿನ ಪ್ರಕಾರ ಆ ಮರಣಶಾಸನವು ವಿಧ್ಯುಕ್ತವಾಗಿರುತ್ತದೆ.

ಉತ್ತರಾದಾತನ ಸಾಮರ್ಥ್ಯ (Capacity of the legatee)

ಯಾವ ವ್ಯಕ್ತಿಯ ಪರವಾಗಿ ಒಂದು ಮರಣಶಾಸನವು ಮಾಡಲ್ಪಡುತ್ತದೊ ಆ ವ್ಯಕ್ತಿಯನ್ನು ಒಬ್ಬ ಉತ್ತರಾದಾತನೆಂಬುದಾಗಿ ಕರೆಯಲಾಗುತ್ತದೆ. ಅಸ್ತಿತ್ವದಲ್ಲಿರುವ ಯಾವನೇ ಒಬ್ಬ ವ್ಯಕ್ತಿಯು ಉತ್ತರಾದಾತನಾಗುವ ಸಾಮರ್ಥ್ಯವನ್ನು ಹೊಂದಿರುವನು. ಒಬ್ಬ ಉತ್ತರಾದಾತನು ಒಬ್ಬ ಮುಸಲ್ಮಾನನಾಗಿರಬಹುದು ಅಥವಾ ಮುಸಲ್ಮಾನೇತರ, ಪ್ರಾಯಸ್ಥ ಅಥವಾ ಅಲ್ಪವಯಿ, ಚಿತ್ತಸ್ವಾಸ್ಥ್ಯವುಳ್ಳವ ಅಥವಾ ಚಿತ್ತವಿಕಲನಾಗಿರಬಹುದು. ಮರಣ ಶಾಸಕನ ಮರಣ ಕಾಲದಲ್ಲಿ ಅಸ್ತಿತ್ವದಲ್ಲಿದ್ದಿರುವ ಯಾವನೇ ಒಬ್ಬ ವ್ಯಕ್ತಿಯು ಒಬ್ಬ ಉತ್ತರಾದಾತನಾಗಲು ಸಮರ್ಥನಾಗಿರುವನು, ಉತ್ತರಾದಾತನಲ್ಲಿರಬೇಕಾಗುವ ಏಕಮೇವ ಅರ್ಹತೆಯು ಯಾವುದೆಂದರೆ ಆ ಮರಣಶಾಸನವು ಕಾರ್ಯಾಚರಣೆಗೆ ಬರುವ ಕಾಲದಲ್ಲಿ ಅವನು ಜೀವಿತನಾಗಿರಬೇಕು. ಒಬ್ಬ ಮುಸಲ್ಮಾನನು ಯಾವನೇ ಒಬ್ಬ ವ್ಯಕ್ತಿಯ ಪರವಾಗಿ ಕಾನೂನು ಬದ್ಧವಾಗಿ ಒಂದು ಮರಣ ಶಾಸನವನ್ನು ಮಾಡಬಹುದು ಮತ್ತು ಅಲ್ಲಿ ಉತ್ತರಾದಾತನ ಧರ್ಮ, ವಯಸ್ಸು ಮತ್ತು ಮನಃಸ್ಥಿತಿಯು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಒಬ್ಬ ನ್ಯಾಯಿಕ ವ್ಯಕ್ತಿಯೂ ಸಹ ಒಬ್ಬ ಸಕ್ಷಮ ಉತ್ತರಾದಾತನಾಗಿರುವನು. ಉದಾಹರಣೆಗಾಗಿ, ಒಂದು ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಒಂದು ಸಂಸ್ಥೆಯು ಒಂದು ಸಕ್ಷಮ ಉತ್ತರಾದಾತ

ವಾಗಿರುತ್ತದೆ. ಮತ್ತು ಆದರ ಪರವಾಗಿ ಮಾಡಲ್ಪಟ್ಟ ಒಂದು ಉತ್ತರದಾನವು ಕಾನೂನುಬದ್ಧವಾಗಿರುತ್ತದೆ. ಆದರೆ, ಮರಣಶಾಸಕನ ಮರಣಕಾಲದಲ್ಲಿ ಅಸ್ತಿತ್ವದಲ್ಲಿದ್ದಿರದ ಒಬ್ಬ ವ್ಯಕ್ತಿಯು ಉತ್ತರಾದಾತನಾಗಲು ಸಕ್ಷಮನಲ್ಲ.

ತಾಯಿಯ ಗರ್ಭದಲ್ಲಿರುವ ಒಂದು ಮಗು
(A Child in Mother's Womb)

ತಾಯಿಯ ಗರ್ಭದಲ್ಲಿರುವ ಒಂದು ಮಗುವನ್ನು ಅಸ್ತಿತ್ವದಲ್ಲಿರುವ ಒಬ್ಬ ಜೀವಿತ ವ್ಯಕ್ತಿಯೆಂಬುದಾಗಿ ಎಣಿಸಲಾಗುತ್ತದೆ. ಆದುದರಿಂದ ತಾಯಿಯ ಗರ್ಭದಲ್ಲಿರುವ ಒಂದು ಮಗುವು ಒಬ್ಬ ಸಕ್ಷಮ ಉತ್ತರಾದಾತನಾಗಿರುವನು. ಆದರ ಪರವಾಗಿ ಮಾಡಲಾದ ಒಂದು ಮರಣಶಾಸನವು ವಿಧ್ಯುಕ್ತವಾಗಿರುತ್ತದೆ. ಆದರೆ ಅದು ಈ ಕೆಳಗಿನ ಎರಡು ಷರತ್ತುಗಳಿಗೆ ಬಾಧ್ಯವಾಗಿರುತ್ತದೆ.

i) ಮೊದಲನೆಯದಾಗಿ ಅಂತಹ ಒಂದು ಮಗುವು ಆ ಮರಣಶಾಸಕನ ಮರಣ ಕಾಲದಲ್ಲಿ ತಾಯಿಯ ಗರ್ಭದೊಳಗೆ ಇದ್ದಿರಬೇಕು.

ii) ಎರಡನೆಯದಾಗಿ, ಆ ಮಗುವು ಆ ಮರಣ ಶಾಸಕನ ಮರಣದ ದಿನಾಂಕದಿಂದ ಆರು ತಿಂಗಳುಗಳ ಕಾಲಾವಧಿಯೊಳಗೆ ಜನಿಸಿರಬೇಕು.

ಆದರೆ ಶಿಯಾ ಕಾನೂನಿನ ಪ್ರಕಾರ ತಾಯಿಯ ಗರ್ಭದೊಳಗಿರುವ ಒಂದು ಮಗುವಿನ ಪರವಾಗಿ ಮಾಡಲಾದ ಒಂದು ಮರಣಶಾಸನವು ಆ ಮರಣಶಾಸಕನ ಮರಣದ ದಿನಾಂಕದಿಂದ 6 ತಿಂಗಳುಗಳ ಬಳಿಕ ಆ ಮಗುವು ಜನಿಸಿದರೂ ಸಹ ಆ ಮರಣಶಾಸನವು ವಿಧ್ಯುಕ್ತವಾಗಿರುತ್ತದೆ.

ಉತ್ತರದಾನಿಯ ಕೊಲೆಗಾರ (Murderer of legator)

ಒಬ್ಬ ಮರಣ ಶಾಸಕನ ಮರಣಕ್ಕೆ ಕಾರಣನಾಗಿರುವ ಒಬ್ಬ ವ್ಯಕ್ತಿಯು ಒಬ್ಬ ಸಕ್ಷಮ ಉತ್ತರಾದಾತನಾಗುವಂತಿಲ್ಲ. ಒಂದೊಮ್ಮೆ ಒಬ್ಬ ಉತ್ತರಾದಾತನು ಉತ್ತರದಾನಿಯ ಮರಣವನ್ನು ಉದ್ದೇಶಪೂರ್ವಕವಾಗಿ ಅಥವಾ ನಿರುದ್ದೇಶದಿಂದಾಗಿ ಮಾಡಿದರೆ ಅಲ್ಲಿ ಆ ಮರಣ ಶಾಸನದ ಪ್ರಕಾರ ಅವನು ಯಾವತ್ತೂ ಸ್ವತ್ತನ್ನು ಪಡೆಯಲು ನಿರ್ಯೋಗ್ಯನಾಗುವನು. ಇಂತಹ ಒಂದು ನಿಯಮದ ಕಾರಣವು ತುಂಬಾ ಸರಳವಾಗಿದೆ. ಒಂದು ಮರಣ ಶಾಸನವು ಮರಣ ಶಾಸಕನ ಮರಣದ ಬಳಿಕ ಕಾರ್ಯಾಚರಣೆಗೆ ಬರುತ್ತದೆ, ಮತ್ತು ಒಬ್ಬ ಅಭಿಲಾಷೆಯುಳ್ಳ ಮತ್ತು ಸಹನೆಯಿಲ್ಲದ ಉತ್ತರಾದಾತನು ಆ ಸ್ವತ್ತುಗಳನ್ನು ತಕ್ಷಣ ಪಡೆಯುವ ಉದ್ದೇಶದಿಂದ ಮರಣ ಶಾಸಕನ ಕೊಲೆಮಾಡಬಹುದು. ಆದುದರಿಂದ ಒಬ್ಬ ಅಪರಾಧಿಗೆ ತನ್ನ ಅಪರಾಧದ ಪ್ರಯೋಜನವು ಸಿಗಬಾರದೆಂದು ಈ ನಿಯಮವು ಮಾಡಲ್ಪಟ್ಟಿದೆ.

ಆದರೆ ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಉತ್ತರಾದಾತನು ನಿರ್ಲಕ್ಷದಿಂದ ಅಥವಾ ಆಕಸ್ಮಿಕವಾಗಿ ಉತ್ತರದಾನಿಯ ಮರಣಕ್ಕೆ ಕಾರಣನಾಗಿದ್ದರೆ ಅಲ್ಲಿ

ಆವನು ಆ ಮರಣಶಾಸನದಿಂದ ಉತ್ತರದಾನವನ್ನು ಪಡೆಯಲು ಅನರ್ಹನಾಗು ವುದಿಲ್ಲ ಮತ್ತು ಅವನ ಪರವಾಗಿ ಮಾಡಲ್ಪಟ್ಟ ಮರಣಶಾಸನವು ವಿಧ್ಯುಕ್ತವಾಗಿಯೇ ಉಳಿಯುತ್ತವೆ.

ಜಂಟಿ ಉತ್ತರಾದಾತರು (Joint Legatees)

ಒಂದು ಉತ್ತರದಾನವು ಇಬ್ಬರು ಅಥವಾ ಹೆಚ್ಚಿನ ಉತ್ತರಾದಾತರಿಗೆ ಜಂಟಿ ಯಾಗಿ ಮಾಡಲ್ಪಡಬಹುದು. ಒಂದೊಮ್ಮೆ ಒಂದು ಮರಣಶಾಸನವು ಅನೇಕ ಉತ್ತರಾದಾತರಿಗೆ ಜಂಟಿಯಾಗಿ ಮಾಡಲ್ಪಟ್ಟಿದ್ದು ಮತ್ತು ಅವರೊಳಗಿನ ಪಾಲನ್ನು ನಿರ್ದಿಷ್ಟಗೊಳಿಸಿಲ್ಲವೆಂದಾದರೆ ಅಲ್ಲಿ ಆ ಎಲ್ಲ ಉತ್ತರಾದಾತರೊಳಗೆ ಆ ಸ್ವತ್ತನ್ನು ಸಮಾನವಾಗಿ ವಿಭಜಿಸಲಾಗುತ್ತದೆ. ಒಂದೊಮ್ಮೆ ಒಂದು ಮರಣಶಾಸನವು ಒಂದು ನಿರ್ದಿಷ್ಟವರ್ಗದ ವ್ಯಕ್ತಿಗಳ ಪರವಾಗಿ ಮಾಡಲ್ಪಟ್ಟಿದ್ದರೆ ಅಲ್ಲಿ ಆ ವರ್ಗದ ವನನ್ನು ಒಬ್ಬ ಏಕಲ ಉತ್ತರಾದಾತನೆಂದು ಎಣಿಸಲಾಗುತ್ತದೆ ಮತ್ತು ಆ ವರ್ಗದ ಪ್ರತಿಯೊಬ್ಬ ವ್ಯಕ್ತಿಯು ಸಮಾನವಾದ ಪಾಲನ್ನು ಪಡೆಯುವನು.

ಒಂದೊಮ್ಮೆ ಉತ್ತರಾದಾತನು ಉತ್ತರದಾನಿಗಿಂತ ಮೊದಲು ಮೃತನಾದರೆ (legatee dies before legator's death)

ಒಬ್ಬ ಉತ್ತರಾದಾತನು ಒಂದು ಮರಣಶಾಸನದಿಂದ ಕೊಡಲ್ಪಟ್ಟ ಸ್ವತ್ತನ್ನು ಪಡೆಯಬೇಕಾದರೆ ಮರಣ ಶಾಸಕನ ಮರಣ ಕಾಲದಲ್ಲಿ ಅವನು ಅಸ್ತಿತ್ವದಲ್ಲಿದ್ದಿರ ಬೇಕೆಂಬುದನ್ನು ನಾವು ಈಗಾಗಲೇ ನೋಡಿರುವೆವು. ಒಂದೊಮ್ಮೆ ಉತ್ತರಾದಾತನು ಉತ್ತರದಾನಿಗಿಂತ ಮೊದಲು ಮೃತನಾದರೆ ಆ ಮರಣಶಾಸನವು ವಿಫಲಗೊಳ್ಳುತ್ತದೆ ಇದನ್ನು ಒಂದು ಉತ್ತರದಾನದ ಕಾಲಾತೀತವಾಗುವಿಕೆಯೆಂದು ಕರೆಯಲಾಗುತ್ತದೆ, ಒಂದೊಮ್ಮೆ ಒಂದು ಮರಣಶಾಸನವು ಉತ್ತರಾದಾತನು ಉತ್ತರದಾನಿಗೆ ಉತ್ತರ ಜೀವಿಯಾಗುವುದರ ಕಾರಣದಿಂದಾಗಿ ಕಾಲಾತೀತವಾಗಿದ್ದರೆ ಅಲ್ಲಿ ಆ ಮರಣಶಾಸನದ ಮೇರೆಗೆ ಕೊಡಲ್ಪಟ್ಟ ಆ ಸ್ವತ್ತು ಉತ್ತರಾದಾತನ ವಾರಸುದಾರರಿಗೆ ಸೇರುವುದಿಲ್ಲ. ಇಲ್ಲಿ ಆ ಸ್ವತ್ತು ಉತ್ತರದಾನಿಯಲ್ಲೇ ಉಳಿಯುತ್ತದೆ ಮತ್ತು ಇಲ್ಲಿ ಯಾವುದೇ ಒಂದು ಮರಣಶಾಸನವು ಮಾಡಲ್ಪಟ್ಟಿಲ್ಲವೆಂದು ಎಣಿಸಲಾಗುತ್ತದೆ. ಇಂತಹ ಒಂದು ಪ್ರಸಂಗದಲ್ಲಿ ಮರಣಶಾಸಕನು ಆ ಮರಣಶಾಸನವನ್ನು ರದ್ದುಗೊಳಿಸುವ ಅವಶ್ಯಕತೆ ಯಿಲ್ಲ. ಆ ಮರಣಶಾಸನವು ರದ್ದುಗೊಂಡಿದೆಯೆಂದು ಎಣಿಸಲಾಗುತ್ತದೆ ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ಉತ್ತರಾದಾತರ ಪರವಾಗಿ ಒಂದು ಜಂಟಿ ಮರಣಶಾಸನವು ಮಾಡಲ್ಪಟ್ಟಿದ್ದು ಆ ಮರಣಶಾಸಕನಿಗಿಂತ ಮೊದಲು ಯಾವನಾದರೊಬ್ಬನು ಮೃತ ನಾದರೆ ಅಲ್ಲಿ ಉತ್ತರ ಜೀವಿಯಾಗಿರುವ ಇತರ ಉತ್ತರಾದಾತರಿಗೆ ಆ ಇಡೀ ಸ್ವತ್ತನ್ನು ಕೊಡಲಾಗುತ್ತದೆ. ಆದರೆ ಒಂದೊಮ್ಮೆ ಅವರ ಪಾಲುಗಳು ನಿರ್ದಿಷ್ಟಗೊಳಿಸಲ್ಪಟ್ಟಿ ದ್ದರೆ. ಅಲ್ಲಿ ಆ ಉತ್ತರಜೀವಿ ಉತ್ತರಾದಾತರು ಅವರ ನಿರ್ದಿಷ್ಟವಾದ ಪಾಲು

ಗಳನ್ನಷ್ಟೇ ಪಡೆಯುವರು ಮತ್ತು ಪೂರ್ವಮೃತ ಉತ್ತರಾದಾತನ ಪಾಲು ಮರಣ ಶಾಸಕನ ವಾರಸುದಾರರಿಗೆ ಸೇರುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಉತ್ತರಾದಾತನು ಉತ್ತರದಾನಿಗಿಂತ ಮೊದಲು ಮೃತನಾದರೆ ಅಲ್ಲಿ ಆ ಮರಣ ಶಾಸನವು ಕಾಲಾತೀತವಾಗುವದಿಲ್ಲ. ಅಂತಹ ಪ್ರಕರಣದಲ್ಲಿ ಆ ಮರಣ ಶಾಸನದಲ್ಲಿ ಹೇಳಲ್ಪಟ್ಟ ಆ ಸ್ವತ್ತು ಉತ್ತರಾದಾತನ ವಾರಸುದಾರರಿಗೆ ಸೇರುತ್ತದೆ. ಒಂದೊಮ್ಮೆ ಉತ್ತರಾದಾತರಿಗೆ ವಾರಸುದಾರರಿಲ್ಲ ವೆಂದಾದರೆ ಅಲ್ಲಿ ಆ ಮರಣ ಶಾಸನವು ಕಾಲಾತೀತವಾಗುತ್ತದೆ ಮತ್ತು ಆ ಸ್ವತ್ತು ಮರಣಶಾಸಕನಲ್ಲೇ ಉಳಿಯುತ್ತದೆ. ಆದರೆ ಒಬ್ಬ ಮರಣಶಾಸಕನಿಗೆ ತನ್ನ ಮರಣ ಶಾಸನವನ್ನು ರದ್ದುಗೊಳಿಸುವ ಒಂದು ಹಕ್ಕು ಇದ್ದುದರಿಂದ ಒಂದೊಮ್ಮೆ ಉತ್ತರಾ ದಾತನು ಮೃತನಾದರೆ ಆ ಮರಣ ಶಾಸಕನು ಆ ಮರಣ ಶಾಸನವನ್ನು ರದ್ದುಗೊಳಿಸ ಬಹುದು.

ಸ್ವತಂತ್ರ ಸಮ್ಮತಿ (Free Consent)

ಉತ್ತರದಾನಿಯು ನಿಷ್ಪಾದಿಸುತ್ತಿರುವ ಆ ಮರಣ ಶಾಸನವು ಅವನ ಸ್ವತಂತ್ರ ಸಮ್ಮತಿಯಿಂದ ನಿಷ್ಪಾದಿಸಲ್ಪಟ್ಟಿರಬೇಕು. ಒಂದೊಮ್ಮೆ ಒಂದು ಮರಣ ಶಾಸನವು ಮೋಸ ಅಥವಾ ಅನುಚಿತ ಪ್ರಭಾವ ಅಥವಾ ಒತ್ತಡ ಇತ್ಯಾದಿಗಳ ಮೇರೆಗೆ ನಿಷ್ಪಾದಿಸಲ್ಪಟ್ಟಿದೆಂಬುದಾಗಿ ಸಾಬೀತಾದರೆ ಆ ಮರಣ ಶಾಸನವು ಶೂನ್ಯವಾಗುತ್ತದೆ ಮತ್ತು ಉತ್ತರಾದಾತನು ಆ ಮರಣಶಾಸನದ ಪ್ರಕಾರ ಯಾವತ್ತೂ ಸ್ವತ್ತನ್ನು ಪಡೆಯುವಂತಿಲ್ಲ. ಇಲ್ಲಿರುವ ಸಾಮಾನ್ಯ ಪೂರ್ವಭಾವನೆಯು ಯಾವುದೆಂದರೆ ಒಬ್ಬ ಚಿತ್ತಸ್ವಾಸ್ಥ್ಯವುಳ್ಳ ವ್ಯಕ್ತಿಯು ಒಂದು ಮರಣಶಾಸನ ಮಾಡಲು ಸಮರ್ಥನಾಗಿದ್ದು ತನ್ನ ಸ್ವತಂತ್ರ ಸಮ್ಮತಿಯಿಂದ ಆ ಮರಣಶಾಸನವನ್ನು ನಿಷ್ಪಾದಿಸುವನು ಮತ್ತು ಆ ವ್ಯವಹಾರವನು ಅವನು ಚೆನ್ನಾಗಿ ಅರ್ಥಮಾಡಿಕೊಂಡಿರುವನು ಎಂಬುದಾಗಿರು ತ್ತದೆ. ಆದರೆ ಒಂದೊಮ್ಮೆ ಮರಣ ಶಾಸನ ಮಾಡುವ ವ್ಯಕ್ತಿಯು ಒಬ್ಬ ಪರ್ದಾನಾಶಿಲ್ ನಾರಿಯಾಗಿದ್ದರೆ ಅಲ್ಲಿ ಈ ಸಾಮಾನ್ಯ ಪೂರ್ವಭಾವನೆಯು ಅನ್ವಯಂ ವಾಗುವುದಿಲ್ಲ. ಮನೆಯೊಳಗೆ ಇದ್ದು ಹೊರಬಾರದಂತಹ ಒಬ್ಬ ನಾರಿಯನ್ನು ಒಬ್ಬ ಪರ್ದಾನಾಶಿಲ್ ನಾರಿಯೆಂಬುದಾಗಿ ಕರೆಯಲಾಗುತ್ತದೆ. ಇಂತಹ ಒಬ್ಬ ನಾರಿಗೆ ಸ್ವತ್ತುಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ಅರ್ಥಮಾಡಿಕೊಳ್ಳಲಾಗುವದಿಲ್ಲ ಮತ್ತು ಅವಳು ಇತರರಿಂದ ಸುಲಭವಾಗಿ ಪ್ರಭಾವಿತಳಾಗಬಹುದು. ಇಂತಹ ಅಶಿಕ್ಷಿತ ನಾರಿಯರಿಗೆ ಕಾನೂನು ರಕ್ಷಣೆಯನ್ನು ಕೊಟ್ಟಿದೆ. ಆದುದರಿಂದ ಒಬ್ಬ ಪರ್ದಾನಾಶಿಲ್ ನಾರಿಯು ಒಂದು ಮರಣ ಶಾಸನವನ್ನು ನಿಷ್ಪಾದನೆಗೊಳಿಸಿದರೆ

ಅಲ್ಲಿ ಆಕೆಯು ತನ್ನ ಸ್ವತಂತ್ರ ಸಮ್ಮತಿಯಿಂದ ಅದನ್ನು ನಿಷ್ಪಾದನೆಗೊಳಿಸಿರುವಳು ಮತ್ತು ಆವಳ ಮೇಲೆ ಯಾವತ್ತೂ ಅನುಚಿತ ಪ್ರಭಾವವು ಬೀರಲ್ಪಟ್ಟಿಲ್ಲವೆಂಬುದಾಗಿ ಆ ಉತ್ತರಾದಾತನು ಸ್ವತಃ ಸಾಬೀತುಪಡಿಸಿ ತೋರಿಸಬೇಕಾಗುತ್ತದೆ.

ಉತ್ತರಾದಾತನ ಸಮ್ಮತಿ (Consent of legatee)

ಒಂದು ವಿಧ್ಯುಕ್ತವಾದ ಮರಣ ಶಾಸನದಲ್ಲಿ ಉತ್ತರಾದಾತನ ಸಮ್ಮತಿಯೂ ಅವಶ್ಯಕವಾಗಿರುತ್ತದೆ. ಮರಣ ಶಾಸಕನ ಮರಣದ ಬಳಿಕ ಉತ್ತರಾದಾತನು ಆ ಮರಣ ಶಾಸನದ ಪ್ರಕಾರ ಆ ಸ್ವತ್ತನ್ನು ತೆಗೆದುಕೊಳ್ಳುವ ಬಗ್ಗೆ ತನ್ನ ಸಮ್ಮತಿಯನ್ನು ಕೊಡಬೇಕಾಗುತ್ತದೆ. ಈ ಸಮ್ಮತಿಯು ವ್ಯಕ್ತವಾಗಿರಬಹುದು, ಅಥವಾ ಅವ್ಯಕ್ತ. ಒಂದೊಮ್ಮೆ ಉತ್ತರಾದಾತನು ತನಗೆ ಮರಣಶಾಸನದ ಪ್ರಕಾರ ಕೊಡಲಾದ ಸ್ವತ್ತನ್ನು ಸ್ವೀಕರಿಸುವ ಬಗ್ಗೆ ತನ್ನ ಸಮ್ಮತಿಯನ್ನು ಕೊಡದಿದ್ದರೆ ಅಲ್ಲಿ ಆ ಸ್ವತ್ತಿನ ಬಗ್ಗೆ ಅವನ ಹಕ್ಕು ಪೂರ್ಣಗೊಳ್ಳುವುದಿಲ್ಲ. ಒಬ್ಬ ಉತ್ತರಾದಾತನು ಉತ್ತರದಾನಿಗೆ ಉತ್ತರ ಜೀವಿಯಾಗಿದ್ದು ಮತ್ತು ಆ ಮರಣ ಶಾಸನಕ್ಕೆ ತನ್ನ ಸಮ್ಮತಿಯನ್ನು ಅಥವಾ ನಿರಾಕರಣೆಯನ್ನು ಕೊಡದೆ ಮೃತನಾದರೆ ಅಲ್ಲಿ ಅವನು ಆ ಮರಣಶಾಸನಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿರುವನೆಂಬುದಾಗಿ ಎಣಿಸಲ್ಪಡುವನು ಮತ್ತು ಆ ಮರಣಶಾಸನದಲ್ಲಿ ಹೇಳಲಾದ ಸ್ವತ್ತು ತನ್ನಿಂದ ತಾನಾಗಿಯೇ ಆ ಉತ್ತರಾದಾತನ ವಾರಸುದಾರರಿಗೆ ಸೇರುತ್ತದೆ. ಆದರೆ ಶಿಯಾ ಕಾನೂನಿನ ಮೇರೆಗೆ ಒಂದೊಮ್ಮೆ ಒಬ್ಬ ಉತ್ತರಾದಾತನು ಮರಣ ಶಾಸನದ ಮೇರೆಗೆ ತನಗೆ ಕೊಡಲ್ಪಟ್ಟ ಸ್ವತ್ತಿನ ಬಗ್ಗೆ ತನ್ನ ಸಮ್ಮತಿ ಅಥವಾ ಅಸಮ್ಮತಿ ಕೊಡದೆ ಮೃತನಾದರೆ ಅಲ್ಲಿ ಆ ಉತ್ತರಾದಾತನ ವಾರಸುದಾರರು ಆ ಸ್ವತ್ತನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಹಕ್ಕುದಾರರಾಗಿರುವರು. ಒಂದು ಪ್ರಯೋಜಕ ಹಿತ ಸಂಬಂಧವನ್ನೂ ಸಹ ಒಬ್ಬ ವ್ಯಕ್ತಿಯ ಇಚ್ಛೆಗಳಿಗೆ ವಿರೋಧವಾಗಿ ಅವನಿಗೆ ಕೊಡುವಂತಿಲ್ಲ. ಒಂದು ವಾರಸು ಪಡೆಯಲಾದ ಸ್ವತ್ತಿನ ಹೊರತಾಗಿ ಒಬ್ಬ ವ್ಯಕ್ತಿಯು ತನ್ನ ವ್ಯಕ್ತ ಅಥವಾ ಅವ್ಯಕ್ತ ಸಮ್ಮತಿಯನ್ನು ಕೊಡದೆ ಯಾವುದೆ ಒಂದು ಸ್ವತ್ತಿನ ಸ್ವಾಮಿತ್ವವನ್ನು ಪಡೆಯುವಂತಿಲ್ಲ.

ಔಪಚಾರಿಕತೆಗಳು (Formalities)

ಒಂದು ಮರಣ ಶಾಸನವನ್ನು ವಿಧ್ಯುಕ್ತಗೊಳಿಸುವ ಬಗ್ಗೆ ಮುಸ್ಲಿಮ್ ಕಾನೂನು ಯಾವತ್ತೂ ವಿಶೇಷವಾದ ಔಪಚಾರಿಕತೆಯನ್ನು ಉಪಬಂಧಿಸುವುದಿಲ್ಲ. ಇಲ್ಲಿ ಅವಶ್ಯಕವಾದ ಏಕಮೇವ ಷರತ್ತೆಂದರೆ ಮರಣ ಶಾಸಕನು ತನ್ನ ಮರಣದ ಬಳಿಕ ತನ್ನ ಸ್ವತ್ತನ್ನು ಉತ್ತರಾದಾತನಿಗೆ ಪ್ರದಾನಮಾಡುವ ಒಂದು ಉದ್ದೇಶವನ್ನು ಹೊಂದಿರಬೇಕು. ಮತ್ತು ಆ ಉದ್ದೇಶವು ವ್ಯಕ್ತವಾಗಿರಬೇಕು. ಈ ಉದ್ದೇಶವು ಒಮ್ಮೆ ಸಾಬೀತಾದರೆ ಆ ಬಳಿಕ ಆ ಮರಣ ಶಾಸನದ ಸ್ವರೂಪವು ಹೇಗಿದ್ದರೂ ನಡೆಯುತ್ತದೆ. ಒಂದು ಮರಣ ಶಾಸನವು ಮೌಖಿಕವಾಗಿ ಅಥವಾ ಲಿಖಿತವಾಗಿ ಮಾಡಲ್ಪಡ

ಬಹುದು. ಒಂದೊಮ್ಮೆ ಅದು ಲಿಖಿತವಾಗಿದ್ದರೆ ಅದಕ್ಕೆ ಅಭಿಪ್ರಮಾಣನ ಮಾಡುವ ಮತ್ತು ಅದನ್ನು ನೋಂದಾಯಿಸುವ ಅವಶ್ಯಕತೆಯಿಲ್ಲ. ಒಂದೊಮ್ಮೆ ಅದು ಮರಣ ಶಾಸನಕ ಕೈಯಿಂದಲೇ ಬರೆಯಲ್ಪಟ್ಟುದಾದರೆ ಅದಕ್ಕೆ ಅವನ ಹಸ್ತಾಕ್ಷರದ ಅವಶ್ಯಕತೆಯೂ ಇರುವುದಿಲ್ಲ. ಒಂದು ಮರಣ ಶಾಸನವು ಯಾವುದೇ ರೀತಿಯ ಒಂದು ಕಾಗದದ ಚೂರಿನ ಮೇಲೆ ಬರೆಯಲ್ಪಡಬಹುದು. ಒಬ್ಬ ವ್ಯಕ್ತಿಯು ತನ್ನ ಮರಣಕ್ಕಿಂತ ಮೊದಲು ಒಂದು ಪತ್ರ ಬರೆದು ಅದರಲ್ಲಿ ತನ್ನ ಮರಣದ ಬಳಿಕ ತನ್ನ ಸ್ವತ್ತನ್ನು ಯಾವ ರೀತಿಯಲ್ಲಿ ವಂಟನ ಮಾಡಬೇಕೆಂಬುದು ನಿರ್ದೇಶಿಸಿದ್ದನು. ಮತ್ತು ಆ ಪತ್ರವನ್ನು ಒಂದು ವಿದ್ಯುಕ್ತವಾದ ಮರಣ ಶಾಸನವೆಂದು ಎಣಿಸಲಾಗಿದೆ. ಆ ಒಂದು ದಾಖಲೆಯನ್ನು ಅವನು ಮರಣ ಶಾಸನವೆಂದು ಅವನಿಂದ ಹೆಸರಿಸಲ್ಪಡುವ ಅವಶ್ಯಕತೆಯೂ ಇರುವುದಿಲ್ಲ. ಮರಣ ಶಾಸಕನ ಒಂದು ಇಚ್ಛೆಯು ಒಂದು ಮರಣ ಶಾಸನದ ಎಲ್ಲಾ ಅವಶ್ಯಕ ಅಂಶಗಳಿಂದ ಕೂಡಿಕೊಂಡಿದ್ದರೆ ಅಲ್ಲಿ ಅದಕ್ಕೆ ಯಾವ ಹೆಸರು ಕೊಟ್ಟರೂ ಅದೊಂದು ಮರಣ ಶಾಸನವಾಗಿಯೇ ಕಾರ್ಯಾಚರಣೆಗೆ ಬರುತ್ತದೆ. ಇಲ್ಲಿ ಮರಣ ಶಾಸಕನ ಉದ್ದೇಶವೇ ನಿರ್ಣಯಕ ಪಾತ್ರವಹಿಸುತ್ತಿದೆ. ಒಂದು ದಾಖಲೆಗೆ ಅವನು ಯಾವ ಹೆಸರು ಕೊಡುವನು ಎಂಬುದು ಇಲ್ಲಿ ಅಸಮಂಜಸವಾಗಿರುತ್ತದೆ.

ಒಂದು ಮೌಖಿಕ ಮರಣ ಶಾಸನವು ವಿದ್ಯುಕ್ತವಾಗಿರುತ್ತದೆ. ಒಬ್ಬ ವ್ಯಕ್ತಿಯು ತನ್ನ ಮರಣದ ಬಳಿಕ ತನ್ನ ಸ್ವತ್ತನ್ನು ಒಬ್ಬ ಉತ್ತರದಾತನಿಗೆ ಕೊಡುವ ಬಗ್ಗೆ ತನ್ನ ಉದ್ದೇಶವನ್ನು ಒಂದು ಘೋಷಣೆಯಲ್ಲಿ ವ್ಯಕ್ತಪಡಿಸಿದರೆ ಆ ಘೋಷಣೆಯು ಒಂದು ಮರಣ ಶಾಸನವಾಗಿ ಕಾರ್ಯಾಚರಣೆಗೆ ಬರುತ್ತದೆ. ಆದರೆ ಒಂದು ಮೌಖಿಕ ಮರಣ ಶಾಸನದ ಪುರಾವೆಯನ್ನು ಸಿದ್ಧಮಾಡುವದು ಕಠಿಣವಾಗಿರುತ್ತದೆ. ಒಂದು ಮೌಖಿಕ ಮರಣ ಶಾಸನವನ್ನು ಅತ್ಯಂತ ಸೂಕ್ಷ್ಮವಾಗಿ ಸಾಬೀತು ಪಡಿಸಬೇಕಾಗಿತ್ತದೆ. ಅವನ ಆ ಘೋಷಣೆಯು ಅವನ ಉದ್ದೇಶವನ್ನು ಸೂಚಿಸಬೇಕಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಆ ವ್ಯಕ್ತಿಯು ಆಡಿರುವ ಮಾತುಗಳಿಗೆ ಮರಣ ಶಾಸನದ ಪರಿಣಾಮ ಕೊಡುವ ಬಗ್ಗೆ ನ್ಯಾಯಾಲಯದಲ್ಲಿ ಸಾಕಷ್ಟು ಪುರಾವೆಗಳನ್ನು ಒದಗಿಸಬೇಕಾಗುತ್ತದೆ. ಇಲ್ಲಿ ಆ ಘೋಷಣೆ ಮಾಡಿದವನು ಒಂದು ಮರಣ ಶಾಸನದ ಹೊರತಾಗಿ ಇನ್ನೇನನ್ನೂ ಉದ್ದೇಶಿಸಿಲ್ಲವೆಂಬುದಾಗಿ ಸಂಶಯಾತೀತವಾಗಿ ಸಾಬೀತು ಪಡಿಸಬೇಕಾಗುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಮರಣ ಶಾಸನವನ್ನು ನಿರ್ಮಿಸಲು ಬಾಯಿಮಾತಿನ ಅವಶ್ಯಕತೆಯೂ ಇರುವುದಿಲ್ಲ; ಕೇವಲ ಹಾವಭಾವದಿಂದ ಅಥವಾ ಸಂಕೇತಿಕವಾಗಿಯೂ ಸಹ ಒಬ್ಬನು ಒಂದು ಮರಣಶಾಸನವನ್ನು ನಿರ್ಮಿಸಬಹುದು. ಒಬ್ಬನು ತನ್ನ ಹಾವಭಾವಗಳಿಂದ ಒಂದು ಮರಣಶಾಸನವನ್ನು ನಿರ್ಮಿಸಿರುವನಾದರೆ ಅದು ವಿಧ್ಯುಕ್ತವಾಗಿರುತ್ತದೆ ಆದರೆ ಅದು ಆ ಮರಣ ಶಾಸಕನ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಬೇಕಾಗುತ್ತದೆ.

ಮರಣಶಾಸನದ ವಿಷಯವಸ್ತು : ಸ್ವತ್ತು

(The subject matter of will : Property)

ಯಾವುದೇ ರೀತಿಯ ಸ್ವತ್ತು ಒಂದು ಮರಣಶಾಸನದ ವಿಷಯ ವಸ್ತುವಾಗಿರಬಹುದು. ಅದೊಂದು ಚರ ಅಥವಾ ಸ್ಥಿರ, ಭೌತಿಕ ಅಥವಾ ಭೌತಾತೀತ ಸ್ವತ್ತಾಗಿರಬಹುದು. ಒಬ್ಬ ಮರಣಶಾಸಕನು ಈ ಕೆಳಗಿನ ಎರಡು ಷರತ್ತುಗಳಿಗೆ ಬಾಧ್ಯನಾಗಿ ಯಾವುದೇ ಸ್ವತ್ತಿನ ಬಗ್ಗೆ ಒಂದು ಮರಣಶಾಸನವನ್ನು ಮಾಡಬಹುದು :

i) ಆ ಸ್ವತ್ತು ಅವನ ಮರಣ ಕಾಲದಲ್ಲಿ ಅವನ ಸ್ವಾಮಿತ್ವಕ್ಕೆ ಒಳಪಟ್ಟಿರಬೇಕು ಮತ್ತು,

ii) ಆ ಸ್ವತ್ತು ಹಸ್ತಾಂತರಣೀಯವಾಗಿರಬೇಕು.

ಒಂದು ಮರಣಶಾಸನವು ಮಾಡಲ್ಪಡುವ ಕಾಲದಲ್ಲಿ ಆ ಒಂದು ಸ್ವತ್ತು ಅಸ್ತಿತ್ವದಲ್ಲಿದ್ದಿರಲಿಕ್ಕಿಲ್ಲ, ಆದರೆ ಮರಣ ಶಾಸಕನು ಸಾಯುವ ಕಾಲದಲ್ಲಿ ಅದು ಅಸ್ತಿತ್ವದಲ್ಲಿದ್ದಿರಬೇಕು ಮತ್ತು ಆ ಮರಣ ಶಾಸಕನ ಸ್ವಾಮಿತ್ವಕ್ಕೆ ಒಳಪಟ್ಟಿರಬೇಕು. ಇದಕ್ಕೆ ಕಾರಣವೇನೆಂದರೆ ಒಂದು ಮರಣ ಶಾಸನವು ಮರಣಶಾಸಕನ ಮರಣದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುತ್ತದೆ. ಒಂದು ಮರಣಶಾಸನದ ಮೇರೆಗೆ ಒಂದು ಸ್ವತ್ತಿನ ಹಸ್ತಾಂತರಣವು ಆ ಮರಣಶಾಸಕನ ಮರಣದ ಬಳಿಕಷ್ಟೇ ಕಾರ್ಯಾಚರಣೆಗೆ ಬರುವುದಲ್ಲದೆ ಆ ಮರಣ ಶಾಸನವು ಮಾಡಲ್ಪಟ್ಟ ದಿನಾಂಕದಿಂದಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ಸ್ವತ್ತಿನ ಫಲೋಪಭೋಗದ ಸಂಬಂಧದಲ್ಲಿ ಮಾತ್ರ ಕಾನೂನುಬದ್ಧವಾಗಿ ಒಂದು ಮರಣ ಶಾಸನವನ್ನು ಮಾಡಬಹುದು. ಹಾಗೆಂದರೆ, ಒಬ್ಬ ಮರಣ ಶಾಸಕನು ತನ್ನ ಸ್ವತ್ತಿನಿಂದ ಬರುವ ಪ್ರಯೋಜನಗಳು ಅಥವಾ ಉತ್ಪನ್ನಗಳು ಇತ್ಯಾದಿಗಳ ಸಂಬಂಧದಲ್ಲಿ ಮಾತ್ರ ಒಂದು ಮರಣಶಾಸನವನ್ನು ಮಾಡಬಹುದು. ಇಂತಹ ಪ್ರಕರಣಗಳಲ್ಲಿ ಉತ್ತರಾದಾತನು ಆ ಸ್ವತ್ತಿನ ಪ್ರಯೋಜನಗಳಿಗಷ್ಟೇ ಹಕ್ಕುದಾರನಾಗುವನಲ್ಲದೆ ಆ ಸ್ವತ್ತಿನ ವಸ್ತುವಿಗಲ್ಲ ಒಬ್ಬ ಉತ್ತರಾದಾತನ ಪರವಾಗಿ ಒಂದು ಸ್ವತ್ತಿನ ಫಲೋಪಭೋಗದ ಉತ್ತರದಾನವು ಒಂದು ನಿಯಮಿತ ಕಾಲಾವಧಿಗೆ ಅಥವಾ ಆ ಉತ್ತರಾದಾತನ ಜೀವಾವಧಿಗೆ ಮಾಡಲ್ಪಟ್ಟುದಾಗಿರಬಹುದು. ಇದರ ಪರಿಣಾಮವಾಗಿ ಆ ಮರಣ ಶಾಸಕನ ಮರಣದ ಬಳಿಕ ಆ ಸ್ವತ್ತಿನ ವಸ್ತುವನ್ನು ಮರಣ ಶಾಸನ ವಾರಸುದಾರರು ವಾರಸು ಪಡೆಯುವರು ಮತ್ತು ಆ ಸ್ವತ್ತಿನ ಫಲೋಪಭೋಗವು ಉತ್ತರಾದಾತರಿಗೆ ಸೇರುತ್ತದೆ. ಈ ರೀತಿಯಾಗಿ ಒಂದೊಮ್ಮೆ ಒಬ್ಬ ಮರಣಶಾಸಕನು ಒಂದು ಮರಣಶಾಸನದ ಮೂಲಕ ತನ್ನ ಒಂದು ಮನೆಯ ಭಾಡಿಗೆಯನ್ನು ಒಬ್ಬ ಉತ್ತರಾದಾತನಿಗೆ ಕೊಟ್ಟರೆ ಅವನ ಮರಣದ ಬಳಿಕ ಆ ಉತ್ತರಾದಾತನು ಆ ಮನೆಯ ಭಾಡಿಗೆಗಷ್ಟೇ ಹಕ್ಕುದಾರನಾಗುವನಲ್ಲದೆ ಆ ಮನೆಯಲ್ಲಿ ಅವನು ವಾಸಿಸುವಂತಿಲ್ಲ. ಇದೇ ರೀತಿಯಲ್ಲಿ ಒಂದೊಮ್ಮೆ ಮರಣಶಾಸಕನ ಮನೆಯಲ್ಲಿ ಉತ್ತರಾದಾತನಿಗೆ ಜೀವಿಸುವ ಒಂದು ಹಕ್ಕು

ಕೊಟ್ಟಿದ್ದರೆ ಮತ್ತು ಆ ಹಕ್ಕು ಒಂದು ನಿರ್ದಿಷ್ಟವಾದ ಕಾಲಾವಧಿಗಾಗಿದ್ದರೆ ಅಲ್ಲಿ ಆ ಉತ್ತರಾದಾತನು ಆ ಮನೆಯಲ್ಲಿ ವಾಸಿಸಬಹುದು ಮತ್ತು ಇದರ ಹೊರತಾಗಿ ಆ ಸ್ವತ್ತಿನ ಸಂಬಂಧದಲ್ಲಿ ಅವನಿಗೆ ಯಾವುದೇ ರೀತಿಯ ಹಕ್ಕಿರುವುದಿಲ್ಲ. ಆ ಮನೆಗೆ ಸಂಬಂಧಪಟ್ಟ ಇತರ ಹಕ್ಕುಗಳನ್ನು ಮರಣ ಶಾಸಕನ ಕಾನೂನೀ ವಾರಸುದಾರರು ಚಲಾಯಿಸುವರು. ಅದಲ್ಲದೆ ಒಬ್ಬ ಮರಣ ಶಾಸಕನು ಒಂದು ಮರಣ ಶಾಸನದ ಮೂಲಕ ತನ್ನ ಒಂದು ಸ್ವತ್ತಿನ ವಸ್ತುವನ್ನು ಒಬ್ಬ ವ್ಯಕ್ತಿಗೆ ಮತ್ತು ಅದರ ಫಲೋಪ ಭೋಗವನ್ನು ಇನ್ನೊಬ್ಬ ವ್ಯಕ್ತಿಗೆ ಕೊಡಬಹುದು. ಮುಸ್ಲಿಮ್ ಕಾನೂನಿನ ಪ್ರಕಾರ ಜೀವಾವಧಿ ಹಿತಸಂಬಂಧವು ಒಂದು ಮರಣ ಶಾಸನದ ಒಂದು ಕಾನೂನುಬದ್ಧ ವಿಷಯವಸ್ತುವಾಗಿರಬಹುದು. ಈ ವಿಷಯವು "ನವಾಜಿಷ್ ಅಲಿ ಖಾನ್ ವಿ. ಅಲಿ ರಜಾ ಖಾನ್" ಪ್ರಕರಣದಲ್ಲಿ ಕೊಡಲಾದ ತೀರ್ಪಿನಿಂದ ಸ್ಪಷ್ಟಗೊಳಿಸಲಾಗಿದೆ. ಆ ಪ್ರಕರಣವು ಈ ಕೆಳಗಿನಂತಿದೆ –

ನವಾಜಿಷ್ ಅಲಿ ಖಾನ್ ವಿ. ಅಲಿ ರಾಜಾಖಾನ್
Nawazish Ali Khan V. Ali Raza Khan

ಸಿದ್ಧಾಂತ

ಒಂದು ದಾನಕ್ಕೆ ಅರ್ಥಾನ್ವಯನ ಮಾಡುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಒಂದೊಮ್ಮೆ ಅದೊಂದು ಭೌತಿಕ ವಸ್ತುವಿನ ದಾನವಾಗಿದ್ದರೆ ಆಗ ದಾನದ ವಿಷಯದ ವಸ್ತುವಿನ ಪರವು ಹಸ್ತಾಂತರಣವನ್ನು ಕುಂಠಿತಗೊಳಿಸುವ ಯಾವತ್ತೂ ಷರತ್ತನ್ನು ಪ್ರತಿಕೂಲವಾದುದೆಂಬ ಕಾರಣದ ಮೇಲೆ ತಿರಸ್ಕರಿಸಲಾಗುತ್ತದೆ; ಆದರೆ ಅರ್ಥಾನ್ವಯನ ಮಾಡುವಾಗ ಆ ದಾನವು ನಿಯಮಿತ ಹಿತಸಂಬಂಧವುಳ್ಳದ್ದೆಂದು ಕಂಡುಬಂದರೆ ಅಲ್ಲಿ ಆ ಭೌತಿಕ ವಸ್ತುವು ಅದರ ಸ್ವಾಮಿಯಲ್ಲಿ ಉಳಿದು ಅದರ ಫಲೋಪಭೋಗವಿಂದ ಆ ದಾನವು ಕಾರ್ಯಾಚರಣೆಗೆ ಬರುತ್ತದೆ

ವಸ್ತುಸ್ಥಿತಿ

ನವಾಬ್‌ದಾನಿ ಆಲಿಯಾಬಾದ ಸಂಪದ ಎಂಬುದಾಗಿ ಕರೆಯಲ್ಪಡುವ ಅವಧ್ ಸಂಪದವು ನವಾಬ್ ಅಲಿ ಖಾನ್ ಎಂಬವನಿಗೆ ಮಂಜೂರು ಮಾಡಲ್ಪಟ್ಟಿತು. ಮತ್ತು ರಾಖ್ ಜೂಲಿಯಾನಾವೆಂದು ಕರೆಯಲ್ಪಡುವ ಒಂದು ಸಂಪದವು ಭಾರತ ಸರಕಾರದಿಂದ ಸರ್ ನವಾಜಿಷ್ ಅಲಿ ಖಾನ್ ಇವನಿಗೆ ಮಂಜೂರು ಮಾಡಲ್ಪಟ್ಟಿತು.

ಇವೆರಡೂ ಸಂಪದಗಳು ಸರ್ ನವಾಜಿಷ್ ಅಲಿ ಖಾನ್ ಇವನ ಸ್ವಾಮಿತ್ವಕ್ಕೆ ಒಳಪಟ್ಟಿದ್ದವು. ಅವನು ಜ್ಯೂಲಿಯಾನಾ ಸಂಪದವನ್ನು ತನ್ನ ಸಹೋದರನಾದ ನಾಶಿರ್ ಅಲಿ ಖಾನ್ ಇವನಿಗೆ ಜೀವಾವಧಿಗಾಗಿ ಹಸ್ತಾಂತರಿಸಿದನು. 1882 ರ ಫೆಬ್ರುವರಿ 14 ರ ದಿನಾಂಕದ ತನ್ನ ಮರಣಶಾಸನದಿಂದ ಅವನು ಈ ಸಹೋದರನಿಗೆ ತನ್ನ ಅವಧ್ ಸಂಪದವನ್ನು ಉತ್ತರದಾನ ಮಾಡಿದನು, ಮತ್ತು ಅದನ್ನು ಇವನು ಅವಧ್ ಸಂಪದಗಳ ಅಧಿನಿಯಮ 1869 ಇದಕ್ಕೆ ಅನುಗುಣವಾಗಿ ಮಾಡಿದ್ದನು.

ಆದರೆ ಅವನು ಕೌಟುಂಬಿಕ ಕಾನೂನಿನ ಪ್ರಕಾರ ಕೇವಲ ಮೂರನೇ ಒಂದು ಸ್ವತ್ತನ್ನು ಮಾತ್ರ ಉತ್ತರದಾನವಾಗಿ ಕೊಡಬಹುದಿತ್ತು. 1910ರಲ್ಲಿ, ಅವನ ಮರಣವಾದಾಗ ಅವನಿಗೆ ಹಿದಾಯತ್ ಅಲಿ ಖಾನ್ ಎಂಬ ಮಗನಿದ್ದನು. ಒಂದೊಮ್ಮೆ ಸರ್ ನವಾಜಿಸ್ ಅಲಿ ಖಾನ್ ಇವನು ಮರಣಶಾಸನ ಮಾಡದೆ ಮೃತಪಟ್ಟಿದ್ದರೆ ಈ ಅಧಿನಿಯಮದ ಮೇರೆಗೆ ಅವನು ಅವಧ್ ಸಂಪದಕ್ಕೆ ಉತ್ತರಾಧಿಕಾರಿಯಾಗುತ್ತಿದ್ದನು.

1895 ರ ಜುಲೈ 15 ರಂದು ನಶೀದ್ ಅಲಿ ಖಾನ್ ಇವನು ನಿಷ್ಪಾದಿಸಿದ ಎರಡು ಮರಣಶಾಸನಗಳ ಪ್ರಕಾರ ಅವಧ್ ಸಂಪದ ಮತ್ತು ಜುಲಿಯಾನಾ ಸಂಪದ ಇವುಗಳನ್ನು ನಿಕಾಲೆ ಮಾಡಿದನು. 1896 ರ ಡಿಶೆಂಬರ್ 19 ರಂದು ನವಾಬ್ ನಾಶಿರಲಿ ಖಾನ್ ಇವನು ಮೃತನಾದಾಗ ಸರ್ ಫತೇ ಅಲಿ ಖಾನ್ ಇವನು ಆ ಸ್ವತ್ತುಗಳ ಕಬ್ಜೆಯನ್ನು ಪಡೆಯುವನು. 1923 ರ ಅಕ್ಟೋಬರ್ 28 ರಂದು ಅವನು ಮೃತನಾದಾಗ ಅವನ ಮಗ ನಾಜರ್ ಅಲಿ ಖಾನ್ ಅವುಗಳ ಕಬ್ಜೆಯನ್ನು ಹೊಂದಿದನು. ಹಿದಾಯತ್ ಅಲಿ ಖಾನ್ ಇವನು 1924 ರಂದು ಮೃತನಾದನು. 1925 ರ ಡಿಶೆಂಬರ್ 9 ರಂದು ಮಹಮ್ಮದ್ ಅಲಿಖಾನ್ ಆ ಸ್ವತ್ತುಗಳಿಗಾಗಿ ಒಂದು ಹಕ್ಕುದಾವೆ ಮಾಡಿದನು. ಈ ವ್ಯಾಜ್ಯವು ಕೊನೆಗೆ ಪ್ರೀವಿ ಕೌನ್ಸಿಲ್ ತನಕ ಹೋಯಿತು ಮತ್ತು ಫತೇ ಅಲಿ ಖಾನ್ ಮತ್ತು ಮಹಮದ ಅಲಿ ಖಾನ್ ಇವರು ಆ ಸಂಪದಗಳಲ್ಲಿ ಮರಣಶಾಸನದಿಂದಾಗಿ ಜೀವಾವಧಿ ಹಿತಸಂಬಂಧವನ್ನು ಹೊಂದಿರುವರೆಂಬ ತೀರ್ಪುಕೊಡಲಾಯಿತು. ಆದರೆ ಮಹಮ್ಮದ್ ಅಲಿಖಾನ್ ಇವನ ಮರಣದ ಬಳಿಕ ಏನಾಗುವದೆಂಬ ಬಗ್ಗೆ ಪ್ರೀವಿ ಕೌನ್ಸಿಲ್ ಏನನ್ನೂ ಹೇಳಲು ನಿರಾಕರಿಸಿತು. ಈ ವ್ಯಾಜ್ಯದ ಪರಿಣಾಮವಾಗಿ ಮಹಮ್ಮದ್ ಅಲಿಖಾನ್ ಇವನ ಅವಧ್ ಮತ್ತು ಜೂಲಿಯಾನಾ ಸಂಪದದ ಕಬ್ಜೆಯನ್ನು ಪಡೆದನು.

1935 ಫೆಬ್ರುವರಿ 3 ರಂದು ಮೊಹಮ್ಮದ್ ಅಲಿ ಖಾನ್ ಇವನು ಮೃತನಾದನು ಮತ್ತು ಇವನ ಮರಣದ ಬಳಿಕ ಮನವಿದಾರನು ಎರಡೂ ಸಂಪದಗಳ ಕಬ್ಜೆಯನ್ನು ಪಡೆದನು. 1935 ರ ಸಪ್ಟಂಬರ್ 25 ರಂದು ಪ್ರತಿವಾದಿಯಾದ ಸರ್ ನವಾಜಿಪ್ ಅಲಿ ಖಾನ್ ಇವನು ಮನವಿದಾರರ ವಿರುದ್ಧ ಒಂದು ದಾವೆ ಹೂಡಿದನು. ಅವನು ಈ ದಾವೆಯಲ್ಲಿ ಅವಧ್ ಮತ್ತು ಜುಲಿಯಾನಾ ಸಂಪದಗಳ ಕಬ್ಜೆಗಾಗಿ ಡಿಕ್ರಿಯನ್ನು ಮಂಜೂರು ಮಾಡಬೇಕೆಂದು ದಾವೆ ಮಾಡಿದನು.

ಆದರಿಂದಾಗಿ ನಾಶಿರ್ ಅಲಿಖಾನನು ಮರಣ ಶಾಸನಗಳ ಮೂಲಕ ಕೊಟ್ಟಿರುವ ನೇಮಕ ಮಾಡುವ ಶಕ್ತಿಯು ಶಿಯಾ ಕಾನೂನಿನ ಪ್ರಕಾರ ವಿಧ್ಯುಕ್ತವಾದುದೆಂದು ಭಾರತದ ಎರಡೂ ನ್ಯಾಯಾಲಯಗಳು ತೀರ್ಪುಕೊಟ್ಟವು. ಆದರೆ ಮರಣ ಶಾಸಕನ ಜೀವಾವಧಿಯಲ್ಲಿ ಹುಟ್ಟಿರದ ಮನವಿದಾರನಿಂದ ಇದರ ಚಲಾಯಿಸುವಿಕೆಯು ಅವಧ್ ಸಂಪದಗಳ ಅಧಿನಿಯಮದ ಪ್ರಕಾರ ಅಸಿಂಧುವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. 1934ರ ಜೂನ್ 30 ರಂದು ಮಹಮದ್ ಅಲಿಖಾನ್ ಇವನಿಂದ ನಿಷ್ಪಾದಿಸಲ್ಪಟ್ಟ ಪತ್ರವು ಒಂದು ಮರಣ ಶಾಸನವೆಂಬುದಾಗಿ ಈ ಎರಡೂ ನ್ಯಾಯಾ

ಲಯಗಳು ತೀರ್ಪು ಕೊಟ್ಟುವು. ವಿಚಾರಣಾ ನ್ಯಾಯಾಲಯದ ಅಭಿಪ್ರಾಯದಲ್ಲಿ ಮಹಮದ್ ಅಲಿಖಾನ್ ಇವನು ಹಕ್ಕುದಾರನಾಗಿರುವ ಝುಲೇನಾ ಸಂಪದದಲ್ಲಿ ಮನವಿದಾರನಿಗೆ 1/3 ಭಾಗವು ಸಿಗುತ್ತದೆ. ಮುಖ್ಯ ಮನವಿ ನ್ಯಾಯಾಲಯದ ತೀರ್ಪಿನ ಪ್ರಕಾರ ಇಲ್ಲಿ ಪರಿಣಾಮಿಂತಗೊಳಿಸುವ ಉದ್ದೇಶವು ಕಂಡು ಬರುವದಿಲ್ಲ. ಮತ್ತು ಮಹಮದ್ ಅಲಿಖಾನ್ ಇವನು ಆ ಸ್ವತ್ತಿನ ಪರಮ ಸ್ವಾಮಿಯಾಗಿರುವನು, ಈ ನ್ಯಾಯಾಲಯವು ಪ್ರತಿವಾದಿಯ ದಾವೆಯನ್ನು ಕಿತ್ತು ಹಾಕಿತು. ಮುಖ್ಯ ಮನವಿ ನ್ಯಾಯಾಲಯವು ಕೆಳನ್ಯಾಯಾಲಯದಲ್ಲಿ ಬದಲಾವಣೆ ಮಾಡಿ ಪ್ರತಿವಾದಿಗೆ ಝುಲೇನಾ ಸಂಪದದಲ್ಲ 1/5 ಅಂಶದ ಕಬ್ಜೆಗಾಗಿ ಡಿಕ್ರಿ ಕೊಟ್ಟಿತು. ಆದುದರಿಂದ ಪ್ರೀವಿ ಕೌನ್ಸಿಲಿಗೆ ಮನವಿ ಸಲ್ಲಿಸಲಾಯಿತು.

ತೀರ್ಪು

ಈ ಮನವಿಯನ್ನು ಕಿತ್ತುಹಾಕಿ ಪ್ರೀವಿ ಕೌಂಸಿಲ್ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು :

ಮುಸ್ಲಿಮ್ ಕಾನೂನು ನೈಜ ಮತ್ತು ವೈಯಕ್ತಿಕ ಸ್ವತ್ತುಗಳೊಳಗೆ ಯಾವುದೇ ರೀತಿಯ ಭೇದವನ್ನು ಕಲ್ಪಿಸುವುದಿಲ್ಲ, ಮತ್ತು ಈ ಕಾನೂನು ಭೂಮಿಯ ಮೇಲಿನ ಸ್ವಾಮಿತ್ವವನ್ನು ವಿಂಗಡಿಸಿ ಆ ಭೂಮಿಯನ್ನು ಸಂಪದಗಳನ್ನಾಗಿ ನಿರ್ಮಿಸುವುದನ್ನು ಮನ್ನಿಸುವುದಿಲ್ಲ. ಮುಸ್ಲಿಮ್ ಕಾನೂನು ಏನನ್ನು ಮನ್ನಿಸುತ್ತಿದೆಯೆಂದರೆ ಒಂದು ಸ್ವತ್ತಿನ ಭೌತಿಕ ಅಸ್ತಿತ್ವ ಮತ್ತು ಅದರೊಳಗಿನ ಫಲೋಪಭೋಗ ಇವುಗಳೊಳಗಿನ ವ್ಯತ್ಯಾಸ ಸ್ವತ್ತಿನ ಭೌತಿಕ ಅಸ್ತಿತ್ವದ ಮೇಲೆ ಈ ಕಾನೂನು ಪರಮ ಸ್ವಾಮಿತ್ವವನ್ನು ಮನ್ನಿಸುತ್ತದೆ. ಮತ್ತು ಒಂದೊಮ್ಮೆ ಒಂದು ಸ್ವತ್ತಿನ ಭೌತಿಕ ಅಸ್ತಿತ್ವದ ಕೊಡುಗೆಯು ಮಾಡಲ್ಪಟ್ಟರೆ ಅಲ್ಲಿ ಅದರ ಪರಮ ಸ್ವಾಮಿತ್ವದೊಂದಿಗೆ ಅಸಂಗತವಾಗಿರುವ ಷರತ್ತುಗಳನ್ನು ಹೇರಿದರೆ ಮುಸ್ಲಿಮ್ ಕಾನೂನು ಅದನ್ನು ಪ್ರತಿಕೂಲ ಷರತ್ತುಗಳೆಂದು ಎಣಿಸುತ್ತಿದೆ. ಆದರೆ ಸಮಯದ ದೃಷ್ಟಿಯಲ್ಲಿ ನಿಯಮಿಂತವಾಗಿರುವ, ಹಿತಸಂಬಂಧವನ್ನು ನಿರ್ಮಿಸಿದರೆ ಅದು ಆ ಸ್ವತ್ತಿನ ಫಲೋಪಭೋಗದ ಸಂಬಂಧದಲ್ಲಿ ನಿರ್ಮಿಸಲ್ಪಟ್ಟ ಹಿತಸಂಬಂಧವಾಗಿರುತ್ತದೆ. ಮತ್ತು ಅಂತಹ ನಿಯಮಿತ ಹಿತಸಂಬಂಧದ ಮೇಲೆ ಸ್ವಾಮಿತ್ವವನ್ನು ನಿರ್ಮಿಸಬಹುದು.

ಆದುದರಿಂದ ನಾಶಿರ್ ಅಲಿಖಾನ್ ಇವನು ಮರಣ ಶಾಸನದಿಂದ ಮಹಮದ್ ಅಲ್ಲಿಖಾನ್ ಇವನಿಗೆ ಝುಲಿಯಾನ ಮತ್ತು ಅವಧ್ ಸಂಪದಗಳ ಸಂಬಂಧದಲ್ಲಿ ಕೊಡಲಾದ ನೇಮಕದ ಶಕ್ತಿಯು ಅಸಿಂಧುವಾಗಿರುತ್ತದೆ; ಮತ್ತು ಝುಲಿಯಾನ ಸಂಪದದ ಸಂಬಂಧದಲ್ಲಿ ಮನವಿದಾರನು ಪ್ರತಿವಾದಿಗೆ ಅದರ ಕಬ್ಜೆಯನ್ನು ಪ್ರದಾನ ಮಾಡಬೇಕಾಗುತ್ತದೆ, ಮತ್ತು ಇದರಿಂದ ಮಹಮದ್ ಅಲಿ ಖಾನ್ ಇವನ ವಾರಸುದಾರರ ಹಕ್ಕುದಾವೆಗಳ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಬೀಳುವುದಿಲ್ಲ.

ಒಂದು ಮರಣಶಾಸನದಿಂದ ಹಕ್ಕು :
ಉತ್ತರದಾನವನ್ನು ಮಾಡಬಹುದಾದ ಮೂರನೇ ಒಂದು
(Testamentary Right : The Dequeathable One-third)

ಒಬ್ಬ ಮುಸಲ್ಮಾನನು ಒಂದು ದಾನದ ಮೂಲಕ ತನ್ನ ಇಡೀ ಸ್ವತ್ತನ್ನು ತನ್ನ ಇಡೀ ಸ್ವತ್ತನ್ನು ಹಸ್ತಾಂತರಿಸಬಹುದು. ಆದರೆ ಅವನು ತನ್ನ ಇಡೀ ಸ್ವತ್ತಿನ ಬಗ್ಗೆ ಒಂದು ಮರಣಶಾಸನವನ್ನು ಮಾಡುವಂತಿಲ್ಲ. ಮುಸ್ಲೀಮ್ ಕಾನೂನಿನ ಪ್ರಕಾರ ಮರಣ ಶಾಸನದ ಹಕ್ಕು ಎರಡು ರೀತಿಗಳಿಂದ ನಿಯಂತ್ರಿಸಲಾಗಿದೆ. ಮೊದಲನೆಯದಾಗಿ ಉತ್ತರದಾನ ಮಾಡಬಹುದಾದ ಸ್ವತ್ತಿನ ಪ್ರಮಾಣದ ಬಗ್ಗೆ ಒಂದು ನಿಯಂತ್ರಣವಿದೆ, ಮತ್ತು ಎರಡನೆಯದಾಗಿ ಆ ಸ್ವತ್ತಿನ ಉತ್ತರದಾನವನ್ನು ಪಡೆಯುವ ವ್ಯಕ್ತಿಯ ಸಂಬಂಧದಲ್ಲಿ ಒಂದು ನಿಯಂತ್ರಣವಿದೆ. ಒಬ್ಬ ವ್ಯಕ್ತಿಯು ಮೃತನಾದಾಗ ಮೊದಲನೆಯದಾಗಿ ಅವನ ಉತ್ತರಕ್ರಿಯೆಯ ವೆಚ್ಚಗಳು ಮತ್ತು ಋಣಗಳು ಅವನು ಬಿಟ್ಟು ಹೋದ ಸ್ವತ್ತಿನಿಂದ ಸಂದಾಯ ಮಾಡಲ್ಪಡುತ್ತವೆ. ಉತ್ತರ ಕ್ರಿಯೆಯ ವೆಚ್ಚಗಳು ಮತ್ತು ಋಣಗಳು ಇವನ್ನು ಸಂದಾಯ ಮಾಡಿದ ಬಳಿಕ ಉಳಿದಿರುವ ಸ್ವತ್ತನ್ನು ಉತ್ತರದಾನೀಯ ಸ್ವತ್ತೆಂದು ಕರೆಯಲಾಗುತ್ತದೆ. ಇತರ ಮತೀಯ ಕಾನೂನು ಪದ್ಧತಿಗಳ ಪ್ರಕಾರ ಒಬ್ಬ ಮರಣ ಶಾಸಕನು ತನ್ನ ಇಡೀ ಸ್ವತ್ತನ್ನು ಮರಣ ಶಾಸನದ ಮೂಲಕ ತನಗೆ ಇಷ್ಟಬಂದ ವ್ಯಕ್ತಿಗೆ ಕೊಡಬಹುದು. ಆದರೆ ಒಬ್ಬ ಮುಸ್ಲಿಮ್ ಮರಣಶಾಸಕನು ತನ್ನ ಸ್ವತ್ತುಗಳನ್ನು ನಿಕಾಲೆ ಮಾಡುವ ಅವನ ಹಕ್ಕು ಅವನ ಸ್ವತ್ತುಗಳ ಮೂರನೇ ಒಂದರಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಹಾಗೆಂದರೆ, ಮರಣಶಾಸಕನು ಒಬ್ಬ ಮುಸಲ್ಮಾನನಾಗಿದ್ದರೆ ಅವನು ತನ್ನ ಮೂರನೇ ಒಂದರಷ್ಟು ಸ್ವತ್ತಿಗೆ ಮಾತ್ರ ಒಂದು ಮರಣಶಾಸನವನ್ನು ಮಾಡಬಹುದು.

(ಎ) ಒಬ್ಬ ಅಪರಿಚಿತನಿಗೆ ಉತ್ತರದಾನ *(*Bequest to strainger)

ಒಬ್ಬ ಮುಸಲ್ಮಾನನು ಒಬ್ಬ ಅಪರಿಚಿತ, ಎಂದರೆ ವಾರಸುದಾರನಲ್ಲದ ಪರವಾಗಿ ತನ್ನ ಎಲ್ಲಾ ಸ್ವತ್ತುಗಳ ಮೂರನೇ ಒಂದಂಶದ ಹಸ್ತಾಂತರಣದ ಬಗ್ಗೆ ಒಂದು ಮರಣಶಾಸನವನ್ನು ಮಾಡಬಹುದು. ಒಬ್ಬ ಮುಸಲ್ಮಾನನು ತನ್ನ ಮೂರನೇ ಒಂದರಷ್ಟು ಸ್ವತ್ತಿನ ಸಂಬಂಧದಲ್ಲಿ ಮರಣಶಾಸನ ಮಾಡಿ ಅದನ್ನು ತನಗೆ ಇಷ್ಟ ಬಂದ ವ್ಯಕ್ತಿಗೆ ಕೊಡುವ ಹಕ್ಕು ಪರತ್ತು ಬಾಹಿರ ಮತ್ತು ಪರಮವಾಗಿರುತ್ತದೆ ಒಂದೊಮ್ಮೆ ಮೂರನೇ ಒಂದು ಅಂಶಕ್ಕಿಂತ ಹೆಚ್ಚಿನ ಸ್ವತ್ತಿನ ಸಂಬಂಧದಲ್ಲಿ ಅವನು ಮರಣಶಾಸನ ಮಾಡಬಯಸಿದರೆ ಅಲ್ಲಿ ಆ ಮರಣ ಶಾಸಕನ ಕಾನೂನೀ ವಾರಸುದಾರರ ಸಮ್ಮತಿಯು ಅವಶ್ಯಕತೆಯಿರುತ್ತದೆ. ಆದರೆ ಒಂದೊಮ್ಮೆ ಒಬ್ಬ ಮುಸಲ್ಮಾನನಿಗೆ ಯಾವನೇ ಒಬ್ಬ ವಾರಸುದಾರನಿಲ್ಲವೆಂದಾದರೆ ಅಲ್ಲಿ ಅವನು ತನ್ನ ಇಡೀ ಸ್ವತ್ತನ್ನು ಒಂದು ಮರಣಶಾಸನದ ಮೂಲಕ ಒಬ್ಬ ಅಪರಿಚಿತನಿಗೆ ಉತ್ತರದಾನ ಮಾಡಬಹುದು.

ಬಿ) ಒಬ್ಬ ವಾರಸುದಾರನಿಗೆ ಉತ್ತರದಾನ (Bequest to an heir)

ಒಂದೊಮ್ಮೆ ಒಬ್ಬ ಉತ್ತರದಾತನು ಆ ಮರಣಶಾಸಕನ ವಾರಸುದಾರರೊಳಗೆ ಒಬ್ಬನಾಗಿದ್ದರೆ ಅಲ್ಲಿ ಉತ್ತರದಾನ ಮಾಡಲಾದ ಸ್ವತ್ತು ಮೂರನೇ ಒಂದರಷ್ಟಾಗಿದ್ದರೂ ಸಹ ಅಲ್ಲಿ ಇತರ ವಾರಸುದಾರರ ಸಮ್ಮತಿಯು ಆವಶ್ಯಕತೆಯಿರುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಬ್ಬ ವಾರಸುದಾರ ಮತ್ತು ಒಬ್ಬ ವಾರಸುದಾರನಲ್ಲದವನಿಗೆ ಮಾಡಲಾದ ಒಂದು ಉತ್ತರದಾನದಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಒಂದೊಮ್ಮೆ ಒಬ್ಬ ಮರಣಶಾಸಕನು ಒಬ್ಬ ಶಿಯಾ ಮುಸಲ್ಮಾನನಾಗಿದ್ದರೆ ಅಲ್ಲಿ ಅವನು ತನ್ನ ಮೂರನೇ ಒಂದರಷ್ಟು ಸ್ವತ್ತಿನ ಬಗ್ಗೆ ತನ್ನ ವಾರಸುದಾರರೊಳಗೆ ಯಾವನಾದರೊಬ್ಬನ ಪರವಾಗಿ ಒಂದು ಮರಣಶಾಸನವನ್ನು ಮಾಡಿದರೆ ಮತ್ತು ಆ ಮರಣಶಾಸನವನ್ನು ಮಾಡುವಾಗ ಇತರ ವಾರಸುದಾರರ ಸಮ್ಮತಿಯನ್ನು ಪಡೆಯದಿದ್ದರೆ ಆ ಮರಣಶಾಸನವು ಅಸಿಂಧುವಾಗುವುದಿಲ್ಲ. ಒಂದೊಮ್ಮೆ ಒಬ್ಬ ವಾರಸುದಾರನಿಗೆ ಮರಣಶಾಸನದಿಂದ ಮಾಡಲಾಗಿರುವ ಉತ್ತರದಾನದ ಪ್ರಮಾಣವು ಮೂರನೇ ಒಂದು ಅಂಶಕ್ಕಿಂತ ಹೆಚ್ಚಿನದಾಗಿದ್ದರೆ ಮಾತ್ರ ಅಲ್ಲಿ ಇತರ ವಾರಸುದಾರರ ಸಮ್ಮತಿಯ ಆವಶ್ಯಕತೆಯಿರುತ್ತದೆ.

ಒಬ್ಬ ವಾರಸುದಾರ ಮತ್ತು ಒಬ್ಬ ವಾರಸುದಾರನಲ್ಲದ ವ್ಯಕ್ತಿಗೆ ಜಂಟಿಯಾಗಿ ಮಾಡಲ್ಪಟ್ಟ ಉತ್ತರದಾನ

(Bequest made jointly to an heir and a non-heir)

ಒಂದೊಮ್ಮೆ ಒಂದೇ ಮರಣ ಶಾಸನದ ಮೂಲಕ ಒಬ್ಬ ವಾರಸುದಾರನಲ್ಲದವನಿಗೆ ಸ್ವಲ್ಪ ಸ್ವತ್ತು ಮತ್ತು ವಾರಸುದಾರನಿಗೆ ಸ್ವಲ್ಪ ಸ್ವತ್ತು ಕೊಡಲ್ಪಟ್ಟರೆ ಅಲ್ಲಿ ಆ ಇಡೀ ಮರಣ ಶಾಸನವನ್ನು ಎರಡು ಪ್ರತ್ಯೇಕ ಭಾಗಗಳಲ್ಲಿ ಅರ್ಥಾನ್ವಯನ ಮಾಡಿಕೊಳ್ಳಲಾಗುತ್ತದೆ. ಒಬ್ಬ ವಾರಸುದಾರನಲ್ಲದವನಿಗೆ ಮಾಡಲ್ಪಟ್ಟ ಮರಣ ಶಾಸನವು ಮೂರನೇ ಒಂದರಷ್ಟು ಭಾಗದ ಮಟ್ಟಿಗೆ ಇತರ ವಾರಸುದಾರರ ಸಮ್ಮತಿಯಿಲ್ಲದೆ ಮಾಡಲ್ಪಟ್ಟಿದ್ದರೂ ಸಹ ಅದು ವಿಧ್ಯುಕ್ತವಾಗಿರುತ್ತದೆ. ಆದರೆ ಒಬ್ಬ ವಾರಸುದಾರನಿಗೆ ಕೊಡಲ್ಪಟ್ಟಿರುವ ಸ್ವತ್ತಿನ ಸಂಬಂಧದಲ್ಲಿ ಇತರ ವಾರಸುದಾರರ ಸಮ್ಮತಿಯು ಪಡೆದಿಲ್ಲವೇದಾದರೆ ಅಲ್ಲಿ ಆ ಮರಣಶಾಸನದ ಆ ಭಾಗವು ಅಸಿಂಧುವಾಗಿರುತ್ತದೆ. ಆದರೆ ಒಂದೊಮ್ಮೆ ಆ ಮರಣಶಾಸಕನು ಒಬ್ಬ ಶಿಯಾ ಮುಸಲ್ಮಾನನಾಗಿದ್ದರೆ ಅಲ್ಲಿ ಆ ಒಂದು ಮರಣಶಾಸನಕ್ಕೆ ಎರಡು ರೀತಿಯ ಅರ್ಥಾನ್ವಯನ ಮಾಡಲಾಗುವುದಿಲ್ಲ.

ಮರಣ ಶಾಸಕನ ವಾರಸುದಾರರ ಸಮ್ಮತಿ
(Consent of the testator's heirs)

ಈ ಕೆಳಗಿನ ಪರಿಸ್ಥಿತಿಗಳಲ್ಲಿ ಒಂದು ಮರಣ ಶಾಸನವನ್ನು ವಿಧ್ಯುಕ್ತಗೊಳಿಸಲು ಆ ಮರಣಶಾಸಕನ ವಾರಸುದಾರರ ಸಮ್ಮತಿಯು ಅವಶ್ಯಕತೆಯಿದೆಯೆಂಬುದನ್ನು ನಾವು ಈಗಾಗಲೇ ಕಂಡಿರುವೆವು :

i) ಒಂದೊವೇಳೆ ಆ ಉತ್ತರದಾನವು ಮೂರನೇ ಒಂದಕ್ಕಿಂತ ಹೆಚ್ಚಾಗಿದ್ದರೆ ಮತ್ತು ಅಲ್ಲಿ ಆ ಮರಣಶಾಸಕನು ಸುನ್ನಿಯಾಗಿರಬಹುದು ಅಥವಾ ಶಿಯಾ;

ii) ಒಂದೊವೇಳೆ ಆ ಮರಣಶಾಸಕನು ಒಬ್ಬ ಸುನ್ನಿಯಾಗಿದ್ದು ಮತ್ತು ಆ ಉತ್ತರದಾನಿಯು ಅವನ ವಾರಸುದಾರರೊಳಗೆ ಯಾವನಾದರೊಬ್ಬನಿಗೆ ಮಾಡಲ್ಪಟ್ಟಿದ್ದರೆ, ಮತ್ತು

iii) ಒಂದೊವೇಳೆ ಆ ಮರಣಶಾಸಕನು ಒಬ್ಬ ಶಿಯಾ ಆಗಿದ್ದರೆ ಮತ್ತು ಆ ಉತ್ತರ ದಾನವು ಮೂರನೇ ಒಂದಂಶಕ್ಕಿಂತ ಹೆಚ್ಚಿನದಾಗಿದ್ದು ಮತ್ತು ಒಬ್ಬ ವಾರಸುದಾರನಿಗೆ ಮಾಡಲ್ಪಟ್ಟಿದ್ದರೆ, ಒಂದು ಮರಣಶಾಸನವನ್ನು ವಿಧ್ಯುಕ್ತಗೊಳಿಸಲು ಅವಶ್ಯಕವಾಗಿರುವ ವಾರಸುದಾರರ ಸಮ್ಮತಿಗೆ ಸಂಬಂಧಪಟ್ಟ ನಿಯಮಗಳ ಸಾರಾಂಶವು ಈ ಕೆಳಗಿನಂತಿದೆ :

(1) ವಾರಸುದಾರರ ಸಮ್ಮತಿಯನ್ನು ಆ ಮರಣಶಾಸಕನ ಮರಣದ ಬಳಿಕ ಮಾತ್ರ ಪಡೆದುಕೊಳ್ಳಲಾಗುತ್ತದೆ. ಒಬ್ಬ ಮರಣಶಾಸಕನು ಜೀವಿತನಾಗಿದ್ದಾಗ ವಾರಸುದಾರರಿಂದ ಪಡೆಯಲಾದ ಸಮ್ಮತಿಯನ್ನು ಈ ಉದ್ದೇಶಕ್ಕಾಗಿ ಒಂದು ಸಮ್ಮತಿಯೆಂಬುದಾಗಿ ಎಣಿಸಲಾಗುವುದಿಲ್ಲ. ಆದರೆ ಶಿಯಾ ಕಾನೂನಿನ ಪ್ರಕಾರ ಒಬ್ಬ ಮರಣ ಶಾಸಕನ ಮರಣಕ್ಕಿಂತ ಮೊದಲು ಅಥವಾ ಮರಣದ ಬಳಿಕ ಅವನ ವಾರಸುದಾರರ ಸಮ್ಮತಿಯನ್ನು ಪಡೆಯಬಹುದು.

(2) ವಾರಸುದಾರರ ಸಮ್ಮತಿಯೆಂದರೆ ಮರಣಶಾಸಕನ ಮರಣದ ಕಾಲದಲ್ಲಿ ಅವನ ವಾರಸುದಾರರಾಗಿರುವ ವ್ಯಕ್ತಿಗಳ ಸಮ್ಮತಿಯಾಗಿರುತ್ತದೆ. ಒಬ್ಬ ಭಾವೀ ವಾರಸುದಾರನ ಸಮ್ಮತಿಯು ಒಂದು ಮರಣಶಾಸನವನ್ನು ವಿಧ್ಯುಕ್ತಗೊಳಿಸುವುದಿಲ್ಲ. ಕೆಲವೊಮ್ಮೆ ಒಬ್ಬ ವ್ಯಕ್ತಿಯು ಒಂದು ಮರಣಶಾಸನವು ಮಾಡಲ್ಪಡುವ ಕಾಲದಲ್ಲಿ ಆ ಮರಣಶಾಸಕನ ವಾರಸುದಾರರಾಗಿರಬಹುದು. ಆದರೆ ಆ ಮರಣದ ಕಾಲದಲ್ಲಿ ಅವನ ವಾರಸುದಾರನಾಗಿ ಉಳಿದಿರಲಿಕ್ಕಿಲ್ಲ. ಇಲ್ಲಿ ಅಂತಹ ವ್ಯಕ್ತಿಗಳ ಸಮ್ಮತಿಯು ಅಸಮಂಜಸವಾಗಿರುತ್ತದೆ.

3) ಒಂದು ಸಮ್ಮತಿಯು ವ್ಯಕ್ತ ಅಥವಾ ಅವ್ಯಕ್ತವಾದುದಾಗಿರಬಹುದು. ಹಾಗೆಂದರೆ. ಒಬ್ಬ ವಾರಸುದಾರನು ತನ್ನ ಸಮ್ಮತಿಯನ್ನು ವ್ಯಕ್ತ ಶಬ್ದಗಳಿಂದ ಕೊಡಬಹುದು ಅಥವಾ ಅವನ ಸಮ್ಮತಿಯ ಬಗ್ಗೆ ಅವನ ನಡತೆ ಮತ್ತು ಪರಿಸ್ಥಿತಿಗಳಿಂದ ತೀರ್ಮಾನಿಸಬಹುದು.

4) ಒಬ್ಬ ವಾರಸುದಾರನು ಒಂದು ಮರಣಶಾಸನಕ್ಕೆ ಒಮ್ಮೆ ತನ್ನ ಸಮ್ಮತಿಯನ್ನು ಕೊಟ್ಟ ಬಳಿಕ ಅದನ್ನು ಅವನು ರದ್ದುಗೊಳಿಸುವಂತಿಲ್ಲ. ಒಂದು ಸಮ್ಮತಿಯು ಕೊಡಲ್ಪಟ್ಟ ಬಳಿಕ ಒಬ್ಬ ಕಾನೂನೀ ವಾರಸುದಾರನು ಅದಕ್ಕೆ ಬಾಧ್ಯನಾಗಿರುವನು; ಅವನು ಆ ಬಳಿಕ ಅದನ್ನು ಹಿಂತೆಗೆದುಕೊಳ್ಳುವಂತಿಲ್ಲ.

5) ಒಬ್ಬ ವಾರಸುದಾರನು ತನ್ನ ಸಮ್ಮತಿಕೊಡುವುದರಿಂದ ಮರಣ ಶಾಸಕನ ಸ್ವತ್ತಿನಲ್ಲಿರುವ ತನ್ನ ಪಾಲಿನ ಮಟ್ಟಿಗಷ್ಟೇ ತನ್ನ ಸಮ್ಮತಿಯನ್ನು ವ್ಯಕ್ತಪಡಿಸುವನು. ಒಂದೊಮ್ಮೆ ಅನೇಕ ವಾರಸುದಾರರೊಳಗೆ ಕೆಲವರು ತಮ್ಮ ಸಮ್ಮತಿ ಕೊಟ್ಟು ಇನ್ನು ಕೆಲವರು ತಮ್ಮ ಸಮ್ಮತಿಯನ್ನು ಕೊಡದಿದ್ದರೆ ಅಲ್ಲಿ ಸಮ್ಮತಿಕೊಟ್ಟಿರುವ ವಾರಸುದಾರರ ಪಾಲುಗಳಿಗೆ ಮಾತ್ರ ಆ ಉತ್ತರದಾನವು ಕೊಡಲಾಗುತ್ತದೆ.

6) ವಾರಸುದಾರರ ಸಮ್ಮತಿಯು ಒಂದು ಸ್ವತಂತ್ರವಾದ ಸಮ್ಮತಿಯಾಗಿದ್ದಿರಬೇಕು. ಅನುಚಿತ ಪ್ರಭಾವ, ಒತ್ತಡ, ಬಲಪ್ರಯೋಗ ಅಥವಾ ಮೋಸ ಇತ್ಯಾದಿಗಳಿಂದ ಪಡೆಯಲಾದ ಒಂದು ಸಮ್ಮತಿಯು ಒಂದು ಸಮ್ಮತಿಯೆಂಬುದಾಗಿ ಎಣಿಸಲ್ಪಡುವುದಿಲ್ಲ ಮತ್ತು ಒಬ್ಬ ವಾರಸುದಾರನು ಇದರಿಂದ ಬಾಧ್ಯನಾಗುವುದಿಲ್ಲ.

ಉತ್ತರದಾನಗಳಲ್ಲಿ ಕಳೆತ (Abatement of legacies)

ಒಬ್ಬ ಮೂರನೇ ಪಕ್ಷಗಾರನಿಗೆ ಒಂದೊಮ್ಮೆ ಮೂರನೆ ಒಂದಂಶಕ್ಕಿಂತ ಹೆಚ್ಚಿನ ಸ್ವತ್ತಿನ ಉತ್ತರದಾನವು ಕೊಡಲ್ಪಟ್ಟರೆ ಅಲ್ಲಿ ಮರಣ ಶಾಸಕನ ವಾರಸುದಾರರ ಸಮ್ಮತಿ ಇದ್ದರೆ ಮಾತ್ರ ಆ ಮರಣಶಾಸನವು ವಿಧ್ಯುಕ್ತವಾದುದೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಒಬ್ಬನೇ ಉತ್ತರಾದಾತನಿದ್ದು ಮತ್ತು ಅವನು ಮೂರನೇ ಒಂದಂಶಕ್ಕಿಂತ ಹೆಚ್ಚಿನಾಂಶವನ್ನು ಪಡೆಯುತ್ತಿದ್ದರೆ ಮತ್ತು ಅಲ್ಲಿ ಆ ಮರಣ ಶಾಸಕನ ವಾರಸುದಾರರು ಆ ಹೆಚ್ಚಿನ ಉತ್ತರದಾನದ ಬಗ್ಗೆ ತಮ್ಮ ಸಮ್ಮತಿಯನ್ನು ಕೊಡದಿದ್ದರೆ ಅಲ್ಲಿ ಆ ಉತ್ತರದಾತನು ಮೂರನೇ ಒಂದರಷ್ಟು ಅಂಶದ ಸ್ವತ್ತನ್ನು ಮಾತ್ರ ಪಡೆಯುವನು. ಆದರೆ ಒಂದೊಮ್ಮೆ ಅನೇಕ ಮಂದಿ ಉತ್ತರಾದಾತರಿದ್ದು ಮತ್ತು ಅವರಿಗೆ ಉತ್ತರದಾನ ಮಾಡಲ್ಪಟ್ಟಿರುವ ಸ್ವತ್ತು ಮೂರನೇ ಒಂದಕ್ಕಿಂತ ಹೆಚ್ಚಿನದಾಗಿದ್ದು ಅಲ್ಲಿ ಸುನ್ನೀ ಕಾನೂನಿನ ಪ್ರಕಾರ ಅವರ ಉತ್ತರದಾನಗಳು ಅನುಪಾತಿಕವಾಗಿ ಕಡಿಮೆಯಾಗುತ್ತವೆ. ಇಲ್ಲಿ ಉಪಶಮನದ ನಿಯಮವನ್ನು ಅನ್ವಯ ಮಾಡಲಾಗುತ್ತದೆ. ಉಪಶಮನ ಮಾಡುವುದೆಂದರೆ ಅಲ್ಲಿ ಅನುಪಾತಿಕವಾಗಿ ಆ ಉತ್ತರದಾನದ ಸ್ವತ್ತಿನಲ್ಲಿ ಕಳೆಗಿಮಾಡಲಾಗುತ್ತದೆ. ಇಲ್ಲಿ ಮರಣಶಾಸಕನ ವಾರಸುದಾರರ ಸಮ್ಮತಿಯಿಲ್ಲದೆ ಪ್ರತಿಯೊಬ್ಬ ಉತ್ತರದಾತನಿಗೆ ಕೊಡಲ್ಪಟ್ಟಿರುವ ಸ್ವತ್ತನ್ನು ಪ್ರತಿಯೊಬ್ಬನಿಗೆ ಕೊಟ್ಟಿರುವ ಪಾಲಿಗೆ ಅನುಪಾತದಲ್ಲಿ ಅದನ್ನು ಸರಿಸಮಾನಗೊಳಿಸಲಾಗುತ್ತದೆ ಮತ್ತು ಅವರೆಲ್ಲರಿಗೆ ಕೊಟ್ಟಿರುವ ಒಟ್ಟು ಸ್ವತ್ತು ಮೂರನೇ ಒಂದಕ್ಕಿಂತ ಹೆಚ್ಚಾಗುವುದಿಲ್ಲ. ಅನುಪಾತಿಕವಾಗಿ ವಂಟನೆ ಮಾಡುವ ಬಗ್ಗೆ ಸುನ್ನೀ ನಿಯಮಗಳನ್ನು ಈ ಕೆಳಗಿನ ನಿದರ್ಶನಗಳಿಂದ ವಿವರಿಸಬಹುದು :

1) 'ಟಿ' ಎಂಬ ಒಬ್ಬ ಸುನ್ನೀ ಮುಸಲ್ಮಾನು ತನ್ನ ವಾರಸುದಾರನಾಗಿರದ 'ಎ' ಎಂಬವನ ಪರವಾಗಿ ತನ್ನ ಸ್ವತ್ತಿನಲ್ಲಿ ಅರ್ಧದಷ್ಟನ್ನು ಮರಣ ಶಾಸನದಿಂದ 'ಎ' ನಿಗೆ ಕೊಡುವನು. 'ಟಿ' ಇವನ ವಾರಸುದಾರು ತಮ್ಮ ಸಮ್ಮತಿಯನ್ನು ಕೊಡುವುದಿಲ್ಲ. ಇಲ್ಲಿ 'ಎ' ಇವನು ಕೇವಲ ಮೂರನೇ ಒಂದರಷ್ಟು ಹಕ್ಕನ್ನು ಮಾತ್ರ ಪಡೆಯುವನು.

2) 'ಟಿ' ಎಂಬ ಒಬ್ಬ ಸುನ್ನೀ ಮುಸಲ್ಮಾನನು 'ಎ' 'ಬಿ' ಮತ್ತು 'ಸಿ' ಇವರ ಪರವಾಗಿ ಒಂದು ಮರಣ ಶಾಸನವನ್ನು ಮಾಡುವನು. ಇಲ್ಲಿ ಎಲ್ಲಾ ಉತ್ತರಾದಾತರು ವಾರಸುದಾರರಲ್ಲ, ಈ ಮರಣ ಶಾಸನದ ಪ್ರಕಾರ 'ಟಿ' ಎಂಬವನು ತನ್ನ ಸ್ವತ್ತನ್ನು ಪ್ರತಿಯೊಬ್ಬ ಉತ್ತರಾದಾತನಿಗೆ ಈ ಕೆಳಗಿನ ರೀತಿಯಲ್ಲಿ ವಂಟನೆ ಮಾಡಿರುವನು.

ಎ — ಅರ್ಧ

ಬಿ ಕಾಲು

ಸಿ — ಕಾಲು

ಇಲ್ಲಿ ಮರಣ ಶಾಸಕನು ತನ್ನ ಇಡೀ ಸ್ವತ್ತಿನಲ್ಲಿ ಅರ್ಧವನ್ನು 'ಎ' ನಿಗೆ ಮತ್ತು ನಾಲ್ಕನೇ ಒಂದರಷ್ಟು ಸ್ವತ್ತನ್ನು 'ಬಿ' ಮತ್ತು 'ಸಿ' ನಿಗೆ ಕೊಟ್ಟಿರುವನು. ಈ ರೀತಿಯಾಗಿ ಅವನು ತನ್ನ ಇಡೀ ಸ್ವತ್ತನ್ನು ಉತ್ತರದಾನಮಾಡಿರುವನು. ಆದರೆ ಇಲ್ಲಿ ಅವನ ವಾರಸುದಾರರು ಸಮ್ಮತಿ ಕೊಡುವುದಿಲ್ಲ. ಆದುದರಿಂದ 'ಟಿ' ಇವನ ಸ್ವತ್ತಿನಲ್ಲಿ ಕೇವಲ ಮೂರನೇ ಒಂದರಷ್ಟು ಅಂಶವನ್ನು ಮಾತ್ರ ಇವರೊಳಗೆ ಹಂಚ ಬಹುದು. 'ಎ' 'ಬಿ' ಮತ್ತು 'ಸಿ' ಇವರ ಪಾಲುಗಳಿಂದ ಹೆಚ್ಚಿನ ಸ್ವತ್ತನ್ನು ಕಳೆತಮಾಡುವದಕ್ಕೋಸ್ಕರ ಅಲ್ಲಿ ಉತ್ತರದಾನ ಮಾಡಬಹುದಾದ ಸ್ವತ್ತು ಮೂರನೇ ಒಂದಂಶವೆಂಬುದಾಗಿ ತೆಗೆದುಕೊಂಡು ಅವರಿಗೆ ಸಿಗುವ ಪಾಲನ್ನು ಈ ಕೆಳಗಿನಂತೆ ನಿರ್ಣಯಿಸಲಾಗುತ್ತದೆ. ಹೀಗೆ ಆ ಮೂವರು ಉತ್ತರಾದಾತರು ಕೊನೆಗೆ ಈ ಕೆಳಗಿನ ರೀತಿಯಲ್ಲಿ ತಮ್ಮ ಪಾಲುಗಳನ್ನು ಪಡೆಯುವರು :

ಎ .... ಇವನು ಮೂರನೇ ಒಂದರಲ್ಲಿ ಎರಡನೇ ಒಂದರಷ್ಟು = ಆರನೇ ಒಂದು.

ಬಿ .... ಮೂರನೆ ಒಂದರಲ್ಲಿ ನಾಲ್ಕನೆ ಒಂದು = ಹನ್ನೆರಡನೆ ಒಂದು.

ಸಿ .... ಮೂರನೇ ಒಂದರಲ್ಲಿ ನಾಲ್ಕನೆ ಒಂದು = ಹನ್ನೆರಡನೆ ಒಂದು.

ಈ ವಂಟನೆಯ ಪ್ರಕಾರ ಎ ಬಿ ಮತ್ತು ಸಿ ಇವರಿಗೆ ಕೊಡಲಾದ ಸ್ವತ್ತುಗಳು ಮೂರನೇ ಒಂದು ಆಗಿರುತ್ತವೆ. ಮತ್ತು ಈ ರೀತಿಯಲ್ಲಿ ಇದು ಮೂರನೇ ಒಂದರ ಉತ್ತರದಾನದ ಉಲ್ಲಂಘನೆಯನ್ನು ಮಾಡುವುದಿಲ್ಲ. ಅದೇ ಕಾಲದಲ್ಲಿ ಮರಣ ಶಾಸನದ ಪ್ರಕಾರ ಉತ್ತರಾದಾತರಿಗೆ ಕೊಡಲಾದ ಸ್ವತ್ತಿನ ಅನುಪಾತವನ್ನು ಅದೇ ರೀತಿಯಲ್ಲಿ ಇಟ್ಟುಕೊಳ್ಳಲಾಗಿದೆ.

ಶಿಯಾ ಕಾನೂನು (Shia law)

ಮೇಲೆ ಹೇಳಲ್ಪಟ್ಟ ಅನುಪಾತಿಕ ವಂಟನೆಯು ಸಿದ್ಧಾಂತವು ಶಿಯಾ ಕಾನೂನಿನಿಂದ ಮನ್ನಿಸಲ್ಪಟ್ಟಿಲ್ಲ. ಈ ಪರಂಪರೆಯು ಪ್ರಕಾರ ಬೇರೆ ಬೇರೆ ಉತ್ತರಾದಾತರಿಗೆ ಕೊಡಲ್ಪಟ್ಟ ಉತ್ತರದಾನವು ಮೂರನೇ ಒಂದಕ್ಕಿಂತ ಹೆಚ್ಚಿನದಾಗಿದ್ದರೆ ಮತ್ತು ಮರಣ ಶಾಸಕನ ವಾರಸುದಾರರು ಈ ರೀತಿಯ ವಂಟನೆಯನ್ನು ಪುಷ್ಟೀಕರಿಸದಿದ್ದರೆ ಅಲ್ಲಿ ಆ ಉತ್ತರದಾನವು ಆ ಆದ್ಯತೆಯ ಅನುಕ್ರಮಣದಲ್ಲಿ ಕಾರ್ಯಾಚರಣೆಗೆ ಬರುತ್ತದೆ. ಇಲ್ಲಿ ಆ ಆದ್ಯತೆಯ ಅನುಕ್ರಮಣವನ್ನು ಆ ಮರಣಶಾಸನದಲ್ಲಿ ಆ ಉತ್ತರಾದಾತರ ಹೆಸರು ಯಾವ ಅನುಕ್ರಮದಲ್ಲಿ ಬಂದಿದೆಯೋ ಅದರ ಮೇರೆಗೆ ನಿರ್ಣಯಿಸಲಾಗುತ್ತದೆ. ಅಲ್ಲಿ ಪ್ರತಿಯೊಬ್ಬ ಉತ್ತರಾದಾತನ ಪಾಲು ಕಡಿಮೆ ಮಾಡಲ್ಪಡುವುದಿಲ್ಲ ಮತ್ತು ಅದು ಅಷ್ಟೇ ಉಳಿಯುತ್ತದೆ ಒಂದು ಮರಣ ಶಾಸನದಲ್ಲಿ ಮೊದಲು ಯಾರ ಹೆಸರು ಬರುತ್ತದೊ ಅವನು ತನ್ನ ಪೂರ್ಣಪಾಲನ್ನು ಪಡೆಯುವನು. ಆ ಮೊದಲನೇ ವ್ಯಕ್ತಿಗೆ ಅವನ ಪಾಲು ಕೊಡಲ್ಪಟ್ಟ ಬಳಿಕ ಎರಡನೆ ಉತ್ತರದಾತನಿಗೆ ಅವನ ಪಾಲು ಹೋಗುತ್ತದೆ. ಅದರ ಬಳಿಕವೂ ಒಂದಿಷ್ಟು ಉಳಿದರೆ ಅದು ಮೂರನೇ ಉತ್ತರಾದಾತನಿಗೆ ಸೇರುತ್ತದೆ. ಮೂರನೇ ಒಂದರಷ್ಟು ಸ್ವತ್ತು ನಿಶ್ಯೇಷವಾದ ತಕ್ಷಣದಲ್ಲಿ ವಂಟನೆಯು ನಿಂತುಬಿಡುತ್ತದೆ. ಮತ್ತು ಆ ಮುಂದಿನ ಉತ್ತರದಾತನು ಏನನ್ನೂ ಪಡೆಯುವುದಿಲ್ಲ. ಈ ರೀತಿಯಾಗಿ ಇಲ್ಲಿ ಒಬ್ಬ ಉತ್ತರದಾತನು ಒಂದೇ ತನ್ನ ಪೂರ್ಣಪಾಲನ್ನು ಪಡೆಯುವನು ಅಥವಾ ಏನನ್ನೂ ಪಡೆಯಲಾರನು ಈ ವಿಷಯದ ಮೇಲೆ ಶಿಯಾ ಕಾನೂನನ್ನು ಆದ್ಯತಾ ವಂಟನೆಯ ನಿಯಮವೆಂಬುದಾಗಿ ಕರೆಯಬಹುದು. ಈ ಕೆಳಗಿನ ನಿದರ್ಶನವು ಈ ನಿಯಮಗಳನ್ನು ಸ್ಪಷ್ಟಪಡಿಸುತ್ತದೆ :

i) 'ಟಿ' ಎಂಬ ಒಬ್ಬ ಶಿಯಾ ಮರಣ ಶಾಸಕನು ಮಾಡಿರುವ ಒಂದು ಮರಣ ಶಾಸನದ ಪ್ರಕಾರ ಅವನು ತನ್ನ ಸ್ವತ್ತಿನಲ್ಲಿ ಎ, ಬಿ ಮತ್ತು ಸಿ ಇವರಿಗೆ ಈ ಕೆಳಗಿನ ಪಾಲುಗಳನ್ನು ಕೊಡುವನು.

ಎ....... ಮೂರನೇ ಒಂದು.

ಬಿ.......ನಾಲ್ಕನೇ ಒಂದು.

ಸಿ ....ಆರನೇ ಒಂದು.

ಇಲ್ಲಿ 'ಟಿ' ಯು ಮೂವರು ಉತ್ತರದಾತರಿಗೆ ಕೊಟ್ಟಿರುವ ಸ್ವತ್ತಿನ ಪ್ರಮಾಣವು ಸ್ವತ್ತಿನ ಪ್ರಮಾಣವು ಮೂರನೇ ಒಂದಕ್ಕಿಂತ ಹೆಚ್ಚಿನದಾಗಿರುತ್ತದೆ. ಆದರೆ 'ಟಿ' ಇವನ ವಾರಸುದಾರರು ತಮ್ಮ ಸಮ್ಮತಿ ಕೊಡಲು ನಿರಾಕರಿಸುವರು. ಇಲ್ಲಿ ಆದ್ಯತಾ ವಂಟನೆಯ ಶಿಯಾ ನಿಯಮವನ್ನು ಅನ್ವಯಿಸಿದರೆ 'ಎ' ಇವನು ಮೂರನೆ ಒಂದಂಶ ಪಾಲನ್ನು ಪಡೆಯುವನು. ಇದಕ್ಕೆ ಕಾರಣವೇನೆಂದರೆ ಆ ಮರಣಶಾಸನದಲ್ಲಿ ಅವನ ಹೆಸರು ಮೊದಲು ಸೂಚಿಸಲಾಗಿದೆ. 'ಎ' ಇವನಿಗೆ ಇವನ ಪಾಲನ್ನು ಕೊಟ್ಟ ಬಳಿಕ

ಅಲ್ಲೇನೂ ಉಳಿಯುವುದಿಲ್ಲ ಆದುದರಿಂದ 'ಬಿ' ಮತ್ತು 'ಸಿ' ಇವರಿಗೆ ಏನೂ ಸಿಗುವುದಿಲ್ಲ.

ii) 'ಟಿ' ಎಂಬ ಒಬ್ಬ ಶಿಯಾ ಮುಸಲ್ಮಾನನು ಎ, ಬಿ ಮತ್ತು ಸಿ ಇವರ ಪರವಾಗಿ ಒಂದು ಮರಣಶಾಸನವನ್ನು ನಿಷ್ಪಾದಿಸುವನು ಮತ್ತು ಅವರಿಗೆ ಕೊಟ್ಟ ಪಾಲನ್ನು ಈ ಕೆಳಗಿನಂತೆ ನಿರ್ದಿಷ್ಟಗೊಳಿಸಿರುವನು.

ಎ........ಹನ್ನೆರಡನೇ ಒಂದು.

ಬಿ ....ನಾಲ್ಕನೇ ಒಂದು.

ಸಿ........ಆರನೇ ಒಂದು.

ಇಲ್ಲಿ ಈ ಉತ್ತರದಾತರಿಗೆ ಕೊಡಲ್ಪಟ್ಟಿರುವ ಸ್ವತ್ತು ಮೂರನೇ ಒಂದಕ್ಕಿಂತ ಹೆಚ್ಚಿನದಾಗಿರುತ್ತದೆ. 'ಟಿ' ಇವನ ವಾರಸುದಾರರು ಇದಕ್ಕೆ ತಮ್ಮ ಸಮ್ಮತಿಕೊಡುವುದಿಲ್ಲ; ಆದುದರಿಂದ ಇಲ್ಲಿ ಆದ್ಯತಾ ವಂಟನೆಯ ನಿಯಮವನ್ನು ಮನ್ನಣೆಮಾಡಲಾಗುತ್ತದೆ. ಹೀಗೆ 'ಎ' ಎಂಬ ಮೊದಲನೇ ಉತ್ತರದಾತನು ತನ್ನ ಹನ್ನೆರಡನೇ ಒಂದು ಪಾಲನ್ನು ಪಡೆಯುವನು, ಆ ಬಳಿಕ ಅಲ್ಲಿ ನಾಲ್ಕನೇ ಒಂದು ಪಾಲು ಉಳಿಯುತ್ತದೆ. ಈ ಉಳಿದಿರುವ ನಾಲ್ಕನೇ ಒಂದು ಪಾಲು 'ಬಿ' ಯದ್ದಾಗಿದ್ದು ಅದು 'ಬಿ' ನಿಗೆ ಸೇರುತ್ತದೆ. 'ಎ' ಮತ್ತು 'ಬಿ' ಇವರಿಗೆ ಉತ್ತರದಾನದ ಪಾಲುಗಳನ್ನು ಕೊಟ್ಟ ಬಳಿಕ ಏನೂ ಉಳಿಯುವುದಿಲ್ಲ. ಆದುದರಿಂದ 'ಸಿ' ಇವನಿಗೆ ಏನೂ ಸಿಗುವುದಿಲ್ಲ.

ಅಪವಾದ (Exception)

ಆದ್ಯತಾ ವಂಟನೆಯ ಶಿಯಾ ನಿಯಮಕ್ಕೆ ಒಂದು ಅಪವಾದವಿದೆ. ಒಂದೊಮ್ಮೆ ಒಬ್ಬ ಶಿಯಾ ಮರಣಶಾಸಕನು ತನ್ನ ಮೂರನೇ ಒಂದರಷ್ಟು ಸ್ವತ್ತನ್ನು ಇಬ್ಬರು ಅಥವಾ ಹೆಚ್ಚಿನ ಉತ್ತರಾದಾತನಿಗೆ ಉತ್ತರದಾನ ಮಾಡಿದರೆ ಅಲ್ಲಿ ಅದ್ಯತೆಯ ಅನುಕ್ರಮಣವನ್ನು ವಿರುದ್ಧಗೊಳಿಸಲಾಗುತ್ತದೆ ಮತ್ತು ಕೊನೆಗೆ ಹೆಸರಿಸಲಾದ ವ್ಯಕ್ತಿಯು ಮೊದಲನೇ ಇಬ್ಬರ ಮೇಲೆ ಆದ್ಯತೆಯನ್ನು ಪಡೆಯುವನು. ಉದಾಹರಣೆಗಾಗಿ, ಒಬ್ಬ ಶಿಯಾ ಮರಣ ಶಾಸಕನು ತನ್ನ ಸ್ವತ್ತುಗಳಲ್ಲಿ ಮೂರನೇ ಒಂದು ಭಾಗಕ್ಕೆ ಒಂದು, ಮರಣಶಾಸನವನ್ನು ಮಾಡಿ ಅದನ್ನು 'ಎ' ಎಂಬವನಿಗೆ ಮೂರನೆ ಒಂದು ಹಾಗೂ 'ಸಿ' ಎಂಬವನಿಗೆ ಮೂರನೇ ಒಂದರಷ್ಟು ಕೊಡುವನು. ಸಾಮಾನ್ಯವಾಗಿ ಶಿಯಾ ನಿಯಮದ ಪ್ರಕಾರ ಇಲ್ಲಿ 'ಎ'ಯು ತನ್ನ ಮೂರನೇ ಒಂದು ಪಾಲನ್ನು ಪಡೆದಿರಬೇಕಾಗುತ್ತದೆ ಹಾಗೂ 'ಬಿ' ಮತ್ತು 'ಸಿ' ಇವರು ಏನನ್ನೂ ಪಡೆಯುವಂತಿಲ್ಲ. ಆದರೆ ಶಿಯಾ ಕಾನೂನಿನ ಒಂದು ಅಪವಾದಿಕ ನಿಯಮದ ಪ್ರಕಾರ ಇಂತಹ ಒಂದು ಪರಿಸ್ಥಿತಿಯಲ್ಲಿ 'ಸಿ' ಎಂಬವನು ಮೂರನೇ ಒಂದರಷ್ಟು ಪಾಲನ್ನು ಪಡೆಯುವನು ಮತ್ತು ಎ ಮತ್ತು ಬಿ ಎಂಬ ಮೊದಲನೇ ಎರಡು ಉತ್ತರಾದಾತರು ಏನನ್ನೂ ಪಡೆಯುವುದಿಲ್ಲ. ಇಬ್ಬರು ಅಥವಾ ಹೆಚ್ಚಿನ ಉತ್ತರಾ

ದಾತರು ತಲಾ ಮೂರನೇ ಒಂದರಷ್ಟು ಪಾಲನ್ನು ಉತ್ತರದಾನವಾಗಿ ಪಡೆಯುವುದಿದ್ದಲ್ಲಿ ಮಾತ್ರ ಅಪವಾದಿಕ ನಿಯಮವು ಅನ್ವಯುವಾಗುತ್ತದೆ.

ಶರತ್ತುಬದ್ಧ ಮತ್ತು ಘಟನಾವಲಂಬಿ ಮರಣಶಾಸನಗಳು (Conditional and contingent wills)

ಶರತ್ತುಬದ್ಧ ಮರಣಶಾಸನಗಳು (Conditional wills)

ಯಾವತ್ತೂ ಶರತ್ತುಗಳಿಗೆ ಬಾಧ್ಯವಾಗಿ ಮಾಡಲ್ಪಟ್ಟ ಒಂದು ಮರಣ ಶಾಸನವು ಒಂದು ಶರತ್ತುಬದ್ಧ ಮರಣ ಶಾಸನವೆಂದು ಎಣಿಸಲ್ಪಡುತ್ತದೆ. ಒಂದು ಶರತ್ತು ಬದ್ಧ ಮರಣ ಶಾಸನವು ವಿಧ್ಯುಕ್ತವಾಗಿರುತ್ತದೆ. ಆದರೆ ಅದಕ್ಕೆ ಹಚ್ಚಲ್ಪಟ್ಟ ಶರತ್ತು ಶೂನ್ಯವಾಗುತ್ತದೆ. ಒಂದು ಮರಣ ಶಾಸನಕ್ಕೆ ಹಚ್ಚಲ್ಪಟ್ಟ ಶರತ್ತನ್ನು ಪೂರ್ತಿಗೊಳಿಸುವ ಅವಶ್ಯಕತೆಯಿಲ್ಲ. ಉತ್ತರಾದಾತನು ತನಗೆ ಉತ್ತರದಾನ ಮಾಡಲ್ಪಟ್ಟ ಸ್ವತ್ತಿನಲ್ಲಿ ಪರಮ ಮತ್ತು ಶರತ್ತುಬಾಹಿರ ಹಿತಸಂಬಂಧವನ್ನು ಪಡೆಯುವನು. ಒಂದು ದಾನದಂತೆ ಒಂದು ಉತ್ತರದಾನವೂ ಸಹ ಒಂದು ಪರಮವಾದ ಹಿತಸಂಬಂಧದ ಹಸ್ತಾಂತರಣವಾಗಿರುತ್ತದೆ. ಒಂದು ಅನುದಾನದ ಪೂರ್ಣತ್ವಕ್ಕೆ ಹಾನಿಯುಂಟುಮಾಡುವಂತಹ ಯಾವುದೇ ಒಂದು ಶರತ್ತು ಶೂನ್ಯವಾಗಿರುತ್ತದೆ. ಆದುದರಿಂದ ಜೀವಮಾನಕ್ಕಾಗಿ ಮಾಡಲ್ಪಟ್ಟ ಒಂದು ಉತ್ತರದಾನವು ಸುನ್ನೀ ಕಾನೂನಿನ ಪ್ರಕಾರ ಒಂದು ಶರತ್ತುಬದ್ಧ ಮರಣಶಾಸನವೆಂದು ಎಣಿಸಲ್ಪಡುತ್ತದೆ. ಆದುದರಿಂದ ಒಂದೊಮ್ಮೆ ಒಬ್ಬ ಸುನ್ನೀ ಮರಣಶಾಸಕನು ಒಂದು ಮರಣಶಾಸನ ಮಾಡಿ ಉತ್ತರಾದಾತನಿಗೆ ಒಂದು ಜೀವಾವಧಿಯ ಉತ್ತರದಾನವನ್ನು ಕೊಟ್ಟರೆ ಅಲ್ಲಿ ಜೀವಾವಧಿಯ ಬಗ್ಗೆ ಹಾಕಲ್ಪಟ್ಟ ಶರತ್ತು ಶೂನ್ಯವಾಗುತ್ತದೆ. ಆದರೆ ಆ ಮರಣ ಶಾಸನವು ವಿಧ್ಯುಕ್ತವಾಗಿಯೇ ಉಳಿಯುತ್ತದೆ. ಆದರೆ ಶಿಯಾ ಕಾನೂನಿನ ಪ್ರಕಾರ ಒಬ್ಬ ಉತ್ತರಾದಾತನ ಜೀವಾವಧಿಗೆ ಸೀಮಿತಗೊಳ್ಳುವ ಒಂದು ಉತ್ತರದಾನವು ವಿಧ್ಯುಕ್ತವಾಗಿರುತ್ತದೆ.

ಘಟನಾವಲಂಬಿ ಮರಣ ಶಾಸನ (Contingent Will)

ಒಂದು ಘಟನಾವಲಂಬಿ ಮರಣಶಾಸನವು ಶೂನ್ಯವಾಗಿರುತ್ತದೆ. ಒಬ್ಬ ಉತ್ತರಾದಾತನಲ್ಲಿ ನಿಹಿತಗೊಳಿಸಲ್ಪಡುವ ಹಿತಸಂಬಂಧವು ಯಾವತ್ತೂ ಅನಿಶ್ಚಿತವಾದ ಭಾವೀ ಘಟನೆಯ ಮೇಲೆ ಅವಲಂಬಿಸಿದ್ದರೆ ಅಲ್ಲಿ ಆ ಮರಣಶಾಸನವು ಶೂನ್ಯವಾಗಿರುತ್ತದೆ, ಮತ್ತು ಅದು ಕಾರ್ಯಾಚರಣೆಗೆ ಬರುವದಿಲ್ಲ. ಇಂತಹ ಪ್ರಕರಣಗಳಲ್ಲಿ ಒಂದೊಮ್ಮೆ ಆ ಘಟನೆಯು ಘಟಿಸಲ್ಪಟ್ಟರೂ ಸಹ ಆ ಉತ್ತರಾದಾತನು ಯಾವತ್ತೂ ಸ್ವತ್ತನ್ನು ಪಡೆಯಲಾರನು. ಒಂದು ಮರಣ ಶಾಸನದ ರೀತಿಯ ವ್ಯವಹಾರದ ಒಂದು ಮೂಲಭೂತ ಸ್ವರೂಪವು ಹೇಗಿದೆಯೆಂದರೆ ಅಲ್ಲಿ ಆ ಮರಣ ಶಾಸಕನ ಮರಣವಾದಾಗ ಆ ಉತ್ತರದಾನಮಾಡಲ್ಪಟ್ಟ ಸ್ವತ್ತು ಉತ್ತರಾ

ದಾತನಲ್ಲಿ ನಿಹಿತಗೊಳ್ಳುತ್ತದೆ. ಆದುದರಿಂದ ಮರಣ ಶಾಸಕನ ಮರಣದ ಹೊರತಾಗಿ ಇತರ ಯಾವತ್ತೂ ಘಟನೆಯ ಘಟಿಸುವಿಕೆಯು ಒಬ್ಬ ಉತ್ತರಾದಾತನಿಗೆ ಆ ಸ್ವತ್ತಿನಲ್ಲಿ ಹಿತಸಂಬಂಧವನ್ನು ಕೊಡುವದಿಲ್ಲ. ಆದರೆ ಒಂದು ಪರ್ಯಾಯ ಉತ್ತರದಾನವು ವಿಧ್ಯುಕ್ತವಾಗಿರುತ್ತದೆ, ಒಂದು ಪರ್ಯಾಯ ಉತ್ತರದಾನದಲ್ಲಿ ಮರಣಶಾಸಕನು ತನ್ನ ಮರಣವನ್ನು ಒಬ್ಬ ಉತ್ತರಾದಾತನಿಗೆ ಕೊಡುವನಾದರೂ ಸಹ ಅಲ್ಲಿ ಒಂದೊಮ್ಮೆ ಮರಣ ಶಾಸಕನಿಗಿಂತ ಮೊದಲು ಆ ಉತ್ತರಾದಾತನು ಮೃತನಾದರೆ ಅಲ್ಲಿ ಆ ಸ್ವತ್ತು ಇನ್ನೊಬ್ಬ ಉತ್ತರಾದಾತನಿಗೆ ಹೋಗುವದೆಂಬ ಒಂದು ಉಪಬಂಧವು ಮಾಡಲ್ಪಡಬಹುದು. ಇಂತಹ ಒಂದು ಪ್ರಕರಣದಲ್ಲಿ ಒಂದೊಮ್ಮೆ ಆ ಉತ್ತರಾದಾತನು ಆ ಮರಣ ಶಾಸಕನ ಉತ್ತರಜೀವಿಯಾಗಿದ್ದರೆ ಅಲ್ಲಿ ಅವನಿಗೆ ಕೊಡಲ್ಪಟ್ಟ ಸ್ವತ್ತನ್ನು ಅವನು ಪಡೆಯುವನು. ಆದರೆ ಒಂದೊಮ್ಮೆ ಅವನು ಮರಣ ಶಾಸಕನಿಗಿಂತ ಮೊದಲು ಮೃತನಾದರೆ ಅಲ್ಲಿ ಅವನ ಪರವಾಗಿ ಮಾಡಲ್ಪಟ್ಟ ಮರಣಶಾಸನವು ವಿಫಲಗೊಳ್ಳುತ್ತದೆ ಮತ್ತು ಆ ಸ್ವತ್ತು ಎರಡನೇ ಉತ್ತರಾದಾತನಿಗೆ ಸೇರುತ್ತದೆ.

ಮರಣ ಶಾಸನಗಳ ರದ್ದುಗೊಳ್ಳುವಿಕೆ (Revocation of Wills)

ಒಂದು ಮರಣ ಶಾಸನವು ಒಬ್ಬ ಮರಣ ಶಾಸಕನಿಂದ ತಾನು ಸಾಯುವುದಕ್ಕಿಂತ ಮೊದಲು ಯಾವುದೇ ಕಾಲದಲ್ಲಿ ರದ್ದುಗೊಳಿಸಲ್ಪಡಬಹುದು. ಅಂತಹ ರದ್ದುಗೊಳಿಸುವಿಕೆಯು ಆ ಉತ್ತರಾದಾನದ ಪೂರ್ಣಸ್ವತ್ತಿನ ಸಂಬಂಧದಲ್ಲಾಗಬಹುದು ಅಥವಾ ಅವರ ಭಾಗದ ಸಂಬಂಧದಲ್ಲಿ. ಒಂದು ಮರಣಶಾಸನವು ವ್ಯಕ್ತವಾಗಿ ಅಥವಾ ಅವ್ಯಕ್ತವಾಗಿ ರದ್ದುಗೊಳ್ಳಲ್ಪಡಬಹುದು. ಒಂದೊಮ್ಮೆ ಒಂದು ಮರಣ ಶಾಸನವು ಮರಣಶಾಸಕನಿಂದ ರದ್ದುಗೊಳಿಸಲ್ಪಟ್ಟಿದ್ದರೆ ಅಲ್ಲಿ ಆ ಉತ್ತರಾದಾತನು ಮರಣಶಾಸನದಲ್ಲಿ ಹೇಳಲ್ಪಟ್ಟ ಸ್ವತ್ತನ್ನು ಪಡೆಯುವುದಿಲ್ಲ.

ವ್ಯಕ್ತ ರದ್ದುಗೊಳಿಸುವಿಕೆ (Express Revocation)

ತಾನು ಮಾಡಿರುವ ಮರಣ ಶಾಸನವನ್ನು ತಾನು ರದ್ದುಗೊಳಿಸಿರುವೆನು ಎಂಬುದಾಗಿ ಒಬ್ಬ ಮರಣ ಶಾಸಕನು ಒಂದು ಘೋಷಣೆಮಾಡಿದರೆ ಅಲ್ಲಿ ಆ ರದ್ದುಗೊಳಿಸುವಿಕೆಯು ವ್ಯಕ್ತವಾದುದೆಂಬುದಾಗಿ ಎಣಿಸಲ್ಪಡುತ್ತದೆ. ಒಂದು ರದ್ದುಗೊಳಿಸುವಿಕೆಯ ಹೇಳಿಕೆಯು ಮೌಖಿಕವಾಗಿರಬಹುದು ಅಥವಾ ಲಿಖಿತ. ಆದರೆ ಅದು ಸ್ಪಷ್ಟ ಹಾಗೂ ಅಸಂದಿಗ್ಧವಾಗಿರಬೇಕು. ಒಂದು ನೋಂದಾಯಿಸಲ್ಪಟ್ಟಿರದ ಮರಣಶಾಸನವನ್ನು ಹರಿದು ಹಾಕಿ ಅಥವಾ ಸುಟ್ಟು ಹಾಕಿ ನಾಶಗೊಳಿಸುವುದು ಒಂದು ವ್ಯಕ್ತ ರದ್ದಿಯಾತಿ ಎಂಬುದಾಗಿ ಎಣಿಸಲ್ಪಡುತ್ತದೆ. ಏಕೆಂದರೆ ಇದು ಆ ಉತ್ತರದಾನವನ್ನು ಅಕೃತಗೊಳಿಸುವ ಬಗ್ಗೆ ಮರಣಶಾಸಕನ ಉದ್ದೇಶವನ್ನು ತೋರಿಸುತ್ತದೆ. ಒಬ್ಬ ಮರಣಶಾಸಕನು ಒಂದು ನ್ಯಾಯಾಲಯದಲ್ಲಿ ಈ ಬಗ್ಗೆ

ಒಂದು ಹೇಳಿಕೆ ಕೊಟ್ಟೂ ಸಹ ಒಂದು ಮರಣ ಶಾಸನವನ್ನು ವ್ಯಕ್ತವಾಗಿ ರದ್ದು ಗೊಳಿಸಬಹುದು. ಇಂತಹ ಒಂದು ಹೇಳಿಕೆಯಿಂದ ಒಂದು ಮರಣಶಾಸನವು ರದ್ದುಗೊಳ್ಳುತ್ತದೆ ಮತ್ತು ಇಲ್ಲಿ ಆ ಮರಣಶಾಸನವು ನಾಶಗೊಳಿಸಲ್ಪಡದಿದ್ದರೂ ಸಹ ಇದರ ಮೇಲೆ ಅದು ಯಾವತ್ತೂ ಪರಿಣಾಮವನ್ನು ಬೀರುವುದಿಲ್ಲ. ಆದರೆ ತನ್ನಿಂದ ಮಾಡಲ್ಪಟ್ಟ ಒಂದು ಉತ್ತರದಾನದ ವಿಧ್ಯುಕ್ತತೆಯನ್ನು ಆ ಮರಣ ಶಾಸಕನು ಅಲ್ಲಗಳೆದರೆ ಅಥವಾ ತಾನು ಒಂದು ಮರಣಶಾಸನ ಮಾಡಿದೆ ಇಲ್ಲವೆಂಬು ದಾಗಿ ಹೇಳುತ್ತಿದ್ದರೆ ಅಲ್ಲಿ ಅದು ಒಂದು ಮರಣಶಾಸನದ ರದ್ದಿಯಾತಿಗಾಗಿ ಕಾರ್ಯಾಚರಣೆಗೆ ಬರುವುದಿಲ್ಲ.

ಅವ್ಯಕ್ತ ರದ್ದಿಯಾತಿ (Implied Revocation)

ಒಂದು ಮರಣ ಶಾಸನದ ರದ್ದಿಯಾತಿಯು ಅವ್ಯಕ್ತವಾಗಿಯೂ ಮಾಡಲ್ಪಡ ಬಹುದು. ಒಬ್ಬ ಮರಣ ಶಾಸಕನು ತಾನು ಮಾಡಿರುವ ಒಂದು ಮರಣ ಶಾಸನ ವನ್ನು ವ್ಯಕ್ತವಾಗಿ ರದ್ದುಗೊಳಿಸದಿರಬಹುದು. ಆದರೆ ಆ ಮರಣ ಶಾಸನವನ್ನು ರದ್ದುಗೊಳಿಸುವ ಅವನ ಉದ್ದೇಶವನ್ನು ಅವನ ನಡತೆಯಿಂದ ನಿರ್ಣಯಿಸುವುದು ಸಾಧ್ಯವಾಗುತ್ತದೆ. ಉದಾಹರಣೆಗಾಗಿ, ಒಂದೊಮ್ಮೆ ಒಬ್ಬ ಮರಣ ಶಾಸಕನು ಉತ್ತರದಾನವಾಗಿ ಕೊಡಲಾಗುವ ಸ್ವತ್ತಿನ ಸಂಬಂಧದಲ್ಲಿ ಏನನ್ನಾದರೂ ಮಾಡಿದರೆ ಮತ್ತು ಅದು ಆ ಸ್ವತ್ತಿನ ಬಗ್ಗೆ ತನ್ನ ಸ್ವಂತ ಸ್ವಾಮಿತ್ವಕ್ಕೆ ಧಕ್ಕೆ ತರುವಂತಹದ್ದಾಗಿ ದ್ದರೆ ಅಲ್ಲಿ ಆ ಮರಣ ಶಾಸಕನ ನಡತೆಯು ಆ ಮರಣ ಶಾಸನವನ್ನು ರದ್ದು ಗೊಳಿಸುವ ಉದ್ದೇಶವನ್ನು ಸೂಚಿಸುತ್ತದೆ. ಒಂದೊಮ್ಮೆ ಒಬ್ಬ ಮರಣ ಶಾಸಕನು ತಾನು ಉತ್ತರದಾನವಾಗಿ ಕೊಡಬೇಕಾಗಿರುವ ಸ್ವತ್ತನ್ನು ನಾಶಗೊಳಿಸಿದರೆ ಅಥವಾ ಹಸ್ತಾಂತರಣಗೊಳಿಸಿದರೆ ಅವನು ಸ್ವತಃ ಅದರ ಮಾಲಕನಾಗಿರುವುದು ನಿಂತುಬಿಡು ತ್ತದೆ ಮತ್ತು ಅವನ ಆ ಮರಣ ಶಾಸನವು ಅರ್ಥಹೀನವಾಗುತ್ತದೆ.

ಮೃತ್ಯುಶೆಯ್ಯಾದಾನಗಳು ಮತ್ತು ಅಧಿಸ್ವೀಕೃತಿಗಳು (Death-bed Gifts and acknowledgements)

ಮರಣಶೆಯ್ಯಾದಾನಗಳು (Death-bed Gifts)

ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮುಸಲ್ಮಾನರಿಂದ ಮಾಡಲ್ಪಡುವ ದಾನಗಳನ್ನು ಮರಣ ಶಾಸನಗಳೆಂದು ಎಣಿಸಲಾಗುತ್ತದೆ. ಒಂದೊಮ್ಮೆ ಒಬ್ಬ ಮುಸಲ್ಮಾನನು ಮೃತ್ಯುಶೆಯ್ಯೆಯಲ್ಲಿದ್ದಾಗ ತನ್ನ ಸ್ವತ್ತುಗಳ ಯಾವತ್ತೂ ದಾನ ಮಾಡಿದರೆ ಅಲ್ಲಿ ಆ ವ್ಯವಹಾರದ ಕಾನೂನೀ ಪರಿಣಾಮಗಳು ಒಂದು ಹಿಬಾ ಆಗುವುದಿಲ್ಲ. ಬದಲಾಗಿ ಒಂದು ಮರಣ ಶಾಸನವಾಗುತ್ತವೆ. ಮೃತ್ಯುಶೆಯ್ಯೆಯಲ್ಲಿ ಮಾಡಲ್ಪಡುವ ಒಂದು ದಾನವು ಆರಂಭದಲ್ಲಿ ಅದೊಂದು ದಾನವಾಗಿದ್ದರೂ ಸಹ

ಆದರ ಕಾನೂನೀ ಪರಿಣಾಮಗಳಿಂದಾಗಿ ಅದೊಂದು ಮರಣ ಶಾಸನವಾಗಿರುತ್ತದೆ. ಮೃತ್ಯುಶೆಯ್ಯಾದಾನಗಳ ಸಿದ್ಧಾಂತವು ಆ ಹಸ್ತಾಂತರಣದ ಕಾಲದಲ್ಲಿ ದಾನಿಯ ಮನಸ್ಥಿತಿಯ ಮೇಲೆ ಆಧಾರಿತವಾಗಿರುತ್ತದೆ. ಒಬ್ಬ ವ್ಯಕ್ತಿಯು ತನ್ನ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಒಂದು ದಾನವನ್ನು ಮಾಡಿದರೆ ಅಲ್ಲಿ ಅವನು ತನ್ನ ಸ್ವತ್ತುಗಳನ್ನು ತನ್ನ ಯೋಜನೆಗೆ ಅನುಗುಣವಾಗಿ ಹಸ್ತಾಂತರಿಸಬಯಸುವನು. ಮತ್ತು ಅವನಿಗೆ ಬದುಕುವ ಬಗ್ಗೆ ಯಾವತ್ತೂ ಆಸೆಯು ಇಲ್ಲದಂತಹ ಒಂದು ಮಾನಸಿಕ ಸ್ಥಿತಿಯಲ್ಲಿ ಅವನು ಈ ರೀತಿಯ ದಾನವನ್ನು ಮಾಡುವನು. ಮರಣಾಂತಿಕ ರೋಗಗಳಿಂದ ನರಳುತ್ತಿರುವ ಒಬ್ಬ ವ್ಯಕ್ತಿಯು ತಾನು ಬಹುಬೇಗನೆ ಸಾಯಲಿರುವೆನೆಂದು ತಿಳಿದುಕೊಳ್ಳುವನು ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಅವನು ತನ್ನ ಸ್ವತ್ತುಗಳನ್ನು ದಾನಮಾಡುವ ಪ್ರಯತ್ನ ಮಾಡುವನು ಇಲ್ಲಿ ನಡೆಯುವ ಹಸ್ತಾಂತರಣವು ಜೀವಿತ ವ್ಯಕ್ತಿಗಳೊಳಗಿನ ಹಸ್ತಾಂತರಣವಾಗಿದ್ದರೂ ಸಹ ಇದು ಆ ದಾನಿಯ ಮರಣದ ಬಳಿಕ ಮಾತ್ರ ಕಾರ್ಯಾಚರಣೆಗೆ ಬರುತ್ತದೆ ಮೃತ್ಯುಶೆಯ್ಯೆಯಲ್ಲಿರುವ ಒಬ್ಬ ಮುಸಲ್ಮಾನನಿಂದ ಮಾಡಲ್ಪಡುವ ದಾನಗಳು ಒಂದು ಮರಣ ಶಾಸನದ ಪರಿಣಾಮವುಳ್ಳವುಗಳಾಗಿದ್ದರೂ ಸಹ ಅವನ ಈ ಕೃತ್ಯಕ್ಕೆ ಯಾವುದೇ ರೀತಿಯ ನಿರ್ಬಂಧನೆಯಿರುವದಿಲ್ಲ. ಒಬ್ಬ ಮುಸಲ್ಮಾನನಿಂದ ಮಾಡಲ್ಪಡುವ ಮೃತ್ಯುಶೆಯ್ಯಾದಾನವು ಮುಸ್ಲಿಮ್ ಮರಣ ಶಾಸನಗಳ ಸಂಬಂಧದಲ್ಲಿರುವ ಮೂರನೇ ಒಂದಂಶದ ನಿಯಮವನ್ನು ನಿರರ್ಥಕಗೊಳಿಸಬಹುದಾದ ಕಾರಣದಿಂದಾಗಿ ಒಂದು ಮರಣಶೆಯ್ಯಾದಾನವನ್ನು ಒಂದು ಮರಣ ಶಾಸನವೆಂಬುದಾಗಿ ಎಣಿಸಲಾಗುತ್ತದೆ.

ಮೃತ್ಯುಶೆಯ್ಯಾದಾನದ ಅವಶ್ಯಕತೆಗಳು (Essential of a Death-bed Gift)

ಮರಣಾಂತಿಕ ಕಾಯಿಲೆಯಿಂದ ಪೀಡಿತನಾಗಿರುವ ಒಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟ ಒಂದು ದಾನವು ಒಂದು ಶುದ್ಧ ಹಿಬಾ ಆಗಿರುತ್ತದೆ. ಆದರೆ ಅದು ಕಾರ್ಯಾಚರಣೆಗೆ ಬರುವಾಗ ಅದೊಂದು ಮರಣ ಶಾಸನವಾಗಿರುತ್ತದೆ. ಆದುದರಿಂದ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲ್ಪಟ್ಟಿರುವ ಒಂದು ದಾನದಲ್ಲಿ ಎರಡು ಅವಶ್ಯಕ ಷರತ್ತುಗಳಿರಬೇಕಾಗುತ್ತದೆ : (1) ಅಲ್ಲೊಂದು ವಿಧ್ಯುಕ್ತವಾದ ದಾನವು ನಡೆಯಲ್ಪಟ್ಟಿರಬೇಕು. ಮತ್ತು (2) ಆ ದಾನವು ದಾನಿಯ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲ್ಪಟ್ಟದಾಗಿರಬೇಕು.

I) ಒಂದು ವಿಧ್ಯುಕ್ತವಾದ ಮತ್ತು ಪರಿಪೂರ್ಣವಾದ ದಾನ (A Valid and Complete Gift)

ಒಂದು ಸಾಮಾನ್ಯವಾದ ದಾನ ಮತ್ತು ಮೃತ್ಯುಶೆಯ್ಯಾದಾನ ಇವುಗಳೊಳಗಿನ ವ್ಯತ್ಯಾಸವೇನೆಂದರೆ ಒಬ್ಬ ದಾನಿಯು ತನ್ನ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಒಂದು ದಾನಮಾಡುವನಾದರೆ ಅಲ್ಲಿ ಆ ದಾನವು ಒಂದು ಮರಣ ಶಾಸನದಿಂದ ಮಾಡಲ್ಪಟ್ಟ ದಾನವಾಗಿರುತ್ತದೆ; ಒಂದೊಮ್ಮೆ ಅವನು ಸಾಮಾನ್ಯ ಸ್ಥಿತಿಯಲ್ಲಿರುವಾಗ

ಆ ದಾನವನ್ನು ಮಾಡಿದ್ದರೆ ಅಲ್ಲಿ ಆ ದಾನವು ಒಂದು ಶುದ್ಧ ಹಿಬಾ ಎಂಬುದಾಗಿ ಎಣಿಸಲ್ಪಡುತ್ತದೆ. ಹೀಗೆ ಒಂದು ಮೃತ್ಯುಶಯ್ಯಾದಾನದಲ್ಲಿ ಒಂದು ವಿದ್ಯುಕ್ತವಾದ ಹಿಬಾ ಇದರ ಎಲ್ಲಾ ಅವಶ್ಯಕತೆಗಳು ಇರಬೇಕಾತ್ತದೆ. ಅಲ್ಲೊಂದು ಘೋಷಣೆ ಸ್ವೀಕೃತಿ ಮತ್ತು ಕಬ್ಜೆಯು ಪ್ರಲಕ್ಷಿತ ಅಥವಾ ನೈಜ ಪ್ರದಾಯಕತ್ವವು ನಡೆಯ ಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವದಿದ್ದರೆ ಆ ದಾನವು ಮುಸ್ಲಿಮ್ ಮತೀಯ ಕಾನೂನಿನ ಉಪಬಂಧಗಳಿಗೆ ಅನುಗುಣವಾಗಿ ಎಲ್ಲಾ ರೀತಿಗಳಿಂದಲೂ ವಿದ್ಯುಕ್ತ ವಾಗಿರಬೇಕಾಗುತ್ತವೆ.

II) ಮರಣಾಂತಿಕ ಕಾಯಿಲೆ (Marz-ul-mout)

ಮರಣಾಂತಿಕ ರೋಗವು ಒಂದು ರೋಗವಾಗಿದ್ದು ಆ ರೋಗದಲ್ಲಿ ಒಬ್ಬ ವ್ಯಕ್ತಿಯು ಮೃತನಾಗುವನು. ಅಲ್ಲದೆ ಇಲ್ಲಿ ಅಂತಹ ರೋಗದಿಂದ ನರಳುತ್ತಿರುವ ವ್ಯಕ್ತಿಗೆ ತನ್ನ ಮರಣದ ಬಗ್ಗೆ ಒಂದು ಪೂರ್ವಕಲ್ಪನೆಯು ಬಂದಿರಬೇಕಾಗುತ್ತದೆ. ಒಂದು ರೋಗದಿಂದ ನರಳುತ್ತಿರುವ ವ್ಯಕ್ತಿಯು ತಾನು ಈ ರೋಗದಿಂದ ಪಾರಾಗು ವಂತಿಲ್ಲ ಮತ್ತು ಇದರಲ್ಲೇ ತಾನು ಸಾಯುವುದು ಖಚಿತ ಎಂಬುದಾಗಿ ಒಂದು ತೀರ್ಮಾನಕ್ಕೆ ಬಂದಿರುವನಾದರೆ ಯಾವುದೇ ಒಂದು ರೋಗವು ಮರಣಾಂತಿಕ ರೋಗವೆಂದು ಕರೆಯಲ್ಪಡುತ್ತದೆ. ಮರಣಾಂತಿಕ' ಕಾಯಿಲೆಯ ಪರೀಕ್ಷೆಯನ್ನು ಇದೇ ರೀತಿಯಲ್ಲಿ ಆ ಕಾಯಿಲೆಯಿಂದ ಪೀಡಿತನಾಗಿರುವ ವ್ಯಕ್ತಿಯ ಮನಸ್ಸಿನಲ್ಲಿ ತನ್ನ ಮರಣದ ಬಗ್ಗೆ ಹುಟ್ಟುವ ಪೂರ್ವಸೂಚನೆಯ ಅನುಸಾರ ನಿರ್ಣಯಿಸಲಾಗು ತ್ತದೆ. ಅವನು ಸಾಯಲಿರುವನು ಮತ್ತು ಅದೊಂದು ಗಂಭೀರವಾದ ಕಾಯಿಲೆ ಎಂಬ ಒಂದು ಭಾವನೆಯು ಇತರ ವ್ಯಕ್ತಿಗಳ ಮನಸ್ಸಿನಲ್ಲಿ ಮೂಡಿದರೂ ಸಹ ಅದು ಈ ಉದ್ದೇಶಕ್ಕಾಗಿ ಸಮಂಜಸವಾಗುವುಲ್ಲ. ಒಂದು ರೋಗವು ಮರಣಾಂತಿಕ ಕಾಯಿಲೆಯು ಅಲ್ಲ ಎಂಬುದು ಆ ರೋಗದ ಗಾಂಭೀರ್ಯದ ಮೇಲಲ್ಲ, ಬದಲಾಗಿ ಆ ರೋಗಿಯ ಮನಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ.

ಮೃತ್ಯುಶಯ್ಯಾದಾನಗಳ ಕಾನೂನೀ ಪರಿಣಾಮಗಳು
(Legal consequences of Death-bed-Gifts)

ಮರಣಾಂತಿಕ ರೋಗದ ಕಾಲದಲ್ಲಿ ಮಾಡಲಾಗುವ ದಾನಗಳಿಗೆ ಮರಣ ಶಾಸನದ ಪರಿಣಾಮಗಳಿರುತ್ತವೆ. ಒಂದು ಮೃತ್ಯುಶಯಾದಾನವು ಒಂದು ವ್ಯವ ಹಾರದ ರೀತಿಯಲ್ಲಿ ಮಾಡಲ್ಪಟ್ಟಿದ್ದರೂ ಸಹ ಅದನ್ನು ಒಂದು ಮರಣ ಶಾಸನ ವೆಂಬುದಾಗಿ ಅದಕ್ಕೆ ಅರ್ಥಾನ್ವಯನ ಮಾಡಲಾಗುತ್ತದೆ. ಅದು ಕಾರ್ಯಾಚರಣೆಗೆ ಬಂದಾಗ ಅದನ್ನು ಮರಣ ಶಾಸನಗಳಿಗೆ ಸಂಬಂಧಿಸುವ ಮುಸ್ಲಿಮ್ ಕಾನೂನಿನ ನಿಯಮಗಳಿಂದ ಶಾಸಿಸಲ್ಪಡುತ್ತದೆ. ಆದುದರಿಂದ ಒಂದೊಮ್ಮೆ ಆ ದಾತನು ಒಬ್ಬ ಅಪರಿಚಿತ ಅಥವಾ ವಾರಸುದಾರನಲ್ಲದಿದ್ದರೆ ಅಲ್ಲಿ ಆ ಆದಾತನು ಇತರ ಕಾನೂನೀ

ವಾರಸುದಾರರ ಸಮ್ಮತಿಯಿಲ್ಲದೆ ಮೂರನೇ ಒಂದಕ್ಕಿಂತ ಹೆಚ್ಚಿನ ಸ್ವತ್ತುಗಳನ್ನು ಪಡೆಯುವಂತಿಲ್ಲ. ಒಂದೊಮ್ಮೆ ಆ ಆದಾತನು ದಾನಿಯು ಕಾನೂನೀ ವಾರಸುದಾರರೊಳಗೆ ಒಬ್ಬನಾಗಿದ್ದರೆ ಅಲ್ಲಿ ಉತ್ತರದಾನವಾಗಿ ಕೊಡಲ್ಪಡುವ ಸ್ವತ್ತು ಮೂರನೇ ಒಂದಕ್ಕಿಂತ ಕಡಿಮೆಯಾಗಿದ್ದರೂ ಸಹ ಅಲ್ಲಿ ಇತರ ಕಾನೂನೀ ವಾರಸುದಾರರ ಸಮ್ಮತಿಯು ಅವಶ್ಯಕತೆಯಿರುತ್ತದೆ. ಆದರೆ ಒಂದೊಮ್ಮೆ ಆ ದಾನಿಯು ಒಬ್ಬ ಶಿಯಾ ಮುಸಲ್ಮಾನನಾಗಿದ್ದರೆ ಅಲ್ಲಿ ಆ ಮೃತ್ಯುಶೆಯ್ಯೆಯಲ್ಲಿ ಮಾಡಲ್ಪಟ್ಟಿರುವ ದಾನವು ಮೂರನೇ ಒಂದರಷ್ಟು ಆಗಿದ್ದರೆ ಅಲ್ಲಿ ಇತರ ವಾರಸುದಾರರ ಸಮ್ಮತಿಯು ಅವಶ್ಯಕತೆಯಿರುವದಿಲ್ಲ.

ಮೃತ್ಯು ಶೆಯ್ಯೆಯಲ್ಲಿ ಋಣಗಳ ಅಧಿಸ್ವೀಕೃತಿ
(Death Bed Acknowledgement of Debts)

ಋಣದ ಅಧಿಸ್ವೀಕೃತಿಯೆಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಸಂದಾಯ ಮಾಡದಿರುವ ಋಣಗಳ ಸಂಗತಿಯನ್ನು ಸ್ವೀಕರಿಸಿರುವನೆಂದು ಅರ್ಥ. ಒಬ್ಬ ಮುಸಲ್ಮಾನನು ತನ್ನ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಋಣಗಳ ಅಧಿಸ್ವೀಕೃತಿ ಮಾಡಬಹುದು. ತನ್ನ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಒಬ್ಬ ಮುಸಲ್ಮಾನನು ಮಾಡಿರುವ ಒಂದು ಋಣದ ಅಧಿಸ್ವೀಕೃತಿಯು ಒಬ್ಬ ಅಪರಿಚಿತನ ಪರವಾಗಿ ಆಗಿರಬಹುದು ಅಥವಾ ತನ್ನ ವಾರಸುದಾರರೊಳಗೆ ಯಾವನಾದರೊಬ್ಬನ ಪರವಾಗಿ.

ಎ) ಅಪರಿಚಿತನ ಪರವಾಗಿ ಮಾಡಲ್ಪಟ್ಟ ಅಧಿಸ್ವೀಕೃತಿ

ಒಬ್ಬ ಮುಸಲ್ಮಾನನು ತನ್ನ ಮರ್ಜ–ವಿಲ್–ಮೌತ್ ಕಾಲದಲ್ಲಿ ಮಾಡಲಾದ ಒಂದು ಹೇಳಿಕೆಯ ಪ್ರಕಾರ ತನ್ನ ವಾರಸುದಾರನಲ್ಲದ ಯಾವನಾದರೊಬ್ಬನಿಗೆ ಅವನು ಸಂದಾಯಮಾಡುವ ಋಣಗಳಿವೆಯೆಂದು ಹೇಳಿದರೆ, ಆ ಅಧಿಸ್ವೀಕೃತಿಯು ಆ ಉತ್ತರಾದಾತರನ್ನು ಹಾಗೂ ಆ ಮರಣಶಾಸಕನ ಕಾನೂನೀ ವಾರಸುದಾರರನ್ನು ಬಾಧ್ಯಗೊಳಿಸುತ್ತದೆ. ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲಾಗಿರುವ ಒಂದು ಅಧಿಸ್ವೀಕೃತಿಯು ಋಣಗಳ ಸಂಬಂಧದಲ್ಲಿ ಒಂದು ಸಂಶಯಾತೀತ ಪುರಾವೆಯೆಂಬುದಾಗಿ ಎಣಿಸಲ್ಪಡುತ್ತದೆ. ಆದರೆ ಅಂತಹ ಒಂದು ಅಧಿಸ್ವೀಕೃತಿಯು ಈ ಕೆಳಗಿನ ಎರಡು ಷರತ್ತುಗಳಿಗೆ ಬಾಧ್ಯವಾಗಿರುತ್ತದೆ :

1) ಒಂದೊಮ್ಮೆ ಒಬ್ಬ ಮುಸಲ್ಮಾನನು ತಾನು ಸಾಮಾನ್ಯ ಆರೋಗ್ಯದಲ್ಲಿದ್ದಿರುವಾಗ ಒಂದು ಋಣದ ಬಗ್ಗೆ ಅಧಿಸ್ವೀಕೃತಿ ಮಾಡಿದ್ದರೆ ಅವನ ಆ ಅಧಿಸ್ವೀಕೃತಿಯು ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಅವನಿಂದ ಮಾಡಲ್ಪಟ್ಟಿರುವ ಅಧಿಸ್ವೀಕೃತಿಯ ಮೇಲೆ ಆದ್ಯತೆಯನ್ನು ಪಡೆಯುತ್ತದೆ.

2) ಯಾವುದಾದರೊಂದು ಋಣವು ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲ್ಪಟ್ಟಿರುವ ಒಂದು ಅಧಿಸ್ವೀಕೃತಿಗಿಂತ ಅನ್ಯಥಾ ಸಾಬೀತಾಗಿದ್ದರೆ ಅದು ಅಲ್ಲಿ ಆ ಅನ್ಯಥಾ ಸಾಬೀತಾಗಿರುವ ಋಣವು ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲ್ಪಟ್ಟಿರುವ ಒಂದು ಋಣದ ಅಧಿಸ್ವೀಕೃತಿಯ ಮೇಲೆ ಅದ್ಯತೆಯನ್ನು ಪಡೆಯುತ್ತದೆ.

ಬಿ) ಒಬ್ಬ ವಾರಸುದಾರನ ಪರವಾಗಿ ಮಾಡಲ್ಪಟ್ಟಿರುವ ಒಂದು ಅಧಿಸ್ವೀಕೃತಿ

ಒಂದೊಮ್ಮೆ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಆ ರೋಗಿಯು ಒಬ್ಬ ವಾರಸುದಾರನ ಪರವಾಗಿ ಒಂದು ಋಣದ ಅಧಿಸ್ವೀಕೃತಿ ಮಾಡಿದರೆ ಆ ಅಧಿಸ್ವೀಕೃತಿಯು ಆ ಋಣದ ಒಗ್ಗೆ ಒಂದು ಸಂಶಯಾತೀತ ಪುರಾವೆ ಎಂಬುದಾಗಿ ಎಣಿಸಲ್ಪಡುವುದಿಲ್ಲ. ಇಂತಹ ಪ್ರಸಂಗಗಳಲ್ಲಿ ಆ ವಾರಸುದಾರನೂ ಸಹ ಅಂತಹ ಒಂದು ಅಧಿಸ್ವೀಕೃತಿಯ ಮೇಲೆ ಪೂರ್ಣವಾಗಿ ವಿಶ್ವಾಸವನ್ನಿಡುವಂತಿಲ್ಲ. ಅಂತಹ ಒಬ್ಬ ವಾರಸುದಾರನು ಆ ಋಣವನ್ನು ಇತರ ಪುರಾವೆಗಳಿಂದಲೂ ಸಾಬೀತುಪಡಿಸಬೇಕಾಗುತ್ತದೆ.

ಅಧ್ಯಾಯ 12

ವಕ್ಫ್‌ಗಳು

(Wakfs)

ಪ್ರಸ್ತಾವನೆ

ವಕ್ಫ್ ಇದರ ಶಬ್ದಾರ್ಥವು ಅವರೋಧ ಎಂಬುದಾಗಿರುತ್ತದೆ. ಕಾನೂನಿನ ಭಾಷೆಯಲ್ಲಿ ವಕ್ಫ್ ಎಂದರೆ ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಗಳಿಗಾಗಿ ಒಂದು ಸ್ವತ್ತನ್ನು ಶಾಶ್ವತವಾಗಿ ಅವರೋಧಗೊಳಿಸುವದಾಗಿರುತ್ತದೆ. ಒಂದು ವಕ್ಫ್ ನಿರ್ಮಿಸಲ್ಪಟ್ಟಾಗ ಆ ಸ್ವತ್ತನ್ನು ಅವರೋಧಗೊಳಿಸಲಾಗುತ್ತದೆ ಅಥವಾ ಅದು ಶಾಶ್ವತವಾಗಿ ಹಸ್ತಾಂತರಣೀಯವಲ್ಲದಾಗಿರುತ್ತದೆ. ಹಾಗೆಂದರೆ, ಒಂದು ವಕ್ಫ್ ಘಟಿತವಾದ ಬಳಿಕ ಆ ಸ್ವತ್ತನ್ನು ಮಾರಾಟ, ದಾನ ಅಥವಾ ಅದರ ವಾರಸು ಅಥವಾ ಅನ್ಯಥಾ ಹಸ್ತಾಂತರಣ ಮಾಡುವಂತಿಲ್ಲ. ಈ ರೀತಿಯಾಗಿ ಆ ಒಂದು ಸ್ವತ್ತು ಅನಿರ್ದಿಷ್ಟ ಕಾಲಾವಧಿಗೆ ಅದೇ ಸ್ಥಿತಿಯಲ್ಲಿ ಉಳಿದಿರುತ್ತದೆ. ಈ ರೀತಿಯಾಗಿ ಒಂದು ಸ್ವತ್ತನ್ನು ತಡೆಹಿಡಿಯುವುದರ ಉದ್ದೇಶವೇನೆಂದರೆ ಆ ಸ್ವತ್ತಿನ ಫಲಭೋಗವು ಶಾಶ್ವತವಾಗಿ ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಗಳಿಗಾಗಿ ಸಿಗಬೇಕೆಂಬುದಾಗಿರುತ್ತದೆ. ವಕ್ಫ್ ಪದ್ಧತಿಯು ಇಸ್ಲಾಮ್ ಪೂರ್ವ ಅರಬೀ ಸಮಾಜಕ್ಕೆ ತಿಳಿದಿರಲಿಲ್ಲ. ಕುರಾನಿನಲ್ಲೂ ಸಹ ವಕ್ಫ್‌ಗಳ ಸಂಬಂಧದಲ್ಲಿ ಯಾವತ್ತೂ ಸ್ಪಷ್ಟವಾದ ಉಪಬಂಧವು ಕಂಡುಬರುವುದಿಲ್ಲ. ಈ ವಿಷಯದ ಮೇಲೆ ಮುಸ್ಲಿಮ್ ಕಾನೂನು ಪೈಗಂಬರರ ರೂಢಿಗಳ ಮೇಲೆ ಅಧಾರಿತವಾಗಿದೆ. ಒಂದು ವಕ್ಫ್ ನಿರ್ಮಾಣದ ಬಗ್ಗೆ ಮೊದಲನೇ ಒಂದು ಘಟನೆಯನ್ನು ಬುಖಾರಿ ಎಂಬವನು ಉಲ್ಲೇಖಿಸಿರುವನು ಮತ್ತು ಅದು ಪೈಗಂಬರರಿಂದ ಉಪಬಂಧಿಸಲ್ಪಟ್ಟಿದೆಯೆಂದು ಬುಖಾರಿಯು ಹೇಳಿರುವನು. ಜಗತ್ತಿನಲ್ಲಿ ಅತ್ಯಂತ ಪ್ರಥಮವಾಗಿ ನಿರ್ಮಿಸಲ್ಪಟ್ಟಿರುವ ಒಂದು ವಕ್ಫ್ ಇದರ ಮೂಲವು ಈ ರೀತಿಯಿದೆ–ಓಮರ್ ಎಂಬವನಲ್ಲಿ ಒಂದು ಭೂಸ್ವತ್ತು ಇತ್ತು ಮತ್ತು ಅದನ್ನು ಅವನು ಧಾರ್ಮಿಕ ಉದ್ದೇಶಗಳಿಗಾಗಿ ಉಪಯೋಗಿಸಬೇಕೆಂದಿದ್ದನು ತನ್ನ ಈ ಭೂಮಿಯನ್ನು ಧಾರ್ಮಿಕ ಉದ್ದೇಶಗಳಿಗಾಗಿ ಯಾವ ರೀತಿಯಲ್ಲಿ ಉಪಯೋಗಿಸಬಹುದೆಂಬುದನ್ನು ನಿರ್ಣಯಿಸಲಾಗದೆ ಅವನು ಪೈಗಂಬರರ ಬಳಿಗೆ ಹೋಗಿ ಪೈಗಂಬರರ ಸಲಹೆಯನ್ನು ಕೇಳಿದನು. ಅದಕ್ಕೆ ಪೈಗಂಬರರು ಈ ರೀತಿಯಾಗಿ ಘೋಷಿಸಿದನು : 'ಆ ಸ್ವತ್ತನ್ನು ಅಬಂಧಿತಗೊಳಿಸು ಮತ್ತು ಅದರ ಫಲೋಪಭೋಗವನ್ನು ಮಾನವತೆಗಾಗಿ ಅರ್ಪಿಸು ಮತ್ತು ಅದನ್ನು ಮಾರಾಟಮಾಡಬೇಡ,

ಅಥವಾ ಒಂದು ದಾನ ಅಥವಾ ಪಾರಸಿನ ವಿಷಯವಸ್ತುವನ್ನಾಗಿ ಮಾಡಬೇಡ.' ಈ ಸಲಹೆಯ ಮೇರೆಗೆ ಓಮರ್ ಇವನು ಒಂದು ವಕ್ಫ್ ನಿರ್ಮಿಸಿದನು ಮತ್ತು ಆ ವಕ್ಫ್ ಅನೇಕ ಶತಮಾನಗಳಿಗೆ ಮುಂದುವರಿಯಿತು. ಇದರ ಬಳಿಕ ವಕ್ಫ್‌ಗಳ ನಿರ್ಮಾಣ ಮಾಡುವಪದ್ಧತಿಯು ಮುಸಲ್ಮಾನರೊಳಗೆ ಒಂದು ಪ್ರಮುಖ ಧಾರ್ಮಿಕಕೃತ್ಯ ಹಾಗೂ ಸಾಮಾಜಿಕ ಪದ್ಧತಿಯಾಗಿ ಮುಂದುವರಿಯಿತು. ಧಾರ್ಮಿಕ ಮತ್ತು ಧರ್ಮದಾಯ ಕೃತ್ಯಗಳಿಂದಾಗಿ ಪುಣ್ಯವನ್ನು ಸಂಪಾದಿಸುವ ಉದ್ದೇಶವು ಮುಸ್ಲಿಮ್ ಜಗತ್ತಿನಲ್ಲಿ ವಕ್ಫ್ ಪದ್ಧತಿಯ ಪ್ರಸಿದ್ಧಿಗೆ ಕಾರಣವಾಗಿದೆ. ಮುಸ್ಲಿಮ್ ಜಗತ್ತಿನಲ್ಲಿ ಪ್ರತಿಯೊಂದು ಕಡೆ ಅನೇಕ ರೀತಿಯ ಸ್ವತ್ತುಗಳ ವಕ್ಫ್‌ಗಳನ್ನು ನಿರ್ಮಿಸಲಾಗಿದೆ. ಅರಬ್ ದೇಶಗಳಲ್ಲಿ ವಕ್ಫ್ ಸ್ವತ್ತುಗಳ ಪ್ರಮಾಣವು ಎಷ್ಟೊಂದು ದೊಡ್ಡದಾಗಿದೆಯೆಂದರೆ ಆ ದೇಶಗಳ ಇಡೀ ಆರ್ಥಿಕ ಪದ್ಧತಿಯು ವಕ್ಫ್‌ಗಳಿಂದ ಪರಿಣಾಮಿತವಾಗಿವೆ. ಆದುದರಿಂದ ಅರಬ್ ದೇಶಗಳಲ್ಲಿ ಇದರ ಬಗ್ಗೆ ಒಂದು ಪ್ರತ್ಯೇಕವಾದ ಕಾನೂನು ಪದ್ಧತಿಯಿದೆ; ಆ ದೇಶಗಳಲ್ಲಿ ವಕ್ಫ್ ಪದ್ಧತಿಯು ಅಲ್ಲಿಯ ಮತೀಯ ಕಾನೂನಿನ ಒಂದು ಭಾಗವಲ್ಲ. ಆದರೆ ಭಾರತದಲ್ಲಿ ವಕ್ಫ್‌ಗಳಿಗೆ ಸಂಬಂಧಿಸುವ ಕಾನೂನು ಮುಸ್ಲಿಮ್ ಮತೀಯ ಕಾನೂನಿನ ಒಂದು ಅವಿಚ್ಛಿನ್ನವಾದ ಭಾಗವಾಗಿದೆ.

ಧಾರ್ಮಿಕ ಮತ್ತು ಧರ್ಮದಾಯ ಉದ್ದೇಶಗಳು ಶಾಶ್ವತವಾಗಿ ಪೂರ್ತಿಗೊಳಿಸಲ್ಪಟ್ಟಿವೆಯೆಂಬುದನ್ನು ಖಾತ್ರಿಗೊಳಿಸುವ ಇರಾದೆಯಿಂದ ವಕ್ಫ್ ನಿರ್ಮಿಸಲ್ಪಡುತ್ತದೆ. ಒಂದೊಮ್ಮೆ ಒಬ್ಬ ಮುಸಲ್ಮಾನನು ತನ್ನ ಸ್ವತ್ತುಗಳ ಒಂದು ಧಾರ್ಮಿಕ ಉಪಯೋಗ ಮಾಡಬೇಕೆಂದಿದ್ದರೆ ಅವನು ಅದರ ಧಾರ್ಮಿಕ ದಾನವನ್ನು ಮಾಡಬಹುದು. ಈ ರೀತಿಯ ಧಾರ್ಮಿಕ ದಾನವನ್ನು ಸದಕಾ ಎಂದು ಕರೆಯಲಾಗುತ್ತದೆ. ಆದರೆ ಒಂದು ಸದಕಾದಲ್ಲಿ ಆ ಸ್ವತ್ತು ಆದಾತನಿಗೆ ಸೇರುತ್ತದೆ. ಅವನು ಅದರ ಪರಮ ಸ್ವಾಮಿಯಾಗುವನು. ಈ ರೀತಿಯಾಗಿ ಒಂದು ಸದಕಾದಲ್ಲಿ ಒಂದು ಸ್ವತ್ತು ಕೇವಲ ಒಂದೇ ಒಂದು ಧಾರ್ಮಿಕ ಅಥವಾ ಧರ್ಮದಾಯ ಕೃತ್ಯದಲ್ಲಿ ನಿಶ್ಶೇಷವಾಗುತ್ತದೆ. ಆದರೆ ತನ್ನ ಸ್ವತ್ತಿನಿಂದ ಶಾಶ್ವತವಾಗಿ ಧಾರ್ಮಿಕ ಪ್ರಯೋಜನವು ಸಿಗಬೇಕೆಂಬುದಾಗಿ ಒಬ್ಬ ಮುಸಲ್ಮಾನನು ಇಚ್ಛಿಸಿದರೆ ಅವನು ಒಂದು ವಕ್ಫ್ ನಿರ್ಮಿಸಬಹುದು. ಮತ್ತು ಅದರಿಂದಾಗಿ ಅವನ ದಾರ್ಮಿಕ ಕೃತ್ಯವು ನಿಶ್ಶೇಷವಾಗುವುದಿಲ್ಲ. ಇದಕ್ಕಾಗಿ ಅವನು ತನ್ನ ಸ್ವತ್ತನ್ನು ಅಬಂಧಿತಗೊಳಿಸಿ ಅದರಿಂದ ಬರುವ ಫಲೋಪಭೋಗವನ್ನು ದಾರ್ಮಿಕ ಅಥವಾ ಧರ್ಮದಾಯ ಉದ್ದೇಶಗಳಿಗಾಗಿ ಶಾಶ್ವತತೆಯಲ್ಲಿ ಉಪಯೋಗಿಸುವನು. ಈ ರೀತಿಯ ಉದ್ದೇಶಗಳಿಗಾಗಿ ಸಮರ್ಪಿಸಲಾದ ಒಂದು ಸ್ವತ್ತು ಹಸ್ತಾಂತರಣೀಯವಾಗಬಾರದೆಂಬ ಉದ್ದೇಶದಿಂದ ಮುಸ್ಲಿಮ್ ನ್ಯಾಯವರ್ಶಿಗಳು ಪರಮಾತ್ಮನ ಪರವಾಗಿ ಸ್ವತ್ತಿನ ಸ್ವಾಮಿತ್ವಗಳ ಹಸ್ತಾಂತರಣ ಒಂದು ಸಿದ್ಧಾಂತವನ್ನು ನಿರ್ಮಿಸಿರುವರು. ಈ ರೀತಿಯ ಹಸ್ತಾಂತರಣದಲ್ಲಿ ಪರಮಾತ್ಮನು ಆ ಸ್ವತ್ತಿನಲ್ಲಿ ಒಂದು ಅವ್ಯಕ್ತ ಸ್ವಾಮಿತ್ವವನ್ನು ಪಡೆಯುವನು ಮತ್ತು ಅದರಲ್ಲಿ ಯಾವತ್ತೂ ಪ್ರತಿಫಲವಿರುವುದಿಲ್ಲ.

ಒಂದು ವಕ್ಫ್ ಇದರ ನಿರ್ಮಾಣದಿಂದಾಗಿ ಅದಕ್ಕೆ ಸಮರ್ಪಿಸಲಾದ ಸ್ವತ್ತನ್ನು ಸರ್ವಶಕ್ತ ಪರಮಾತ್ಮನು ಹೊಂದಿಕೊಳ್ಳುವನು ಮತ್ತು ಅದು ಮಾನವತೆಯ ಕಾರ್ಯಕಲಾಪಗಳನ್ನು ಮೀರಿಹೋಗುವುದೆಂದು ಇಸ್ಲಾಮಿನಲ್ಲಿ ನಂಬಲಾಗುತ್ತದೆ. ಈ ರೀತಿಯ ಹಸ್ತಾಂತರಣದ ಬಳಿಕ ಆ ಸ್ವತ್ತನ್ನು ಯಾವನೇ ಒಬ್ಬ ವ್ಯಕ್ತಿಯು ಪರಾಧೀನಗೊಳಿಸುವಂತಿಲ್ಲ. ಈ ರೀತಿಯಾಗಿ ವಕ್ಫ್‌ನಲ್ಲಿ ಒಂದು ಸ್ವತ್ತಿನ ಸ್ವಾಮಿತ್ವವು ಪರಮಾತ್ಮನಲ್ಲಿ ನಿಹಿತಗೊಳಿಸಲಾಗುತ್ತದೆ, ಆದರೆ ಅದರ ಪ್ರಯೋಜನಗಳು ಅಥವಾ ಉತ್ಪನ್ನಗಳು ನಿರಂತರವಾಗಿ ಧಾರ್ಮಿಕ ಮತ್ತು ಧರ್ಮದಾಯ ಉದ್ದೇಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಉಪಯೋಗಿಸಲಾಗುತ್ತವೆ. ಆದರೆ ವಕ್ಫ್ ಸ್ವತ್ತಿನ ಸ್ವಾಮಿತ್ವದ ಸಂಬಂಧದಲ್ಲಿ ಮುಸ್ಲಿಮ್ ನ್ಯಾಯಾದರ್ಶಿಗಳಲ್ಲಿ ಆರಂಭದಿಂದಲೇ ಒಂದು ವಿವಾದವಿತ್ತು. ಅಬೂಹನೀಫ ಇವನ ಅಭಿಪ್ರಾಯದಲ್ಲಿ ಒಂದು ವಕ್ಫ್ ನಿರ್ಮಿಸಲ್ಪಟ್ಟಾಗ ಅದಕ್ಕೆ ಸಮರ್ಪಿಸಲಾದ ಸ್ವತ್ತಿನ ಸ್ವಾಮಿತ್ವವು ಪರಮಾತ್ಮನಿಗೆ ಹಸ್ತಾಂತರಿಸಲ್ಪಡುವುದಿಲ್ಲ. ಅದು ಆ ವಕ್ಫ್‌ನ ಸಂಸ್ಥಾಪಕರಲ್ಲಿ ಉಳಿಯುತ್ತದೆ. ಆದರೆ ಅದರ ಸಂಬಂಧದಲ್ಲಿ ಅವನ ಹಕ್ಕುಗಳು ಕೊನೆಗೊಳ್ಳುತ್ತವೆ. ಆದರೆ ಅಬೂಹನೀಫನ ಇಬ್ಬರು ಶಿಷ್ಯರಾದ ಅಬೂಯುಸೂಫ್ ಮತ್ತು ಇಮಾಮ್ ಮೊಹಮ್ಮದ್ ಇವರ ಅಭಿಪ್ರಾಯದ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ಸ್ವತ್ತನ್ನು ಸಮರ್ಪಣೆಮಾಡಿ ಒಂದು ವಕ್ಫ್ ನಿರ್ಮಿಸಿದಾಗ ಆ ಸ್ವತ್ತಿನ ಸ್ವಾಮಿತ್ವವು ತಕ್ಷಣ ಪರಮಾತ್ಮನಲ್ಲಿ ನಿಹಿತವಾಗುತ್ತದೆ. ಮತ್ತು ಆ ಸ್ವತ್ತು ಆ ಹಸ್ತಾಂತರಣೀಯ ವಾಗುತ್ತದೆ. ಅಬೂಯೂಸೂಫ್ ಮತ್ತು ಇಮಾಮ್ ಮೊಹಮ್ಮದ್ ಇವರ ಅಭಿಪ್ರಾಯದಲ್ಲಿ ಒಂದು ವಕ್ಫ್ ನಿರ್ಮಿಸಲ್ಪಟ್ಟ ಬಳಿಕ ಅದರ ಸಂಸ್ಥಾಪಕನು ಆ ವಕ್ಫ್ ಸ್ವತ್ತಿನ ಸ್ವಾಮಿಯಾಗುವುದು ನಿಂತುಬಿಡುತ್ತದೆ. ವಕ್ಫ್ ಸ್ವತ್ತಿನ ಸ್ವಾಮಿತ್ವದ ನಿಹಿತಗೊಳ್ಳುವಿಕೆಯ ಒಗ್ಗೆ ಮುಸ್ಲಿಮ್ ನ್ಯಾಯದರ್ಶಿಗಳ ಅಭಿಪ್ರಾಯದಲ್ಲಿ ವಿಭಿನ್ನತೆ ಇದ್ದರೂ ಸಹ ಈ ಎಲ್ಲಾ ದೃಷ್ಟಿಕೋನಗಳ ಪರಿಣಾಮಗಳು ಒಂದೇ ರೀತಿಯದ್ದಾಗಿವೆ, ಈ ಎರಡೂ ಸಿದ್ಧಾಂತಗಳ ಪ್ರಕಾರ ಆ ಸ್ವತ್ತು ಅವರೋಧಗೊಳಿಸಲ್ಪಡುತ್ತದೆ. ಮತ್ತು ಅದು ಆ ಹಸ್ತಾಂತರಣೀಯವಾಗುತ್ತದೆ. ಆದರ ಶಿಯಾ ಕಾನೂನಿನ ಮೇಲೆ ಆಧಾರ ಗ್ರಂಥವಾಗಿರುವ ಷರ್ತುಲ್ ಇಸ್ಲಾಮ್ ಇದರ ಪ್ರಕಾರ ವಕ್ಫ್ ಸ್ವತ್ತಿನ ಸ್ವಾಮಿತ್ವವು ಅದರ ಪ್ರಯೋಜಕರಿಗೆ ಹಸ್ತಾಂತರಿಸಲ್ಪಡುತ್ತದೆ. ಹಾಗೆಂದರೆ, ಯಾರ ಪ್ರಯೋಜನಕ್ಕಾಗಿ ಆ ವಕ್ಫ್ ನಿರ್ಮಿಸಲ್ಪಟ್ಟಿದೆಯೊ ಅವರಲ್ಲಿ ಆದರ ಸ್ವಾಮಿತ್ವವು ನಿಹಿತವಾಗುತ್ತದೆ.

ಮುಸ್ಲಿಮ್ ಕಾನೂನಿನಲ್ಲಿ ಬರುವ ವಕ್ಫ್‌ಗಳು ಇಂಗ್ಲಿಷ್ ಕಾನೂನಿನಲ್ಲಿ ಬರುವ ಟ್ರಸ್ಟಗಳಿಗೆ ಮತ್ತು ಭಾರತೀಯ ಟ್ರಸ್ಟುಗಳ ಅಧಿನಿಯಮ, 1882 ಇವುಗಳಿಗೆ ಸಾದೃಶವಾಗಿವೆ ವಕ್ಫ್ ಮತ್ತು ಟ್ರಸ್ಟ ಇವೆರಡರಲ್ಲೂ ಆ ಸ್ವತ್ತು ಅವರೋಧಗೊಳಿಸಲ್ಪಡುತ್ತದೆ. ಮತ್ತು ಆದರ ಫಲೋಪಭೋಗವು ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುತ್ತವೆ. ಆದರೆ ಮುಸ್ಲಿಮ್

ಮತೀಯ ಕಾನೂನಿನ ಪ್ರಕಾರ ಒಂದು ವಕ್ಫ್ ಇದು ಈ ಕೆಳಗಿನ ಕೆಲವು ರೀತಿಗಳಲ್ಲಿ ಭಿನ್ನವಾಗಿರುತ್ತದೆ : (1) ಒಂದು ವಕ್ಫ್ ಸಾಮಾನ್ಯವಾಗಿ ಧಾರ್ಮಿಕ ಉದ್ದೇಶದಿಂದ ನಿರ್ಮಿಸಲ್ಪಡುತ್ತದೆ. ಆದರೆ ಒಂದು ಟ್ರಸ್ಟು ಇದರ ನಿರ್ಮಾಣಕ್ಕಾಗಿ ಇಂತಹ ಧಾರ್ಮಿಕ ಉದ್ದೇಶವು ಅವಶ್ಯಕವಲ್ಲ. (2) ಒಂದು ಟ್ರಸ್ಟ ಇದನ್ನು ಕೇವಲ ಧಾರ್ಮಿಕ ಅಥವಾ ಧರ್ಮದಾಯವೆಂದು ಮನ್ನಿಸಲ್ಪಟ್ಟ ಉದ್ದೇಶಕ್ಕಾಗಿ ನಿರ್ಮಿಸಲಾಗುತ್ತಿದೆ. ಆದರೆ ಒಂದು ಟ್ರಸ್ಟ ಇದನ್ನು ಯಾವುದೇ ಒಂದು ಕಾನೂನು ಬದ್ಧವಾದ ಉದ್ದೇಶಕ್ಕಾಗಿ ನಿರ್ಮಿಸಬಹುದು. (3) ಹನಫಿ ಕಾನೂನಿನ ಹೊರತಾಗಿ ಒಂದು ವಕ್ಫ ಇದರ ಸಂಸ್ಥಾಪಕನು ಆ ವಕ್ಫ್‌ನ ಯಾವತ್ತೂ ಪ್ರಯೋಜನವನ್ನು ತನಗಾಗಿ ಕಾಯ್ದಿರಿಸುವಂತಿಲ್ಲ. ಆದರೆ ಒಂದು ಟ್ರಸ್ಟಿನಲ್ಲಿ ಅದರ ಸಂಸ್ಥಾಪಕನು ಆ ಟ್ರಸ್ಟಿನ ಪ್ರಯೋಜನಗಳನ್ನು ತನಗಾಗಿ ಕಾಯ್ದಿರಿಸಬಹುದು. (4) ಒಂದು ಟ್ರಸ್ಟಿನ ಟ್ರಸ್ಟಿ ಇವನ ಶಕ್ತಿಗಳಿಗೆ ತುಲನೆ ಮಾಡಿದರೆ ಒಬ್ಬ ಮುತಾವಲಿಯ ಶಕ್ತಿಗಳು ತುಂಬಾ ನಿಯಮಿತವಾಗಿವೆ. 5) ಸಾಮಾನ್ಯವಾಗಿ ಒಂದು ವಕ್ಫ ಶಾಸಿತವಾಗಿರುತ್ತದೆ ಮತ್ತು ಅದನ್ನು ರದ್ದುಗೊಳಿಸುವಂತಿಲ್ಲ. ಆದರೆ ಟ್ರಸ್ಟ್ ಶಾಶ್ವತವಾಗಿರಬೇಕಾಗಿಲ್ಲ ಮತ್ತು ಕೆಲವು ಪರಿಸ್ಥಿತಿಗಳಲ್ಲಿ ಅದನ್ನು ರದ್ದುಗೊಳಿಸಬಹುದು. ಒಂದು ಟ್ರಸ್ಟ ಮತ್ತು ವಕ್ಫ ಇವುಗಳೊಳಗೆ ಮೇಲಿನ ವ್ಯತ್ಯಾಸಗಳಿದ್ದುದರಿಂದ ಭಾರತೀಯ ಟ್ರಸ್ಟ್‌ಗಳ ಅಧಿನಿಯಮ 1882 ಇವನ್ನು ವಕ್ಫ್‌ಗಳಿಗೆ ಅನ್ವಯಗೊಳಿಸಲಾಗುವುದಿಲ್ಲ. ಆದರೆ ಒಂದು ವಕ್ಫ್‌ನಲ್ಲಿ ದುರಾಡಳಿತ ಮತ್ತು ಅನಿಯಮಿತತೆ ಉಂಟಾದರೆ ಅಲ್ಲಿ ದಾವೆಮಾಡುವ ಉದ್ದೇಶಗಳಿಗಾಗಿ ಅದನ್ನು ದಿವಾನೀ ಪ್ರಕ್ರಿಯಾ ಸಂಹಿತೆ. 1908 ಇದರ ಕ. 92ರ ಅರ್ಥವ್ಯಾಪ್ತಿಯೊಳಗೆ ಒಂದು ಟ್ರಸ್ಟ ಎಂಬುದಾಗಿ ಎಣಿಸಲಾಗುತ್ತದೆ. ಭಾರತೀಯ ಟ್ರಸ್ಟ್‌ಗಳ ಅಧಿನಿಯಮ, 1882 ಇದು ಮುಸಲ್ಮಾನರಿಗೂ ಅನ್ವಯವಾಗುತ್ತದೆ. ಆದುದರಿಂದ ಒಂದೊಮ್ಮೆ ಒಬ್ಬ ಮುಸಲ್ಮಾನನು ತನ್ನ ಸ್ವತ್ತುಗಳ ಸಂಬಂಧದಲ್ಲಿ ಒಂದು ಟ್ರಸ್ಟ್ ಮಾಡಬಯಸಿದರೆ ಅವನು ಆ ರೀತಿ ಮಾಡಬಹುದು ಮತ್ತು ಒಂದು ವಕ್ಫ ಇದನ್ನೇ ನಿರ್ಮಿಸಬೇಕೆಂಬುದೇನೂ ಕಡ್ಡಾಯವಲ್ಲ.

ಒಂದು ವಕ್ಫ ಇದಕ್ಕಾಗಿ ತನ್ನ ಸ್ವತ್ತನ್ನು ಹಸ್ತಾಂತರಿಸುವ ಒಬ್ಬ ಮುಸಲ್ಮಾನನನ್ನು ಒಂದು ವಕ್ಫ ಇದರ ಸಂಸ್ಥಾಪಕ ಅಥವಾ ವಕೀಫ್ ಎಂದು ಕರೆಯಲಾಗುತ್ತದೆ. ಆ ಸ್ವತ್ತಿನ ಮೇಲ್ವಿಚಾರಣೆಯನ್ನು ನೋಡಿಕೊಂಡು ಅದರ ಫಲೋಪಭೋಗವನ್ನು ಆ ವಕ್ಫ ಇದರ ಉದ್ದೇಶಕ್ಕೆ ಅನುಗುಣವಾಗಿ ವಂಟನ ಮಾಡುವ ವ್ಯಕ್ತಿಯನ್ನು ಮುತಾವಲಿ ಎಂದು ಕರೆಯಲಾಗುತ್ತದೆ, 'ಮುಸಲ್ಮಾನ ವಕ್ಫ ವಿಧ್ಯುಕ್ತತೆ ಅಧಿನಿಯಮ, 1913' (Mussalman wakf validating Act, 1913) ಇದರ ಕ. 2(1) ಇದು ಒಂದು ವಕ್ಫ, ಇದನ್ನು ಈ ಕೆಳಗಿನಂತೆ ಪರಿಭಾಷಿಸುತ್ತದೆ :

"ವಕ್ಫ್ ಎಂದರೆ ಮುಸ್ಲಿಮ್ ಕಾನೂನಿನಿಂದ ಧಾರ್ಮಿಕ ದೈವಭಕ್ತಿಯ ಅಥವಾ ಧರ್ಮದಾಯ ಎಂಬುದಾಗಿ ಮುಸ್ಲಿಮ್ ಕಾನೂನಿಂದ ಮನ್ನಿಸಲ್ಪಟ್ಟಿರುವ ಯಾವುದಾದರೊಂದು ಉದ್ದೇಶಕ್ಕಾಗಿ ಮುಸ್ಲಿಮ್ ಮತವನ್ನು ನಂಬಿರುವ ಯಾವನಾದರೊಬ್ಬ ವ್ಯಕ್ತಿಯಿಂದ ಮಾಡಿರುವ ಒಂದು ಸ್ವತ್ತಿನ ಶಾಶ್ವತ ಸಮರ್ಪಣೆಯಾಗಿರುತ್ತದೆ."

'ವಕ್ಫ್ ಅಧಿನಿಯಮ, 1954' (The wakf Act, 1954) ಇದು ಒಂದು ವಕ್ಫ್ ಇದರ ಪರಿಭಾಷೆಯನ್ನು ಈ ಕೆಳಗಿನ ಶಬ್ದಗಳಲ್ಲಿ ಕೊಟ್ಟಿದೆ'

"ವಕ್ಫ್ ಎಂದರೆ ಮುಸ್ಲಿಮ್ ಕಾನೂನಿನಿಂದ ಮನ್ನಿಸಲ್ಪಟ್ಟ ದೈವಭಕ್ತಿಯ ಧಾರ್ಮಿಕ ಅಥವಾ ಧರ್ಮದಾಯ ಇವುಗಳೊಳಗೆ ಯಾವುದಾದರೊಂದು ಉದ್ದೇಶಕ್ಕಾಗಿ ಇಸ್ಲಾಮ್ ಇದನ್ನು ನಂಬಿರುವ ಒಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟ ತನ್ನ ಚರ ಅಥವಾ ಸ್ಥಿರ ಸ್ವತ್ತಿನ ಶಾಶ್ವತ ಸಮರ್ಪಣೆಯಾಗಿರುತ್ತದೆ.

ಮುಸ್ಲಿಮ್ ನ್ಯಾಯದರ್ಶಿಗಳ ಪ್ರಕಾರ ವಕ್ಫ್ ಇದರ ಪರಿಭಾಷೆ
(Definition of wakf by Muslim Jurists)

ಅಬುಹನಿಫಾ ಎಂಬ ಒಬ್ಬ ಸುನ್ನೀ ನ್ಯಾಯದರ್ಶಿಯ ಅಭಿಪ್ರಾಯದಲ್ಲಿ ವಕ್ಫ್ ಇದರ ಕಾನೂನೀ ಅರ್ಥವೇನೆಂದರೆ ಯಾವುದಾದರೊಂದು ನಿರ್ದಿಷ್ಟವಸ್ತುವನ್ನು ಅವರೋಧಗೊಳಿಸಿ ಅದರ ವಿನಿಯೋಗಮಾಡಿದವನ ಹಕ್ಕು ಮುಂದುವರಿಯುತ್ತಿದ್ದು ಅದರ ಪ್ರಯೋಜನವು ಯಾವುದಾದರೊಂದು ಧರ್ಮದಾಯ ಉದ್ದೇಶಕ್ಕೆ ಹೋಗುತ್ತದೆ. ಅಬುಯುಸೂಫ್ ಮತ್ತು ಇಮಾಮ್ ಮೊಹಮ್ಮದ್ ಎಂಬ ಅವನ ಇಬ್ಬರು ಶಿಷ್ಯರ ಪರಿಭಾಷೆಯ ಪ್ರಕಾರ ವಕ್ಫ್ ಎಂದರೆ ಒಂದು ನಿರ್ದಿಷ್ಟವಾದ ವಸ್ತುವನ್ನು ಶಾಶ್ವತವಾಗಿ ಸಮರ್ಪಣೆ ಮಾಡುವದು ಮತ್ತು ಅದರಲ್ಲಿ ಪರಮಾತ್ಮನ ಅವ್ಯಕ್ತ ಸ್ವಾಮಿತ್ವವಿರುತ್ತದೆ, ಇದರಿಂದಾಗಿ ಆ ವಿನಿಯೋಗ ಮಾಡಿದವನ ಹಕ್ಕುಗಳು ನಿರ್ಮೂಲನವಾಗುತ್ತವೆ ಮತ್ತು ಆ ಸ್ವತ್ತು ಪರಮಾತ್ಮನಿಂದ ನಿರ್ಮಿಸಲ್ಪಟ್ಟವರ ಪ್ರಯೋಜನಕ್ಕಾಗಿ ಪರಮಾತ್ಮನ ಸ್ವತ್ತಾಗಿ ಉಳಿಯುತ್ತದೆ.

ಶಿಯಾ ನ್ಯಾಯದರ್ಶಿಗಳ ಪ್ರಕಾರ ವಕ್ಫ್ ಎಂದರೆ ಒಂದು ಧಾರ್ಮಿಕ ಕೃತ್ಯವಾಗಿದ್ದು ಅದರಲ್ಲಿ ಒಂದು ವಸ್ತುವಿನ ಭೌತಿಕ ಅಸ್ತಿತ್ವವು ಆಬಂಧಿತವಾಗಿದ್ದು ಅದರ ಫಲೋಪಭೋಗವು ಮುಕ್ತವಾಗಿ ಬಿಡಲ್ಪಟ್ಟಿರುತ್ತದೆ

ಮುಸ್ಲಿಮ್ ನ್ಯಾಯದರ್ಶಿಗಳು ಕೊಟ್ಟಿರುವ ಪರಿಭಾಷೆ ಮತ್ತು ಶಾಸನ ಬದ್ಧ ಪರಿಭಾಷೆ ಇವುಗಳೊಳಗಿನ ಯಾವುದೇ ರೀತಿಯ ವ್ಯತ್ಯಾಸವಿಲ್ಲವೆಂಬುದು ಇದರಿಂದ ನಮಗೆ ತಿಳಿಯುತ್ತದೆ. ಒಂದು ವಕ್ಫ್ ಇದರ ಬಗ್ಗೆ ಮುಸ್ಲಿಮ್ ನ್ಯಾಯದರ್ಶಿಗಳು ಸೈದ್ಧಾಂತಿಕ ವ್ಯತ್ಯಾಸವಿದ್ದರೂ ಸಹ ಅದರ ಕಾನೂನೀ ಪ್ರಸಂಗೀಕತೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಈ ಎಲ್ಲಾ ಪರಿಭಾಷೆಗಳನ್ನು ವಿಶ್ಲೇಷಿಸುವಾಗ ಒಂದು ವಕ್ಫ್ ಇದರಲ್ಲಿ ಈ ಕೆಳಗಿನ ಮೂಲಭೂತ ವೈಶಿಷ್ಟ್ಯತೆಗಳು ಕಂಡುಬರುತ್ತವೆ.

i) ಶಾಶ್ವತತೆ (Perpetuity)

ಒಂದು ವಕ್ಫ್ ಇದರಲ್ಲಿ ಒಂದು ವಸ್ತುವನ್ನು ಶಾಶ್ವತವಾಗಿ ಸಮರ್ಪಿಸಲಾಗುತ್ತದೆ. ಆದುದರಿಂದ ಅದರ ಫಲೋಪಭೋಗವು ಒಂದು ಅನಿರ್ದಿಷ್ಟವಾದ ಕಾಲಾವಧಿಗೆ ಸಿಗುತ್ತದೆ. ಒಂದು ನಿಯಮಿತವಾಗಿರುವ ಕಾಲಾವಧಿಗಾಗಿ ಒಂದು ವಕ್ಫ್ ಇದನ್ನು ನಿರ್ಮಿಸುವಂತಿಲ್ಲ.

ii) ಪರಾಧೀನಗೊಳಿಸುವಂತಿಲ್ಲ (Inalienability)

ಒಂದು ವಕ್ಫ್ ನಿರ್ಮಿಸಲ್ಪಟ್ಟಾಗ ಆ ಸ್ವತ್ತು ಪರಮಾತ್ಮನ ಅವ್ಯಕ್ತ ಸ್ವಾಮಿತ್ವದಲ್ಲಿ ನಿಹಿತಗೊಳ್ಳುತ್ತದೆ. ಇದರ ಪರಿಣಾಮವಾಗಿ ಆ ಸ್ವತ್ತು ಆ ಹಸ್ತಾಂತರಣೀಯವಾಗುತ್ತದೆ ಅಬುಹನೀಫ ಇವನು ಒಂದು ವಕ್ಫ್ ಇದರ ಸ್ವತ್ತು ಪರಮಾತ್ಮನಲ್ಲಿ ನಿಹಿತವಾಗುವುದಿಲ್ಲವೆಂಬುದಾಗಿ ಹೇಳಿರುವನಾದರೂ ಸಹ ಒಂದು ವಕ್ಫ್ ಇದನ್ನು ಸಂಸ್ಥಾಪಿಸಿದ ವ್ಯಕ್ತಿಯು ಆ ವಕ್ಫ್ ಇದರ ಸ್ವತ್ತನ್ನು ಹಸ್ತಾಂತರಿಸಿಲ್ಲವೆಂದು ಹೇಳಿರುವನು.

iii) ರದ್ದುಗೊಳಿಸುವಂತಿಲ್ಲ (Irrevocability)

ಒಮ್ಮೆ ನಿರ್ಮಿಸಲ್ಪಟ್ಟ ವಕ್ಫ್ ಇದನ್ನು ಆಮೇಲೆ ರದ್ದುಗೊಳಿಸುವಂತಿಲ್ಲ. ಒಂದು ವಕ್ಫ್ ನಿರ್ಮಿಸಲ್ಪಟ್ಟ ತಕ್ಷಣ ಆ ಸ್ವತ್ತು ಪರಮಾತ್ಮನಲ್ಲಿ ನಿಹಿತವಾಗಿದೆಯೆಂದು ಎಣಿಸಲಾಗುತ್ತದೆ ಮತ್ತು ಅದರ ವಕೀಫ್ ಇವನು ಅದನ್ನು ಆ ಬಳಿಕ ರದ್ದುಗೊಳಿಸುವಂತಿಲ್ಲ.

iv) ಪರಮತ್ವ (Absoluteness)

ಒಂದು ವಕ್ಫ್ ಇದಕ್ಕೆ ಮಾಡಲಾಗುವ ಸ್ವತ್ತಿನ ಸಮರ್ಪಣೆಯು ಪರಮವಾಗಿರುತ್ತದೆ. ಷರತ್ತು ಬದ್ಧ ಅಥವಾ ಘಟನಾವಲಂಬಿ ವಕ್ಫ್ ಇದು ಶೂನ್ಯವಾಗಿರುತ್ತದೆ.

v) ಫಲೋಪಭೋಗದ ಧಾರ್ಮಿಕ ಅಥವಾ ಧರ್ಮದಾಯ ಉಪಯೋಗ (Pious or charitable use of usufruct)

ವಕ್ಫ್ ಇದರ ಸ್ವತ್ತಿನ ಉಪಯೋಗ ಅಥವಾ ಪ್ರಯೋಜನಗಳನ್ನು ಧಾರ್ಮಿಕ ಅಥವಾ ಧರ್ಮದಾಯವೆಂದು ಮುಸ್ಲಿಮ್ ಕಾನೂನಿನಿಂದ ಮನ್ನಿಸಲ್ಪಟ್ಟ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ.

ಒಂದು ವಿದ್ಯುಕ್ತವಾದ ವಕ್ಫ್ ಇದರ ಅವಶ್ಯಕತೆಗಳು
(Essentials of a valid wakf) 8 d E(3(a) to ... (d)

ಒಂದು ವಿದ್ಯುಕ್ತವಾದ ವಕ್ಫ್ ಇದರ ನಿರ್ಮಾಣಕ್ಕಾಗಿ ಅವಶ್ಯಕವಾಗಿರುವ ಷರತ್ತುಗಳು ಈ ಕೆಳಗಿನವುಗಳಾಗಿವೆ :

1) ಅಲ್ಲೊಂದು ಶಾಶ್ವತವಾದ ಸಮರ್ಪಣೆಯು ಮಾಡಲ್ಪಟ್ಟಿರಬೇಕು.

2) ಒಂದು ವಕ್ಫ್ ಇದನ್ನು ಸ್ಥಾಪಿಸುವ ವ್ಯಕ್ತಿಯು ಒಬ್ಬ ಸಕ್ಷಮ ವ್ಯಕ್ತಿಯಾಗಿರಬೇಕು.

3) ಅದರ ವಿಷಯ ವಸ್ತುವು ಒಂದು ಹಸ್ತಾಂತರಣೀಯವಾದ ಸ್ವತ್ತಾಗಿರಬೇಕು.

4) ವಕ್ಫ್ ಇದರ ಉದ್ದೇಶವು ಮುಸ್ಲಿಮ್ ಮತೀಯ ಕಾನೂನಿನ ಪ್ರಕಾರ ಧಾರ್ಮಿಕ, ದೈವಭಕ್ತಿಯ ಅಥವಾ ಧರ್ಮದಾಯ ಆಗಿರಬೇಕು.

5) ಒಂದು ವಕ್ಫ್ ಘಟಿಸಲ್ಪಡಲು ಅವಶ್ಯವಾಗಿರುವ ಔಪಚಾರಿಕತೆಗಳನ್ನು ಯಥಾ ಪ್ರಕಾರವಾಗಿ ಪೂರ್ಣಗೊಳಿಸಲಾಗಿರಬೇಕು.

I) ಶಾಶ್ವತವಾದ ಸಮರ್ಪಣೆ (Permanent Dedication)

ವಕ್ಫ್ ಇದೊಂದು ಪ್ರತಿಫಲವಿಲ್ಲದೆ ಸ್ವಾಮಿತ್ವದ ಹಸ್ತಾಂತರಣವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಇದು ಧಾರ್ಮಿಕ ಉದ್ದೇಶದಿಂದ ಮಾಡಲ್ಪಟ್ಟದಾಗಿರುತ್ತದೆ ಆದರೆ ಈ ಉಚಿತವಾದ ಹಸ್ತಾಂತರಣವು ಯಾವರೀತಿಯಿಂದ ಮಾಡಲ್ಪಡುತ್ತದೆಂದರೆ ಆ ವಿಷಯ ವಸ್ತುವಿನ ತದನಂತರದ ಹಸ್ತಾಂತರಣವು ಅಸಾಧ್ಯವಾಗುತ್ತದೆ. ಹಾಗೆಂದರೆ, ಒಂದು ವಕ್ಫ್ ನಿರ್ಮಿಸಲ್ಪಟ್ಟ ಬಳಿಕ ಅದಕ್ಕೆ ಸಮರ್ಪಿಸಲ್ಪಟ್ಟ ಸ್ವತ್ತಿನ ಭೌತಿಕ ಸ್ವರೂಪವು ಅವರೋಧಗೊಳಿಸಲಾಗುತ್ತದೆ, ಇಲ್ಲಿ ಅವರೋಧಗೊಳಿಸುವುದೆಂದರೆ ಪರಮಾತ್ಮನಿಗೆ ಸಮರ್ಪಣೆಮಾಡುವುದಾಗಿರುತ್ತದೆ. ಒಂದು ವಕ್ಫ್ ಇದು ನಿರ್ಮಿಸಲ್ಪಟ್ಟ ಬಳಿಕ ಒಂದು ಸ್ವತ್ತನ್ನು ಪರಮಾತ್ಮನ ಪರವಾಗಿ ದಾನಮಾಡಲಾಗಿದೆಯೆಂಬ ಒಂದು ಪೂರ್ವಭಾವನೆಯುಂಟಾಗುತ್ತದೆ. ಒಂದು ಸ್ವತ್ತಿನ ಸ್ವಾಮಿತ್ವವು ಪರಮಾತ್ಮನಲ್ಲಿ ನಿಹಿತವಾದುದರಿಂದಾಗಿ ಆ ಸ್ವತ್ತಿನ ಭೌತಿಕ ಸ್ವರೂಪವು ಅವರೋಧಗೊಳಿಸಲ್ಪಡುತ್ತದೆ ಮತ್ತು ಅದರ ಫಲೋಪಭೋಗವು ಸತತವಾಗಿ ಉಪಯೋಗಿಸಲ್ಪಡುತ್ತದೆ. ಸ್ವಾಮಿತ್ವವು ಪರಮಾತ್ಮನಿಗೆ ಸಮರ್ಪಿಸಲ್ಪಟ್ಟದುದರಿಂದಾಗಿ ಆ ಸಮರ್ಪಣೆಯು ಶಾಶ್ವತವಾಗುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಶಾಶ್ವತತೆಯು ಒಂದು ವಕ್ಫ್ ಇದರ ಒಂದು ಅವಶ್ಯಕ ಷರತ್ತಾಗಿರುತ್ತದೆ. ಒಂದು ನಿರ್ದಿಷ್ಟವಾದ ಕಾಲಾವಧಿಗಾಗಿ ಮಾಡಲ್ಪಟ್ಟ ಒಂದು ವಕ್ಫ್ ಇದು ಶೂನ್ಯವಾಗಿರುತ್ತದೆ. ಒಂದು ಸ್ವತ್ತನ್ನು ಪರಮಾತ್ಮನಲ್ಲಿ ನಿಹಿತಗೊಳಿಸುವಿಕೆಯ ಸಿದ್ಧಾಂತವು ಶಿಯಾಕಾನೂನಿನಿಂದಲೂ ಸಹ ಸ್ವೀಕೃತವಾಗಿವೆ. ವಕ್ಫ್ ಇದರ ಪರಿಭಾಷೆಯು ಒಂದು ಸ್ವತ್ತನ್ನು ಪರಮಾತ್ಮನಿಗೆ ವ್ಯಕ್ತವಾಗಿ ಸಮರ್ಪಿಸಬೇಕೆಂದು ಹೇಳುವುದಿಲ್ಲವಾದರೂ ಸಹ ಇಲ್ಲಿ ಒಂದು ಸ್ವತ್ತು ಪರಮಾತ್ಮನಲ್ಲಿ ನಿಹಿತಗೊಳಿಸಲ್ಪಡುತ್ತದೆಂಬುದು ಅವರಿಂದ ಅವ್ಯಕ್ತವಾಗಿ ತಿಳಿದುಬರುತ್ತದೆ.

ಮರಣ ಶಾಸನದಿಂದ ಮಾಡಲ್ಪಟ್ಟಿರುವ ಒಂದು ವಕ್ಫ್ ಇದನ್ನು ರದ್ದುಗೊಳಿಸಬಹುದು. ಇದನ್ನು ಆ ವಕ್ಫ್ ಇದರ ಸಂಸ್ಥಾಪಕನೇ ಮರಣಕಾಲದಲ್ಲಿ ರದ್ದುಗೊಳಿಸಬಹುದು. ಇದಕ್ಕೆ ಕಾರಣವೇನೆಂದರೆ ಮರಣಶಾಸನದಿಂದ ನಿರ್ಮಿಸಲ್ಪಡುವ ವಕ್ಫ್ ಇದು ಒಂದು ಮರಣಶಾಸನದಂತೆ ಇರುತ್ತದೆ. ಆದುದರಿಂದ ವಕೀಫ ಇವನ ಮರಣದ ಬಳಿಕ ಮಾತ್ರ ಅದು ಅಸ್ತಿತ್ವಕ್ಕೆ ಬರುತ್ತದೆ. ಅದರ ಸಂಸ್ಥಾಪಕನು ಸಾಯುವ ತನಕ ಆ ಸ್ವತ್ತು ಅವನ ಕೈಯಲ್ಲೇ ಉಳಿದಿರುತ್ತದೆ ; ವಕೀಫ್ ಇವನ ಮರಣ ಬಳಿಕ ಮಾತ್ರ ಆ ಸ್ವತ್ತು ಪರಮಾತ್ಮನಿಗೆ ಸಮರ್ಪಿಸಲ್ಪಡುತ್ತದೆ. ಮರಣಾಂತಿಕ ಕಾಯಿಲೆಯ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಒಂದು ವಕ್ಫ್ ಇದೂ ಸಹ ಒಂದು ಮರಣಶಾಸನದ ವಕ್ಫ್ ಎಂದು ಎಣಿಸಲ್ಪಡುತ್ತದೆ. ಆದುದರಿಂದ ಇಂತಹ ವಕ್ಫ್ ಇದನ್ನು ಇದರ ಸಂಸ್ಥಾಪಕನು ತನ್ನ ಜೀವಮಾನದಲ್ಲಿ ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು.

ಷರತ್ತುಬದ್ಧ ಮತ್ತು ಘಟನಾವಲಂಬಿ ವಕ್ಫ್‌ಗಳು
(Conditional and Contingent Wakfs)

ಶಾಶ್ವತವಾದ ಸಮರ್ಪಣೆ ಇದರ ಇನ್ನೊಂದು ಪ್ರಮುಖ ವೈಶಿಷ್ಟ್ಯವೆಂದರೆ ಆ ಸಮರ್ಪಣೆಯು ಪರಮ ಮತ್ತು ಷರತ್ತು ಬಾಹಿರವಾಗಿರಂತ್ತದೆ. ಯಾವುದಾದರೊಂದು ಷರತ್ತಿಗೆ ಅಥವಾ ಘಟನೆಗೆ ಬಾಧ್ಯವಾಗಿ ನಿರ್ಮಿಸಲ್ಪಟ್ಟ ಒಂದು ವಕ್ಫ್ ಶೂನ್ಯವಾಗಿರುತ್ತದೆ. ಒಂದು ಸಮರ್ಪಣೆಗೆ ಒಂದೊಮ್ಮೆ ಯಾವುದಾದರೊಂದು ಷರತ್ತನ್ನು ಹಚ್ಚಿದರೆ ಆ ಸಮರ್ಪಣೆಯು ಶಾಶ್ವತವಾದುದೆಂದು ಎಣಿಸಲ್ಪಡುವುದಿಲ್ಲ. ಆದುದರಿಂದ ಒಂದು ವಕ್ಫ್ ಇದರ ಅಸ್ತಿತ್ವವು ಯಾವುದಾದರೊಂದು ಅನಿಶ್ಚಿತವಾದ ಭಾವಿ ಘಟನೆಯನ್ನು ಅವಲಂಬಿಸಿರಬಾರದು. ಆದರೆ ಒಬ್ಬ ವಕೀಫ ಇವನ ಮರಣದ ಬಳಿಕ ಮಾತ್ರ ಒಂದು ವಕ್ಫ್ ಅಸ್ತಿತ್ವಕ್ಕೆ ಬರುವುದು ಎಂಬ ಒಂದು ಉಪಬಂಧದ ಮೇರೆಗೆ ಒಂದು ವಕ್ಫ್ ಮಾಡಲ್ಪಟ್ಟಿದೆಯಾದರೂ ಸಹ ಅದು ಶೂನ್ಯವಾಗುವುದಿಲ್ಲ. ಏಕೆಂದರೆ ಅದೊಂದು ಘಟನಾವಲಂಬಿ ವಕ್ಫ್ ಆಗಿದ್ದರೂ ಸಹ ಅದನ್ನೊಂದು ಮರಣ ಶಾಸನದ ಮೇರೆಗೆ ಮಾಡಲ್ಪಟ್ಟಿರುವ ವಕ್ಫ್ ಎಂಬುದಾಗಿ ಎಣಿಸಲಾಗುತ್ತದೆ; ಅದನ್ನು ಒಂದು ಘಟನಾವಲಂಬಿ ವಕ್ಫ್ ಎಂಬುದಾಗಿ ಎಣಿಸಲಾಗುವುದಿಲ್ಲ.

II) ಒಂದು ವಕ್ಫ್ ಇದನ್ನು ಯಾವಾತನು ಮಾಡಬಹುದು : ವಕ್ಫ್ ಮಾಡಲು ಸಕ್ಷಮತೆ.

(Who can make a wakf : competency of the wakif)

ಒಂದು ವಕ್ಫ್ ನಿರ್ಮಿಸಲು ಆ ನಿರ್ಮಾಪಕನು ಸಕ್ಷಮನಾಗಿರಬೇಕು. ಒಬ್ಬ ವ್ಯಕ್ತಿಯು ಒಬ್ಬ ಸಕ್ಷಮನಾದ ವಕೀಫ್ ಎಂಬುದಾಗಿ ಎಣಿಸಲ್ಪಡಬೇಕಾದರೆ ಅವನಲ್ಲಿ ಸಾಮರ್ಥ್ಯವಿದ್ದಿರಬೇಕು, ಹಾಗೂ ಒಂದು ವಕ್ಫ್ ನಿರ್ಮಿಸುವ ಹಕ್ಕು ಇದ್ದಿರಬೇಕು.

ಎ) ವಕ್ಫ್ ನಿರ್ಮಿಸುವ ಸಾಮರ್ಥ್ಯ (Capacity to make wakf)

ಚಿತ್ತಸ್ವಾಸ್ಥ್ಯವಿರುವ ಮತ್ತು ವಯಸ್ಕತನದ ವಯಸ್ಸಿಗೆ ಬಂದಿರುವ ಪ್ರತಿಯೊಬ್ಬ ಮುಸಲ್ಮಾನನು ಒಂದು ವಕ್ಫ್ ನಿರ್ಮಿಸಲು ಸಕ್ಷಮನಾಗಿರುವನು. ಅಂಥವನು ತನ್ನ ವ್ಯವಹಾರದ ಕಾನೂನೀ ಪರಿಣಾಮಗಳನ್ನು ತಿಳಿದುಕೊಳ್ಳಲು ಅಸಮರ್ಥನಾಗಿರುವನು. ಒಬ್ಬ ಚಿತ್ತವಿಕಲ ವ್ಯಕ್ತಿಯಿಂದ ನಿರ್ಮಿಸಲ್ಪಟ್ಟಿರುವ ಒಂದು ವಕ್ಫ್ ಶೂನ್ಯವಾಗಿರುತ್ತದೆ. ಒಬ್ಬ ವಕೀಫನು ವಯಸ್ಕತನದ ವಯಸ್ಸಿಗೆ ಬಂದವನಾಗಿರಬೇಕು. ವಕ್ಫ್‌ಗಳನ್ನು ನಿರ್ಮಿಸುವ ಉದ್ದೇಶಗಳಿಗಾಗಿ ವಯಸ್ಕತನದ ವಯಸ್ಸು 18 ಆಗಿರುತ್ತದೆ. (ಅಥವಾ ಸಂರಕ್ಷಿತರ ನ್ಯಾಯಾಲಯಗಳ ಮೇಲ್ವಿಚಾರಣೆಯಲ್ಲಿದ್ದಿರುವ ವ್ಯಕ್ತಿಯ ಸಂಬಂಧದಲ್ಲಿ ಇದು 21 ವರ್ಷಗಳ ವಯಸ್ಸನ್ನು ಮುಗಿಸಿದಾಗ ವಯಸ್ಕತನ ಆಗಿರುತ್ತದೆ) ಹೀಗೆ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಒಬ್ಬ ವ್ಯಕ್ತಿಯು ಅಲ್ಪವಯಿಯೆಂಬುದಾಗಿ ಎಣಿಸಲ್ಪಡುವನು, ಮತ್ತು ಅಂಥವನು ಯಾವುದೇ ಒಂದು ವಕ್ಫ್ ನಿರ್ಮಿಸುವಂತಿಲ್ಲ. ಅಲ್ಪವಯಿಗಳಿಂದ ನಿರ್ಮಿಸಲ್ಪಟ್ಟಿರುವ ವಕ್ಫ್‌ಗಳು ಮೂಲತಃ ಶೂನ್ಯವಾಗಿರುತ್ತವೆ ಮತ್ತು ವಯಸ್ಸಿಗೆ ಬಂದ ಮೇಲೆ ಒಂದೊಮ್ಮೆ ಅವನು ಅದನ್ನು ಅನುಸಮರ್ಥಿಸಿದರೂ ಸಹ ಅದು ವಿಧ್ಯುಕ್ತವಾಗುವುದಿಲ್ಲ. ಒಬ್ಬ ಅಲ್ಪವಯಿಯ ಸಂರಕ್ಷಕನು ತನ್ನ ಅಲ್ಪವಯಿಯ ಪರವಾಗಿ ಯಾವುದೇ ಒಂದು ವಕ್ಫ್ ನಿರ್ಮಿಸುವಂತಿಲ್ಲ. ಅಲ್ಪವಯಿಗಳ ಪರವಾಗಿ ಅವರ ಸಂರಕ್ಷಕರಿಂದ ನಿರ್ಮಿಸಲ್ಪಟ್ಟಿರುವ ವಕ್ಫಗಳು ಮೂಲತಃ ಶೂನ್ಯವಾಗಿರುತ್ತವೆ.

ಮುಸಲ್ಮಾನೇತರರಿಂದ ವಕ್ಫ್‌ಗಳು (Wakfs by non Muslims)

ವಕ್ಫ್ ಇದೊಂದು ಮುಸ್ಲಿಮ್ ಮತೀಯ ಕಾನೂನಿನ ಒಂದು ಪದ್ಧತಿಯಾಗಿದೆ, ಆದುದರಿಂದ ಒಬ್ಬ ಸಮರ್ಪಕನು ಸಾಮಾನ್ಯವಾಗಿ ಒಬ್ಬ ಮುಸಲ್ಮಾನನಾಗಿರಬೇಕಾಗುತ್ತದೆ. ವಕ್ಫ್ ಅಧಿನಿಯಮ, 1954 (Wakf Act. 1954) ಇದರಲ್ಲಿ ಕೊಡಲಾದ ವಕ್ಫ್ ಇದರ ಪರಿಭಾಷೆಯು ವಕ್ಫ್‌ಗಳನ್ನು ಇಸ್ಲಾಮ್ ಧರ್ಮವನ್ನು ನಂಬಿರುವ ಯಾವನೇ ಒಬ್ಬ ವ್ಯಕ್ತಿಯಿಂದ ಮಾಡಿರುವ ಸಮರ್ಪಣೆಗೆ ಮಿತಗೊಳಿಸಿದೆ. ವಕ್ಫ್ ವಿಧ್ಯುಕ್ತತೆ ಅಧಿನಿಯಮ, 1913 (Wakf Validating Act, 1913) ಇದೂ ಸಹ ಒಬ್ಬ ಇಸ್ಲಾಮ್ ಧರ್ಮವನ್ನು ನಂಬಿರುವ ವ್ಯಕ್ತಿ ಮಾತ್ರ ವಕೀಫ್‌ನಾಗಿರಬಹುದು ಎಂಬುದಾಗಿ ಹೇಳುತ್ತದೆ. ಆದರೆ ಒಬ್ಬ ಮುಸಲ್ಮಾನೇತರನೂ ಸಹ ಒಂದು ಕಾನೂನುಬದ್ಧವಾದ ವಕ್ಫ್ ಮಾಡಬಹುದು. ಇಲ್ಲಿ ಸಮರ್ಪಕನು ಇಸ್ಲಾಮ್ ಧರ್ಮವನ್ನು ನಂಬಿದವನಾಗಿರಬೇಕು. ಹಾಗೆಂದರೆ ಅವನಿಗೆ ಇಸ್ಲಾಮಿನ ಸಿದ್ಧಾಂತ ವಿಶ್ವಾಸವಿದ್ದಿರಬೇಕು; ಅವನೊಬ್ಬ ಮುಸಲ್ಮಾನನಾಗಿರಬೇಕಾಗಿಲ್ಲ.

ಮದ್ರಾಸ್ ಮತ್ತು ನಾಗಪುರ ಉಚ್ಚ ನ್ಯಾಯಾಲಯಗಳು ಕೊಟ್ಟಿರುವ ತೀರ್ಪುಗಳ ಪ್ರಕಾರ ಒಬ್ಬ ಮುಸಲ್ಮಾನೇತರನೂ ಸಹ ಒಂದು ವಿಧ್ಯುಕ್ತವಾದ ವಕ್ಫ್

ನಿರ್ಮಿಸಬಹುದು. ಆದರೆ ಆ ವಕ್ಫ್ ಇದರ ಉದ್ದೇಶವು ಇಸ್ಲಾಮಿನ ಸಿದ್ಧಾಂತಗಳನ್ನು ವಿರೋಧಿಸಬಾರದು. ಒಬ್ಬ ಮುಸಲ್ಮಾನೇತರನು ಒಂದು ವಕ್ಫ್ ಇದನ್ನು ನಿರ್ಮಿಸಬಹುದೆಂದು ಪಾಟ್ನಾ ಉಚ್ಚನ್ಯಾಯಾಲಯವೂ ಸಹ ಒಂದು ತೀರ್ಪು ಕೊಟ್ಟಿದೆ. ಆದರೆ ಪಾಟ್ನಾ ಉಚ್ಚನ್ಯಾಯಾಲಯದ ತೀರ್ಪಿನ ಪ್ರಕಾರ ಒಬ್ಬ ಮುಸಲ್ಮಾನೇತರ ವಕೀಫ್‌ನು ಒಂದು ಸಾರ್ವಜನಿಕ ವಕ್ಫ್ ಇದನ್ನು ನಿರ್ಮಿಸಬಹುದು, ಮತ್ತು ಒಬ್ಬ ಮುಸಲ್ಮಾನೇತರ ವ್ಯಕ್ತಿಯು ಒಂದು ಖಾಸಗೀ ವಕ್ಫ್ ಇದನ್ನು ನಿರ್ಮಿಸುವಂತಿಲ್ಲ. ವಕ್ಫ್‌ಗಳಿಗೆ ಸಂಬಂಧಪಟ್ಟ ಅಧಿನಿಯಮಗಳಲ್ಲಿ ಹೇಳಲಾದಂತೆ ಇಸ್ಲಾಮ್ ಧರ್ಮದಲ್ಲಿ ವಿಶ್ವಾಸವಿದ್ದಿರುವ ವ್ಯಕ್ತಿಯು ಒಂದು ವಕ್ಫ್ ನಿರ್ಮಿಸಬಹುದು ಎಂಬುದಕ್ಕೆ ನ್ಯಾಯಾಲಯಗಳು ಈ ವಿಶಾಲವಾದ ಅರ್ಥವನ್ನು ಕೊಟ್ಟಿವೆ. ಇವುಗಳ ಅಭಿಪ್ರಾಯದಲ್ಲಿ ಮುಸಲ್ಮಾನನಲ್ಲದವನೂ ಸಹ ಇಸ್ಲಾಮಿನ ಸಿದ್ಧಾಂತಗಳನ್ನು ನಂಬಬಹುದು. ಒಬ್ಬ ಮುಸಲ್ಮಾನೇತರನು ನಿಜವಾಗಿ ಇಸ್ಲಾಮಿನ ಸಿದ್ಧಾಂತಗಳನ್ನು ನಂಬಿರುವನೊ ಇಲ್ಲ ಎಂಬುದು ಅವನು ಆ ವಕ್ಫ್ ನಿರ್ಮಿಸುವಾಗ ಅದರ ಬಗ್ಗೆ ಅವನು ಇಟ್ಟುಕೊಂಡಿರುವ ಉದ್ದೇಶದಿಂದ ತಿಳಿದುಬರಹುದು. ಉದಾಹರಣೆಗಾಗಿ, ಒಂದೊಮ್ಮೆ ಒಬ್ಬ ಮುಸಲ್ಮಾನೇತರನು ಒಂದು ದೇವಾಲಯಕ್ಕಾಗಿ ಒಂದು ವಕ್ಫ್ ನಿರ್ಮಿಸಿದರೆ ಅಲ್ಲಿ ಅವನಿಗೆ ಇಸ್ಲಾಮಿನಲ್ಲಿ ನಂಬಿಕೆ ಇಲ್ಲವೆಂಬ ಪೂರ್ವಭಾವನೆಯುಂಟಾಗುತ್ತದೆ.

ವಕ್ಫ್ ನಿರ್ಮಿಸುವ ಹಕ್ಕು (Right to make Wakf)

ಒಂದು ವಕ್ಫ್ ನಿರ್ಮಿಸಲು ಕೇವಲ ಒಂದು ಸಾಮರ್ಥ್ಯವಿದ್ದರೆ ಅದು ಸಾಲುವುದಿಲ್ಲ. ಆ ವಕೀಫನಿಗೆ ತನ್ನ ಒಂದು ಸ್ವತ್ತನ್ನು ಸಮರ್ಪಣೆ ಮಾಡುವ ಹಕ್ಕು ಇದ್ದಿರಬೇಕಾಗುತ್ತದೆ. ಒಂದು ವಕ್ಫ್ ನಿರ್ಮಿಸಲ್ಪಟ್ಟಾಗ ಅಲ್ಲಿ ಆ ಸ್ವತ್ತಿನ ಸ್ವಾಮಿತ್ವದ ಶಾಶ್ವತವಾದ ಹಸ್ತಾಂತರಣವಾಗುತ್ತದೆ. ಆದುದರಿಂದ ಒಂದು ವಕ್ಫ್ ಇದರ ಸಂಸ್ಥಾಪಕನು ಸಮರ್ಪಣೆ ಮಾಡಲ್ಪಟ್ಟ ಆ ಸ್ವತ್ತಿನ ಸ್ವಾಮಿಯಾಗಿರಬೇಕಾಗುತ್ತದೆ. ಒಬ್ಬ ಭೋಗಾರ್ಜಿತ ಅಥವಾ ಭಾಡಿಗೆದಾರನು ತನ್ನ ಕಬ್ಜೆಯಲ್ಲಿದ್ದಿರುವ ಸ್ವತ್ತನು ಹಸ್ತಾಂತರಣಗೊಳಿಸಿ ಒಂದು ವಕ್ಫ್ ಮಾಡುವಂತಿಲ್ಲ. ಏಕೆಂದರೆ ಆ ಸ್ವತ್ತಿನ ಮೇಲೆ ಅವನಿಗೆ ಸ್ವಾಮಿತ್ವವಿರುವುದಿಲ್ಲ. ಇದೇ ರೀತಿಯಲ್ಲಿ ಒಬ್ಬ ಫಲೋಪಭೋಗಿ ಅಡವಾನಿತನು ತನ್ನ ಕಬ್ಜೆಯಲ್ಲಿದ್ದಿರುವ ಒಂದು ಸ್ವತ್ತಿನಿಂದ ಯಾವತ್ತೂ ಒಂದು ವಕ್ಫ್ ಮಾಡುವಂತಿಲ್ಲ. ಯಾಕೆಂದರೆ ಅವನಿಗೆ ಆ ಸ್ವತ್ತಿನ ಮೇಲೆ ಸ್ವಾಮಿತ್ವವಿರುವುದಿಲ್ಲ. ಒಂದು ವಕ್ಫ್ ಮಾಡಬೇಕಾದರೆ ಅದಕ್ಕೆ ಸಮರ್ಪಣೆ ಮಾಡಲಾಗುವ ಸ್ವತ್ತಿನ ಮೇಲೆ ಆ ವಕೀಫನಿಗೆ ಪರಮವಾದ ಹಿತಸಂಬಂಧವಿದ್ದಿರಬೇಕಾಗುತ್ತದೆ. ಅಸಂದೇಯ ಕನ್ಯಾಶುಲ್ಕದ ಬದಲಾಗಿ ತಾನು ಇಟ್ಟುಕೊಂಡಿರುವ ಸ್ವತ್ತನ್ನು ಸಮರ್ಪಣೆ ಮಾಡಿ ಒಬ್ಬ ಮುಸ್ಲಿಮ್ ವಿಧವೆಯು ಒಂದು ವಕ್ಫ್ ಮಾಡುವಂತಿಲ್ಲ. ಏಕೆಂದರೆ ಆಕೆಗೆ ಆ ಸ್ವತ್ತಿನ ಮೇಲೆ ಪರಮವಾದ ಸ್ವಾಮಿತ್ವವಿರುವುದಿಲ್ಲ.

ಪರದಾನಾಶಿಲ್ ನಾರಿಯಿಂದ ವಕ್ಫ್ (Wakf by Pardanashin lady)

ಒಬ್ಬ ಪರದಾನಾಶಿನ್ ನಾರಿಯು ಮನೆಯೊಳಗೆ ಇರುವಳಾದರೂ ಸಹ ಆಕೆಯು ಒಂದು ವಕ್ಫ್ ನೇಮಿಸಲು ಸಕ್ಷಮಳಾಗಿರುವಳು. ಅಂತಹ ಒಬ್ಬ ನಾರಿಗೆ. ಸಾಮರ್ಥ್ಯ ಮತ್ತು ಹಕ್ಕು ಇದ್ದರೆ ಆಕೆಯು ತನ್ನ ಸ್ವತ್ತುಗಳನ್ನು ಸಮರ್ಪಣೆಮಾಡಿ ಒಂದು ವಕ್ಫ್ ನಿರ್ಮಿಸಬಹುದು. ಒಂದೊಮ್ಮೆ ಒಬ್ಬ ಪರದಾನಾಶಿಲ್‌ನಾರಿಯು ವಕೀಫ್ ಆಗಿದ್ದರೆ ಅಲ್ಲಿ ಆಕೆಯು ಆ ವಕ್ಫ್ ನಿರ್ಮಿಸುವಾಗ ಸ್ವತಂತ್ರ ಮನಸ್ಸಿನಿಂದ ವರ್ತಿಸಿದ್ದಳು ಮತ್ತು ತಾನು ಮಾಡುತ್ತಿರುವ ವ್ಯವಹಾರದ ಸ್ವರೂಪವನ್ನು ತಿಳಿದು ಕೊಂಡಿದ್ದಳು ಎಂಬುದಾಗಿ ಅದರ ಮುತಾವಲಿ ಮತ್ತು ಪ್ರಯೋಜಕರು ಸಾಬೀತು ಪಡಿಸಿ ತೋರಿಸಬೇಕಾಗುತ್ತದೆ.

ವಕೀಫನ ಸಮ್ಮತಿಯು ಸ್ವತಂತ್ರವಾಗಿರಬೇಕು.
(Consent of wakif must be free)

ಒಂದು ವಕ್ಫ್‌ಗೆ ಒಂದು ಸ್ವತ್ತನ್ನು ಸಮರ್ಪಣೆ ಮಾಡುವಾಗ ಆ ವಕೀಫನು ಸ್ವತಂತ್ರವಾಗಿ ತಲೆ ಖರ್ಚುಮಾಡಬೇಕಾಗುತ್ತದೆ. ಹಾಗೆಂದರೆ. ಆ ವಕ್ಫ್ ಇದನ್ನು ನಿರ್ಮಿಸುವಾಗ ಅದರ ನಿರ್ಮಾಪಕನು ಸ್ವತಂತ್ರವಾದ ಸಮ್ಮತಿಯನ್ನು ಕೊಟ್ಟಿರ ಬೇಕು. ಒಂದೊಮ್ಮೆ ಒಂದು ವಕ್ಫ್ ಇದು ಒತ್ತಾಯ, ಅನುಚಿತ ಪ್ರಭಾವ, ಜಬರದಸ್ತಿ. ಬಲಪ್ರಯೋಗ ಇತ್ಯಾದಿಗಳಿಂದ ಮಾಡಲ್ಪಟ್ಟಿದ್ದರೆ ಅಲ್ಲಿ ಆ ವಕ್ಫ್ ಶೂನ್ಯವಾಗುತ್ತದೆ.

ಸಮರ್ಪಣೆ ಮಾಡಲಾಗುವ ಸ್ವತ್ತಿನ ಪ್ರಮಾಣ
(Amount of Property Dedicated)

ಒಬ್ಬ ವ್ಯಕ್ತಿಯು ತನ್ನ ವಾರಸುದಾರರಿಗೆ ಏನನ್ನೂ ಬಿಡದೇ ತನ್ನ ಇಡೀ ಸ್ವತ್ತನ್ನು ಸಮರ್ಪಣೆ ಮಾಡಿ ಒಂದು ವಕ್ಫ್ ನಿರ್ಮಿಸಲು ಹಕ್ಕುದಾರನಾಗಿರುವನು. ಆದರೆ ಒಂದು ಮರಣಶಾಸನದ ವಕ್ಫ್ ನಿರ್ಮಿಸುವುದಿದ್ದರೆ ಅಲ್ಲಿ ಅದರ ನಿರ್ಮಾಪಕನು ತನ್ನ ಸ್ವತ್ತುಗಳ ಮೂರನೇ ಒಂದಂಶಕ್ಕಿಂತ ಹೆಚ್ಚಿನದನ್ನು ಆ ವಕ್ಫ್‌ಗೆ ಸಮರ್ಪಿಸು ವಂತಿಲ್ಲ.

III) ವಕ್ಫ್‌ಗಳ ವಿಷಯವಸ್ತು : ಸ್ವತ್ತು
(Subject-matter of Wakfs : The Property)

ಯಾವದೇ ರೀತಿಯ ಸ್ವತ್ತು ಒಂದು ವಕ್ಫ್ ಇದರ ವಿಷಯವಸ್ತುವಾಗ ಬಹುದು. ಅದು ಸ್ಥಿರ ಸ್ವತ್ತಾಗಿರಬಹುದು ಅಥವಾ ಚರ. ಆದರೆ ಹಿಂದಿನ ಮುಸ್ಲಿಮ್ ನ್ಯಾಯದರ್ಶಿಗಳು ವಕ್ಫ್ ಸ್ವತ್ತಿನ ಸ್ವರೂಪದ ಬಗ್ಗೆ ಪರಸ್ಪರ ವಿರೋಧಿ ಯಾದ ಅಭಿಪ್ರಾಯಗಳನ್ನು ಕೊಟ್ಟಿರುವರು. ಅಬುಹನೀಫ್ ಎಂಬವನ ಪ್ರಕಾರ

ಸ್ಥಿರಸ್ವತ್ತನ್ನು ಮಾತ್ರ ವಕ್ಫ್ ಇವರಲ್ಲಿ ಸಮರ್ಪಣೆ ಮಾಡಬಹುದು. ಆದರೆ ಶಫೀ ಮತ್ತು ಶಿಯಾ ನ್ಯಾಯದರ್ಶಿಗಳ ಅಭಿಪ್ರಾಯದಂತೆ ಭೂಸ್ವತ್ತು ಮತ್ತು ಉಪಯೋಗದಿಂದ ಯಾವುದನ್ನು ಕೊನೆಗೊಳಿಸಲಾಗುವದಿಲ್ಲವೊ ಅಂತಹ ಸ್ವತ್ತುಗಳನ್ನು ಮತ್ತು ವಹಿವಾಟ ಮಾಡಬಹುದಾದ ಕುದುರೆ, ಶಸ್ತ್ರಗಳು ಇತ್ಯಾದಿ ವಸ್ತುಗಳೂ ಸಹ ಒಂದು ವಕ್ಫ್ ಇವರ ವಿಧ್ಯುಕ್ತವಾದ ಸ್ವತ್ತಾಗಿರಬಹುದು. ಒಂದು ವಕ್ಫ್ ಇದಕ್ಕೆ ಸಮರ್ಪಿಸಲಾದ ಸ್ವತ್ತು ಒಂದು ಸ್ಥಿರಸ್ವತ್ತೇ ಆಗಿರಬೇಕಾಗಿಲ್ಲವೆಂಬುದಾಗಿ ಕೆಲವು ಕಾಲದ ಬಳಿಕ ಬಹುತೇಕವಾಗಿ ಎಲ್ಲಾ ಮುಸ್ಲಿಮ್ ನ್ಯಾಯದರ್ಶಿಗಳು ಒಪ್ಪಿಕೊಂಡಿರುವರು. ಆದುದರಿಂದ ಎಲ್ಲಾ ಪರಂಪರೆಗಳ ನ್ಯಾಯದರ್ಶಿಗಳು ಭೂಮಿಯ ಹೊರತಾಗಿ ಈ ಕೆಳಗಿನ ವಸ್ತುಗಳನ್ನು ಸಹ ಒಂದು ವಕ್ಫ್ ಇದರ ವಿಷಯವಸ್ತುಗಳನ್ನಾಗಿ ಮಾಡಬಹುದೆಂದು ಹೇಳಿರುವರು: (1) ದನಕರುಗಳು (2) ಬೇಸಾಯದ ಉಪಕರಣಗಳು (3) ಮಸೀದಿಗಳಲ್ಲಿ ಸಾರ್ವಜನಿಕ ಪಠಣಕ್ಕಾಗಿ ಕುರಾನ್ ಮತ್ತು, ಉಪಯೋಗದಿಂದ ನಿರ್ಮೂಲವಾಗದಂತಹ ಇತರ ಚರ ವಸ್ತುಗಳು. ಯುದ್ಧದ ಕುದುರೆ, ಒಂಟೆಗಳು ಮತ್ತು ಒಂದು ಖಡ್ಗ ಇವನ್ನು ಸಹ ವಕ್ಫ್ ಇವರ ಕಾನೂನುಬದ್ಧವಾದ ಒಂದು ವಿಷಯ ವಸ್ತು ಎಂಬುದಾಗಿ ಎಣಿಸಲಾಗಿದೆ.

ವಕ್ಫ್ ವಿಧ್ಯುಕ್ತತೆ ಅಧಿನಿಯಮ, 1913 (Wakf validating Act 1913) ಇದು ಜಾರಿಗೆ ಬರುವುದಕ್ಕಿಂತ ಮೊದಲು ವಕ್ಫ್ ಸ್ವತ್ತಿನ ಸ್ವರೂಪದ ಬಗ್ಗೆ ಭಾರತದ ನ್ಯಾಯಾಲಯಗಳಲ್ಲಿ ಬೇರೆ ಬೇರೆ ದೃಷ್ಟಿಕೋನಗಳಿದ್ದವು. ಕಲ್ಕತ್ತಾ, ಮುಂಬಯಿ ಮತ್ತು ಮದ್ರಾಸ ಉಚ್ಚನ್ಯಾಯಾಲಯಗಳ ಅಭಿಪ್ರಾಯದಂತೆ ಕೇವಲ ಸ್ಥಿರಸ್ವತ್ತುಗಳು ಮಾತ್ರ ವಕ್ಫ್ ಇದಕ್ಕೆ ಸಮರ್ಪಿಸುವಂತಹದಾಗಿದ್ದವು: ಆದರೆ ಆ ಸಮರ್ಪಿಸಲ್ಪಟ್ಟ ಸ್ಥಿರ ಸ್ವತ್ತಿಗೆ ಉಪಾಂಗವಾಗಿರುವ ಇತರ ಚರಸ್ವತ್ತುಗಳೂ ಸಹ ಒಂದು ವಕ್ಫ್ ಇದರ ವಿಷಯ ವಸ್ತುವಾಗಿರಬಹುದು. ಈ ರೀತಿಯಾಗಿ ಈ ಉಚ್ಚನ್ಯಾಯಾಲಯಗಳ ಅಭಿಪ್ರಾಯದಲ್ಲಿ ಒಂದೊಮ್ಮೆ ಒಂದು ಚರ ಸ್ವತ್ತು ಒಂದು ವಕ್ಫ್ ಇದಕ್ಕೆ ಸಮರ್ಪಿಸಲ್ಪಟ್ಟ ಸ್ಥಿರಸ್ವತ್ತಿನ ಒಂದು ಉಪಾಂಗವಾಗಿದ್ದರೆ ಅದು ಒಂದು ವಕ್ಫ್ ಇದರ ವಿಷಯ ವಸ್ತುವಾಗಿರುವಂತಿಲ್ಲ. ಆದರೆ ಅಲಹಬಾದ್ ಉಚ್ಚನ್ಯಾಯಾಲಯದ ಅಭಿಪ್ರಾಯದ ಪ್ರಕಾರ ಒಂದು ಚರಸ್ವತ್ತು ಸಹ ಒಂದು ವಕ್ಫ್ ಇದಕ್ಕೆ ಸಮರ್ಪಣೆ ಮಾಡಲ್ಪಡಬಹುದು; ನಾಣ್ಯಗಳು ಮತ್ತು ಒಂದು ಸಾರ್ವಜನಿಕ ನಿಯಮಿತ ಕಂಪನಿಯ ಶೇರುಗಳೂ ಸಹ ಒಂದು ವಕ್ಫ್ ಇದರ ವಿಧ್ಯುಕ್ತವಾದ ವಿಷಯ ವಸ್ತುವಾಗಿರಬಹುದು.

1913ರ, ಬಳಿಕ ಭಾರತದ ನ್ಯಾಯಾಲಯಗಳು ವಕ್ಫ್ ವಿಧ್ಯುಕ್ತತೆ ಅಧಿನಿಯಮವು ಇದರಲ್ಲಿ ವಕ್ಫ್ ಇದರ ಬಗ್ಗೆ ಕೊಡಲಾದ ಪರಿಭಾಷೆಯನ್ನು ಅನುಸರಿಸಿವೆ. ಈ ಅಧಿನಿಯಮದ ಕ. ೭ (1) ಇದರ ಪ್ರಕಾರ ಯಾವುದೇ ರೀತಿಯ ಸ್ವತ್ತನ್ನು

ಒಂದು ವಕ್ಫ್‌ದಲ್ಲಿ ಸಮರ್ಪಿಸಬಹುದು. ಈಗ ಒಂದು ವಕ್ಫ್‌ನಲ್ಲಿ ಸ್ಥಿರ ಹಾಗೂ ಚರಸ್ವತ್ತುಗಳನ್ನು ಸಮರ್ಪಣೆಮಾಡಬಹುದು. ಈ ಪರಿಭಾಷೆಯು ಬರುವ 'ಯಾವತ್ತೂ ಸ್ವತ್ತು' ಎಂಬ ಶಬ್ದಗಳು ಮೂರ್ತ ಹಾಗೂ ಅಮೂರ್ತ ಸ್ವತ್ತುಗಳನ್ನೂ ಒಳಗೊಂಡಿವೆ. ಈ ರೀತಿಯಾಗಿ ಸಮರ್ಪಕನ ಸ್ವಾಮಿತ್ವಕ್ಕೆ ಒಳಪಟ್ಟಿರುವ ಯಾವತ್ತೂ ಪ್ರಯೋಜಕ ಹಿತಸಂಬಂಧವು ವಕ್ಫ್ ಇದರ ಒಂದು ಕಾನೂನುಬದ್ಧವಾದ ವಿಷಯ ವಸ್ತುವಾಗಿರಬಹುದು. ಆದುದರಿಂದ ಈ ಕೆಳಗಿನ ಸ್ವತ್ತುಗಳಿಂದ ಒಂದು ವಿದ್ಯುಕ್ತವಾದ ವಕ್ಫ್ ಇದನ್ನು ನಿರ್ಮಿಸಬಹುದು :

i) ಸರಕಾರಿ ಪ್ರಾಮಿಸರಿ ನೋಟುಗಳು

ii) ನಗದು ರೂಪದ ಹಣ

iii) ಒಂದು ದರ್ಗಾದಲ್ಲಿ ಸಲ್ಲಿಸಲಾಗುವ ವಸ್ತುಗಳು

iv) ಒಂದು ಹಾಡಿಯ ಧಾರಕನು ಹೊಂದಿರುವ ಸ್ವಾಮಿತ್ವದ ಹಕ್ಕುಗಳು.

v) ಒಂದು ಕಂಪನಿಯಲ್ಲಿ ಅಥವಾ ಸರಕಾರೀ ಭದ್ರತೆಗಳಲ್ಲಿ ಇರುವ ಶೇರುಗಳು.

ಆದರೆ ನ್ಯಾಯಾಲಯಗಳ ಅಭಿಪ್ರಾಯದ ಪ್ರಕಾರ ಈ ಕೆಳಗಿನ ಸ್ವತ್ತುಗಳು ಒಂದು ವಕ್ಫ್ ಇದರ ವಿಷಯ ವಸ್ತುವಾಗುವಂತಿಲ್ಲ ;

i) ಒಂದು ಕನ್ಯಾ ಶುಲ್ಕದ ಋಣ

ii) ಒಂದು ಸರಳ ಹಣದ ಡಿಕ್ರಿಯ ಮೇರೆಗೆ ಋಣಿಯಿಂದ ಹಣವನ್ನು ವಸೂಲಿ ಮಾಡುವ ಹಕ್ಕು.

iii) ಒಬ್ಬ ಫಲೋಪಭೋಗಿ ಅಡವಣಾನಿತನ ಹಕ್ಕುಗಳು.

ಮುಷಾ ಇದರ ವಕ್ಫ್ (Wakf of Mushaa)

ಮುಷಾ ಎಂದರೆ ಒಂದು ಸಹಸ್ವಾಮಿತ್ವದ ಸ್ವತ್ತಿನಲ್ಲಿರುವ ಅವಿಭಕ್ತ ಪಾಲು ಎಂಬುದಾಗಿ ನಾವು ಈಗಾಗಲೇ ನೋಡಿರುವೆವು. ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಒಂದು ಭೂಮಿಯ ಸ್ವಾಮಿತ್ವವನ್ನು ಜಂಟಿಯಾಗಿ ಹೊಂದಿರುವರೆಂದಾದರೆ ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಭಾಗಗಳನ್ನು ಮುಷಾ ಎಂದು ಕರೆಯಲಾಗುತ್ತದೆ. ಮುಷಾ ಇದರ ಸುನ್ನೀ ಸಿದ್ಧಾಂತವು ವಕ್ಫ್‌ಗಳಿಗೆ ಅನ್ವಯವಾಗುವುದಿಲ್ಲ. ಒಂದು ಮುಷಾ ಸ್ವತ್ತು ಒಂದು ವಕ್ಫ್ ಇದರ ಒಂದು ಕಾನೂನು ಬದ್ಧವಾದ ವಿಷಯ ವಸ್ತುವಾಗಬಹುದು. ಆದುದರಿಂದ ಒಂದೊಮ್ಮೆ ಒಬ್ಬ ಮುಸಲ್ಮಾನನು ಯಾವುದಾದರೊಂದು ಸ್ವತ್ತಿನ ಸಹಸ್ವಾಮಿಯಾಗಿದ್ದರೆ ಅವನು ಆ ಸ್ವತ್ತಿನಿಂದ ತನ್ನ ಪಾಲನ್ನು ವಿಭಜನೆ ಮಾಡದೆಯೂ ಅದರಿಂದ ಒಂದು ವಕ್ಫ್ ನಿರ್ಮಿಸಬಹುದು.

ಒಂದು ಸ್ವತ್ತು ವಿಭಾಜ್ಯವಾಗಿದ್ದರೂ ಸಹ ಅಲ್ಲಿ ಮುಷಾ ಇವರ ವಕ್ಫ್ ವಿಧ್ಯುಕ್ತ ವಾಗಿರುತ್ತದೆ. ಈ ನಿಯಮವು ಅಬುಯೂಸೂಫ್ ಎಂಬವನ ಅಭಿಪ್ರಾಯದ ಮೇಲೆ ಆಧಾರಿತವಾಗಿದೆ, ಮತ್ತು ಇದು ಸಾಮಾನ್ಯವಾಗಿ ಭಾರತದ ನ್ಯಾಯಾಲಯ ಗಳಿಂದ ಜಾರಿಮಾಡಲ್ಪಡುತ್ತದೆ. ಅಬುಯೂಸೂಫ್ ಇವನ ಪ್ರಕಾರ ಒಬ್ಬ ಸಹ-ಸ್ವಾಮಿಯು ಒಂದು ಜಂಟಿ ಸ್ವತ್ತಿನಲ್ಲಿರುವ ತನ್ನ ಪಾಲಿನಿಂದ ಒಂದು ವಕ್ಫ್ ನಿರ್ಮಿಸ ಬೇಕೆಂದಿದ್ದರೆ ಅವನು ತನ್ನ ಪಾಲನ್ನು ಆ ಜಂಟಿ ಸ್ವಾಮಿತ್ವದ ಸ್ವತ್ತಿನಿಂದ ಪ್ರತ್ಯೇಕ ಗೊಳಿಸದೆಯೂ ಸಹ ಒಂದು ವಕ್ಫ್ ನಿರ್ಮಿಸಬಹುದು. ಈ ಸಾಮಾನ್ಯ ನಿಯಮವು ಈ ಕೆಳಗಿನ ಅಪವಾದಗಳಿಗೆ ಬಾಧ್ಯವಾಗಿರುತ್ತದೆ :

1) ಒಂದು ಮಸೀದಿಯ ನಿರ್ಮಾಣಕ್ಕಾಗಿ ಒಂದೊಮ್ಮೆ ಒಂದು ಅವಿಭಕ್ತ ಪಾಲನ್ನು ವಕ್ಫ್ ಇದಕ್ಕೆ ಸಮರ್ಪಿಸಿದ್ದರೆ ಅಲ್ಲಿ ಆ ಅವಿಭಕ್ತಪಾಲು ಉಳಿದ ಜಂಟಿ ಸ್ವತ್ತಿನಿಂದ ಪ್ರತ್ಯೇಕಿಸಲ್ಪಡುವ ಹೊರತು ಆ ವಕ್ಫ್ ವಿಧ್ಯುಕ್ತವಾಗುವುದಿಲ್ಲ.

2) ಒಂದೊಮ್ಮೆ ಸಾರ್ವಜನಿಕ ದಹನ ಭೂಮಿಗಾಗಿ ಒಂದು ವಕ್ಫ್ ನಿರ್ಮಿಸಲ್ಪಟ್ಟಿದ್ದರೆ ಅಲ್ಲಿ ಆ ಅವಿಭಕ್ತಪಾಲು ಪ್ರತ್ಯೇಕಿಸಲ್ಪಟ್ಟಿರುವ ಹೊರತು ಒಂದು ವಕ್ಫ್ ವಿಧ್ಯುಕ್ತವೆಂಬುದಾಗಿ ಎಣಿಸಲ್ಪಡುವುದಿಲ್ಲ.

3) ಒಂದೊಮ್ಮೆ ಒಂದು ಭೋಗಾರ್ಪಣೆ ಮಾಡಲ್ಪಟ್ಟಿರುವ ಸಹ-ಸ್ವಾಮಿತ್ವದ ಒಂದು ಸ್ವತ್ತಿನಲ್ಲಿರುವ ಒಂದು ಪಾಲನ್ನು ಒಬ್ಬನು ಒಂದು ವಕ್ಫ್‌ಗಾಗಿ ಸಮರ್ಪಿಸಿದರೆ ಅಲ್ಲಿ ಆ ವಕೀಫ್‌ನು ತನ್ನ ಪಾಲನ್ನು ಪ್ರತ್ಯೇಕಿಸಿರುವ ಹೊರತು ಆ ವಕ್ಫ್ ವಿಧ್ಯುಕ್ತವಾಗುವುದಿಲ್ಲ.

IV) ವಕ್ಫ್ ಇದರ ಉದ್ದೇಶ (The object of wakf)

ಒಂದು ವಕ್ಫ್ ಇದರ ಉದ್ದೇಶವು ಧಾರ್ಮಿಕ, ಭಕ್ತಿಭಾವದ ಅಥವಾ ಧರ್ಮ ದಾಯ ಇದರಿಂದ ಕೂಡಿಕೊಂಡಿರಬೇಕು. ಮುಸ್ಲಿಮ್ ಕಾನೂನಿನ ಪ್ರಕಾರ ಆಧ್ಯಾತ್ಮಿಕ ಅಥವಾ ಧಾರ್ಮಿಕ ಪ್ರಯೋಜನಗಳನ್ನು ಪಡೆಯುವ ಉದ್ದೇಶದಿಂದ ಒಂದು ವಕ್ಫ್ ನಿರ್ಮಿಸಲ್ಪಡುತ್ತದೆ. ಒಂದು ವಕ್ಫ್ ಇದರ ಉದ್ದೇಶವು ಆ ಇಸ್ಲಾಮಿಕವಾಗಿರಬಾರದು. ಒಂದೊಮ್ಮೆ ಒಂದು ವಕ್ಫ್ ಇದರ ಉದ್ದೇಶವು ಆ ಇಸ್ಲಾಮಿಕವಾಗಿದ್ದರೆ ಆ ವಕ್ಫ್ ಶೂನ್ಯವಾಗುತ್ತದೆ. 'ವಕ್ಫ್ ವಿಧ್ಯುಕ್ತತೆಯ ಅಧಿನಿಯಮ, 1913' ಇದು ಒಂದು ವಕ್ಫ್ ಇದರ ಉದ್ದೇಶವು ಧಾರ್ಮಿಕ, ಭಕ್ತಿ ಭಾವ, ಅಥವಾ ಧರ್ಮದಾಯ ಇದರಿಂದ ಕೂಡಿಕೊಂಡಿರಬೇಕೆಂದು ಹೇಳಿದೆ ಯಾದರೂ ಸಹ ಯಾವ ಎಲ್ಲ ಉದ್ದೇಶಗಳು ಧಾರ್ಮಿಕ, ಭಕ್ತಿಭಾವದ ಅಥವಾ ಧರ್ಮದಾಯದವುಗಳೆಂದು, ಎಣಿಸಲಾಗುವವೆಂದು ಹೇಳಲಾಗಿಲ್ಲ. ಇದನ್ನು ಇಸ್ಲಾಮಿನ ಸಿದ್ಧಾಂತಗಳ ಆಧಾರದ ಮೇಲೆ ನ್ಯಾಯಾಲಯಗಳು ನಿರ್ಣಯಿಸಿದೆ.

ಮುಸಲ್ಮಾನರೊಳಗೆ ಬಳಕೆಯಲ್ಲಿರುವ ಯಾವತ್ತೂ ಆಚರಣೆ ಅಥವಾ ಉತ್ಸವ ಇವುಗಳನ್ನು ಧಾರ್ಮಿಕವೆಂಬುದಾಗಿ ಎಣಿಸಬಹುದು. ಇಂತಹ ಕಾರ್ಯಕಲಾಪಗಳಿಗಾಗಿ ಮಾಡಲ್ಪಟ್ಟಿರುವ ಒಂದು ವಕ್ಫ್ ಮುಸ್ಲಿಮ್ ಕಾನೂನಿನ ಮೇರೆಗೆ ಸಮ್ಮತವಾಗಿರುತ್ತದೆ. ಇದೇ ರೀತಿಯಲ್ಲಿ ಭಕ್ತಿಭಾವ ಮತ್ತು ಧರ್ಮದಾಯ ಎಂಬ ಶಬ್ದಗಳಿಗೂ ಸಹ ಮುಸ್ಲಿಮ್ ಕಾನೂನಿನಲ್ಲಿ ವಿಶಾಲವಾದ ಅರ್ಥವನ್ನು ಕೊಡಲಾಗಿದೆ. ಇಸ್ಲಾಮಿನಲ್ಲಿ ಏನೆಲ್ಲಒಳ್ಳೆಯದು ಎಂದು ಮನ್ನಿಸಲ್ಪಟ್ಟಿದೆಯೊ ಅದನ್ನೆಲ್ಲಾ ಧಾರ್ಮಿಕ ಅಥವಾ ಭಕ್ತಿಭಾವದ ಉದ್ದೇಶವೆಂದು ಎಣಿಸಲಾಗುತ್ತದೆ. ಅಮೀರಅಲಿ ಎಂಬವನ ಅಭಿಪ್ರಾಯದಲ್ಲಿ ಏನೆಲ್ಲ ಪರಮಾತ್ಮನಿಂದ ಸಮ್ಮತಿಸಲ್ಪಟ್ಟಿದೆಯೋ ಅದು ಧರ್ಮದಾಯ ಅಥವಾ ಭಕ್ತಿಭಾವದ್ದೆಂದು ಎಣಿಸಲ್ಪಡುತ್ತದೆ ಆದುದರಿಂದ ಮಾನವತೆಯ ಹಿತದೃಷ್ಟಿಯಿಂದ ಏನೆಲ್ಲ ಮಾಡಲ್ಪಡುತ್ತದೊ ಅದು ವಕ್ಫ್ ಇದರ ಒಂದು ವಿದ್ಯುಕ್ತವಾದ ಉದ್ದೇಶವೆಂದು ಏಣಿಸಲ್ಪಡುತ್ತದೆ. ಇಸ್ಲಾಮಿನ ಸಿದ್ಧಾಂತಗಳಿಗೆ ವಿರೋಧವಾಗಿರುವ ಉದ್ದೇಶಗಳನ್ನು ಮಾನವನಿಗೆ ಪ್ರಯೋಜಕವಾಗುವ ಉದ್ದೇಶಗಳೆಂದು ಎಣಿಸಲಾಗುವುದಿಲ್ಲ ಮತ್ತು ಇಂತಹ ಉದ್ದೇಶಕ್ಕೋಸ್ಕರ ಮಾಡಲ್ಪಟ್ಟ ಒಂದು ವಕ್ಫ್ ಅಸಿಂಧುವಾಗುತ್ತದೆ. ಉದಾಹರಣೆಗಾಗಿ, ಒಂದು ಮಸೀದಿ, ಆಸ್ಪತ್ರೆ, ಶಾಲೆ ಇತ್ಯಾದಿಗಳ ನಿರ್ಮಾಣವು ಮಾನವತೆಗೆ ಪ್ರಯೋಜನಕಾರಿಯೆಂಬುದಾಗಿ ಇಸ್ಲಾಮಿನಿಂದ ಮನ್ನಿಸಲಾಗಿದೆ. ಆದುದರಿಂದ ಈ ಉದ್ದೇಶಗಳಿಗಾಗಿ ಒಂದು ವಕ್ಫ್ ಇದನ್ನು ವಿದ್ಯುಕ್ತವಾಗಿ ನಿರ್ಮಿಸಬಹುದು. ಆದರೆ ಮದ್ಯಪಾನ, ಜುಗಾರಿ, ಮೂರ್ತಿಪೂಜೆ ಇತ್ಯಾದಿ ಮಾನವತೆಗೆ ಉಪಯುಕ್ತವಾದವುಗಳೆಂದು ಇಸ್ಲಾಮಿನಿಂದ ಮನ್ನಿಸಲ್ಪಟ್ಟಿಲ್ಲ. ಆದುದರಿಂದ ಒಂದು ಶರಾಬಿನ ಅಂಗಡಿಯ ನಿರ್ಮಾಣ ಅಥವಾ ಒಂದು ಜುಗಾರಿ ಆಟದ ಕೋಣೆಯ ಕಟ್ಟುವಿಕೆ, ಅಥವಾ ಒಂದು ದೇವಾಲಯದ ನಿರ್ಮಾಣ ಇತ್ಯಾದಿಗಳಿಗಾಗಿ ಮಾಡಲ್ಪಟ್ಟ ಒಂದು ವಕ್ಫ್ ಶೂನ್ಯವಾಗಿರುತ್ತದೆ.

ತನ್ನ ಸ್ವಂತ ಮಕ್ಕಳ ಮತ್ತು ವಂಶಜರ ಜೀವನಾಂಶಕ್ಕೋಸ್ಕರ ಉಪಬಂಧ ಮಾಡುವ ಒಂದು ಕಾರ್ಯವನ್ನು ಮುಸ್ಲಿಮ್ ಕಾನೂನ ಭಕ್ತಿಭಾವದ ಕಾರ್ಯವೆಂದು ಎಣಿಸುತ್ತದೆ. ಆದುದರಿಂದ ಒಬ್ಬನು ಕೇವಲ ತನ್ನ ವಂಶಜರ ಅಥವಾ ಕುಟುಂಬದ ಸದಸ್ಯರ ಜೀವನಾಂಶಕ್ಕೋಸ್ಕರ ಉಪಬಂಧ ಮಾಡುವ ಉದ್ದೇಶದಿಂದ ಒಂದು ವಕ್ಫ್ ನಿರ್ಮಿಸಿದರೆ ಅದು ಒಂದು ಕಾನೂನು ಬದ್ಧ ಉದ್ದೇಶಕ್ಕಾಗಿ ನಿರ್ಮಿಸಲಾದ ಒಂದು ವಕ್ಫ್ ಎಂದು ಎಣಿಸಲ್ಪಡುತ್ತದೆ. ಇಂತಹ ವಕ್ಫ್ ಇದನ್ನು ಒಂದು ಕೌಟುಂಬಿಕ ವಕ್ಫ್ ಅಥವಾ ವಕ್ಫ್-ಅಲ್-ಅಲಾವರ್ ಎಂದು ಕರೆಯಲಾಗುತ್ತದೆ. ಎರಡನೆಯದಾಗಿ ಮುಸ್ಲಿಮ್ ನ್ಯಾಯದರ್ಶಿಗಳ ಪ್ರಕಾರ ಬಡವರ ಪ್ರಯೋಜನ ಮಾಡುವದು ಅತ್ಯಂತ ಸಮ್ಮತವಾದ ಧರ್ಮದಾಯದ ರೀತಿಯಾಗಿರುತ್ತದೆ. ಆದುದರಿಂದ ಒಂದು ವಕ್ಫ್ ಇದರಲ್ಲಿ ಯಾವುದೇ ಒಂದು ಉದ್ದೇಶವು ವ್ಯಕ್ತವಾಗಿ ಹೇಳಲ್ಪಟ್ಟಿಲ್ಲವೆಂದಾದರೆ ಅಥವಾ, ಮೂಲ ಉದ್ದೇಶವು ನಿರ್ಮೂಲನಗೊಂಡಿದ್ದರೆ ಅಲ್ಲಿ

ಆ ವಕ್ಫ್ ಸ್ವತ್ತಿನಿಂದ ಬರುವ ಫಲೋಪಭೋಗವನ್ನು ಬಡವರ ಉದ್ಧಾರಕ್ಕಾಗಿ ಉಪಯೋಗಿಸಿದರೆ ಅದೊಂದು ಕಾನೂನುಬದ್ಧವಾದ ಉದ್ದೇಶವೆಂಬುದಾಗಿ ಎಣಿಸಲ್ಪಡುತ್ತದೆ.

ಒಂದು ವಕ್ಫ್ ಇದರ ನಿರ್ಮಾಣಕ್ಕಾಗಿ ಈ ಕೆಳಗಿನ ಉದ್ದೇಶಗಳನ್ನು ಕಾನೂನುಬದ್ಧ ಉದ್ದೇಶಗಳೆಂದು ಎಣಿಸಲಾಗಿದೆ :

1) ಮಸೀದಿ ಮತ್ತು ಇಮಾಮ್‌ಬಾರ ಇವುಗಳ ನಿರ್ಮಾಣ ಅಥವಾ ರಕ್ಷಣೆ ಮತ್ತು ಪೂಜೆ ಅಥವಾ ಧಾರ್ಮಿಕ ಪ್ರಾರ್ಥನೆಗಳನ್ನು ನಡೆಸಲು ಉಪಬಂಧ ಮಾಡುವದು.

2) ಮೊಹರಮ್ ತಿಂಗಳಲ್ಲಿ ತಾಜಿಯಾಗಳನ್ನು ಇಡುವದು ಮತ್ತು ಧಾರ್ಮಿಕ ಮೆರವಣಿಗೆಗಾಗಿ ಒಂಟೆ ಮತ್ತು ದುಂಡುಲ್ ಇದಕ್ಕಾಗಿ ಉಪಬಂಧ ಮಾಡುವುದು.

3) ಮಸೀದಿಗಳಲ್ಲಿ ದೀಪ ಹಚ್ಚುವುದು ಮತ್ತು ಕಾನ್‌ಕಾ ಇದರ ರಕ್ಷಣೆ ಮಾಡುವದು.

4) ಯಾತ್ರಿಕರಿಗಾಗಿ ಮಕ್ಕಾದಲ್ಲಿ ಒಂದು ಉಚಿತ ಭೋಜನಾಲಯವನ್ನು ನಿರ್ಮಿಸುವದು.

5) ಸಾರ್ವಜನಿಕರಿಂದ ತುಂಬಾ ಗೌರವವನ್ನು ಪಡೆದಿರುವ ಯಾವನಾದರೊಬ್ಬ ಪೀರ್ ಅಥವಾ ಫಕೀರ್ ಅಥವಾ ಒಬ್ಬ ಧಾರ್ಮಿಕ ವ್ಯಕ್ತಿಯ ಸಮಾಧಿಯನ್ನು ನಿರ್ಮಿಸುವುದು.

6) ಸಾರ್ವಜನಿಕ ಅಥವಾ ಖಾಸಗೀ ಶಾಲೆಗಳಲ್ಲಿ ಕುರಾನ್ ಪಠಣ ಮಾಡುವದು.

7) ನಾಲ್ಕನೇ ಖಲೀಫ ಹಾಗೂ ಪೈಗಂಬರನ ಅಳಿಯನಾದ ಅಲಿ ಇವನ ಜನ್ಮದಿನದ ಆಚರಣೆ.

8) ಶಾಲೆ ಮತ್ತು ಕಾಲೇಜುಗಳ ನಿರ್ಮಾಣ ಹಾಗೂ ರಕ್ಷಣೆ ಮತ್ತು ಅದರ ಶಿಕ್ಷಕರಿಗೋಸ್ಕರ ಉಪಬಂಧ.

9) ಸೇತುವೆ. ಚರಂಡಿ. ಬಾವಿ, ಕೆರೆ, ರುದ್ರಭೂಮಿ, ಆಸ್ಪತ್ರೆ ಇತ್ಯಾದಿ ಸಾರ್ವಜನಿಕ ಉಪಯೋಗದ ಕೆಲಸಗಳನ್ನು ಕೈಗೊಳ್ಳುವದು.

10) ಬಡವರಿಗೆ ಹಣವನ್ನು ಹಂಚುವುದು ಮತ್ತು ಬಡವರು ಪವಿತ್ರ ಯಾತ್ರೆಗೆ ಹೋಗುವಂತೆ ಅವರಿಗೆ ಹಣ ಸಹಾಯ ಮಾಡುವದು.

11) ಸಮಾಜಕ್ಕೆ ಒಂದು ಭೋಜನ ಅಥವಾ ಒಬ್ಬ ಸಂತನ ಗೌರವದಲ್ಲಿ ಒಂದು ಭೋಜನಕೂಟ.

12) ಒಂದು ವಕ್ಫ್ ಇದರ ಸಹೋದರ ಅಥವಾ ಅವನ ವಂಶಜರ ನಿವಾಸಕ್ಕಾಗಿ ಒಂದು ನಿವಾಸಸ್ಥಾನದ ಉಪಬಂಧ.

13) ವಕೀಫನ ಕುಟುಂಬ, ಮಕ್ಕಳು ಅಥವಾ ವಂಶಜರು ಇವರ ಜೀವನಾಂಶಕ್ಕಾಗಿ ಪೂರ್ಣ ಅಥವಾ ಭಾಗತಃ ವ್ಯವಸ್ಥೆ ಮಾಡುವದು. ಒಂದೊಮ್ಮೆ ಒಬ್ಬ ವಕೀಫನು ಹನಫೀ ಮುಸಲ್ಮಾನನಾಗಿದ್ದರೆ ಅವನ ಸ್ವಂತ ಜೀವನಾಂಶವು ಮತ್ತು ಅವನ ಇಡೀ ಜೀವಮಾನಕ್ಕೆ ವ್ಯವಸ್ಥೆ ಮಾಡುವದು ಅಥವಾ ಅವನು ಸಮರ್ಪಿಸಿರುವ ಸ್ವತ್ತಿನಿಂದ ಅವನ ಋಣಗಳನ್ನು ಸಂದಾಯಮಾಡುವದು.

14) ವಕೀಫ್ ಅಥವಾ ಅವನ ಕುಟುಂಬದ ಇತರ ಸದಸ್ಯರ ಪುಣ್ಯತಿಥಿಯ ಆಚರಣೆಗಾಗಿ ವ್ಯವಸ್ಥೆ ಮಾಡುವದು.

ಒಂದು ವಿಧ್ಯುಕ್ತವಾದ ವಕ್ಫ್ ಇದರ ಉದ್ದೇಶಗಳ ಸಂಬಂಧದಲ್ಲಿ ಮೇಲೆ ಕೊಡಲಾದ ಯಾದಿಯು ನಿಕ್ಷೇಪವಲ್ಲ. ಈ ಯಾದಿಯ ಹೊರತಾಗಿ ಅವೆಷ್ಟೋ ವಿಧ್ಯುಕ್ತವಾದ ಉದ್ದೇಶಗಳಿವೆ. ಈಗಾಗಲೇ ಹೇಳಲಾದಂತೆ ಯಾವತ್ತೂ ಧಾರ್ಮಿಕ ಭಕ್ತಿಭಾವದ ಅಥವಾ ಧರ್ಮದಾಯದ ಉದ್ದೇಶವು ವಕ್ಫ್ ಇದಕ್ಕಾಗಿ ಒಂದು ವಿಧ್ಯುಕ್ತವಾದ ಉದ್ದೇಶವೆಂಬುದಾಗಿ ಎಣಿಸಲ್ಪಡುತ್ತದೆ. ಯಾವುದಾದರೊಂದು ಉದ್ದೇಶವು ಇಸ್ಲಾಮಿನ ಸಿದ್ಧಾಂತಕ್ಕೆ ವಿರುದ್ಧವಾಗಿದ್ದರೆ ಅದನ್ನು ವಕ್ಫ್ ಇದರ ಉದ್ದೇಶಕ್ಕಾಗಿ ವಿಧ್ಯುಕ್ತವಾದ ಉದ್ದೇಶವೆಂಬುದಾಗಿ ಎಣಿಸುವಂತಿಲ್ಲ.

ಕಾನೂನು ಬಾಹಿರ ಉದ್ದೇಶಗಳು (illegal objects)

ಒಂದೊಮ್ಮೆ ವಕ್ಫ್ ಇದರ ಉದ್ದೇಶವು ಇಸ್ಲಾಮಿನ ಸಿದ್ಧಾಂತಗಳಿಗೆ ವಿರುದ್ಧವಾಗಿದ್ದರೆ ಅಥವಾ ಅದು ಇಸ್ಲಾಮಿನಿಂದ ನಿಷೇಧಿಸಲ್ಪಟ್ಟಿದ್ದರೆ ಆ ಉದ್ದೇಶವು ಕಾನೂನು ಬಾಹೀರವೆಂಬುದಾಗಿ ಎಣಿಸಲ್ಪಡುತ್ತದೆ. ಈ ಕೆಳಗಿನ ಉದ್ದೇಶಗಳು ಒಂದು ವಕ್ಫ್ ಇದರ ಉದ್ದೇಶದ ದೃಷ್ಟಿಯಿಂದ ಕಾನೂನು ಬಾಹಿರವೆಂಬುದಾಗಿ ಎಣಿಸಲ್ಪಡುತ್ತವೆ :

1) **ಇಸ್ಲಾಮಿನ ಮೂಲಭೂತ ಸಿದ್ಧಾಂತಗಳಿಗೆ ವಿರೋಧವಾಗಿರುವ ಉದ್ದೇಶಗಳು :** ಉದಾಹರಣೆಗಾಗಿ, ಒಂದು ದೇವಾಲಯ ಅಥವಾ ಒಂದು ಇಗರ್ಜಿ ಇತ್ಯಾದಿಗಳ ನಿರ್ಮಾಣ ಅಥವಾ ಸಂರಕ್ಷಣೆ ಅಥವಾ ಮೂರ್ತಿ ಪೂಜೆಗಾಗಿ ಮಾಡಲಾಗುವ ಒಂದು ವ್ಯವಸ್ಥೆ ಇವನ್ನೆಲ್ಲ ಕಾನೂನು ಬಾಹೀರ ಉದ್ದೇಶಗಳೆಂದು ಎಣಿಸಲಾಗುತ್ತದೆ.

2) ಒಂದು ಜುಗಾರಿ ಆಡುವ ಕೋಣೆ ಅಥವಾ ಶರಾಬಿನ ಅಂಗಡಿ ಅಥವಾ ಹಂದಿ ಮಾಂಸದ ಮಾರಾಟಕ್ಕಾಗಿ ಒಂದು ಅಂಗಡಿ ಇತ್ಯಾದಿಗಳ ನಿರ್ಮಾಣ ಅಥವಾ ಸಂರಕ್ಷಣೆ ಮಾಡುವದು.

3) ಅಪರಿಚಿತರ ಪ್ರಯೋಜನಕ್ಕಾಗಿ

4) ವಕೀಲರಿಗಾಗಿ ಪ್ರಯೋಜನಗಳು

5) ಕೇವಲ ಶ್ರೀಮಂತರಿಗೆ ಪ್ರಯೋಜನ ಮಾಡಿಕೊಡುವದು. ಆದರೆ ಶ್ರೀಮಂತರಿಗೆ ಪಾರ್ಶ್ವಿಕವಾಗಿ ಪ್ರಯೋಜನವಾದರೆ ಅದು ನಿಷೇಧಿಸಲ್ಪಡುವುದಿಲ್ಲ.

6) ಸಯ್ಯದ್‌ಗಳಿಗೆ ಪ್ರಯೋಜನ.

7) ಕುರಾನ್ ವಾಚನ ಮತ್ತು ಬಡವರಿಗೆ ಭಿಕ್ಷೆ ಹಾಕುವ ಬಗ್ಗೆ ಯಾವತ್ತೂ ಉಪಬಂಧವಿಲ್ಲದೆ ಒಂದು ವಕ್ಫ್ ಸಂಸ್ಥಾಪಿಸಿದವನ ಅಥವಾ ಅವನ ಕುಟುಂಬದ ಸದಸ್ಯರ ಪುಣ್ಯತಿಥಿಯ ಆಚರಣೆ.

8) ಸಂಸ್ಥಾಪಕನ ಪುಣ್ಯತಿಥಿಯ ಕಾಲದಲ್ಲಿ ಒಂದು ವಕ್ಫ್ ಇದರ ಸ್ವತ್ತಿನಿಂದ ಬರುವ ಆದಾಯವನ್ನು ಭೋಜನಕೂಟವನ್ನು ಏರ್ಪಡಿಸುವದಕ್ಕಾಗಿ ಮಾಡಲಾಗುವ ವೆಚ್ಚ.

V) ಔಪಚಾರಿಕತೆಗಳು : ನಿರ್ಮಿಸುವ ರೀತಿಗಳು
(The Formalities : Modes of Creation)

ಒಂದು ವಕ್ಫ್ ಇದರ ನಿರ್ಮಾಣದ ಬಗ್ಗೆ ಮುಸ್ಲಿಮ್ ಕಾನೂನು ಯಾವತ್ತೂ ವಿಶೇಷ ಔಪಚಾರಿಕತೆಯನ್ನು ಗೊತ್ತುಪಡಿಸಿಲ್ಲ. ಅದನ್ನು ಮೌಖಿಕವಾಗಿ ಅಥವಾ ಬರವಣಿಗೆಯಲ್ಲಿ ಮಾಡಬಹುದು. ವಕ್ಫ್‌ಗಾಗಿ ಸಮರ್ಪಿಸಲ್ಪಟ್ಟ ವಸ್ತುವು ಒಂದೊಮ್ಮೆ ಬಹುಮೂಲ್ಯವಾದ ಸ್ಥಿರಸ್ವತ್ತಾಗಿದ್ದರೂ ಸಹ ಅಲ್ಲಿ ಬರವಣಿಗೆಯ ಅವಶ್ಯಕತೆಯಿಲ್ಲ. ಲಕ್ಷಗಟ್ಟಲೆ ರೂಪಾಯಿ ಬೆಲೆ ಬಾಳುವ ಒಂದು ಸ್ಥಿರಸ್ವತ್ತನ್ನೂ ಸಹ ಕೇವಲ ಬಾಯಿಮಾತಿನಿಂದ ಒಂದು ವಕ್ಫ್ ಇದಕ್ಕೆ ಸಮರ್ಪಿಸಬಹುದು. ಒಬ್ಬ ಸಮರ್ಪಕನು ಒಂದು ವಕ್ಫ್ ಮಾಡುವ ಉದ್ದೇಶವನ್ನು ಹೊಂದಿದ್ದನು ಎಂಬುದನ್ನು ಸಾಬೀತುಪಡಿಸಿದರೆ ಅಲ್ಲಿ ಆ ವಕ್ಫ್‌ನ್ನು ಯಾವ ರೀತಿಯಿಂದ ನಿರ್ಮಿಸಲಾಗಿತ್ತು ಎಂಬುದು ಮಹತ್ವದ್ದಲ್ಲ. ಒಂದೊಮ್ಮೆ ಒಬ್ಬ ಸಮರ್ಪಕನು ಒಂದು ವಕ್ಫ್ ನಿರ್ಮಾಣದ ಬಗ್ಗೆ ಉದ್ದೇಶಪಟ್ಟಿದ್ದನು ಎಂಬುದು ಸ್ಪಷ್ಟವಾದರೆ ಅಲ್ಲಿ ಒಂದು ವಕ್ಫ್ ಪತ್ರವು ಹೇಗಿದ್ದರೂ ಸಹ ಅದು ಕಾನೂನು ಬದ್ಧವಾಗಿರುತ್ತದೆ.

ನೋಂದಣಿ (Registration)

ಒಂದೊಮ್ಮೆ ಸಮರ್ಪಿಸಲ್ಪಟ್ಟ ಸ್ವತ್ತು ಒಂದು ಸ್ಥಿರಸ್ವತ್ತಾಗಿದ್ದರೂ ಸಹ ಅಲ್ಲಿ ಆ ವಕ್ಫ್ ಇದನ್ನು ವಿಧ್ಯುಕ್ತಗೊಳಿಸಲು ನೋಂದಣಿಯ ಅವಶ್ಯಕತೆಯಿಲ್ಲ. ಆದರೆ ಒಂದೊಮ್ಮೆ ಒಂದು ವಕ್ಫ್ ಇದು ಒಂದು ಸ್ಥಿರ ಸ್ವತ್ತಿನಿಂದ ಮಾಡಲ್ಪಟ್ಟಿದ್ದು ಮತ್ತು ಅದು ಬರವಣಿಗೆಯಲ್ಲಿ ಮಾಡಲ್ಪಟ್ಟಿದ್ದರೆ ಹಾಗೂ ಆ ಸ್ವತ್ತಿನ ಮೌಲ್ಯವು ರೂಪಾಯಿ ಒಂದು ನೂರು ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದರೆ ಅಲ್ಲಿ ಆ ವಕ್ಫ್ ಪತ್ರವನ್ನು ನೋಂದಾಯಿಸಬೇಕಾಗುತ್ತದೆ. ಒಂದೊಮ್ಮೆ ಅಂತಹ ಒಂದು ಪತ್ರವು ನೋಂದಾಯಿಸಲ್ಪಟ್ಟಿಲ್ಲವೆಂದಾದರೆ ಅದನ್ನು ಯಾವುದೇ ಒಂದು ನ್ಯಾಯಾಲಯವು ವಕ್ಫ್ ಪತ್ರವೆಂದು ಸ್ವೀಕರಿಸುವುದಿಲ್ಲ. 'ಭಾರತೀಯ ನೋಂದಣಿ ಅಧಿನಿಯಮ, 1908'

(The Indian Registration Act, 1908) ಇದರಲ್ಲಿ ಉಪಬಂಧಿಸಲಾದ ಪ್ರಕಾರ ರೂ. 100 ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಒಂದು ಸ್ಥಿರಸ್ವತ್ತಿನಲ್ಲಿ ಯಾವತ್ತೂ ಹಕ್ಕು ಅಥವಾ ಹಿತಸಂಬಂಧವನ್ನು ನಿರ್ಮಿಸುವ ತಾತ್ಪರ್ಯವುಳ್ಳ ಮರಣಶಾಸನ ವಲ್ಲದ ಒಂದು ದಾಖಲೆಯು ನೋಂದಾಯಿಸಲ್ಪಡಬೇಕಾಗುತ್ತದೆ. ಹೀಗೆ, ಒಂದೊಮ್ಮೆ ಒಂದು ವಕ್ಫ್ ಇದು ಬರವಣಿಗೆಯಲ್ಲಿ ಮಾಡಲ್ಪಟ್ಟಿದ್ದರೆ ಆ ಸಮರ್ಪಿತ ವಾದ ಸ್ವತ್ತು ಒಂದು ಸ್ಥಿರಸ್ವತ್ತಾಗಿದ್ದು ಅದರ ಮೌಲ್ಯವು ರೂಪಾಯಿ 100 ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದು ಅಲ್ಲಿ ಆ ವಕ್ಫ್ ಇದರ ಅಸ್ತಿತ್ವವು ಸಾಬೀತುಪಡಿಸ ಬೇಕಾಗಿದ್ದರೆ ಅಲ್ಲಿ ಆ ದಾಖಲೆಯು ನೋಂದಾಯಿಸಲ್ಪಟ್ಟಿರಬೇಕಾಗುತ್ತದೆ.

ಪ್ರಯೋಜಕರು (The Beneficiaries)

ಒಂದು ವಕ್ಫ್ ಇದರಿಂದ ಪ್ರಯೋಜನ ಪಡೆಯುವ ಒಬ್ಬ ವ್ಯಕ್ತಿಯನ್ನು ಅವರ ಪ್ರಯೋಜಕನೆಂದು ಕರೆಯಲಾಗುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ವಕ್ಫ್ ಇದನ್ನು ಒಬ್ಬ ಏಕಲ ವ್ಯಕ್ತಿಗಾಗಿ ಅಥವಾ ಯಾವತ್ತೂ ವ್ಯಕ್ತಿಗಳ ವರ್ಗಕ್ಕಾಗಿ ನಿರ್ಮಿಸಬಹುದು. ಪ್ರಯೋಜಕರು ಬಡವರಾಗಿರಬೇಕಾಗಿಲ್ಲ. ಒಂದು ವಕ್ಫ್ ಬೇಕಾದರೆ ಕೇವಲ ಶ್ರೀಮಂತ ವ್ಯಕ್ತಿಗಳಿಗಾಗಿ ನಿರ್ಮಿಸಲ್ಪಟ್ಟಿರಬಹುದು. ಆದರೆ ಮುಸ್ಲಿಮ್ ಕಾನೂನಿನ ಪ್ರಕಾರ ಬಡವರು ಪ್ರತಿಯೊಂದು ವಕ್ಫ್ ಇದರ ಕೊನೆಯ ಪ್ರಯೋಜಕರೆಂದು ಎಣಿಸಲಾಗುತ್ತಿದೆ. ಆದುದರಿಂದ ಒಂದು ವಕ್ಫ್ ಇದರ ಇತರ ಎಲ್ಲಾ ಉದ್ದೇಶಗಳು ವಿಫಲವಾದಾಗ ಆ ವಕ್ಫ್ ಸ್ವತ್ತಿನ ಫಲೋಪಭೋಗವನ್ನು ಬಡವರ ಪ್ರಯೋಜನಕ್ಕಾಗಿ ಅನ್ವಯಗೊಳಿಸಬಹುದು. ಇಲ್ಲಿ ಇದನ್ನು ವ್ಯಕ್ತವಾಗಿ ಆ ವಕ್ಫ್ ಪತ್ರದಲ್ಲಿ ಹೇಳಿರಬೇಕಾಗಿಲ್ಲ.

ಒಬ್ಬ ಮುಸಲ್ಮಾನೇತರನೂ ಸಹ ಪ್ರಯೋಜಕನಾಗಿರಲು ಸಕ್ಷಮನಾಗಿರುವನು. ಹಿಂದೂಗಳು ಅಥವಾ ಕ್ರೈಸ್ತರ ಅಥವಾ ಮುಸಲ್ಮಾನೇತರ ಇತರ ಧರ್ಮದವರ ಪ್ರಯೋಜನಕ್ಕಾಗಿ ಒಂದು ವಕ್ಫ್ ಇದನ್ನು ಒಬ್ಬ ಮುಸಲ್ಮಾನನು ಕಾನೂನುಬದ್ಧ ವಾಗಿ ನಿರ್ಮಿಸಬಹುದು. ಆದರೆ ಅಂತರ್ರಾಷ್ಟ್ರೀಯ ಕಾನೂನಿನ ಇಸ್ಲಾಮಿ ನಿಯಮಗಳ ಪ್ರಕಾರ ಒಂದು ಶತ್ರು ರಾಜ್ಯದ ನಾಗರಿಕನು, ಒಂದು ವಕ್ಫ್ ಇದರ ಪ್ರಯೋಜನಗಳನ್ನು ಪಡೆಯುವಂತಿಲ್ಲ. ಆದರೆ ಈ ನಿಯಮವು ಭಾರತಕ್ಕೆ ಅಸಂಬದ್ಧವಾಗಿದೆ. ಏಕೆಂದರೆ ಭಾರತವು ಯಾವುದೇ ಒಂದು ರಾಜ್ಯವನ್ನು ಶತ್ರು ರಾಜ್ಯವೆಂದು ಎಣಿಸುವದಿಲ್ಲ.

ಒಬ್ಬ ಪ್ರಯೋಜಕನು ಒಂದು ವಕ್ಫ್ ಇದರ ಸಂಸ್ಥಾಪಕನ ಸಂಬಂಧಿಕ ಅಥವಾ ಕುಟುಂಬದ ಸದಸ್ಯನಾಗಿರಬೇಕಾಗಿಲ್ಲ. ಒಂದು ವಕ್ಫ್ ಇದರ ಪ್ರಯೋಜಕರ ಪರಿಚಯವೂ ಸಹ ಆ ವಕೀಫನಿಗೆ ಇರಬೇಕಾಗಿಲ್ಲ.

ಮುತಾವಲಿ (The Mutawalli)

ಮುತಾವಲಿಯು ವಕ್ಫ್ ಸ್ವತ್ತಿನ ಪ್ರಬಂಧಕನಾಗುವನು. ಒಂದು ಸಮರ್ಪಣೆಯ ಬಳಿಕ ಆ ಸ್ವತ್ತಿನ ಸ್ವಾಮಿತ್ವವು ಪರಮಾತ್ಮನಲ್ಲಿ ನಿಹಿತಗೊಳ್ಳುತ್ತದೆ, ಮತ್ತು ಅದು ಪರಮಾತ್ಮನ ಸ್ವತ್ತಾಗುತ್ತದೆ. ಆದರೆ ಪರಮಾತ್ಮನ ಪರವಾಗಿ ಆ ಸ್ವತ್ತಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಒಂದು ಮಾನವೀ ಕರ್ತೃತ್ವದ ಅವಶ್ಯಕತೆ ಇರುತ್ತದೆ. ಒಂದು ವಕ್ಫ್ ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ವ್ಯಕ್ತಿಯನ್ನು ಮುತಾವಲಿ ಎಂಬುದಾಗಿ ಕರೆಯಲಾಗುತ್ತದೆ. ಅವನು ಆ ಸಮರ್ಪಿಸಲ್ಪಟ್ಟ ಸ್ವತ್ತಿನ ಪ್ರಬಂಧಕನಾಗಿರುವನು. ಆ ವಕ್ಫ್ ಇದರಲ್ಲಿ ಗೊತ್ತುಮಾಡಲ್ಪಟ್ಟ ಉದ್ದೇಶಗಳಿಗೆ ಅನುಗುಣವಾಗಿ ಅವನು ಆ ವಕ್ಫ್‌ನಿಂದ ಬರುವ ಪ್ರಯೋಜನಗಳನ್ನು ಹಂಚುವನು. ಒಬ್ಬ ಮುತಾವಲಿಗೆ ಆ ಸ್ವತ್ತಿನಲ್ಲಿ ಪ್ರಯೋಜಕ ಹಿತ ಸಂಬಂಧವಿದ್ದಿರುವುದಿಲ್ಲ. ಅವನೊಬ್ಬ ಪರಮಾತ್ಮನ ಸೇವಕನಾಗಿದ್ದು ಮಾನವತೆಯ ಕಲ್ಯಾಣಕ್ಕೋಸ್ಕರ ಆ ಸ್ವತ್ತನ್ನು ನೋಡಿಕೊಳ್ಳುವನು. ಆದುವರಿಂದ ಕಾನೂನೀ ಕರ್ತವ್ಯಗಳ ಹೊರತಾಗಿ ಒಬ್ಬ ಮುತಾವಲಿಗೆ ವಕ್ಫ್ ಸ್ವತ್ತಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಧಾರ್ಮಿಕ ಮತ್ತು ನೈತಿಕ ಬಾಧ್ಯತೆಗಳಿವೆ. ಅವನಿಂದಾಗುವ ಯಾವತ್ತೂ ದುರಾಡಳಿತ ಅಥವಾ ನಿರ್ಲಕ್ಷವು ಪರಮಾತ್ಮನ ಪ್ರತಿ ಅವನ ಅಗೌರವವೆಂಬುದಾಗಿ ಎಣಿಸಲ್ಪಡುತ್ತದೆ. ಒಬ್ಬ ಮುತಾವಲಿಯ ಪದಾಧಿಕಾರವು ಒಬ್ಬ ಟ್ರಸ್ಟಿಗೆ ಸಮಾನವಾಗಿರುತ್ತದೆ. ಆದರೆ ಅವನ ಶಕ್ತಿಗಳು ಮತ್ತು ಕಾರ್ಯಕಲಾಪಗಳು ಒಬ್ಬ ಟ್ರಸ್ಟಿಯ ಶಕ್ತಿ ಮತ್ತು ಕಾರ್ಯಕಲಾಪಗಳಿಗಿಂತ ಭಿನ್ನವಾಗಿರುತ್ತವೆ.

ಒಬ್ಬ ಮುತಾವಲಿಯನ್ನು ಯಾರು ನೇಮಿಸಬಹುದು ?
(Who can appoint a Mutawalli ?)

ಈ ಕೆಳಗೆ ಕೊಟ್ಟಿರುವ ಆದ್ಯತೆಯ ಅನುಕ್ರಮಣದಲ್ಲಿ ಒಬ್ಬ ಮುತಾವಲಿಯು ಈ ಕೆಳಗಿನವರೊಳಗೆ ಯಾವನಾದರೊಬ್ಬನಿಂದ ನೇಮಿಸಲ್ಪಡಬಹುದು :

i) ಒಂದು ವಕ್ಫ್ ಇದರ ಸಂಸ್ಥಾಪಕನಿಂದ,

ii) ಆ ಸಂಸ್ಥಾಪಕನ ನಿಷ್ಪಾದಕನಿಂದ,

iii) ಮೃತ್ಯುಶಯ್ಯೆಯಲ್ಲಿರುವ ಒಬ್ಬ ಮುತಾವಲಿಯಿಂದ,

iv) ನ್ಯಾಯಾಲಯದಿಂದ ಮತ್ತು

v) ಒಂದು ಸಭೆಯಲ್ಲಿ ನಿರ್ಣಯ ತೆಗೆದುಕೊಂಡು.

ಮೊದಲನೆಯದಾಗಿ ಒಬ್ಬ ಮುತಾವಲಿಯನ್ನು ನೇಮಿಸುವ ಹಕ್ಕು ವಕೀಫನಿಗೆ ಕೊಡಲಾಗಿದೆ. ಅವನು ವಿಫಲಗೊಂಡಾಗ ಒಬ್ಬ ಮುತಾವಲಿಯು ಆ ವಕೀಫನ ನಿಷ್ಪಾದಕರಿಂದ ನೇಮಿಸಲ್ಪಡಬಹುದು. ಒಂದೊಮ್ಮೆ ಆ ವಕೀಫನಿಗೆ ಒಬ್ಬ ನಿಷ್ಪಾದಕನಿಲ್ಲವೆಂದಾದರೆ ಅಲ್ಲಿ ಅಸ್ತಿತ್ವದಲ್ಲಿರುವ ಒಬ್ಬ ಮುತಾವಲಿಯು ತನ್ನ

ಮರಣಶೆಯ್ಯೆಯಲ್ಲಿ ತನ್ನ ಉತ್ತರಾಧಿಕಾರಿಯನ್ನು ನೇಮಿಸಬಹುದು. ಇದೂ ಸಹ ನಡೆಯಲ್ಪಟ್ಟಿಲ್ಲವಾದರೆ ಆಲ್ಲಿ ಒಂದು ನ್ಯಾಯಾಲಯವು ಒಬ್ಬ ಮುತಾವಲಿನನ್ನು ನೇಮಿಸಬಹುದು. ಕೆಲವೊಮ್ಮೆ ಧಾರ್ಮಿಕ ವ್ಯಕ್ತಿಗಳು ಒಂದು ಸಭೆ ಸೇರಿ ಒಬ್ಬ ಮುತಾವಲಿನನ್ನು ನೇಮಿಸುವ ವಾಡಿಕೆಯೂ ಇದೆ. ಆದರೆ ಶಿಯಾ ಕಾನೂನಿನ ಪ್ರಕಾರ ಒಬ್ಬ ಮುತಾವಲಿನನ್ನು ಒಂದು ವಕ್ಫ್ ಇದರ ಸಂಸ್ಥಾಪಕನು ಮಾತ್ರ ನೇಮಿಸಬಹುದು ಒಬ್ಬ ಮುತಾವಲಿಯ ನೇಮಕವಾಗದಿದ್ದರೆ ಶಿಯಾ ಕಾನೂನಿನ ಪ್ರಕಾರ ಆ ವಕ್ಫ್ ಶೂನ್ಯವಾಗುತ್ತವೆ.

I) ಸಂಸ್ಥಾಪಕನಿಂದ ನೇಮಕ (Appointment by founder)

ಒಂದು ವಕ್ಫ್ ಇದರ ಸಂಸ್ಥಾಪಕನು ಒಬ್ಬ ಮುತಾವಲಿನನ್ನು ನೇಮಿಸಲು ಪರಮ ಶಕ್ತಿಯನ್ನು ಹೊಂದಿರುವನು. ತನ್ನಿಂದ ನಿರ್ಮಿಸಲ್ಪಟ್ಟ ವಕ್ಫ್ ಇದಕ್ಕೆ ಅವನು ತನ್ನನ್ನೇ ಪ್ರಥಮ ಮುತಾವಲಿಯನ್ನಾಗಿಯೂ ನೇಮಿಸಬಹುದು. ಅವನು ಇನ್ನೊಬ್ಬ ವ್ಯಕ್ತಿಯನ್ನೂ ಒಬ್ಬ ಮುತಾವಲಿಯನ್ನಾಗಿ ನೇಮಿಸಬಹುದು. ಮುಂದಿನ ಮುತಾವಲಿಗಳ ನೇಮಕವು ಯಾವ ರೀತಿಯಲ್ಲಿ ಮಾಡಲ್ಪಡಬೇಕೆಂಬ ಬಗ್ಗೆಯೂ ಸಹ ಅವನು ಒಂದು ಯೋಜನೆಯನ್ನು ಹಾಕಿಕೊಳ್ಳಲು ಪ್ರಾಧಿಕೃತನಾಗಿರುವನು. ಒಬ್ಬನ ನಂತರ ಇನ್ನೊಬ್ಬನು ಮುತಾವಲಿಯಾಗಲು ಅವನು ಹೆಸರುಗಳನ್ನು ಸೂಚಿಸಬಹುದು. ತಾನು ನಿರ್ಮಿಸಿರುವ ವಕ್ಫ್ ಇದರ ಮುತಾವಲಿಯಾಗುವವನ ಅರ್ಹತೆಗಳನ್ನೂ ಅವನು ಗೊತ್ತುಮಾಡಬಹುದು. ಒಂದೊಮ್ಮೆ ಈ ಬಗ್ಗೆ ಒಂದು ವಕ್ಫ್ ಇದರ ಸಂಸ್ಥಾಪಕನಿಂದ ಪ್ರಾಧಿಕೃತನಾಗಿದ್ದರೆ ಒಬ್ಬ ಮುತಾವಲಿಯು ತನ್ನ ಮರಣದ ಬಳಿಕ ಅಥವಾ ಅನ್ಯಥಾ ತಾನು ಪದಾಧಿಕಾರವನ್ನು ಪರಿತ್ಯಜನೆಮಾಡಿದ ಬಳಿಕ ತನ್ನ ಉತ್ತರಾಧಿಕಾರಿಯಾಗುವ ವ್ಯಕ್ತಿಯು ಹೆಸರನ್ನು ಸೂಚಿಸಬಹುದು. ಒಬ್ಬ ವಕೀಫ್ ಇವನು ಮುತಾವಲಿಯು ಪದಾಧಿಕಾರವನ್ನು ಆನುವಂಶಿಕಗೊಳಿಸ ಬಹುದು. ಇಂತಹ ಒಂದು ಪ್ರಕರಣದಲ್ಲಿ ಮುತಾವಲಿಯು ಮರಣದ ಬಳಿಕ ಆ ಪದಾಧಿಕಾರವು ಪೀಳಿಗೆಯಿಂದ ಪೀಳಿಗೆಗೆ ಅವನ ವಂಶಜರಿಗೆ ಹೋಗುತ್ತದೆ. ಒಬ್ಬ ವಕೀಫನು ಮುತಾವಲಿಯು ಪದಾಧಿಕಾರವನ್ನು ಆನುವಂಶಿಕಗೊಳಿಸಬಹುದು. ಆದರೆ ಈ ಬಗ್ಗೆ ಅವನು ತನ್ನ ವಕ್ಫ್ ಪತ್ರದಲ್ಲಿ ಉಪಬಂಧಿಸಿರಬೇಕಾಗಿರುತ್ತದೆ. ಮುತಾವಲಿಯ ಪದಾಧಿಕಾರವು ಆನುವಂಶಿಕವಾಗಿ ಮುಂದುವರಿಯುವುದಕ್ಕೆ ಮುಸ್ಲಿಮ್ ಕಾನೂನು ವಿರೋಧವಾಗಿದೆ ಆದರೆ ಒಂದು ಕ್ಷೇತ್ರೀಯ ರೂಢಿ ಯಿಂದಾಗಿ ಈ ಪದಾಧಿಕಾರವು ಆನುವಂಶಿಕವಾಗಬಹುದು. ಆದರೆ ಅಂತಹ ರೂಢಿಯನ್ನು ಕಟ್ಟುನಿಟ್ಟಾಗಿ ಸಾಬೀತುಪಡಿಸಬೇಕಾಗುತ್ತದೆ.

II) ನಿಷ್ಪಾದಕನಿಂದ ನೇಮಕ (Appointment by executor)

ಒಂದೊಮ್ಮೆ ಯಾವನೇ ಒಬ್ಬ ಮುತಾವಲಿನನ್ನು ನೇಮಕಮಾಡದೆ ಒಬ್ಬ

ವಕೀಫನು ಮೃತನಾದರೆ ಮತ್ತು ಆ ಪದಾಧಿಕಾರಕ್ಕೆ ನೇಮಕಮಾಡುವ ರೀತಿಯು ಬಗ್ಗೆ ಆ ವಕ್ಫ್ ಪತ್ರವು ಮೌನವಾಗಿದ್ದರೆ ಅಲ್ಲಿ ಆ ವಕೀಫನ ನಿಷ್ಪಾದಕನು ಒಬ್ಬ ಮುತಾವಲಿನನ್ನು ನೇಮಿಸಲು ಹಕ್ಕುಳ್ಳವನಾಗಿರುವನು. ಹೀಗೆ ಒಂದೊಮ್ಮೆ ಯಾವುದಾದರೊಂದು ಕಾರಣದಿಂದಾಗಿ ಈ ಪದಾಧಿಕಾರವು ಮುಕ್ತಾಯಗೊಂಡಲ್ಲಿ ಹಾಗೂ ಒಬ್ಬ ಹೊಸ ಮುತಾವಲಿನನ್ನು ನೇಮಕಮಾಡುವ ಬಗ್ಗೆ ಯಾವತ್ತೂ ಉಪಬಂಧವಿಲ್ಲದಿದ್ದರೆ ಅಲ್ಲಿ ಆ ವಕೀಫನ ನಿಷ್ಪಾದಕನು ಯಾವನಾದರೊಬ್ಬ ವ್ಯಕ್ತಿಯನ್ನು ಮುತಾವಲಿ ಎಂಬುದಾಗಿ ನೇಮಿಸಬಹುದು. ಈ ರೀತಿಯಿಂದ ಒಬ್ಬ ಮುತಾವಲಿನನ್ನು ನೇಮಕ ಮಾಡುವದು ಸಾಧ್ಯವಾಗಬೇಕಾದರೆ ಅಲ್ಲಿ ಆ ವಕೀಫನಿಗೆ ಒಬ್ಬ ನಿಷ್ಪಾದಕನಿರಬೇಕಾಗುತ್ತವೆ.

III) ಮೃತ್ಯುಶೆಯ್ಯೆಯಲ್ಲಿರುವ ಮುತಾವಲಿಯಿಂದ ನೇಮಕ (Appointment by mutawalli on death-bed)

ಸಾಮಾನ್ಯವಾಗಿ ಒಬ್ಬ ಅಸ್ತಿತ್ವದಲ್ಲಿರುವ ಮುತಾವಲಿಯು ತನ್ನ ಉತ್ತರಾಧಿಕಾರಿಯನ್ನು ನೇಮಿಸುವ ಹಕ್ಕನ್ನು ಹೊಂದಿರುವುದಿಲ್ಲ. ಒಬ್ಬ ಮುತಾವಲಿಯ ಉತ್ತರಾಧಿಕಾರಿಯು ಯಾರೆಂಬ ಬಗ್ಗೆ ಸಾಮಾನ್ಯವಾಗಿ ಒಂದು ವಕ್ಫ್ ಪತ್ರ ಅಥವಾ ನಿಷ್ಪಾದಕ ಅಥವಾ ನ್ಯಾಯಾಲಯವು ನಿರ್ಣಯಿಸುತ್ತದೆ. ಆದರೆ ಈ ರೀತಿಗಳಿಂದ ಒಬ್ಬ ಮುತಾವಲಿನನ್ನು ನೇಮಿಸುವದು ಅಸಾಧ್ಯವೆಂಬುದಾಗಿ ಒಬ್ಬ ಮುತಾವಲಿಗೆ ಕಂಡುಬಂದರೆ ಅವನು ಮರಣಶೆಯ್ಯೆಯಲ್ಲಿದ್ದಾಗ ತನ್ನ ಉತ್ತರಾಧಿಕಾರಿಯನ್ನು ನೇಮಿಸಬಹುದು. ಆದರೆ ಅವನಿಂದ ಈ ರೀತಿಯಾಗಿ ಮಾಡಲ್ಪಡುವ ನೇಮಕವು ಈ ಕೆಳಗಿನ ಎರಡು ಷರತ್ತುಗಳಿಗೆ ಬಾಧ್ಯವಾಗಿರುತ್ತದೆ. (1) ಅವನು ತನ್ನ ಮರಣಶೆಯ್ಯೆಯಲ್ಲಿ ಇದ್ದಿರಬೇಕು ಮತ್ತು ಅವನು ಬದುಕುವ ಸಂಭವವಿರಬಾರದು ಮತ್ತು, (2) ಒಂದೊಮ್ಮೆ ತನ್ನ ಮರಣಕ್ಕಿಂತ ಮೊದಲು ಅವನು ತನ್ನ ಉತ್ತರಾಧಿಕಾರಿಯನ್ನು ನೇಮಿಸದಿದ್ದರೆ ಆ ಮುತಾವಲಿಯ ಪದಾಧಿಕಾರವು ಅಧಿಕೃತವಾಗಿ ಉಳಿಯಲಿದೆ. ಒಬ್ಬ ಸಾಯುತ್ತಿರುವ ಮುತಾವಲಿಯು ತನ್ನ ಉತ್ತರಾಧಿಕಾರಿಯನ್ನು ತುರ್ತು ಅವಶ್ಯಕತೆಯ ಕಾರಣದಿಂದಾಗಿ ನೇಮಿಸಬೇಕಾಗುತ್ತದೆ. ಅಸ್ತಿತ್ವದಲ್ಲಿರುವ ಒಬ್ಬ ಮುತಾವಲಿಯಿಂದ ತನ್ನ ಮರಣಾಂತಿಕ ಕಾಯಿಲೆಯ ಕಾಲದಲ್ಲಿ ಮಾಡಲಾಗುವ ಒಬ್ಬ ಮುತಾವಲಿಯ ನೇಮಕವು ಒಂದು ತುರ್ತಿನ ನೇಮಕವಾಗಿರುತ್ತದೆ. ಆದುದರಿಂದ ಅವನು ಆರೋಗ್ಯದಲ್ಲಿದ್ದಾಗ ತನ್ನ ಉತ್ತರಾಧಿಕಾರಿಯನ್ನು ನೇಮಿಸುವಂತಿಲ್ಲ. ಇದೇ ರೀತಿಯಲ್ಲಿ ಕ್ಷೇತ್ರೀಯ ರೂಢಿಯ ಮೇರೆಗೆ ಮುತಾವಲಿಯ ಪದಾಧಿಕಾರವು ಆನುವಂಶಿಕವಾಗಿದ್ದರೆ ಅಲ್ಲಿ ಮರಣಶೆಯ್ಯೆಯಲ್ಲಿರುವ ಒಬ್ಬ ಮುತಾವಲಿಯು ತನ್ನ ಉತ್ತರಾಧಿಕಾರಿಯನ್ನು ನೇಮಿಸುವಂತಿಲ್ಲ.

IV) ನ್ಯಾಯಾಲಯದಿಂದ ನೇಮಕ (Appointment by Court)

ಮೇಲೆ ಹೇಳಲ್ಪಟ್ಟ ಪ್ರಾಧಿಕಾರದಿಂದ ಒಬ್ಬ ಮುತಾವಲಿಯು ನೇಮಿಸಲ್ಪಟ್ಟಿಲ್ಲ

ವೆಂದಾದರೆ ಅಲ್ಲಿ ನ್ಯಾಯಾಲಯವು ಒಬ್ಬ ಮುತಾವಲಿನನ್ನು ನೇಮಿಸಬಹುದು. ಇಲ್ಲಿ ಹೇಳಲ್ಪಟ್ಟ ನ್ಯಾಯಾಲಯವು ಯಾವ ಜಿಲ್ಲೆಯ ನ್ಯಾಯಾಧಿಕಾರದೊಳಗೆ ಆ ವಕ್ಫ್ ಸ್ವತ್ತು ಸ್ಥಿತವಾಗಿದೆಯೋ ಆ ಜಿಲ್ಲೆಯ ಜಿಲ್ಲಾ ನ್ಯಾಯಾಲಯವಾಗಿರುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ವಕ್ಫ್ ಇದರ ಆಡಳಿತ ಹಾಗೂ ಮೇಲ್ವಿಚಾರಣೆಯ ಸಂಬಂಧದಲ್ಲಿ ನ್ಯಾಯಾಲಯಕ್ಕೆ ವಿಶಾಲವಾದ ಶಕ್ತಿಗಳಿರುತ್ತವೆ. ಒಂದು ವಕ್ಫ್ ಇದರ ಉದ್ದೇಶಗಳನ್ನು ಕಾರ್ಯಾಚರಣೆಗೆ ತರುವುದಕ್ಕಾಗಿ ಒಬ್ಬ ಯೋಗ್ಯ ಮುತಾವಲಿನನ್ನು ನೇಮಕಮಾಡುವದೂ ಸಹ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಸೇರುತ್ತದೆ. ಇಲ್ಲಿ ನ್ಯಾಯಾಲಯದ ಪ್ರಾಥಮಿಕ ಕರ್ತವ್ಯವು ಯಾವುದೆಂದರೆ ಆ ವಕ್ಫ್ ಯಾರ ಪ್ರಯೋಜನಕ್ಕಾಗಿ ನಿರ್ಮಿಸಲ್ಪಟ್ಟಿದೆಯೋ ಅವರ ಹಿತಸಂಬಂಧವನ್ನು ರಕ್ಷಿಸುವದಾಗಿರುತ್ತದೆ ಆದುದರಿಂದ ಒಬ್ಬ ಮುತಾವಲಿಯು ತನ್ನ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸುತ್ತಿಲ್ಲವೆಂಬುದು ನ್ಯಾಯಾಲಯಕ್ಕೆ ಕಂಡುಬಂದರೆ ಅಲ್ಲಿ ಆ ನ್ಯಾಯಾಲಯವು ತನ್ನ ವಿವೇಚನೆಯ ಮೇರೆಗೆ ಇನ್ನೊಬ್ಬ ಮುತಾವಲಿನನ್ನು ನೇಮಿಸಬಹುದು. ಆದರೆ ಒಬ್ಬ ಮುತಾವಲಿನನ್ನು ನೇಮಿಸುವಾಗ ಆ ನ್ಯಾಯಾಲಯವು ಈ ಕೆಳಗಿನ ಸಿದ್ಧಾಂತಗಳನ್ನು ಗಮನಿಸಬೇಕಾಗುತ್ತದೆ :

ಎ) ಸಾಧ್ಯವಿದ್ದಷ್ಟು ಮಟ್ಟಿಗೆ ನ್ಯಾಯಾಲಯವು ಈ ಬಗ್ಗೆ ಆ ವಕ್ಫ್ ಇದರ ಸಂಸ್ಥಾಪಕನ ನಿರ್ದೇಶಗಳನ್ನು ನಿರ್ಲಕ್ಷಿಸಬಾರದು. ಆದರೆ ಒಂದು ವಕ್ಫ್ ಇದರ ಸಂಸ್ಥಾಪಕನ ನಿರ್ದೇಶಗಳು ಆ ವಕ್ಫ್ ಇದರ ಪ್ರಯೋಜಕರ ಹಿತಸಂಬಂಧಕ್ಕೆ ವಿರುದ್ಧವಾಗಿರುವಂತೆ ಕಂಡುಬಂದರೆ ಅಲ್ಲಿ ಆ ನ್ಯಾಯಾಲಯವು ಆ ಸಂಸ್ಥಾಪಕನ ನಿರ್ದೇಶಗಳಿಗೆ ಗಮನ ಕೊಡದೆ ತನ್ನ ಆಯ್ಕೆಯ ಪ್ರಕಾರ ಒಬ್ಬ ಮುತಾವಲಿನನ್ನು ನೇಮಿಸಬಹುದು.

ಬಿ) ಸಂಸ್ಥಾಪಕನ ಕುಟುಂಬದಲ್ಲಿ ಒಬ್ಬ ಅರ್ಹತೆಯುಳ್ಳ ವ್ಯಕ್ತಿಯಿದ್ದರೆ ನ್ಯಾಯಾಲಯವು ಒಬ್ಬ ಹೊರಗಿನವನ್ನು ನೇಮಿಸುವಂತಿಲ್ಲ.

ಸಿ) ಒಂದೊಮ್ಮೆ ಒಂದು ವಕ್ಫ್ ಇದರ ಸಂಸ್ಥಾಪಕನ ನೇರವಂಶಜ ಮತ್ತು ನೇರವಂಶಜನಲ್ಲದ ಇವರಿಬ್ಬರೊಳಗೆ ಒಂದು ಸ್ಪರ್ದೆ ಇದ್ದರೆ ಅಲ್ಲಿ ಆ ನ್ಯಾಯಾಲಯವು ಆ ನೇರವಂಶಜನನ್ನು ನೇಮಿಸಬೇಕಾಗುತ್ತದೆ.

V) ಒಂದು ಸಭೆಯಿಂದ ಮಾಡಲಾಗುವ ನೇಮಕ

(Appointment by Congregation)

ಕೆಲವೊಮ್ಮೆ ಸಮಾಜದ ಗಣ್ಯರು ಸಭೆಸೇರಿ ಒಬ್ಬ ಮುತಾವಲಿನನ್ನು ನೇಮಿಸುವರು. ಒಂದು ವಕ್ಫ್ ಇದರ ಸ್ವತ್ತಿನಲ್ಲಿ ಹಿತಸಂಬಂಧವನ್ನು ಹೊಂದಿರುವ ವ್ಯಕ್ತಿಗಳು ಒಂದು ನಿರ್ದಿಷ್ಟವಾದ ಕ್ಷೇತ್ರದಲ್ಲಿ ವಾಸಿಸುವರಾಗಿದ್ದರೆ ಅವರೂ ಸಹ ಒಬ್ಬ ಮುತಾವಲಿನನ್ನು ನೇಮಿಸಬಹುದು. ಆದರೆ ಒಂದು ಮಸೀದಿ ಅಥವಾ ಒಂದು ರುದ್ರಭೂಮಿಯಂತಹ ವಿಷಯಕ್ಕೆ ಸಂಬಂಧಪಟ್ಟ ಒಂದು ಕ್ಷೇತ್ರಿಯ ವಕ್ಫ್ ಇದರ

ಬಗ್ಗೆ ಮಾತ್ರ ಒಂದು ನಿರ್ದಿಷ್ಟವಾದ ಕ್ಷೇತ್ರದ ಜನರು ಈ ರೀತಿಯಾಗಿ ನೇಮಕ ಮಾಡುವರು.

ಯಾವಾತನು ಒಬ್ಬ ಮುತಾವಲೀಯಾಗಬಹುದು ?
(Who may be a Mutawalli ?)

ಚಿತ್ತಸ್ವಾಸ್ಥ್ಯವುಳ್ಳ ವಯಸ್ಕತನದ ವಯಸ್ಸಿಗೆ ಬಂದಿರುವ ಯಾವನಾದರೊಬ್ಬ ವ್ಯಕ್ತಿಯು ಒಬ್ಬ ಮುತಾವಲಿಯಾಗಿ ನೇಮಿಸಲ್ಪಡಲು ಅರ್ಹನಾಗಿರುವನು. ಮುಸ್ಲಿಮ್ ಕಾನೂನಿನ ಪ್ರಕಾರ ಚಿತ್ತಸ್ವಾಸ್ಥ್ಯ ಮತ್ತು ವಯಸ್ಕತನ ಇವೆರಡಷ್ಟೇ ಒಬ್ಬ ಸಕ್ಷಮ ಮುತಾವಲಿಯಾಗಲು ಅವಶ್ಯಕವಾಗಿರುವ ಅರ್ಹತೆಗಳಾಗಿವೆ. ಆದುದರಿಂದ ಒಬ್ಬ ಪುರುಷ ಅಥವಾ ನಾರಿ, ಮುಸಲ್ಮಾನ ಅಥವಾ ಮುಸಲ್ಮಾನೇತರ ವ್ಯಕ್ತಿಯು ಒಬ್ಬ ಮುತಾವಲಿಯಾಗಿ ನೇಮಿಸಲ್ಪಡಬಹುದು.

ಮುತಾವಲಿಯಾಗಿ ಒಬ್ಬ ಅಲ್ಪವಯಿ (Minor as Mutawalli)

ಸಾಮಾನ್ಯವಾಗಿ ಒಬ್ಬ ಅಲ್ಪವಯಿಯನ್ನು ಒಬ್ಬ ಮುತಾವಲಿಯನ್ನಾಗಿ ನೇಮಿಸುವಂತಿಲ್ಲ. ಆದರೆ ಆ ಮುತಾವಲಿಯ ಪದಾಧಿಕಾರವು ಆನುವಂಶಿಕವಾಗಿದ್ದರೆ ಮತ್ತು ಕೊನೆಯ ಮುತಾವಲಿಯ ಮರಣದ ಬಳಿಕ ಆ ಸ್ಥಾನಕ್ಕೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳವನು ಒಬ್ಬ ಅಲ್ಪವಯಿಯಾಗಿದ್ದರೆ ಅಲ್ಲಿ ಆ ಪದಾಧಿಕಾರವು ಆ ಅಲ್ಪವಯಿಗೆ ಸಿಗಬಹುದು. ಈ ರೀತಿಯಾಗಿ, ಒಬ್ಬ ಅಲ್ಪವಯಿಯು ಮುತಾವಲಿಯ ಪದಾಧಿಕಾರವನ್ನು ಹೊಂದಲು ಸಕ್ಷಮನಲ್ಲವೆಂಬುದಾಗಿ ಎಣಿಸಲಾಗುವದಾದರೂ ಸಹ ಉತ್ತರಾಧಿಕಾರದಿಂದಾಗಿ ಅವನು ಒಬ್ಬ ಮುತಾವಲಿಯಾಗಬಹುದು. ಈ ಕೆಳಗಿನ ಎರಡು ಪ್ರಕರಣಗಳಲ್ಲಿ ಮುತಾವಲಿಯ ಪದಾಧಿಕಾರವು ಆನುವಂಶಿಕವಾಗಿರುತ್ತದೆ.

ಎ) ಒಂದೊಮ್ಮೆ ಒಂದು ವಕ್ಫ್ ಇದರ ಸಂಸ್ಥಾಪಕನು ಉತ್ತರಾಧಿಕಾರದ ಬಗ್ಗೆ ಒಂದು ಪಂಕ್ತಿಯನ್ನು ಹಾಕಿಕೊಟ್ಟಿರುವನಾದರೆ ಮತ್ತು;

ಬಿ) ಕ್ಷೇತ್ರೀಯ ರೂಢಿಯಿಂದಾಗಿ ಈ ಪದಾಧಿಕಾರಕ್ಕೆ ಉತ್ತರಾಧಿಕಾರವು ಸಮ್ಮತಿಸಲ್ಪಟ್ಟಿದ್ದರೆ;

ಆದರೆ ಒಂದು ರೂಢಿಯಿಂದ ಸಮ್ಮತಿಸಲ್ಪಟ್ಟಿರುವ ಮುತಾವಲಿಯ ಅನುವಂಶಿಕ ನೇಮಕವು ಶರೀಯತ್ ಅಧಿನಿಯಮ 1937 ಇದಕ್ಕೆ ಬಾಧ್ಯವಾಗಿರಬೇಕಾಗುತ್ತದೆ. ಈ ಅಧಿನಿಯಮವು ಮುಸ್ಲಿಮ್ ಮತೀಯ ಕಾನೂನಿನಲ್ಲಿರುವ ಎಲ್ಲಾ ರೂಢಿಗಳನ್ನು ರದ್ದುಗೊಳಿಸಿದೆ. ಆದುದರಿಂದ ಈಗ ಯಾವತ್ತೂ ಕ್ಷೇತ್ರಿಯ ರೂಢಿಯ ಮೇರೆಗೆ ಮಾಡಲಾಗುವ ಆನುವಂಶಿಕ ನೇಮಕವು ಕಾನೂನುಬಾಹಿರವೆಂಬುದಾಗಿ ಎಣಿಸಲ್ಪಡುತ್ತದೆ.

ಮುತಾವಲಿಯ ಪಾರಿಶ್ರಮಿಕೆ (Remuneration of mutawalli)

ಒಬ್ಬ ಮುತಾವಲಿಯು ತಾನು ಸಲ್ಲಿಸಿರುವ ಸೇವೆಗಳ ಪ್ರತಿಯಾಗಿ ಒದಿಷ್ಟು ಪರಿಶ್ರಮಿಕೆಯನ್ನು ಪಡೆಯಲು ಹಕ್ಕುದಾರನಾಗಿರುವನು. ಸಾಮಾನ್ಯವಾಗಿ ಒಂದು ವಕ್ಫ್ ಇದರ ಸಂಸ್ಥಾಪಕನು ಸ್ವತಃ ಒಬ್ಬ ಮುತಾವಲಿಯ ಪಾರಿಶ್ರಮಿಕೆಗಾಗಿ ಉಪಬಂಧ ಮಾಡುವನು. ಒಬ್ಬ ಮುತಾವಲಿಗೆ ನಿಯತಕಾಲಿಕವಾಗಿ ಸಂದಾಯ ಮಾಡುವ ಬಗ್ಗೆ ಒಬ್ಬ ಸಂಸ್ಥಾಪಕನು ಒಂದು ಮೊಬಲಗನ್ನು ನಿಗದಗೊಳಿಸಬಹುದು. ಒಂದು ನಿಗದಿತ ಮೊಬಲಗಿನ ಬದಲಾಗಿ ಅವನು ವಕ್ಫ್ ಸ್ವತ್ತಿನ ಪ್ರಯೋಜನದ ಒಂದು ಅಧಿಶೇಷವನ್ನು ಅವನಿಗೆ ಸಲ್ಲಿಸುವ ಬಗ್ಗೆ ಉಪಬಂಧ ಮಾಡಬಹುದು, ಇಂತಹ ಒಂದು ಪ್ರಕರಣದಲ್ಲಿ ಆ ಪಾರಿಶ್ರಮಿಕೆಯು ಒಂದು ನಿಗದಿತ ಮೊಬಲಗಾಗಿರುವುದಿಲ್ಲ. ವಕ್ಫ್ ಸ್ವತ್ತಿನ ಆದಾಯವನ್ನು ಹಂಚಿದ ಬಳಿಕ ಮತ್ತು ಅದನ್ನು ನೋಡಿಕೊಳ್ಳುವ ಬಗ್ಗೆ ತಗಲಿದ ಅವಶ್ಯಕ ವೆಚ್ಚಗಳನ್ನು ಕಳೆದ ಬಳಿಕ ಉಳಿದ ಆದಾಯವನ್ನು ಮುತಾವಲಿಗೆ ಅವನ ಪಾರಿಶ್ರಮಿಕೆಯಾಗಿ ಸಂದಾಯ ಮಾಡಲಾಗುತ್ತಿದೆ.

ಒಂದೊಮ್ಮೆ ಒಂದು ವಕ್ಫ್ ಇದರ ಸಂಸ್ಥಾಪಕನು ಮುತಾವಲಿಯ ಪಾರಿಶ್ರಮಿಕೆಗಾಗಿ ಯಾವತ್ತೂ ಉಪಬಂಧವಮಾಡಿಲ್ಲವೆಂದಾದರೆ ಅಲ್ಲಿ ಆ ಮುತಾವಲಿಯು ಪಾರಿಶ್ರಮಿಕೆ ಇಲ್ಲದೇನೇ ಕೆಲಸ ಮಾಡಬಹುದು. ಆದರೆ ಒಂದೊಮ್ಮೆ ಅವನಿಗೆ ಸ್ವಲ್ಪ ಪಾರಿಶ್ರಮಿಕೆ ಬೇಕೆಂದಾದರೆ ಅವನು ಈ ಬಗ್ಗೆ ನ್ಯಾಯಾಲಯಕ್ಕೆ ಒಂದು ಅರ್ಜಿ ಮಾಡಬಹುದು. ನ್ಯಾಯಾಲಯುವು ಆ ವಕ್ಫ್ ಇದರ ಸ್ವತ್ತು ಮತ್ತು ಆ ಮುತಾವಲಿಯ ಕಾರ್ಯಭಾರ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಅವನ ಪಾರಿಶ್ರಮಿಕೆಯನ್ನು ನಿರ್ಣಯಿಸಬಹುದು. ಆದರೆ ನ್ಯಾಯಾಲಯದಿಂದ ನಿಗದಿತಗೊಳಿಸಲ್ಪಟ್ಟ ಪಾರಿಶ್ರಮಿಕೆಯು ಆ ವಕ್ಫ್ ಸ್ವತ್ತಿನಿಂದ ಬರುವ ಆದಾಯದ ಹತ್ತನೇ ಒಂದನ್ನು ಮೀರಬಾರದು.

ಒಬ್ಬ ಮುತಾವಲಿಯ ಶಕ್ತಿಗಳು ಮತ್ತು ಕರ್ತವ್ಯಗಳು (Powers and functions of a mutawalli)

ಮುತಾವಲಿಯು ವಕ್ಫ್ ಸ್ವತ್ತಿನ ಪ್ರಬಂಧಕನಾಗಿರುವನು. ವಕ್ಫ್ ಸ್ವತ್ತನ್ನು ತನ್ನದೇ ಆಗಿರುವ ಸ್ವತ್ತಿನಂತೆ ರಕ್ಷಿಸುವದು ಅವನ ಪ್ರಾಥಮಿಕ ಕರ್ತವ್ಯವಾಗಿರುತ್ತದೆ, ಆದರೆ ಪರಮಾತ್ಮನ ಸೇವಕನಂತೆ ಅವನು ಅದರ ಆಡಳಿತವನ್ನು ನೋಡಿಕೊಂಡು ಅವನು ಅದನ್ನು ಖರ್ಚುಮಾಡುವನು. ಮುತಾವಲಿಯು ವಕ್ಫ್ ಸ್ವತ್ತಿನ ಸ್ವಾಮಿಯಾಗಿರುವುದಿಲ್ಲ, ಆ ಸ್ವತ್ತು ಪರಮಾತ್ಮನಲ್ಲಿ ನಿಹಿತವಾಗಿರುತ್ತದೆ. ಒಬ್ಬ ಮುತಾವಲಿಯು ವಕ್ಫ್ ಇದರ ಸ್ವತ್ತಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವನಾದರೂ ಸಹ ಅವನು ತನಗೆ ಇಷ್ಟಬಂದ ರೀತಿಯಲ್ಲಿ ಆ ಸ್ವತ್ತನ್ನು ಉಪಯೋಗಿಸುವಂತಿಲ್ಲ. ಆ ವಕ್ಫ್ ಇದರ ಸಂಸ್ಥಾಪಕನು ಹಾಕಿ ಕೊಟ್ಟಿರುವ ಉದ್ದೇಶ ಮತ್ತು ನಿರ್ದೇಶಗಳಿಗೆ ಅನುಗುಣವಾಗಿ ಅವನು ಆ ಸ್ವತ್ತಿನ ಆಡಳಿತವನ್ನು ನಡೆಸಬೇಕಾಗುತ್ತದೆ. ಆ ವಕ್ಫ್

ಇದರ ನಿರ್ದಿಷ್ಟಗೊಳಿಸಲ್ಪಟ್ಟ ಉದ್ದೇಶಗಳ ಹೊರತಾಗಿ ಅವನು ಅದನ್ನು ಉಪಯೋಗಿಸುವಂತಿಲ್ಲ.

ಒಬ್ಬ ಮುತಾವಲಿಯು ತನ್ನ ಪದಾಧಿಕಾರವನ್ನು ಇತರ ಯಾವನೇ ಒಬ್ಬ ವ್ಯಕ್ತಿಗೆ ಹಸ್ತಾಂತರಿಸುವಂತಿಲ್ಲ. ಅವನ ಪದಾಧಿಕಾರವು ಅವನ ಜೀವಮಾನದಲ್ಲಿ ಹಸ್ತಾಂತರಣೀಯವಲ್ಲ. ಮುತಾವಲಿಯ ಪದಾಧಿಕಾರವು ಕೆಲವು ವೈಯಕ್ತಿಕ ಅರ್ಹತೆಗಳ ಮೇಲೆ ನಿರ್ಮಿಸಲ್ಪಟ್ಟುದಾಗಿದ್ದುದರಿಂದ ಅವನು ತನ್ನ ನಾಮಾಂತರಣವನ್ನು ಇನ್ನೊಬ್ಬ ವ್ಯಕ್ತಿಯ ಪರವಾಗಿ ನಾಮಾಂತರಣಗೊಳಿಸುವಂತಿಲ್ಲ. ಮುತಾವಲಿಪದವು ಒಂದು ಸ್ವತ್ತಲ್ಲ. ಇದೊಂದು ಸ್ವತ್ತಲ್ಲವಾದಕಾರಣ ಇದನ್ನು ಹಸ್ತಾಂತರಣಗೊಳಿಸುವಂತಿಲ್ಲ. ಅವನು ತನ್ನ ಹೊಣೆಗಾರಿಕೆಗಳನ್ನು ಹಂಚಿಕೊಳ್ಳುವ ಉದ್ದೇಶದಿಂದ ಇನ್ನೊಬ್ಬ ಸಹ ಮುತಾವಲಿಯನ್ನು ನೇಮಿಸುವಂತಿಲ್ಲ. ಆದರೆ ಒಂದೊಮ್ಮೆ ಆ ವಕ್ಫ್ ಇದರ ಸಂಸ್ಥಾಪಕನು ಮುತಾವಲಿ ಪದವನ್ನು ಹಸ್ತಾಂತರಣಗೊಳಿಸಲು ಒಬ್ಬ ಮುತಾವಲಿಗೆ ಶಕ್ತಿಕೊಟ್ಟಿರುವನಾದರೆ ಆಗ ಆ ಮುತಾವಲಿಯು ಅದನ್ನು ಹಸ್ತಾಂತರಿಸಬಹುದು. ಇದೇ ರೀತಿಯಲ್ಲಿ ಸಂಸ್ಥಾಪಕನಿಂದ ಸಹ-ಮುತಾವಲಿಗಳನ್ನು ನೇಮಿಸಲು ಅವನು ಶಕ್ತಿಪಡೆದಿರುವನೆಂದಾದರೆ ಅಲ್ಲಿ ಅವನು ಸಹ ಮುತಾವಲಿಗಳನ್ನು ನೇಮಿಸಬಹುದು. ಒಂದೊಮ್ಮೆ ಸಂಸ್ಥಾಪಕನು ಯಾವತ್ತೂ ಪದಾಧಿಕಾರಿಗಳನ್ನು ಅಥವಾ ನೌಕರರನ್ನು ನೇಮಿಸಿರುವನಾದರೆ ಅಲ್ಲಿ ಮುತಾವಲಿಯು ಈ ನೇಮಕಗಳ ಸಂಬಂಧದಲ್ಲಿ ಯಾವತ್ತೂ ಬದಲಾವಣೆಮಾಡುವಂತಿಲ್ಲ. ಸಂಸ್ಥಾಪಕನಿಂದ ನೇಮಿಸಲ್ಪಟ್ಟಿರುವ ಪದಾಧಿಕಾರಿಗಳು ಮತ್ತು ನೌಕರರ ವೇತನಗಳ ಸಂಬಂಧದಲ್ಲೂ ಸಹ ಮುತಾವಲಿಯು ಹಸ್ತಕ್ಷೇಪ ಮಾಡುವಂತಿಲ್ಲ. ಈ ಶಕ್ತಿಯು ನ್ಯಾಯಾಲಯದಲ್ಲಿ ಮಾತ್ರ ನಿಹಿತವಾಗಿದೆ. ಆದುದರಿಂದ ಒಬ್ಬ ಮುತಾವಲಿಯು ಸಂಸ್ಥಾಪಕನಿಂದ ನೇಮಿಸಲ್ಪಟ್ಟ ಪದಾಧಿಕಾರಿಗಳ ವೇತನದಲ್ಲಿ ಯಾವತ್ತೂ ಬದಲಾವಣೆ ಮಾಡುವಂತಿಲ್ಲ, ಮತ್ತು ಅವನನ್ನು ಪದಚ್ಯುತಗೊಳಿಸುವಂತಿಲ್ಲ.

ಕಬ್ಜೆಯ ಹಕ್ಕು : (Possessory Rights)

ವಕ್ಫ್ ಸ್ವತ್ತಿನ ಸಂಬಂಧದಲ್ಲಿ ಮುತಾವಲಿಗೆ ಕೇವಲ ಒಂದು ಕಬ್ಜೆಯ ಹಕ್ಕಿರುತ್ತದೆ; ಅದು ಅವನಲ್ಲಿ ನಿಹಿತವಾಗಿರುವುದಿಲ್ಲ. ಆದರೆ ಆ ಸ್ವತ್ತಿನ ಕಬ್ಜೆಯನ್ನು ಪಡೆಯುವ ಅವನ ಹಕ್ಕು ಎಲ್ಲಾ ವ್ಯಕ್ತಿಗಳ ಪ್ರತಿ ಪರಮವಾಗಿರುತ್ತವೆ. ಮುತಾವಲಿಯ ಕಬ್ಜೆಯ ಈ ಹಕ್ಕನ್ನು ಸಂಸ್ಥಾಪಕ ಅಥವಾ ವಕ್ಫ್ ಇದರ ಪ್ರತಿ ಒಂದು ಪ್ರತಿಕೂಲವಾದ ಕಬ್ಜೆಎಂಬುದಾಗಿ ಎಣಿಸುವಂತಿಲ್ಲ. ಆದುದರಿಂದ ಒಂದೊಮ್ಮೆ ಒಬ್ಬ ಮುತಾವಲಿಯು ಸಂಸ್ಥಾಪಕ ಅಥವಾ ಇತರ ಯಾವನಾದರೊಬ್ಬ ವ್ಯಕ್ತಿಯಿಂದ ತನ್ನ ಕಬ್ಜೆಯನ್ನು ಕಳೆದುಕೊಂಡಿರುವನಾದರೆ ಅಲ್ಲಿ ಅವನು ತನ್ನ ಕಬ್ಜೆಯನ್ನು ಮರಳಿ ಪಡೆಯುವುದಕ್ಕಾಗಿ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಬಹುದು.

ವಿಕ್ರಯ ಮತ್ತು ಅಡಮಾನ ಮಾಡುವ ಶಕ್ತಿ
(Power of sale and mortgage)

ಒಬ್ಬ ಮುತಾವಲಿಯು ವಕ್ಫ್ ಸ್ವತ್ತಿನ ಸ್ವಾಮಿಯಲ್ಲ. ಆದುದರಿಂದ ಒಂದು ಸಾಮಾನ್ಯ ನಿಯಮದ ಪ್ರಕಾರ ಅವನು ಆ ಸ್ವತ್ತನ್ನು ವಿಕ್ರಯ, ವಿನಿಮಯ, ದಾನ ಅಥವಾ ಅಡಮಾನ ಮಾಡಿ ಪರಾಧೀನಗೊಳಿಸುವಂತಿಲ್ಲ, ಆದರೆ ಈ ಕೆಳಗಿನ ಪರಿಸ್ಥಿತಿಗಳಲ್ಲಿ ಒಬ್ಬ ಮುತಾವಲಿಯು ಒಂದು ವಕ್ಫ್ ಸ್ವತ್ತನ್ನು ಹಸ್ತಾಂತರಣಗೊಳಿಸಬಹುದು.

ಎ) ಒಂದೊಮ್ಮೆ ಸಂಸ್ಥಾಪಕನು ಆ ಸ್ವತ್ತನ್ನು ವಿಕ್ರಯ, ವಿನಿಮಯ, ಅಡಮಾನ ಇತ್ಯಾದಿ ಮಾಡಲು ವ್ಯಕ್ತವಾಗಿ ಪ್ರಾಧಿಕೃತಗೊಳಿಸಿರುವನೆಂದಾದರೆ ಅಥವಾ

ಬಿ) ಒಂದೊಮ್ಮೆ ಒಬ್ಬ ಮುತಾವಲಿಯು ಆ ಸ್ವತ್ತಿನ ಹಸ್ತಾಂತರಣದ ಬಗ್ಗೆ ನ್ಯಾಯಾಲಯದಿಂದ ಒಂದು ಪೂರ್ವಸಮ್ಮತಿಯನ್ನು ಪಡೆದಿರುವನೆಂದಾದರೆ

ಒಂದೊಮ್ಮೆ ನ್ಯಾಯಾಲಯದ ಪೂರ್ವಸಮ್ಮತಿಯಿಲ್ಲದೆ ಒಬ್ಬ ಮುತಾವಲಿಯು ವಕ್ಫ್ ಸ್ವತ್ತನ್ನು ಹಸ್ತಾಂತರರಣಗೊಳಿಸಿದರೆ ಅದು ಮೂಲತಃ ಶೂನ್ಯವಾಗಿರುತ್ತದೆ. ಆದರೆ ಒಂದೊಮ್ಮೆ ಆ ಹಸ್ತಾಂತರಣವು ವಕ್ಫ್ ಇದರ ಪ್ರಯೋಜನದ ದೃಷ್ಟಿಯಿಂದ ಮಾಡಲ್ಪಟ್ಟದ್ದಾಗಿದ್ದರೆ ಅಥವಾ ತುರ್ತುಪರಿಸ್ಥಿತಿಗಳಲ್ಲಿ ಅದನ್ನು ಹಸ್ತಾಂತರಿಸಿದರೆ ಅಲ್ಲಿ ಒಂದು ಹಸ್ತಾಂತರಣದ ಬಳಿಕ ಆ ಮುತಾವಲಿಯು ನ್ಯಾಯಾಲಯದಲ್ಲಿ ಸಮ್ಮತಿಯನ್ನು ಕೋರಬಹುದು. ಇಂತಹ ಪರಿಸ್ಥಿತಿಗಳಲ್ಲಿ ಪೂರ್ವಾನ್ವಯಿಯಾಗಿ ನ್ಯಾಯಾಲಯವು ಸಮ್ಮತಿಯನ್ನು ಮಂಜೂರು ಮಾಡಬಹುದು. ಈ ರೀತಿಯಾಗಿ ಅನೇಕ ಪರಿಸ್ಥಿತಿಗಳಲ್ಲಿ ತುರ್ತುಪರಿಸ್ಥಿತಿಗಳ ಕಾರಣದಿಂದಾಗಿ ಮುತಾವಲಿಯು ವಕ್ಫ್ ಸ್ವತ್ತನ್ನು ಅಡಮಾನಗೊಳಿಸಿ ಆ ಬಳಿಕ ನ್ಯಾಯಾಲಯಗಳು ಅದಕ್ಕೆ ಸಮ್ಮತಿಕೊಟ್ಟಿರುವ ಪ್ರಕರಗಳಿವೆ.

ಭೋಗಾರ್ಪಣೆ ಮಾಡುವ ಶಕ್ತಿ (Power to grout lease)

ಭೋಗಾರ್ಪಣೆ ಎಂದರೆ ಒಂದು ಸ್ಥಿರ ಸ್ವತ್ತಿನ ಅನುಭೋಗವನ್ನು ಭಾಡಿಗೆಗಾಗಿ ಹಸ್ತಾಂತರಗೊಳಿಸುವದು ಮುತಾವಲಿಗೆ ವಕ್ಫ್ ಸ್ವತ್ತನ್ನು ಭೋಗಾರ್ಪಣೆಗೊಳಿಸುವ ಹಕ್ಕಿರುತ್ತದೆ, ಅಧಿನಿವಾಸದ ಸ್ಥಳಗಳ ಸಂಬಂಧದಲ್ಲಿ ಅವನು ಕೇವಲ ಒಂದು ವರ್ಷದ ಕಾಲಾವಧಿಗಾಗಿ ಅದರ ಭೋಗಾರ್ಪಣೆ ಮಾಡಬಹುದು. ಕೃಷಕ ಭೂಮಿಗಳ ಸಂಬಂಧದಲ್ಲಿ ಅವನ ಮೂರು ವರ್ಷಗಳ ಕಾಲಾವಧಿಗೆ ಮಾತ್ರ ಅವುಗಳ ಭೋಗಾರ್ಪಣೆ ಮಾಡಬಹುದು.

ಮೇಲೆ ಹೇಳಲ್ಪಟ್ಟ ಕಾಲಾವಧಿಗಿಂತ ಹೆಚ್ಚಿನ ಕಾಲಾವಧಿಗೆ ಒಂದು ಭೋಗಾರ್ಪಣೆ ಮಾಡುವದಿದ್ದರೆ ಅಲ್ಲಿ ಆ ಮುತಾವಲಿಯು ಒಂದೇ (1) ಆ ವಕ್ಫ್ ಪತ್ರದಿಂದ ಪ್ರಾಧಿಕೃತನಾಗಿರಬೇಕು ಅಥವಾ (2) ನ್ಯಾಯಾಲಯದಿಂದ ಪೂರ್ವಸಮ್ಮತಿಯನ್ನು

ಪಡೆದಿರಬೇಕು. ಈ ರೀತಿಯಾಗಿ ಒಂದೊಮ್ಮೆ ಒಂದು ವಕ್ಫ್ ಪತ್ರವು ಅದರ ಸ್ವತ್ತನ್ನು ಮೂರು ವರ್ಷಗಳಿಗಿಂತ ಹೆಚ್ಚಿನ ಕಾಲವಧಿಯಲ್ಲಿ ಭೋಗಾರ್ಪಣೆಗೊಳಿಸಲು ಮುತಾವಲಿಗೆ ಪ್ರಾಧಿಕಾರ ಕೊಟ್ಟಲ್ಲಿ ಅವನು ಆ ಕಾಲಾವಧಿಗಾಗಿ ಭೋಗಾರ್ಪಣೆ ಮಾಡಬಹುದು. ಒಂದೊಮ್ಮೆ ವಕ್ಫ್ ಪತ್ರದಲ್ಲಿ ಇಂತಹ ಯಾವತ್ತೂ ಒಂದು ಪ್ರಾಧಿಕಾರವಿಲ್ಲವೆಂಬುದಾದರೆ ಆಗ ಆ ಮುತಾವಲಿಯು ನ್ಯಾಯಾಲಯದ ಪೂರ್ವಸಮ್ಮತಿಯನ್ನು ಪಡೆಯಬೇಕಾಗುತ್ತದೆ. ಒಂದು ನ್ಯಾಯಾಲಯವು ವಕ್ಫ್ ಸ್ವತ್ತಿನ ಭೋಗಾರ್ಪಣೆಯ ಬಗ್ಗೆ ಆ ವಕ್ಫ್ ಪತ್ರದಲ್ಲಿ ಉಪಬಂಧಿಸಲಾದ ಕಾಲಾವಧಿಗಿಂತ ಹೆಚ್ಚಿನ ಕಾಲಾವಧಿಗೂ ಅದನ್ನು ಭೋಗಾರ್ಪಣೆ ಮಾಡುವ ಬಗ್ಗೆ ಮುತಾವಲಿಗೆ ಸಮ್ಮತಿ ಕೊಡಬಹುದು. ಇದಲ್ಲದೆ ಒಂದು ನ್ಯಾಯಾಲಯವು ಮುತಾವಲಿಯಿಂದ ಪ್ರಾಧಿಕಾರವಿಲ್ಲದೆ ಮಾಡಲ್ಪಟ್ಟಿರುವ ಭೋಗಾರ್ಪಣೆಗಳನ್ನು ಪೂರ್ವಾನ್ವಯಿಯಾಗಿ ಸಮ್ಮತಿಸಬಹುದು. ವಕ್ಫ್ ಪತ್ರದಲ್ಲಿ ಉಪಬಂಧಿಸಲಾದ ಕಾಲಾವಧಿಗಿಂತ ಹೆಚ್ಚಿನ ಕಾಲಾವಧಿಗಾಗಿ ಭೋಗಾರ್ಪಣೆ ಮಾಡಲು ಒಬ್ಬ ಮುತಾವಲಿಗೆ ಸಮ್ಮತಿಕೊಡುವಾಗ ನ್ಯಾಯಾಲಯವು ಈ ಕೆಳಗಿನ ಸಂಗತಿಗಳನ್ನು ಗಮನಿಸಬೇಕಾಗುತ್ತದೆ :

ಎ) ಆ ವಕ್ಫ್ ಇದರ ಹಿತ ಅಥವಾ

ಬಿ) ಅದರ ಪ್ರಯೋಜಕರ ಹಿತ ಅಥವಾ

ಸಿ) ಆ ವ್ಯವಹಾರಕ್ಕೆ ಯಾವತ್ತೂ ಕಾನೂನೀ ಅವಶ್ಯಕತೆ.

ಸಾಲ ಎತ್ತುವ ಶಕ್ತಿ (Power of Taking loans)

ಒಬ್ಬ ಮುತಾವಲಿಯು ಒಂದು ವಕ್ಫ್‌ಗಾಗಿ ಸಾಲ ಎತ್ತುವಂತಿಲ್ಲ. ಒಂದು ವಕ್ಫ್ ಇದರ ಘೋಷಣೆಯಲ್ಲಿ ಉಪಬಂಧವಿದ್ದಿರುವ ಹೊರತು ಅಥವಾ ನ್ಯಾಯಾಲಯದಿಂದ ಪ್ರಾಧಿಕೃತನಾಗಿರುವ ಹೊರತು ಒಬ್ಬ ಮುತಾವಲಿಯು ಯಾವುದೇ ಉದ್ದೇಶಕ್ಕಾಗಿ ಸಾಲ ಎತ್ತುವಂತಿಲ್ಲ. ಒಂದೊಮ್ಮೆ ಒಬ್ಬ ಮುತಾವಲಿಯು ಒಂದು ವಕ್ಫ್ ಇದರ ಉದ್ದೇಶಗಳನ್ನು ಕಾರ್ಯಾಚರಣೆಗೆ ತರುವ ದೃಷ್ಟಿಯಿಂದ ಸಾಲ ಎತ್ತಿದರೂ ಸಹ ಅಲ್ಲಿ ಅವನು ವೈಯಕ್ತಿಕವಾಗಿ ಬಾಧ್ಯನಾಗುವನಲ್ಲದೆ ಆ ವಕ್ಫ್ ಬಾಧ್ಯವಾಗುವದಿಲ್ಲ. ಒಬ್ಬ ಮುತಾವಲಿಗೆ ಸಾಲಕೊಟ್ಟ ಒಬ್ಬ ಮುತಾವಲಿಯು ಆ ಸಾಲದ ಮರುಪಾವತಿಯನ್ನು ಆ ಮುತಾವಲಿಯಿಂದಲೇ ವಸೂಲು ಮಾಡಬೇಕಲ್ಲದೆ ಆ ವಕ್ಫ್ ಸ್ವತ್ತಿನಿಂದಲ್ಲ. ಆದರೆ ಒಂದೊಮ್ಮೆ ಆ ವಕ್ಫ್ ಪತ್ರವು ಆ ಮುತಾವಲಿಗೆ ಸಾಲ ಎತ್ತುವ ಬಗ್ಗೆ ಸಮ್ಮತಿಸಿದ್ದರೆ ಅಥವಾ ಈ ಬಗ್ಗೆ ಅವನು ನ್ಯಾಯಾಲಯದಿಂದ ಸಮ್ಮತಿಯನ್ನು ಪಡೆದಿದ್ದರೆ ಆಗ ಆ ಮುತಾವಲಿಯು ತಾನು ಎತ್ತಿರುವ ಸಾಲಕ್ಕಾಗಿ ವೈಯಕ್ತಿಕವಾಗಿ ಬಾಧ್ಯವಾಗುವುದಿಲ್ಲ.

ಪೂರ್ವಕ್ರಯಾಧಿಕಾರದ ಹಕ್ಕು (Right of Pre-Emption)

ಒಬ್ಬ ಮುತಾವಲಿಯು ವಕ್ಫ್ ಸ್ವತ್ತಿನ ಸಂಬಂಧದಲ್ಲಿ ಒಂದು ಪೂರ್ವ ಕ್ರಯಾಧಿಕಾರದ ಹಕ್ಕನ್ನು ಚಲಾಯಿಸುವಂತಿಲ್ಲ.

ಮುತಾವಲಿಯ ಪದಚ್ಯುತಿ (Removal of mutawalli)

ಒಬ್ಬ ಮುತಾವಲಿನನ್ನು ಒಮ್ಮೆ ಕ್ರಮಬದ್ಧವಾಗಿ ನೇಮಿಸಲಾದ ಬಳಿಕ ಅವನನ್ನು ಪದಚ್ಯುತಗೊಳಿಸುವ ಬಗ್ಗೆ ಆ ವಕ್ಫ್ ಇದರ ಸಂಸ್ಥಾಪಕನು ಆ ಹಕ್ಕನ್ನು ವ್ಯಕ್ತವಾಗಿ ಕಾಯ್ದಿರಿಸುವ ಹೊರತು ಅವನನ್ನು ಪದಚ್ಯುತಗೊಳಿಸುವಂತಿಲ್ಲ ಆದರೆ ಒಂದು ನ್ಯಾಯಾಲಯವು ಒಬ್ಬ ಮುತಾವಲಿನನ್ನು ಪದಚ್ಯುತಗೊಳಿಸುವ ಪರಮವಾದ ಶಕ್ತಿಯನ್ನು ಹೊಂದಿರುತ್ತದೆ. ಒಬ್ಬ ಮುತಾವಲಿನನ್ನು ಯಾವುದೇ ಪರಿಸ್ಥಿತಿಯಲ್ಲಿ ಪದಚ್ಯುತಗೊಳಿಸಬಾರದೆಂದು ಒಂದು ವಕ್ಫ್ ಪತ್ರದಲ್ಲಿ ಹೇಳಲಾಗಿದೆಯಾದರೂ ಸಹ ಒಂದು ನ್ಯಾಯಾಲಯವು ಆ ವಕ್ಫ್ ಇದರ ಹಿತದ ದೃಷ್ಟಿಯಿಂದ ಅವನನ್ನು ಪದಚ್ಯುತಗೊಳಿಸಬಹುದು. ನ್ಯಾಯಾಲಯಗಳು ಎಲ್ಲಾ ವಕ್ಫ್‌ಗಳ ಸಂರಕ್ಷಕರೆಂಬುದಾಗಿ ಎಣಿಸಲಾಗುತ್ತದೆ. ಆದುದರಿಂದ ವಕ್ಫ್ ಸ್ವತ್ತಿನ ಆಡಳಿತಕ್ಕಾಗಿ ಅವಶ್ಯವಾದುದನ್ನೆಲ್ಲ ಮಾಡಲು ನ್ಯಾಯಾಲಯಗಳು ಸಕ್ಷಮವಾಗಿವೆ. ಈ ಕೆಳಗಿನವುಗಳಲ್ಲಿ ಯಾವುದಾದರೊಂದು ಪರಿಸ್ಥಿತಿಯಲ್ಲಿ ಒಬ್ಬ ಮುತಾವಲಿಯನ್ನು ವಜಾ ಮಾಡಲು ನ್ಯಾಯಾಲಯ ಅನಿಯಂತ್ರಿತವಾದ ಶಕ್ತಿಯನ್ನು ಹೊಂದಿದೆ :

i) ಒಬ್ಬ ಮುತಾವಲಿಯು ದಿವಾಳಿಯಾಗಿದ್ದರೆ;

ii) ಮುತಾವಲಿಯ ನಿರ್ಲಕ್ಷದಿಂದಾಗಿ ವಕ್ಫ್ ಸ್ವತ್ತಿನ ದುರಾಡಳಿತವಾಗಿದ್ದರೆ;

iii) ಒಂದೊಮ್ಮೆ ಧಾರ್ಮಿಕ ಕರ್ತವ್ಯಗಳನ್ನು ಮಾಡುವುದು ಆ ಮುತಾವಲಿ ಪದದ ಒಂದು ಅವಶ್ಯಕ ಭಾಗವಾಗಿದ್ದು ಅವನು ಆ ಕರ್ತವ್ಯ ಮಾಡುವಲ್ಲಿ ವಿಫಲನಾಗಿದ್ದರೆ

iv) ಒಂದೊಮ್ಮೆ ಆ ಮುತಾವಲಿಯು ವಕ್ಫ್ ಇದರ ಸ್ವತ್ತನ್ನು ಖಾಸಗಿ ಪ್ರಯೋಜನಕ್ಕಾಗಿ ಉಪಯೋಗಿಸುತ್ತಿರುವನೆಂದಾದರೆ:

v) ಒಂದೊಮ್ಮೆ ಒಬ್ಬ ಮುತಾವಲಿಯು ಆ ವಕ್ಫ್ ಸ್ವತ್ತಿನ ಆದಾಯವನ್ನು ಆ ವಕ್ಫ್ ಪತ್ರದಲ್ಲಿ ಹೇಳಲ್ಪಟ್ಟ ಉದ್ದೇಶಗಳಿಗೆ ವಿರೋಧವಾಗಿ ಉಪಯೋಗಿಸುತ್ತಿರುವನೆಂದಾದರೆ;

vi) ಒಂದೊಮ್ಮೆ ಆ ಮುತಾವಲಿಯು ಆ ಸ್ವತ್ತಿನೊಂದಿಗೆ ವ್ಯವಹರಿಸುವಲ್ಲಿ ಅನ್ಯಥಾ ತನ್ನ ಶಕ್ತಿಯನ್ನು ಮೀರುತ್ತಿರುವನೆಂದಾದರೆ; ಅಥವಾ

vii) ಒಂದೊಮ್ಮೆ ಆ ಮುತಾವಲಿಯು ಯಾವತ್ತೂ ಶಾರೀರಿಕ ಅಥವಾ ಮಾನಸಿಕ ಅಸಮರ್ಥತೆಯಿಂದ ಪೀಡಿತನಾಗಿರುವನೆಂದಾದರೆ.

ನ್ಯಾಯಾಲಯವು ಒಬ್ಬ ಮುತಾವಲಿನನ್ನು ಒಂದು ಕ್ರಮಬದ್ಧವಾದ ದಾವೆಯ ಮೂಲಕ ಮಾತ್ರ ವಜಾ ಮಾಡಬಹುದು. ನ್ಯಾಯಾಲಯವು ಯಾವದೇ ಒಂದು ಅರ್ಜಿಯ ಆಧಾರದ ಮೇಲೆ ಅವನನ್ನು ಕಿತ್ತುಹಾಕುವಂತಿಲ್ಲ. ಅದಲ್ಲದೆ ಒಂದು ನ್ಯಾಯಾಲಯವು ನೈಸರ್ಗಿಕ ನ್ಯಾಯದ ಸಿದ್ಧಾಂತಕ್ಕೆ ವಿರೋಧವಾಗಿ ಒಬ್ಬ ಮುತಾವಲಿನನ್ನು ಕಿತ್ತು ಹಾಕುವಂತಿಲ್ಲ. ಆದುದರಿಂದ ಒಬ್ಬ ಮುತಾವಲಿಯ ಮೇಲೆ ಯಾವುದಾದರೊಂದು ಆರೋಪವಿದ್ದರೆ ಅವನಿಗೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ಕೊಡಬೇಕಾಗುತ್ತದೆ. ಇಲ್ಲಿ ಹೇಳಲ್ಪಟ್ಟ ನ್ಯಾಯಾಲಯವು ಒಂದು ಜಿಲ್ಲಾ ನ್ಯಾಯಾಲಯವಾಗಿರುತ್ತದೆ.

ಕೌಟುಂಬಿಕ ವಕ್ಫ್
(Family Wakf)

ಒಂದು ವಕ್ಫ್ ಇದು ಸಾರ್ವಜನಿಕವಾಗಿರಬಹುದು ಅಥವಾ ಖಾಸಗಿ. ಒಂದು ಸಾರ್ವಜನಿಕ ವಕ್ಫ್ ಇದರಲ್ಲಿ ಸಾಮಾನ್ಯವಾಗಿ ಸಾರ್ವಜನಿಕರು ಪ್ರಯೋಜಕರಾಗಿರುವರು, ಆದರೆ ಒಂದು ವಕ್ಫ್ ಇದರಲ್ಲಿ ಅದರ ಸಂಸ್ಥಾಪಕನ ಕುಟುಂಬದ ಸದಸ್ಯರಷ್ಟೇ ಪ್ರಯೋಜಕರೆಂದಾದರೆ ಅದನ್ನು ಒಂದು ಖಾಸಗಿ ವಕ್ಫ್ ಎಂದು ಕರೆಯಲಾಗುತ್ತದೆ. ಒಂದು ಖಾಸಗೀ ವಕ್ಫ್ ಇದನ್ನು ಕೌಟುಂಬಿಕ ವಕ್ಫ್ ಎಂಬುದಾಗಿಯೂ ಕರೆಯಲಾಗುತ್ತದೆ. ಒಂದು ಖಾಸಗಿ ವಕ್ಫ್ ಇದರ ಮುಖಾಂತರ ಒಬ್ಬ ಸಂಸ್ಥಾಪಕನು ತನ್ನ ಮಕ್ಕಳ ಮತ್ತು ವಂಶಜರ ಜೀವನಾಂಶಕ್ಕಾಗಿ ಉಪಬಂಧಗಳನ್ನು ಮಾಡಬಹುದು. ಇಂತಹ ವಕ್ಫ್‌ಗಳಿಗೆ ಸುಧೀರ್ಘವಾದ ಪರಂಪರೆಯಿದೆ.

ವಕ್ಫ್ ಅಧಿನಿಯಮ 1913 ಇದರ ಹಿಂದಿನ ಕಾನೂನು
(Law prior to wakf act, 1913)

1913 ಕ್ಕಿಂತ ಮೊದಲು ಕೌಟುಂಬಿಕ ವಕ್ಫ್‌ಗಳಿಗೆ ಸಂಬಂಧಿಸಿದ ಕಾನೂನು ತುಂಬಾ ಕಟ್ಟುನಿಟ್ಟಾಗಿತ್ತು. ಬಡವರ ಪ್ರಯೋಜನ ಅಥವಾ ಧರ್ಮದಾಯ ಇತ್ಯಾದಿಗಳ ಬಗ್ಗೆ ಉಪಬಂಧವಿಲ್ಲದಿರುವ ಒಂದು ವಕ್ಫ್ ಇದನ್ನು ಒಂದು ವಿದ್ಯುಕ್ತವಾದ ವಕ್ಫ್ ಎಂಬುದಾಗಿ ಎಣಿಸಲಾಗುತ್ತಿರಲಿಲ್ಲ. ಒಂದು ಕೌಟುಂಬಿಕ ವಕ್ಫ್ ಇದು ಒಂದು ವಿಧ್ಯುಕ್ತವಾದ ವಕ್ಫ್ ಎಂದು ಎಣಿಸಲ್ಪಡಬೇಕಾದರೆ ಅದು ಕುಟುಂಬದ ಸದಸ್ಯರಿಗೆ ಜೀವನಾಂಶವನ್ನು ಕೊಡುವುದರ ಹೊರತಾಗಿ ಯಾವತ್ತೂ ಧಾರ್ಮಿಕ ಅಥವಾ ಧರ್ಮದಾಯ ಕೃತ್ಯವನ್ನು ಮಾಡಬೇಕೆಂದು ನ್ಯಾಯಾಲಯಗಳು ಒಂದು ನಿಯಮವನ್ನು ಹಾಕಿದ್ದವು. ಒಂದು ಕೌಟುಂಬಿಕ ವಕ್ಫ್ ಇದರ ಹೆಸರಿನಲ್ಲಿ ಆ ವಕ್ಫ್ ಇದರ ಸ್ಥಾಪನೆಯಿಂದಾಗಿ ಕೇವಲ ಆ ವಕ್ಫ್ ಇದರ ಸಂಸ್ಥಾಪಕನ ಮಕ್ಕಳ ಮತ್ತು ವಂಶಜರು ಪ್ರಯೋಜನ ಪಡೆಯುವದು ಸಮ್ಮತಿಸಲ್ಪಟ್ಟಿರಲಿಲ್ಲ.

1913 ರ ಅಧಿನಿಯಮದ ನಂತರದ ಕಾನೂನು
(Law after the Act of 1913)

'ಮುಸಲ್ಮಾನ್ ವಕ್ಫ್ ವಿಧ್ಯುಕ್ತತೆ ಅಧಿನಿಯಮ' 1913 (The muslium wakf validating Act, 1913) ಇದು ಕೌಟುಂಬಿಕ ವಕ್ಫ್ ಇದರ ವಿಧ್ಯುಕ್ತತೆಯ ಸಂಬಂಧದಲ್ಲಿ ನ್ಯಾಯಾಲಯದಲ್ಲಿ ಹಾಕಲ್ಪಟ್ಟ ಕಟ್ಟುನಿಟ್ಟಾದ ಷರತ್ತುಗಳನ್ನು ರದ್ದು ಗೊಳಿಸಿದೆ. ಈ ಅಧಿನಿಯಮವು ಜಾರಿಗೆ ಬಂದ ಬಳಿಕ ಒಂದು ಕೌಟುಂಬಿಕ ವಕ್ಫ್ ಇದು ಧರ್ಮದಾಯ ಅಥವಾ ಬಡವರ ಕಲ್ಯಾಣಕ್ಕೋಸ್ಕರ ತನ್ನ ಸ್ವತ್ತಿನ ಒಂದಂಶ ವನ್ನು ಉಪಯೋಗಿಸದೆ ಆದನ್ನು ಕೇವಲ ಕೌಟುಂಬಿಕ ಪ್ರಯೋಜನಕ್ಕಾಗಿ ಉಪ ಯೋಗಿಸಿದರೂ ಸಹ ಅದೊಂದು ವಿಧ್ಯುಕ್ತವಾದ ವಕ್ಫ್ ಎಂದು ಹೇಳಲ್ಪಡುತ್ತದೆ. ಈ ಬಗ್ಗೆ ಈ ಅಧಿನಿಯಮದ ಕ. 3 ಮತ್ತು 4 ಇವುಗಳಲ್ಲಿ ಸಂಬಂಧವಾದ ಉಪ-ಬಂಧಗಳು ಮಾಡಲಾಗಿದೆ.

ಶಿಯಾ ಕಾನೂನು (Shia Law)

'ವಕ್ಫ್ ವಿಧ್ಯುಕ್ತತೆ ಅಧಿನಿಯಮ, 1913' ಇದು ಶಿಯಾ ಮತ್ತು ಸುನ್ನೀ ಕಾನೂನುಗಳೊಳಗೆ ಕೌಟುಂಬಿಕ ವಕ್ಫ್‌ಗಳ ಸಂಬಂಧದಲ್ಲಿ ಯಾವತ್ತೂ ಭೇದವನ್ನು ಕಲ್ಪಿಸುವುದಿಲ್ಲ. ಈ ಅಧಿನಿಯಮದ ಉಪಬಂಧಗಳು ಈ ಎರಡೂ ಪರಂಪರೆಗಳಿಗೆ ಸಮಾನವಾಗಿ ಅನ್ವಯವಾಗುತ್ತವೆ. ಆದರೆ ಈ ಅಧಿನಿಯಮದ ಕ. 3(ಬಿ) ಇದು ಹನಫೀ ಮುಸಲ್ಮಾನರಿಗೆ ಮಾತ್ರ ಅನ್ವಯವಾಗುತ್ತದೆ. ಆದ್ದರಿಂದ ಕೇವಲ ಸ್ವಂತ ಪ್ರಯೋಜನಕ್ಕಾಗಿ ಒಬ್ಬ ಹನಫೀ ಸಂಸ್ಥಾಪಕನು ಒಂದು ವಕ್ಫ್ ಇದನ್ನು ನೇಮಿಸಬಹುದು. ಒಂದೊಮ್ಮೆ ಆ ಸಂಸ್ಥಾಪಕನು ಒಬ್ಬ ಶಿಯಾ ಮುಸಲ್ಮಾನ ನಾಗಿದ್ದರೆ ಅವನು ಕೇವಲ ತನ್ನ ಸ್ವಂತ ಪ್ರಯೋಜನಕ್ಕೋಸ್ಕರ ಒಂದು ವಕ್ಫ್ ನಿರ್ಮಿಸುವಂತಿಲ್ಲ.

ವಕ್ಫ್‌ಗಳ ಶಾಸನಬದ್ಧ ನಿಯಂತ್ರಣ (Statutory Control of wakfs)

ಭಾರತದಲ್ಲಿ ವಕ್ಫ್‌ಗಳ ನಿರ್ಮಾಣದ ಪರಂಪರೆಯು ಸುದೀರ್ಘ ಕಾಲದಿಂದ ನಡೆಯುತ್ತಾ ಬಂದಿದೆ. ಇದರ ಪರಿಣಾಮವಾಗಿ ಈ ದೇಶದಲ್ಲಿ ಅನೇಕ ಧಾರ್ಮಿಕ ಅಥವಾ ಧರ್ಮದಾಯ ದತ್ತಿಗಳು ನಿರ್ಮಿಸಲ್ಪಟ್ಟಿವೆ. ಈ ವಕ್ಫ್‌ಗಳಲ್ಲಿ ಸಾಕಷ್ಟು ಸಂಪತ್ತು ಕೂಡಿಕೊಂಡಿರುವ ಕಾರಣದಿಂದಾಗಿ ಇದು ಅನೇಕ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಈ ದತ್ತಿಗಳ ಸಾಮಾ ಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರೀಯ ಹಾಗೂ ರಾಜ್ಯ ಸಂಸತ್ತುಗಳು ಕಾಲದಿಂದ ಕಾಲಕ್ಕೆ ಅನೇಕ ಕಾನೂನುಗಳನ್ನು ಅಧಿನಿಯಮಿತಗೊಳಿಸಿವೆ. ಈ ಅಧಿನಿಯಮಗಳು ಭಾರತದಲ್ಲಿ ವಕ್ಫ್ ಸ್ವತ್ತುಗಳ ಉತ್ತಮ ಆಡಳಿತಕ್ಕಾಗಿ ಉಪಬಂಧವಾಡಿವೆ. ಈ ಶಾಸನಬದ್ಧ ಉಪಬಂಧಗಳು

ವಕ್ಫ್‌ಗಳ ಕೇವಲ ಉತ್ಪನ್ನ ಮತ್ತು ಆಡಳಿತ ಸಂಬಂಧಿ ವಿಷಯಗಳನ್ನಷ್ಟೇ ನಿಯಂತ್ರಿಸಿವೆಯಲ್ಲದೆ ಅವುಗಳ ಧಾರ್ಮಿಕ ಪಾವಿತ್ರ್ಯದ ಮೇಲೆ ಯಾವತ್ತೂ ಪರಿಣಾಮವನ್ನು ಬೀರಿಲ್ಲ. 'ಮುಸಲ್ಮಾನ ವಕ್ಫ್ ಅಧಿನಿಯಮ 1923 (The Mussalman wakf Act, 1923) ಇದು ಕೇಂದ್ರೀಯ ಸಂಸತ್ತಿನಿಂದ ಮಾಡಲ್ಪಟ್ಟ ಮೊದಲನೇ ಅಧಿನಿಯಮವಾಗಿರುತ್ತದೆ ಮತ್ತು ಇದರ ಉದ್ದೇಶವು ವಕ್ಫ್ ಸ್ವತ್ತುಗಳನ್ನು ಸಂರಕ್ಷಿಸುವುದು ಹಾಗೂ ಅವುಗಳ ದುರಾಡಳಿತವಾಗುವದನ್ನು ತಡೆಯುವದಾಗಿರುತ್ತದೆ. ಆರಂಭದಲ್ಲಿ ಈ ಅಧಿನಿಯಮವು ಇಡೀ ದೇಶದಲ್ಲಿ ಜಾರಿಯಲ್ಲಿತ್ತು ಆದರೆ ಕಾಲಕ್ರಮೇಣ ಕೆಲವು ರಾಜ್ಯಗಳು ಇದರಲ್ಲಿ ಸಾಕಷ್ಟು ಮಾರ್ಪಾಡುಮಾಡಿ ತಮ್ಮದೆ ಕ್ಷೇತ್ರೀಯ ಅಧಿನಿಯಮಗಳನ್ನು ಜಾರಿಮಾಡಿದವು. 'ಮುಸಲ್ಮಾನ್ ವಕ್ಫ್ ಅಧಿನಿಯಮವು 1923 ಇದು 1) ಬೆಂಗಾಲ್ ವಕ್ಫ್ ಅಧಿನಿಯಮ 1934, 2) ಮುಸಲ್ಮಾನ್ ವಕ್ಫ್ (ಮುಂಬಯಿ ತಿದ್ದುಪಡಿ) ಅಧಿನಿಯಮ, 1935 3) ಬಿಹಾರ ವಕ್ಫ್‌ಗಳ ಅಧಿನಿಯಮ 1947 4) ಸಂಯುಕ್ತ ಸಂಸ್ಥಾನಗಳ ಮುಸ್ಲಿಮ್ ವಕ್ಫ್ ಅಧಿನಿಯಮ 1936 ಇವು ಮುಸಲ್ಮಾನ್ ವಕ್ಫ್ ಅಧಿನಿಯಮ 1923ಕ್ಕೆ ಪ್ರತಿಸ್ಥಾಪಿಸಲ್ಪಟ್ಟವು. 1923ರ ಅಧಿನಿಯಮವು ಈಗ ವಕ್ಫ್ ಅಧಿನಿಯಮವು 1954 ರಿಂದ ನಿರಸಿತಗೊಳಿಸಲ್ಪಟ್ಟಿವೆ. ಈಗ ವಕ್ಫ್ ಅಧಿನಿಯಮ 1954 ಇದು ಮೇಲೆ ಹೇಳಲ್ಪಟ್ಟ ಅಧಿನಿಯಗಳು ಜಾರಿಯಲ್ಲಿರುವ ರಾಜ್ಯಗಳು ಮತ್ತು ಜಮ್ಮು ಕಾಶ್ಮೀರ್ ರಾಜ್ಯದ ಹೊರತಾಗಿ ಇತರ ಎಲ್ಲಾ ರಾಜ್ಯಗಳಿಗೆ ಅನ್ವಯವಾಗುತ್ತದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ 'ಮುಸ್ಲಿಮ್ ವಕ್ಫ್ ಅಧಿನಿಯಮ 1954' ಇದು ಅನ್ವಯವಾಗುತ್ತದೆ.

ಮುಸ್ಲಿಮ್ ಧರ್ಮದತ್ತಿಗಳು
(Muslim Religious Endowments)

ಸಾರ್ವಜನಿಕ ಮಸೀದಿಗಳು (Public Mosques)

ಒಂದು ಸಾರ್ವಜನಿಕ ಮಸೀದಿಯೆಂದರೆ ಅದೊಂದು ಪ್ರಾರ್ಥನಾ ಸ್ಥಾನವಾಗಿದ್ದು ಅಲ್ಲಿ ಎಲ್ಲಾ ಪಂಗಡ ಮತ್ತು ಉಪಪಂಗಡಗಳ ಮುಸಲ್ಮಾನರು ವೈಯುಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಲು ಹಕ್ಕುದಾರರಾಗಿರುವರು. ಯಾವನೇ ಒಬ್ಬ ಮುಸಲ್ಮಾನನು ಒಂದು ನಿರ್ದಿಷ್ಟವಾದ ಪಂಗಡ ಅಥವಾ ಪರಂಪರೆಯವನಾಗಿರುವನೆಂಬ ಕಾರಣಕ್ಕಾಗಿ ಒಂದು ಸಾರ್ವಜನಿಕ ಮಸೀದಿಯನ್ನು ಪ್ರವೇಶಿಸುವದರಿಂದ ತಡೆಯಲ್ಪಡುವಂತಿಲ್ಲ. ಮಸೀದಿಗಳಲ್ಲಿ ಶಿಯಾ ಮಸೀದಿ ಅಥವಾ ಸುನ್ನೀ ಮಸೀದಿಗಳೆಂದಿಲ್ಲ, ಅಥವಾ ಇಸ್ಲಾಮಿನ ಒಂದು ನಿರ್ದಿಷ್ಟವಾದ ಪಂಗಡಕ್ಕಾಗಿ ಕಾಯ್ದಿರಿಸಲ್ಪಟ್ಟ ಯಾವತ್ತೂ ಮಸೀದಿಯಿರುವುದಿಲ್ಲ. ಒಂದು ಮಸೀದಿಯು ಯಾವಾಗಲೂ ಒಂದು ಸಮರ್ಪಣೆಯಾಗಿರುತ್ತದೆ, ಮತ್ತು ಅದು ಪರಮಾತ್ಮನ ಸ್ವತ್ತಾಗಿರುತ್ತದೆ; ಆದುದರಿಂದ ಯಾವತ್ತೂ ನಿಯಂತ್ರಣವಿಲ್ಲದೆ ಇಲ್ಲಿ ಪ್ರಾರ್ಥನೆ

ಸಲ್ಲಿಸಲು ಮತ್ತು ಧಾರ್ಮಿಕ ಆಚರಣೆಗಳನ್ನು ನೆರವೇರಿಸಲು ಪ್ರತಿಯೊಬ್ಬ ಮುಸಲ್ಮಾನನಿಗೆ ಒಂದು ಕಾನೂನೀ ಹಕ್ಕಿರುತ್ತದೆ. ಹನಫೀ ಮುಸಲ್ಮಾನರು ಬಹು ಸಂಖ್ಯಾತರಾಗಿರುವ ಒಂದು ಮಸೀದಿಯಲ್ಲಿ ಹನಫೀ ರೀತಿಯಿಂದ ಪ್ರತ್ಯೇಕವಾದ ರೀತಿಯ ಪೂಜೆಯನ್ನು ಸಲ್ಲಿಸುತ್ತಿರುವ ಒಂದು ಶಛಿಯು ಪೂಜೆ ಸಲ್ಲಿಸುವದರಿಂದ ತಡೆಯಲ್ಪಡುವಂತಿಲ್ಲ. ಒಂದು ಸಾರ್ವಜನಿಕ ಮಸೀದಿಯು ಆ ಸ್ವತ್ತಿನ ಒಂದು ಕಾನೂನು ಬದ್ಧವಾದ ಸಮರ್ಪಣೆಯಾಗಿರುತ್ತದೆ. ಇಂತಹ ಒಂದು ಸಮರ್ಪಣೆಯಲ್ಲಿ ಯಾವುದೇ ಒಂದು ರೀತಿಯು ಒಂದು ನಿರ್ದಿಷ್ಟವಾದ ರೀತಿಯನ್ನು ಅನುಸರಿಸ ಬೇಕಾಗಿಲ್ಲ.

ಒಂದು ಮಸೀದಿಯು ಒಂದು ನ್ಯಾಯಿಕ ವ್ಯಕ್ತಿಯಲ್ಲ. ಆದುದರಿಂದ ಅದು ದಾವೆ ಮಾಡುವಂತಿಲ್ಲ, ಅಥವಾ ದಾವೆಹೂಡಲ್ಪಡುವಂತಿಲ್ಲ. ನ್ಯಾಯಿಕ ವ್ಯಕ್ತಿತ್ವದ ಭಾವಸ್ವರೂಪವು ಮುಸ್ಲಿಮ್ ನ್ಯಾಯದರ್ಶಿಗಳಿಂದ ಮನ್ನಿಸಲ್ಪಟ್ಟಿದ್ದರೂ ಸಹ ಅವರು ಆ ವ್ಯಕ್ತಿತ್ವವನ್ನು ಮಸೀದಿಗೆ ಅನ್ವಯಗೊಳಿಸಲಿಲ್ಲ. ರಾಜಸ್ಥಾನ ಉಚ್ಚ ನ್ಯಾಯಾಲಯವು ಕೊಟ್ಟಿರುವ ಒಂದು ತೀರ್ಪಿನ ಪ್ರಕಾರ ಮಸೀದಿಗಳು ನ್ಯಾಯಿಕ ವ್ಯಕ್ತಿಗಳಲ್ಲ.

ಒಂದು ಮಸೀದಿಯನ್ನು ಒಂದು ನಿರ್ದಿಷ್ಟವಾದ ಪಂಗಡದ ಮುಸಲ್ಮಾನರಿಗಾಗಿ ಕಾಯ್ದಿರಿಸುವಂತಿಲ್ಲವೆಂದಾದರೂ ಸಹ ಒಂದು ನಿರ್ದಿಷ್ಟವಾದ ಕುಟುಂಬ ಅಥವಾ ವ್ಯಕ್ತಿಗಳ ಒಂದು ನಿರ್ದಿಷ್ಟವಾದ ಸಮೂಹಕ್ಕಾಗಿ ಒಂದು ವಕ್ಫ್ ನಿರ್ಮಿಸಲ್ಪಡಬಹುದು. ಒಂದು ಮನೆಯೊಳಗಿರುವ ಒಂದು ಮಸೀದಿಯು ಅದಕ್ಕೆ ಸಾರ್ವಜನಿಕ ಪ್ರವೇಶದ್ವಾರವಿಲ್ಲವೆಂದಾದರೆ ಅದೊಂದು ಖಾಸಗೀ ಮಸೀದಿಯೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಒಂದು ಮಸೀದಿಯು ಖಾಸಗೀ ಆಗಿದ್ದರೆ ಅಲ್ಲಿ ಸಾಮಾನ್ಯವಾಗಿ ಸಾರ್ವಜನಿಕರಿಗೆ ಪ್ರವೇಶದ ಹಕ್ಕಿರುವದಿಲ್ಲ.

ಖಾನ್‌ಖಾ (Khankah)

ಖಾನ್‌ಖಾ ಎಂದರೆ ಪವಿತ್ರ ವ್ಯಕ್ತಿಗಳಿಂದ ಇಸ್ಲಾಮೀನ ಸಿದ್ಧಾಂತಗಳು ಹಾಗೂ ಜೀವನ ಮಾರ್ಗವನ್ನು ಬೋಧಿಸಲ್ಪಡುವ ಸ್ಥಾನವಾಗಿರುತ್ತದೆ. ಒಂದು ಖಾನ್‌ಖಾ ಇದು ಒಂದು ಹಿಂದೂ ಮಠದಂತಿರುತ್ತದೆ. ಇದು ಸಾಮಾನ್ಯವಾಗಿ ಮುಸಲ್ಮಾನ ಸಂತರಿಂದ ಸ್ಥಾಪಿಸಲ್ಪಡುತ್ತದೆ. ಇದು ಸಾಮಾನ್ಯವಾಗಿ ಒಂದು ದರ್ಗಾದಲ್ಲಿ ಅಥವಾ ಒಬ್ಬ ಸಂತನ ಸಮಾಧಿಯಲ್ಲಿ ಸೇರಿರುತ್ತದೆ ಯಾವತ್ತೂ ಸಂತನ ಸಮಾಧಿಗೆ ಕೂಡಿ ಕೊಂಡಿರದ ಸ್ವತಂತ್ರ ಖಾನ್‌ಖಾಗಳೂ ಇವೆ. ಒಬ್ಬ ಮುಸ್ಲಿಮ್ ಸಂತನು ಆರಂಭದಲ್ಲಿ ಯಾವುದಾದರೊಂದು ಸ್ಥಳದಲ್ಲಿ ನಿಂತು ಧಾರ್ಮಿಕ ಬೋಧನೆ ಮಾಡಬಹುದು. ಕಾಲಕ್ರಮೇಣ ಅದು ಆಧ್ಯಾತ್ಮಿಕ ಅಧ್ಯಯನದ ಒಂದು ಸಾರ್ವಜನಿಕ ಪ್ರದೇಶವಾಗ ಬಹುದು. ಇಂತಹ ಒಂದು ಸ್ಥಾನವು ಧಾರ್ಮಿಕ ಅಧ್ಯಯನದ ಒಂದು ಮಹತ್ವದ

ಸ್ಥಳವೆಂದು ಸಾರ್ವಜನಿಕರಿಂದ ಸ್ವೀಕರಿಸಲ್ಪಟ್ಟರೆ ಆ ಸ್ಥಾನವು ಒಂದು ಸಾರ್ವಜನಿಕ ಸ್ಥಾನವಾಗಿ ಒಂದು ವಕ್ಫ್ ನಿರ್ಮಿಸಲ್ಪಡಬಹುದು. ಒಂದು ಖಾನ್‌ಖಾ ಇದರ ಪ್ರಮುಖನನ್ನು ಸಜ್ಜಾದಾನಾಶಿನ್ (Sajjadanashin) ಎಂಬುದಾಗಿ ಕರೆಯಲಾಗುತ್ತದೆ.

ಒಂದು ಖಾನ್‌ಖಾ ಇದರ ಪ್ರಮುಖನಾದ ಸಜ್ಜಾದಾನಾಶಿನ್ ಇವನು ಧಾರ್ಮಿಕ ವಿಷಯಗಳ ಬಗ್ಗೆ ಬೋಧನೆ ಮಾಡುವನು ಮತ್ತು ಅವನು ಆ ಸಂಸ್ಥೆಯ ಪ್ರಬಂಧಕನಾಗಿರುವನು. ಸಾಮಾನ್ಯವಾಗಿ ಒಂದು ಖಾನ್‌ಖಾ ಇದರ ಸಂಸ್ಥಾಪಕನೇ ಸಜ್ಜಾದಾನಾಶಿನ್ ಆಗಿರುವನು. ಅವನ ಮರಣದ ಬಳಿಕ ಅವನ ಶಿಷ್ಯರು ಅಥವಾ ಕುಟುಂಬದ ಸದಸ್ಯರು ಉತ್ತರಾಧಿಕಾರದಿಂದಾಗಿ ಅಲ್ಲಿ ಆಧ್ಯಾತ್ಮಿಕ ಪ್ರಮುಖನ ಸ್ಥಾನವನ್ನು ಪಡೆಯುವರು. ಇಂತಹ ಯಾವತ್ತೂ ಉಪಬಂಧವಿಲ್ಲದಾಗ ಆ ಪದಾಧಿಕಾರವು ರೂಢಿಗತ ಕಾನೂನಿನಿಂದ ಪ್ರಾಪ್ತವಾಗುತ್ತದೆ. ಸಾಮಾನ್ಯವಾಗಿ ಒಬ್ಬ ಸಜ್ಜಾದಾನಾಶಿನ್ ಇವನು ಒಬ್ಬ ಹಿಂದವು ಮಠದ ಮಠಾಧಿಪತಿಗೆ ಸಮಾನನಾಗಿರುವನು. ಒಂದು ಖಾನ್‌ಖಾ ಇದರ ಸಜ್ಜಾದಾನಾಶಿನ್ ಇವನು ಧಾರ್ಮಿಕ ಹಾಗೂ ಧರ್ಮಾತೀತ ಕೃತ್ಯಗಳನ್ನು ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಖಾನ್‌ಖಾ ಇದರ ಸಜ್ಜಾದಾನಾಶಿನ್ ಇವನು ಒಬ್ಬ ಮುತಾವಲಿಯಾಗಿರುವನು. ಆದರೆ ಕೆಲವು ಪ್ರಕರಣಗಳಲ್ಲಿ ಈ ಎರಡು ಪದಾಧಿಕಾರಗಳನ್ನು ಬೇರೆ ಬೇರೆ ವ್ಯಕ್ತಿಗಳು ಹೊಂದಿರಬಹುದು. ಒಂದೊಮ್ಮೆ ಬೇರೆ ಬೇರೆ ವ್ಯಕ್ತಿಗಳು ಈ ಪದಾಧಿಕಾರಗಳನ್ನು ಹೊಂದಿದ್ದರೆ ಅಲ್ಲಿ ಆ ಸಜ್ಜಾದಾನಾಶಿನ್ ಇವನನ್ನು ಮುತಾವಲಿಗಿಂತ ಶ್ರೇಷ್ಠನೆಂಬುದಾಗಿ ಎಣಿಸಲಾಗುತ್ತದೆ ಮತ್ತು ಅವನು ಮುತಾವಲಿಯ ಕಾರ್ಯಕಲಾಪಗಳನ್ನು ನಿಯಂತ್ರಿಸುವನು. ಒಂದು ಖಾನ್‌ಖಾ ಇದರ ಉತ್ಪನ್ನದಲ್ಲಿ ಅಧಿಶೇಷವು ಉಂಟಾದರೆ ಅಲ್ಲಿ ಮುತಾವಲಿಗಿಂತ ಹೆಚ್ಚಿನ ಹಕ್ಕು ಆ ಸಜ್ಜಾದಾನಾಶಿನ್ ಇವನಿಗೆ ಬರುತ್ತದೆ. ಒಬ್ಬ ಸಜ್ಜಾದಾನಾಶಿನ್ ಇವನು ದುರಾಡಳಿತ ಅಥವಾ ದುರ್ನಡತೆ ಮಾಡಿದರೆ ಅವನನ್ನು ಒಂದು ನ್ಯಾಯಾಲಯವು ಪದಚ್ಯುತಗೊಳಿಸಬಹುದು. ಒಬ್ಬ ಸಜ್ಜಾದಾನಾಶಿನ್ ಇವನ ಪದಾಧಿಕಾರವು ಮೂಲತಃ ಒಂದು ಧಾರ್ಮಿಕ ಪದಾಧಿಕಾರವಾಗಿರುತ್ತದೆ; ಆದುದರಿಂದ ಒಬ್ಬ ಮುಸಲ್ಮಾನೇತರನು, ಒಬ್ಬ ನಾರಿ ಮತ್ತು ಒಬ್ಬ ಅಲ್ಪವಯಿ ಈ ಪದಾಧಿಕಾರವನ್ನು ಹೊಂದುವಂತಿಲ್ಲ.

ಇಮಾಮ್ ಬಾರಾ (Imam bara)

ಇಮಾಮ್ ಬಾರಾ ಇದು ಒಂದು ಮನೆಯೊಳಗಿನ ಒಂದು ಪ್ರತ್ಯೇಕ ಸ್ಥಳವಾಗಿದ್ದು ಅಲ್ಲಿ ಆ ಮನೆಯ ನಿವಾಸಿಗಳು ಧಾರ್ಮಿಕ ಪೂಜೆ ಪ್ರಾರ್ಥನೆ ಇತ್ಯಾದಿಗಳನ್ನು ನಡೆಸುವರು. ಒಂದು ಸ್ವತಂತ್ರವಾದ ಕಟ್ಟಡವನ್ನೂ ಸಹ ಒಂದು ಇಮಾಮ್ ಬಾರಾವನ್ನಾಗಿ ಎಣಿಸಬಹುದು. ಆದರೂ ಸಹ ಅದು ಆ ಕಟ್ಟಡದ ಮಾಲಿಕನ ಒಂದು ಖಾಸಗೀ ಪೂಜಾ ಸ್ಥಳ ಎಂಬುದಾಗಿ ಎಣಿಸಲ್ಪಡುತ್ತದೆ. ಆದಂದ

ರಿಂದ ಇಮಾಮ್ ಬಾರಾ ಇದೊಂದು ಖಾಸಗೀ ಪೂಜಾ ಸ್ಥಳವಾಗಿದ್ದು ಅಲ್ಲಿ ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ; ಸಾರ್ವಜನಿಕರು ಆ ಇಮಾಮ್ ಬಾರಾ ಇದರ ಮಾಲಿಕನ ಸಮ್ಮತಿಯ ಮೇರೆಗೆ ಮಾತ್ರ ಅಲ್ಲಿ ಪ್ರವೇಶವನ್ನು ಪಡೆಯಬಹುದು. ಒಂದು ಇಮಾಮ್ ಬಾರಾ ಇದು ಒಂದು ವಕ್ಫ್ ಇದರ ವಿಧ್ಯುಕ್ತವಾದ ಉದ್ದೇಶವಾಗಿರಬಹುದು, ಆದರೆ ಒಂದು ಇಮಾಮ್ ಬಾರಾ ಇದೊಂದು ಕೇವಲ ಖಾಸಗೀ ವಕ್ಫ್ ಆಗಿರುತ್ತದೆ, ಮತ್ತು ಇದೊಂದು ಸಾರ್ವಜನಿಕ ವಕ್ಫ್ ಅಥವಾ ಟ್ರಸ್ಟ ಆಗಿರುವುದಿಲ್ಲ. ಇಮಾಮ್ ಬಾರಾಗಳು ಸಾಮಾನ್ಯವಾಗಿ ಶಿಯಾ ಮುಸಲ್ಮಾನರಿಂದ ನಿರ್ಮಿಸಲ್ಪಡುತ್ತವೆ. ಮತ್ತು ಅವರ ಸ್ವಾಮಿತ್ವದಲ್ಲಿರುತ್ತವೆ.

ಕಬ್ರುಸ್ಥಾನ (Quabristan)

ಕಬ್ರುಸ್ಥಾನ ಅಥವಾ ರುದ್ರಭೂಮಿ ಇದೊಂದು ಮೃತ ದೇಹಗಳನ್ನು ದಹನ ಮಾಡುವ ಒಂದು ಭೂಭಾಗವಾಗಿರುತ್ತದೆ. ಇದೊಂದು ಸಾರ್ವಜನಿಕ ಅಥವಾ ಖಾಸಗೀ ಪ್ರದೇಶವಾಗಿರಬಹುದು. ಒಂದು ಖಾಸಗೀ ಕಬ್ರುಸ್ಥಾನದಲ್ಲಿ ಅವರ ಸಂಸ್ಥಾಪಕನ ಮಕ್ಕಳ, ಕುಟುಂಬದ ಸದಸ್ಯರ ಮತ್ತು ವಂಶಜರ ಮೃತ ದೇಹಗಳು ಹೂಳಿಡಲ್ಪಡಬಹುದು. ಒಂದೊಮ್ಮೆ ಒಂದು ಕಬ್ರುಸ್ಥಾನ ಇದು ಸಾರ್ವಜನಿಕವಾಗಿದ್ದರೆ ಅದು ಎಲ್ಲಾ ಮುಸಲ್ಮಾನರಿಗೆ ದಹನಕ್ಕಾಗಿ ತೆರೆದಿಡಲ್ಪಡುತ್ತದೆ. ಒಂದು ಸಾರ್ವಜನಿಕ ಕಬ್ರುಸ್ಥಾನ ಇದೊಂದು ವಕ್ಫ್ ಆಗಿರುತ್ತದೆ. ಭಾರತದ ಪ್ರತಿಯೊಂದು ಪ್ರಮುಖ ನಗರದಲ್ಲಿ ಮುಸ್ಲಿಮ್ ಕಬ್ರುಸ್ಥಾನಗಳನ್ನು ನಾವು ಕಾಣಬಹುದು ಮತ್ತು ಸಾಮಾನ್ಯವಾಗಿ ಅವೆಲ್ಲಾ ವಕ್ಫ್‌ಗಳಾಗಿರುತ್ತವೆ. ಒಂದು ರುದ್ರಭೂಮಿಯು ಒಂದೇ ವ್ಯಕ್ತಿ ಸಮರ್ಪಣೆಯಿಂದಾಗಿ ಅಥವಾ ಸುಧೀರ್ಘಕಾಲದ ಉಪಯೋಗದಿಂದಾಗಿ ಒಂದು ವಕ್ಫ್ ಆಗಿರುತ್ತದೆ. ಒಂದು ಭೂಭಾಗವು ಸುಧೀರ್ಘಕಾಲದಿಂದ ಒಂದು ಸಾರ್ವಜನಿಕ ರುದ್ರಭೂಮಿಯಾಗಿ ಉಪಯೋಗಿಸಲ್ಪಡುತ್ತಿತ್ತೆಂದಾದರೆ ಅದು ಒಂದು ಸಾರ್ವಜನಿಕ ಸ್ವತ್ತಾಗಿಯೇ ಉಳಿಯುತ್ತದೆ, ಮತ್ತು ತುಂಬಾ ಕಾಲದಿಂದ ಅಲ್ಲಿ ದಹನಕ್ರಿಯೆಯು ನಡೆಯುತ್ತಿದ್ದಿಲ್ಲವೆಂದಾದರೂ ಸಹ ಅದೊಂದು ವಕ್ಫ್ ಆಗಿಯೇ ಮುಂದುವರಿಯುತ್ತದೆ. ಒಂದು ಸಾರ್ವಜಸಿಕ ರುದ್ರಭೂಮಿಯು ಒಮ್ಮೆ ನಿರ್ಮಿಸಲ್ಪಟ್ಟರೆ ಸಾಕು, ಆ ಬಳಿಕ ಅಲ್ಲಿ ದಹನ ಕ್ರಿಯೆ ನಡೆಯುವುದಿಲ್ಲ ಮತ್ತು ಅಲ್ಲಿ ದಹನ ಮಾಡಿದ ಬಗ್ಗೆ ಯಾವತ್ತೂ ಕುರುಹು ಕಾಣಸಿಗುವುದಿಲ್ಲ. ಅಲ್ಲಿ ಒಂದು ಎಲುಬಿನ ತುಂಡೂ ಸಹ ಕಾಣಸಿಗುವುದಿಲ್ಲವೆಂದಾದರೂ ಸಹ ಅದೊಂದು ಸಾರ್ವಜನಿಕ ರುದ್ರಭೂಮಿಯಾಗಿಯೇ ಮುಂದುವರಿಯುತ್ತದೆ.

ಅಧ್ಯಾಯ 13

ಪೂರ್ವ ಕ್ರಯಾಧಿಕಾರ
(Pre-Emption)

ಪ್ರಸ್ತಾವನೆ

ಪೂರ್ವ ಕ್ರಯಾಧಿಕಾರವು ಒಂದು ಹಕ್ಕಾಗಿರುತ್ತದೆ. ಈ ಹಕ್ಕಿನ ಪ್ರಕಾರ ಒಂದು ಸ್ಥಿರ ಸ್ವತ್ತಿನ ಒಬ್ಬ ಸ್ವಾಮಿಯು ತನ್ನ ಸ್ವತ್ತಿಗೆ ತಾಗಿಕೊಂಡಿರುವ ಇನ್ನೊಂದು ಸ್ವತ್ತು ಮತ್ತೊಬ್ಬನಿಗೆ ಮಾರಲ್ಪಟ್ಟಿದ್ದರೂ ಸಹ ಅದನ್ನು ಮರಳಿ ಖರೀದಿ ಮಾಡಲು ಹಕ್ಕುದಾರನಾಗಿರುವನು. ಈ ಹಕ್ಕಿನ ಚಲಾವಣೆ ಮಾಡಿ ಒಂದು ಸ್ಥಿರ ಸ್ವತ್ತಿನ ಸ್ವಾಮಿತ್ವವನ್ನು ಹೊಂದಿರುವ ಒಬ್ಬ ವ್ಯಕ್ತಿಯು ತನ್ನ ಸ್ವತ್ತಿಗೆ ತಾಗಿ ಕೊಂಡಿರುವ ಇನ್ನೊಂದು ಸ್ಥಿರ ಸ್ವತ್ತನ್ನು ಖರೀದಿ ಮಾಡುವ ವ್ಯಕ್ತಿಯು ಅದೇ ಬೆಲೆಗೆ ತನಗೆ ಮಾರಾಟ ಮಾಡುವಂತೆ ಅವನನ್ನು ಒತ್ತಾಯಿಸಬಹುದು. ಇದು ಒಂದು ಸ್ಥಿರ ಸ್ವತ್ತಿನ ಒಬ್ಬ ಸ್ವಾಮಿಯಲ್ಲಿರುವ ಆದ್ಯತಾ ಹಕ್ಕಾಗಿದ್ದು ಅವನು ಈ ಹಕ್ಕಿನ ಪ್ರಕಾರ ತನ್ನ ಸ್ಥಿರ ಸ್ವತ್ತಿಗೆ ತಾಗಿಕೊಂಡಿರುವ ಒಂದು ಸ್ಥಿರ ಸ್ವತ್ತನ್ನು ಕಡ್ಡಾಯವಾಗಿ ಖರೀದಿ ಮಾಡಬಹುದು. ಈ ಹಕ್ಕಿನ ಸಾಧನೆ ಮಾಡುವ ವ್ಯಕ್ತಿಯನ್ನು ಒಬ್ಬ ಪೂರ್ವಕ್ರಯಾಧಿಕಾರಿ ಅಥವಾ ಷುಫೀ (Shufee) ಎಂಬುದಾಗಿ ಕರೆಯಬಹುದು.

ಭಾರತದಲ್ಲಿ ಪೂರ್ವಕ್ರಯಾಧಿಕಾರದ ಪದ್ಧತಿಯು ಮೊಗಲರಿಂದ ಬಳಕೆಗೆ ಬಂದಿತ್ತೆಂದು ಹೇಳಲಾಗುತ್ತದೆ. ಮುಸ್ಲಿಮ್ ಕಾನೂನಿನ ಪದ್ಧತಿಯ ಪ್ರಕಾರ ಇಡೀ ದೇಶಕ್ಕೆ ಮುಸ್ಲಿಮ್ ಕಾನೂನನ್ನು ಜಾರಿಗೊಳಿಸಲಾಯಿತು. ಮತ್ತು ಅದೊಂದು ಸಾಮಾನ್ಯ ಕಾನೂನು ಎಂಬುದಾಗಿ ಎಣಿಸಲಾಗಿತ್ತು. ಮುಸ್ಲಿಮ್ ಕಾನೂನಿನ ಒಂದು ಭಾಗದ ರೀತಿಯಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ಸಾರ್ವತ್ರಿಕ ವಾಗಿ ಅನ್ವಯವಾಯಿತು. ಈ ಹಕ್ಕು ಮುಸಲ್ಮಾನರಿಗೆ ಹಾಗೂ ಹಿಂದುಗಳಿಗೆ ಸಿಗತೊಡಗಿತು. ಈ ಹಕ್ಕಿನ ಅನ್ವಯದ ಬಗ್ಗೆ ಮುಸ್ಲಿಮ್ ಕಾನೂನು ಮುಸ್ಲಿಮ್ ಮತ್ತು ಮುಸಲ್ಮಾನೇತರರೊಳಗೆ ಯಾವುದೇ ರೀತಿಯ ವ್ಯತ್ಯಾಸವನ್ನು ಕಲ್ಪಿಸುವುದಿಲ್ಲ. ಅದಲ್ಲದೆ ಪೂರ್ವಕ್ರಯಾಧಿಕಾರದ ಮುಸ್ಲಿಮ್ ಕಾನೂನು ಭಾರತದಲ್ಲಿ ತುಂಬಾ ಜನಪ್ರಿಯವಾಯಿತು. ಏಕೆಂದರೆ ಇದು ಹಿಂದುಗಳ ಅವಿಭಕ್ತ ಕುಟುಂಬ ಪದ್ಧತಿಗಳಿಗೆ ಮತ್ತು ಗ್ರಾಮೀಣ ಜೀವನಕ್ಕೆ ತುಂಬಾ ಅನುಕೂಲವಾಗಿತ್ತು. ಆದುದರಿಂದ

ಹಿಂದುಗಳು ಅತಿ ಶೀಘ್ರದಲ್ಲಿ ಇದನ್ನು ಸ್ವೀಕರಿಸಿದರು. ಬ್ರಿಟಿಷರು ಭಾರತಕ್ಕೆ ಬಂದಾಗ ಭಾರತದಲ್ಲಿ ಎಲ್ಲಾ ವರ್ಗಗಳ ಜನರಲ್ಲೂ ಈ ಪದ್ಧತಿಯು ಬಳಕೆಯಲ್ಲಿತ್ತು. ಆದುದರಿಂದ ಬ್ರಿಟಿಷ್ ಆಡಳಿತವು ಈ ಪದ್ಧತಿಯಲ್ಲಿ ಯಾವತ್ತೂ ಬದಲಾವಣೆ ಮಾಡದೆ ಇವುಗಳ ಬಗ್ಗೆ ಅಧಿನಿಯಮ ಮಾಡಿ ಇವನ್ನು ಅವರ ಕಾನೂನಿನೊಳಗೆ ಸೇರಿಸಿಕೊಂಡರು.

ಪರಿಭಾಷೆ (I ‹ f ı iı

ಪೂರ್ವಕ್ರಯಾಧಿಕಾರವನ್ನು ಮುಲ್ಲಾರವರು ಈ ಕೆಳಗಿನ ಶಬ್ದಗಳಲ್ಲಿ ಪರಿಭಾಷೆ ಸಿರುವರು.

'ಷುಫಾ' ಅಥವಾ ಪೂರ್ವಕ್ರಯಾಧಿಕಾರ ಇದರ ಹಕ್ಕು ಒಂದು ಸ್ಥಿರ ಸ್ವತ್ತಿನ ಸ್ವಾಮಿಯು ಇನ್ನೊಬ್ಬ ವ್ಯಕ್ತಿಗೆ ಮಾರಾಟ ಮಾಡಲ್ಪಟ್ಟಿರುವ ಇನ್ನೊಂದು ಸ್ಥಿರ ಸ್ವತ್ತನ್ನು ಖರೀದಿ ಮಾಡಿ ಪಡೆದುಕೊಳ್ಳಲು ಹೊಂದಿರುವ ಹಕ್ಕಾಗಿರುತ್ತದೆ.

ಮೇಲಿನ ಪರಿಭಾಷೆಯನ್ನು ವಿಶ್ಲೇಷಿಸಿದರೆ ಪೂರ್ವಕ್ರಯಾಧಿಕಾರದ ಒಂದು ಹಕ್ಕಿನಲ್ಲಿ ಈ ಕೆಳಗಿನ ಅಂಶಗಳನ್ನು ಕಾಣಬಹುದು ;

i) ಪೂರ್ವಕ್ರಯಾಧಿಕಾರದ ಒಂದು ಹಕ್ಕು ಒಂದು ಸ್ಥಿರಸ್ವತ್ತಿನ ಸ್ವಾಮಿಗೆ ಸಿಗುತ್ತದೆ.

ii) ಈ ಹಕ್ಕಿನ ಪ್ರಕಾರ ಒಂದು ಸ್ಥಿರ ಸ್ವತ್ತಿನ ಸ್ವಾಮಿಯು ಅವನ ಸ್ವತ್ತಿಗೆ ತಾಗಿಕೊಂಡಿರುವ ಇನ್ನೊಂದು ಸ್ಥಿರಸ್ವತ್ತಿನ ಖರೀದಿಗಾರನ ಸ್ಥಾನದಲ್ಲಿ ತನ್ನನ್ನು ತಾನು ಪ್ರತಿಸ್ಥಾಪಿಸುವಂತೆ ಹಕ್ಕುದಾವೆ ಮಾಡಬಹುದು.

iii) ಈ ಹಕ್ಕಿಗಾಗಿ ಅಧಿಕಾರ ಸಾಧನೆ ಮಾಡುವ ವ್ಯಕ್ತಿಯು ಆ ಸ್ವತ್ತು ಯಾವ ಬೆಲೆಗೆ ಮತ್ತು ಯಾವ ಷರತ್ತುಗಳ ಮೇರೆಗೆ ಮಾಡಲ್ಪಟ್ಟಿದೆಯೋ ಅದೇ ಬೆಲೆ ಮತ್ತು ಅದೇ ಷರತ್ತುಗಳಿಗೆ ಆ ಸ್ವತ್ತನ್ನು ಮರಳಿ ಖರೀದಿಮಾಡಲು ಹಕ್ಕುಳ್ಳನಾಗುವನು.

iv) ಪೂರ್ವಕ್ರಯಾಧಿಕಾರದ ಒಂದು ಹಕ್ಕು ಒಂದು ವಿಶೇಷ ಅಧಿಕಾರದ ರೀತಿಯಲ್ಲಿದ್ದು ಅದು ಒಂದು ಸ್ಥಿರಸ್ವತಿನ ಶಾಂತ ಅನುಭೋಗಕ್ಕಾಗಿ ಇರುತ್ತದೆ.

v) ಅದೊಂದು ಸ್ವಾಮಿತ್ವದ ಹಕ್ಕಾಗಿದ್ದು ಅದನ್ನು ಯಾವುದೇ ಧರ್ಮ, ಜಾತಿ ಅಥವಾ ವರ್ಗದ ಖರೀದಿಗಾರನ ವಿರುದ್ಧ ಜಾರಿ ಮಾಡಬಹುದು.

ಸೀತಾರಾಮ್ ಭಾವರಾವ್ ವಿ. ಸಯ್ಯದ್ ಜೇವಾಲ್ ಹುಸೇನ್ ಖಾನ್ (Sitaram Bhavrao v. Syed Jaival Husain Khan) ಪ್ರಕರಣದಲ್ಲಿ ಪ್ರಿವೀ ಕೌನ್ಸಿಲ್ ಕೊಟ್ಟಿರುವ ತೀರ್ಪು ಈ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ಆ ಪ್ರಕರಣವು ಈ ಕೆಳಗಿನಂತಿದೆ.

ಸೀತಾರಾಮ್ ಭಾವರಾವ್ ವಿ. ಸಯ್ಯದ್ ಜೈವಾಲ್ ಹುಸೇನ್ ಖಾನ್
Sitaram Bhavarao V. Syed Jaival Husein Khan

ಸಿದ್ಧಾಂತ

ಪೂರ್ವ ಕ್ರಯಾಧಿಕಾರದ ಹಕ್ಕೆಂದರೆ ಕಡ್ಡಾಯವಾಗಿ ಖರೀದಿಮಾಡಿ ಪಡೆಯುವ ಒಂದು ಹಕ್ಕಾಗಿರುತ್ತದೆ. ಇದು ಒಂದು ಸ್ಥಿರ ಸ್ವತ್ತಿಗೆ ಸಂಬಂಧ ಪಟ್ಟುದಾಗಿದ್ದು ಇದು ಒಬ್ಬ ಮೂರನೇ ಖರೀದಿದಾರನ ಮೇಲೆ ಆದ್ಯತೆಯನ್ನು ಪಡೆಯುತ್ತದೆ. ಪೂರ್ವ ಕ್ರಯಾಧಿಕಾರದ ಹಕ್ಕು ಒಂದು ಪೂರ್ಣಗೊಂಡ ಹಾಗೂ ಸದ್ಭಾವಯುಕ್ತ ವಿಕ್ರಯದ ಬಗ್ಗೆ ಮಾತ್ರ ಬರುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಒಂದು ನೋಂದಾಯಿಸಲ್ಪಟ್ಟ ಪತ್ರವು ಪೂರ್ಣಗೊಳ್ಳುವುದಕ್ಕಿಂತ ಮೊದಲೇ ಒಂದು ವಿಕ್ರಯವು ಪೂರ್ಣಗೊಳ್ಳುತ್ತದೆ, ಆದರೆ ಸ್ವತ್ತು ಹಸ್ತಾಂತರಣ ಅಧಿನಿಯಮ ಇದರ ಕ. 54ರ ಪ್ರಕಾರ ಒಂದು ಸ್ಥಿರ ಸ್ವತ್ತಿನ ವಿಕ್ರಯವು ರೂ. 100ಕ್ಕಿಂತ ಹೆಚ್ಚು ಮೌಲ್ಯವುಳ್ಳದ್ದಾಗಿದ್ದರೆ ಅದನ್ನು ಒಂದು ನೋಂದಾಯಿಸಲ್ಪಟ್ಟ ಪತ್ರದಿಂದ ಪೂರ್ಣ ಗೊಳಿಸಬೇಕಾಗುತ್ತದೆ. ಪೂರ್ವಕ್ರಯಾಧಿಕಾರದ ಉದ್ದೇಶಕ್ಕಾಗಿ ಒಂದು ವಿಕ್ರಯವು ಪೂರ್ಣಗೊಂಡಿದೆಯೊ ಇಲ್ಲವೆಂಬುದನ್ನು ನಿರ್ಣಯಿಸಬೇಕಾದರೆ ಅಲ್ಲಿ ಮಾರಾಟಗಾರ ಮತ್ತು ಖರೀದಿಗಾರ ಇವರು ಯಾವ ಕಾನೂನನ್ನು ಅನ್ವಯ ಮಾಡುವ ಬಗ್ಗೆ ಅಲ್ಲಿ ಉದ್ದೇಶಪಟ್ಟಿದ್ದರೆಂಬುದನ್ನು ಗಮನಿಸಬೇಕಾಗುತ್ತದೆ.

ವಸ್ತು ಸ್ಥಿತಿ

1908ರ ಅಕ್ಟೋಬರ್ ತಿಂಗಳಲ್ಲಿ ವಾದಿ ಮತ್ತು ಅವನ ಸೋದರಳಿಯ ಇವರಿಬ್ಬರಿಗೂ ಎರಡು ಗ್ರಾಮಗಳ ಸಹಪಾಲಿನ ಹಕ್ಕನ್ನು ಪಡೆದರು. ವಾದಿಗೆ ಅಲ್ಲಿ ನಾಲ್ಕನೇ ಮೂರರಷ್ಟು ಅವಿಭಕ್ತವಾದ ಪಾಲಿತ್ತು ಮತ್ತು ಆ ಸೋದರಳಿಯ ನಿಗೆ ಉಳಿದ ನಾಲ್ಕನೇ ಒಂದಂಶದಷ್ಟು ಅವಿಭಕ್ತ ಪಾಲಿತ್ತು.

1908ರ ಅಕ್ಟೋಬರ 14ರಂದು ಆ ಸೋದರಳಿಯನು ಮನವಿದಾರರಿಗೆ ತನ್ನ ಹಕ್ಕನ್ನು ಮಾರಾಟ ಮಾಡಿದನು ಮತ್ತು ಆ ಖರೀದಿಗಾರರು ಹಿಂದುಗಳಾಗಿ ದ್ದರು. ಆ ವಿಕ್ರಯದ ದಸ್ತಾವೇಜನ್ನು ಆ ಪಕ್ಷಗಾರರು ಒಂದು ವಿಕ್ರಯದ ಒಪ್ಪಂದದ ದಸ್ತಾವೇಜು ಎಂಬುದಾಗಿ ಕರೆದರು. ಮತ್ತು ಆ ಸೋದರಳಿಯನು ಆ ಎರಡು ಗ್ರಾಮಗಳಲ್ಲಿ ನಾಲ್ಕನೇ ಒಂದಂಶ ಪಾಲನ್ನು ಪಡೆದವನಾದುದರಿಂದ ಆ ಮನವಿದಾರರ ಸಮೇತ ಕೆಲವು ವ್ಯಕ್ತಿಗಳು ಆ ಪಾಲನ್ನು ರೂ. 29,999ಕ್ಕೆ ಖರೀದಿ ಮಾಡಲು ಒಪ್ಪಿಕೊಂಡರು. ಈ ಒಪ್ಪಂದದ ಕಾಲದಲ್ಲಿ ಅವರು ಆ ಖರೀದಿ ಹಣದಲ್ಲಿ ಒಂದು ಭಾಗವನ್ನಷ್ಟನ್ನೇ ಸಂದಾಯ ಮಾಡಿ ಅಂತಿಮ ದಸ್ತಾವೇಜು ನಿಷ್ಪಾದನೆಯಾಗುವ ಕಾಲದಲ್ಲಿ ಉಳಿದ ಹಣವನ್ನು ಸಂದಾಯ ಮಾಡುವದೆಂದು ಒಪ್ಪಿಕೊಂಡರು. ಆ ಬಳಿಕ ಆ ಸೋದರಳಿಯನು ಅಕ್ಟೋಬರ 14,1908ರಂದು

ತನ್ನ ಸೋದರ ಮಾವನಿಗೆ ಒಂದು ಪತ್ರ ಬರೆದು ಆ ಸ್ವತ್ತನ್ನು ರೂ. 29,999ಕ್ಕೆ ಅವನು ಖರೀದಿಮಾಡಲು ಇಚ್ಛಿಸಿರುವನೊ ಎಂಬುದಾಗಿ ಕೇಳಿಕೊಂಡಿರುವನು. ಒಂದೊಮ್ಮೆ ಅವನು ಸೋದರಮಾವನಿಗೆ ಅದನ್ನು ಖರೀದಿಮಾಡುವ ಆಸಕ್ತಿಯಿದ್ದರೆ ಅವನು ಆ ಪತ್ರ ಕಂಡ ತಕ್ಷಣದಲ್ಲಿ ಹಣವನ್ನು ಕಳಿಸಿಕೊಡಬೇಕು ಇಲ್ಲವಾದರೆ ಅದು ತಲುಪಿ ಎರಡು ದಿನಗಳ ಬಳಿಕ ಅವನು ಆ ಸ್ವತ್ತನ್ನು ಇತರರಿಗೆ ಮಾರಾಟ ಮಾಡುವನೆಂದು ತಿಳಿಸಿದನು.

1908 ರ ಅಕ್ಟೋಬರ್ 17 ರಂದು ಆ ಸೋದರ ಮಾವನು ತನ್ನ ವಕೀಲನ ಮುಖಾಂತರ ಆ ಮಾರಾಟಗಾರನಿಗೆ ಒಂದು ಸೂಚನೆ ಕೊಟ್ಟನು ಮತ್ತು ಆಸ್ವತ್ತನ್ನು ಖರೀದಿ ಮಾಡುವ ಉದ್ದೇಶವು ತನಗಿದೆ ಹಾಗೂ ಆದರೆ ಖರೀದಿಗಾರನ ವಿಳಾಸ ಕೊಟ್ಟು ಆ ದಸ್ತಾವೇಜನ್ನು ಪರಿಶೀಲಿಸಲು ತನಗೆ ಅವಕಾಶಕೊಡಬೇಕೆಂದು ಕೇಳಿಕೊಂಡನು. ಆದರೆ ತನ್ನ ಸೋದರಮಾವನು ತಾನು ಕಳಿಸಿರುವ ಪ್ರಸ್ತಾವಕ್ಕೆ ಯಾವುದೇ ಉತ್ತರ ಕೊಟ್ಟಿಲ್ಲವೆಂಬ ಕಾರಣದಿಂದ ಅವನು ತನ್ನ ಹಳೆಯ ವ್ಯವಹಾರವನ್ನು ಮುಂದುವರಿಸತೊಡಗಿದನು.

ಆ ಸೋದರ ಮಾವನು ಮೃತನಾದ ಬಳಿಕ ಅವನ ಆಡಳಿತಗಾರನು ಆ ಭೂಮಿಯನ್ನು ಮರಳಿ ಪಡೆಯುವುದಕ್ಕೋಸ್ಕರ ಆ ಹಿಂದೂ ಖರೀದಿಗಾರನ ವಿರುದ್ಧ ಒಂದು ದಾವೆ ಹೂಡಿದನು.

ಸಬೊರ್ಡಿನೇಟ್ ನ್ಯಾಯಾಲಯದಲ್ಲಿ ಕೊಡಲಾದ ತೀರ್ಪಿನ ಪ್ರಕಾರ ಆ ಸೋದರ ಮಾವನಿಗೆ ಇಲ್ಲಿ ಪೂರ್ವಕ್ರಯಾಧಿಕಾರದ ಹಕ್ಕಿರುತ್ತದೆ. ಆದುದರಿಂದ ಸೀತಾರಾಮ್ ಇವನು ಪ್ರೀವಿ ಕೌನ್ಸಿಲಿಗೆ ಮನವಿ ಸಲ್ಲಿಸಿದನು.

ತೀರ್ಪು :

ಈ ಮನವಿಯನ್ನು ಕಿತ್ತು ಹಾಕಿ ಪ್ರೀವಿ ಕಾನ್ಸಿಲ್ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತ ಪಡಿಸಿತು;

ಮನವಿದಾರರು ಈ ಪ್ರತಿವಾದಿಗಳ ಪರವಾಗಿ ಪೂರ್ವಕ್ರಯಾಧಿಕಾರದ ಹಕ್ಕನ್ನು ಸಮ್ಮತಿಸಿರುವರು, ಮತ್ತು ಈ ಪ್ರತಿವಾದಿಯು ತನ್ನ ಪೂರ್ವಕ್ರಯಾಧಿಕಾರದ ಹಕ್ಕನ್ನು ಚಲಾಯಿಸುವ ಬಗ್ಗೆ ತನ್ನ ಉದ್ದೇಶವನ್ನು ವ್ಯಕ್ತಪಡಿಸಿದ್ದನು. ಆದುದರಿಂದ ಈ ಮನವಿದಾರರು ಅದಕ್ಕೆ ಬಾಧ್ಯರಾಗಿರುವರು. ಪೂರ್ವಕ್ರಯಾಧಿಕಾರದ ಹಕ್ಕನ್ನು ಒಂದು ವಿಕ್ರಯವು ಮುಗಿದ ಬಳಿಕ ಚಲಾಯಿಸಬೇಕಾಗುತ್ತದೆ; ಆದುದರಿಂದ 1908 ರ ಅಕ್ಟೋಬರ್ 17 ರಂದು ಕೊಡಲಾದ ಆ ಸೂಚನೆಯು ಸೋದರ ಮಾವನಿಂದ ಚಲಾಯಿಸಲ್ಪಟ್ಟಿರುವ ಒಂದು ಕ್ರಮಬದ್ಧವಾದ ಕಾನೂನೀ ಹಕ್ಕು ಎಂಬುದಾಗಿ ಎಣಿಸಲ್ಪಡುತ್ತದೆ.

ಪೂರ್ವ ಕ್ರಯಾಧಿಕಾರದ ಅನ್ವಯ

(Application of Pre-Emption)

ಈ ಹಕ್ಕಿನ ಅಸ್ತಿತ್ವ : ಇದನ್ನು ಯಾರಿಗೆ ಅನ್ವಯಗೊಳಿಸಬಹುದು ?
(Existence of the Right : to whom applicable ?)

ಪೂರ್ವಕ್ರಯಾಧಿಕಾರದ ಕಾನೂನಿನಿಂದ ಅನ್ವಯಿಸಲ್ಪಡುವ ಯಾವನೇ ಒಬ್ಬ ವ್ಯಕ್ತಿಯು ಈ ಹಕ್ಕನ್ನು ಪಡೆಯಬಹುದು. ಒಂದೊಮ್ಮೆ ಪೂರ್ವಕ್ರಯಾಧಿಕಾರದ ಕಾನೂನು ಒಬ್ಬ ವ್ಯಕ್ತಿಗೆ ಅನ್ವಯವಾಗುವುದಿಲ್ಲವೆಂದಾದರೆ ಅಂತಹ ವ್ಯಕ್ತಿಯು ಈ ಹಕ್ಕಿಗಾಗಿ ಅಧಿಕಾರ ಸಾಧನೆ ಮಾಡುವಂತಿಲ್ಲ ಮತ್ತು ಅವನ ಪರವಾಗಿ ಈ ಹಕ್ಕು ಅಸ್ತಿತ್ವದಲ್ಲಿರುವುದಿಲ್ಲ. ಭಾರತದಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ಈ ಕೆಳಗಿನ ಕಾರಣಗಳ ಮೇಲೆ ಯಾವನೇ ಒಬ್ಬ ವ್ಯಕ್ತಿಗೆ ಅನ್ವಯವಾಗಬಹುದು :

(i) ನೀತಿ ಸಮ್ಮತತೆ ಮತ್ತು ನ್ಯಾಯ ಇವುಗಳ ಕಾರಣದ ಮೇಲೆ ಪೂರ್ವ ಕ್ರಯಾಧಿಕಾರದ ಕಾನೂನು ತಮಿಳುನಾಡು ರಾಜ್ಯದ ಮುಸಲ್ಮಾನರ ಹೊರತಾಗಿ ಭಾರತದ ಎಲ್ಲಾ ಮುಸಲ್ಮಾನರಿಗೆ ಅನ್ವಯವಾಗುತ್ತದೆ. ಪೂರ್ವಕ್ರಯಾಧಿಕಾರದ ಹಕ್ಕು ಮೂಲತಃ ಮುಸ್ಲಿಮ್ ಮತೀಯ ಕಾನೂನಿನ ಒಂದು ಭಾಗವಾಗಿರುತ್ತದೆ; ಆದುದರಿಂದ ನೀತಿ ಸಮ್ಮತತೆ ಮತ್ತು ನ್ಯಾಯ ಇವುಗಳ ಮೇರೆಗೆ ಈ ಹಕ್ಕು ಪ್ರತಿಯೊಬ್ಬ ಮುಸಲ್ಮಾನನಿಗೆ ಸಿಗಬೇಕಾಗುತ್ತದೆ. ಆದರೆ ಪೂರ್ವಕ್ರಯಾಧಿಕಾರದ ಕಾನೂನು ತಮಿಳುನಾಡಿನ ಮುಸಲ್ಮಾನರಿಗೆ ನೀತಿ ಸಮ್ಮತತೆಯ ಮೇರೆಗೆ ಅನ್ವಯವಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ 1870 ರಲ್ಲಿ ಮದ್ರಾಸ್ ಉಚ್ಚನ್ಯಾಯಾಲಯವು 'ಇಬ್ರಾಹಿಂ ವಿ. ಮುನಿ ಮೀರ್ ಉದ್ದೀನ್' ಪ್ರಕರಣದಲ್ಲಿ ಕೊಟ್ಟ ತೀರ್ಪಿನಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ಸ್ವತ್ತಿನ ಹಸ್ತಾಂತರಣದ ಸ್ವಾತಂತ್ರ್ಯದ ಮೇಲೆ ನಿಬಂಧನೆಗಳನ್ನು ಹೇರುವದೆಂದು ಹೇಳಿದೆ: ಆದುದರಿಂದ ಇದು ನೀತಿ ಸಮ್ಮತತೆ, ನ್ಯಾಯ ಮತ್ತು ಸದ್ಭಾವನೆಗೆ ವಿರೋಧವಾಗಿರುತ್ತದೆ ಮತ್ತು ಈ ಆಧಾರದ ಮೇಲೆ ಇದರ ಅನ್ವಯವು ಆಯುಕ್ತವಾಗಿರುತ್ತದೆ. ಇದರ ಬಳಿಕ ಪೂರ್ವಕ್ರಯಾಧಿಕಾರದ ಹಕ್ಕು ತಮಿಳುನಾಡಿನಲ್ಲಿ ಮನ್ನಿಸಲ್ಪಟ್ಟಿಲ್ಲ. ಆದರೆ ಈ ರಾಜ್ಯದಲ್ಲಿ ಯಾವತ್ತೂ ಕ್ಷೇತ್ರೀಯ ರೂಢಿಯ ಪ್ರಕಾರ ಪೂರ್ವಕ್ರಯಾಧಿಕಾರದ ಹಕ್ಕಿಗಾಗಿ ಒಂದು ಅಧಿಕಾರ ಸಾಧನೆ ಮಾಡಬಹುದು. ಇಂತಹ ಒಂದು ರೂಢಿಯು ಮಲಬಾರ್ ಪ್ರದೇಶದ ಮುಸಲ್ಮಾನರೊಳಗೆ ಬಳಕೆಯಲ್ಲಿತ್ತು.

(ii) ರೂಢಿಗತ ಕಾನೂನಿನ ಪ್ರಕಾರ ಪೂರ್ವ ಕ್ರಯಾಧಿಕಾರದ ಸಿದ್ಧಾಂತವನ್ನು ಬಿಹಾರ, ಸಿಲಹೆಡ್ ಮತ್ತು ಗುಜರಾಥ್ ಇಲ್ಲಿಯ ಕೆಲವು ಭಾಗಗಳ ಹಿಂದುಗಳಿಗೆ ಅನ್ವಯ ಮಾಡಬಹುದು. ಹಿಂದುಗಳಲ್ಲಿ ವಿಕಸಿತಗೊಂಡ ಪೂರ್ವ ಕ್ರಯಾಧಿಕಾರದ ಈ ಪದ್ಧತಿಯು ಸ್ವಲ್ಪ ಮಟ್ಟಿನ ಮಾರ್ಪಾಡುಗಳೊಂದಿಗೆ ಇದು ಹನಫೀ ಕಾನೂನಿನ ಪೂರ್ವಕ್ರಯಾಧಿಕಾರದ ಪದ್ಧತಿಯಾಗಿದೆ. ಬ್ರಿಟೀಷ್ ಕಾಲದ ಭಾರತದ

ನ್ಯಾಯಾಲಯಗಳು ಹಿಂದುಗಳಲ್ಲಿರುವ ಪೂರ್ವಕ್ರಯಾಧಿಕಾರದ ಪದ್ಧತಿಯನ್ನು ಕೇವಲ ಒಂದು ರೂಢಿ ಎಂಬುದಾಗಿ ಮನ್ನಿಸಿವೆ. ಹಿಂದುಗಳ ಈ ಹಕ್ಕನ್ನು ಅವರು ಹಿಂದುಗಳ ಮತೀಯ ಕಾನೂನಿನ ಅಥವಾ ಈ ದೇಶದ ಕಾನೂನಿನ ಒಂದು ಭಾಗವೆಂಬುದಾಗಿ ಎಣಿಸಿರಲಿಲ್ಲ. ಆದ್ದರಿಂದ ರೂಢಿಯ ಆಧಾರದ ಮೇಲೆ ಪೂರ್ವಕ್ರಯಾಧಿಕಾರದ ಹಕ್ಕು ಕೇವಲ ಬಿಹಾರ್, ಸಿಲ್‌ಹೆಡ್ ಅಥವಾ ಗುಜರಾಥ ಪ್ರದೇಶದ ನಿವಾಸಿಗಳಾಗಿರದ ವ್ಯಕ್ತಿಗಳಿಗೆ ಮಾತ್ರ ಸಿಗುತ್ತದೆ. ಒಂದೊವ್ಮೆ ಒಬ್ಬ ಹಿಂದುವು ಬಿಹಾರ್‌ನಲ್ಲಿ ಹುಟ್ಟಿದವನಾಗಿದ್ದು ಅವನು ಇನ್ನೊಂದು ಪ್ರದೇಶಕ್ಕೆ ಹೋಗಿ ಅಲ್ಲಿ ವಾಸಿಸತೊಡಗಿದರೆ ಮತ್ತು ಅವನು ವಾಸಿಸುತ್ತಿರುವ ಈ ಪ್ರದೇಶದಲ್ಲಿ ಪೂರ್ವಕ್ರಯಾಧಿಕಾರದ ರೂಢಿಯಿಲ್ಲವೆಂದಾದರೆ ಅವನಿಗೆ ಈ ಹಕ್ಕು ಸಿಗುವದಿಲ್ಲ. ಇದೇ ರೀತಿಯಲ್ಲಿ ಒವ್ಮೆ ಒಬ್ಬ ಹಿಂದುವು ಬಿಹಾರ್‌ನಲ್ಲಿ ವಾಸಿಸುತ್ತಿದ್ದು ಮತ್ತು ಅಲ್ಲಿ ಅವನಿಗೆ ಸ್ವಲ್ಪಸ್ಥಿರಸ್ವತ್ತಿದ್ದು ಅವನು ಅಲ್ಲಿ ಶಾಶ್ವತವಾಗಿ ಜೀವಿಸುತ್ತಿಲ್ಲವೆಂದಾದರೆ ಅವನು ರೂಢಿಗತ ಕಾನೂನಿನ ಮೇರೆಗೆ ಈ ಹಕ್ಕನ್ನು ಪಡೆಯುವಂತಿಲ್ಲ.

(iii) ವಿಶೇಷ ಅಧಿನಿಯಮಗಳ ಪ್ರಕಾರ ಅಂತಹ ಅಧಿನಿಯಮಗಳು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಪೂರ್ವಕ್ರಯಾಧಿಕಾರದ ಕಾನೂನು ಮುಸಲ್ಮಾನರಿಗೆ ಹಾಗೂ ಮುಸಲ್ಮಾನೇತರರಿಗೆ ಅನ್ವಯವಾಗುತ್ತದೆ. ಪೂರ್ವ ಕ್ರಯಾಧಿಕಾರದ ಕಾನೂನನ್ನು ಪರಿನಿಯಮಿತಗೊಳಿಸುವ ವಿಶೇಷ ಅಧಿನಿಯಮಗಳು ಈ ಕೆಳಗಿನವುಗಳಾಗಿವೆ :

ಎ) ಪಂಜಾಬ್ ಪೂರ್ವಕ್ರಯಾಧಿಕಾರ ಅಧಿನಿಯಮ 1913

ಬಿ) ಆಗ್ರಾ ಪೂರ್ವಕ್ರಯಾಧಿಕಾರದ ಅಧಿನಿಯಮ 1922, ಮತ್ತು ಅವಧ್ ಕಾನೂನುಗಳ ಅಧಿನಿಯಮ 1876,

ಸಿ) ಭೋಪಾಲ್ ಪೂರ್ವ ಕ್ರಯಾಧಿಕಾರದ ಅಧಿನಿಯಮ 1934, ಮತ್ತು ರೇವಾ ರಾಜ್ಯದ ಪೂರ್ವಕ್ರಯಾಧಿಕಾರದ ಅಧಿನಿಯಮ 1948,

ಡಿ) ರಾಜಸ್ಥಾನ ಪೂರ್ವಕ್ರಯಾಧಿಕಾರ ಅಧಿನಿಯಮ 1956

ಮೇಲಿನ ಅಧಿನಿಯಮಗಳ ಪ್ರಕಾರ ಪೂರ್ವ ಪ್ರಯಾಧಿಕಾರದ ಹಕ್ಕು ಮುಸಲ್ಮಾನರಿಗೆ ಹಾಗೂ ಮುಸಲ್ಮಾನೇತರರಿಗೆ ಸಮಾನವಾಗಿ ಅನ್ವಯವಾಗುತ್ತದೆ; ಆದುದರಿಂದ ಅಂತಹ ಪ್ರದೇಶಗಳಲ್ಲಿ ಪೂರ್ವಕ್ರಯಾಧಿಕಾರ ಒಂದು ರಾಜ್ಯ ಕ್ಷೇತ್ರೀಯ ಕಾನೂನಾಗಿದೆಯಲ್ಲದೆ ಅದೊಂದು ಮುಸ್ಲಿಮ್ ಮತೀಯ ಕಾನೂನಿನ ಭಾಗವಾಗಿಲ್ಲ. ಈ ಅಧಿನಿಯಮಗಳಲ್ಲಿ ಕೊಡಲಾದ ಪೂರ್ವ ಕ್ರಯಾಧಿಕಾರದ ಶಾಸನಬದ್ಧ ಕಾನೂನು ಮುಸ್ಲಿಮ್ ಕಾನೂನಿನ ಪ್ರಕಾರ ಬರುವ ಪೂರ್ವ ಕ್ರಯಾಧಿಕಾರದ ಕಾನೂನಿನಿಂದ ಭಿನ್ನವಾಗಿರುತ್ತದೆ. ಇದರ ಪರಿಣಾಮವಾಗಿ ಪೂರ್ವ ಕ್ರಯಾಧಿಕಾರದ ಮುಸ್ಲಿಮ್ ಕಾನೂನು ಒಂದು ರೂಢಿಯು ಹೊರತಾಗಿ ಈ ಕ್ಷೇತ್ರದ ಮುಸಲ್ಮಾನರಿಗೂ ಅನ್ವಯವಾಗುವುದಿಲ್ಲ.

(iv) ಒಂದು ರೂಢಿಗತ ಅಥವಾ ಶಾಸನಬದ್ಧ ಕಾನೂನು ಇಲ್ಲದಾಗ ಪೂರ್ವ ಕ್ರಯಾಧಿಕಾರದ ಒಂದು ಹಕ್ಕನ್ನು ಕರಾರಿನಿಂದ ನಿರ್ಮಿಸಬಹುದು. ಒಬ್ಬ ಮುಸಲ್ಮಾನೇತರನು ಒಬ್ಬ ಮುಸಲ್ಮಾನನನ್ನು ಒಂದು ಕರಾರಿನ ಮೂಲಕ ಪೂರ್ವ ಕ್ರಯಾಧಿಕಾರದ ಕಾನೂನಿಗೆ ಬಾಧ್ಯಗೊಳಿಸಬಹುದು. ಒಂದೊಮ್ಮೆ ಒಂದು ಕರಾರಿನ ಮೂಲಕ ಪೂರ್ವ ಕ್ರಯಾಧಿಕಾರವು ಅನ್ವಯಿಸಲ್ಪಡುವುದಾದರೆ ಅಲ್ಲಿ ಆ ಹಕ್ಕು ಆ ಕರಾರಿನ ನಿಬಂಧನೆಗಳಿಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಒಂದು ಕರಾರಿನ ಮೇಲೆ ಆಧಾರಿತವಾಗಿರುವ ಪೂರ್ವ ಕ್ರಯಾಧಿಕಾರವು ಮುಸ್ಲಿಮ್ ಮತೀಯ ಕಾನೂನಿನ ಮೇರೆಗೆ ಅನುಗುಣವಾಗಿರಬೇಕಾಗಿಲ್ಲ. ಅದೊಂದು ಸ್ವತಂತ್ರವಾದ ಹಕ್ಕಾಗಿರುತ್ತದೆ.

ಯಾವಾತನು ಪೂರ್ವಕ್ರಯಾಧಿಕಾರವನ್ನು ಮಾಡಬಹುದು : ಪೂರ್ವಕ್ರಯಾಧಿಕಾರಿಗಳ ವರ್ಗ

(Who can pre-Empti : Class of pre-Emptors)

ಪೂರ್ವಕ್ರಯಾಧಿಕಾರದ ಕಾನೂನು ಒಬ್ಬ ವ್ಯಕ್ತಿಗೆ ಅನ್ವಯವಾಗುವದೆಂಬುದು ಒಮ್ಮೆ ಸಿದ್ಧವಾದರೆ ಸಾಕು, ಆ ಬಳಿಕ ಅವನು ಈ ಹಕ್ಕನ್ನು ಚಲಾಯಿಸಬಹುದು. ಈ ಹಕ್ಕಿಗಾಗಿ ಹಕ್ಕು ದಾವೆ ಮಾಡಲು ಹಕ್ಕುಳ್ಳ ಒಬ್ಬ ವ್ಯಕ್ತಿಯು ಪೂರ್ವಕ್ರಯಾಧಿಕಾರಿಯೆಂಬುದಾಗಿ ಕರೆಯಲ್ಪಡುವನು. ಮುಸ್ಲಿಮ್ ಕಾನೂನಿನ ಪ್ರಕಾರ ಪೂರ್ವಕ್ರಯಾಧಿಕಾರಿಗಳನ್ನು ಮೂರು ವರ್ಗಗಳಲ್ಲಿ ವಿಭಜಿಸಲಾಗುತ್ತದೆ, ಆ ವರ್ಗಗಳನ್ನು ಆದ್ಯತೆಯ ಅನುಕ್ರಮಣದಲ್ಲಿ ಈ ಕೆಳಗೆ ಕೊಡಲಾಗಿದೆ. ಈ ಕೆಳಗಿನ ಯಾವುದಾದರೊಂದು ವರ್ಗಕ್ಕೆ ಸೇರದ ಒಬ್ಬ ವ್ಯಕ್ತಿಯು ಪೂರ್ವಕ್ರಯಾಧಿಕಾರವ ಹಕ್ಕು ಸಾಧಿಸೆಮಾಡುವಂತಿಲ್ಲ.

1) **ಸಹ ಪಾಲುದಾರ** (Shafi-I-Sharik)

ಒಬ್ಬನೇ ಪೂರ್ವಜನ ಸ್ವತ್ತುಗಳ ವಾರಸು ಪಡೆಯಲು ಹಕ್ಕುಳ್ಳ ವ್ಯಕ್ತಿಗಳನ್ನು ಸಹ ಪಾಲುದಾರರೆಂಬುದಾಗಿ ಕರೆಯಲಾಗುತ್ತದೆ. ಒಂದೊಮ್ಮೆ ಮಾರಾಟಗಾರ ಮತ್ತು ಪೂರ್ವಕ್ರಯಾಧಿಕಾರಿ ಇವರಿಬ್ಬರೂ ಸಹಪಾಲುದಾರರಾಗಿದ್ದರೆ ಅಲ್ಲಿ ಪೂರ್ವ ಕ್ರಯಾಧಿಕಾರಿಯನ್ನು ಒಬ್ಬ ಶಫಿ-ಆಯ್-ಶರಿಕ್ ಎಂಬುದಾಗಿ ಕರೆಯಲಾಗುತ್ತದೆ ಮತ್ತು ಅಂಥವನಿಗೆ ಯಾವನೇ ಒಬ್ಬ ಖರೀದಿಗಾರನ ವಿರುದ್ಧ ಪೂರ್ವಕ್ರಯಾಧಿಕಾರದ ಹಕ್ಕಿರುತ್ತದೆ. ಉದಾಹರಣೆಗಾಗಿ, ಸಹೋದರರು ಅಥವಾ ಇಬ್ಬರು ಸಹೋದರಿಯರು ಸಹಪಾಲುದಾರರಾಗಿರುವರು. ಅವರೊಳಗೆ ಯಾವನಾದರೊಬ್ಬನು ಅಥವಾ ಯಾವಳಾದರೊಬ್ಬಳು ತನ್ನ ಪಾಲನ್ನು ಮಾರಾಟಮಾಡಿದರೆ ಆ ಇನ್ನೊಬ್ಬನು ಅಥವಾ ಇನ್ನೊಬ್ಬಳು ಪೂರ್ವಕ್ರಯಾಧಿಕಾರಕ್ಕಾಗಿ ಹಕ್ಕುದಾವೆ ಮಾಡಬಹುದು.

2) ಉನ್ಮುಕ್ತಿಯಲ್ಲಿ ಭಾಗವಹಿಸುವವನು (Shafi-I-Khalit)

ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಒಂದು ಸಾಮಾನ್ಯ ವಿಶೇಷಾಧಿಕಾರವನ್ನು ಅನುಭೋಗಿಸುತ್ತಿರುವರೆಂದಾದರೆ ಅಂಥವರನ್ನು ಉನ್ಮುಕ್ತಿಗಳಲ್ಲಿ ಭಾಗವಹಿಸುವವರೆಂದು ಕರೆಯಲಾಗುತ್ತದೆ, ಇಂಥ ವ್ಯಕ್ತಿಗಳಿಂದ ಒಂದು ಮನೆಯು ಮಾರಾಟವಾದರೆ ಆ ಇತರ ಭಾಗವಹಿಸುವ ವ್ಯಕ್ತಿಗಳು ಪೂರ್ವಕ್ರಯಾಧಿಕಾರ ನಡೆಸಲು ಹಕ್ಕುಳ್ಳವರಾಗಿರುವರು. ಹೀಗೆ, ಒಂದು ನೀರೊಡ್ಡಿನ ಅನುಭೋಗದಲ್ಲಿ ಅನುಭೋಗದ ಸ್ವತ್ತನ್ನು ಪಡೆದವನು ಮತ್ತು ಅನುಭೋಗದ ಹಕ್ಕಿಗೆ ಒಳಪಟ್ಟಿರುವ ಸ್ವತ್ತನ್ನು ಹೊಂದಿದವನು ಇವರಿಬ್ಬರೂ ಶಫಿ-ಆಯ್-ಖಲೀಟ್ ಎಂಬುದಾಗಿ ಎಣಿಸಲ್ಪಡುವರು.

3) ಲಗತ್ತಾಗಿರುವ ಸ್ವತ್ತುಗಳಲ್ಲಿ ಸ್ವಾಮಿತ್ವವನ್ನು ಹೊಂದಿದವರು (Shafi-I-Zar)

ಒಂದು ಸ್ಥಿರ ಸ್ವತ್ತಿನ ನೆರೆಯಲ್ಲಿದ್ದು ಸ್ಥಿರಸ್ವತ್ತುಗಳ ಸ್ವಾಮಿತ್ವವನ್ನು ಹೊಂದಿರುವ ವ್ಯಕ್ತಿಗಳು ಸಾಮಿಪ್ಯದ ಆಧಾರದ ಮೇಲೆ ಪೂರ್ವಕ್ರಯಾಧಿಕಾರದ ಹಕ್ಕನ್ನು ಹೊಂದಿರುವ ವ್ಯಕ್ತಿಗಳಾಗುವರು, ಕೇವಲ ಸ್ವತ್ತುಗಳ ಸ್ವಾಮಿಗಳು ಪೂರ್ವಕ್ರಯಾಧಿಕಾರಿಗಳಾಗಿರುವರಲ್ಲದೆ ಅವರ ಭಾಡಿಗೆದಾರರಲ್ಲ. ಆದರೆ ಈ ಕಾರಣದ ಮೇಲೆ ಪೂರ್ವಕ್ರಯಾಧಿಕಾರದ ಹಕ್ಕು ಮನೆಗಳು, ತೋಟಗಳು ಮತ್ತು ಚಿಕ್ಕಪುಟ್ಟ ಭೂಭಾಗಗಳ ಸಂಬಂಧದಲ್ಲಿ ಮಾತ್ರ ಬರುತ್ತದೆ. ಸಾಮಿಪ್ಯದ ಆಧಾರದ ಮೇಲೆ ಬರುವ ಪೂರ್ವಕ್ರಯಾಧಿಕಾರದ ಹಕ್ಕು ವಿಶಾಲವಾದ ಭೂಭಾಗಗಳಿಗೆ ಅನ್ವಯವಾಗುವುದಿಲ್ಲ.

ಖರೀದಿಗಾರನೇ ಪೂರ್ವಕ್ರಯಾಧಿಕಾರಿಯಾಗುವದು (Vendee as Pre-Emptor)

ಕೆಲವು ಪ್ರಕರಣಗಳಲ್ಲಿ ಖರೀದಿಗಾರನು ಸ್ವತಃ ತನಗೆ ಮಾರಲ್ಪಟ್ಟ ಸ್ವತ್ತಿನ ಸಂಬಂಧದಲ್ಲಿ ಪೂರ್ವಕ್ರಯಾಧಿಕಾರವನ್ನು ಪಡೆಯುವನು. ಇಂತಹ ಒಂದು ಪರಿಸ್ಥಿತಿಯಲ್ಲಿ ಖರೀದಿಗಾರನು ಇತರ ಪೂರ್ವಕ್ರಯಾಧಿಕಾರಿಗಳನ್ನು ಬಾಧ್ಯಗೊಳಿಸುವ ನಿಯಮಗಳಿಗೆ ಬಾಧ್ಯನಾಗುವನು. ಹಾಗೆಂದರೆ, ಒಂದೊಮ್ಮೆ ಆ ಖರೀದಿಗಾರನು ದ್ವಿತೀಯ ಅಥವಾ ತೃತೀಯ ವರ್ಗದ ಪೂರ್ವಕ್ರಯಾಧಿಕಾರಿಯಾಗಿದ್ದರೆ ಅಲ್ಲಿ ಪ್ರಥಮ ವರ್ಗದ ಪೂರ್ವಕ್ರಯಾಧಿಕಾರಿಯಿಂದ ಅವನು ಹೊರತುಪಡಿಸಲ್ಪಡುವನು. ಆದರೆ ಒಂದೊಮ್ಮೆ ಅವನು ಅದೇ ವರ್ಗದ ಪೂರ್ವಕ್ರಯಾಧಿಕಾರಿಗಳೊಳಗೆ ಬಂದರೆ ಅಲ್ಲಿ ಅವನು ಇತರ ವರ್ಗಗಳ ಪೂರ್ವ ಕ್ರಯಾಧಿಕಾರಿಯಿಂದ ಹೊರತುಪಡಿಸಲ್ಪಡುವುದಿಲ್ಲ. ಉದಾಹರಣೆಗಾಗಿ, ಒಂದೊಮ್ಮೆ ಆ ಖರೀದಿಗಾರನು ಸ್ವತಃ ಒಬ್ಬ ಸಹ ಪಾಲುದಾರನಾಗಿದ್ದರೆ ಆಗ ಇತರ ಸಹ ಪಾಲುದಾರರಂತೆ ಅವನೂ ಸಹ

ಪೂರ್ವ ಕ್ರಯಾಧಿಕಾರದ ಹಕ್ಕನ್ನು ಚಲಾಯಿಸಬಹುದು. ಅವನಿಗೆ ಮಾರಾಟ ಮಾಡಲ್ಪಟ್ಟ ಸ್ವತ್ತು ಅವರೊಳಗೆ ಸಮಾನವಾಗಿ ಹಂಚಲಾಗುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ, ಸಹ ಪಾಲುದಾರರು ಮಾತ್ರ ಪೂರ್ವ ಕ್ರಯಾಧಿಕಾರವುಳ್ಳ ವರ್ಗದವರಾಗಿರುವರು. ಈ ಕಾನೂನಿನ ಪ್ರಕಾರ ಭಾಗವಹಿಸುವವರು ಮತ್ತು ನೆರೆಯುವವರು ಪೂರ್ವ ಕ್ರಯಾಧಿಕಾರವನ್ನು ಹೊಂದಿರುವುದಿಲ್ಲ, ಅದಲ್ಲದೆ ಶಿಯಾ ಕಾನೂನಿನ ಪ್ರಕಾರ ಸಹ ಪಾಲುದಾರರು ಸಹ ಇಬ್ಬರಿಗಿಂತ ಹೆಚ್ಚಿನವರಾಗಿದ್ದರೆ ಅಲ್ಲಿ ಅವರು ಪೂರ್ವ ಕ್ರಯಾಧಿಕಾರದ ಹಕ್ಕನ್ನು ಕಳೆದುಕೊಳ್ಳುವರು ಒಂದೊಮ್ಮೆ ಅಲ್ಲಿ ಇಬ್ಬರಿಗಿಂತ ಹೆಚ್ಚಿನ ಸಹ ಪಾಲುದಾರರಿದ್ದರೆ ಅವರು ಈ ಹಕ್ಕನ್ನು ಕಳೆದುಕೊಳ್ಳುವರು. ಎರಡನೆಯದಾಗಿ ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಇಬ್ಬರು ಸಹ ಪಾಲುದಾರರಿದ್ದರೆ ಅವರು ತಮ್ಮ ಪಾಲುಗಳ ಅನುಪಾತದಲ್ಲಿ ಈ ಹಕ್ಕನ್ನು ಚಲಾಯಿಸಬಹುದು. ಅವರ ಹಕ್ಕು ಏಕಕಾಲದ್ದಾಗಿದ್ದರೂ ಸಹ ಪ್ರಮಾಣದಲ್ಲಿ ಅದು ಸಮಾನವಲ್ಲ. ಉದಾಹರಣೆಗಾಗಿ, ಎ ಮತ್ತು ಬಿ ಇವರು ಸಹ ಪಾಲುದಾರರಾಗಿದ್ದು ಇವರು ಪಾಲು ಮೂರನೇ ಎರಡು ಮತ್ತು ಮೂರನೇ ಒಂದು ಆಗಿರುತ್ತದೆ. ಪೂರ್ವ ಕ್ರಯಾಧಿಕಾರದಲ್ಲಿ ಒಂದು ಸ್ವತ್ತಿನ ವಿಕ್ರಯವಾದಾಗ 'ಎ' ಯು ಮೂರನೇ ಎರಡರಷ್ಟನ್ನು ಹಾಗೂ 'ಬಿ' ಯು ಮೂರನೇ ಒಂದರಷ್ಟು ಮಾತ್ರ ಖರೀದಿ ಮಾಡಬಹುದು.

ಸ್ವಾಮಿತ್ವವು ಪೂರ್ವ ಕ್ರಯಾಧಿಕಾರದ ವಿಷಯ ವಸ್ತುವಾಗಿರುತ್ತದೆ. (Ownership is Subject of Pre-Emption)

ಯಾವ ಸ್ವತ್ತಿನ ಸಂಬಂಧದಲ್ಲಿ ಈ ಹಕ್ಕಿಗಾಗಿ ಅಧಿಕಾರ ಸಾಧನೆ ಮಾಡಲಾಗುತ್ತದೋ ಅದನ್ನು ಪೂರ್ವ ಕ್ರಯಾಧಿಕಾರದ ವಿಷಯ ವಸ್ತುವೆಂಬುದಾಗಿ ಕರೆಯಲಾಗುತ್ತದೆ. ಸ್ಥಿರ ಸ್ವತ್ತು ಮಾತ್ರ ಪೂರ್ವಕ್ರಯಾಧಿಕಾರದ ವಿಷಯ ವಸ್ತುವಾಗಿರಬಹುದು. ಈ ಹಕ್ಕಿಗಾಗಿ ಅಧಿಕಾರ ಸಾಧನೆ ಮಾಡುವ ವ್ಯಕ್ತಿಯು ಪೂರ್ವ ಕ್ರಯಾಧಿಕಾರದ ವಿಷಯ ವಸ್ತುವಿನ ಸ್ವಾಮಿತ್ವವನ್ನು ಹೊಂದಿರಬೇಕು. ಒಂದೊಮ್ಮೆ ಅಂತಹ ಸ್ವತ್ತಿನ ಸ್ವಾಮಿತ್ವವು ಟ್ರಸ್ಟ್ ಇಲ್ಲವಯಿಯು ಕೈಯುಲ್ಲಿದ್ದರೆ ಅಲ್ಲಿ ಈ ಹಕ್ಕನ್ನು ಅವನ ಸಂರಕ್ಷಕನು ಚಲಾಯಿಸಬಹುದು.

ಧರ್ಮ ಅಥವಾ ಮತದ ಭಿನ್ನತೆ (Difference of Religion or Sect)

ಒಂದು ಪೂರ್ವಕ್ರಯಾಧಿಕಾರದ ಹಕ್ಕುದಾವೆಯಲ್ಲಿ ಮೂವರು ಪಕ್ಷದಾರರಿರುವರು. ಅವರು ಯಾರೆಂದರೆ, ಪೂರ್ವಕ್ರಯಾಧಿಕಾರಿ, ಮಾರಾಟಗಾರ ಮತ್ತು

ಖರೀದಿಗಾರ. ಒಂದೊಮ್ಮೆ ಪೂರ್ವಕ್ರಯಾಧಿಕಾರದ ಹಕ್ಕು ಯಾವತ್ತೂ ಕ್ಷೇತ್ರೀಯ ರೂಢಿ ಅಥವಾ ಶಾಸನದ ಮೇಲೆ ಆಧಾರಿತವಾಗಿದ್ದರೆ ಅಲ್ಲಿ ಪಕ್ಷಗಾರರ ಧರ್ಮ ಅಥವಾ ಪಂಗಡವು ಅಸಮಂಜಸವಾಗಿರುತ್ತದೆ. ಪೂರ್ವಕ್ರಯಾಧಿಕಾರದ ಸಂಬಂಧದಲ್ಲಿ ಒಂದು ಏಕರೂಪಿ ರೂಢಿಗತ ಅಥವಾ ಶಾಸನಬದ್ಧ ಕಾನೂನು ಪಕ್ಷಗಾರರ ಧರ್ಮ ಅಥವಾ ಪಂಗಡವನ್ನು ಅವಲಂಬಿಸಿರದೆ ಎಲ್ಲರಿಗೂ ಸಮಾನವಾಗಿ ಅನ್ವಯವಾಗುತ್ತದೆ. ಆದರೆ ಒಂದೊಮ್ಮೆ ಈ ಪೂರ್ವಕ್ರಯಾಧಿಕಾರವು ಮುಸ್ಲಿಮ್ ಮತೀಯ ಕಾನೂನಿನ ಮೇರೆಗೆ ಚಲಾಯಿಸುವದಿದ್ದರೆ ಅಲ್ಲಿ ಪಕ್ಷಗಾರರ ಧರ್ಮವು ಒಂದು ಪ್ರಮುಖ ಸಂಗತಿಯಾಗಿರುತ್ತವೆ. ಒಂದೊಮ್ಮೆ ಪೂರ್ವಕ್ರಯಾಧಿಕಾರಿ, ಮಾರಾಟಗಾರ ಮತ್ತು ಖರೀದಿಗಾರ ಇವರ ಧರ್ಮ ಅಥವಾ ಪಂಗಡಗಳಲ್ಲಿ ವ್ಯತ್ಯಾಸವಿದ್ದರೆ ಅಲ್ಲಿ ಯಾವ ಮತೀಯ ಕಾನೂನನ್ನು ಅನ್ವಯಗೊಳಿಸುವದೆಂಬ ಬಗ್ಗೆ ನಿರ್ಣಯ ಕೈಗೊಳ್ಳಲು ಸ್ವಲ್ಪ ಕಷ್ಟವಾಗುತ್ತದೆ. ಒಬ್ಬ ಪಕ್ಷಗಾರನ ಮತೀಯ ಕಾನೂನಿನ ಪ್ರಕಾರ ಅಲ್ಲೊಂದು ಪೂರ್ವಕ್ರಯಾಧಿಕಾರವಿರಬಹುದು. ಆದರೆ ಇನ್ನೊಬ್ಬ ಪಕ್ಷಗಾರನ ಮತೀಯ ಕಾನೂನಿನ ಪ್ರಕಾರ ಅಲ್ಲಿ ಅಂತಹ ಒಂದು ಹಕ್ಕು ಇರಲಿಕ್ಕಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಯಾವಾತನ ಮತೀಯ ಕಾನೂನಿನಲ್ಲಿ ಪೂರ್ವಕ್ರಯಾಧಿಕಾರದ ಹಕ್ಕಿಲ್ಲವೊ ಅಂಥವನ ಪ್ರತಿ ಈ ಹಕ್ಕು ಅನ್ವಯಗೊಳಿಸುವದು ಯುಕ್ತವಲ್ಲ. ಫೈಜಿಯವರ ಅಭಿಪ್ರಾಯದಲ್ಲಿ ಒಂದೊಮ್ಮೆ ಪಕ್ಷಗಾರರ ಮತೀಯ ಕಾನೂನುಗಳೊಳಗೆ ಕಚ್ಚಾಟವು ಉಂಟಾದರೆ ಅಲ್ಲಿ ಪಾರಸ್ಪರಿಕತೆಯ ಆಧಾರದ ಮೇಲೆ ಆ ಪಕ್ಷಗಾರರ ಮತೀಯ ಕಾನೂನನ್ನು ಅನ್ವಯಗೊಳಿಸಬೇಕಾಗುತ್ತದೆ.

ಈ ಹಕ್ಕಿನ ಜಾರಿಗೊಳಿಸುವಿಕೆ
(Enforcement of the Right)

ವಿಕ್ರಯದ ಅವಶ್ಯಕತೆಯಿದೆ (Sale is necessary)

ತನ್ನ ಸ್ವತ್ತಿಗೆ ಲಗತ್ತಾಗಿರುವ ಸ್ವತ್ತಿನ ವಿಕ್ರಯ ಅಥವಾ ವಿನಿಮಯವಾದಾಗ ಮಾತ್ರ ಒಬ್ಬ ಪೂರ್ವಕ್ರಯಾಧಿಕಾರಿಯು ತನ್ನ ಹಕ್ಕನ್ನು ಚಲಾಯಿಸಬಹುದು. ಒಂದೊಮ್ಮೆ ಇತರ ಯಾವುದಾದರೊಂದು ರೀತಿಯಿಂದ ಆ ಸ್ವತ್ತಿನ ಹಸ್ತಾಂತರಣವಾದರೆ ಅಲ್ಲಿ ಪೂರ್ವ ಕ್ರಯಾಧಿಕಾರದ ಹಕ್ಕು ಬರುವುದಿಲ್ಲ. ಒಂದೊಮ್ಮೆ ಆ ಸ್ವತ್ತು ದಾನ, ಭೋಗಾರ್ಪಣೆ, ಅಡಮಾನ ಇತ್ಯಾದಿಗಳಿಂದ ಹಸ್ತಾಂತರಿಸಲ್ಪಟ್ಟರೆ ಅಲ್ಲಿ ಆ ಪೂರ್ವಕ್ರಯಾಧಿಕಾರಿಯು ಹಸ್ತಾಂತರಿತನ ವಿರುದ್ಧ ತನ್ನ ಹಕ್ಕನ್ನು ಜಾರಿಗೊಳಿಸುವಂತಿಲ್ಲ. ಅದಲ್ಲದೆ, ಕಾನೂನಿನ ಕಾರ್ಯಾಚರಣೆಯಿಂದಲೂ ಸಹ ಒಂದು ಸ್ವತ್ತಿನ ಹಸ್ತಾಂತರಣವಾಗಬಹುದು. ಈ ರೀತಿಯ ಹಸ್ತಾಂತರಣಗಳಲ್ಲೂ ಸಹ ಪೂರ್ವಕ್ರಯಾಧಿಕಾರದ ಹಕ್ಕನ್ನು ಚಲಾಯಿಸುವಂತಿಲ್ಲ. ಆದುದರಿಂದ ಒಬ್ಬ ಉತ್ತರಾದಾತನು ಒಂದು ಲಗತ್ತಿನ ಸ್ವತ್ತಿಗೆ ಮರಣಶಾಸನ ಅಥವಾ ವಾರಸಿನಿಂದ

ಹಕ್ಕು ಪಡೆದರೆ ಅವನ ಪ್ರತಿಯಾಗಿ ಪೂರ್ವಕ್ರಯಾಧಿಕಾರದ ಹಕ್ಕನ್ನು ಚಲಾಯಿಸು ವಂತಿಲ್ಲ.

ವಿನಿಮಯ (exchange)

ವಿನಿಮಯವೆಂದರೆ ಇತರ ಯಾವುದಾದರೊಂದು ಸ್ವತ್ತಿನ ಸ್ವಾಮಿತ್ವದ ಹಸ್ತಾಂತರಣದ ಪ್ರತಿಫಲಕ್ಕಾಗಿ ಮಾಡಲಾಗುವ ಒಂದು ಸ್ವತ್ತಿನ ಸ್ವಾಮಿತ್ವದ ಹಸ್ತಾಂತರಣವಾಗಿರುತ್ತದೆ. ಆದುದರಿಂದ ಲಗತ್ತಿನ ಸ್ವತ್ತಿನ ವಿನಿಮಯವಾದಾಗ ಪೂರ್ವಕ್ರಯಾಧಿಕಾರದ ಹಕ್ಕನ್ನು ಜಾರಿಮಾಡಬಹುದು. ಆದರೆ ಕೆಲವೊಮ್ಮೆ ಒಂದು ವಿನಿಮಯವು ಒಂದು ಸ್ವಾಮಿತ್ವದ ಹಸ್ತಾಂತರಣದಲ್ಲಿ ಪರಿಣಾಮಿತವಾಗು ವುದಿಲ್ಲ. ಅಂತಹ ಪ್ರಕರಣದಲ್ಲಿ ಈ ಹಕ್ಕು ಉಂಟಾಗುವದಿಲ್ಲ.

ಕನ್ಯಾಶುಲ್ಕದ ಬದಲಾಗಿ ಹಸ್ತಾಂತರಣ (Transfer in lieu of dower)

ಅಸಂದೇಯ ಕನ್ಯಾಶುಲ್ಕದ ಬದಲಾಗಿ ಒಬ್ಬ ಪತಿಯಿಂದ ತನ್ನ ಪತ್ನಿಗೆ ಮಾಡಲಾಗುವ ಒಂದು ಸ್ವತ್ತಿನ ಹಸ್ತಾಂತರಣವು ಉತ್ತೀಯ ಪ್ರತಿಫಲಕ್ಕಾಗಿ ಮಾಡಲಾದ ಒಂದು ಸ್ವಾಮಿತ್ವದ ಹಸ್ತಾಂತರಣವಾಗಿರುತ್ತದೆ. ಅಂತಹ ಒಂದು ಹಸ್ತಾಂತರಣವು ಒಂದು ವಿಕ್ರಯವಾಗಿರುತ್ತದೆ. ಆದುದರಿಂದ ಇಂತಹ ಒಂದು ಸ್ವತ್ತಿನ ಹಸ್ತಾಂತರಣವಾದಾಗ ಲಗತ್ತಿನ ಸ್ವತ್ತಿನ ಸ್ವಾಮಿತ್ವವನ್ನು ಪಡೆದಿರುವ ವ್ಯಕ್ತಿಗೆ ಪೂರ್ವಕ್ರಯಾಧಿಕಾರದ ಹಕ್ಕು ಬರುತ್ತದೆ.

ಔಪಚಾರಿಕತೆಗಳು: ಮೂರು ಅಭಿಯಾಚನೆಗಳು
(Formalities the three demands)

ಪೂರ್ವಕ್ರಯಾಧಿಕಾರದ ಹಕ್ಕುದಾವೆ ಮಾಡುವ ಬಗ್ಗೆ ಮುಸ್ಲಿಮ್ ಕಾನೂನು ಕೆಲವು ಔಪಚಾರಿಕತೆಗಳನ್ನು ಗೊತ್ತು ಮಾಡಿದೆ. ಈ ಔಪಚಾರಿಕತೆಗಳನ್ನು ಕಟ್ಟು ನಿಟ್ಟಾಗಿ ಮತ್ತು ಸರಿಯಾದ ಸಮಯದಲ್ಲಿ ಪಾಲಿಸದೆ ಒಬ್ಬ ವ್ಯಕ್ತಿಯು ಪೂರ್ವ ಕ್ರಯಾಧಿಕಾರದ ಹಕ್ಕುದಾವೆ ಮಾಡುವಂತಿಲ್ಲ. ಪೂರ್ವಕ್ರಯಾಧಿಕಾರದ ಹಕ್ಕು ಒಂದು ಕ್ಷೀಣವಾದ ಹಕ್ಕೆಂದು ಎಣಿಸಲ್ಪಡುತ್ತದೆ. ಏಕೆಂದರೆ ಇದು ಸ್ವಾಮಿತ್ವದ ಮತ್ತು ಕರಾರಿನ ಸ್ವಾತಂತ್ರ್ಯದ ಪರಿಕಲ್ಪನೆಯ ಮೇಲೆ ನೇರವಾಗಿ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಆದುದರಿಂದ ಈ ಪ್ರಕ್ರಿಯೆಯ ಪಾಲನೆ ಮಾಡುವಲ್ಲಿ ಯಾವತ್ತೂ ದೋಷವುಂಟಾದರೆ ಈ ಹಕ್ಕು ತಪ್ಪಿಹೋಗುತ್ತದೆ. ಪೂರ್ವಕ್ರಯಾಧಿಕಾರದ ಮುಸ್ಲಿಮ್ ಕಾನೂನು ಒಂದು ತಾಂತ್ರಿಕತೆಯ ಕಾನೂನಾಗಿದೆ ಮತ್ತು ಈ ಹಕ್ಕಿನ ಅಸ್ತಿತ್ವವು ಈ ಔಪಚಾರಿಕತೆಗಳ ಪೂರ್ಣಪಾಲನೆಯ ಮೇಲೆ ಅವಲಂಬಿಸಿರುತ್ತದೆ. ಒಂದೊಮ್ಮೆ ಈ ಔಪಚಾರಿಕತೆಗಳು ಯಾವುದೇ ರೀತಿಯಲ್ಲಿ ಅಪೂರ್ಣ ಅಥವಾ ದೋಷಯುಕ್ತವಾದರೆ ಆಗ ಪೂರ್ವಕ್ರಯಾಧಿಕಾರದ ಹಕ್ಕುದಾವೆ ಮಾಡುವವನಿಗೆ ಈ ಹಕ್ಕು ಸಿಗುವದಿಲ್ಲ. ಈ ಹಕ್ಕುದಾವೆಯು ಮೂರು ಅಭಿಯಾಚನೆಗಳಿಂದ

ಕೊಡಿಕೊಂಡಿದೆ. ಈ ಅಭಿಯಾಚನೆಗಳನ್ನು ಪೂರ್ವಕ್ರಯಾಧಿಕಾರಿಯು ಕ್ರಮ ಬದ್ಧವಾಗಿ ಮತ್ತು ಯುಕ್ತ ಸಮಯದಲ್ಲಿ ಮಾಡಬೇಕಾಗುತ್ತದೆ.

ಮೊದಲನೇ ಅಭಿಯಾಚನೆ (Talab-I-Muwasibat)

ಮೊದಲನೇ ಅಭಿಯಾಚನೆಯು ಪೂರ್ವಕ್ರಯಾಧಿಕಾರದ ಹಕ್ಕನ್ನು ಜಾರಿ ಮಾಡುವದಕ್ಕಾಗಿ ಕೈಗೊಂಡ ಆರಂಭಿಕ ಕ್ರಮವಾಗಿರುತ್ತದೆ. ಮೊದಲನೆ ಅಭಿಯಾಚನೆಯು ಈ ಹಕ್ಕಿನ ತತ್‌ಕ್ಷಣಿಕ ಅಭಿಯಾಚನೆಯಾಗಿರುತ್ತದೆ. ಇದು ಒಂದು ಘೋಷಣೆಯ ರೀತಿಯಲ್ಲಿದ್ದು ಇದರ ಮುಖಾಂತರ ಆ ಪೂರ್ವ ಕ್ರಯಾಧಿಕಾರಿಯು ಪ್ರಥಮಬಾರಿ ತನ್ನ ಈ ಹಕ್ಕನ್ನು ಜಾರಿಗೊಳಿಸುವ ಉದ್ದೇಶ ವನ್ನು ವ್ಯಕ್ತಪಡಿಸುವನು. ಪ್ರಥಮ ಅಭಿಯಾಚನೆಯ ವೈಶಿಷ್ಟ್ಯವನ್ನು ಈ ಕೆಳಗಿನಂತೆ ಸಂಕ್ಷೇಪವಾಗಿ ಹೇಳಬಹುದು.

i) ಈ ಅಭಿಯಾಚನೆಯು ಪೂರ್ವಕ್ರಯಾಧಿಕಾರದ ಸ್ವತ್ತಿನ ವಿಕ್ರಯ ಅಥವಾ ವಿನಿಮಯವು ಕಾನೂನುಬದ್ಧವಾಗಿ ಮುಗಿದ ಬಳಿಕ ಮಾತ್ರ ಪೂರ್ಣ ಗೊಳ್ಳುತ್ತದೆ. ರೂಪಾಯಿ 100 ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಸ್ವತ್ತಿನ ವಿಕ್ರಯ ಅಥವಾ ವಿನಿಮಯವು ನೋಂದಣಿಯಾದ ಬಳಿಕ ಮಾತ್ರ ವಿಧ್ಯುಕ್ತ ಹಾಗೂ ಪೂರ್ಣಗೊಂಡಿದೆಯೆಂದು ಎಣಿಸಲ್ಪಡುತ್ತದೆ. ಒಂದೊಮ್ಮೆ ಆ ದಸ್ತಾವೇಜಿನ ನಿಷ್ಪಾದನೆ ಅಥವಾ ನೋಂದಣಿ ಕಛೇರಿಯಲ್ಲಿ ಅದನ್ನು ಹಾಜರಿ ಮಾಡುವ ಕಾಲದಲ್ಲಿ ಆ ಅಭಿಯಾಚನೆಯು ಮಾಡಲ್ಪಟ್ಟರೆ ಅದು ಯುಕ್ತ ಕಾಲದಲ್ಲಿ ಮಾಡಲಾದ ಅಭಿಯಾಚನೆ ಯೆಂಬುದಾಗಿ ಎಣಿಸಲ್ಪಡುವುದಿಲ್ಲ. ಕಾನೂನುಬದ್ಧವಾಗಿ ಒಂದು ವಿಕ್ರಯವು ಪೂರ್ಣಗೊಳ್ಳುವುದಕ್ಕಿಂತ ಮೊದಲು ಮಾಡಲ್ಪಟ್ಟ ಒಂದು ಅಭಿಯಾಚನೆಯು ಪರಿಣಾಮಿತವಾಗುವುದಿಲ್ಲ ಮತ್ತು ಆ ಹಕ್ಕುದಾವೆಯು ವಿಫಲಗೊಳ್ಳುತ್ತದೆ.

ii) ಮೊದಲನೇ ಅಭಿಯಾಚನೆಯನ್ನು ಆ ವಿಕ್ರಯವು ಪೂರ್ಣಗೊಂಡ ಮಾಹಿತಿಯು ಸಿಕ್ಕಿದ ತಕ್ಷಣದಲ್ಲಿ ಮಾಡಬೇಕಾಗುತ್ತದೆ. ಶೀಘ್ರತೆಯು ಪೂರ್ವ ಕ್ರಯಾಧಿಕಾರದ ಹಕ್ಕುದಾವೆಯ ಒಂದು ಅವಶ್ಯಕ ಅಂಶವಾಗಿರುತ್ತದೆ. ಪೂರ್ವ ಕ್ರಯಾಧಿಕಾರಿಯು ತನ್ನ ಹಕ್ಕುದಾವೆಯನ್ನು ಯಾವತ್ತೂ ವಿಳಂಬವಿಲ್ಲದೆ ಮಾಡ ಬೇಕೆಂದು ಕಾನೂನು ಬಯಸುತ್ತದೆ. 'ತಲಾಬ-ಆಯ್-ಮುವಾಸಿಬತ್' ಇದರ ಅರ್ಥವೇನೆಂದರೆ ಹಾರಿಕೊಂಡು ಮಾಡಲಾದ ಅಭಿಯಾಚನೆ. ಇದರಿಂದಾಗಿ ಇಲ್ಲಿ ಶೀಘ್ರತೆಯು ಎಷ್ಟೊಂದು ಮಹತ್ವದ್ದಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳ ಬಹುದು. ಮೊದಲನೇ ಅಭಿಯಾಚನೆ ಮಾಡುವುದರಲ್ಲಿ ಯಾವತ್ತೂ ವಿಳಂಬ ವಾದರೆ ಆ ಅಭಿಯಾಚನೆಯು ಪರಿಣಾಮಿತವಾಗುವುದಿಲ್ಲ, ಮತ್ತು ವಿಫಲ ಗೊಳ್ಳುತ್ತದೆ.

iii) **'ತಲಾಬ್-ಆಯ್-ಮುವಾಸಿಬತ್'** ಇದನ್ನು ಪೂರ್ವ ಕ್ರಯಾಧಿಕಾರಿಯು ವೈಯಕ್ತಿಕವಾಗಿ ಮಾಡುವ ಅವಶ್ಯಕತೆಯಿದೆ. ಆ ಪೂರ್ವ ಕ್ರಯಾಧಿಕಾರಿಯು ತನ್ನ ಪರವಾಗಿ ಈ ಅಭಿಯಾಚನೆ ಮಾಡುವ ಬಗ್ಗೆ ಇನ್ನೊಬ್ಬ ವ್ಯಕ್ತಿಯನ್ನು ಪ್ರಾಧಿಕೃತಗೊಳಿಸಬಹುದು. ಆದರೆ ಒಬ್ಬ ಪೂರ್ವ ಕ್ರಯಾಧಿಕಾರಿಯಿಂದ ಇನ್ನೊಬ್ಬ ವ್ಯಕ್ತಿಯು ನಿರ್ದಿಷ್ಟವಾಗಿ ಈ ಕೆಲಸಕ್ಕಾಗಿ ನೇಮಿಸಲ್ಪಟ್ಟಿರುವ ಹೊರತು ಆ ಇನ್ನೊಬ್ಬ ವ್ಯಕ್ತಿಯು ಪೂರ್ವ ಕ್ರಯಾಧಿಕಾರಿಯು ಪರವಾಗಿ ಈ ಹಕ್ಕನ್ನು ಚಲಾಯಿಸುವಂತಿಲ್ಲ. ಒಂದೊವೇಳೆ ಆ ಪೂರ್ವ ಕ್ರಯಾದಿಕಾರಿಯು ಒಬ್ಬ ಅಲ್ಪವಯಿಯನಾಗಿದ್ದರೆ ಈ ಅಭಿಯಾಚನೆಯನ್ನು ಅವನ ಸಂರಕ್ಷನು ವಿಧ್ಯುಕ್ತವಾಗಿ ಮಾಡಬಹುದು.

iv) **'ತಲಾಬ್-ಆಯ್-ಮುವಾಸಿಬತ್'** ಇದನ್ನು ವ್ಯಕ್ತ ಶಬ್ದಗಳಿಂದ ಮಾಡಬೇಕಾಗುತ್ತದೆ ಏಕೆಂದರೆ ಇಲ್ಲಿ ಪೂರ್ವಕ್ರಯಾಧಿಕಾರಿಯು ಉದ್ದೇಶವು ಸ್ಪಷ್ಟವಾಗಿರಬೇಕಾಗುತ್ತದೆ. ಪೂರ್ವಕ್ರಯಾಧಿಕಾರಿಯು ತನ್ನ ಹಕ್ಕುದಾವೆಯನ್ನು ವ್ಯಕ್ತಪಡಿಸಿರುವನು ಎಂಬ ಸಂಗತಿಯು ಅವನ ಅಭಿಯಾಚನೆಯಿಂದ ತಿಳಿದು ಬರತಕ್ಕದ್ದು. ಒಂದೊವೇಳೆ ಇದು ಸ್ಪಷ್ಟವಾಗಿರದಿದ್ದರೆ ಅಲ್ಲಿ ಪ್ರಥಮ ಅಭಿಯಾಚನೆಯು ವಿಧ್ಯುಕ್ತವೆಂಬುದಾಗಿ ಎಣಿಸಲ್ಪಡುವುದಿಲ್ಲ ಮತ್ತು ಆ ಹಕ್ಕುದಾವೆಯು ವಿಫಲಗೊಳ್ಳುತ್ತದೆ.

v) ಮೊದಲನೇ ಅಭಿಯಾಚನೆಯು ಮೌಖಿಕವಾಗಿ ಅಥವಾ ಬರವಣಿಗೆಯಲ್ಲಿ ಮಾಡಲ್ಪಡಬಹುದು. ಇದನ್ನು ಒಂದು ಪತ್ರದ ಮೂಲಕವೂ ಮಾಡಬಹುದು.

vi) ಮೊದಲನೇ ಅಭಿಯಾಚನೆ ಮಾಡುವ ಬಗ್ಗೆ ಮುಸ್ಲಿಮ್ ಕಾನೂನಿನ ಪ್ರಕಾರ ಸಾಕ್ಷಿದಾರರ ಉಪಸ್ಥಿತಿಯು ಅವಶ್ಯಕತೆಯಿಲ್ಲ. ಸಾಕ್ಷಿದಾರರ ಉಪಸ್ಥಿತಿಯಿಲ್ಲದೆ ಮಾಡಲಾದ ಮೊದಲನೇ ಅಭಿಯಾಚನೆಯು ವಿಧ್ಯುಕ್ತ ಹಾಗೂ ಕಾನೂನು ಬದ್ಧವಾಗಿರುತ್ತದೆ. ಆದರೆ ಈ ಅಭಿಯಾಚನೆಯು ಸರಿಯಾಗಿ ಹಾಗೂ ಯುಕ್ತ ಸಮಯದಲ್ಲಿ ಮಾಡಲ್ಪಟ್ಟಿದೆಂಬ ಬಗ್ಗೆ ಯಾವತ್ತೂ ಪುರಾವೆಯಿದ್ದಿರಬೇಕಾಗುತ್ತದೆ.

ಎರಡನೇ ಅಭಿಯಾಚನೆ (Talab-I-Ishhad)

ಮೊದಲನೇ ಅಭಿಯಾಚನೆಯು ಕ್ರಮಬದ್ಧವಾಗಿ ಮಾಡಲ್ಪಟ್ಟ ಬಳಿಕ ಎರಡನೇ ಅಭಿಯಾಚನೆಯು ಮಾಡಲ್ಪಡಬೇಕಾಗುತ್ತದೆ. ಎರಡನೇ ಅಭಿಯಾಚನೆಯು ಮೊದಲನೇ ಅಭಿಯಾಚನೆಯು ಪುನರಾವರ್ತನವಾಗಿದ್ದುದರಿಂದ ಅದನ್ನು ಒಂದು ಪುಷ್ಟೀಕರಣದ ಅಭಿಯಾಚನೆ ಅಥವಾ 'ತಲಾಬ್-ಆಯ್-ತಕ್ರೀರ್' ಎಂಬುದಾಗಿಯೂ ಕರೆಯಲಾಗುತ್ತದೆ. ಈ ಎರಡನೇ ಅಭಿಯಾಚನೆಯು ಒಂದು ಎರಡನೇ ಘೋಷಣೆಯು ರೀತಿಯಲ್ಲಿ ಇರುತ್ತದೆ. ಇದನ್ನೂ ಸಹ ಮೌಖಿಕವಾಗಿ ಅಥವಾ ಬರವಣಿಗೆಯಲ್ಲಿ

ಮಾಡಬಹುದು. ಇದನ್ನು ಒಂದು ಪತ್ರದ ಮೂಲಕವೂ ಮಾಡಬಹುದು. ಮೊದಲನೇ ಅಭಿಯಾಚನೆಯ ಪ್ರಕಾರ 'Talab-I-Ishhad' ಇದನ್ನು ಪೂರ್ವ ಕ್ರಯಾಧಿಕಾರಿಯಿಂದ ಪ್ರಾಧಿಕೃತನಾಗಿರುವ ಒಬ್ಬ ವ್ಯಕ್ತಿಯೂ ಮಾಡಬಹುದು. ಎರಡನೇ ಅಭಿಯಾಚನೆಯನ್ನು ಒಬ್ಬ ಅಲ್ಪವಯಿಯ ಸಂರಕ್ಷಕನೂ ಮಾಡಬಹುದು. ಎರಡನೇ ಅಭಿಯಾಚನೆಯ ಅವಶ್ಯಕ ವೈಶಿಷ್ಟ್ಯಗಳು ಈ ಕೆಳಗಿನಂತಿವೆ :

i) ಮೊದಲನೆ ಅಭಿಯಾಚನೆಯು ಆಗಲೇ ಮಾಡಲ್ಪಟ್ಟಿರುವ ಹೊರತು ಎರಡನೇ ಅಭಿಯಾಚನೆಯು ಪರಿಣಾಮಕಾರಿಯಾಗುವುದಿಲ್ಲ. ಮೊದಲನೆ ಅಭಿಯಾಚನೆಯು ಒಂದು ಹಿಂದಿನ ದಿನಾಂಕದಂದು ಕಾನೂನುಬದ್ಧವಾಗಿ ಮಾಡಲ್ಪಟ್ಟರೆ ಮಾತ್ರ ಈ ಎರಡನೇ ಅಭಿಯಾಚನೆಯು ಪರಿಣಾಮಕಾರಿಯಾಗುತ್ತದೆ.

ii) ಎರಡನೇ ಅಭಿಯಾಚನೆ ಮಾಡುವಲ್ಲಿ ಅನಾವಶ್ಯಕ ವಿಳಂಬವಾಗಿರಬಾರದು

iii) ಒಂದು 'Talab–I-Ishhad' ಇದರಲ್ಲಿ ಆ ಪೂರ್ವಕ್ರಯಾಧಿಕಾರಿಯು ತಾನು ಮೊದಲನೇ ಅಭಿಯಾಚನೆಯನ್ನು ಆಗಲೇ ಮಾಡಿರುವೆನು ಮತ್ತು ಈಗ ಇದು ಎರಡನೇ ಅಭಿಯಾಚನೆ ಎಂಬುದಾಗಿ ಅವನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

iv) ಈ ಎರಡನೇ ಅಭಿಯಾಚನೆಯು ಒಂದೇ ಮಾರಾಟಗಾರನಿಗೆ ಅಥವಾ ಖರೀದಿಗಾರನಿಗೆ ಸಂಭೋಧಿಸಲ್ಪಟ್ಟಿರಬೇಕು. ಒಂದೊಮ್ಮೆ ಇವರಿಬ್ಬರೂ ಸಿಗದಿದ್ದರೆ ಆಗ ಇದನ್ನು ಆ ವಿಕ್ರಯಗೊಂಡ ಸ್ವತ್ತಿಗೆ ಸಂಬೋಧಿಸಬೇಕು. ಒಂದೊಮ್ಮೆ ಆ ಎರಡನೆ ಅಭಿಯಾಚನೆಯು ಖರೀದಿಗಾರನಿಗೆ ಸಂಬೋಧಿಸಲ್ಪಟ್ಟುದಾದರೆ ಅಲ್ಲಿ ಇದನ್ನು ಎಲ್ಲಾ ಖರೀದಿಗಾರನಿಗೆ ಸಂಬೋಧಿಸಬೇಕಾಗುತ್ತದೆ. ಒಂದೊಮ್ಮೆ ಅನೇಕ ಖರೀದಿಗಾರರಿದ್ದು ಆ ಪೂರ್ವಕ್ರಯಾಧಿಕಾರಿಯು ಕೆಲವಷ್ಟೇ ಖರೀದಿಗಾರರಿಗೆ ಇದನ್ನು ಸಂಬೊಧಿಸಿರುವರೆಂದಾದರೆ ಆವರು ಅವರ ಪ್ರತಿ ಮಾತ್ರ ಪೂರ್ವಕ್ರಯಾಧಿಕಾರವನ್ನು ಚಲಾಯಿಸಬಹುದು. ಒಂದೊಮ್ಮೆ ಆ ಪೂರ್ವಕ್ರಯಾಧಿಕಾರಿಯು ತನ್ನ ಅಭಿಯಾಚನೆಯನ್ನು ಆ ಮಾರಾಟಗಾರನಿಗೆ ಅಥವಾ ಆ ಸ್ವತ್ತಿಗೆ ಸಂಬೋಧಿಸಿರುವನೆಂದಾದರೆ ಅಲ್ಲಿ ಎಲ್ಲಾ ಖರೀದಿಗಾರರು ಅವನ ಈ ಅಭಿಯಾಚನೆಗೆ ಬಾಧ್ಯರಾಗುವರು.

v) ಈ ಎರಡನೇ ಅಭಿಯಾಚನೆಯು ಇಬ್ಬರು ಸಕ್ಷಮ ಸಾಕ್ಷಿದಾರರ ಉಪಸ್ಥಿತಿಯಲ್ಲಿ ಮಾಡಬೇಕಾಗುತ್ತದೆ. ಸಾಕ್ಷಿದಾರರ ಮುಂದೆ ಈ ಎರಡನೇ ಅಭಿಯಾಚನೆಯನ್ನು ಮಾಡಿರುವ ಬಗ್ಗೆ ಆಧಾರವಿಲ್ಲವೆಂದಾದರೆ ಅಲ್ಲಿ ಈ ಹಕ್ಕುದಾವೆಯು ಅಸಿಂಧುವಾಗುತ್ತದೆ ಮತ್ತು ವಿಫಲಗೊಳ್ಳುತ್ತದೆ.

vi) ಎರಡನೇ ಅಭಿಯಾಚನೆ ಮಾಡುವಾಗ ಬೆಲೆ ಸಂದಾಯ ಮಾಡುವ ಅವಶ್ಯಕತೆಯಿರುವುದಿಲ್ಲ. ಪೂರ್ವಕ್ರಯಾಧಿಕಾರಿಯು ಅಲ್ಲೇ ಮತ್ತು ಆಗಲೇ ಬೆಲೆಯನ್ನು ಸಂದಾಯ ಮಾಡಬೇಕಾಗಿಲ್ಲ. ಅವನು ಆ ಬೆಲೆಯನ್ನು ಸಂದಾಯ

ಮಾಡಲು ತನ್ನ ಸಿದ್ಧತೆ ಹಾಗೂ ಇಚ್ಛೆಯನ್ನು ವ್ಯಕ್ತಪಡಿಸಿದರೆ ಅದು ಪರ್ಯಾಪ್ತ ವಾಗುತ್ತದೆ

ಮೂರನೇ ಅಭಿಯಾಚನೆ T(alab-I-Tamlik)

ಮೊದಲನೇ ಎರಡು ಅಭಿಯಾಚನೆಗಳ ಬಳಿಕ ಒಂದೊಮ್ಮೆ ಆ ಖರೀದಿಗಾರನು ಈ ಪೂರ್ವಕ್ರಯಾಧಿಕಾರಿಯ ಹಕ್ಕುದಾವೆಗೆ ಒಪ್ಪಿದರೆ ಅಲ್ಲಿ ಈ ಪೂರ್ವಕ್ರಯಾಧಿ ಕಾರಿದ ಹಕ್ಕುದಾವೆಯು ಕಾರ್ಯಾಚರಣೆಗೆ ಬರುತ್ತದೆ. ಇಲ್ಲಿ ಮುಂದಿನ ಔಪಚಾರಿ ಕತೆಗಳ ಅವಶ್ಯಕತೆಯಿರುವುದಿಲ್ಲ ಮತ್ತು ಈ ಪೂರ್ವಕ್ರಯಾಧಿಕಾರಿಯು ಆ ಖರೀದಿ ಗಾರನ ಸ್ಥಾನದಲ್ಲಿ ಪ್ರತಿಸ್ಥಾಪಿಸಲ್ಪಡುವನು. ಆದರೆ ಒಂದೊಮ್ಮೆ ಆ ಎರಡು ಅಭಿಯಾಚನೆಗಳ ಬಳಿಕ ಈ ಪೂರ್ವಕ್ರಯಾಧಿಕಾರಿಯು ಆ ಸ್ವತ್ತನ್ನು ಮರಳಿ ಖರೀದಿ ಮಾಡಲು ವಿಫಲನಾದರೆ ಅವನು ಕಾನೂನು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಆದುದರಿಂದ ಮೂರನೇ ಹಾಗೂ ಕೊನೆಯ ಕ್ರಮವು ಒಂದು ನ್ಯಾಯಾಲಯದಲ್ಲಿ ಕಾನೂನು ಕ್ರಮವನ್ನು ಕೈಗೊಳ್ಳುವದಾಗಿರುತ್ತದೆ. ಪೂರ್ವಕ್ರಯಾಧಿಕಾರದ ಹಕ್ಕು ದಾವೆಗಾಗಿ ಒಂದು ನ್ಯಾಯಾಲಯದಲ್ಲಿ ದಾವೆಹೂಡುವುದನ್ನು ಮೂರನೇ ಅಭಿಯಾ ಚನೆಯೆಂಬುದಾಗಿ ಕರೆಯಲಾಗುತ್ತದೆ. ಇದನ್ನು 'ತಲಬ್ - ಆಯ್ - ಕುಸುಮತ್ (Talab - I Khusumat) ಅಥವಾ ಕಬ್ಜೆಯ ಅಭಿಯಾಚನೆ ಎಂಬುದಾಗಿ ಕರೆಯ ಲಾಗುತ್ತದೆ. ಆದುದರಿಂದ ಪ್ರತಿಯೊಂದು ಪ್ರಕರಣದಲ್ಲಿ ಮೂರನೇ ಅಭಿಯಾಚನೆಯ ಅವಶ್ಯಕತೆ ಬೀಳುವುದಿಲ್ಲ.

ಈ ದಾವೆಯನ್ನು ನೋಂದಣಿಯಾದ ಅಥವಾ ಕಬ್ಜೆಯ ಪ್ರದಾಯಕತ್ವದಿಂದಾಗಿ ವಿಕ್ರಯವು ಪೂರ್ಣಗೊಂಡ ಒಂದು ವರ್ಷದ ಕಾಲಾವಧಿಯೊಳಗೆ ಹೂಡಬೇಕಾಗು ತ್ತದೆ. ಒಂದೊಮ್ಮೆ ಆ ಪೂರ್ವಕ್ರಯಾಧಿಕಾರಿಯು ಒಬ್ಬ ಅಲ್ಪವಯಿಯಾಗಿದ್ದರೆ ಅವನ ಅಥವಾ ಅವಳ ಸಂರಕ್ಷಕನು ಈ ದಾವೆಯನ್ನು ಹೂಡಬಹುದು. ಆದರೆ ಅಂತಹ ಸಂರಕ್ಷಕನೂ ಸಹ ಮೇಲೆ ಹೇಳಲಾದ ಕಾಲಮಿಂತಿಯ ಅವಧಿಯೊಳಗೆ ಆ ದಾವೆಯನ್ನು ಹೂಡಬೇಕಾಗುತ್ತದೆ. ಪೂರ್ವಕ್ರಯಾಧಿಕಾರಿಯು ಅದನ್ನು ಖರೀದಿ ಗಾರನಿಂದ ಮರಳಿ ಖರೀದಿಮಾಡುವ ಹಕ್ಕುದಾವೆ ಮಾಡುವನಾದುದರಿಂದ ಅಂತಹ ಒಂದು ದಾವೆಯಲ್ಲಿ ಖರೀದಿಗಾರನೂ ಒಬ್ಬ ಅವಶ್ಯಕ ಪಕ್ಷಗಾರನಾಗಿರುವನು. ಆದರೆ ಒಂದೊಮ್ಮೆ ಮಾರಾಟಗಾರನು ಇನ್ನೂ ಆ ಸ್ವತ್ತಿದ ಕಬ್ಜೆಯನ್ನು ಹೊಂದಿರುವ ನೆಂದಾದರೆ ಅಲ್ಲಿ ಆ ದಾವೆಯನ್ನು ಅವರಿಬ್ಬರ ವಿರುದ್ಧ ಹೂಡಬೇಕಾಗುತ್ತದೆ.

ಒಂದು ಪೂರ್ವಕ್ರಯಾಧಿಕಾರದ ದಾವೆಯಲ್ಲಿ ಪೂರ್ವಕ್ರಯಾಧಿಕಾರಿಯು ಅವನ ಇಡೀ ಹಿತಸಂಬಂಧಕ್ಕಾಗಿ ಹಕ್ಕುದಾವೆ ಮಾಡಬೇಕಾಗುತ್ತದೆ. ಖರೀದಿಗಾರನಿಗೆ ಮಾರಾಟಮಾಡಲ್ಪಟ್ಟ ಆ ಸ್ವತ್ತಿನ ಕೇವಲ ಒಂದು ಭಾಗಕ್ಕಾಗಿ ಅವನು ಪೂರ್ವ ಕ್ರಯಾಧಿಕಾರದ ಹಕ್ಕುದಾವೆ ಮಾಡುವಂತಿಲ್ಲ. ಉದಾಹರಣೆಗಾಗಿ, ಒಂದೊಮ್ಮೆ ಆ

ಪೂರ್ವಕ್ರಯಾಧಿಕಾರದ ಸ್ವತ್ತಿನ ಒಂದು ಭಾಗವು ಪ್ರಯೋಜಕ ಮತ್ತು ಇನ್ನೊಂದು ಭಾಗವು ನಿಷ್ಪ್ರಯೋಜಕವಾಗಿದ್ದರೆ ಅಲ್ಲಿ ಆ ಪೂರ್ವಕ್ರಯಾಧಿಕಾರಿಯು ಕೇವಲ ಪ್ರಯೋಜಕ ಭಾಗಕ್ಕಾಗಿ ಪೂರ್ವಕ್ರಯಾಧಿಕಾರದ ಹಕ್ಕುದಾವೆ ಮಾಡಿ ನಿಷ್ಪ್ರಯೋಜಕ ಭಾಗವನ್ನು ಬಿಟ್ಟುಬಿಡುವಂತಿಲ್ಲ. ಅವನ ಹಕ್ಕುದಾವೆಯು ಆ ಇಡೀ ಸ್ವತ್ತಿನ ಬಗ್ಗೆ ಮಾಡಲ್ಪಟ್ಟುದ್ದಾಗಿರಬೇಕು; ಅಲ್ಲೊಂದು ಭಾಗತಃ ಹಕ್ಕುದಾವೆ ಮಾಡಲ್ಪಡುವಂತಿಲ್ಲ. ಆ ದಾವೆಯು ಇಡೀ ಸ್ವತ್ತನ್ನು ಕೂಡಿಕೊಂಡಿರಬೇಕು. ಒಂದೊಮ್ಮೆ ಆ ದಾವೆಯು ಆ ಇಡೀ ಸ್ವತ್ತಿನ ಬಗ್ಗೆ ಪೂರ್ವಕ್ರಯಾಧಿಕಾರದ ಹಕ್ಕಿಗಾಗಿ ಹಕ್ಕುದಾವೆ ಮಾಡುವದಿಲ್ಲವೆಂದಾದರೆ ಅಲ್ಲಿ ಆ ನ್ಯಾಯಾಲಯವು ಆ ದಾವೆಯನ್ನು ಸ್ವೀಕರಿಸುವಂತಿಲ್ಲ ಮತ್ತು ಆ ಹಕ್ಕುದಾವೆಯು ವಿಫಲಗೊಳ್ಳುತ್ತದೆ.

ಅಭಿಯಾಚನೆಗಳ ಬಳಿಕ ಸ್ವತ್ತಿನ ಹಸ್ತಾಂತರಣ
(Transfer of property after demands)

ಒಬ್ಬ ಪೂರ್ವಕ್ರಯಾಧಿಕಾರಿಯು ತನ್ನ ಅಭಿಯಾಚನೆಗಳನ್ನು ಕಾನೂನುಬದ್ಧವಾಗಿ ಮಾಡಿದ ಬಳಿಕ ಅವನು ಆ ಔಪಚಾರಿಕತೆಗಳನ್ನು ಪೂರ್ಣಗೊಳಿಸಿರುವನೆಂಬುದಾಗಿ ಎಣಿಸಲ್ಪಡುವನು ಒಂದೊಮ್ಮೆ ಆ ಖರೀದಿದಾರನು ಪೂರ್ವಕ್ರಯಾಧಿಕಾರಿಯ ಅಭಿಯಾಚನೆಯ ಬಳಿಕ ಇನ್ನೊಬ್ಬನಿಗೆ ಆ ಸ್ವತ್ತನ್ನು ಹಸ್ತಾಂತರಣಗೊಳಿಸಿದರೆ ಅಲ್ಲಿ ಆ ಪೂರ್ವಕ್ರಯಾಧಿಕಾರಿಯು ಆ ಹೊಸ ಹಸ್ತಾಂತರಿತನ ಪ್ರತಿಯಾಗಿ ತನ್ನ ಅಭಿಯಾಚನೆಗಳನ್ನು ಪುನರಾವರ್ತನೆಗೊಳಿಸಬೇಕಾಗಿಲ್ಲ. ಮೂಲ ಖರೀದಿಗಾರನ ಪ್ರತಿಯಾಗಿ ಮಾಡಲ್ಪಟ್ಟಿರುವ ಅಭಿಯಾಚನೆಗಳನ್ನು ಹೊಸ ಹಸ್ತಾಂತರಿತನ ಪ್ರತಿಯಾಗಿ ಮಾಡಲ್ಪಟ್ಟಿರುವ ಅಭಿಯಾಚನೆಯೆಂಬುದಾಗಿ ಕಾಣಿಸಲಾಗುತ್ತದೆ.

ಪೂರ್ವಕ್ರಯಾಧಿಕಾರಿಯ ಮರಣ (Death of Pre-Emptor)

ಒಬ್ಬ ಪೂರ್ವಕ್ರಯಾಧಿಕಾರಿಯು ಮೊದಲನೇ ಅಭಿಯಾಚನೆ ಮಾಡಿದ ಬಳಿಕ ಮೃತನಾದರೆ ಅವನ ಕಾನೂನೀ ವಾರಸುದಾರರು ಎರಡನೇ ಅಭಿಯಾಚನೆ ಮಾಡಲು ಹಕ್ಕುದಾರರಲ್ಲ. ಇದೇ ರೀತಿಯಲ್ಲಿ ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು ದಾವೆ ಹೂಡುವುದಕ್ಕಿಂತ ಮೊದಲೇ ಮೃತನಾದರೆ ಅವನ ಕಾನೂನೀವಾರಸುದಾರರು ಆ ಪೂರ್ವಕ್ರಯಾಧಿಕಾರದ ಸಂಬಂಧದಲ್ಲಿ ಒಂದು ದಾವೆ ಹೂಡಿ ಆ ಮೊದಲನೇ ಎರಡು ಅಭಿಯಾಚನೆಗಳನ್ನು ಮುಂದುವರಿಸುವಂತಿಲ್ಲ. ಒಂದೊಮ್ಮೆ ಪೂರ್ವಕ್ರಯಾಧಿಕಾರಿಯು ಈ ಬಗ್ಗೆ ಒಂದು ದಾವೆ ಹೂಡಿ ನ್ಯಾಯಾಲಯದ ಡಿಕ್ರಿಯನ್ನು ಪಡೆಯುವುದಕ್ಕಿಂತ ಮೊದಲು ಮೃತನಾದರೆ ಅಲ್ಲಿ ಅಂಥವನ ವಾರಸುದಾರರು ಅವನ ಜಾಗೆಯಲ್ಲಿ ಪ್ರತಿಸ್ಥಾಪಿಸಲ್ಪಡುವಂತಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು

ಒಂದು ದಾವೆಯು ಇನ್ನೂ ಇತ್ಯರ್ಥವಾಗದೆ ಉಳಿದಾಗ ಮೃತನಾದರೆ ಅವನ ಕಾನೂನೀ ವಾರಸುದಾರರನ್ನು ಅವನ ಜಾಗೆಯಲ್ಲಿ ಪ್ರತಿಸ್ಥಾಪಿಸಬಹುದು. ಆದುದರಿಂದ ಈ ಕಾನೂನಿನ ಪ್ರಕಾರ ಒಬ್ಬ ಪೂರ್ವಕ್ರಯಾಧಿಕಾರಿಯು ಡಿಕ್ರಿ ಪಡೆಯುವುದಕ್ಕಿಂತ ಮೊದಲೇ ಮೃತನಾದರೆ ಪೂರ್ವಕ್ರಯಾಧಿಕಾರದ ಅವನ ಹಕ್ಕುದಾವೆಯು ಕೊನೆಗೊಳ್ಳುವುದಿಲ್ಲ. ಈ ವಿಷಯದ ಬಗ್ಗೆ ಶಫೀ ಕಾನೂನು ಶಿಯಾಕಾನೂನಿನಂತೆನೇ ಇದೆ.

ಪೂರ್ವಕ್ರಯಾಧಿಕಾರದ ಕಾನೂನೀ ಪರಿಣಾಮಗಳು
(Legal Effect of Pre-Emption)

ಪೂರ್ವಕ್ರಯಾಧಿಕಾರಿಯ ಪರವಾಗಿ ಒಂದು ಪೂರ್ವಕ್ರಯಾಧಿಕಾರದ ಹಕ್ಕು ಒಮ್ಮೆ ಸಾಬೀತಾದರೆ ಸಾಕು. ಆ ಬಳಿಕ ಅವನು ಮೂಲ ಖರೀದಿಗಾರನು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ಆ ಸ್ವತ್ತನ್ನು ಖರೀದಿಮಾಡಿದ್ದನೊ ಅದೇ ನಿಬಂಧನೆ ಮತ್ತು ಷರತ್ತುಗಳ ಮೇಲೆ ಅದನ್ನು ಮರಳಿ ಖರೀದಿ ಮಾಡಬಹುದು, ಆದುದರಿಂದ ಇಲ್ಲಿ ಮೂಲ ಖರೀದಿಗಾರನು ಮಾರಾಟಗಾರನಾಗುವನು ಮತ್ತು ಪೂರ್ವಕ್ರಯಾಧಿಕಾರಿಯು ಖರೀದಿಗಾರನಾಗುವನು. ಪೂರ್ವಕ್ರಯಾಧಿಕಾರಿಯು ಆ ಪೂರ್ವಕ್ರಯಾಧಿಕಾರದ ಸ್ವತ್ತಿನ ಕಬ್ಜೆಯನ್ನು ಪಡೆದ ಬಳಿಕ ಮಾತ್ರ ಅದರ ಸ್ವಾಮಿತ್ವವನ್ನು ಹೊಂದುವನು. ಮೂಲ ಖರೀದಿಗಾರನು ಪೂರ್ವಕ್ರಯಾಧಿಕಾರಿಗೆ ಕಬ್ಜೆಯನ್ನು ಕೊಡುವ ಹೊರತು ಅಲ್ಲಿ ಅದರ ಹಕ್ಕು ಅವನಿಗೆ ಹಸ್ತಾಂತರಿಸಲ್ಪಡುವುದಿಲ್ಲ. ಆದರೆ ಮೂಲ ಖರೀದಿಗಾರನು ತನಗೆ ಆ ಸ್ವತ್ತಿನ ಕಬ್ಜೆಯನ್ನು ಒಂದು ನ್ಯಾಯಾಲಯದ ಡಿಕ್ರಿಯ ಮೇರೆಗೆ ಮಾತ್ರ ಕೊಡಬೇಕೆಂಬುದಾಗಿ ಪಟ್ಟು ಹಿಡಿಯಬಹುದು. ಪೂರ್ವಕ್ರಯಾಧಿಕಾರಿಗೆ ಕಬ್ಜೆಯ ಪ್ರದಾಯಕತ್ವವನ್ನು ಕೊಡಬೇಕೆಂಬ ಬಗ್ಗೆ ಆದೇಶಿಸುವ ಡಿಕ್ರಿಯು ದಿವಾನೀ ಪ್ರಕ್ರಿಯಾಸಂಹಿತೆ 1908 ಇದರ ನಿಯಮ 14, ಆದೇಶ 20 ಇದರ ಮೇರೆಗೆ ಮಾಡಲಾಗುತ್ತದೆ. ಅಂತಹ ಒಂದು ಡಿಕ್ರಿಯು ಸ್ವತ್ತನ್ನು ಹಸ್ತಾಂತರಣಗೊಳಿಸುವ ದಿನಾಂಕ ಹಾಗೂ ಅದರ ಬೆಲೆಯ ಹಣವನ್ನು ಸಂದಾಯ ಮಾಡುವ ದಿನಾಂಕವನ್ನು ಸೂಚಿಸುತ್ತದೆ. ಪೂರ್ವಕ್ರಯಾಧಿಕಾರದ ಡಿಕ್ರಿಯ ಮೇರೆಗೆ ಆ ಖರೀದಿಗಾರನಿಗೆ ಪೂರ್ವಕ್ರಯಾಧಿಕಾರಿಯು ಹಣ ಸಂದಾಯ ಮಾಡುವ ದಿನಾಂಕದಂದು ಆ ಸ್ವತ್ತು ಅವನಲ್ಲಿ ನಿಹಿತವಾಗುತ್ತದೆ. ಮೂಲ ವಿಕ್ರಯ ಮತ್ತು ಪೂರ್ವಕ್ರಯಾಧಿಕಾರಿಗೆ ಮಾಡಲಾಗುವ ಪುನರ್ ವಿಕ್ರಯ ಇವೆರಡರೊಳಗಿನ ಅವಧಿಯಲ್ಲಿ ಆ ಸ್ವತ್ತಿನ ಕಬ್ಜೆಯನ್ನು ಮುಂದುವರಿಸಲು ಮೂಲ ಖರೀದಿಗಾರನು ಹಕ್ಕುಳ್ಳನಾಗುವನು. ಆದುದರಿಂದ ಅವನು ಆ ಸ್ವತ್ತಿನ ಫಲೋಪಭೋಗವನ್ನು ಪಡೆಯಲು ಹಕ್ಕುದಾರನಾಗಿರುವನು. ಆದರೆ ಒಂದು ಡಿಕ್ರಿಯಲ್ಲಿ ನಿರ್ದೇಶಿಸಲಾದ ಪ್ರಕಾರ ಖರೀದಿ ಹಣವು ಸಂದಾಯವಾದ ಬಳಿಕ ಅದರ ಸ್ವಾಮಿ

ತ್ವವು ಪೂರ್ವಕ್ರಯಾಧಿಕಾರಿಯಲ್ಲಿ ನಿಹಿತಗೊಳ್ಳುತ್ತದೆ; ಆದುದರಿಂದ ಒಂದೊಮ್ಮೆ ಆ ಸ್ವತ್ತಿನ ಕಬ್ಜೆಯು ಮೂಲ ಖರೀದಿಗಾರನಲ್ಲಿ ಮತ್ತು ಮುಂದುವರೆಯುತ್ತಿದೆ ಯೆಂದಾದರೆ ಅಲ್ಲಿ ಆ ಪೂರ್ವಕ್ರಯಾಧಿಕಾರಿಯು ಮಧ್ಯಾವಧಿ ಲಾಭಗಳಿಗಾಗಿ ಹಕ್ಕು ದಾವೆ ಮಾಡಬಹುದು.

ಈ ಹಕ್ಕಿನ ನಿರ್ಮೂಲನ
Extinction of Right

ಪೂರ್ವಕ್ರಯಾಧಿಕಾರದ ಹಕ್ಕು ಎಂದು ನಷ್ಟಗೊಳ್ಳುತ್ತದೆ ?
(When the Right of Pre-Emption is Last ?)

ಈ ಕೆಳಗಿನ ಪರಿಸ್ಥಿತಿಗಳಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ನಿರ್ಮೂಲನ ಗೊಳ್ಳುತ್ತದೆ :

1) ಮೌನ ಸಮ್ಮತಿಯಿಂದ (Acquiscence are Wairer)

ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು ತನ್ನ ಹಕ್ಕನ್ನು ಪರಿತ್ಯಜನೆ ಮಾಡಿದರೆ ಇದು ಶಾಶ್ವತವಾಗಿ ಅವನಿಂದ ಕಳೆದುಹೋಗುತ್ತದೆ. ಒಬ್ಬ ಪೂರ್ವ ಕ್ರಯಾಧಿಕಾರಿಯು ಮೌನ ಸಮ್ಮತಿಯಿಂದ ಈ ಹಕ್ಕನ್ನು ಪರಿತ್ಯಜನೆ ಮಾಡಬಹುದು. ಒಂದೊಮ್ಮೆ ಅವನು ತನ್ನ ಈ ಹಕ್ಕನ್ನು ವ್ಯಕ್ತಗೊಳಿಸುವುದಿಲ್ಲವೆಂದಾದರೆ ಅಲ್ಲಿ ಅವನು ಮೌನ ಸಮ್ಮತಿಯಿಂದ ಇದನ್ನು ಪರಿತ್ಯಜಿಸಿರುವನೆಂಬುದಾಗಿ ಎಣಿಸಲ್ಪಡು ವನು. ಪೂರ್ವಕ್ರಯಾಧಿಕಾರವುಳ್ಳ ಒಂದು ಸ್ವತ್ತಿನ ವಿಕ್ರಯವಾದಾಗ ಆ ಪೂರ್ವ ಕ್ರಯಾಧಿಕಾರಿಯು ಒಂದೇ ತನ್ನ ಈ ಹಕ್ಕನ್ನು ಕೇಳಿಕೊಳ್ಳಬಹುದು ಅಥವಾ ಸರಿಯಾದ ಅಭಿಯಾಚನೆ ಮಾಡದೆ ಇದನ್ನು ಬಿಟ್ಟುಬಿಡಬಹುದು. ಒಂದು ವಿಕ್ರಯವಾದುದು ತಿಳಿದಾಗಲೂ ಸಹ ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು ಅಭಿಯಾಚನೆಯ ಔಪಚಾರಿಕತೆಯನ್ನು ಪಾಲಿಸದಿದ್ದರೆ ಅವನು ತನ್ನ ಈ ಹಕ್ಕನ್ನು ಪರಿತ್ಯಜಿಸಿರುವನು ಎಂಬುದಾಗಿ ಎಣಿಸಲ್ಪಡುವನು.

ಒಂದೊಮ್ಮೆ ಆ ಪೂರ್ವಕ್ರಯಾಧಿಕಾರಿಯು ಮೂಲ ಖರೀದಿಗಾರನೊಂದಿಗೆ ಒಂದೊಮ್ಮೆ ಒಂದು ಒಪ್ಪಂದ ಮಾಡಿದರೆ ಅಲ್ಲಿಯೂ ಸಹ ಅವನ ಪೂರ್ವಕ್ರಯಾಧಿ ಕಾರದ ಈ ಹಕ್ಕು ಪರಿತ್ಯಜನೆಯಿಂದ ಅಥವಾ ಮೌನ ಸಮ್ಮತಿಯಿಂದ ನಷ್ಟವಾಗಿದೆ ಯೆಂದು ಎಣಿಸಲ್ಪಡುತ್ತದೆ. ಉದಾಹರಣೆಗಾಗಿ, ಆ ಪೂರ್ವಕ್ರಯಾಧಿಕಾರದ ಸ್ವತ್ತನ್ನು ಮೂಲ ಖರೀದಿಗಾರನಿಗೆ ತಾನು ಮಾರಾಟಮಾಡುವ ಒಂದು ಪ್ರಸ್ತಾವ ವನ್ನು ಆ ಪೂರ್ವಕ್ರಯಾಧಿಕಾರಿಯು ಮಾಡಿದರೆ ಅಲ್ಲಿ ಅವನು ತನ್ನ ಮೌನ ಸಮ್ಮತಿ ಯನ್ನು ಕೊಟ್ಟಿರುವನೆಂಬುದಾಗಿ ಎಣಿಸಲ್ಪಡುವನು, ಮತ್ತು ಅವನ ಈ ಹಕ್ಕು

ಕಳೆದುಹೋಗುತ್ತದೆ. ಇದೇ ರೀತಿಯಲ್ಲಿ, ಒಂದೊಮ್ಮೆ ಆ ಪೂರ್ವಕ್ರಯಾಧಿಕಾರಿಯು ಮೂಲ ಖರೀದಿಗಾರನೊಂದಿಗೆ ಕೂಡಿಕೊಂಡು ಆ ಪೂರ್ವಕ್ರಯಾಧಿಕಾರದ ಭೂಮಿಯ ಮೇಲೆ ಚೌಕಾಸಿ ಮಾಡಲು ಒಪ್ಪಿದರೆ ಅಲ್ಲಿ ಅವನ ಅವ್ಯಕ್ತ ಮೌನ ಸಮ್ಮತಿಯು ಕೊಡಲ್ಪಟ್ಟಿದೆಯೆಂಬುದಾಗಿ ಎಣಿಸಲಾಗುತ್ತದೆ.

2) ಸಹ-ವಾದಿಗಳ ತಪ್ಪು ಸಂಯೋಜನೆ (Missjoinder of Co-plaintiffs)

ಒಂದೊಮ್ಮೆ ಪೂರ್ವಕ್ರಯಾಧಿಕಾರವುಳ್ಳ ಒಬ್ಬ ವ್ಯಕ್ತಿಯು ಪೂರ್ವಕ್ರಯಾಧಿಕಾರವಿಲ್ಲದ ಇತರ ವ್ಯಕ್ತಿಗಳನ್ನು ಹಕ್ಕುದಾರರೆಂಬಂತೆ ಆ ದಾವೆಗಳಲ್ಲಿ ವಾದಿಗಳನ್ನಾಗಿ ಕೂಡಿಸಿದ್ದರೆ ಅಲ್ಲಿ ಆ ದಾವೆಯು ಕಿತ್ತು ಹಾಕಲ್ಪಡುತ್ತದೆ, ಮತ್ತು ಪೂರ್ವಕ್ರಯಾಧಿಕಾರಿಯ ಹಕ್ಕು ನಿರ್ಮೂಲನಗೊಳ್ಳುತ್ತದೆ. ಆದರೆ ಸಹ-ವಾದಿಗಳಾಗಿ ಸೇರಿಸಲ್ಪಟ್ಟಿರುವ ವ್ಯಕ್ತಿಗಳು ಅನ್ಯಥಾ ಸಕ್ಷಮರಾಗಿದ್ದು ಸರಿಯಾದ ಅಭಿಯಾಚನೆಗಳನ್ನು ಮಾಡಿಲ್ಲವೆಂದಾದರೆ ಅಲ್ಲಿ ಆ ದಾವೆಯು ಕಿತ್ತು ಹಾಕಲ್ಪಡುವುದಿಲ್ಲ, ಮತ್ತು ಆ ಪೂರ್ವಕ್ರಯಾಧಿಕಾರಿಯ ಹಕ್ಕು ನಷ್ಟವಾಗುವುದಿಲ್ಲ. ಆದರೆ ಆ ಸಹ-ವಾದಿಗಳು ಪೂರ್ವಕ್ರಯಾಧಿಕಾರದ ತಮ್ಮ ಹಕ್ಕನ್ನು ಪಡೆಯಲಾರರು.

3) ಮುಟ್ಟುಗೋಲು (Forfeiture)

ಈ ಕೆಳಗಿನ ಪರಿಸ್ಥಿತಿಗಳಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ಮುಟ್ಟುಗೋಲಿನಿಂದ ನಷ್ಟವಾಗುತ್ತದೆ :

(i) ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು ತಾನು ಪಡೆದಿರುವ ಒಂದು ಪ್ರತಿಫಲಕ್ಕಾಗಿ ತನ್ನ ಹಕ್ಕನ್ನು ವಿಮೋಚನೆಗೊಳಿಸಿದರೆ ಅಲ್ಲಿ ಪೂರ್ವಕ್ರಯಾಧಿಕಾರದ ಹಕ್ಕು ಮುಟ್ಟುಗೋಲಿನಿಂದ ನಷ್ಟವಾಗುತ್ತದೆ. ಹನಫೀ ಕಾನೂನಿನ ಪ್ರಕಾರ ಒಬ್ಬ ಪೂರ್ವಕ್ರಯಾಧಿಕಾರಿಯು ಇಂತಹ ಒಂದು ವಿಮೋಚನೆಗಾಗಿ ಯಾವತ್ತೂ ಪ್ರತಿಫಲದ ಸಂದಾಯಕ್ಕಾಗಿ ಹಕ್ಕುದಾವೆ ಮಾಡುವಂತಿಲ್ಲ. ಆದರೆ ಶಿಯಾ ಕಾನೂನಿನ ಪ್ರಕಾರ ಅವನು ಕಾನೂನುಬದ್ಧವಾಗಿ ಈ ಪ್ರತಿಫಲಕ್ಕಾಗಿ ಹಕ್ಕುದಾವೆ ಮಾಡಬಹುದು.

(ii) ಒಂದೊಮ್ಮೆ ಒಬ್ಬ ಪೂರ್ವಕ್ರಯಾಧಿಕಾರಿಯು ತನ್ನ ಸ್ವಂತ ಸ್ವತ್ತನ್ನು ಒಬ್ಬ ಮೂರನೇ ಪಕ್ಷಗಾರನಿಗೆ ಹಸ್ತಾಂತರಿಸಿದರೆ ಅವನ ಈ ಹಕ್ಕು ನಷ್ಟವಾಗುತ್ತದೆ.

(iii) ಒಂದೊಮ್ಮೆ ಮೂಲ ವಿಕ್ರಯವು ಶೂನ್ಯಗೊಳಿಸಲ್ಪಟ್ಟರೆ ಅಥವಾ ಪೂರ್ವಕ್ರಯಾಧಿಕಾರಿಗೆ ಅದನ್ನು ಕಾರ್ಯಾಚರಣೆಗೆ ತರುವುದು ಕಷ್ಟವಾದರೆ ಅಲ್ಲಿ ಪುನರ್ವಿಕ್ರಯವು ಕಾರ್ಯಾಚರಣೆಗೆ ಬರುವದಿಲ್ಲ ಮತ್ತು ಈ ಹಕ್ಕು ನಷ್ಟವಾಗುತ್ತದೆ

(iv) ಒಂದೊಮ್ಮೆ ಪೂರ್ವಕ್ರಯಾಧಿಕಾರದ ಹಕ್ಕಿಗಾಗಿ ಕೇವಲ ದಾಯವಾದಿಗಳು ಹಕ್ಕುದಾವೆ ಮಾಡಬಹುದಾದರೆ ಅಲ್ಲಿ ಅವರೊಳಗೆ ಒಂದು ವಿಭಜನೆಯಾದಾಗ ಈ ಹಕ್ಕು ನಷ್ಟವಾಗುತ್ತದೆ.

(v) ಕೊನೆಯದಾಗಿ, ಆ ಪೂರ್ವಕ್ರಯಾಧಿಕಾರದ ಸ್ವತ್ತನ್ನು ಮರಳಿ ಖರೀದಿ ಮಾಡುವ ಬಗ್ಗೆ ಪೂರ್ವಕ್ರಯಾಧಿಕಾರಿಯ ಮೇಲೆ ಯಾವತ್ತೂ ಶಾಸನ ಬದ್ಧವಾದ ನಿರ್ಯೋಗ್ಯತೆಯಿದ್ದರೆ ಅಲ್ಲಿ ಆ ಪೂರ್ವಕ್ರಯಾಧಿಕಾರದ ಹಕ್ಕು ನಷ್ಟ ವಾಗುತ್ತದೆ.

4) ಪೂರ್ವಕ್ರಯಾಧಿಕಾರಿಯ ಮರಣ (Death of Pre-Emptor)

ಈಗಾಗಲೆ ಚರ್ಚಿಸಲಾದಂತೆ ಒಂದೊಮ್ಮೆ ಆ ಪೂರ್ವಕ್ರಯಾಧಿಕಾರಿಯು ಮೊದಲನೇ ಅಭಿಯಾಚನೆಯ ಬಳಿಕ ಅಥವಾ, ಎರಡನೇ ಅಭಿಯಾಚನೆಯ ಬಳಿಕ ಅಥವಾ, ಪೂರ್ವಕ್ರಯಾಧಿಕಾರಕ್ಕಾಗಿ ಆ ದಾವೆಯು ಇನ್ನೂ ಇತ್ಯರ್ಥವಾಗದೆ ಉಳಿದಿರುವಾಗ ಮೃತನಾದರೆ ಅವನ ಈ ಹಕ್ಕು ನಿರ್ಮೂಲನವಾಗುತ್ತದೆ. ಆದರೆ ಶಿಯಾ ಮತ್ತು ಶಫಿ ಕಾನೂನುಗಳ ಪ್ರಕಾರ ಒಂದು ದಾವೆಯು ಇನ್ನೂ ಇತ್ಯರ್ಥ ವಾಗದೇ ಉಳಿದಿರುವಾಗ ಆ ಪೂರ್ವಕ್ರಯಾಧಿಕಾರಿಯು ಮೃತನಾದರೆ ಅವನ ಹಕ್ಕು ನಷ್ಟವಾಗುವುದಿಲ್ಲ.

ಅಧ್ಯಾಯ 14

ಸಂಪದಗಳ ಆಡಳಿತ

Administration of Estates

ಸಾಮಾನ್ಯವಾಗಿ ಸಂಪದಗಳ ಆಡಳಿತ ಎಂಬ ವಾಕ್ಸರಣಿಯ ಅರ್ಥವು ಒಬ್ಬ ವ್ಯಕ್ತಿಯು ಮೃತನಾದ ಬಳಿಕ ಅವನ ಸ್ವತ್ತುಗಳ ವಂಟನ ಮತ್ತು ವಿಭಜನೆ ಎಂಬುದಾಗಿರುತ್ತದೆ. ಒಬ್ಬ ವ್ಯಕ್ತಿಯು ಮೃತನಾದ ಬಳಿಕ ಅವನ ಸ್ವತ್ತು ಉತ್ತರಾದಾತರಿಗೆ ಮತ್ತು ಅವನ ಕಾನೂನೀ ವಾರಸುದಾರರಿಗೆ ಸೇರುತ್ತದೆ. ಆದರೆ, ಯಾವತ್ತೂ ಮರಣಶಾಸನ ಅಥವಾ ವಾರಸಿನ ಪ್ರಕಾರ ಸ್ವತ್ತುಗಳನ್ನು ಹಂಚುವುದಕ್ಕಿಂತ ಮೊದಲು ಆ ಮೃತನ ಸ್ವತ್ತು ಅವನು ಬಿಟ್ಟು ಹೋದ ಬಾಧ್ಯತೆಗಳ ಪ್ರಭಾರವನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಾಗೆಂದರೆ, ಒಬ್ಬ ವ್ಯಕ್ತಿಯು ಮರಣದ ಬಳಿಕ, ಅವನ ಸ್ವತ್ತುಗಳನ್ನು ಅವನ ಋಣ ಮತ್ತು ಸರಕಾರೀ ಬಾಕಿಗಳನ್ನು ಸಂದಾಯಂ ಮಾಡುವದಕ್ಕಾಗಿ ಉಪಯೋಗಿಸಲಾಗುತ್ತದೆ. ಒಬ್ಬ ವ್ಯಕ್ತಿಯ ಮರಣದ ಬಳಿಕ ಅವನ ಸ್ವತ್ತುಗಳ ಆಡಳಿತ ಮತ್ತು ನಿಕಾಲೆ ಇವುಗಳಿಗೆ ಸಂಬಂಧಪಟ್ಟ ಎಲ್ಲಾ ವ್ಯವಸ್ಥೆಗಳು ಅವನ ಸಂಪದಗಳ ಆಡಳಿತದ ಪರಿಧಿಯೊಳಗೆ ಬರುತ್ತದೆ. ಮೂಲ ಇಸ್ಲಾಮಿ ಕಾನೂನು ಸಹ ಒಬ್ಬ ವ್ಯಕ್ತಿಯು ಮೃತನಾದಾಗ ಅವನ ಸ್ವತ್ತುಗಳನ್ನು ಅವನ ಋಣ ಇತ್ಯಾದಿಗಳನ್ನು ಸಂದಾಯಮಾಡಲು ಉಪಬಂಧಮಾಡಿದೆ.

ಒಬ್ಬ ಮುಸಲ್ಮಾನನ ಮರಣದ ಬಳಿಕ, ಅವನಿಂದ ಬಿಡಲ್ಪಟ್ಟಿರುವ ಸ್ವತ್ತುಗಳು ಈ ಕೆಳಗಿನ ಸಂದಾಯಗಳಿಗಾಗಿ ಅನ್ವಯಗೊಳಿಸಲಾಗುತ್ತವೆ:

(1) ಉತ್ತರಕ್ರಿಯೆ ಮತ್ತು ಮರಣಶಯ್ಯೆಯ ವೆಚ್ಚಗಳು;

(2) ಪ್ರಾಬೇಟ್, ಆಡಳಿತ ಪತ್ರಗಳು ಅಥವಾ ಉತ್ತರಾಧಿಕಾರದ ಪತ್ರಗಳನ್ನು ಪಡೆಯಲು ಉಂಟಾಗಿರುವ ವೆಚ್ಚಗಳು;

(3) ಮೃತನು ಮೃತಪಡುವದಕ್ಕಿಂತ ಮೂರು ತಿಂಗಳುಗಳ ಹಿಂದಿನ ಅವಧಿಯೊಳಗೆ ಅವನ ಸೇವೆ ಮಾಡಿರುವ ನೌಕರರು ಮತ್ತು ಸೇವಕರಿಗೆ ಅಸಂದೇಯವಾಗಿರುವ ಸಂಬಳಗಳು;

(4) ಮೃತನ ಋಣಗಳು ಮತ್ತು

(5) ಮರಣ ಶಾಸನಗಳು.

ಈ ಸಂದಾಯಗಳನ್ನು ಆದ್ಯತೆಯ ಅನುಕ್ರಮಣದಲ್ಲಿ ಮಾಡಬೇಕಾಗುತ್ತದೆ.

ಪ್ರಾಥಮಿಕ ಬಾಧ್ಯತೆಗಳು (Primary liabilities)

ಆದ್ಯತೆಯ ಅನುಕ್ರಮದಲ್ಲಿ ಮೇಲೆ ಹೇಳಲ್ಪಟ್ಟ ನಾಲ್ಕು ಮೊದಲನೇ ಸಂದಾಯಗಳು ಮೃತನ ಸಂಪದ್ದ ಮೇಲಿನ ಪ್ರಾಥಮಿಕ ಬಾಧ್ಯತೆಯೆಂದು ಕರೆಯಲ್ಪಡುತ್ತದೆ. ಸಾಮಾನ್ಯವಾಗಿ ಒಬ್ಬ ಮೃತನ ಸ್ವತ್ತು ಅವನ ಉತ್ತರದಾತರಿಗೆ ಮತ್ತು ಕಾನೂನೀ ವಾರಸುದಾರರಿಗೆ ಸೇರುತ್ತದೆ. ಆದರೆ ಒಬ್ಬ ಉತ್ತರದಾತ ಅಥವಾ ಒಬ್ಬ ಕಾನೂನೀ ವಾರಸುದಾರನು ಮೇಲಿನ ಪ್ರಾಥಮಿಕ ಬಾಧ್ಯತೆಗಳ ವಿಮೋಚನೆಯಾದ ಬಳಿಕ ಮಾತ್ರ ಮೃತನ ಸ್ವತ್ತನ್ನು ಪಡೆಯುವನು. ಮೃತನ ಸಂಪದದ ಆಡಳಿತಗಾರನಾಗುವ ವ್ಯಕ್ತಿಯು ಈ ಪ್ರಾಥಮಿಕ ಬಾಧ್ಯತೆಗಳನ್ನು ಒಂದರ ಬಳಿಕ ಇನ್ನೊಂದರಂತೆ ಆದ್ಯತೆಯ ಅನುಕ್ರಮದಲ್ಲಿ ಸಂದಾಯಮಾಡಬೇಕಾಗುತ್ತದೆ.

ಮೇಲೆ ಹೇಳಲ್ಪಟ್ಟ ಪ್ರಾಥಮಿಕ ಬಾಧ್ಯತೆಗಳು ಪೂರ್ತಿಗೊಳಿಸಲ್ಪಟ್ಟ ಬಳಿಕ ಒಂದೊಮ್ಮೆ ಆ ಮೃತನು ಯಾವತ್ತೂ ಮರಣಶಾಸನವನ್ನು ಮಾಡಿರುವನೆಂದಾದರೆ ಅವನ ಸ್ವತ್ತಿನಿಂದ ಮೂರನೇ ಒಂದರಷ್ಟನ್ನು ಆ ಮರಣಶಾಸನದಿಂದ ಹೆಸರಿಸಲ್ಪಟ್ಟ ಉತ್ತರದಾತನಿಗೆ ಕೊಡಲಾಗುತ್ತದೆ. ಪ್ರಾಥಮಿಕ ಬಾಧ್ಯತೆ ಮತ್ತು ಉತ್ತರದಾನಗಳ ಸಂದಾಯದ ಬಳಿಕ ಉಳಿದ ಸ್ವತ್ತನ್ನು ವಾರಸಿನ ಸ್ವತ್ತೆಂದು ಕರೆಯಲಾಗುತ್ತದೆ, ಮತ್ತು ಅದನ್ನು ಮೃತನ ಕಾನೂನೀ ವಾರಸುದಾರರು ಪಡೆಯುವರು. ಒಂದೊಮ್ಮೆ ಆ ಮೃತನು ಒಬ್ಬ ಸುನ್ನೀ ಮುಸಲ್ಮಾನನಾಗಿದ್ದರೆ ಅಲ್ಲಿ ವಾರಸಿನ ಸಂಬಂಧದಲ್ಲಿ ಸುನ್ನೀ ಕಾನೂನು ಅನ್ವಯಗೊಳ್ಳುತ್ತದೆ ಮತ್ತು ಒಂದೊಮ್ಮೆ ಅವನೊಬ್ಬ ಶಿಯಾ ಮುಸಲ್ಮಾನನಾಗಿದ್ದರೆ ಅಲ್ಲಿ ವಾರಸಿನ ಶಿಯಾ ಕಾನೂನು ಅನ್ವಯವಾಗುತ್ತದೆ. ಉತ್ತರಾಧಿಕಾರವು ಮೃತನ ಮತೀಯ ಕಾನೂನಿನಿಂದ ಶಾಸಿಸಲ್ಪಡುತ್ತದೆ, ಆದುದರಿಂದ ಮೃತನ ಮರಣಶಾಸನ ಮತ್ತು ವಾರಸು ಇವು ಆ ಮೃತನು ಮರಣ ಕಾಲದಲ್ಲಿ ಯಾವ ಪಂಗಡದವನಾಗಿದ್ದನೋ ಆ ಪಂಗಡದ ಕಾನೂನಿನಿಂದ ಶಾಸಿತವಾಗುತ್ತವೆ.

ನಿಷ್ಪಾದಕ ಮತ್ತು ಆಡಳಿತಗಾರ (Executor and Administrator)

ನಿಷ್ಪಾದಕನೆಂದರೆ ಮರಣಶಾಸಕನಿಂದ ತನ್ನ ಮರಣಶಾಸನವನ್ನು ಕಾರ್ಯಾಚರಣೆಗೆ ತರುವುದಕ್ಕಾಗಿ ನೇಮಿಸಲ್ಪಟ್ಟಿರುವ ಒಬ್ಬ ವ್ಯಕ್ತಿಯಾಗಿರುವನು. ಒಬ್ಬ ಆಡಳಿತಗಾರನ ನೇಮಕದ ಬಗ್ಗೆ ಮುಸ್ಲಿಮ್ ಕಾನೂನು ಉಪಬಂಧ ಮಾಡಿರುತ್ತದೆ. ಇವನನ್ನು ವಶೀ (Wasi) ಎಂಬುದಾಗಿ ಕರೆಯಲಾಗುತ್ತದೆ. ಈಗ ನಿಷ್ಪಾದಕರನ್ನು ಭಾರತೀಯ ಉತ್ತರಾಧಿಕಾರ ಅಧಿನಿಯಮ 1925 ಇದರ ಕ. 2 (c) ಇದರ ಮೇರೆಗೆ ನೇಮಿಸಬಹುದು. ಈ ಅಧಿನಿಯಮದಲ್ಲಿ ಪರಿಭಾಷಿಸಲ್ಪಟ್ಟ ಪ್ರಕಾರ ಒಬ್ಬ ನಿಷ್ಪಾದಕನೆಂದರೆ ಮೃತನ ಮರಣಶಾಸನವನ್ನು ಕಾರ್ಯಾಚರಣೆಗೆ ತರುವ ಉದ್ದೇಶದಿಂದ ಮರಣಶಾಸಕನಿಂದ ನೇಮಿಸಲ್ಪಟ್ಟಿರುವ ಒಬ್ಬ ವ್ಯಕ್ತಿ. ಒಬ್ಬ

ಮುಸಲ್ಮಾನನು ಕಾನೂನು ಬದ್ಧವಾಗಿ ಒಬ್ಬ ಮುಸಲ್ಮಾನೇತರನನ್ನೂ ಸಹ ತನ್ನ ಮರಣಶಾಸನದ ನಿಷ್ಪಾದಕನನ್ನಾಗಿ ನೇಮಿಸಬಹುದು. ಒಂದು ಮರಣಶಾಸನವನ್ನು ಕಾರ್ಯಾಚರಣೆಗೆ ತರಲು ಒಬ್ಬ ನಿಷ್ಪಾದಕನು ಅನಿವಾರ್ಯನಲ್ಲ. ಕಾನೂನಿನ ಪ್ರಕಾರ ಒಬ್ಬ ನಿಷ್ಪಾದಕನಿಲ್ಲದೆಯೂ ಸಹ ಒಂದು ಮರಣಶಾಸನವು ಕಾರ್ಯಾಚರಣೆಗೆ ಬರಬಹುದು. ಒಂದೊಮ್ಮೆ ಒಬ್ಬ ಮೃತ ಮುಸಲ್ಮಾನನು ಯಾವುದಾದರೊಂದು ಮರಣಶಾಸನವನ್ನು ನಿಷ್ಪಾದಿಸಿರುವನಾದರೆ ಮತ್ತು ಅದಕ್ಕಾಗಿ ಅವನೊಬ್ಬ ನಿಷ್ಪಾದಕನನ್ನು ನೇಮಿಸಿರುವನೆಂದಾದರೆ, ಅಂತಹ ಒಬ್ಬ ನಿಷ್ಪಾದಕನು ಪ್ರಾಥಮಿಕ ಸಂದಾಯಗಳಿಗಾಗಿ ಆ ಸ್ವತ್ತನ್ನು ಮೊದಲು ವಿನಿಯೋಗಿಸಲು ಬಾಧ್ಯನಾಗಿರುವನು. ಅಂತಹ ಸಂದಾಯಗಳು ಮಾಡಲ್ಪಟ್ಟ ಬಳಿಕ ಅಧಿಶೇಷವಾಗಿರುವ ಸ್ವತ್ತುಗಳನ್ನು ಅವನು ಆ ಮರಣಶಾಸನದ ಪ್ರಕಾರ ಹಂಚಬೇಕಾಗುತ್ತದೆ. ಒಬ್ಬ ನಿಷ್ಪಾದಕನು ಮೃತನ ಸಂಪದಗಳ ಆಡಳಿತಕ್ಕಾಗಿ ನ್ಯಾಯಾಲಯದಿಂದ ಒಂದು ಪ್ರಾಬೇಟ್ ಇದನ್ನು ಪಡೆಯಬಹುದು. ಆದರೆ ಪ್ರತಿಯೊಂದು ಪ್ರಕರಣದಲ್ಲಿ ಒಬ್ಬ ನಿಷ್ಪಾದಕನು ಒಂದು ಪ್ರಾಬೇಟ್ ಪಡೆಯಬೇಕಾಗಿಲ್ಲ; ಒಂದು ಪ್ರಾಬೇಟ್ ಇಲ್ಲದೆಯೂ ಸಹ ಒಂದು ಮರಣಶಾಸನವು ಪುರಾವೆಯಲ್ಲಿ ಸ್ವೀಕರಿಸಲ್ಪಡುತ್ತದೆ. ಆದರೆ ಒಂದೊಮ್ಮೆ ಮರಣಶಾಸಕನು ಯಾವತ್ತೂ ಋಣವನ್ನು ಬಿಟ್ಟಿರುವನೆಂದಾದರೆ ಅಲ್ಲಿ ಪ್ರಾಬೇಟ್ ಪಡೆಯುವ ಅವಶ್ಯಕತೆಯಿದೆ. ಒಂದೊಮ್ಮೆ ಒಬ್ಬ ಮುಸಲ್ಮಾನನು ಮರಣಶಾಸನವಿಲ್ಲದೆ ಮೃತನಾದರೆ ಅವನ ಸ್ವತ್ತುಗಳನ್ನು ಒಬ್ಬ ಆಡಳಿತಗಾರನು ಆಡಳಿತಮಾಡಬಹುದು. ಪ್ರಾಥಮಿಕವಾಗಿ ಮೃತನ ಕಾನೂನೀ ವಾರಸುದಾರರು ಆಡಳಿತದ ಪತ್ರವನ್ನು ಪಡೆಯಲು ಹಕ್ಕುದಾರರಾಗಿರುವರು. ಮುಸ್ಲಿಮ್ ಮತೀಯ ಕಾನೂನಿನಲ್ಲಿ ಒಬ್ಬ ಆಡಳಿತಗಾರನ ನೇಮಕತ್ವದ ಬಗ್ಗೆ ಉಪಬಂಧವಿಲ್ಲ. ಆದರೆ ಆಡಳಿತ ಪತ್ರಗಳನ್ನು ಮಂಜೂರುಮಾಡಿ ಒಬ್ಬ ಆಡಳಿತಗಾರನನ್ನು ಒಂದು ಜಿಲ್ಲಾ ನ್ಯಾಯಾಲಯವು ನೇಮಿಸುವ ಬಗ್ಗೆ ಶಾಸನಬದ್ಧ ಕಾನೂನು ಉಪಬಂಧ ಮಾಡಿದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಆ ಆಡಳಿತ ಪತ್ರಗಳನ್ನು ಪಡೆಯುವ ಅವಶ್ಯಕತೆಯಿರುವದಿಲ್ಲ. ಆದರೆ ಒಂದೊಮ್ಮೆ ಮೃತನು ಸಾಲಮಾಡಿದ್ದನೆಂದಾದರೆ ಅಲ್ಲಿ ಅವನ ಋಣದಾತರು ಅವನ ಆಡಳಿತ ಪತ್ರಗಳನ್ನು ಪಡೆಯದ ಹೊರತು ಆ ಋಣಗಳ ವಸೂಲಿಗಾಗಿ ನ್ಯಾಯಾಲಯದ ಒಂದು ಡಿಕ್ರಿ ಪಡೆಯುವಂತಿಲ್ಲ.

ಒಂದೊಮ್ಮೆ ಒಬ್ಬ ನಿಷ್ಪಾದಕ ಅಥವಾ ಆಡಳಿತಗಾರನು ನೇಮಿಸಲ್ಪಟ್ಟರೆ ಅವನು ಮೃತನ ಸಂಪದವನ್ನು ಪ್ರತಿನಿಧಿಸುವನು. ಒಬ್ಬ ನಿಷ್ಪಾದಕ ಅಥವಾ ಆಡಳಿತಗಾರನು ಮೃತನ ಸ್ವತ್ತುಗಳನ್ನು ಒಟ್ಟುಗೂಡಿಸಿ ಅವುಗಳನ್ನು ಒಂದು ವ್ಯವಸ್ಥೆಯಲ್ಲಿಟ್ಟು ಅವುಗಳ ವಂಟಿನ ಮಾಡುವದು ಅವನ ಕರ್ತವ್ಯವಾಗಿರುತ್ತದೆ ಮತ್ತು ಅವುಗಳಲ್ಲಿ ಪ್ರಥಮವಾಗಿ ಅವನು ಪ್ರಾಥಮಿಕ ಬಾಧ್ಯತೆಗಳನ್ನು ಸಂದಾಯ ಮಾಡುವನು ಮತ್ತು ಆ ಬಳಿಕ ಉತ್ತರಾದಾತರಿಗೆ ಮತ್ತು ವಾರಸುದಾರರಿಗೆ ಹಂಚು

ವನು. ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 ಇದರ ಕ. 307(2) (i) ಇದರ ಪ್ರಕಾರ ಒಬ್ಬ ನಿಷ್ಪಾದಕನು ತನ್ನ ಸಂಪದದ ನಿಕಾಲೆಯ ಬಗ್ಗೆ ಮೃತನು ಹೇರಿರುವ ನಿರ್ಬಂಧನೆಗಳಿಗೆ ಬಾಧ್ಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವನು. ಆದರೆ ಒಂದೊಮ್ಮೆ ಒಬ್ಬ ನಿಷ್ಪಾದಕನು ಒಂದು ಪ್ರಾಬೆಟ್ ಪಡೆದಿರುವನೆಂದಾದರೆ ಅಲ್ಲಿ ಆ ನ್ಯಾಯಾಲಯವು ಮೃತನ ನಿರ್ಬಂಧನೆಗಳನ್ನು ಮೀರಿಯೂ ಸಹ ಆ ನಿಷ್ಪಾದಕನು ಆ ಸ್ವತ್ತುಗಳನ್ನು ನಿಕಾಲೆ ಮಾಡುವಂತೆ ಅವನಿಗೆ ಅನುಮತಿಕೊಡಬಹುದು. ಒಬ್ಬ ನಿಷ್ಪಾದಕ ಅಥವಾ ಆಡಳಿತಗಾರನು ಒಬ್ಬ ಬರೀ ಟ್ರಸ್ಟಿಯ ಸ್ವರೂಪದಲ್ಲಿರುವನು. ಅವನು ವಾರಸುದಾರರ ಮೂರನೇ ಎರಡರಷ್ಟು ಪಾಲಿಗೆ ಕೇವಲ ಟ್ರಸ್ಟಿಯಾಗಿಯೂ ಮತ್ತು ಉತ್ತರಾದಾತರ ಪಾಲಿನ ಸಂಬಂಧದಲ್ಲಿ ಅವನೊಬ್ಬ ಕ್ರಿಯಾಶೀಲ ಟ್ರಸ್ಟಿಯಾಗಿಯೂ ವರ್ತಿಸುವನು. ಒಬ್ಬ ಆಡಳಿತಗಾರನ ಶಕ್ತಿಗಳು ಮತ್ತು ಕರ್ತವ್ಯಗಳು ಒಬ್ಬ ನಿಷ್ಪಾದಕನ ಶಕ್ತಿ ಮತ್ತು ಕರ್ತವ್ಯಗಳಿಗೆ ಬಾಧ್ಯಗೊಳಿಸುವ ನಿರ್ಬಂಧನೆಗಳಿಗೆ ಬಾಧ್ಯವಾಗಿರುತ್ತವೆ. ಅವನು ನ್ಯಾಯಾಲಯದ ಪೂರ್ವಸಮ್ಮತಿಯಿಲ್ಲದೆ ಆ ಸ್ಥಿರ ಸ್ವತ್ತುಗಳನ್ನು ವಿಕ್ರಯ, ದಾನ, ಅಡಮಾನ ಮತ್ತು ವಿನಿಮಯ ಮಾಡುವಂತಿಲ್ಲ. ಆ ಸಂಪದವನ್ನು ಅವನು ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಭೋಗ್ಯಾರ್ಪಣೆಮಾಡುವಂತಿಲ್ಲ. ಒಬ್ಬ ನಿಷ್ಪಾದಕ ಅಥವಾ ಆಡಳಿತಗಾರನಿಂದಾಗಿರುವ ಅನಧಿಕೃತವಾದ ಒಂದು ಸಂಪದದ ಹಸ್ತಾಂತರಣವು ಆ ಸ್ವತ್ತಿನಲ್ಲಿ ಯಾವತ್ತೂ ಹಿತಸಂಬಂಧ ಹೊಂದಿರುವ ವ್ಯಕ್ತಿಯ ಇಚ್ಛೆಯ ಮೇರೆಗೆ ಶೂನ್ಯಕರಣೀಯವಾಗುತ್ತದೆ.

ಸಂಪದದ ನಿಹಿತಗೊಳ್ಳುವಿಕೆ (Vesting of the estate)

ಒಬ್ಬ ಮುಸಲ್ಮಾನನ ಮರಣದ ಬಳಿಕ ಅವನ ಸ್ವತ್ತುಗಳು ತಕ್ಷಣದಲ್ಲಿ ಅವನ ನಿಷ್ಪಾದಕನಲ್ಲಿ ನಿಹಿತಗೊಳ್ಳುತ್ತವೆ, ಆದರೆ ಆ ಮೃತನು ಒಂದು ಮರಣ ಶಾಸನವನ್ನು ನಿಷ್ಪಾದಿಸಿರಬೇಕು. ಹಾಗೂ ಒಬ್ಬ ನಿಷ್ಪಾದಕನನ್ನು ನೇಮಿಸಿರಬೇಕು. ಆ ನಿಷ್ಪಾದಕನು ಮೃತನ ಸಂಪದದ ಕಾನೂನೀ ಪ್ರತಿನಿಧಿಯಾಗಿ ವ್ಯವಹರಿಸುವನು. ಒಂದೊಮ್ಮೆ ಒಬ್ಬ ನಿಷ್ಪಾದಕನು ನೇಮಿಸಲ್ಪಟ್ಟಿಲ್ಲವೆಂದಾದರೆ, ಆಡಳಿತ ಪತ್ರಗಳು ಒಬ್ಬ ಆಡಳಿತದಾರನಿಂದ ಪಡೆಯಲಾಗಿವೆಯೆಂದಾದರೆ ಅಲ್ಲಿ ಆ ಮೃತನ ಸಂಪದವು ಅಂತಹ ಒಬ್ಬ ಆಡಳಿತಗಾರನಲ್ಲಿ ನಿಹಿತವಾಗುತ್ತವೆ.

ಆದರೆ ಒಂದೊಮ್ಮೆ ಒಬ್ಬ ನಿಷ್ಪಾದಕನಾಗಲಿ ಅಥವಾ ಆಡಳಿತಗಾರನಾಗಲಿ ನೇಮಿಸಲ್ಪಟ್ಟಿಲ್ಲವೆಂದಾದರೆ ಅಲ್ಲಿ ಆ ಮೃತನ ಸ್ವತ್ತುಗಳು ಅವನ ಕಾನೂನೀ ವಾರಸುದಾರರಲ್ಲಿ ನಿಹಿತಗೊಳ್ಳುತ್ತವೆ.

ಒಂದೊಮ್ಮೆ ಒಬ್ಬ ಮೃತನ ಸ್ವತ್ತು ಅವನ ಕಾನೂನೀ ವಾರಸುದಾರರಲ್ಲಿ ನಿಹಿತಗೊಂಡರೆ ಅಲ್ಲಿ ಆ ವಾರಸುದಾರರು ಸಮಷ್ಟೀ ಗೇಣಿದಾರರಾಗಿ ಆ ಸಂಪದಕ್ಕೆ ಉತ್ತರಾಧಿಕಾರಿಗಳಾಗುವರಲ್ಲದೆ ಜಂಟಿ ಗೇಣಿದಾರರಾಗಿ ಆಗುವುದಿಲ್ಲ. ಆದುದರಿಂದ

ಒಬ್ಬ ಮುಸಲ್ಮಾನನ ಮರಣವಾದ ತಕ್ಷಣದಲ್ಲಿ ಅವನ ಕಾನೂನೀ ವಾರಸುದಾರರು ಆ ಸಂಪದವನ್ನು ಸಾಮೂಹಿಕವಾಗಿ ಧಾರಣೆಮಾಡುವರು. ಆದರೆ ಅಲ್ಲಿ ಆ ಸ್ವತ್ತಿನ ವಿಭಜನೆಯಾಗಿಲ್ಲವೆಂದಾದರೂ ಸಹ ಪ್ರತಿಯೊಬ್ಬನ ಪಾಲುಗಳು ಪ್ರತ್ಯೇಕವಾಗಿರುತ್ತವೆ. ಇದರ ಪರಿಣಾಮವಾಗಿ ಆ ಮೃತನ ಋಣಗಳ ಸಂಬಂಧದಲ್ಲಿ ಪ್ರತಿಯೊಬ್ಬ ವಾರಸುದಾರನ ಪಾಲು ಅವನು ಪಡೆದಿರುವ ಪಾಲಿಗೆ ಅನುಪಾತಿಕವಾಗಿರುತ್ತದೆ.

ಜಫ್ರಿ ಬೇಗಮ್ ವಿ. ಅಮೀರ್ ಮೊಹಮದ್‌ಖಾನ್
Jafri Begum Vs. Amir MohamabKhan

ಸಿದ್ಧಾಂತ

ಒಬ್ಬ ಮುಸಲ್ಮಾನನು ಮರಣಶಾಸನವಿಲ್ಲದೆ ಮೃತನಾದರೆ ಮತ್ತು ಅವನು ಸಂದಾಯವಾಗಿರದ ಕೆಲವು ಋಣಗಳನ್ನು ಬಿಟ್ಟುಹೋಗಿದ್ದರೆ, ಅವನ ಮರಣದ ತಕ್ಷಣ ಅವನ ಸಂಪದದ ಸ್ವಾಮಿತ್ವವು ಅವನ ವಾರಸುದಾರರಿಗೆ ಪ್ರಾಪ್ತವಾಗುತ್ತದೆ ಮತ್ತು ಅಂತಹ ಪ್ರಾಪ್ತವಾಗುವಿಕೆಯು ಅವನ ಋಣದ ಸಂದಾಯದ ಮೇಲೆ ಅವಲಂಬಿಸಿರುವುದಿಲ್ಲ. ಒಬ್ಬ ಮುಸಲ್ಮಾನನಿಂದ ಸಂದಾಯವಾಗಬೇಕಾದ ಒಂದು ಋಣದ ಸಂಬಂಧದಲ್ಲಿ ಅವನ ವಾರಸುದಾರರ ವಿರುದ್ಧ ಅದನ್ನು ನಿಷ್ಪಾದಿಸುವಾಗ ಋಣೀಯು ಸಂಪದದ ಕಬ್ಜೆಯು ಮಾಡಲ್ಪಟ್ಟರೆ, ಮತ್ತು ಆ ವಾರಸುದಾರರೊಳಗೆ ಒಬ್ಬನು ಆ ಸ್ವತ್ತಿನ ಕಬ್ಜೆಯನ್ನು ಹೊಂದಿಲ್ಲವೆಂದಾದರೆ ಮತ್ತು ಆ ವ್ಯಾಜ್ಯಕ್ಕೆ ಅವನೊಬ್ಬ ಪಕ್ಷಗಾರನಲ್ಲವೆಂದಾದರೆ, ಅಂಥವನು ಆ ಸ್ವತ್ತಿನಲ್ಲಿರುವ ತನ್ನ ಪಾಲಿನ ಬಗ್ಗೆ ಡಿಕ್ರಿಧಾರಕನ ಪ್ರತಿ ಒಂದು ದಾವೆ ಹೂಡಿದರೆ ಅವನು ಮೃತನ ಋಣದಲ್ಲಿ ತನ್ನ ಅನುಪಾತಿಕ ಪಾಲನ್ನು ಸಂದಾಯ ಮಾಡಿದ ಬಳಿಕ ಮಾತ್ರ ಅವನು ತನ್ನ ವಾರಸಿನ ಕಬ್ಜೆಯನ್ನು ಪಡೆಯಲು ಹಕ್ಕುದಾರನಾಗುವನು.

ವಸ್ತುಸ್ಥಿತಿ :

1878 ರಲ್ಲಿ ಅಲಿ ಮೊಹಮದ್ ಖಾನ್ ಇವನು ಮೃತನಾದಾಗ ಅವನು ತನ್ನ ಹಿಂದೆ ತನ್ನ ವಾರಸುದಾರರು, ಹೆತ್ತವರು, ವಿರಾಸತ್ ಬೇಗಮ್ ಎಂಬ ಒಬ್ಬ ವಿಧವೆ ಅಲಿ ಮಹಮದ್ ಮತ್ತು ಅಬ್ದುಲ್ ಮಾಜಿದ್ ಎಂಬ ಇಬ್ಬರು ಮಗಂದಿರು; ಬನಾರಸೀ ಬೇಗಮ್, ನಿಯಾಜ್ ಬೇಗಮ್ ಮತ್ತು ಜಫ್ರಿ ಬೇಗಮ್ ಎಂಬ ಮೂವರು ಮಗಳಂದಿರು ಮತ್ತು ಅಮೀರ್ ಮಹಮದ್ ಖಾನ್ ಎಂಬ ಒಬ್ಬ ಸಹೋದರನನ್ನು ಬಿಟ್ಟು ಹೋಗಿದ್ದನು.

1879ರ ಡಿಶಂಬರ್ 8 ರಂದು ಜಫ್ರಿ ಬೇಗಮ್ ಇವಳ ಪತಿ ಅಬ್ದುಲ್ ರೆಹಮಾನ್ ಇವನು ಮೃತನಿಂದ ತನಗೆ ಬರತಕ್ಕ ಋಣದ ಸಂಬಂಧದಲ್ಲಿ ವಿರಾಸತ್ ಬೇಗಮ್, ಅಲೀ ಅಹಮ್ಮದ್, ಅಬ್ದುಲ್ ಮಾಜಿದ್, ಮತ್ತು ಮೂವರು ಮಗಳಂದಿರ ವಿರುದ್ಧ ಒಂದು ಡಿಕ್ರಿಯನ್ನು ಪಡೆದನು. ಆ ಡಿಕ್ರಿಯು ನಿಷ್ಪಾದನೆಯಲ್ಲಿ

ಮೃತನ ಸಂಪದದ ಒಂದು ಭಾಗವಾಗಿರುವ ಅಕ್ತಿಯಾರ್ ಪುರ್ ಎಂಬ ಒಂದು ಗ್ರಾಮವು ಮಾರಾಟಕ್ಕಿಡಲಾಯಿತು ಮತ್ತು ಅದು ಅಬ್ದುಲ್ ರೆಹಮಾನ್ ಎಂಬ ವನಿಂದ ಖರೀದಿ ಮಾಡಲ್ಪಟ್ಟಿತು.

1882 ರಲ್ಲಿ ಮೃತನ ಸಹೋದರನಾದ ಅಮೀರ್ ಮೊಹಮದ್‌ಖಾನ್ ಇವನು ಆ ವಿಧವೆ, ಮಗಂದಿರು ಮತ್ತು ಮಗಳಂದಿರ ವಿರುದ್ಧ ಒಂದು ದಾವೆ ಹೂಡಿದನು. ಅವನು ಈ ದಾವೆಯ ಮೂಲಕ 168 ಸಿಹಾಮ್‌ಗಳಲ್ಲಿ 35 ಸಿಹಾಮ್‌ಗಳಿಗಾಗಿ ಒಂದು ಹಕ್ಕುದಾವೆ ಮಾಡಿದನು.

ಅಮೀರ್ ಮೊಹಮದ್ ಇವನ ಹೇಳಿಕೆಯ ಪ್ರಕಾರ ತನ್ನ ತಾಯಿಯಾದ ಅಲೀ ಮೊಹಮ್ಮದ್ ಖಾನ್ ಈಕೆಯ ಮರಣವಾಗಿ ಒಂದು ತಿಂಗಳ ಬಳಿಕ ಪನ್ನಾಬೀಬಿಯು ಮೃತಳಾದಳು ಮತ್ತು 28 ಸಿಹಾಮ್‌ಗಳಲ್ಲಿ ಆಕೆಯು ತನ್ನ ಮಗನಿಂದ 28 ಸಿಹಾಮ್‌ಗಳ ವಾರಸು ಪಡೆದಳು, ಇವರಲ್ಲಿ 7 ಆಕೆಯ ಪತಿಯಾದ ಗುಲಾಮ್ ಮೊಹಮ್ಮದ್ ಇವನಿಗೆ ಮತ್ತು 21 ತನಗೆ ಬಂದಿತ್ತು. ಈ ದಾವೆಯು ಹೂಡಲ್ಪಡುವ ಸುಮಾರು ಮೂರು ತಿಂಗಳುಗಳಿಗಿಂತ ಮೊದಲು ಅವನ ತಂದೆ ಗುಲಾಮ್ ಮೊಹಮದ್‌ನು ಮೃತನಾಗಿದ್ದನು; ಮತ್ತು ಅವನು ತನ್ನ ಮಗ ಅಲಿ ಮೊಹಮದ್ ಖಾನ್‌ನಿಂದ 21 ಸಿಹಾಮ್‌ಗಳ ವಾರಸು ಪಡೆದಿದ್ದನು, ಮತ್ತು 7 ಸಿಹಾಮ್‌ಗಳನ್ನು ತನ್ನ ಪತ್ನಿಯಿಂದ ವಾರಸು ಪಡೆದಿದ್ದನು. ಆದುದರಿಂದ ಒಟ್ಟಿನಲ್ಲಿ ಅವನು ೨5 ಸಿಹಾಮ್‌ಗಳ ವಾರಸು ಪಡೆದಿದ್ದನು. ಈ ಸ್ವತ್ತಿನ ದಾವೆಯಲ್ಲಿ ಅಕ್ತಿಯಾರ್‌ಪುರ್ ಗ್ರಾಮವು ಸೇರಿಸಲ್ಪಟ್ಟಿತ್ತು. ಈ ಗ್ರಾಮದ ಸಂಬಂಧದಲ್ಲಿ ಪ್ರತಿವಾದಿಯಾದ ಜಫ್ರಿ ಬೇಗಮ್ ಇವಳು ತನ್ನ ಪತಿಯ ಪ್ರತಿನಿಧಿಯೆಂಬುದಾಗಿ ಹಕ್ಕುದಾವೆ ಮಾಡಿದಳು ಹಾಗೂ ವಾದಿಯು ಇದರಲ್ಲಿ ಪಾಲು ಪಡೆಯಲು ಹಕ್ಕುದಾರನಲ್ಲವೆಂಬುದಾಗಿ ಹೇಳಿದಳು.

ವಿಚಾರಣೆ ನ್ಯಾಯಾಲಯದ ತೀರ್ಪಿನ ಪ್ರಕಾರ ಇಡೀ ಅಕ್ತಿಯಾರ್‌ಪುರ್ ಇದು ಅಲಿ ಮೊಹಮದ ಖಾನ್ ಇವನ ಸಂಪದದ ಭಾಗವಾಗಿರುತ್ತದೆ, ಮತ್ತು ವಾದಿಯು ತನ್ನ ಪಾಲನ್ನು ಪಡೆಯುವುದರಿಂದ ತಡೆಯಲ್ಪಡುವಂತಿಲ್ಲ. ಜಫ್ರಿ ಬೇಗಮ್ ಇವಳು ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದಳು.

ತೀರ್ಪು :

ಅಲಹಾಬಾದ್ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಒಂದೊಮ್ಮೆ ಒಬ್ಬ ವ್ಯಕ್ತಿಯು ಡಿಕ್ರಿಧಾರಕನ ವಿರುದ್ಧ ಒಂದು ದಾವೆಹೂಡಿ ತನ್ನ ಪಾಲನ್ನು ವಸೂಲಿ ಮಾಡ ಬಯಸಿದರೆ, ಅಂಥವನು ಆ ವಾರಸಿನಲ್ಲಿರುವ ತನ್ನ ಪಾಲಿನ ವಸೂಲಿಯ ಕಬ್ಜೆ ಪಡೆಯುವುದಕ್ಕಿಂತ ಮೊದಲು ತನ್ನ ಅನುಪಾತಿಕವಾದ ಋಣದ ಪಾಲನ್ನು ಸಂದಾಯ ಮಾಡಬೇಕಾಗುತ್ತದೆ,

ಋುಣಗಳ ಸಂದಾಯ (Payment of Debts)

ಒಬ್ಬ ಮೃತ ಮುಸಲ್ಮಾನನ ಋಣಗಳ ಸಂದಾಯದ ಬಗ್ಗೆ ಮುಸ್ಲಿಮ್ ಧರ್ಮ ಹಾಗೂ ಕಾನೂನು ಇವೆರಡರಲ್ಲೂ ಮಹತ್ವ ಕೊಡಲ್ಪಟ್ಟಿದೆ. ಮೃತನ ಋಣ ದಾತರು ತಮ್ಮ ಋಣಗಳನ್ನು ಆ ಸಂಪದದ ಕಾನೂನೀ ಪ್ರತಿನಿಧಿಗಳಿಂದ ವಸೂಲಿ ಮಾಡಲು ಹಕ್ಕುದಾರರಾಗಿರುವರು. ಒಂದೊಮ್ಮೆ ಆ ಸಂಪದವು ಒಬ್ಬ ನಿಷ್ಪಾದಕ ನಿಂದ ಅಥವಾ ಆಡಳಿತಗಾರನಿಂದ ಪ್ರತಿನಿಧಿಸಲ್ಪಟ್ಟರೆ ಅಲ್ಲಿ ಆ ಋಣದಾತರು ತಮ್ಮ ಋಣಗಳ ವಸೂಲಿಗಾಗಿ ಆ ನಿಷ್ಪಾದಕ ಅಥವಾ ಆಡಳಿತಗಾರನ ವಿರುದ್ಧ ದಾವೆ ಹೂಡಬೇಕಾಗುತ್ತದೆ. ಆದರೆ ಅಂತಹ ನಿಷ್ಪಾದಕ ಅಥವಾ ಆಡಳಿತಗಾರನು ಪ್ರಾಬೇಟ್ ಅಥವಾ ಆಡಳಿತ ಪತ್ರಗಳನ್ನು ಪಡೆಯಬೇಕಾಗುತ್ತದೆ.

ಒಂದೊಮ್ಮೆ ಒಬ್ಬ ಮೃತನು ತನ್ನ ಸಂಪದದ ಬಗ್ಗೆ ಯಾವತ್ತೂ ನಿಷ್ಪಾದಕ ನನ್ನು ನೇಮಿಸಿಲ್ಲವೆಂದಾದರೆ ಅಥವಾ ನ್ಯಾಯಾಲಯದಿಂದ ಒಬ್ಬ ಆಡಳಿತಗಾರನು ನೇಮಿಸಲ್ಪಟ್ಟಿಲ್ಲವೆಂದಾದರೆ ಅಲ್ಲಿ ಮೃತನ ಆ ಋಣಗಳನ್ನು ಅವನ ವಾರಸುದಾರ ರಿಂದ ಪಡೆಯಲಾಗುತ್ತದೆ ಇಂತಹ ಪ್ರಕರಣಗಳಲ್ಲಿ ಆ ಋಣದಾತರು ವಾರಸು ದಾರರ ಪ್ರತಿ ದಾವೆ ಹೂಡಬೇಕಾಗುತ್ತದೆ. ಒಬ್ಬ ವ್ಯಕ್ತಿಯು ಮೃತನಾದಾಗ ಅವನ ನಿರ್ದಿಷ್ಟವಾದ ಪಾಲುಗಳು ಅವನ ವಾರಸುದಾರರಿಗೆ ಸೇರುತ್ತವೆ. ಆದುದರಿಂದ ವಾರಸುದಾರರು ಮೃತನ ಸ್ವತ್ತನ್ನು ಇನ್ನೂ ವಿಭಜನೆಗೊಳಿಸಿಲ್ಲವೆಂದಾದರೂ ಸಹ ಋಣದಾತನು ತನ್ನ ಋಣಗಳ ವಸೂಲಿಗಾಗಿ ಆ ವಾರಸುದಾರರ ಪ್ರತಿ ಒಂದು ದಾವೆ ಹೂಡಬಹುದು. ಒಂದೊಮ್ಮೆ ಆ ವಾರಸುದಾರರು ತಮ್ಮ ಕಬ್ಜೆಯಲ್ಲಿರುವ ಆ ಸ್ವತ್ತಿನ ವಿಭಜನೆಯನ್ನು ಇನ್ನೂ ಮಾಡಿಲ್ಲವೆಂದಾದರೆ ಆ ಋಣದಾತರು ತಾವು ಪಡೆ ದಿರುವ ಡಿಕ್ರಿಯನ್ನು ಮೃತನ ಇಡೀ ಸಂಪದದ ಮೇಲೆ ಜಾರಿಮಾಡಬಹುದು. ತನ್ನ ಋಣಗಳನ್ನು ವಸೂಲಿ ಮಾಡುವುದಕ್ಕಾಗಿ ಒಬ್ಬ ಋಣದಾತನು ಆ ವಾರಸುದಾರ ರೊಳಗೆ ಆ ಸ್ವತ್ತಿನ ಕಬ್ಜೆಯನ್ನು ಪಡೆದಿರುವ ಯಾವನಾದರೊಬ್ಬನ ಮೇಲೆ ಇಡೀ ಋಣಕ್ಕಾಗಿ ದಾವೆ ಹೂಡಬಹುದು. ಈ ಸಂಬಂಧದಲ್ಲಿ ಎಲ್ಲಾ ವಾರಸುದಾರರನ್ನು ಪ್ರತಿವಾದಿಗಳನ್ನಾಗಿ ಮಾಡಬೇಕಾಗಿಲ್ಲ. ನ್ಯಾಯಾಲಯದಿಂದ ಮಂಜೂರು ಮಾಡ ಲ್ಪಟ್ಟ ಡಿಕ್ರಿಯು ಇಲ್ಲಿ ಎಲ್ಲಾ ವಾರಸುದಾರರನ್ನು ಬಾಧ್ಯಗೊಳಿಸುತ್ತದೆ ಮತ್ತು ಅವರೆಲ್ಲರೂ ಆ ದಾವೆಗಳಲ್ಲಿ ಪ್ರತಿವಾದಿಗಳಾಗಿರಬೇಕಾಗಿಲ್ಲ.

ಋುಣಗಳ ಸಂದಾಯಕ್ಕಿಂತ ಮೊದಲು ಸಂಪದದ ಪರಾಧೀನಗೊಳ್ಳುವಿಕೆ (Alienation of Estate before payment of Debts)

ಒಬ್ಬ ವಾರಸುದಾರನಿಂದ ತನ್ನ ಸ್ವಂತ ಪಾಲಿನ ಪರಾಧೀನಗೊಳಿಸುವಿಕೆ (Alienation of his own share by an heir)

ಒಬ್ಬ ಮುಸಲ್ಮಾನನು ಮೃತನಾದಾಗ ಅವನ ಸಂಪದವು ಅವನ ವಾರಸು ದಾರರೊಳಗೆ ನಿರ್ದಿಷ್ಟವಾದ ಪಾಲುಗಳಲ್ಲಿ ಹಂಚಿಹೋಗುತ್ತದೆ. ಮತ್ತು ಆ ವಾರಸು

ದಾರರು ತಮ್ಮ ತಮ್ಮ ಪಾಲುಗಳ ಸಂಬಂಧವಲ್ಲಿ ಪರಮಸ್ವಾಮಿತ್ವವನ್ನು ಪಡೆಯುವರು. ಆದುದರಿಂದ ಒಂದು ಔಪಚಾರಿಕ ವಿಭಜನೆಯಾಗುವದಕ್ಕಿಂತ ಮೊದಲು ಮತ್ತು ಮೃತನ ಋಣಗಳ ಸಂದಾಯವಾಗುವದಕ್ಕಿಂತ ಮೊದಲು ಒಬ್ಬ ವಾರಸುದಾರನು ತನ್ನ ಸ್ವಂತ ಪಾಲನ್ನು ಒಂದು ಮೌಲ್ಯಕ್ಕಾಗಿ ಹಸ್ತಾಂತರಿಸಲು ಹಕ್ಕುಳ್ಳವನಾಗಿರುವನು. ಇದೇ ರೀತಿಯಲ್ಲಿ ಒಬ್ಬ ವಾರಸುದಾರನು ತನ್ನ ಪಾಲನ್ನು ವಿಕ್ರಯ, ಅಡವಮಾನ, ಭೋಗಾರ್ಪಣೆ, ವಿನಿಮಯ ಇತ್ಯಾದಿಗಳಿಂದ ಆ ಸಂಪದದ ವಿಭಜನೆಯಾಗುವಕ್ಕಿಂತ ಮೊದಲೇ ಹಸ್ತಾಂತರಣೆ ಮಾಡಬಹುದು. ಇದರ ಪರಿಣಾಮವೇನೆಂದರೆ ಒಂದೊಮ್ಮೆ ಒಬ್ಬ ವಾರಸುದಾರನು ತನ್ನ ಪಾಲಿನ ಋಣಗಳನ್ನು ಸಂದಾಯಮಾಡದೆ ತನ್ನ ಪಾಲಿನ ಸ್ವತ್ತನ್ನು ಹಸ್ತಾಂತರಣಗೊಳಿಸಿರುವನೆಂದಾದರೆ ಅಲ್ಲಿ ಆ ಋಣಗಳ ಸೂಚನೆಯಿಲ್ಲದೇ ಮೌಲ್ಯಕ್ಕಾಗಿ ಹಸ್ತಾಂತರಣ ಪಡೆದಿರುವ ವ್ಯಕ್ತಿಯ ಸ್ವತ್ತಿನಿಂದ ಆ ಋಣದಾತನು ತನ್ನ ಋಣಗಳನ್ನು ವಸೂಲಿಮಾಡಿಕೊಳ್ಳುವಂತಿಲ್ಲ. ಇಲ್ಲಿ ಆ ಋಣದಾತನು ಮೃತನ ಆ ಸಂಪದವನ್ನು ಹಿಂಬಾಲಿಸುವಂತಿಲ್ಲ.

ಋಣದಾತನ ರೀತಿಯಲ್ಲಿ ವಿಧವೆ (Widow as Creditor)

ಅಸಂದೇಯ ಕನ್ಯಾಶುಲ್ಕವು ಒಂದು ಅಭದ್ರವಾದ ಋಣವಾಗಿರುತ್ತದೆ. ಕನ್ಯಾ ಶುಲ್ಕವು ಅಸಂದೇಯವಾಗದಿರುವ ಒಬ್ಬ ವಿಧವೆಯು ಮೃತ ಮುಸಲ್ಮಾನನ ಇತರ ಯಾವನೇ ಒಬ್ಬ ಋಣಿಯಂತೆ ಇರುವಳು. ಆದರೆ ಆ ವಿಧವೆಯು ಅಸಂದೇಯವಾದ ಕನ್ಯಾಶುಲ್ಕದ ಸೂಚನೆಯಿಲ್ಲದೆ ಮೌಲ್ಯಕ್ಕಾಗಿ ಹಸ್ತಾಂತರಣ ಪಡೆದಿರುವ ಒಬ್ಬ ಸದ್ಭಾವಿಕ ಹಸ್ತಾಂತರಿತನ ಕೈಸೇರಿರುವ ಆ ಸಂಪದವನ್ನು ಹಿಂಬಾಲಿಸಲು ಹಕ್ಕುದಾರಳಲ್ಲ.

ಒಂದು ಪ್ರಭಾರವನ್ನು ನಿರ್ಮಿಸುವ ಹಸ್ತಾಂತರಣೆ (Transfer Creating a Charge)

ಮೇಲೆ ಹೇಳಲ್ಪಟ್ಟ ಉಪಬಂಧಗಳು ಅನ್ವಯವಾಗಬೇಕಾದರೆ ಮೃತನ ಆ ಸಂಪದವು ಯಾವತ್ತೂ ಪ್ರಭಾರದಿಂದ ಮುಕ್ತವಾಗಿರಬೇಕು. ಒಂದೊಮ್ಮೆ ಒಂದು ಆಡಳಿತ ದಾವೆಯಲ್ಲಿ ಒಬ್ಬ ವಾರಸುದಾರನ ಪರವಾಗಿ ಒಂದು ಪ್ರಭಾರವು ನಿರ್ಮಿಸಲ್ಪಟ್ಟರೆ ಅಲ್ಲಿ ಸ್ವತ್ತು ಹಸ್ತಾಂತರಣ ಅಧಿನಿಯಮ 1882 ಇದರ ಕ. 52 ಅನ್ವಯವಾಗುತ್ತದೆ ಮತ್ತು ಆ ಹಸ್ತಾಂತರಿತನು ಆ ಸ್ವತ್ತನ್ನು ಆ ಪ್ರಭಾರಕ್ಕೆ ಬಾಧ್ಯವಾಗಿ ಸ್ವೀಕರಿಸಬೇಕಾಗುತ್ತದೆ.

ಆದುದರಿಂದ, ಒಂದೊಮ್ಮೆ ಒಬ್ಬ ವಿಧವೆಯು ಹೂಡಿರುವ ಒಂದು ದಾವೆಯು ಇನ್ನೂ ವಿಚಾರಣಾ ಹಂತದಲ್ಲೇ ಉಳಿದಿರುವಾಗ ಒಬ್ಬ ವಾರಸುದಾರನು ಮೃತನ ಸಂಪದದಲ್ಲಿರುವ ತನ್ನ ಪಾಲನ್ನು ಹಸ್ತಾಂತರಿಸಿದರೆ ಮತ್ತು ಆ ಸಂಪದದ ಮೇಲೆ ನ್ಯಾಯಾಲಯವು ಯಾವತ್ತೂ ಪ್ರಭಾರವನ್ನು ನಿರ್ಮಿಸಿದೆಯೆಂದಾದರೆ ಆ ಹಸ್ತಾಂತರಿ

ತನು ಆ ಪಾಲನ್ನು ಆ ರೀತಿಯಾಗಿ ನಿರ್ಧರಿಸಲ್ಪಟ್ಟ ಪ್ರಭಾರಕ್ಕೆ ಬಾಧ್ಯವಾಗಿ ತೆಗೆದು ಕೊಳ್ಳಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ, ಅಸಂದೇಯ ಕನ್ಯಾ ಶುಲ್ಕದ ಡಿಕ್ರಿಯಂತೆನೇ, ಆ ವಿಧವೆಯು ಪರವಾಗಿ ಮಂಜೂರು ಮಾಡಲ್ಪಡುವ ಒಂದು ಡಿಕ್ರಿಯು ಹಣದ ಡಿಕ್ರಿಯೆಂಬುದಾಗಿ ಎಣಿಸಲ್ಪಡುವುದಿಲ್ಲ. ಬದಲಾಗಿ ಅಲ್ಲಿ ಆ ವಿಧವೆಯು ಆ ಸಂಪದವನ್ನು ಹಿಂಬಾಲಿಸಲು ಹಕ್ಕುದಾರಳಾಗಿರುವಳು.

ಒಬ್ಬ ವಾರಸುದಾರನಿಂದ ಸಹ-ವಾರಸುದಾರನ ಪಾಲಿನ ಪರಾಧೀನತೆ (Alienation of Co-heir's share by an heir)

ಒಬ್ಬ ವಾರಸುದಾರನು ವಿಭಜನೆ ಮತ್ತು ಋಣಸಂದಾಯವಾಗುವುದಕ್ಕಿಂತ ಮೊದಲೇ ತನ್ನ ಸ್ವಂತ ಪಾಲನ್ನು ಹಸ್ತಾಂತರಣಗೊಳಿಸಲು ಹಕ್ಕುದಾರನಾಗಿರುವನು. ಆದರೆ ಒಬ್ಬ ಒಂಟಿ ವಾರಸುದಾರನು ಇತರ ಸಹ ವಾರಸುದಾರರ ಪಾಲುಗಳನ್ನು ಹಸ್ತಾಂತರಣಗೊಳಿಸುವಂತಿಲ್ಲ. ಒಬ್ಬ ಒಂಟಿ ವಾರಸುದಾರನು ಕೇವಲ ತನ್ನ ಸ್ವಂತ ಪಾಲಿನ ಮಟ್ಟಿಗೆ ಮಾತ್ರ ತನ್ನ ಪರಮಸ್ವಾಮಿತ್ವವನ್ನು ಪಡೆಯುವನು. ಅವನು ಮೃತನ ಇಡೀ ಸಂಪದದ ಕಬ್ಜೆಯನ್ನು ಪಡೆದರೂ ಸಹ ಅಲ್ಲಿ ಅವನ ಸ್ವಂತ ಪಾಲು ಮಾತ್ರ ಅವನಲ್ಲಿ ನಿಹಿತಗೊಳ್ಳುತ್ತದೆ. ಇತರ ಸಹವಾರಸುದಾರರ ಪಾಲುಗಳ ಹಿತ ಸಂಬಂಧವು ಅವನಲ್ಲಿ ನಿಹಿತವಾಗುವದಿಲ್ಲ. ಆದುದರಿಂದ ಒಬ್ಬ ಒಂಟಿ ವಾರಸು ದಾರನು ಇತರ ವಾರಸುದಾರರ ಪಾಲುಗಳನ್ನು ಹಸ್ತಾಂತರಿಸುವಂತಿಲ್ಲ. ಮತ್ತು ಒಂದೊಮ್ಮೆ ಅವನು ಮೃತನ ಋಣಗಳನ್ನು ತೀರಿಸುವುದಕ್ಕಾಗಿ ಈ ರೀತಿಯಾಗಿ ಮಾಡಿರುವನೆಂದಾದರೂ ಸಹ ಅದು ಅಸಿಂಧುವಾಗುತ್ತದೆ. ಒಂದೊಮ್ಮೆ ಒಬ್ಬ ವಾರಸುದಾರನು ಇಡೀ ಸಂಪದವನ್ನು ವಿಕ್ರಯ ಅಥವಾ ಅಡವಮಾನಗೊಳಿಸಿದರೆ ಅಲ್ಲಿ ಆ ಹಸ್ತಾಂತರಣವು ಆ ಸ್ವತ್ತಿನಲ್ಲಿರುವ ಅವನ ಸ್ವಂತ ಪಾಲಿನಮಟ್ಟಿಗಷ್ಟೇ ಕಾರ್ಯಾ ಚರಣೆಗೆ ಬರುತ್ತದೆ.

ಉತ್ತರಾದಾತನ ಬಾಧ್ಯತೆ (Legatees liability)

ಉತ್ತರಾದಾತನೂ ಸಹ ಒಬ್ಬ ಮೃತ ಮುಸಲ್ಮಾನನ ಸಂಪದದಿಂದ ಪ್ರಯೋ ಜನ ಪಡೆಯುವನು. ಆದುದರಿಂದ ಒಬ್ಬ ಮೃತನ ಋಣದಾತರು ತಮ್ಮ ಹಕ್ಕು ದಾವೆಯನ್ನು ಉತ್ತರಾದಾತರ ವಿರುದ್ಧವೂ ಜಾರಿಗೊಳಿಸಬಹುದು. ಮೃತನ ಋಣದ ಸಂದಾಯ ಮಾಡುವಿಕೆಗೆ ವಾರಸುದಾರರ ಹಕ್ಕುಗಳ ಮೇಲಷ್ಟೇ ಅಲ್ಲ ಬದಲಾಗಿ ಉತ್ತರಾದಾತರ ಹಕ್ಕುಗಳ ಮೇಲೂ ಸಹ ಆದ್ಯತೆ ಕೊಡಲಾಗುತ್ತದೆ.

ಮೃತನಿಗೆ ಸಂದೇಯವಾಗಿರುವ ಋಣಗಳು (Debts due to the deceased)

ಒಬ್ಬ ಮೃತ ಮುಸಲ್ಮಾನನಿಗೆ ಬರತಕ್ಕ ಋಣಗಳನ್ನು ಅವನ ಕಾನೂನೀ ಪ್ರತಿನಿಧಿಗಳು ವಸೂಲಿಮಾಡಿಕೊಳ್ಳಬಹುದು. ಒಂದೊಮ್ಮೆ ಆ ಮೃತನು ಜೀವಿ

ಸಿದ್ದರೆ ಆ ಋಣಗಳನ್ನು ಅವನು ಯಾವ ರೀತಿ ವಸೂಲಿ ಮಾಡಬಹುದಿತ್ತೋ ಅದೇ ರೀತಿಯಲ್ಲಿ ಅವನ ಕಾನೂನೀ ಪ್ರತಿನಿಧಿಗಳು ವಸೂಲಿಮಾಡಿಕೊಳ್ಳಬಹುದು. ಆದರೆ ಈ ರೀತಿಯಾಗಿ ಮೃತನ ಋಣಕ್ಕಾಗಿ ಹಕ್ಕುದಾವೆ ಮಾಡುವ ವ್ಯಕ್ತಿಯು ತಾನು ಆ ಮೃತನ ಕಾನೂನೀ ವಾರಸುದಾರನೆಂಬ ಬಗ್ಗೆ ಯಾವತ್ತೂ ಪುರಾವೆ ಕೊಟ್ಟ ಹೊರತು ಒಂದು ನ್ಯಾಯಾಲಯವು ಆ ಋಣಿಯ ವಿರುದ್ಧ ಯಾವತ್ತೂ ಡಿಕ್ರಿಯನ್ನು ಮಂಜೂರುಮಾಡುವುದಿಲ್ಲ. ಒಂದೊಮ್ಮೆ ಮೃತ ಮುಸಲ್ಮಾನನಿಗೆ ಸಲ್ಲತಕ್ಕ ಋಣಗಳ ವಸೂಲಿಗಾಗಿ ಅವನ ನಿಷ್ಪಾದಕ ಅಥವಾ ಆಡಳಿತಗಾರನು ಒಂದು ದಾವೆ ಹೂಡಿದರೆ ಅಲ್ಲಿ ಪ್ರಾಬೇಟ್ ಅಥವಾ ಆಡಳಿತ ಪತ್ರಗಳನ್ನು ಹಾಜರು ಮಾಡಿದ ಹೊರತು ನ್ಯಾಯಾಲಯವು ಯಾವತ್ತೂ ಡಿಕ್ರಿಯನ್ನು ಮಂಜೂರುಮಾಡುವುದಿಲ್ಲ. ಒಂದೊಮ್ಮೆ ಮೃತನಿಗೆ ಬರತಕ್ಕ ಋಣಗಳ ವಸೂಲಿಗಾಗಿ ಆ ಮೃತನ ಒಬ್ಬ ಕಾನೂನೀ ವಾರಸುದಾರನು ಒಂದು ಹಕ್ಕುದಾವೆ ಮಾಡಿದರೆ ಅಲ್ಲಿ ಆ ಕಾನೂನೀ ವಾರಸುದಾರನು ತನ್ನ ಪರವಾಗಿ ಡಿಕ್ರಿ ಪಡೆಯಬೇಕಾದರೆ ಉತ್ತರಾಧಿಕಾರದ ಪತ್ರವನ್ನು ಹಾಜರು ಪಡಿಸಬೇಕಾಗುತ್ತದೆ. ಆದರೆ ಒಂದೊಮ್ಮೆ ಆ ಋಣಿಯು ಸ್ವೇಚ್ಛೆಯಿಂದ ಆ ಋಣವನ್ನು ಮೃತನ ನಿಷ್ಪಾದಕ ಅಥವಾ ಆಡಳಿತಗಾರ ಅಥವಾ ವಾರಸುದಾರನಿಗೆ ಸಂದಾಯಮಾಡಲು ಸಿದ್ಧನಾಗಿರುವನೆಂದಾದರೆ ಅಲ್ಲಿ ಯಾವತ್ತೂ ಪ್ರಾಬೇಟ್, ಆಡಳಿತ ಪತ್ರಗಳು ಅಥವಾಉತ್ತರಾಧಿಕಾರ ಪತ್ರದ ಅವಶ್ಯಕತೆಯಿಲ್ಲ.

———

ಅಧ್ಯಾಯ 15

ವಾರಸು

Inheritance

ಒಬ್ಬ ಮೃತ ವ್ಯಕ್ತಿಯ ಸ್ವತ್ತುಗಳ ಉತ್ತರಾಧಿಕಾರವು ಒಂದು ಮರಣ ಶಾಸನದ ಮೇರೆಗೆ ನಡೆಯಬಹುದು ಅಥವಾ ಮರಣಶಾಸನವಿಲ್ಲದೆ. ಮರಣ ಶಾಸನ ದಿಂದಾಗುವ ಉತ್ತರಾಧಿಕಾರವನ್ನು ಒಂದು ಉತ್ತರದಾನವೆಂದು ಕರೆಯಲಾಗುತ್ತದೆ, ಮತ್ತು ಅದು ಒಂದು ಮರಣಶಾಸನದ ಮೇರೆಗೆ ನಡೆಯುತ್ತದೆ. ಒಬ್ಬ ವ್ಯಕ್ತಿಯು ಮರಣಶಾಸನ ಮಾಡದೆ ಮೃತನಾದರೆ ಅವನ ಸ್ವತ್ತುಗಳ ಬಗ್ಗೆ ಆಗುವ ಉತ್ತರಾಧಿ ಕಾರವನ್ನು ವಾರಸು ಎಂಬುದಾಗಿ ಕರೆಯಲಾಗುತ್ತದೆ. ಮತ್ತು ಮೃತನ ಕಾನೂನೀ ವಾರಸುದಾರರು ಅವನ ಸ್ವತ್ತುಗಳಿಗೆ ಒಂದು ನಿರ್ದಿಷ್ಟವಾದ ಹಾಗೂ ನಿಗದಿ ಗೊಳಿಸಲ್ಪಟ್ಟ ಪಾಲಿಗೆ ಉತ್ತರಾಧಿಕಾರಿಗಳಾಗುವರು. ಒಬ್ಬ ಮುಸಲ್ಮಾನನು ಮೃತ ನಾದರೆ ಮೊದಲನೆಯದಾಗಿ ಅವನ ಸ್ವತ್ತು ಉತ್ತರಕ್ರಿಯೆಯ ವೆಚ್ಚ, ಅವನಿಂದ ಸರಕಾರಕ್ಕೆ ಸಂದೇಯವಾಗಿರುವ ಸಾಲ ಮತ್ತು ಅವನ ಅಸಂದೇಯ ಋಣಗಳ ಸಂದಾಯಕ್ಕಾಗಿ ಉಪಯೋಗಿಸಲಾಗುತ್ತದೆ. ಆ ಬಳಿಕ ಎರಡನೇ ಹಂತದಲ್ಲಿ ಅವನ ಸ್ವತ್ತು ಅವನಿಂದ ಮಾಡಲ್ಪಟ್ಟಿರುವ ಮರಣಶಾಸನದ ಪ್ರಕಾರ ಅವನ ಉತ್ತರಾ ದಾತರಿಗೆ ಸೇರುತ್ತದೆ. ಈ ಎಲ್ಲಾ ಸಂದಾಯಗಳು ಮಾಡಲ್ಪಟ್ಟ ಬಳಿಕ ಉಳಿದ ಸ್ವತ್ತು ಅಥವಾ ಅಧಿಶೇಷವನ್ನು ವಾರಸುಪಡೆಯಬಹುದಾದ ಸ್ವತ್ತು ಎಂಬುದಾಗಿ ಕರೆಯಲಾಗುತ್ತದೆ ಅವನ ವಾರಸೀ ಸ್ವತ್ತು ಅವನ ಕಾನೂನೀ ವಾರಸುದಾರರಿಗೆ ಅವರವರ ಪಾಲುಗಳಿಗೆ ಅನುಗುಣವಾಗಿ ಸೇರುತ್ತದೆ ಪ್ರತಿಯೊಬ್ಬ ಕಾನೂನೀ ವಾರಸುದಾರನು ವಾರಸು ಪಡೆಯುದಿರುವ ಸ್ವತ್ತಿನ ಪ್ರಮಾಣ ಮತ್ತು ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳು ಮತ್ತು ಷರತ್ತುಗಳು ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿಂದ ಶಾಸಿಸಲ್ಪಡುತ್ತವೆ.

ವಾರಸಿನ ಸಾಮಾನ್ಯ ಸಿದ್ಧಾಂತಗಳು

General Principles of Inheritance

1) ವಾರಸೀ ಸ್ವತ್ತಿನ ಸ್ವರೂಪ (Nature of the heritable property)

ವಾರಸೀ ಸ್ವತ್ತು ಎಂದರೆ ಕಾನೂನೀ ವಾರಸುದಾರರಿಗೆ ವಾರಸು ಪಡೆಯಲು ಸಿಗುವ ಸ್ವತ್ತು. ಒಬ್ಬ ಮುಸಲ್ಮಾನನು ಮೃತನಾದ ಬಳಿಕ ಅವನ ಸ್ವತ್ತು ಉತ್ತರ

ಕ್ರಿಯೆಯ ವೆಚ್ಚ ಹಾಗೂ ಋಣಗಳನ್ನು ಸಂದಾಯಮಾಡುವದು ಮತ್ತು ಆವನು ಯಾವತ್ತೂ ಮರಣಶಾಸನವೊಂದನ್ನು ಮಾಡಿರುವನೆಂದಾದರೆ ಅದರಲ್ಲಿ ಹೇಳಲ್ಪಟ್ಟಿ ರುವ ಉತ್ತರಾದಾತನಿಗೆ ಕೊಡಲ್ಪಡುವದು ಮತ್ತು ಇತ್ಯಾದಿ ಮುಗಿದ ಬಳಿಕ ಮತ್ತು ಅಲ್ಲಿ ಅವನ ಸ್ವತ್ತು ಉಳಿದಿದ್ದರೆ ಅದನ್ನು ವಾರಸೀ ಸ್ವತ್ತು ಎಂಬುದಾಗಿ ಕರೆಯ ಲಾಗುತ್ತದೆ. ಮುಸ್ಲಿಮ್ ಕಾನೂನಿನ ಪ್ರಕಾರ ಪ್ರತಿಯೊಂದು ಸ್ವತ್ತು ವಾರಸೀ ಸ್ವತ್ತಾಗಿರುತ್ತದೆ. ವಾರಸಿನ ಉದ್ದೇಶಗಳಿಗಾಗಿ, ಮುಸ್ಲಿಮ್ ಕಾನೂನು ಸ್ವತ್ತು ಗಳಲ್ಲಿ ಭೌತಿಕ ವಸ್ತು ಮತ್ತು ಅದರ ಫಲೋಪಭೋಗ ಅಥವಾ, ಚರ ಮತ್ತು ಸ್ಥಿರ, ಮೂರ್ತ ಮತ್ತು ಅಮೂರ್ತ ಎಂಬಂತಹ ಯಾವತ್ತೂ ಭೇದವನ್ನು ಕಲ್ಪಿಸುವುದಿಲ್ಲ.

ಶಿಯಾ ಕಾನೂನು (Shia Law)

ಶಿಯಾ ಕಾನೂನು ವಿಷಯದ ಬಗ್ಗೆ ಸ್ವಲ್ಪ ವ್ಯತ್ಯಾಸವನ್ನು ಕಲ್ಪಿಸಿದೆ. ಈ ಪರಂಪರೆಯ ಪ್ರಕಾರ ಒಬ್ಬ ಸಂತತಿಯಿಲ್ಲದ ವಿಧವೆಯು ಆಕೆಯ ಮೃತ ಪತಿಯ ಚರಸ್ವತ್ತಿನಲ್ಲಿ ನಾಲ್ಕನೇ ಒಂದರಷ್ಟು ಪಾಲುಪಡೆಯಲು ಹಕ್ಕುದಾರಳಾಗಿರುವಳು.

2) ಜಂಟಿ ಅಥವಾ ಪೂರ್ವಾರ್ಜಿತ ಸ್ವತ್ತು
(Joint or Ancestral Property)

ಹಿಂದುಗಳಲ್ಲಿ ಬಳಕೆಯಲ್ಲಿರುವ ಅವಿಭಕ್ತ ಕುಟುಂಬ ಅಥವಾ ದಾಯಭಾಗದ ಸ್ವತ್ತಿನ ಪರಿಕಲ್ಪನೆಯು ಮುಸ್ಲಿಮ್ ಕಾನೂನಿನಲ್ಲಿ ಬರುವುದಿಲ್ಲ, ಒಬ್ಬ ಮುಸಲ್ಮಾ ನನು ಮೃತನಾದಾಗ ಅವನ ಸ್ವತ್ತು ನಿರ್ದಿಷ್ಟವಾದ ಪಾಲುಗಳಲ್ಲಿ ಅವನ ವಾರಸು ದಾರರಿಗೆ ಸೇರುತ್ತದೆ ಮತ್ತು ಅವರು ಆ ಪಾಲುಗಳ ಮೇಲೆ ಪರಮಸ್ವಾಮಿತ್ವವನ್ನು ಪಡೆಯುವರು. ಅಂತಹ ವಾರಸುದಾರನ ಮರಣದ ಬಳಿಕ ಅವನ ಸ್ವತ್ತುಗಳು ಅವನ ಕಾನೂನೀ ವಾರಸುದಾರರಿಂದ ವಾರಸು ಪಡೆಯಲಾಗುತ್ತದೆ, ಮತ್ತು ಈ ಕ್ರಮವು ಸತತವಾಗಿ ಮುಂದುವರಿಯುತ್ತದೆ. ಹಿಂದೂ ಕಾನೂನಿನಲ್ಲಿ ಉಪಬಂಧಿಸ ಲಾದ ರೀತಿಯ ಪೂರ್ವಾರ್ಜಿತ ಅಥವಾ ಅವಿಭಕ್ತ ಕುಟುಂಬದ ಸ್ವತ್ತಿನ ಬಗ್ಗೆ ಮುಸ್ಲಿಮ್ ಕಾನೂನಿನಲ್ಲಿ ಯಾವತ್ತೂ ಉಪಬಂಧವಿಲ್ಲ. ಆದುದರಿಂದ ಮುಸ್ಲಿಮ್ ಕಾನೂನು ಪೂರ್ವಾರ್ಜಿತ ಹಾಗೂ ಸ್ವಾರ್ಜಿತ ಸ್ವತ್ತುಗಳೊಳಗೆ ಯಾವತ್ತೂ ಭೇದ ವನ್ನು ಕಲ್ಪಿಸುವುದಿಲ್ಲ, ಮುಸ್ಲಿಮ್ ಕಾನೂನಿನಲ್ಲಿ ಒಬ್ಬ ಮುಸಲ್ಮಾನನಿಂದ ಸ್ವತಃ ಅರ್ಜಿಸಲಾಗಿರುವ ಸ್ವತ್ತು ಹಾಗೂ ಅವನು ತನ್ನ ಪೂರ್ವಜರಿಂದ ವಾರಸು ಪಡೆ ದಿರುವ ಸ್ವತ್ತು ಇವೆರಡನ್ನು ಅವನ ವೈಯಕ್ತಿಕ ಸ್ವತ್ತೆಂದು ಕರೆಯಲಾಗುತ್ತದೆ, ಮತ್ತು ಇವನ್ನು ಅವನ ಕಾನೂನೀ ವಾರಸುದಾರರು ವಾರಸು ಪಡೆಯುವರು.

3) ಜನ್ಮಸಿದ್ಧ ಹಕ್ಕಿಲ್ಲ (No birth-right)

ಒಬ್ಬ ಮುಸಲ್ಮಾನನ ಮರಣದ ಬಳಿಕ ಮಾತ್ರ ಅವನ ಸ್ವತ್ತಿನ ವಾರಸಿನ ಪ್ರಶ್ನೆ ಬರುತ್ತದೆ. ಒಬ್ಬ ಜೀವಿತ ವ್ಯಕ್ತಿಗೆ ವಾರಸುದಾರರಿರುವುದಿಲ್ಲ. ಆದುದರಿಂದ

ಒಬ್ಬ ವ್ಯಕ್ತಿಯು ಮೃತನಾಗಿರುವ ಹೊರತು ಅವನ ವಾರಸುದಾರರಿಗೆ ಅವನ ಸ್ವತ್ತು ಗಳಲ್ಲಿ ಯಾವುದೇ ರೀತಿಯ ಹಿತಸಂಬಂಧವಿರುವುದಿಲ್ಲ. ಹಿಂದೂ ಕಾನೂನಿನಲ್ಲಿ ಬರುವ ಜನ್ಮಸಿದ್ಧ ಹಕ್ಕಿನ ಪರಿಕಲ್ಪನೆಯನ್ನು ಮುಸ್ಲಿಮ್ ಕಾನೂನು ಮನ್ನಿಸುವುದಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ತನ್ನ ಪೂರ್ವಜನು ಮೃತನಾಗುವದಕ್ಕಿಂತ ಮೊದಲು ಒಬ್ಬ ವಾರಸುದಾರನು ಯಾವುದೇ ರೀತಿಯ ಹಕ್ಕನ್ನು ಪಡೆಯುವುದಿಲ್ಲ. ಆದುದರಿಂದ ಒಬ್ಬ ವ್ಯಕ್ತಿಯು ಸಾಯುವತನಕ ಅವನ ಸಂಬಂಧಿಕರನ್ನು ಅವನ ವಾರಸುದಾರರೆಂಬುದಾಗಿ ಕರೆಯಲಾಗುವುದಿಲ್ಲ. ಅವರು ಕೇವಲ ಪ್ರತ್ಯಕ್ಷ ವಾರಸುದಾರರಾಗಿರುವರು. ಮತ್ತು ಅವರಿಗೆ ಉತ್ತರಾಧಿಕಾರದ ಅವಕಾಶವಿರುತ್ತದೆ. ಒಂದೊಮ್ಮೆ ಅಂತಹ ಒಬ್ಬ ಪ್ರತ್ಯಕ್ಷ ವಾರಸುದಾರನು ಒಬ್ಬ ಮುಸಲ್ಮಾನನಿಗೆ ಉತ್ತರ ಜೀವಿಯಾಗಿದ್ದರೆ ಅಲ್ಲಿ ಅವನು ಆ ಮೃತನ ಕಾನೂನೀ ವಾರಸುದಾರನಾಗುವನು. ಮತ್ತು ಅವನಿಗೆ ವಾರಸು ಪಡೆಯುವ ಹಕ್ಕು ಬರುತ್ತದೆ. ಒಂದೊಮ್ಮೆ ಒಬ್ಬ ಪ್ರತ್ಯಕ್ಷ ವಾರಸುದಾರನು ಒಬ್ಬ ಮುಸಲ್ಮಾನನ ಉತ್ತರ ಜೀವಿಯಾಗಿರದಿದ್ದರೆ ಅಲ್ಲಿ ಅವನನ್ನು ಒಬ್ಬ ವಾರಸುದಾರನೆಂಬುದಾಗಿ ಎಣಿಸಲಾಗುವುದಿಲ್ಲ. ಮತ್ತು ಅವನಿಗೆ ಆ ಮೃತನ ಸ್ವತ್ತಿನಲ್ಲಿ ಯಾವತ್ತೂ ಹಿತಸಂಬಂಧವು ಬರುವುದಿಲ್ಲ.

4) ಪ್ರಾತಿನಿಧ್ಯದ ಸಿದ್ಧಾಂತ (Doctrine Of Representation)

ಮುಸ್ಲಿಮ್ ಕಾನೂನು ಪ್ರಾತಿನಿಧ್ಯದ ಸಿದ್ಧಾಂತವನ್ನು ಮನ್ನಿಸುವುದಿಲ್ಲ. ಮುಸ್ಲಿಮ್ ಕಾನೂನಿನ ಪ್ರಕಾರ ಸಮೀಪಸ್ಥನು ದೂರಸ್ಥನನ್ನು ಹೊರತುಪಡಿಸುವನು. ಉದಾಹರಣೆಗಾಗಿ, ಒಂದೊಮ್ಮೆ ಇಬ್ಬರು ವಾರಸುದಾರರು ಒಬ್ಬ ಪೂರ್ವಜನಿಂದ ಒಂದು ವಾರಸಿಗೆ ಹಕ್ಕುದಾವೆ ಮಾಡುವವರೆಂದಾದರೆ ಅಲ್ಲಿ ಆ ಮೃತನಿಗೆ ಸಮೀಪಸ್ಥನಾಗಿರುವವನು ಆ ದೂರಸ್ಥನಾಗಿರುವವನನ್ನು ಹೊರತುಪಡಿಸುವನು. ಈ ರೀತಿಯಾಗಿ ಒಂದೊಮ್ಮೆ ಒಬ್ಬ ಪೂರ್ವಜನಿಗೆ ಒಬ್ಬ ಮಗನಿದ್ದರೆ ಹಾಗೂ ಇನ್ನೊಬ್ಬ ಪೂರ್ವ ಮೃತ ಮಗನ ಮಗನಿದ್ದರೆ ಆ ಪೂರ್ವ ಮೃತ ಮಗನ ಮಗನು ತಂದೆಯ ಪಾಲಿನ ವಾರಸನ್ನು ಪಡೆಯುವಂತಿಲ್ಲ.

5) ತಲಾವಾರು ಮತ್ತು ಶಾಖಾವಾರು ವಂಟನೆ
(Per-Capita and Per-Strip Distribution)

ಒಂದೇ ವರ್ಗದೊಳಗಿನ ಆದರೆ ಬೇರೆ ಬೇರೆ ಶಾಖೆಗಳೊಗಿನ ವಾರಸುದಾರರೊಳಗಿನ ಉತ್ತರಾಧಿಕಾರವು ಒಂದೇ ತಲವಾರು ನಡೆಯುತ್ತದೆ. ಅಥವಾ ಶಾಖಾವಾರು ಒಂದು ತಲವಾರು ವಂಟನೆಯಲ್ಲಿ ಉತ್ತರಾಧಿಕಾರವು ಆ ವಾರಸುದಾರರ ಶಾಖೆಗೆ ಅನುಗುಣವಾಗಿ ನಡೆಯುತ್ತದೆ. ಅವರೊಳಗೆ ಆ ಸಂಪದವು ಸಮಾನವಾಗಿ ವಿಭಜಿಸಲ್ಪಡುತ್ತದೆ. ಆದುದರಿಂದ ಅವರೊಳಗೆ ಪ್ರತಿಯೊಬ್ಬನು ಮೃತನ ವಾರಸಿ

ಆಸ್ತಿಯಲ್ಲಿ ಸಮಾನವಾದ ಪಾಲನ್ನು ಪಡೆಯುವನು, ಆದರೆ ಒಂದು ಶಾಖಾವಾರು ವಣ್ಣನೆಯಲ್ಲಿ, ಅನೇಕ ವಾರಸುದಾರರು ತಮ್ಮ ಶಾಖೆಗೆ ವಂಟನೆಗೆ ಉಳಿದಿರುವ ಸ್ವತ್ತಿನಲ್ಲಿ ಮಾತ್ರ ಪಾಲು ಪಡೆಯುವರು. ಸುನ್ನೀ ಕಾನೂನಿನಲ್ಲಿ ಆ ಆಸ್ತಿಯು ತಲಾವಾರು ವಿಭಜನೆಯಾಗುತ್ತದೆ.

ಶಿಯಾ ಕಾನೂನು (Shia Law)

ಶಿಯಾ ಕಾನೂನಿನ ಪ್ರಕಾರ, ಒಂದೊಮ್ಮೆ ಒಂದೇ ವರ್ಗದ ಅನೇಕ ವಾರಸು ದಾರರಿದ್ದು ಅವರು ಬೇರೆ ಬೇರೆ ಶಾಖೆಗಳಿಂದ ವಂಶಜರಾಗಿದ್ದರೆ ಅಲ್ಲಿ ಅವರೊಳಗೆ ಶಾಖಾವಾರು ವಿಭಜನೆಯಾಗುತ್ತದೆ. ಪ್ರತಿಯೊಬ್ಬ ವಾರಸುದಾರನ ಪಾಲನ್ನು ನಿರ್ಣಯಿಸುವ ಉದ್ದೇಶಕ್ಕಾಗಿ ಶಿಯಾ ಕಾನೂನು ಪ್ರಾತಿನಿಧ್ಯದ ಸಿದ್ಧಾಂತವನ್ನು ಸ್ವೀಕರಿಸುತ್ತದೆ.

6) ನಾರಿಯ ವಾರಸಿನ ಹಕ್ಕು (Femal's Right of Inheritance)

ವಾರಸಿನಲ್ಲಿ ಪುರುಷರಿಗೆ ಮತ್ತು ನಾರಿಯರಿಗೆ ಸಮಾನವಾದ ಹಕ್ಕುಗಳಿರುತ್ತವೆ. ಒಬ್ಬ ಮುಸಲ್ಮಾನನ ಮರಣವಾದ ಬಳಿಕ, ಅವನ ವಾರಸುದಾರರೊಳಗೆ ನಾರಿಯರು ಇದ್ದರೆ, ನಾರಿಯರು ಮತ್ತು ಪುರುಷರು ಏಕಕಾಲದಲ್ಲಿ ಆ ಸ್ವತ್ತುಗಳ ವಾರಸು ಪಡೆಯುವರು. ವಾರಸು ಪಡೆಯುವಲ್ಲಿ ಪುರುಷರು ನಾರಿಯರ ಮೇಲೆ ಆದ್ಯತೆಯ ಹಕ್ಕು ಪಡೆಯುವುದಿಲ್ಲ. ಆದರೆ ಸಾಮಾನ್ಯವಾಗಿ ಒಬ್ಬ ಪುರುಷನ ಪಾಲು ಒಬ್ಬ ನಾರಿಯ ಪಾಲಿಗಿಂತ ದುಪ್ಪಟ್ಟಾಗಿರುತ್ತದೆ.

7) ಒಂದು ಗರ್ಭಸ್ಥ ಮಗು (Child in the Womb)

ತಾಯಿಯ ಗರ್ಭದಲ್ಲಿರುವ ಒಂದು ಮಗುವು ಜೀವಿತವಾಗಿ ಜನಿಸಿದರೆ ಅದು ವಾರಸುಪಡೆಯಲು ಹಕ್ಕುಳ್ಳದ್ದಾಗಿರುತ್ತದೆ. ತಾಯಿಯ ಗರ್ಭದೊಳಗಿರುವ ಒಂದು ಮಗುವು ಒಬ್ಬ ಜೀವಿತ ವ್ಯಕ್ತಿಯೆಂಬುದಾಗಿ ಎಣಿಸಲ್ಪಡುತ್ತದೆ ಮತ್ತು ಆ ಮಗುವಿನಲ್ಲಿ ಸ್ವತ್ತು ತಕ್ಷಣದಲ್ಲಿ ನಿಹಿತವಾಗುತ್ತದೆ. ಆದರೆ ಒಂದೊಮ್ಮೆ ತಾಯಿಯ ಗರ್ಭದೊಳಗಿರುವ ಆ ಮಗುವು ಜೀವಿತವಾಗಿ ಹುಟ್ಟಿರದಿದ್ದರೆ ಅಲ್ಲಿ ಆ ಮಗುವಿಗೆ ನಿಹಿತಗೊಳಿಸಲಾದ ಪಾಲು ಅದರಿಂದ ರಹಿತಗೊಳಿಸಲಾಗುತ್ತದೆ, ಮತ್ತು ಇಲ್ಲಿ ಅಂತಹ ಒಬ್ಬ ವಾರಸುದಾರನೇ ಇದ್ದಿರಲಿಲ್ಲವೆಂಬ ಪೂರ್ವಭಾವನೆಯುಂಟಾಗುತ್ತದೆ.

8) ಜೇಷ್ಠಾಧಿಕಾರ (Primogeniture)

ಜ್ಯೇಷ್ಠತ್ವವು ವಾರಸುದಾರಿಕೆಯ ಒಂದು ಸಿದ್ಧಾಂತವಾಗಿದ್ದು ಇದರ ಪ್ರಕಾರ ಮೃತನ ಹಿರಿಯ ಮಗನು ವಿಶೇಷ ಸವಲತ್ತುಗಳನ್ನು ಪಡೆಯುವನು. ಮುಸ್ಲಿಮ್ ಕಾನೂನು ಜೇಷ್ಠತ್ವದ ನಿಯಮವನ್ನು ಮನ್ನಿಸುವುದಿಲ್ಲ ಮತ್ತು ಎಲ್ಲಾ ಮಗಂದಿರು ಸಮಾನರೆಂದು ಎಣಿಸಲ್ಪಡುವರು. ಶಿಯಾ ಕಾನೂನಿನ ಪ್ರಕಾರ ಒಬ್ಬ ಹಿರೇ

ಮಗನು ತನ್ನ ತಂದೆಯು ಬಟ್ಟೆ ಬರೆಗಳನ್ನು, ಖಡ್ಗ ಮತ್ತು ಉಂಗುರ ಹಾಗೂ ಕುರ್ಆನಿನ ಪ್ರತಿಯನ್ನು ವಾರಸುಪಡೆಯಲು ಹಕ್ಕುದಾರನಾಗಿರುವನು. ಆದರೆ ಆ ಹಿರೇ ಮಗನು ಚಿತ್ತಸ್ವಾಸ್ಥ್ಯವುಳ್ಳವನಾಗಿರಬೇಕು ಮತ್ತು ಅವನ ತಂದೆಯು ಇವುಗಳ ಹೊರತಾಗಿ ಇತರ ಕೆಲವು ವಸ್ತುಗಳನ್ನೂ ಬಿಟ್ಟಿರಬೇಕು.

9) ಮಲ ಮಕ್ಕಳು (Step-Children)

ಮಲ ಮಕ್ಕಳು ತಮ್ಮ ಮಲತಾಯಿಯು ಅಥವಾ ಮಲ ತಂದೆಯ ಸ್ವತ್ತುಗಳ ವಾರಸು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ. ಇದೇ ರೀತಿಯಲ್ಲಿ ಮಲ ತಂದೆ ಅಥವಾ ಮಲತಾಯಿಯು ತಮ್ಮ ಮಲಮಕ್ಕಳ ವಾರಸು ಪಡೆಯುವಂತಿಲ್ಲ.

ಆದರೆ, ಮಲ ಸಹೋದರ ಅಥವಾ ಮಲ ಸಹೋದರಿಯು ಪರಸ್ಪರರ ಸ್ವತ್ತುಗಳ ವಾರಸು ಪಡೆಯುವರು.

10) ಇಬ್ಬರು ವಾರಸುದಾರರ ಏಕಕಾಲದ ಮರಣ (Simultaneous Death of two heirs)

ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಏಕಕಾಲದಲ್ಲಿ ಮೃತರಾಗಿ ಅವರೊಳಗೆ ಯಾವಾತನು ಮೊದಲು ಮೃತನಾದನು ಎಂಬ ಬಗ್ಗೆ ಖಾತರಿಪಡಿಸುವುದು ಅಸಾಧ್ಯವಾದರೆ ಅಲ್ಲಿ ಅವರಿಬ್ಬರೂ ಪರಸ್ಪರರ ವಾರಸುದಾರರಾಗುವಂತಿಲ್ಲ. ಇದರ ಪರಿಣಾಮವಾಗಿ ಇಂತಹ ವಾರಸುದಾರರು ಅಸ್ತಿತ್ವದಲ್ಲಿ ಇದ್ದಿರಲಿಲ್ಲವೆಂಬಂತೆನೇ ಎಣಿಸಲಾಗುತ್ತದೆ; ವಾರಸು ಆರಂಭವಾದಾಗ ಇವರನ್ನು ಹೊರತುಪಡಿಸಲಾಗುತ್ತದೆ.

11) ಹೊರಪಡಿಸುವಿಕೆಯ ನಿಯಮಗಳು (Rules of Exelusion)

ಯಾವುದಾದರೊಂದು ನಿಯಮದ ಪ್ರಕಾರ ಒಬ್ಬ ವಾರಸುದಾರನು ವಾರಸು ಪಡೆಯುವುದರಿಂದ ಹೊರಪಡಿಸಲ್ಪಟ್ಟಿರುವ ಹೊರತು ಪ್ರತಿಯೊಬ್ಬ ವಾರಸುದಾರನು ಒಂದು ಸ್ವತ್ತಿನ ವಾರಸುಪಡೆಯಲು ಹಕ್ಕುದಾರನಾಗಿರುವನು. ಒಂದೊಮ್ಮೆ ಒಬ್ಬ ವಾರಸುದಾರನು ಈ ಕೆಳಗಿನ ಯಾವುದಾದರೊಂದು ಕಾರಣಕ್ಕಾಗಿ ಹೊರಪಡಿಸಲ್ಪಟ್ಟರೆ ಅಂಥವನು ಮುಸ್ಲಿಮ್ ಕಾನೂನಿನ ಮೇರೆಗೆ ಒಂದು ಸ್ವತ್ತಿನ ವಾರಸುಪಡೆಯುವಂತಿಲ್ಲ.

ಎ) ನರಹತ್ಯೆ (Homicide)

ಇನ್ನೊಬ್ಬ ವ್ಯಕ್ತಿಯ ಮರಣಕ್ಕೆ ಕಾರಣನಾಗಿರುವ ಒಬ್ಬ ವ್ಯಕ್ತಿಯು ಆ ಮೃತನ ಸ್ವತ್ತುಗಳ ವಾರಸುಪಡೆಯಲು ನಿಯೋಗ್ಯನಾಗುವನು. ಒಬ್ಬ ವ್ಯಕ್ತಿಯು ತನ್ನ ಸ್ವಂತ ಅಪರಾಧಗಳ ಪ್ರಯೋಜನ ಪಡೆಯಬಾರದೆಂಬ ಒಂದು ಪ್ರಸಿದ್ಧವಾದ ಕಾನೂನಿನ ಸಿದ್ಧಾಂತದ ಮೇಲೆ ಈ ನಿಯಮವು ಆಧಾರಿತವಾಗಿದೆ. ಹನಫೀ

ಕಾನೂನಿನ ಪ್ರಕಾರ ಒಂದೊಮ್ಮೆ ಒಬ್ಬ ವಾರಸುದಾರನು ಉದ್ದೇಶವಿಲ್ಲದೆ ಅಥವಾ ನಿರ್ಲಕ್ಷದಿಂದ ತನ್ನ ಪೂರ್ವಜನ ಮರಣಕ್ಕೆ ಕಾರಣನಾಗಿರುವನಾದರೂ ಸಹ ಅವನು ಅಂಥವನ ವಾರಸುದಾರನಾಗಿರುವದರಿಂದ ನಿರ್ಯೋಗ್ಯಗೊಳಿಸಲ್ಪಡುವನು ಮತ್ತು ಅಂಥವನು ಮೃತನ ಸ್ವತ್ತಿನ ವಾರಸುಪಡೆಯುವಂತಿಲ್ಲ.

ಶಿಯಾ ಕಾನೂನು (Shia law)

ಇತ್ನಾ ಅಶಾರಿಯಾ ಕಾನೂನಿನ ಪ್ರಕಾರ ಒಬ್ಬ ವಾರಸುದಾರನು ತನ್ನ ಪೂರ್ವಜರ ಮರಣವನ್ನು ಉದ್ದೇಶ ಪೂರ್ವಕವಾಗಿ ಮಾಡಿರುವನೆಂದಾದರೆ ಅಲ್ಲಿ ಅವನು ವಾರಸುಪಡೆಯುವದರಿಂದ ಹೊರತುಪಡಿಸಲ್ಪಡುವನು. ಒಂದೊಮ್ಮೆ ಆ ಮರಣವು ವಾರಸುದಾರನ ಆಕಸ್ಮಿಕದಿಂದಾಗಿ ಅಥವಾ ನಿರ್ಲಕ್ಷದಿಂದಾಗಿ ಉಂಟಾಗಿದ್ದರೆ ಅಲ್ಲಿ ಆ ಇತ್ನಾ ಅಶಾರಿಯಾ ವಾರಸುದಾರನು ವಾರಸುಪಡೆಯುವುದರಿಂದ ಅಡ್ಡಿ ಗೊಳಿಸಲ್ಪಡುವುದಿಲ್ಲ.

ಬಿ) ಅಧರ್ಮಜತ್ವ (Illegitimaly)

ಸುನ್ನೀ ಕಾನೂನಿನ ಪ್ರಕಾರ ಒಬ್ಬ ಅಧರ್ಮಜ ವ್ಯಕ್ತಿಯು ತನ್ನ ತಂದೆಯ ಸ್ವತ್ತುಗಳ ವಾರಸು ಪಡೆಯುವಂತಿಲ್ಲ. ಆದರೆ ಒಬ್ಬ ಅಧರ್ಮಜ ವ್ಯಕ್ತಿಯು ತನ್ನ ತಾಯಿಯ ಸ್ವತ್ತುಗಳ ವಾರಸುಪಡೆಯಬಹುದು. ಸುನ್ನೀ ಕಾನೂನಿನ ಪ್ರಕಾರ ಒಬ್ಬ ಅಧರ್ಮಜ ಮಗನು ತನ್ನ ತಾಯಿಯ ಸ್ವತ್ತುಗಳ ವಾರಸುಪಡೆಯಬಹುದು ಹಾಗೂ ತಾಯಿಯ ಮೂಲಕ ತಂದೆಯ ಸ್ವತ್ತುಗಳ ವಾರಸು ಪಡೆಯಬಹುದು. ಆದರೆ ಒಬ್ಬ ಅಧರ್ಮ ಮಗನು ತನ್ನ ತಾಯಿಗೆ ತದನಂತರದ ಮದುವೆಯಿಂದಾಗಿ ಆಗಿರುವ ಆಕೆಯ ಸಂಬಂಧಿಕರ ಸ್ವತ್ತುಗಳ ವಾರಸುಪಡೆಯುವಂತಿಲ್ಲ.

ಸಿ) ಧರ್ಮದ ವ್ಯತ್ಯಾಸ (Difference of Religion)

ಇಸ್ಲಾಮಿನ ಮೂಲಪಾಠಗಳ ಪ್ರಕಾರ ಒಬ್ಬ ಮುಸಲ್ಮಾನೇತರನು ಒಬ್ಬ ಮುಸಲ್ಮಾನನ ಸ್ವತ್ತುಗಳ ವಾರಸು ಪಡೆಯುವಿಕೆಯಿಂದ ಹೊರತುಪಡಿಸಲ್ಪಡುವನು. ಆದರೆ ಭಾರತದಲ್ಲಿ ಆಡಳಿತಗೊಳಿಸಲಾದ ಮುಸ್ಲಿಮ್ ಕಾನೂನಿನ ಪ್ರಕಾರ ಧರ್ಮದ ವ್ಯತ್ಯಾಸವು ವಾರಸಿನ ಸಂಬಂಧದಲ್ಲಿ ಯಾವತ್ತೂ ನಿರ್ಯೋಗ್ಯತೆಯಾಗುವುದಿಲ್ಲ. ಒಬ್ಬ ಮೃತ ಮುಸಲ್ಮಾನನ ಕಾನೂನುಬದ್ಧ ವಾರಸುದಾರನು ಆ ಪೂರ್ವಜನ ಮರಣದ ಕಾಲದಲ್ಲಿ ಮುಸಲ್ಮಾನನಾಗಿರಲಿಲ್ಲವೆಂಬ ಕಾರಣದ ಮೇಲೆ ಅಂತಹ ಸ್ವತ್ತಿನ ವಾರಸು ಪಡೆಯುವುದರಿಂದ ಅಡ್ಡಿಗೊಳಿಸಲ್ಪಡುವುದಿಲ್ಲ. 'ಜಾತಿ ನಿರ್ಯೋಗ್ಯತೆಯ ರದ್ದು ಗೊಳಿಸುವಿಕೆಯ ಅಧಿನಿಯಮ 1850 (Caste Disabilities Removal Act 1850) ಇದರ ಪ್ರಕಾರ ಒಬ್ಬ ವಾರಸುದಾರನು ಧರ್ಮಪರಿತ್ಯೆಜನೆ ಮಾಡಿದರೆ ಇದು ಅವನ ಮತೀಯ ಕಾನೂನಿನ ಪ್ರಕಾರ ಅವನು ವಾರಸುಪಡೆಯುವ

ಹಕ್ಕಿನ ಮೇಲೆ ಪರಿಣಾಮಿತವಾಗುವುದಿಲ್ಲ. ಆದುದರಿಂದ ಒಬ್ಬ ಮತಾಂತರಣ ಗೊಂಡ ವಾರಸುದಾರನು ವಾರಸು ಪಡೆಯುವ ಸಂಬಂಧದಲ್ಲಿ ಮುಸ್ಲಿಮ್ ಕಾನೂನಿನಿಂದ ಶಾಸಿತನಾಗುವನು.

ಡಿ) ರೂಢಿ ಅಥವಾ ಪರಿನಿಯಮದ ನೇರಿಗೆ ಮಗಳಂದಿರ ಹೊರ ಪಡಿಸಲ್ಪಡುವಿಕೆ (Exclusion of daughter under custom or Stutate)

ಕೆಲವು ಸ್ಥಳಗಳಲ್ಲಿ ಯಾವತ್ತೂ ಕ್ಷೇತ್ರೀಯ ರೂಢಿ ಅಥವಾ ಕೆಲವು ಅಧಿನಿಯಮಗಳ ಪ್ರಕಾರ ಮಗಳಂದಿರು ಕೆಲವೊಮ್ಮೆ ವಾರಸುಪಡೆಯುವುದರಿಂದ ಹೊರ ಪಡಿಸಲ್ಪಡುವರು. ಉದಾಹರಣೆಗಾಗಿ, ಕಾಶ್ಮೀರದ ಗುಜರ್‌ಗಳು ಮತ್ತು ಬುಕ್ಕೀರ್ ವಾಲ್‌ಗಳು ಇವರೊಳಗಿನ ಒಂದು ರೂಢಿಯ ಪ್ರಕಾರ ಒಬ್ಬ ಅಜ್ಜನಿಗೆ ಗಂಡು ವಂಶಜರಿದ್ದಾಗ ಅಲ್ಲಿ ಅವನ ಮಗಳಂದಿರು ವಾರಸುಪಡೆಯುವಂತಿಲ್ಲ. ಇದೇ ರೀತಿಯಲ್ಲಿ ಮುಂಬಾಯಿಯಲ್ಲಿ ಜಾರಿಗೊಳಿಸಲ್ಪಟ್ಟ ವತನ್ ಅಧಿನಿಯಮ 1886 ರ (Waton Act, 1886) ಇದರ ಪ್ರಕಾರ ಒಬ್ಬ ಪೈತೃಕ ಚಿಕ್ಕಪ್ಪನ ಹಾಜರಿಯಲ್ಲಿ ಒಬ್ಬ ಮಗಳು ವಾರಸು ಪಡೆಯುವುದರಿಂದ ಹೊರಪಡಿಸಲ್ಪಡುವಳು.

ಇ) ನಾಪತ್ತೆಯಾಗಿರುವ ವ್ಯಕ್ತಿಗಳು (Missing persons)

ಹನಫೀ ಕಾನೂನಿನ ಪ್ರಕಾರ ಒಬ್ಬ ನಾಪತ್ತೆಯಾಗಿರುವ ವ್ಯಕ್ತಿಯು ಅವನ ಜನ್ಮದ ದಿನಾಂಕದಿಂದ 90 ವರ್ಷಗಳ ಬಳಿಕ ಮೃತನಾಗಿರುವನೆಂಬುದಾಗಿ ಎಣಿಸಲ್ಪಡುವನು: ಅಷ್ಟು ಕಾಲದ ತನಕ ಅವನ ಸ್ವತ್ತುಗಳ ವಾರಸು ಅಸ್ತಿತ್ವಕ್ಕೆ ಬರುವುದಿಲ್ಲ. ಆದರೆ ಈ ನಿಯಮವು ಭಾರತೀಯ ಸಾಕ್ಷ ಅಧಿನಿಯಮ ಇದರ ಕ. 108ರಿಂದ ಮಾರ್ಪಾಡುಗೊಳಿಸಲ್ಪಟ್ಟಿದೆ. ಈ ಅಧಿನಿಯಮದ ಪ್ರಕಾರ ಒಬ್ಬ ವ್ಯಕ್ತಿಯು ಜೀವಿತನಾಗಿರುವನೊ ಅಥವಾ ಮೃತನಾಗಿರುವನೋ ಎಂಬ ಪ್ರಶ್ನೆಯು ಬಂದಾಗ, ಒಂದೊಮ್ಮೆ ಅವನು ಜೀವಿತನಾಗಿದ್ದರೆ ಯಾರು ಆ ಸಂಗತಿಯನ್ನು ತಿಳಿಯಬೇಕಿತ್ತೊ ಅವರು ಕಳೆದ ಏಳು ವರ್ಷಗಳಿಂದ ಅವನ ಬಗ್ಗೆ ಏನೂ ಕೇಳಿಲ್ಲವೆಂದಾದರೆ, ಅವನು ಜೀವಿಸಿರುವನೆಂಬುದನ್ನು ಸಾಬೀತುಪಡಿಸುವ ಪ್ರಭಾರವು ಇದನ್ನು ಸಾಧಿಸುತ್ತಿರುವ ವ್ಯಕ್ತಿಗಳ ಮೇಲೆ ಬರುತ್ತದೆ.

ಆದುದರಿಂದ ಒಂದೊಮ್ಮೆ ಒಬ್ಬ ಮುಸಲ್ಮಾನನು ಕನಿಷ್ಠ ಏಳು ವರ್ಷಗಳಿಂದ ನಾಪತ್ತೆಯಾಗಿದ್ದರೆ ಮತ್ತು ಅವನು ಅಥವಾ ಅವಳು ಜೀವಿತರಾಗಿರುವರೆಂಬುದನ್ನು ಸಾಬೀತುಪಡಿಸುವುದು ಅಸಾಧ್ಯವಾಗಿದ್ದರೆ, ಅವನು ಮೃತನಾಗಿರುವನೆಂಬ ಒಂದು ಕಾನೂನುಬದ್ಧ ಪೂರ್ವಭಾವನೆಯುಂಟಾಗುತ್ತದೆ ಮತ್ತು ಅವನ ಸ್ವತ್ತುಗಳ ವಾರಸು ತೆರೆಯುತ್ತದೆ.

13) ರಾಜಗಾಮಿತ್ವ (Escheat)

ಒಂದೊಮ್ಮೆ ಮುಸ್ಲಿಮ್ ಕಾನೂನಿನ ಪ್ರಕಾರ ಒಬ್ಬ ಮೃತ ಮುಸಲ್ಮಾನನಿಗೆ ಕಾನೂನು ಬದ್ಧ ವಾರಸುದಾರನಿಲ್ಲವೆಂಧಾದರೆ ಅವನ ಸ್ವತ್ತುಗಳು ರಾಜಗಾಮಿತ್ವದ ಪ್ರಕ್ರಿಯೆಗೆ ಅನುಸಾರವಾಗಿ ಸರಕಾರಕ್ಕೆ ಸೇರುತ್ತವೆ. ರಾಜ್ಯವು ಪ್ರತಿಯೊಬ್ಬ ಮೃತನ ಕೊನೆಯ ವಾರಸುದಾರ ಎಂಬುದಾಗಿ ಎಣಿಸಲ್ಪಡುತ್ತದೆ.

14) ವಿಶೇಷ ವಿವಾಹ ಅಧಿನಿಯಮ 1954 ಇದರ ಮೇರೆಗೆ ವಿವಾಹ (Marriage under the Special Marriage Act, 1954)

ಒಂದೊಮ್ಮೆ ಒಬ್ಬ ಮುಸಲ್ಮಾನನು ವಿಶೇಷ ವಿವಾಹ ಅಧಿನಿಯಮ 1954ರ ಪ್ರಕಾರ ಒಂದು ವಿವಾಹದ ಕರಾರು ಮಾಡಿಕೊಂಡರೆ ಅಲ್ಲಿ ವಾರಸಿನ ಉದ್ದೇಶಗಳಿಗಾಗಿ ಅವನು ಒಬ್ಬ ಮುಸಲ್ಮಾನನಾಗಿರುವುದು ನಿಂತುಹೋಗುತ್ತದೆ. ಆದುದರಿಂದ ಅಂತಹ ಒಬ್ಬ ಮುಸಲ್ಮಾನನ ಮರಣವಾದಾಗ ಅವನ ಸ್ವತ್ತುಗಳು ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನಿನ ಪ್ರಕಾರ ಪ್ರಾಪ್ತವಾಗುವುದಿಲ್ಲ. ಇಂತಹ ಒಬ್ಬ ಮುಸಲ್ಮಾನನ ಸ್ವತ್ತುಗಳ ವಾರಸಿನ ಪ್ರಶ್ನೆಯು ಭಾರತೀಯ ಉತ್ತರಾಧಿಕಾರ ಅಧಿನಿಯಮ 1925 ಇದರ ಉಪಬಂಧಗಳ ಮೇರೆಗೆ ನಿರ್ಣಯಿಸಲ್ಪಡುತ್ತದೆ ಮತ್ತು ವಾರಸಿಗೆ ಸಂಬಂಧಪಟ್ಟ ಮುಸ್ಲಿಮ್ ಕಾನೂನು ಯಾವುದೇ ರೀತಿಯಲ್ಲಿ ಅಂಥವನಿಗೆ ಅನ್ವಯವಾಗುವುದಿಲ್ಲ.

ಕೆಲವು ಪದಗಳ ವಿವರಣೆ
Explanation of certain terms

ಮೂಲ ಪುರುಷ (Propositus)

ಮೂಲ ಪುರುಷನೆಂದರೆ ಯಾವಾತನ ಸ್ವತ್ತಿನ ವಾರಸಿನ ವಿಷಯವು ತಡೆಯಲ್ಪಟ್ಟಿದೆಯೋ ಅಂತಹ ಒಬ್ಬ ಮೃತನಾದ ವ್ಯಕ್ತಿ. ಈ ರೀತಿಯಾಗಿ ಯಾರ ಸ್ವತ್ತುಗಳು ಅವನ ಕಾನೂನೀ ವಾರಸುದಾರರಿಂದ ವಾರಸುಪಡೆಯಲ್ಪಟ್ಟಿವೆಯೋ ಅಂಥವನು ಒಬ್ಬ ಮೂಲಪುರುಷನೆಂಬುದಾಗಿ ಕರೆಯಲ್ಪಡುವನು. ಸಾಮಾನ್ಯವಾಗಿ ಈ ಪದವು ಪ್ರಸ್ತಾವಿತ ವ್ಯಕ್ತಿ ಅಥವಾ ಯಾವ ವ್ಯಕ್ತಿಯ ಮೇಲ್ಪಟ್ಟದ ಅಥವಾ ಕೆಳಮಟ್ಟದ ಉತ್ತರಾಧಿಕಾರದ ಪಂಕ್ತಿಯು ಆರಂಭವಾಗಿದೆಯೋ ಅಂಥವನನ್ನು ಕೂಡಿಕೊಂಡಿರುತ್ತದೆ.

ಪೂರ್ವಜರು (Ascendants)

ಮೂಲ ಪುರುಷನಿಗಿಂತ ಮೇಲ್ಪಟ್ಟದ ಹಂತದಲ್ಲಿರುವ ವ್ಯಕ್ತಿಗಳನ್ನು ಪೂರ್ವಜರೆಂಬುದಾಗಿ ಕರೆಯಲಾಗುತ್ತದೆ. ಮೇಲ್ಪಟ್ಟದ ವ್ಯಕ್ತಿಗಳು ಪೈತೃಕ ಅಥವಾ ಮಾತೃಕ ಭಾಗದಿಂದ ಆಗಿರಬಹುದು ಮತ್ತು ಅವರು ಮೇಲ್ಪಟ್ಟದ ಎಷ್ಟೇ ಹಂತದವರಾಗಿರಬಹುದು.

ವಂಶಜರು (Descendants)

ಮೂಲ ಪುರುಷನ ಕೆಳಹಂತದ ವ್ಯಕ್ತಿಗಳನ್ನು ವಂಶಜರೆಂದು ಕರೆಯಲಾಗುತ್ತದೆ. ಒಬ್ಬ ಮೂಲ ಪುರುಷನಿಗೆ ಕೆಳವಟ್ಟದಲ್ಲಿ ನಾರಿಯರಿಂದ ಅಥವಾ ಪುರುಷರಿಂದ ವಂಶಜರಿರಬಹುದು ಮತ್ತು ಅವರು ಎಷ್ಟೇ ಹಂತದವರಾಗಿರಬಹುದು.

ಪಾರ್ಶ್ವಿಕರು (Collaterals)

ಒಬ್ಬ ಮೂಲಪುರುಷನ ಪೂರ್ವಜನ ವಂಶಜರನ್ನು ಪಾರ್ಶ್ವೀಕರೆಂದು ಕರೆಯಲಾಗುತ್ತದೆ. ತ್ಯಾಬ್ಜಿಯವರ ಪ್ರಕಾರ ಪಾರ್ಶ್ವಿಕನೆಂದರೆ ಮೃತನ ಪೂರ್ವಜನಿಗೂ ಪೂರ್ವಜನಾಗಿರುವ ಒಬ್ಬ ವ್ಯಕ್ತಿಯಾಗಿರುವನು; ಆದರೆ ಅಂಥವನು ಮೃತನ ಪೂರ್ವಜನಾಗಲಿ ಅಥವಾ ವಂಶಜನಾಗಲಿ ಆಗಿರುವುದಿಲ್ಲ. ಪೂರ್ವಜರ ವಂಶಜರಲ್ಲಿ ಮೂಲಪುರುಷನು ಒಬ್ಬನಾಗಿರುವನು; ಆದರೆ ಅವನ ಹೊರತಾಗಿ ಅಲ್ಲಿ ಅವರಂತೆ ಇತರ ವಂಶಜರಿರಬಹುದು. ಅಂತಹ ಇತರ ವಂಶಜರು ಆ ಮೂಲಪುರುಷನ ಪಾರ್ಶ್ವಿಕರಾಗಿರುವರು, ಆದುದರಿಂದ ಸಹೋದರ, ಸಹೋದರಿ, ಚಿಕ್ಕಪ್ಪನ ಮಗ, ಚಿಕ್ಕಪ್ಪನ ಮಗಳು, ಸಹೋದರಿಯ ಮಗ, ಸೋದರ ಮಾವ, ಸೋದರತ್ತೆ, ಸೋದರ ಮಾವನ ತಂದೆ, ಅಥವಾ ಸೋದರ ಮಾವನ ತಾಯಿ ಇತ್ಯಾದಿ ವ್ಯಕ್ತಿಗಳ ಮೂಲ ಪುರುಷರ ಪಾರ್ಶ್ವಿಕರೆಂಬುದಾಗಿ ಎಣಿಸಲ್ಪಡುವರು.

ಗೋತ್ರಸಪಿಂಡರು (Agnates)

ಗೋತ್ರಸಪಿಂಡನೆಂದರೆ ಮೂಲ ಪುರುಷನಿಗೆ ಗಂಡಸರಿಂದ ಸಂಬಂಧಿಕರಾದ ವ್ಯಕ್ತಿಗಳು. ಒಬ್ಬ ಮೂಲಪುರುಷನ ಗಂಡು ಸಂಬಂಧಿಕರ ಮೂಲಕ ಹುಟ್ಟಿರುವ ಎಲ್ಲಾ ವಂಶಜರನ್ನು ಗೋತ್ರಸಪಿಂಡದವರೆಂಬುದಾಗಿ ಕರೆಯಲಾಗುತ್ತದೆ. ಗೋತ್ರಸಪಿಂಡರು ಗಂಡಸರೇ ಆಗಿರಬೇಕಾಗಿಲ್ಲ; ಒಂದೊಮ್ಮೆ ಒಬ್ಬ ನಾರಿಯು ಒಬ್ಬ ಗಂಡಸಿನ ಮೂಲಕ ವಾರಸುಪಡೆಯುವಳೆಂಥಾದರೆ ಅಲ್ಲಿ ಆ ಹೆಂಗಸೂ ಸಹ ಗೋತ್ರಸಪಿಂಡಳೆಂಬುದಾಗಿ ಎಣಿಸಲ್ಪಡುವಳು. ಉದಾಹರಣೆಗಾಗಿ, ಮಗ, ಮಗನ ಮಗ ಮಗನ ಮಗಳು, ತಂದೆ, ತಂದೆಯ ತಂದೆ, ತಂದೆಯ ತಾಯಿ ಇವರೆಲ್ಲ ಒಬ್ಬ ಮೃತನ ಗೋತ್ರಸಪಿಂಡರಾಗಿರುವರು.

ಭಿನ್ನಗೋತ್ರಸಪಿಂಡರು (Cognates)

ಭಿನ್ನಗೋತ್ರಸಪಿಂಡರೆಂದರೆ ಮೂಲಪುರುಷನಿಗೆ ಒಬ್ಬ ಅಥವಾ ಹೆಚ್ಚಿನ ನಾರಿಯರ ಮಧ್ಯಾಂತರ ಸಂಬಂಧಿತರಾಗಿರುವ ವ್ಯಕ್ತಿಗಳಾಗಿರುವರು. ಒಂದು ಉತ್ತರಾಧಿಕಾರದ ಪಂಕ್ತಿಯಲ್ಲಿ ಒಂದೊಂವ್ಮೆ ಒಬ್ಬ ಮೂಲಪುರುಷ ಮತ್ತು ಉತ್ತರಾಧಿಕಾರಿಯ ಮಧ್ಯದಲ್ಲಿ ಒಬ್ಬ ನಾರಿಯಿರುವಳೆಂದಾದರೆ ಅಲ್ಲಿ ಆ ಉತ್ತರಾಧಿಕಾರಿಯನ್ನು ಭಿನ್ನಗೋತ್ರಸಪಿಂಡರೆಂಬುದಾಗಿ ಎಣಿಸಲಾಗುತ್ತದೆ. ಈ ರೀತಿಯಾಗಿ

ಒಬ್ಬ ಮಗಳ ಮಗ, ಮಗಳ ಮಗಳು, ತಾಯಿಯ ತಾಯಿ, ತಾಯಿಯ ತಂದೆ. ಅಥವಾ ತಂದೆಯ ತಾಯಿಯ ತಂದೆ ಇತ್ಯಾದಿ ವ್ಯಕ್ತಿಗಳು ಭಿನ್ನಗೋತ್ರಸಪಿಂಡ ರಾಗಿರುವರು.

ನಿಜ ಅಜ್ಜ ನಿಜ ಅಜ್ಜಿ (True Grandfather, True Grand mother)

ವಾರಸಿನ ಕಾನೂನಿನ ಭಾಷೆಯಲ್ಲಿ ಪೈತೃಕ ಅಜ್ಜನನ್ನು ಒಬ್ಬ ನಿಜ ಅಜ್ಜ ಎಂಬುದಾಗಿ ಕರೆಯಲಾಗುತ್ತದೆ. ಹಾಗೆಂದರೆ ನಿಜ ಅಜ್ಜನು ಒಬ್ಬ ಗೋತ್ರಸಪಿಂಡ ಅಜ್ಜನಾಗಿರುವನು. ಒಂದೊಮ್ಮೆ ಒಬ್ಬ ಗಂಡು ಪೂರ್ವಜ ಮತ್ತು ಮೂಲಪುರುಷ ಇವರಿಬ್ಬರೊಳಗೆ ಯಾವಳಾದರೊಬ್ಬ ನಾರಿಯು ಮಧ್ಯಪ್ರವೇಶಿಸುವುದಿಲ್ಲವೆಂದಾದರೆ ಅಲ್ಲಿ ಆ ಗಂಡು ಪೂರ್ವಜನು ಮೂಲಪುರುಷನ ನಿಜ ಅಜ್ಜನೆಂಬುದಾಗಿ ಕರೆಯಲ್ಪಡು ವನು. ಉದಾಹರಣೆಗಾಗಿ, ತಂದೆಯ ತಂದೆ, ಅಥವಾ ತಂದೆಯ ತಂದೆಯ ತಂದೆ ಇತ್ಯಾದಿಯಾಗಿ ಅವರು ಎಷ್ಟೇ ಮೇಲ್ಮಟ್ಟದವರಾಗಿರಲಿ ಅವರೆಲ್ಲ ನಿಜ ಅಜ್ಜರೆಂಬು ದಾಗಿ ಎಣಿಸಲ್ಪಡುವರು.

ಪೈತೃಕ ಅಜ್ಜಿಯನ್ನು ಒಬ್ಬ ನಿಜ ಅಜ್ಜಿಯೆಂಬುದಾಗಿ ಕರೆಯಲಾಗುತ್ತದೆ. ಒಂದೊಮ್ಮೆ ಒಬ್ಬ ಹೆಣ್ಣು ಪೂರ್ವಜ ಮತ್ತು ಮೂಲಪುರುಷ ಇವರಿಬ್ಬರೊಳಗೆ ಯಾವನಾದರೊಬ್ಬ ಮಾತೃಕ ಅಜ್ಜನು ಅಡ್ಡಬಾರದಿದ್ದರೆ ಅಲ್ಲಿ ಆ ಹೆಣ್ಣು ಪೂರ್ವಜಳು ಮೂಲಪುರುಷನ ನಿಜ ಅಜ್ಜಿಯೆಂಬುದಾಗಿ ಎಣಿಸಲ್ಪಡುವಳು. ಹೀಗೆ, ತಂದೆಯ ತಾಯಿ, ತಂದೆಯ ತಂದೆಯ ತಾಯಿ, ತಂದೆಯ ತಾಯಿಯ ತಾಯಿ, ತಾಯಿಯ ಮತ್ತು ತಾಯಿಯ ತಾಯಿಯ ತಾಯಿ ಇವರೆಲ್ಲ ನಿಜ ಅಜ್ಜಿಯರಾಗಿರುವರು. ಈ ಸಂಬಂಧದಲ್ಲಿ ಮೂಲ ಪುರುಷ ಮತ್ತು ಈ ಸಂಬಂಧಿಕರೊಳಗೆ ಯಾವಳಾದರೊಬ್ಬ ಮಾತೃಕ ಅಜ್ಜಿಯು ಅಡ್ಡಬರುವದಿಲ್ಲ.

ಮಿಥ್ಯ ಅಜ್ಜ, ಮಿಥ್ಯ ಅಜ್ಜಿ
(False Grand father, false Grand mother)

ಒಬ್ಬ ವ್ಯಕ್ತಿಯ ಮಾತೃಕ ಅಜ್ಜನು ಆತನ ಮಿಥ್ಯ ಅಜ್ಜನೆಂಬುದಾಗಿ ಕರೆಯ ಲ್ಪಡುವನು. ಒಂದೊಮ್ಮೆ ಒಬ್ಬ ಅಜ್ಜ ಮತ್ತು ಮೂಲ ಪುರುಷ ಇವರಿಬ್ಬರೊಳಗೆ ಒಬ್ಬ ಅಥವಾ ಹೆಚ್ಚಿನ ನಾರಿಯರು ಮಧ್ಯಪ್ರವೇಶಿಸದಿದ್ದರೆ ಅಲ್ಲಿ ಆ ಅಜ್ಜನನ್ನು ಮೂಲಪುರುಷನ ಅಜ್ಜನೆಂಬುದಾಗಿ ಕರೆಯಲಾಗುತ್ತದೆ, ಉದಾಹರಣೆಗಾಗಿ, ತಾಯಿಯ ತಂದೆ, ತಾಯಿಯ ತಾಯಿಯ ತಂದೆ ಮತ್ತು ತಂದೆಯ ತಾಯಿಯ ತಂದೆ ಇತ್ಯಾದಿಗಳು ಮಿಥ್ಯ ಅಜ್ಜಂದಿರಾಗಿರುವರು. ಏಕೆಂದರೆ ಇಲ್ಲಿ ಮೂಲಪುರುಷ ಮತ್ತು ಈ ಗಂಡು ಪೂರ್ವಜ ಇವರೊಳಗೆ ಯಾವಳೇ ಒಬ್ಬ ಹೆಣ್ಣು ಪೂರ್ವಜಳು ಅಡ್ಡಬರುವುದಿಲ್ಲ.

ಮಾತೃಕ ಅಜ್ಜಿಯು ಮಿಥ್ಯ ಅಜ್ಜಿಯೆಂಬುದಾಗಿ ಎಣಿಸಲ್ಪಡುವಳು, ಒಂದೊಮ್ಮೆ ಒಬ್ಬ ಹೆಣ್ಣು ವಂಶಜಳು ಮತ್ತು ಮೂಲಪುರುಷ ಇವರಿಬ್ಬರ ನಡುವೆ

ಯಾವನಾದರೊಬ್ಬ ಮಾತೃಕ ಅಜ್ಜನು ಅಡ್ಡಬಂದರೆ ಆ ಹೆಣ್ಣು ಪೂರ್ವಜಳು ಆ ಮೂಲ ಪುರುಷನ ಒಬ್ಬ ಮಿಥ್ಯ ಅಜ್ಜಿಯೆಂಬುದಾಗಿ ಎಣಿಸಲ್ಪಡುವಳು. ಉದಾಹರಣೆಗಾಗಿ ತಾಯಿಯ ತಂದೆಯ ತಾಯಿಯು ಮೂಲ ಪುರುಷನ ಮಿಥ್ಯ ಅಜ್ಜಿಯಾಗಿರುವಳು. ಮಿಥ್ಯ ಅಜ್ಜಂದಿರು ಮತ್ತು ಮಿಥ್ಯ ಅಜ್ಜಿಯಂದಿರು ದೂರಸ್ಥ ಸಂಬಂಧದ ವರ್ಗದೊಳಗೆ ಬರುವಳು.

ಏಕೋದರ ಸಹೋದರರು ಮತ್ತು ಸಹೋದರಿಯರು
(Uterine Brothers and Sisters)

ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ತಾಯಿಯು ಒಬ್ಬಳೇ ಆಗಿದ್ದು, ಆದರೆ ಅವರ ತಂದೆಯರು ಬೇರೆ ಬೇರೆಯಾಗಿದ್ದರೆ, ಈ ವ್ಯಕ್ತಿಗಳು ಏಕೋದರ ಸಹೋದರರು ಮತ್ತು ಸಹೋದರಿಯರಾಗಿರುವರು. ಬೇರೆ ಶಬ್ದಗಳಲ್ಲಿ ಹೇಳುವದಿದ್ದರೆ, ಇವರು ಒಬ್ಬಳು ತಾಯಿ ಆದರೆ ಬೇರೆ ಬೇರೆ ತಂದೆಯರಿಗೆ ಹುಟ್ಟಿರುವ ಮಕ್ಕಳಾಗಿರುವರು. ಈ ಮಕ್ಕಳು ಏಕೋದರ ಸಂಬಂಧಿಕರೆಂಬುದಾಗಿ ಎಣಿಸಲ್ಪಡುವರು. ಏಕೆಂದರೆ ಇವರು ಪರಸ್ಪರರಿಗೆ ಒಬ್ಬಳೇ ತಾಯಿಯಿಂದ ಸಂಬಂಧಿತರಾಗಿರುವರು.

ರಕ್ತಸಂಬಂಧದ ಸಹೋದರರು ಮತ್ತು ಸಹೋದರಿಯರು
(Consanguine Brothers and Sisters)

ಒಬ್ಬನೇ ತಂದೆಯಾಗಿದ್ದು ಬೇರೆ ಬೇರೆ ತಾಯಿಯರಿರುವ ಮಕ್ಕಳನ್ನು ರಕ್ತ ಸಂಬಂಧದ ಸಹೋದರರು ಮತ್ತು ಸಹೋದರಿಯರೆಂಬುದಾಗಿ ಕರೆಯಲಾಗುತ್ತದೆ. ರಕ್ತಸಂಬಂಧದ ಸಂಬಂಧಿಕರು ಗೋತ್ರಸಪಿಂಡರಾಗಿರುವರು ಏಕೆಂದರೆ ಅವರು ತಂದೆಯ ಮೂಲಕ ವಾರಸು ಪಡೆಯುವರು.

ಪೂರ್ಣ ಸಹೋದರ ಮತ್ತು ಸಹೋದರಿ (Full Brother and Sister)

ನಿಜ ಸಹೋದರರು ಮತ್ತು ಸಹೋದರಿಯರು ಪೂರ್ಣ ಸಹೋದರರು ಮತ್ತು ಸಹೋದರಿಯರೆಂಬುದಾಗಿ ಎಣಿಸಲ್ಪಡುವರು. ಒಂದೇ ಹೆತ್ತವರ ಮಕ್ಕಳು ಪೂರ್ಣ ಸಹೋದರರು ಅಥವಾ ಸಹೋದರಿಯರು ಎಂಬುದಾಗಿ ಎಣಿಸಲ್ಪಡುವರು.

ಅಧಿಸ್ವೀಕೃತ ಸಂಬಂಧಿಕ (Acknowledged Kinsmau)

ಸಂಬಂಧಿಕನೆಂದರೆ ಒಬ್ಬನೇ ಪೂರ್ವಜನ ವಂಶಜರು, ಒಬ್ಬ ಅಧಿಸ್ವೀಕೃತ ಸಂಬಂಧಿಕನೆಂದರೆ ನಿಜವಾಗಿ ಒಬ್ಬ ಸಂಬಂಧಿಕನಾಗಿರದ ವ್ಯಕ್ತಿಯಾಗಿದ್ದು ಮೂಲ ಪುರುಷನಿಂದ ಸಂಬಂಧಿಕರೆಂಬುದರ ಬಗ್ಗೆ ಅಧಿಸ್ವೀಕೃತನಾಗಿರುವ ವ್ಯಕ್ತಿಯಾಗಿರುವನು. ಹೀಗೆ ಒಬ್ಬ ಅಧಿಸ್ವೀಕೃತ ಸಂಬಂಧಿಕನು ಮೂಲ ಪುರುಷನಿಂದ ಸಂಬಂಧಿಕ

ನೆಂಬ ಬಗ್ಗೆ ಅಧಿಸ್ವೀಕೃತನಾಗಿ ಅವನ ಸಂಬಂಧಿಕನಾಗಿರುವ ವ್ಯಕ್ತಿಯಾಗಿರುವನು. ಆದರೆ ಒಬ್ಬ ಮೂಲ ಪುರುಷನು ಇನ್ನೊಬ್ಬ ವ್ಯಕ್ತಿಯನ್ನು ಮತ್ತೊಬ್ಬ ವ್ಯಕ್ತಿಯ ಮೂಲಕ ತನ್ನ ಸಂಬಂಧಿಕನೆಂಬುದಾಗಿ ಅಧಿಸ್ವೀಕೃತಗೊಳಿಸುವನಲ್ಲದೆ ತನ್ನ ನೇರ ಸಂಬಂಧದ ಬಗ್ಗೆ ಅಧಿಕೃತಗೊಳಿಸಲ್ಪಡುವಂತಿಲ್ಲ.

ಸುನ್ನಿ ವಾರಸು ಕಾನೂನು
The Sunni law of Inheritance

ವಾರಸುದಾರರ ವರ್ಗೀಕರಣ (Classification of Heirs)

ಒಬ್ಬ ಸುನ್ನೀ ಮುಸಲ್ಮಾನನ ಕಾನೂನೀ ವಾರಸುದಾರನ್ನು ಈ ಕೆಳಗಿನ ವರ್ಗಗಳಲ್ಲಿ ವಿಭಜಿಸಲಾಗಿದೆ :

I) ಪ್ರಮುಖ ವರ್ಗಗಳು (The Principal Classes)

ಈ ಕೆಳಗಿನ ಮೂರು ವರ್ಗಗಳೊಳಗೆ ಬರುವ ವಾರಸುದಾರರನ್ನು ಕಾನೂನೀ ವಾರಸುದಾರನ್ನು ಕಾನೂನೀ ವಾರಸುದಾರರ ಪ್ರಮುಖ ವರ್ಗವೆಂದು ಕರೆಯಲಾಗುತ್ತದೆ. ಈ ಕೆಳಗಿನ ವರ್ಗಗಳಲ್ಲಿ ಬರುವ ವಾರಸುದಾರರು ಪತಿ ಮತ್ತು ವಿಧವೆಯು ಹೊರತಾಗಿ ಮೂಲ ಪುರುಷನಿಗೆ ರಕ್ತದಿಂದ ಸಂಬಂಧಿತರಾಗಿರುವರು.

1) ಪಾಲುದಾರರು ಅಥವಾ ಕುರಾನಿನ ವಾರಸುದಾರರು (Sharers or Quranik heirs)

ಪಾಲುದಾರರೆಂದರೆ ವಾರಸಿನ ಸ್ವತ್ತಿನಲ್ಲಿ ಒಂದು ಗೊತ್ತು ಮಾಡಲ್ಪಟ್ಟ ಪಾಲನ್ನು ಪಡೆಯಲು ಹಕ್ಕುದಾರರಾಗಿರುವ ವಾರಸುದಾರರು ಈ ಪಾಲುದಾರರು ಮತ್ತು ಅವರ ಪಾಲುಗಳು ಕುರಾನಿನಲ್ಲಿ ಹೇಳಲ್ಪಟ್ಟಿವೆ. ಆದುದರಿಂದ ಈ ಪಾಲುದಾರರನ್ನು ಕುರಾನಿನ ವಾರಸುದಾರರೆಂಬುದಾಗಿಯೂ ಕರೆಯಲಾಗುತ್ತದೆ ಸ್ವತ್ತಿನ ವಂಟನೆಯುಲ್ಲಿ ಪಾಲುದಾರರು ಇತರ ವರ್ಗದ ವಾರಸುದಾರರ ಮೇಲೆ ಆದ್ಯತೆಯನ್ನು ಪಡೆಯುವರು. ಪಾಲುದಾರರ ಪಾಲುಗಳು ಕುರಾನಿನಲ್ಲಿ ನಿರ್ದಿಷ್ಟಗೊಳಿಸಲ್ಪಟ್ಟವೆಯಾದುದರಿಂದ ಅವರ ಪಾಲುಗಳನ್ನು ಯಾವತ್ತೂ ಮಾನವೀಯ ಯತ್ನದಿಂದ ಬದಲಾಯಿಸುವಂತಿಲ್ಲ.

2) ಅಧಿಶೇಷರು ಅಥವಾ ಗೋತ್ರಸಪಿಂಡ ವಾರಸುದಾರರು (Residuaries or agnatic heirs)

ಪಾಲುದಾರರಿಗೆ ಅವರವರ ಪಾಲುಗಳನ್ನು ಕೊಟ್ಟಬಳಿಕ ಆ ಸ್ವತ್ತಿನ ಅಧಿಶೇಷವನ್ನು ವಾರಸುಪಡೆಯುವ ವಾರಸುದಾರರನ್ನು ಅಧಿಶೇಷರೆಂಬುದಾಗಿ ಕರೆಯಲಾಗುತ್ತದೆ. ಅಧಿಶೇಷರಿಗೆ ಆ ಸ್ವತ್ತಿನಲ್ಲಿ ನಿರ್ದಿಷ್ಟವಾದ ಪಾಲಿರುವುದಿಲ್ಲ. ಪಾಲುದಾರರಿಗೆ ಅವರ ನಿಗದಿಗೊಳಿಸಲ್ಪಟ್ಟ ಪಾಲುಗಳು ಕೊಡಲ್ಪಟ್ಟ ಬಳಿಕ ಏನಾದರೂ

ಉಳಿದರೆ ಮಾತ್ರ ಅದು ಅಧಿಶೇಷನಿಗೆ ಸಿಗುತ್ತದೆ. ಈ ಅಧಿಶೇಷವು ಬೇರೆ ಬೇರೆ ಪಟ್ಟಣಗಳಲ್ಲಿ ಬೇರೆ ಬೇರೆ ರೀತಿಯಾಗಿರಬಹುದು. ಒಂದೊಮ್ಮೆ ಪಾಲುದಾರರಿಲ್ಲ ವೆಂದಾದರೆ, ಆ ಇಡೀ ಸ್ವತ್ತು ಅಧಿಶೇಷನಿಗೆ ವಾರಸು ಸಿಗುತ್ತದೆ. ಅಧಿಶೇಷವಾರಸು ದಾರರನ್ನು ಗೋತ್ರಸಪಿಂಡ ವಾರಸುದಾರರೆಂಬುದಾಗಿ ಕರೆಯಲಾಗುತ್ತದೆ. ಏಕೆಂದರೆ ಅವರು ಗಂಡುಸಂಬಧಿಕರಿಂದ ವಾರಸುಪಡೆಯುವರು.

3) ದೂರಸ್ಥ ಸಂಬಂಧಿಕರು ಅಥವಾ ಏಕೋದರವಾರಸುದಾರರು. (Distant kindred or uterine heirs)

ಒಬ್ಬ ಮೂಲ ಪುರುಷರಿಗೆ ರಕ್ತದಿಂದ ಸಂಬಂಧಿಕರಾಗಿರುವ ಎಲ್ಲಾ ವ್ಯಕ್ತಿಗಳು ಆದರೆ ಪಾಲುದಾರರೊಳಗೆ ಸೇರಿಸಲ್ಪಡದಂತಹ ವಾರಸುದಾರರು ದೂರಸ್ಥ ಸಂಬಂಧಿ ಕರೆಂಬುದಾಗಿ ಎಣಿಸಲ್ಪಡುವರು. ಒಂದೊಮ್ಮೆ ಒಬ್ಬ ಮೂಲ ಪುರುಷನಿಗೆ ಪಾಲು ದಾರರು ಮತ್ತು ಅಧಿಶೇಷರು ಇಲ್ಲವೆಂದಾದರೆ ಆಗ ಅವನ ದೂರಸ್ಥ ಸಂಬಂಧಿಕರು ಅವನ ಸ್ವತ್ತುಗಳ ವಾರಸು ಪಡೆಯುವರು. ದೂರಸ್ಥ ಸಂಬಂಧಿಕರು ಪಾಲುದಾರರ ಅಥವಾ ಅಧಿಶೇಷರ ಉಪಸ್ಥಿತಿಯಲ್ಲಿ ವಾರಸುಪಡೆಯುವಂತಿಲ್ಲ. ಈ ವರ್ಗದೊಳಗೆ ಸೇರಿಸಲ್ಪಟ್ಟ ವಾರಸುದಾರರು ಏಕೋದರ ವಾರಸುದಾರರೆಂಬುದಾಗಿಯೂ ಎಣಿಸಲ್ಪ ಡುವರು.

II) ಉಪವರ್ಗಗಳು (Subsidiary classes)

ಮೇಲೆ ಹೇಳಲ್ಪಟ್ಟ ಮೂರು ವರ್ಗಗಳ ವಾರಸುದಾರರ ಹೊರತಾಗಿ ಇನ್ನೂ ನಾಲ್ಕು ಹೆಚ್ಚಿನ ವರ್ಗಗಳ ಕಾನೂನೀ ವಾರಸುದಾರರಿರುವರು. ಈ ಕೆಳಗೆ ಹೇಳಲ್ಪಟ್ಟ ವಾರಸುದಾರರು ಉಪವಾರಸುದಾರರೆಂಬುದಾಗಿ ಕರೆಯಲ್ಪಡುವರು ಮತ್ತು ಅವರು ಕೇವಲ ಅಪವಾದಿಕ ಪ್ರಕರಣಗಳಲ್ಲಿ ವಾರಸು ಪಡೆಯುವರು :

1) ಕರಾರಿನಿಂದ ಉತ್ತರಾಧಿಕಾರಿ (Successor by Contract)
2) ಅಧಿಸ್ವೀಕೃತ ಸಂಬಂಧಿಕ (Acknowledged Kinsman)
3) ಸಾರ್ವತ್ರಿಕ ಉತ್ತರಾದಾತ (Universal legatee)
4) ರಾಜ್ಯ (The State)

ವಂಟನೆಯು ರೀತಿ (Scheme of distribution)

ಒಬ್ಬ ಸುನ್ನೀ ಮೂಲಪುರುಷನ ಕಾನೂನೀ ವಾರಸುದಾರರೊಳಗೆ ಸ್ವತ್ತಿನ ವಂಟನೆ ಮಾಡುವಲ್ಲಿ ಈ ಕೆಳಗಿನ ರೀತಿಯು ಅನುಸರಿಸಲ್ಪಡುತ್ತದೆ. ಮೊದಲನೆಯ ದಾಗಿ ಇಲ್ಲಿ ಯಾರೆಲ್ಲ ಪಾಲುದಾರರು ಅಥವಾ ಕುರಾನೀ ವಾರಸುದಾರರು ಎಂಬುದನ್ನು ಖಾತರಿಪಡಿಸಲಾಗುತ್ತದೆ. ಅವರ ಪಾಲುಗಳು ಖಾತರಿಪಡಿಸಲ್ಪಟ್ಟ ಬಳಿಕ ಆ ಪಾಲುಗಳು ಅವರಿಗೆ ಕೊಡಲ್ಪಡುತ್ತವೆ, ಒಂದೊಮ್ಮೆ ಅವರಿಗೆ ಅವರ ಪಾಲುಗಳು

ಕೊಡಲ್ಪಟ್ಟ ಬಳಿಕ ಅಲ್ಲಿಗೆ ಆ ಇಡೀ ಸ್ವತ್ತು ನಿಶ್ಶೇಷವಾವರೆ ಆ ವಂಟನೆಯು ಮುಂದುವರಿಯುವುದಿಲ್ಲ. ಆದರೆ ಒಂದೊಮ್ಮೆ ಈ ವಂಟನೆಯ ಬಳಿಕ ಮತ್ತು ಒಂದಿಷ್ಟು ಸ್ವತ್ತು ಉಳಿದರೆ ಆ ಉಳಿದ ಸ್ವತ್ತನ್ನು ಕಾನೂನೀ ವಾರಸುದಾರರ ವರ್ಗ ಎರಡರೊಳಗೆ ಬರುವ ಅಧಿಶೇಷರೊಳಗೆ ಹಂಚಲಾಗುತ್ತದೆ. ಆದರೆ ಒಂದೊಮ್ಮೆ ಆ ಮೂಲಪುರುಷನಿಗೆ ಪಾಲುಗಾರರೇ ಇಲ್ಲವೆಂದಾದರೆ ಅಲ್ಲಿ ಆ ಇಡೀ ಸ್ವತ್ತು ಅಧಿಶೇಷರು ವಾರಸುಪಡೆಯುವರು. ಒಂದೊಮ್ಮೆ ಆ ಮೂಲಪುರುಷರಿಗೆ ಪಾಲು ದಾರರೂ ಇಲ್ಲ ಮತ್ತು ಅಧಿಶೇಷರೂ ಇಲ್ಲವೆಂದಾದರೆ ಅಲ್ಲಿ ಆ ಸ್ವತ್ತು ಆ ದೂರಸ್ಥ ಸಂಬಂಧಿತರೊಳಗೆ ಹಂಚಲಾಗುತ್ತದೆ. ಪಾಲುದಾರರು ಅಥವಾ ಅಧಿಶೇಷರು ಉಪಸ್ಥಿತರಾಗಿದ್ದರೆ ಅಲ್ಲಿ ದೂರಸ್ಥ ಸಂಬಂಧಿಕರು ವಾರಸುಪಡೆಯುವಂತಿಲ್ಲ. ಒಂದೊಮ್ಮೆ ಒಬ್ಬ ಮೂಲಪುರುಷನಿಗೆ ಈ ಮೂರು ಪ್ರಮುಖ ವರ್ಗಗಳೊಳಗೆ ಬರುವ ವಾರಸುದಾರರು ಇಲ್ಲವೆಂದಾದರೆ ಅಲ್ಲಿ ಆ ಸ್ವತ್ತು ನೇರವಾಗಿ ಉಪವಾರಸು ದಾರರಿಗೆ ಆದ್ಯತೆಯ ಅನುಕ್ರಮಣದಲ್ಲಿ ಸೇರುತ್ತದೆ. ಒಂದೊಮ್ಮೆ ಒಬ್ಬ ಮೂಲ ಪುರುಷನಿಗೆ ಪಾಲುಗಾರರು, ಅಧಿಶೇಷರು ಅಥವಾ ದೂರಸ್ಥ ಸಂಬಂಧಿಕರು ಇಲ್ಲ ವೆಂದಾದರೆ ಅವನ ಸ್ವತ್ತು ಕರಾರಿನಿಂದ ಉತ್ತರಾಧಿಕಾರಿಗೆ ಸೇರುತ್ತದೆ. ಒಂದೊಮ್ಮೆ ಅಂಥವರು ಇಲ್ಲವೆಂದಾದರೆ ಆಗ ಅಧಿಸ್ವೀಕೃತ ಸಂಬಂಧಿಕರಿಗೆ ಸೇರುತ್ತದೆ. ಒಂದೊಮ್ಮೆ ಒಬ್ಬ ಅಧಿಸ್ವೀಕೃತ ಸಂಬಂಧಿಕನು ಇಲ್ಲವೆಂದಾದರೆ ಅಲ್ಲಿ ಮೃತನು ಒಂದೊಮ್ಮೆ ಒಂದು ಮರಣಶಾಸನವನ್ನು ಮಾಡಿರುವನೆಂದಾದರೆ ಅಲ್ಲಿ ಆ ಸಾರ್ವತ್ರಿಕ ಉತ್ತರಾದಾತನಿಗೆ ಸೇರುತ್ತದೆ. ಒಂದೊಮ್ಮೆ ಮೇಲೆ ಹೇಳಲಾದ ಯಾವುದೇ ವರ್ಗದ ವಾರಸುದಾರರು ಇಲ್ಲವೆಂದಾದರೆ ಅಲ್ಲಿ ಆ ಮೃತನ ಸ್ವತ್ತು ಕೊನೆಯದಾಗಿ ರಾಜಗಾಮಿಯಾಗುತ್ತದೆ. ರಾಜ್ಯವು ಪ್ರತಿಯೊಬ್ಬ ಮೂಲಪುರುಷನ ಕೊನೇ ವಾರಸುದಾರವಾಗಿರುತ್ತದೆ.

ಪಾಲುದಾರರು : ಮೊದಲನೆ ವರ್ಗದ ವಾರಸುದಾರರು
(The Sharers : Class I heirs)

ಪಾಲುದಾರರು ಅಥವಾ ಕುರಾನೀ ವಾರಸುದಾರರು ಮೂಲ ಪುರುಷನ ವರ್ಗ I ಇದರೊಳಗಿನ ಕಾನೂನೀವಾರಸುದಾರರಾಗಿರುವರು. ಈ ವರ್ಗದ ಕಾನೂನೀ ವಾರಸುದಾರರು ಇತರ ವರ್ಗಗಳೊಳಗಿನ ವಾರಸುದಾರರ ಮೇಲೆ ಆಧ್ಯತೆ ಯನ್ನು ಪಡೆಯುವರು. ಒಂದು ವಾರಸು ತೆಗೆದಾಗ ಈ ಕೆಳಗಿನ ಸಂಗತಿಗಳನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ :

i) ವರ್ಗ I ಇದರೊಳಗಿನ ವಾರಸುದಾರರು ಯಾರು ?

ii) ಅಂತಹ ವಾರಸುದಾರರ ಪಾಲುಗಳು ಯಾವವು ?

iii) ಅದೇ ವರ್ಗದ ಯಾವನಾದರೊಬ್ಬ ಇತರ ವಾರಸುದಾರನ ಉಪಸ್ಥಿತಿ

ಯಲ್ಲಿ ಅಂತಹ ವಾರಸುದಾರನು ಅಥವಾ ಅವನ ಪಾಲು ಕಡಿಮೆ ಮಾಡಲ್ಪಟ್ಟಿದೆಯೊ ?

iv) ಅವನ ವಾರಸಿನ ಮೇಲೆ ಇತರ ಯಾವುದಾದರೊಂದು ಸಂಗತಿಯು ಪರಿಣಾಮಿತವಾಗಿದೆಯೊ ?

ಈ ಸಂಗತಿಗಳ ಆಧಾರದ ಮೇಲೆ ವಾರಸಿನ ಸ್ವತ್ತು ಮೊದಲನೆಯದಾಗಿ ಪಾಲುದಾರರೊಳಗೆ ಹಂಚಲ್ಪಡುತ್ತದೆ.

I) ಪತಿ (Husband)

1) ಒಂದೊಮ್ಮೆ (ಎ) ಒಂದು ಮಗು ಅಥವಾ (ಬಿ) ಎಷ್ಟೇ ಕೆಳಮಟ್ಟದ ಮಗನ ಮಗು ಇಲ್ಲವೆಂದಾದರೆ ಆ ಪತಿಯು ಎರಡನೇ ಒಂದರಷ್ಟು ಪಾಲು ಪಡೆಯುವನು.

ಒಂದೊಮ್ಮೆ (ಎ) ಒಂದು ಮಗು ಅಥವಾ (ಬಿ) ಎಷ್ಟೇ ಕೆಳಮಟ್ಟದ ಮಗನ ಮಗು ಇರುವನೆಂದಾದರೆ ಅಲ್ಲಿ ಆ ಪತಿಯು ನಾಲ್ಕನೇ ಒಂದಂಶ ಪಾಲು ಪಡೆಯುವನು.

ಹಾಗೆಂದರೆ ಮಕ್ಕಳು ಇಲ್ಲದಾಗ ಪತಿಯಪಾಲು ಎರಡನೇ ಒಂದು ಆಗಿರುತ್ತದೆ ಆದರೆ ಮಕ್ಕಳು ಇದ್ದಾಗ ಅವನ ಪಾಲು ನಾಲ್ಕನೇ ಒಂದು ಆಗಿರುತ್ತದೆ.

II) ವಿಧವೆ (Widow)

(ಎ) ಒಂದು ಮಗು ಅಥವಾ (ಬಿ) ಮಗುವಿನ ಮಗ ಎಷ್ಟೇ ಕೆಳಮಟ್ಟದ್ದು ಇಲ್ಲವೆಂದಾದರೆ ಆ ವಿಧವೆಯು ನಾಲ್ಕನೇ ಒಂದು ಪಾಲು ಪಡೆಯುವಳು,

2) ಒಂದೊಮ್ಮೆ (ಎ) ಒಂದು ಮಗು ಅಥವಾ (ಬಿ) ಒಬ್ಬ ಮಗನ ಎಷ್ಟೇ ಕೆಳಮಟ್ಟದ ಮಗು ಇವರೊಂದಿಗೆ ಆ ವಿಧವೆಯು ಇರುವಳೆಂದಾದರೆ ಆ ವಿಧವೆಯು ಎಂಟನೇ ಒಂದು ಪಾಲುಪಡೆಯುವಳು.

3) ಒಂದೊಮ್ಮೆ ಆ ಮೂಲಪುರುಷನು ಒಬ್ಬಳಿಗಿಂತ ಹೆಚ್ಚು ವಿಧವೆಯರನ್ನು ಬಿಟ್ಟುಹೋಗಿಲ್ಲವೆಂದಾದರೆ, ಆ ಎಲ್ಲಾ ವಿಧವೆಯರು ಸಮಾನವಾಗಿ ನಾಲ್ಕನೆ ಒಂದು ಅಥವಾ ಎಂಟನೆ ಎಂದು ಪಾಲು ಆಯಾ ಅನುಕ್ರಮಣಗಳಿಗೆ ಅನುಗುಣವಾಗಿ ಪಡೆಯುವರು.

III) ತಂದೆ (Father)

1) (ಎ) ಮಗು ಅಥವಾ, (ಬಿ) ಮಗನ ಮಗು ಎಷ್ಟೇ ಕೆಳಮಟ್ಟದ್ದಾಗಿರಲಿ ಇವರಿಲ್ಲದ ಒಬ್ಬ ತಂದೆಯು ಅಧಿಶೇಷನೆಂಬುದಾಗಿ ಎಣಿಸಲ್ಪಡುವನು. ಹಾಗೆಂದರೆ ಅವನೊಬ್ಬ ಕುರಾನೀ ವಾರಸುದಾರನಾಗುವದು ನಿಂತುಬಿಡುತ್ತದೆ. ಮತ್ತು ಇತರ

ಕುರಾನಿವಾರಸುದಾರರಿಗೆ ಅವರ ಪಾಲುಗಳು ಕೊಡಲ್ಪಟ್ಟಬಳಿಕ ಅಧಿಶೇಷವನ್ನು ಪಡೆಯಲು ಮಾತ್ರ ಅವರು ಹಕ್ಕುದಾರನಾಗಿರುವನು.

2) (ಎ) ಮಗು ಅಥವಾ (ಬಿ) ಎಷ್ಟೇ ಕೆಳಮಟ್ಟದ ಮಗನ ಮಗು ಇವರೊಂದಿಗೆ ಇರುವ ತಂದೆಯು ಆರನೇ ಒಂದು ಪಾಲುಪಡೆಯುವನು. ಮಕ್ಕಳು ಇಲ್ಲದಾಗ ಆ ತಂದೆಯು ಒಬ್ಬ ಅಧಿಶೇಷನಾಗುವನು. ಆದರೆ ಮಕ್ಕಳು ಇದ್ದಾಗ ಅವನು ಆರನೇ ಒಂದು ಪಾಲುಪಡೆಯುವನು.

IV) ನಿಜ ಅಜ್ಜ (True Grand father)

1) ತಂದೆಯು ಇಲ್ಲದಾಗ ಮಾತ್ರ ನಿಜ ಅಜ್ಜನು ವಾರಸು ಪಡೆಯುವ ಹಕ್ಕನ್ನು ಪಡೆಯುವನು. ಹಾಗೆಂದರೆ. ಒಂದೊಮ್ಮೆ ತನ್ನ ಹಿಂದೆ ಒಬ್ಬ ತಂದೆ ಅಥವಾ ನಿಜ ಅಜ್ಜನನ್ನು ಬಿಟ್ಟು ಒಬ್ಬ ಮೂಲಪುರುಷನು ಮೃತನಾದರೆ ಅಲ್ಲಿ ಆ ನಿಜ ಅಜ್ಜನು ವಾರಸುಪಡೆಯುವಂತಿಲ್ಲ.

2) ಒಂದೊಮ್ಮೆ ತಂದೆಯು ಇಲ್ಲವಾದರೆ, ಆ ನಿಜ ಅಜ್ಜನು ಒಬ್ಬ ತಂದೆಯಂತೆ ವಾರಸುಪಡೆಯುವನು. ಹಾಗೆಂದರೆ, ಒಂದೊಮ್ಮೆ ತಂದೆಯು ಇಲ್ಲವೆಂದಾದರೆ ಅಲ್ಲಿ ಮಕ್ಕಳ ಅನುಪಸ್ಥಿತಿಯಲ್ಲಿ ನಿಜ ಅಜ್ಜನು ಒಬ್ಬ ಅಧಿಶೇಷನಾಗುವನು ಆದರೆ, ಮಕ್ಕಳ ಉಪಸ್ಥಿತಿಯಲ್ಲಿ ಒಬ್ಬ ನಿಜ ಅಜ್ಜನು ಆರನೇ ಒಂದರಷ್ಟು ಪಾಲು ಪಡೆಯುವನು.

V) ತಾಯಿ (Mother)

1) ಈ ಕೆಳಗಿನವರು ಇಲ್ಲದಾಗ ತಾಯಿಯ ಪಾಲು ಮೂರನೇ ಒಂದು ಆಗಿರುತ್ತದೆ.

ಎ) ಮಗು ಅಥವಾ,

ಬಿ) ಒಬ್ಬ ಮಗನ ಮಗು ಅದು ಎಷ್ಟೇ ಕೆಳಮಟ್ಟದ್ದಾಗಿರಬಹುದು ಅಥವಾ

ಸಿ) ಇಬ್ಬರು ಪೂರ್ಣ ಸಹೋದರಿಯರು, ಅಥವಾ

ಡಿ) ಇಬ್ಬರು ಪೂರ್ಣ ಸಹೋದರರು, ಅಥವಾ

ಇ) ಒಬ್ಬ ಸಹೋದರ ಮತ್ತು, ಪೂರ್ಣ ರಕ್ತಸಂಬಂಧದ ಏಕೋದರ ಸಂಬಂಧದ ಒಬ್ಬ ಸಹೋದರಿ.

ಆದುದರಿಂದ ತಾಯಿಯೊಂದಿಗೆ ಮೇಲೆ ಹೇಳಲ್ಪಟ್ಟ ಯಾವತ್ತೂ ಸಂಬಂಧಿಕರು ಇಲ್ಲವೆಂದಾದರೆ ಆಕೆಯ ಪಾಲು ಮೂರನೇ ಒಂದು ಆಗುತ್ತದೆ.

2) ಈ ಕೆಳಗಿನವರು ಇದ್ದಾಗ ತಾಯಿಯ ಪಾಲು ಆರನೇ ಒಂದು :

ಎ) ಮಗು ಅಥವಾ

ಬಿ) ಮಗನ ಮಗು ಎಷ್ಟೇ ಕೆಳಮಟ್ಟದ್ದಾಗಿರಲಿ ಅಥವಾ,

ಸಿ) ಇಬ್ಬರು ಪೂರ್ಣ ಸಹೋದರಿಯರು ಅಥವಾ,

ಡಿ) ಇಬ್ಬರು ಪೂರ್ಣ ಸಹೋದರರು, ಅಥವಾ

ಇ) ಒಬ್ಬ ಸಹೋದರ ಮತ್ತು ಪೂರ್ಣ ಅಥವಾ ರಕ್ತಸಂಬಂಧದ ಅಥವಾ ಏಕೋದರರಳಾದ ಒಬ್ಬ ಸಹೋದರಿ.

ಇಲ್ಲಿ (ಎ ಇದರಿಂದ (ಇ) ವರೆಗಿನ ಯಾವತ್ತೂ ಸಂಬಂಧಿಕರು ಇರುವ ಲೇದಾದರೆ ತಾಯಿಯ ಪಾಲು ಮೂರನೇ ಒಂದು ಆಗಿರುತ್ತದೆ.

3) ಒಂದೊವ್ಮೆ ತಾಯಿಯು ತಂದೆಯ ಸಂಗಡ ಇದ್ದು ಮತ್ತು ಅಲ್ಲೊಬ್ಬ ವಿಧವೆಯೂ ಇದ್ದರೆ ಆ ತಾಯಿಯು ಆ ವಿಧವೆಯ ಪಾಲನ್ನು ಕಳೆತವಾಡಲ್ಪಟ್ಟ ಬಳಿಕ ಏನಾದರೂ ಉಳಿದರೆ ಅದರಲ್ಲಿ ಮೂರನೇ ಒಂದು ಪಾಲು ಪಡೆಯುವಳು. ಈ ನಿಯಮದ ಪ್ರಕಾರ ಆ ತಾಯಿಯು ಆ ಇಡೀ ಸ್ವತ್ತಿನಲ್ಲಿ ಮೂರನೇ ಒಂದಂಶ ಪಡೆಯುವದಿಲ್ಲ. ಏಕೆಂದರೆ ಒಂದೊವ್ಮೆ ಆ ರೀತಿಮಾಡಿದರೆ ತಂದೆಯ ಪಾಲು ತಾಯೀಯ ಪಾಲಿಗಿಂತ ಅರ್ಧದಷ್ಟಾಗಿರುತ್ತದೆ. ಈ ರೀತಿಯಾಗುವುದು ವಾರಸಿನ ಒಂದು ಮೂಲಭೂತ ಸಿದ್ಧಾಂತಕ್ಕೆ ವಿರೋಧವಾಗುತ್ತದೆ. ಏಕೆಂದರೆ ಗಂಡಸಿನ ಪಾಲು ಹೆಂಗಸಿನ ಪಾಲಿಗಿಂತ ದುಪ್ಪಟ್ಟು ಆಗಿರಬೇಕೆಂಬ ಒಂದು ನಿಯಮವಿದೆ.

VI) ಅಜ್ಜಿ (Grand Mother)

1) ತಾಯಿಯು ಇಲ್ಲದಾಗ ಮಾತ್ರ ಒಬ್ಬ ಅಜ್ಜಿಯು ವಾರಸು ಪಡೆಯುವಳು.

2) ಒಬ್ಬಳು ಅಜ್ಜಿಯು ಏಕಾಂಗಿಯಾಗಿರಬಹುದು ಅಥವಾ ಇತರರೊಂದಿಗೆ ಕೂಡಿಕೊಂಡಿರಬಹುದು. ಆದರೆ ಆಕೆಯ ಪಾಲು ಆರನೇ ಒಂದು ಆಗಿರುತ್ತದೆ.

3) ಈ ಕೆಳಗಿನವರ ಉಪಸ್ಥಿತಿಯಲ್ಲಿ ಒಬ್ಬ ಮಾತೃಕ ಅಜ್ಜಿಯು ವಾರಸು ಪಡೆಯುವುದರಿಂದ ಹೊರತಂಪಡಿಸಲ್ಪಡುವಳು :

ಎ) ತಾಯಿ ಅಥವಾ

ಬಿ) ಒಬ್ಬ ಸಮೀಪಸ್ಥ ಮಾತೃಕ ಅಥವಾ ಪೈತೃಕ ಅಜ್ಜಿ

4) ಈ ಕೆಳಗಿನವರ ಉಪಸ್ಥಿತಿಯಲ್ಲಿ ಒಬ್ಬ ಪೈತೃಕ ಅಜ್ಜಿಯು ವಾರಸು ಪಡೆಯುವುದರಿಂಹ ಹೊರತುಪಡಿಸಲ್ಪಡುವಳು :

ಎ) ತಾಯಿ ಅಥವಾ,

ಬಿ) ತಂದೆ ಅಥವಾ

ಸಿ) ಮಾತೃಕ ಅಥವಾ ಪೈತೃಕ ಇವರೊಳಗಿನ ಸಮೀಪಸ್ಥ ಅಜ್ಜಿ

ತಾಯಿ ಅಥವಾ ಯಾವತ್ತೂ ಸಮೀಪಸ್ಥ ಅಜ್ಜಿಯು ಇಲ್ಲದಾಗ ಮಾತ್ರ ಒಬ್ಬ ಮಾತೃಕ ಅಜ್ಜಿಯು ಆರನೇ ಒಂದು ಪಾಲು ಪಡೆಯುವಳು. ತಂದೆಯು ಪೈತೃಕ ಅಜ್ಜಿಯನ್ನು ಹೊರಪಡಿಸುವನು.

VII) ಮಗಳು (Daughter)

1) ಮಗಳ ಪಾಲು ಎರಡನೇ ಒಂದು.

2) ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ಮಗಳಂದಿರಿದ್ದರೆ ಮೂರನೇ ಎರಡು ಪಾಲನ್ನು ಅವರೆಲ್ಲರೊಳಗೆ ಸಮಾನವಾಗಿ ಹಂಚಬೇಕಾಗುತ್ತದೆ.

ಮಗನ ಸಂಗಡ ಮಗಳು ಗೋತ್ರಸಪಿಂಡ ವಾರಸುದಾರಳೆಂಬುದಾಗಿ ಎಣಿಸಲ್ಪಡುವಳು.

VIII) ಮಗನ ಮಗಳು (Son's daughter)

1) ಈ ಕೆಳಗಿನವರು ಇಲ್ಲದಾಗ ಮಾತ್ರ ಮಗನ ಮಗಳು ವಾರಸು ಪಡೆಯುವಳು :

ಎ) ಇಬ್ಬರು ಅಥವಾ ಹೆಚ್ಚಿನ ಮಗಳಂದಿರು, ಅಥವಾ

ಬಿ) ಮಗ ಅಥವಾ,

ಸಿ) ಮೇಲ್ಪಟ್ಟದ ಮಗನ ಮಗ,

ಡಿ) ಇಬ್ಬರು ಅಥವಾ ಹೆಚ್ಚಿನ ಮೇಲ್ಪಟ್ಟದ ಮಗನ ಮಗಳಂದಿರು.

ಮೇಲೆ ಹೇಳಲ್ಪಟ್ಟ ಸಂಬಂಧಿಕರು ಉಳಿದಿರುವಾಗ ಮಗನ ಮಗಳು ವಾರಸು ಪಡೆಯುವುದರಿಂದ ಪೂರ್ಣವಾಗಿ ಹೊರತುಪಡಿಸಲ್ಪಡುವಳು.

2) ಮೇಲೆ ಹೇಳಲ್ಪಟ್ಟ ಸಂಬಂಧಿಕರು ಇಲ್ಲದಾಗ, ಮಗನ ಮಗಳು ಒಂದೊಮ್ಮೆ ಒಂಟಿಯಾಗಿದ್ದರೆ ಎರಡನೇ ಒಂದು ಮತ್ತು ಒಬ್ಬಳಿಗಿಂತ ಹೆಚ್ಚಿನವರಾಗಿದ್ದರೆ ಮೂರನೇ ಎರಡು ಪಡೆಯುವಳು.

3) ಒಂದೊಮ್ಮೆ ಒಬ್ಬ ಮಗಳು ತನ್ನ ಒಬ್ಬ ಮಗಳ ಸಂಗಡವಿದ್ದರೆ, ಮತ್ತು ಮಗನ ಮಗಳು ಒಂಟಿಯಾಗಿರಲಿ ಅಥವಾ ಕೂಡಿಕೊಂಡಿರಲಿ ಅಲ್ಲಿ ಆಕೆಯ ಪಾಲು ಆರನೇ ಒಂದು ಆಗಿರುತ್ತದೆ. ಉದಾಹರಣೆಗಾಗಿ ಒಂದೊಮ್ಮೆ ಅಲ್ಲಿ ಒಬ್ಬಳು ಮಗಳು ಮತ್ತು ಇಬ್ಬರು ಮಗನ ಮಗಳಂದಿರು ಇದ್ದರೆ ಮಗನ ಮಗಳಂದಿರ ಪಾಲು ಆರನೇ ಒಂದಾಗಿದ್ದರೆ ಅದು ಅವರೊಳಗೆ ಸಮಾನವಾಗಿ ಹಂಚಲ್ಪಡುತ್ತವೆ.

4) ಮಗನ ಮಗನೊಂದಿಗೆ ಮಗನ ಮಗಳು ಗೋತ್ರಸಪಿಂಡ ವಾರಸ ದಾರಳೆಂಬುದಾಗಿ ಎಣಿಸಲ್ಪಡುವಳು. ಆದುದರಿಂದ ಅವಳು ಅಧಿಶೇಷಳಾಗಿ ವಾರಸು ಪಡೆಯುವಳು.

IX) ಪೂರ್ಣ ಸಹೋದರಿ (Full Sister)

1) ಪೂರ್ಣ ಸಹೋದರಿಯ ಪಾಲು ಎರಡನೇ ಒಂದು ಆಗಿರುತ್ತದೆ.

2) ಇಬ್ಬರು ಅಥವಾ ಹೆಚ್ಚಿನ ಪೂರ್ಣ ಸಹೋದರಿಯರಿದ್ದರೆ ಅಲ್ಲಿ ಮೂರನೇ ಎರಡು ಪಾಲನ್ನು ಅವರೆಲ್ಲರೊಳಗೆ ಸಮಾನವಾಗಿ ಹಂಚಬೇಕಾಗುತ್ತದೆ.

3) ಒಂದೊವ್ಮೆ ಪೂರ್ಣ ಸಹೋದರಿಗೆ ಪೂರ್ಣ ಸಹೋದರರಿದ್ದರೆ, ಆಕೆಯು ಗೋತ್ರಸಪಿಂಡ ವಾರಸುದಾರಳಾಗುವಳು ಮತ್ತು ಅಧಿಶೇಷಳಾಗಿ ವಾರಸು ಪಡೆಯುವಳು.

4) ಈ ಕೆಳಗಿನವರ ಉಪಸ್ಥಿತಿಯಲ್ಲಿ ಒಬ್ಬ ಪೂರ್ಣಸಹೋದರಿಯು ವಾರಸು ಪಡೆಯುವದರಿಂದ ಹೊರತುಪಡುವಳು :

ಎ) ಮಗು ಅಥವಾ

ಬಿ) ಮಗನ ಮಗು ಎಷ್ಟೇ ಕೆಳಮಟ್ಟದ್ದಿರಲಿ, ಅಥವಾ

ಸಿ) ತಂದೆ ಅಥವಾ

ಡಿ) ತಂದೆಯ ತಂದೆ.

X) ರಕ್ತ ಸಂಬಂಧಿ ಸಹೋದರಿ (Consanguine-sister)

1) ಒಬ್ಬ ರಕ್ತ ಸಂಬಂಧೀ ಸಹೋದರಿಯ ಪಾಲು ಎರಡನೇ ಒಂದು ಆಗಿರುತ್ತದೆ.

2) ಇಬ್ಬರು ಅಥವಾ ಹೆಚ್ಚಿನ ರಕ್ತ ಸಂಬಂಧಿ ಸಹೋದರಿಯರಿದ್ದರೆ ಅವರ ಪಾಲು ಮೂರನೇ ಎರಡಾಗಿದ್ದು ಅದನ್ನು ಅವರೊಳಗೆ ಸಮಾನವಾಗಿ ಹಂಚಬೇಕಾಗುತ್ತದೆ.

3) ಒಬ್ಬಳು ಪೂರ್ಣ ಸಹೋದರಿಯಿದ್ದರೆ. ರಕ್ತ ಸಂಬಂಧಿ ಸಹೋದರಿಯ ಪಾಲು ಆರನೇ ಒಂದಾಗಿರುತ್ತದೆ.

4) ಈ ಕೆಳಗಿನವರ ಉಪಸ್ಥಿತಿಯಲ್ಲಿ ರಕ್ತ ಸಂಬಂಧಿತ ಸಹೋದರಿಯೂ ವಾರಸುಪಡೆಯುವುದರಿಂದ ಹೊರತುಪಡಿಸಲ್ಪಡುವಳು :

ಎ) ಮಗು ಅಥವಾ,

ಬಿ) ಮಗನ ಮಗು ಎಷ್ಟೇ ಕೆಳಮಟ್ಟದ್ದಾಗಿರಲಿ.

ಅಥವಾ

ಸಿ) ತಂದೆ ಅಥವಾ,

ಡಿ) ತಂದೆಯ ತಂದೆ,

ಇ) ಇಬ್ಬರು ಪೂರ್ಣ ಸಹೋದರಿಯರು ಅಥವಾ,

ಎಫ್) ಒಬ್ಬ ಪೂರ್ಣ ಸಹೋದರ

5) ರಕ್ತ ಸಂಬಂಧಿ ಸಹೋದರನೊಂದಿಗೆ, ರಕ್ತ ಸಂಬಂಧಿ ಸಹೋದರಿಯು ಒಬ್ಬ ಗೋತ್ರಸಪಿಂಡ ವಾರಸುದಾರಳಾಗುವಳು ಮತ್ತು ಅಧಿಶೇಷಳಾಗಿ ವಾರಸು ಪಡೆಯುವಳು.

XI) ಏಕೋದರ ಸಹೋದರ (Uterine-brother)

1) ಒಬ್ಬ ಏಕೋದರ ಸಹೋದರನ ಪಾಲು ಆರನೇ ಒಂದು ಆಗಿರುತ್ತದೆ.

2) ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ಏಕೋದರ ಸಹೋದರರಿದ್ದರೆ, ಅವರ ಪಾಲು ಮೂರನೇ ಒಂದಾಗಿರುತ್ತದೆ ಮತ್ತು ಅದನ್ನು ಅವರೊಳಗೆ ಸಮಾನವಾಗಿ ಹಂಚಬೇಕಾಗುತ್ತದೆ.

3) ಈ ಕೆಳಗಿನವರ ಉಪಸ್ಥಿತಿಯಲ್ಲಿ ಒಬ್ಬ ಏಕೋದರ ಸಹೋದರನು ವಾರಸುಪಡೆಯುವುದರಿಂದ ಹೊರಪಡಿಸಲ್ಪಡುವನು :

ಎ) ಮಗು ಅಥವಾ,

ಬಿ) ಮಗನ ಮಗು ಎಷ್ಟೇ ಕೆಳಮಟ್ಟದ್ದಾಗಿರಲಿ ಅಥವಾ

ಸಿ) ತಂದೆ ಅಥವಾ

ಡಿ) ತಂದೆಯ ತಂದೆ.

II) ಏಕೋದರ ಸಹೋದರಿ (Uterine Sister)

ಒಬ್ಬ ಏಕೋದರ ಸಹೋದರಿಯು ವಾರಸು ಪಡೆಯುವ ಷರತ್ತುಗಳು ಒಬ್ಬ ಏಕೋದರ ಸಹೋದರನು ವಾರಸು ಪಡೆಯುವ ಷರತ್ತುಗಳಿಗೆ ಸಮಾನವಾಗಿರುತ್ತವೆ. ಹಾಗೆಂದರೆ;

1) ಒಬ್ಬ ಏಕೋದರಿಯ ಸಹೋದರಿಯ ಪಾಲು ಆರನೇ ಒಂದು ಆಗಿರುತ್ತದೆ.

2) ಒಂದೊಮ್ಮೆ ಇಬ್ಬರು ಅಥವಾ ಹೆಚ್ಚಿನ ಏಕೋದರ ಸಹೋದರಿಯರಿದ್ದರೆ ಅವರ ಪಾಲು ಮೂರನೇ ಒಂದಾಗಿರುತ್ತದೆ ಮತ್ತು ಅದನ್ನು ಅವರೊಳಗೆ ಸಮಾನವಾಗಿ ಹಂಚಬೇಕಾಗುತ್ತದೆ.

3) ಈ ಕೆಳಗಿನವರ ಉಪಸ್ಥಿತಿಯಲ್ಲಿ ಒಬ್ಬ ಏಕೋದರ ಸಹೋದರಿಯು ವಾರಸುಪಡೆಯುವದರಿಂದ ಹೊರತುಪಡಿಸಲ್ಪಡುವಳು :

ಎ) ಮಗು,

ಬಿ) ಒಬ್ಬ ಮಗನ ಮಗು

ಸಿ) ತಂದೆ, ಮತ್ತು

ಡಿ) ತಂದೆಯ ತಂದೆ

ವಾರಸಿನ ಶಿಯಾ ಕಾನೂನು

Shia law of Inheritance

ವಾರಸುದಾರರ ವರ್ಗೀಕರಣ (Classification of heirs)

ಶಿಯಾ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಯು ವಿವಾಹದಿಂದ ಅಥವಾ ರಕ್ತ ಸಂಬಂಧದಿಂದ ಒಬ್ಬ ಮೂಲ ಪುರುಷನ ಸಂಬಂಧಿಕನಾಗಬಹುದು.

ವಿವಾಹದಿಂದ ವಾರಸುದಾರರು (Heirs by Marriage)

ಮೂಲ ಪುರುಷನಿಗೆ ವಿವಾಹದಿಂದ ಸಂಬಂಧಿತರಾದ ವಾರಸುದಾರರು ಪತಿ ಅಥವಾ ಪತ್ನಿ ವಿವಾಹವು ವಾರಸಿನ ಒಂದು ವಿಶೇಷ ಕಾರಣವೆಂದು ಎಣಿಸಲಾಗುತ್ತದೆ.

ರಕ್ತ ಸಂಬಂಧದಿಂದ ವಾರಸು (Heirs by Consanguinity)

ರಕ್ತ ಸಂಬಂಧದಿಂದ ವಾರಸುದಾರರು ಈ ಕೆಳಗಿನ ವರ್ಗಗಳಲ್ಲಿ ವಿಭಜಿತರಾಗಿರುವರು :

ವರ್ಗ I

ಈ ವರ್ಗವು ಈ ಕೆಳಗಿನವರಿಂದ ಕೂಡಿಕೊಂಡಿದೆ—

i) ಹೆತ್ತವರು.

ii) ಮಕ್ಕಳು ಮತ್ತು ವಂಶಜರು ಎಷ್ಟೇ ಕೆಳಮಟ್ಟದವರಾಗಿರಬಹುದು.

ವರ್ಗ II

ಈ ವರ್ಗವು ಈ ಕೆಳಗಿನವರಿಂದ ಕೂಡಿಕೊಂಡಿದೆ.

1) ಅಜ್ಜಂದಿರು ಅವರು ಎಷ್ಟೇ ನಿಜ ಅಥವಾ ಮಿಥ್ಯ ಆಗಿರಲಿ ಮತ್ತು

2) ಸಹೋದರರು ಮತ್ತು ಸಹೋದರಿಯರು.

3) ವಂಶಜರು ಸಹೋದರಿಯರು ಮತ್ತು ಸಹೋದರರು ಎಷ್ಟೇ ಕೆಳಮಟ್ಟದವರಾಗಿರಬಹುದು.

ವರ್ಗ III

ಈ ವರ್ಗದಲ್ಲಿ ಈ ಕೆಳಗಿನವರನ್ನು ಸೇರಿಸಲಾಗುತ್ತದೆ—

1) ಪೈತೃಕ ಮತ್ತು,

2) ಮೂಲ ಪುರುಷನ ಮಾತೃಕ ಮಾವಂದಿರು ಮತ್ತು ಅತ್ತೆಯಂದಿರು ಮತ್ತು ಅವನ ಹೆತ್ತವರು ಮತ್ತು ಅಜ್ಜ-ಅಜ್ಜಿಯಂದಿರು ಅವರು ಎಷ್ಟೇ ಮೇಲ್ಮಟ್ಟದವರಾಗಿರಲಿ ಮತ್ತು ಅವರ ವಂಶಜರು ಎಷ್ಟೇ ಕೆಳಮಟ್ಟದವರಾಗಿರಲಿ.

ವಾರಸುದಾರರ ಪಾಲುಗಳು (Shares of the heirs)

ಪ್ರತಿಯೊಬ್ಬ ವಾರಸುದಾರನ ಪಾಲನ್ನು ನಿರ್ಣಯಿಸುವ ಉದ್ದೇಶಗಳಿಗಾಗಿ, ಶಿಯಾ ಕಾನೂನು ಅವರನ್ನು ಎರಡು ವರ್ಗಗಳಲ್ಲಿ ವಿಂಗಡಿಸಿದೆ. ಪಾಲುದಾರರು ಮತ್ತು ಅಧಿಶೇಷರು ಇವೇ ಆ ಎರಡು ವರ್ಗಗಳಾಗಿವೆ. ಸುನ್ನೀ ಕಾನೂನಿನಲ್ಲಿ ಬರುವ ದೂರಸ್ಥ ಸಂಬಂಧಿಕರ ವರ್ಗವನ್ನು ಶಿಯಾ ಕಾನೂನು ಮನ್ನಿಸುವುದಿಲ್ಲ.

1) ಪತಿ (Husband)

1) ಮಕ್ಕಳು ಅಥವಾ ನೇರ ವಂಶಜರು ಇಲ್ಲದಾಗ ಪತಿಯ ಪಾಲು ಎರಡನೇ ಒಂದು ಆಗಿರುತ್ತದೆ.

2) ಮಕ್ಕಳು ಅಥವಾ ನೇರ ವಂಶಜರು ಇದ್ದಾಗ ಪತಿಯ ಪಾಲು ನಾಲ್ಕನೇ ಒಂದು ಆಗಿರುತ್ತದೆ.

2) ವಿಧವೆ (Widow)

1) ಮಕ್ಕಳು ಅಥವಾ ನೇರ ವಂಶಜರು ಇಲ್ಲದಾಗ ಆ ವಿಧವೆಯ ಪಾಲು ನಾಲ್ಕನೇ ಒಂದು ಆಗಿರುತ್ತದೆ.

2) ಮಕ್ಕಳು ಅಥವಾ ನೇರವಂಶಜರು ಇದ್ದಾಗ ಆ ವಿಧವೆಯ ಪಾಲು ಎಂಟನೇ ಒಂದಾಗಿರುತ್ತದೆ.

3) ಸಂತತಿಯಿಲ್ಲದ ವಿಧವೆಯು ತನ್ನ ಮೃತ ಪತಿಯ ಕೇವಲ ಚರಸ್ವತ್ತಿನಿಂದ ನಾಲ್ಕನೇ ಒಂದರಷ್ಟು ಪಾಲನ್ನು ಪಡೆಯುವಳು.

3) ತಂದೆ (Father)

1) ಮಕ್ಕಳು ಅಥವಾ ನೇರ ವಂಶಜರು ಇಲ್ಲದಾಗ ಆ ತಂದೆಯು ಒಬ್ಬ ಅಧಿಶೇಷನಾಗಿ ವಾರಸು ಪಡೆಯುವನು.

2) ಮಕ್ಕಳು ಇದ್ದಾಗ ತಂದೆಯ ಪಾಲು ಆರನೇ ಒಂದು ಆಗಿರುತ್ತದೆ.

4) ತಾಯಿ (Mother)

1) ಎ) ಮಗು ಅಥವಾ ನೇರವಂಶಜನು ಅಥವಾ

ಬಿ) ಇಬ್ಬರು ಅಥವಾ ಹೆಚ್ಚಿನ ಪೂರ್ಣ ಅಥವಾ ರಕ್ತಸಂಬಂಧಿ ಸಹೋದರರು.

ಸಿ) ಅಂತಹ ಒಬ್ಬ ಸಹೋದರನು ಮತ್ತು ಅಂತಹ ಇಬ್ಬರು ಸಹೋದರಿಯರು ಅಥವಾ

ಡಿ) ಅಂತಹ ನಾಲ್ವರು ಸಹೋದರಿಯರು ಮತ್ತು ತಂದೆ, ಇವರು ಇಲ್ಲದಾಗ ತಾಯಿಯ ಪಾಲು ಮೂರನೇ ಒಂದಾಗಿರುತ್ತದೆ.

2) ಎ) ಮಗ ಅಥವಾ ನೇರವಂಶಜರು.

ಬಿ) ಇಬ್ಬರು ಅಥವಾ ಹೆಚ್ಚಿನ ಪೂರ್ಣ ಅಥವಾ ರಕ್ತ ಸಂಬಂಧೀ ಸಹೋದರರು.

ಸಿ) ಅಂತಹ ಒಬ್ಬ ಸಹೋದರ ಮತ್ತು ಇಬ್ಬರು ಅಂತಹ ಸಹೋದರರು.

ಡಿ) ಅಂತಹ ನಾಲ್ವರು ಸಹೋದರಿಯರು ಮತ್ತು ತಂದೆ ಇದ್ದಲ್ಲಿ ತಾಯಿಯ ಪಾಲು ಆರನೇ ಒಂದಾಗಿರುತ್ತದೆ.

5) ಮಗಳು (Daughter)

1) ಒಬ್ಬ ಏಕಲ ಮಗಳ ಪಾಲು ಎರಡನೇ ಒಂದು ಆಗಿರುತ್ತದೆ.

2) ಇಬ್ಬರು ಅಥವಾ ಹೆಚ್ಚಿನ ಮಗಳಂದಿರ ಪಾಲು ಮೂರನೇ ಎರಡು ಆಗಿರುತ್ತದೆ ಮತ್ತು ಅದನ್ನು ಸಾಮೂಹಿಕವಾಗಿ ವಾರಸುಪಡೆಯಬೇಕಾಗುತ್ತದೆ.

3) ಒಬ್ಬ ಮಗನು ಇದ್ದಾಗ ಆ ಮಗಳು ಅಧಿಶೇಷಳಾಗುವಳು.

6) ಪೂರ್ಣ ಸಹೋದರಿ (Full Sister)

1) ಒಬ್ಬ ಏಕಲ ಪೂರ್ಣಸಹೋದರಿಯ ಪಾಲು ಎರಡನೇ ಒಂದು ಮತ್ತು ಇಬ್ಬರು ಅಥವಾ ಹೆಚ್ಚಿನ ಪೂರ್ಣಸಹೋದರಿಯರ ಪಾಲು ಮೂರನೇ ಎರಡು ಆಗಿರುತ್ತದೆ.

2) ಎ) ಹೆತ್ತವರು

ಬಿ) ನೇರ ವಂಶಜರು

ಸಿ) ಪೂರ್ಣಸಹೋದರ

ಡಿ) ತಂದೆಯ ತಂದೆ, ಇವರು ಇಲ್ಲದಾಗ ಆ ಪೂರ್ಣಸಹೋದರಿಯು ಮೇಲೆ ಹೇಳಲ್ಪಟ್ಟ ಪಾಲನ್ನು ಪಡೆಯುವಳು.

3) ಎ) ಪೂರ್ಣಸಹೋದರ ಮತ್ತು

ಬಿ) ತಂದೆಯ ತಂದೆ, ಇವರು ಇದ್ದಾಗ ಪೂರ್ಣಸಹೋದರಿಯು ಒಬ್ಬ ಪೂರ್ಣ ಸಹೋದರಿಯು ವಾರಸುಪಡೆಯುವಳು.

7) **ರಕ್ತಸಂಬಂಧೀ ಸಹೋದರಿ (Consanguine Sister)**

1) ಒಬ್ಬ ಏಕಲ ರಕ್ತಸಂಬಂಧಿ ಸಹೋದರಿಯ ಪಾಲು ಎರಡನೇ ಒಂದು ಆಗಿರುತ್ತದೆ ಮತ್ತು ಇಬ್ಬರು ಅಥವಾ ಹೆಚ್ಚಿನ ರಕ್ತಸಂಬಂಧಿ ಸಹೋದರಿಯರಿದ್ದರೆ ಅವರ ಪಾಲು ಮೂರನೇ ಎರಡಾಗಿರುತ್ತದೆ.

2) ಎ) ಹೆತ್ತವರು

ಬಿ) ನೇರ ವಂಶಜ

ಸಿ) ಪೂರ್ಣಸಹೋದರ

ಡಿ) ಪೂರ್ಣಸಹೋದರಿ

ಇ) ರಕ್ತ ಸಂಬಂಧಿ ಸಹೋದರ

ಎಫ್) ತಂದೆಯ ತಂದೆ ಇವರು ಇಲ್ಲದಾಗ ರಕ್ತ ಸಂಬಂಧಿ ಸಹೋದರಿಯು ಮೇಲೆ ಹೇಳಲ್ಪಟ್ಟ ಹಕ್ಕನ್ನು ಪಡೆಯುವಳು

3) ಎ) ರಕ್ತ ಸಂಬಂಧೀ ಸಹೋದರ

ಬಿ) ತಂದೆಯ ತಂದೆ ಇವರು ಇದ್ದಾಗ ರಕ್ತ ಸಂಬಂಧಿ ಸಹೋದರಿಯು ಅಧಿಶೇಷಳಾಗಿ ವಾರಸು ಪಡೆಯುವಳು.

8) **ಏಕೋದರ ಸಹೋದರ (Uterine Brother)**

ಒಬ್ಬ ಏಕೋದರ ಸಹೋದರನ ಪಾಲು ಆರನೇ ಒಂದು ಇಬ್ಬರು ಅಥವಾ ಹೆಚ್ಚಿನ ಏಕೋದರ ಸಹೋದರನ ಪಾಲು ಮೂರನೇ ಒಂದು ಆಗಿರುತ್ತದೆ.

2) ಎ) ಮಕ್ಕಳು ಅಥವಾ ನೇರವಂಶಜರು ಮತ್ತು

ಬಿ) ಹೆತ್ತವರು ಇಲ್ಲದಾಗ ಮೇಲ್ಕಾಣಿಸಲಾದ ಪಾಲು ಏಕೋದರ ಸಹೋದರನ ವಾರಸು ಆಗುತ್ತದೆ.

9) **ಏಕೋದರ ಸಹೋದರಿ (Uterine Sister)**

ಏಕೋದರ ಸಹೋದರಿಯ ಪಾಲು ಏಕೋದರ ಸಹೋದರನಷ್ಟೇ ಇರುತ್ತದೆ. ಅವೇ ಷರತ್ತುಗಳು ಇಲ್ಲಿಯೂ ಅನ್ವಯವಾಗುತ್ತವೆ. ಈ ಹಕ್ಕು ದಾವೆಯ ಔಪಚಾರಿಕತೆಯು ಮೂರು ಅಭಿಯಾಚನೆಗಳಿಂದ ಕೂಡಿಕೊಂಡಿರುತ್ತದೆ. ಈ ಅಭಿಯಾಚನೆಗಳನ್ನು ಪೂರ್ವಕ್ರಯಾಧಿಕಾರಿಯು ಕ್ರಮಬದ್ಧವಾಗಿ ಮತ್ತು ಯುಕ್ತ ಸಮಯದಲ್ಲಿ ಮಾಡಬೇಕಾಗುತ್ತದೆ.

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
26	30	ಪರಂಪರೆಗಳ	ಪರಂಪರೆಗಳು
35	30	he Motagila Sect	The Motagila Sect
47	12	ಇಜ್ಮ	ಇಜ್ಮಾ
51	10	ಮೃತ್ಯುಶೆಯ್ಯೆಯ	ಮೃತ್ಯುಶೆಯ್ಯೆಯು
92	13	ಖಣದಾತನ	ಋಣದಾತನ
100	12	Illegitimaly	Illegitimaty
125	20	afweez	Tafweez
135	31	Imptency	Impotency
141	23	ಕಾನೂನಿಂದ	ಕಾನೂನಿನಿಂದ
2	16	ವರಣದ	ಮರಣದ
3	10	ಕೊಡಲ್ಪಡದ್ದರೆ	ಕೊಡಲ್ಪಡದಿದ್ದರೆ
8	4	ಉತ್ತರಾದಾತ	ಉತ್ತರಾದಾತರು
24	5	ರಣಶಾಸನಗಳು	ಮರಣಶಾಸನಗಳು
26	19	ಆವಶ್ಯತೆಗಳು	ಅವಶ್ಯಕತೆಗಳು
26	27	ವರಿಪೂರ್ಣವಾದ	ಪರಿಪೂರ್ಣವಾದ

ಸೂಚನೆ: ಅಧ್ಯಾಯ ೫ ರ ೧೮೧ನೇ ಪುಟದಲ್ಲಿ, ೬ನೇ ಪ್ಯಾರಾ ಇದನ್ನು ಸೇರಿಸಿ ಕೊಂಡು ಓದಬೇಕು.

೬) ಸ್ವಾಧೀನತೆಯಲ್ಲಿರಿಸಿಕೊಳ್ಳುವ ಹಕ್ಕಿನ ಹಸ್ತಾಂತರಗೊಳಿಸಬಹುದಾಗಿರುವಿಕೆಯು

ಸಂದಾಯವಾಗದೇ ಬಾಕೀ ಉಳಿದಿರುವಂಥ ಮಹಾರ ಹಣದ ಬದಲು ತಾಬೆಯಲ್ಲಿರುವ ತನ್ನ ಸ್ವತ್ತನ್ನು ಇರಿಸಿಕೊಳ್ಳುವ ಹಕ್ಕು, ವಿಧವೆಯ ಸಂಪೂರ್ಣ ಹಕ್ಕು ಆಗಿದ್ದು, ಅವಳಿಗೆ ಮಹಾರ ಹಣ (ಕನ್ಯಾದಕ್ಷಿಣೆ) ಸಂದಾಯವಾಗದೇ ಕೇವಲ ಬಾಕೀ ಉಳಿದಿರುವ ಕಾರಣಕ್ಕಾಗಿಯೇ ಅವಳಿಗೆ ಈ ಹಕ್ಕು ಲಭ್ಯವಾಗುತ್ತಿದೆ. ಹಾಗೆಂದರೆ, ಅವಳ ಸ್ವಾಧೀನತೆಯಲ್ಲಿಯ ಸ್ವತ್ತನ್ನು ತನ್ನ ಕಡೆಗೇ ಇಟ್ಟುಕೊಳ್ಳುವ ಹಕ್ಕು ಅವಳ ವಿಶಿಷ್ಟ ವ್ಯಕ್ತಿತ್ವಕ್ಕೆ-ಅಂದರೆ ಅವಳ ಮೃತ ಗಂಡನು ಅವನ ಆಯುಷ್ಯದಲ್ಲಿ ಅವಳ ಮಹಾರವನ್ನು ಸಂದಾಯ ಮಾಡದೇ ಬಾಕಿ ಇಟ್ಟುಕೊಂಡು ಸತ್ತದ್ದರಿಂದಲೇ ಅವಳು ಅಂಥವನ ವಿಧವೆಯಾಗಿದ್ದುದ ಸ್ಥಿತಿಯಿಂದ ಉಂಟಾದ ವ್ಯಕ್ತಿತ್ವಕ್ಕೆ ಸಂಬಂಧಪಟ್ಟದ್ದು ಆಗಿದೆ. ಆದ್ದರಿಂದ ಈ ಹಕ್ಕನ್ನು ಆ ಅವಳ ವಿಶಿಷ್ಟ ಪರಿಸ್ಥಿತಿಯ ವ್ಯಕ್ತಿತ್ವದಿಂದ ಬೇರ್ಪಡಿಸಿ ಬೇರೊಬ್ಬರಿಗೆ ಹಸ್ತಾಂತರಗೊಳಿಸಲು ಬರಲಾರದು. ಅದರಂತೆಯೇ ಪಾಟ್ನಾ ಉಚ್ಚನ್ಯಾಯಾಲಯವು ಅಂಥ ವಿಧವೆಯ ಹಕ್ಕು ಹಸ್ತಾಂತರ ಮಾಡಲು ಬರಲಾರದ್ದು ಎಂಬ ಅಭಿಪ್ರಾಯ ತಾಳಿ ನಿರ್ಣಯ ನೀಡಿದೆ-(ರಘುಬೀರ ಅಹ್ಮದ-ವಿ-ಜೈನಂದನಪ್ರಸಾದ ಎ. ಆಯ್. ಆರ್ 1960 ಪಾಟ್ನಾ 147) ಆದರೆ ಭಾರತದ ಮಿಕ್ಕ ಉಚ್ಚನ್ಯಾಯಾಲಯಗಳು ಭಿನ್ನಅಭಿಪ್ರಾಯ ತಾಳಿರುತ್ತವೆ. ಅಲ್ಹಾಬಾದ ಮತ್ತು ಮೈಸೂರು (ಕರ್ನಾಟಕ) ಉಚ್ಚನ್ಯಾಯಾಲಯಗಳು ಅಭಿಪ್ರಾಯಪಟ್ಟಂತೆ ಅಂಥ ವಿಧವೆಯು ಧಾರಣಮಾಡುವ ಸ್ವತ್ತಿನ ಹಕ್ಕು ಅನಿರ್ಬಂಧ ಒಡೆತನದ ಹಕ್ಕು ಆಗಿದ್ದು ಅದನ್ನು ಅಂಥ ವಿಧವೆಯು ಮಾಲ್ಕೀನಾತೆಯಿಂದ ಹೊಂದಿರುತ್ತಿದ್ದು ಅವಳು ಅದನ್ನು ಹಸ್ತಾಂತರ ಮಾಡಲು ಶಕ್ತಳಾಗಿರುವಳು. (ಜೈಬುನ್ನಿಸಾ-ವಿ.-ನಾಜೀಮ ಹಸನ ಎ.ಆಯ್.ಆರ್ (1962) ಅಲ್ಹಾಬಾದ 197 ಹುಸ್ಸೇನ-ವಿ. ರಹೀಮಖಾನ (1954) ಮೈಸೂರ 24.) ಆದ್ದರಿಂದ ತನ್ನ ಸ್ವಾಧೀನದಲ್ಲಿರಿಸಿಕೊಳ್ಳುವ ಅಂಥ ವಿಧವೆಯ ಹಕ್ಕಿನ ಹಸ್ತಾಂತರಮಾಡಬಹುದಾಗಿರುವಿಕೆಯ ಸಂಬಂಧದಲ್ಲಿ ನ್ಯಾಯಾಲಯಗಳ ಅಭಿಪ್ರಾಯವು ಒಮ್ಮತದ್ದು ಆಗಿರದೇ ಭಿನ್ನ ಭಿನ್ನವಾಗಿರುತ್ತಿದ್ದು ಈ ವಿಷಯದ ಮೇಲೆ ಯಾವುದೇ ನಿಶ್ಚಿತ ತೀರ್ಪುಜನ್ಯ ಕಾನೂನು ಇಲ್ಲವಾಗಿದೆ. ಆದರೂ ಕೂಡ ಮಾನ್ಯ ಸರ್ವೋಚ್ಚನ್ಯಾಯಾಲಯವು ಕಪೂರಚಂದ ವಿ. ಖಾದರಉನ್ನೀಸಾ (1590 ಎಸ್. ಸಿ. ಆರ್. 747) ಈ ವ್ಯಾಜ್ಯದಲ್ಲಿ ಮಾಡಿದ ನಿರೀಕ್ಷಣೆಯ ಹಿನ್ನಲೆಯಲ್ಲಿ ಈ ವಿಷಯವನ್ನು ಪರಿಶೀಲಿಸಿದಲ್ಲಿ, ಸ್ವತ್ತನ್ನು ಸ್ವಾಧೀನದಲ್ಲಿರಿಸಿಕೊಳ್ಳುವ ಅಂಥ ವಿಧವೆಯ ಹಕ್ಕು ಹಸ್ತಾಂತರ ಮಾಡಲು ಬರಲಾರದು ಎಂಬುವ ಪಾಟ್ನಾ ಉಚ್ಚನ್ಯಾಯಾಲಯದ ತೀರ್ಪಿನ ಅಭಿಪ್ರಾಯವು ಸರಿಯಾದದ್ದು ಆಗಿದೆ.

ಕನ್ನಡದಲ್ಲಿ ಕಾನೂನು ಪುಸ್ತಕಗಳು

1 ಭಾರತದ ಸಂವಿಧಾನ (Indian Constitution)
2 ಭಾರತದ ದಂಡ ಸಂಹಿತೆ (Indian Penal Code)
3 ಹಿಂದೂ ಕಾನೂನು (Hindu Law)
4 ಪೋಲೀಸ ಕಾಯದೆ (Police Act)
5 ಕೈದಿಗಳ ಗುರುತಿಸುವ ಅಧಿನಿಯಮ (Identification Prisoners Act)
6 ಭ್ರಷ್ಟಾಚಾರ ನಿವಾರಣಾ ಅಧಿನಿಯಮ (Prevention of Corruption)
7 ಹಿಂದೂ ವಿವಾಹ ಕಾಯದೆ (Hindu Marriage Act)
8 ಭಾರತದ ಪುರಾವೆ ನೀತಿ (Indian Evidence Act)
9 ಸಂವಿಧಾನಿಕ ವಿಧಿ ಪ್ರಮುಖ ತೀರ್ಪುಗಳು
10 ಅಪರಾಧಿಕ ಕಾನೂನುಗಳ ಸಿದ್ಧಾಂತ
11 ಸಹಕಾರಿ ಸಂಘಗಳ ಕಾಯದೆ ಮತ್ತು ನಿಯಮಗಳು
12 ಸರಕು ವಿಕ್ರಯ ಅಧಿನಿಯಮ (Sale of Goods)
13 ಭಾರತೀಯ ಭಾಗೀದಾರಿಕೆ ಅಧಿನಿಯಮ (Indian Partnership Act)
14 ಮಹಮ್ಮದೀಯ ಕಾನೂನು (Mohammedan Law)
15 ಪರಕ್ರಾಮ್ಯ ಪತ್ರಗಳ ಅಧಿನಿಯಮ (Negotiable Instrument Act)

Copies Available at :

---

‡ Prakash Sahitya, Bangalore
‡ Balaji Pusthak Bhandar, Bangalore
‡ M.P.P. Book House, Bangalore
‡ Ravi & Murthy Book House, Mysore
‡ Maruthi Book Depot, Davanagere
‡ Ambika Book House, Shimoga
‡ Deepak Book House, Shimoga & Chitradurga
‡ Lucky Book Centre, Sirsi
‡ Popular Book Depot, Bijapur
‡ Siddalingeshwara Book House, Gulbarga
‡ Harihara Book Depot, Gadag
‡ Subhash Book Depot, Hubli
‡ Yajman & Bros, Bellary
‡ India Book House, Belgaum

ಬೆಲೆ : 36-00